ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ - ೨೬


ಪ್ರಧಾನ ಸಂಪಾದಕ : ಕಾ ತ ಚಿಕ್ಕಣ್ಣ

# ಕನಕದಾಸರು ಮತ್ತು ಪಶುಪಾಲನಾ ಪರಂಪರೆ

(ಸಂಶೋಧನಾ ಕೃತಿ)

ಕನಕದಾಸರು ಮತ್ತು ಪಶುಪಾಲನಾ ಪರಂಪರೆ (ಸಂಶೋಧನಾ ಕೃತಿ)

JNANA001996



ಎಸ್. ಕೃಷ್ಣಪ್ಪ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು

ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ – ೨೬

ಪ್ರಧಾನ ಸಂಪಾದಕ : ಕಾ ತ ಚಿಕ್ಕಣ್ಣ

# ಕನಕದಾಸರು ಮತ್ತು ಪಶುಪಾಲನಾ ಪರಂಪರೆ

(ಸಂಶೋಧನಾ ಕೃತಿ)

ಎಸ್. ಕೃಷ್ಣಪ್ಪ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ಬೆಂಗಳೂರು

# Kanakadasaru Mattu Pashupaalana Parampare


**Written by** : Sri S. Krishnappa

**Published by** : Rashtria Santakavi Kanakadasa Adhyayana Mattu Samshodhana Kendra, 2nd Floor, Kannada Bhavan, J.C. Road, Bangalore-560 002
E-mail : kanakaresearchcentre@gmail.com
Web : www.saintpoetkanaka.in

**Chief Editor** : Ka Ta Chikkanna

**Publisher** : Balawantrao Patil
Member Secretary, Rashtria Santakavi Kanakadasa Adhyayana Mattu Samshodhana Kendra

**First Edition** : 2019

**Pages** : 12+292 =304

**Price** : Rs.80-00

**Copies** : 500
Size & Paper 1/8 Demmy
Used Paper : 70 gsm book Print


## ಕನಕದಾಸರು ಮತ್ತು ಪಶುಪಾಲನಾ ಪರಂಪರೆ


ಲೇಖಕರು : ಎಸ್. ಕೃಷ್ಣಪ್ಪ
ಗರಿಕೆ, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಜಯನಗರ ಪೂರ್ವ
ತುಮಕೂರು. ದೂ : 9663178934

ಪ್ರಧಾನ ಸಂಪಾದಕರು : ಕಾ ತ ಚಿಕ್ಕಣ್ಣ

ಪ್ರಕಾಶಕರು : ಬಲವಂತರಾವ್ ಪಾಟೀಲ್
ಸದಸ್ಯ-ಕಾರ್ಯದರ್ಶಿ, ರಾಷ್ಟ್ರೀಯ ಸಂತಕವಿ
ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
2ನೆಯ ಮಹಡಿ, ಚಾಲುಕ್ಯ ವಿಭಾಗ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-02
ದೂರವಾಣಿ : 080-22113147
E-mail: kanakaresearchcentre@gmail.com
www.saintpoetkanaka.in

ಮೊದಲ ಮುದ್ರಣ : 2019

ಹಕ್ಕುಗಳು : ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ

ಪುಟಗಳು : 12+292 =304

ಆಕಾರ : 1/8 ಡೆಮ್ಮಿ

ಒಳಪುಟ ಕಾಗದ : 70 ಜಿಎಸ್.ಎಂ, ಎನ್.ಎಸ್. ಮ್ಯಾಪ್‌ಲಿಥೋ

ಬೆಲೆ : ರೂ.80-00

ಮುಖಪುಟ ಚಿತ್ರ : ಶ್ರೀ ಪಿ.ಎಸ್. ಕಡೆಮನಿ

ಮುದ್ರಣ : **ಪ್ರಕೃತಿ ಪ್ರಿಂಟ್**
೧ನೇ ಅಡ್ಡರಸ್ತೆ, ಮಾಳಗಾಳ ಮುಖ್ಯರಸ್ತೆ, ನಾಗರಭಾವಿ ೨ನೇ ಹಂತ,
ಬೆಂಗಳೂರು - ೫೬೦೦೯೧ ಫೋನ್ : 9980308087, 9900143181

## ಅಧ್ಯಕ್ಷರ ನುಡಿ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಜೀವನ ದರ್ಶನ ಮತ್ತು ಅವರ ಕಾವ್ಯ-ಕೀರ್ತನೆಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಈ ಬಗೆಯ ಕಾರ್ಯಾಧ್ಯಯನಗಳಿಗೆ ಯುವ ಸಮುದಾಯವನ್ನು ತೊಡಗಿಸಿಕೊಳ್ಳುವುದು ಇದರ ಆಶಯವಾಗಿದೆ. ಈ ನೆಲೆಯಲ್ಲಿ ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟ್ರಮಟ್ಟದಲ್ಲಿ ವಿಚಾರ ಸಂಕಿರಣ-ಸಂವಾದಗೋಷ್ಠಿಗಳ ಏರ್ಪಾಟು, ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ತ್ವಾದರ್ಶಗಳ ಪ್ರದರ್ಶನ-ಪ್ರಸಾರ ಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು, ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವಜನ-ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ-ರಸಗ್ರಹಣ ಶಿಬಿರಗಳ ಸಂಘಟನೆ, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ.

ಪ್ರಸ್ತುತ 'ಕನಕದಾಸರು ಮತ್ತು ಪಶುಪಾಲನಾ ಪರಂಪರೆ' ಕೃತಿಯಲ್ಲಿ ಕನಕದಾಸರು ಕೃಷಿ ಸಂಸ್ಕೃತಿಯ ಎಲ್ಲ ಅನುಭವಗಳನ್ನು ಸಂಕೇತಗಳಾಗಿ, ರೂಪಕಗಳಾಗಿ ಅನಾವರಣಗೊಳಿಸಿರುವುದನ್ನು ಕಾಣಬಹುದು. ಈ ಸಂಶೋಧನಾ ಕೃತಿಯನ್ನು ರಚಿಸಿಕೊಟ್ಟ ಶ್ರೀ ಎಸ್.ಕೃಷ್ಣಪ್ಪ ಅವರಿಗೆ ಕೃತಜ್ಞತೆಗಳು. ಅಧ್ಯಯನ ಕೇಂದ್ರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರಣಕರ್ತರಾದ ಸ್ವತಃ ಸಾಹಿತಿಗಳು ಹಾಗೂ ಕೇಂದ್ರದ ಸಮನ್ವಯಾಧಿಕಾರಿಗಳಾದ ಶ್ರೀ ಕಾ ತ ಚಿಕ್ಕಣ್ಣ ಅವರಿಗೆ, ಸದಸ್ಯ ಕಾರ್ಯದರ್ಶಿಗಳಿಗೆ ಹಾಗೂ ಕಾರ್ಯಾನುಷ್ಠಾನ ಮಂಡಳಿಯ ಸದಸ್ಯರಿಗೆ ಕೃತಜ್ಞತೆಗಳು. ಈ ಪುಸ್ತಕದ ಪ್ರಯೋಜನವನ್ನು ಸಾಹಿತ್ಯಾಭಿಮಾನಿಗಳು ಪಡೆಯುವರೆಂದು ಭಾವಿಸುತ್ತೇನೆ.

ಬೆಂಗಳೂರು

ಕೆ.ಎಂ. ಜಾನಕಿ, ಭಾ.ಆ.ಸೇ.
ಅಧ್ಯಕ್ಷರು

## ಮುಮ್ಮಾತು

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರನ್ನು ಮರುಓದಿಗೆ ಒಳಪಡಿಸಿ ಅನ್ಯಜ್ಞಾನ ಶಿಸ್ತುಗಳ ನೆರವಿನೊಂದಿಗೆ ಮರುವ್ಯಾಖ್ಯಾನ ಮಾಡುವ ರೀತಿಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಅವುಗಳಲ್ಲಿ ಅಧ್ಯಯನಕ್ಕೆ ಅವಕಾಶ ಕಲ್ಪಿಸುವ ಫೆಲೋಶಿಪ್ ಯೋಜನೆಯೂ ಒಂದು. ಕನಕದಾಸರ ಕಾವ್ಯಗಳು ಮತ್ತು ಜೀವನ ವಿಚಾರಗಳನ್ನು ಗ್ರಹಿಸಿಕೊಂಡೇ ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಸಾಧ್ಯವಾಗಬೇಕು. ಆ ದಿಕ್ಕಿನಲ್ಲಿ 'ಕನಕದಾಸರು ಮತ್ತು ಪಶುಪಾಲನಾ ಪರಂಪರೆ' ಎಂಬ ವಿಷಯದ ಮೇಲೆ ಒಂದು ಸಂಶೋಧನಾ ಅಧ್ಯಯನಕ್ಕೆ ಅವಕಾಶ ನೀಡಲಾಯಿತು. ಆದಿಮ ಸಂಸ್ಕೃತಿಯ ಮತ್ತೊಂದು ಹೆಸರು ಎಂದರೆ ಅದು ಪಶುಪಾಲನಾ ಪರಂಪರೆ ಸಂಸ್ಕೃತಿಯೇ ಆಗಿದೆ. ಕನಕದಾಸರು ತಮ್ಮ ಕಾವ್ಯ ವಿವೇಚನೆಗಳಲ್ಲಿ ತಮ್ಮ ಮೂಲ ಪರಂಪರೆಯ ಆದಿಮ ಕಸಬು, ಕಲೆ, ಸಂಸ್ಕೃತಿಯ ವಿಚಾರಗಳನ್ನು ಹೇಗೆ ನಿರ್ವಹಿಸಿಕೊಂಡಿದ್ದಾರೆ ಎಂದು ಅವಲೋಕಿಸುವುದು ಸಾಧ್ಯವಾಗಬೇಕಿದೆ. ಆ ಹಿನ್ನೆಲೆಯಲ್ಲಿ ಶ್ರೀ ಎಸ್.ಕೃಷ್ಣಪ್ಪ ಅವರು ಕನಕದಾಸ ಅಧ್ಯಯನ ಕೇಂದ್ರದ ಫೆಲೋಶಿಪ್ ಯೋಜನೆಯಡಿ ಈ ಕಾರ್ಯವನ್ನು ಆಗು ಮಾಡಿದ್ದಾರೆ. ಅವರಿಗೆ ಧನ್ಯವಾದಗಳು.

**'ಕನಕದಾಸರು ಮತ್ತು ಪಶುಪಾಲನಾ ಪರಂಪರೆ'** ಎಂಬ ಈ ಕೃತಿಯ ಚಿಂತನೆಗಳು ಪರಿಪೂರ್ಣ ಎಂದು ಭಾವಿಸಬೇಕಿಲ್ಲ. ಯಾವುದೇ ಸೃಜನಶೀಲ ಕೃತಿಯೊಂದು ಅದರ ಹೊರಚಾಚುವನ್ನು ಸ್ಥಗಿತಗೊಳಿಸಿಕೊಂಡು, ಮುಂದಿನ ವಿವೇಚನೆಗೆ ಅನುವು ಮಾಡಿಕೊಡುವುದು ಆಗದ ಮಾತು. ಸಿದ್ಧಪಠ್ಯವನ್ನು ಮುರಿದು ಕಟ್ಟುವುದಾದರೂ ಸರಿಯೆ ಇಲ್ಲಾ, ಬೇರೊಂದು ನೆಲೆಯಲ್ಲಿ ಮುಂದುವರಿಸಿಯಾದರೂ ಸರಿಯೆ ಬೆಳೆಸುವುದೇ ಸೃಜನಶೀಲತೆಯ ಗುಣ. ಈ ದಿಕ್ಕಿನಲ್ಲಿ ಈ ಕೃತಿಯು ಆಸಕ್ತರಿಗೆ ಕೆಲವಷ್ಟು ಹೊಳಹುಗಳನ್ನು ಒದಗಿಸುವುದಾದರೆ ನಮ್ಮ ಪ್ರಯತ್ನ ಸಾರ್ಥಕವೆಂದು ಭಾವಿಸುತ್ತೇವೆ. ಈ ಅಧ್ಯಯನಕ್ಕೆ ಮಾರ್ಗದರ್ಶಕರಾಗಿ ಸೂಕ್ತ ಸಲಹೆಗಳನ್ನು ಶ್ರೀ ಜಿ.ವಿ. ಆನಂದಮೂರ್ತಿ ಅವರು ನೀಡಿದ್ದಾರೆ. ಹಸ್ತಪ್ರತಿಯನ್ನು ವಿದ್ವಾಂಸರಾದ ಡಾ. ರಾಮಲಿಂಗಪ್ಪ ಟಿ. ಬೇಗೂರು ಅವರು ಓದಿ ಕೆಲವು ಸಲಹೆಗಳನ್ನು ನೀಡಿದ್ದಾರೆ. ಈ ವಿದ್ವಾಂಸರಿಗೆ ಕೃತಜ್ಞತೆಗಳು ಸಲ್ಲುತ್ತವೆ. ಈ ಯೋಜನೆಯ ಅನುಷ್ಠಾನಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಯನ ಕೇಂದ್ರದ ಅಧ್ಯಕ್ಷರು, ಸದಸ್ಯ-ಕಾರ್ಯದರ್ಶಿಗಳು, ಅಧ್ಯಯನ ಕೇಂದ್ರದ ಕಾರ್ಯಾನುಷ್ಠಾನ ಮಂಡಳಿ ಸದಸ್ಯರು, ಮುದ್ರಕರಾದ ಪ್ರಕೃತಿ ಪ್ರಿಂಟ್ ಅವರಿಗೆ ಹಾಗೂ ನನ್ನೊಂದಿಗೆ ಸಹಕರಿಸಿದ ಅಧ್ಯಯನ ಕೇಂದ್ರದ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಬೆಂಗಳೂರು

ಕಾ ತ ಚಿಕ್ಕಣ್ಣ
ಪ್ರಧಾನ ಸಂಪಾದಕ

## ನೆನಕೆ

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಧ್ಯಕಾಲೀನ ಯುಗವು, ತನ್ನ ಪ್ರಯೋಗಶೀಲ ನಿಲುವಿನೊಂದಿಗೆ ಕ್ರಾಂತಿಕಾರಿಘಟ್ಟವನ್ನು ತಲುಪಿ ಪರಿಣಾಮಕಾರಿಯಾದ ಬದಲಾವಣೆಗೆ ಕಾರಣವಾದದ್ದನ್ನು ನಾವು ಗಮನಿಸುತ್ತೇವೆ. ಅಸಮಾನತೆಯ ಸಂಬಂಧಗಳ ವಿರುದ್ಧ ಬಹು ಧ್ವನಿಗಳು ಕೂಡಿಕೊಳ್ಳುವ ಮೂಲಕ ಸಾಮಾಜಿಕವಾಗಿ ಜಾಗೃತಿಯ ಚಹರೆಗಳು ಈ ಯುಗದಲ್ಲಿ ಕಾಣಿಸಿಕೊಳ್ಳತೊಡಗಿದ್ದು ಒಂದು ವಿಶೇಷ. ಪ್ರಭುತ್ವ, ಧರ್ಮ, ಜಾತಿಯೊಳಗೆ ಉಂಟಾಗಿದ್ದ ಕರ್ಮಕಾಂಡಗಳಿಗೆ 'ಸಾಮರಸ್ಯ ಹಾಗೂ ಭಕ್ತಿ' ಪರಂಪರೆಯ ತತ್ವ ಚಿಂತನೆಗಳು ಹುಟ್ಟಿಕೊಂಡು ಸಾಮಾಜಿಕ ಬದುಕಿನ ಸ್ಥಿತ್ಯಂತರಗಳಿಗೆ ಕಾರಣವಾದದ್ದು ನಮ್ಮೆಲ್ಲರಿಗೂ ತಿಳಿದಿರುವ ಸಂಗತಿಯೇ. ಈ ಸಂದರ್ಭದಲ್ಲಿ ಸಮಾಜದ ಕೆಳಸ್ತರದ ಸಮುದಾಯಗಳನ್ನು ಪ್ರತಿನಿಧಿಸುವ ಮೌಲ್ಯಗಳು ಪ್ರಧಾನವಾಹಿನಿಯಲ್ಲಿ ಗುರುತಿಸುವಿಕೆಗೆ ಒಳಗಾದದ್ದು ಒಂದು ಮಹತ್ವದ ಮತ್ತು ಪರಿವರ್ತನಾಶೀಲ ವಿದ್ಯಮಾನ ಎಂದೇ ಹೇಳಬಹುದು.

ಮಧ್ಯಕಾಲೀನ ಸಂದರ್ಭದಲ್ಲಿ ಬರುವ ದಾಸಪರಂಪರೆಯು ವಚನಕಾರರಂತೆಯೇ ಸಮಾಜದ ಬಿರುಕುಗಳನ್ನು ಸಮಕಾಲೀನ ನಿದರ್ಶನಗಳ ಮೂಲಕ ಪತ್ತೆಹಚ್ಚಿ ಮಾನವತ್ವದ ಮೌಲ್ಯಗಳನ್ನು ಪ್ರತಿಪಾದಿಸಿದ್ದು ಒಂದು ಚಾರಿತ್ರಿಕ ಸತ್ಯ. ಈ ಹಿನ್ನೆಲೆಯಲ್ಲಿ ದಾಸ ಪರಂಪರೆಯು ಅಂದಿನ ಸ್ಥಾಪಿತ ಮೌಲ್ಯಗಳು ಹಾಗೂ ಹಿತಾಸಕ್ತಿಗಳನ್ನು ಕಟುವಾಗಿ ಪ್ರತಿಭಟಿಸುತ್ತಲೇ ಪರ್ಯಾಯವಾದ ಮಾದರಿಗಳನ್ನು ಸಾಕಾರಗೊಳಿಸಲು ಪ್ರಯತ್ನಿಸಿದ್ದನ್ನು ನಾವೆಲ್ಲರೂ ಅರಿತಿದ್ದೇವೆ. ಹಾಗಾಗಿಯೇ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರೆಂದು ಬಿಂಬಿಸಲ್ಪಡುವ ಹಾಗೂ ತಳಸ್ತರದಿಂದ ಬಂದವರೆನಿಸಿಕೊಂಡ ಕನಕದಾಸರು; ತಮ್ಮ ಬದುಕು ಹಾಗೂ ಕೃತಿಗಳ ಮೂಲಕ ಸಮಾಜದಲ್ಲಿ ಒಂದು ವೈಚಾರಿಕ ನೆಲೆಘಟ್ಟನ್ನು ಹುಟ್ಟುಹಾಕಿದರು.

ಕರ್ನಾಟಕದ ಈವರೆಗಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಕನಕದಾಸರ ಪ್ರಾತಿನಿಧ್ಯ ಮತ್ತು ಅವರು ದಕ್ಕಿಸಿಕೊಂಡ ಜನಮನ್ನಣೆ ಹಲವು ಮುಖ್ಯ ಕಾರಣಗಳಿಂದಾಗಿ ಅತ್ಯಂತ ಹೆಚ್ಚು ನಿರ್ಣಾಯಕವಾಗಿದೆ. ಅಲ್ಲದೆ ತಾವು ಮಧ್ಯಕಾಲೀನಯುಗವನ್ನು ಪ್ರತಿನಿಧಿಸುತ್ತಿದ್ದರೂ ವರ್ತಮಾನದಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಚಾರಗಳಲ್ಲಿ ಉಂಟಾಗುತ್ತಿರುವ ಅನೇಕ ಸವಾಲುಗಳಿಗೆ ಮುಖಾಮುಖಿಯಾಗುತ್ತಿದ್ದಾರೆ. ಇದರಿಂದಾಗಿ ಕನಕದಾಸರ ತತ್ವ ಮತ್ತು ಚಿಂತನೆಗಳು ಇಂದಿನ ಅನೇಕ ಸಂದರ್ಭದಲ್ಲಿ ಬೇರೆ ಬೇರೆ ಬಗೆಯ ಜಿಜ್ಞಾಸೆಗಳಿಗೆ ಕಾರಣವಾಗಿ

ಹೊಸ ಓದಿನ ಮಾದರಿಗಳಿಗೆ ಕನಕಚಿಂತನೆಯು ತೆರೆದುಕೊಂಡದ್ದು, ಸಮಕಾಲೀನ ಅಗತ್ಯವನ್ನು ಎತ್ತಿಹಿಡಿಯುವಂತಿದೆ.

ಅಪಾರವಾದ ಮಾನವೀಯ ಮೌಲ್ಯಗಳನ್ನು ಸಾಧ್ಯಗೊಳಿಸಬಹುದಾದ ವಿಭಿನ್ನನೆಲೆಗಳನ್ನು ಸಾರಿ ಹೇಳಿದ ಕನಕದಾಸರ ಬದುಕು ಮತ್ತು ಬರವಣಿಗೆಗಳು; ಸಮಾಜಮುಖಿ ಚಿಂತಕರ ಹಾಗೂ ಸಹಮತದ ಚಿಂತನೆಗೆ ಪ್ರೇರಣೆ ನೀಡಿವೆ. ತಮ್ಮ ಜೀವನ ಹಾಗೂ ಕೃತಿ, ಕೀರ್ತನೆ, ಮುಂಡಿಗೆಗಳಲ್ಲಿ ವ್ಯಕ್ತ ಪಡಿಸುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅನನ್ಯತೆ ಕನಕಯುಗದ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತದೆ. ಅಲ್ಲದೆ, ಕನಕದಾಸರು ನಿರಂತರವಾಗಿ ಪ್ರತಿನಿಧಿಸುತ್ತಲೇ ಬಂದ 'ದೇಶೀತ್ವದ ಸೊಬಗು' ಅವರೊಬ್ಬ 'ಜ್ಞಾನ ಮಿಮಾಂಸೆಯ' ಹರಿಕಾರನೆಂಬುದನ್ನು ನಿರೂಪಿಸುತ್ತದೆ.

ಹಾಗಾಗಿ ಕನಕದಾಸರ ಇಂತಹ ವಿಭಿನ್ನ ವ್ಯಕ್ತಿತ್ವ ಮತ್ತು ಚಿಂತನೆಗಳು ಪ್ರಾಯೋಗಿಕವಾಗಿಯೇ ಹೆಚ್ಚು ಅರ್ಥವನ್ನು ಕಂಡುಕೊಳ್ಳಲು ಬಹು ಮುಖ್ಯ ಪ್ರೇರಣೆ ಅವರ ಮೇಲಾಗಿರುವುದಕ್ಕೆ ಈ ನೆಲದ ಪಾರಂಪರಿಕ ನೆಲೆ ಕಾರಣ ಎಂಬುದನ್ನು ನಾವು ಮರೆಯುವಂತಿಲ್ಲ. ಕನಕದಾಸರು ತಮ್ಮ ಬದುಕಿನುದ್ದಕ್ಕೂ ಕೃಷಿ ಸಂಸ್ಕೃತಿಯ ಎಲ್ಲ ಅನುಭವಗಳನ್ನು ಸಂಕೇತಗಳಾಗಿ, ರೂಪಕಗಳಾಗಿ, ಹೋಲಿಕೆಗಳಾಗಿ ಬಳಸಿದ್ದಾರೆ. ಕಾಡು, ಕೃಷಿಉಪಕರಣ, ಪಶುಪಕ್ಷಿ, ವೃಕ್ಷ, ಬೆಳೆ, ಕಾಲುವೆ, ಗೋಶಾಲೆ, ಗಾಂಧಾರ ಮುಂತಾದ ಪಾರಂಪರಿಕವಾದ ಪಶುಪಾಲನಾ ಪರಂಪರೆಯ ಚಹರೆಗಳನ್ನು ಅನಾವರಣಗೊಳಿಸಿದ್ದಾರೆ. ಆದ್ದರಿಂದ ಸಾಮಾಜಿಕ ಪರಂಪರೆಯಂತಿರುವ ಪಶುಪಲನೆಯು: ಒಂದು ಯುಗದ ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ, ಆಧ್ಯಾತ್ಮಿಕ ಪರಂಪರೆಯ ರೂಪಕದಂತಿರುವ ಕನಕದಾಸರ ಬದುಕು ಬರಹಗಳ ಮೇಲೆ ಬೀರಿರುವ ಪ್ರಭಾವ, ಪ್ರೇರಣೆ ಹಾಗೂ ಸಂಬಂಧಗಳನ್ನು ಈ ಅಧ್ಯಯನವು ಎತ್ತಿ ಹಿಡಿಯಲು ಪ್ರಯತ್ನಿಸಿದೆ.

ಇಂತಹ ಅನೇಕ ಕಾರಣಗಳನ್ನು ಗಮನದಲ್ಲಿಟ್ಟುಕೊಂಡೇ ರಾಷ್ಟ್ರೀಯ ಸಂತಕವಿ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು; ವರ್ತಮಾನದ ಈ ಹೊತ್ತಿನಲ್ಲಿ ಕನಕದಾಸರ ಬದುಕು, ಬರಹ, ಹಾಗೂ ಸಾಧನೆಗಳಿಗೆ ಮರುಜೀವ ತುಂಬುವ ಮತ್ತು ಅವರು ಪ್ರತಿಪಾದಿಸಿದ ಮೌಲ್ಯಗಳಿಗೆ ಪ್ರಾಯೋಗಿಕ ಅರ್ಥಕೊಡುವ ಸಮಕಾಲೀನ ಸಮಾಜಕ್ಕೆ ಅನ್ವಯಾಗಬಲ್ಲ ಕನಕ ಸಂದೇಶಗಳನ್ನು ಜನಮಾನಸದಲ್ಲಿ ಬಿತ್ತುವ ಕಾಯಕದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಹಾಗಾಗಿಯೇ ಕೇಂದ್ರವು ಕನಕದಾಸರು ಮತ್ತು ಪಶುಪಲನಾ ಪರಂಪರೆ ಎಂಬ ವಿಷಯ ಕುರಿತಂತೆ ನನಗೆ ಸಂಶೋಧನೆಯನ್ನು ಮಾಡಲು 2015–16 ನೇ ಅವಧಿಯಲ್ಲಿ ಫೆಲೋಶಿಪ್ ನೀಡಿತ್ತು.

ಈ ಅಧ್ಯಯನಕ್ಕೆ ಸಂಪೂರ್ಣ ಸಹಕಾರ ನೀಡಿದ ಕೇಂದ್ರದ ಸಮನ್ವಯಾಧಿಕಾರಿಗಳಾದ ಶ್ರೀ ಕಾ ತ ಚಿಕ್ಕಣ್ಣ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಈ ಅಧ್ಯಯನಕ್ಕೆ ಮಾರ್ಗದರ್ಶಕರಾಗಿ ಒಪ್ಪಿಕೊಂಡು ಸೂಕ್ತ ಹೊಳಹುಗಳನ್ನು ನೀಡಿದ ಸಾಂಸ್ಕೃತಿಕ ವಿದ್ವಾಂಸರಾದ ಡಾ.ಜಿ.ವಿ.ಆನಂದಮೂರ್ತಿ ಅವರಿಗೂ, ಈ ಅಧ್ಯಯನಕ್ಕೆ ಸಲಹೆಗಳನ್ನು ನೀಡಿದ ವಿಷಯ ತಜ್ಞರಾದ ಡಾ. ರಾಮಲಿಂಗಪ್ಪ ಟಿ. ಬೇಗೂರು ಅವರಿಗೂ, ಬರವಣಿಗೆಯ ಬಗ್ಗೆ ಎಚ್ಚರಿಸುತ್ತಾ ತಮ್ಮೊಂದಿಗೆ ಚರ್ಚಿಸಲು ಅವಕಾಶ ಮಾಡಿಕೊಟ್ಟ ಡಾ. ನಟರಾಜ್ ಹುಳಿಯಾರ್ ಅವರಿಗೂ, ಸಲಹೆಗಳನ್ನು ನೀಡಿದ ವಿದ್ವಾಂಸರಾದ ಡಾ. ಶಿವರಾಮಶೆಟ್ಟಿ, ಡಾ.ನಟರಾಜ ಬೂದಾಳ್, ಡಾ.ಸುರೇಶ್ ನಾಗಲಮಡಿಕೆ, ಡಾ.ಕೆ.ಪಿ.ನಟರಾಜ, ಗೆಳೆಯರಾದ ಶ್ರೀ ವಿಶ್ವನಾಥ್, ರಾಮಕೃಷ್ಣಯ್ಯ ಅವರುಗಳಿಗೂ ಅಂದವಾದ ಮುಖಪುಟ ಬರೆದುಕೊಟ್ಟ ಶ್ರೀ ಪಿ.ಎಸ್. ಕಡೆಮನಿ ಅವರಿಗೂ ನನ್ನ ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದವಾದ ಅಕ್ಷರ ಜೋಡಣೆಯೊಂದಿಗೆ ಕರಡನ್ನು ತಿದ್ದಿಕೊಟ್ಟ ಬಾಳಸಂಗಾತಿ ಶ್ರೀಮತಿ ಹೆಚ್.ಎಲ್. ವಸಂತಲಕ್ಷ್ಮಿ, ಮಗ ಚಿರಂತನ.ಕೆ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ. ಅಧ್ಯಯನಕ್ಕೆ ಎಲ್ಲಾ ಸಹಕಾರ ನೀಡಿದ ರಾಷ್ಟ್ರೀಯ ಸಂತಕವಿ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಿಬ್ಬಂದಿ ವರ್ಗದವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಸ್ಥಳ : ತುಮಕೂರು

ಎಸ್. ಕೃಷ್ಣಪ್ಪ

# ಪರಿವಿಡಿ


| | ಪುಟ–ಸಂಖ್ಯೆ |
|---|---|
| ಅಧ್ಯಕ್ಷರ ನುಡಿ | i |
| ಮುಮ್ಮಾತು | ii |
| ನೆನಕೆ | iii |
| ಪೀಠಿಕೆ | ೧ |
| ಅಧ್ಯಾಯ–ಒಂದು<br>ಅಧ್ಯಯನದ ಸ್ವರೂಪ | ೩ |
| ಅಧ್ಯಾಯ–ಎರಡು<br>ಪಶುಪಾಲನಾ ಪರಂಪರೆ ಮತ್ತು ವಿಕಾಸ | ೧೨ |
| ಅಧ್ಯಾಯ–ಮೂರು<br>ಮೌಖಿಕ ಮಹಾಕಾವ್ಯಗಳಲ್ಲಿ ಪಶುಪಾಲನಾ ಪರಂಪರೆಯ ಸಮೀಕ್ಷೆ | ೪೩ |
| ಅಧ್ಯಾಯ–ನಾಲ್ಕು<br>ಮಧ್ಯಕಾಲೀನ ಕರ್ನಾಟಕ ಮತ್ತು ಪಶುಪಾಲನಾ ಪರಂಪರೆ | ೧೦೮ |
| ಅಧ್ಯಾಯ–ಐದು<br>ಪಶುಪಾಲನಾ ಪರಂಪರೆ ಕುರಿತ ಶಂ.ಬಾ. ಜೋಶಿ ಅವರ ಚಿಂತನೆಗಳು | ೧೩೧ |
| ಅಧ್ಯಾಯ–ಆರು<br>ಕನಕದಾಸರು ಮತ್ತು ಪಶುಪಾಲನಾ ಪರಂಪರೆ | ೧೪೦ |
| ಉಪಸಂಹಾರ | ೨೬೪ |
| ಅನುಬಂಧಗಳು<br>೧.ಸಂದರ್ಶನ<br>೨.ಛಾಯಾಚಿತ್ರಗಳು | ೨೬೯ |
| ಗ್ರಂಥಸೂಚಿ | ೨೭೫ |

**ಪೀಠಿಕೆ:**

ಕರ್ನಾಟಕದ ಮಧ್ಯಕಾಲೀನ ಇತಿಹಾಸದ ಸಂದರ್ಭದಲ್ಲಿ ಒಂದು ಪಾಳೆಪಟ್ಟಿನ ನಾಯಕನಾಗಿ, ಕವಿಯಾಗಿ, ಕೀರ್ತನಕಾರರಾಗಿ, ಅನುಭಾವಿಯಾಗಿ, ಸಮಾಜ ಸುಧಾರಕರಾಗಿ, ಅಧ್ಯಾತ್ಮಿಕ ಸಾಧಕನಾಗಿ ಕಾಣಿಸಿಕೊಂಡವರು ಕನಕದಾಸರು. ಒಂದು ಕಾಲಘಟ್ಟದ ಸಾಂಸ್ಕೃತಿಕ ಜೀವನದ ಅದಮ್ಯ ಚೇತನವಾಗಿದ್ದ ಕನಕದಾಸರು; ತಮ್ಮ ಬದುಕು, ಸಹಜ ಬರಹ ಹಾಗೂ ಪ್ರತಿಭೆಯನ್ನು ಜನಸಾಮಾನ್ಯರ ಪರವಾಗಿ ಬಳಸಿಕೊಂಡವರು. ಈ ಮೂಲಕ ಸಮಾಜದೊಳಗಣ ಅಸಮಾನತೆ ಹಾಗೂ ಜಾತಿ ಆಧಾರಿತ ಮೇಲು–ಕೀಳಿನ ತಾರತಮ್ಯವನ್ನು, ಆಡಂಬರದ ಧಾರ್ಮಿಕತೆಯನ್ನು ತೀವ್ರವಾಗಿ ಖಂಡಿಸಿದವರು. ಸಮಾನತೆ, ಮೌಢ್ಯ ಹಾಗೂ ಯಾವುದೇ ಬಗೆಯ ದಾಸ್ಯಗಳಿಲ್ಲದ 'ಸಮಾಜಸೃಷ್ಟಿ'ಯ ಬಗ್ಗೆ ಕನಸು ಕಂಡು ಸಂತ ಕವಿಯೆನಿಸಿದವರು. ಅಲ್ಲದೆ ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿ, ಮತ್ತು ಕಾಯಕನಿಷ್ಠೆ ಎಂಬ ಮಾನವತ್ವದ ಮೌಲ್ಯಗಳನ್ನು ತಮ್ಮ ಜೀವನ, ಕೃತಿ, ಕೀರ್ತನೆ, ಮುಂಡಿಗೆಗಳ ಮೂಲಕ ಪ್ರತಿಪಾದಿಸಿದವರು.

ಕರ್ನಾಟಕದ ಮಧ್ಯಕಾಲೀನ ಚರಿತ್ರೆಯೊಳಗೆ ನಡೆದ ಇಂತಹ ಒಂದು ಸಾಂಸ್ಕೃತಿಕ ಚಲನೆಯೊಂದು ಇಂದು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವನ್ನು ಒಡ್ಡಿ ಇಲ್ಲಿನ ದೇಸೀಯ ಜ್ಞಾನಪರಂಪರೆ ಭಾರತದಾದ್ಯಂತ ಪ್ರಭಾವಿಸುವಂತೆ ಪ್ರೇರಣೆಯನ್ನು ನೀಡಿದಂತಿದೆ. ದಾಸರಾಗಿಯೂ ಕವಿಗಳೆನಿಸಿಕೊಂಡಿರುವ ಕನಕದಾಸರು ತಮ್ಮ ಕೃತಿಗಳ ಮೂಲಕ ವ್ಯಕ್ತಪಡಿಸಿದ ಸಾಮಾಜಿಕ ವಿಡಂಬನೆಯಲ್ಲಿ; ಹೆಚ್ಚಿನ ನೋವು, ತೀಕ್ಷ್ಣತೆ ಎದ್ದು ತೋರುತ್ತಿದೆ. ಅವರ ರಚನೆಗಳಲ್ಲಿ ವೈದಿಕ ತತ್ವ ಚಿಂತನೆಗಳಿಗೆ ಪ್ರಾಧಾನ್ಯವಿಲ್ಲ, ಮತ ಪ್ರಕ್ರಿಯೆಗಳಿಗೆ ಸ್ಥಾನವಿಲ್ಲ. ಆದರೆ ಜನಸಾಮಾನ್ಯರ ಮೌಢ್ಯ, ಅಂಧ–ಕಂದಾಚಾರಗಳನ್ನು ಹಾಗೂ ವರ್ಣ ವ್ಯವಸ್ಥೆಯ ಕ್ರೌರ್ಯವನ್ನು ನೇರ ಹಾಗೂ ಖಚಿತ ಶಬ್ದಗಳಲ್ಲಿ ಪ್ರತಿಭಟಿಸಿದ್ದಾರೆ.

ಶಿವ, ವೈಷ್ಣವ, ಮತ್ತು ದ್ವೈತಮತ ತತ್ವಗಳ ಉತ್ತಮಾಂಶಗಳಿಂದ ಸಂಸ್ಕಾರಗೊಂಡ ಕನಕದಾಸರು, ತಮ್ಮ ಜೀವನದುದ್ದಕ್ಕೂ ಬಂದ ಎಡರುತೊಡರುಗಳಿಗೆ ಹೆದರದೆ ಬಂದುದೆಲ್ಲವನ್ನು ಅನುಭವಿಸಿ ಅವೆಲ್ಲವುಗಳನ್ನು ಮೆಟ್ಟಿನಿಂತು ಮಾನವೀಯತೆಯನ್ನು ಮೆರೆದು ಮಹಾತ್ಮರೆನಿಸಿಕೊಂಡವರು. ಮಾನವ ಜನಾಂಗಕ್ಕೆ ಕೊಟ್ಟ ಅವರ ಸಂದೇಶಗಳು ಇಂದಿಗೂ ಜೀವಂತವಾಗಿವೆ. ಅಂದಿನ ಸಮಕಾಲೀನ ದಾಸರಿಗಿಂತ ಬೇರೆಯಾಗಿಯೇ ಕಾಣುವ ಕನಕದಾಸರು ತಮ್ಮ ಜೀವನ ಸತ್ವಗಳ ಸಿದ್ಧಿಯಿಂದ ಕನ್ನಡಿಗರ ಚಿರಂತನವಾದ ಸಂಸ್ಕೃತಿಗಳಲ್ಲಿ ಒಂದಾಗಿದ್ದಾರೆ. ಇವರ ಕಾವ್ಯ ಸತ್ವ ಹಾಗೂ ಸಾಹಿತ್ಯ ಸಿದ್ಧಿ, ದೇಶೀಯ ತಿರುಳನ್ನೇ ಮೈಗೂಡಿಸಿಕೊಂಡಿದೆ. ಜೀವ ಪರ ಚಿಂತಕರಾಗಿಯೂ,

ತನ್ನ ಸಾಮಾಜಿಕ ಹಿನ್ನೆಲೆಯಿಂದ ಜಾತಿ ಅಸ್ಮಿತೆಯ ಭಾಗವಾಗಿ ಪರಿಗಣಿಸಲ್ಪಟ್ಟಿರುವ ಕನಕದಾಸರು ತಮ್ಮ ಸುತ್ತಲ ಚಾರಿತ್ರಿಕವಾದ ಪ್ರಬಲ ಬಿಕ್ಕಟ್ಟುಗಳಿಗೆ ಜೀವನಾನುಭವದ ಮೂಲಕ ತಾತ್ವಿಕತೆಯ ಪ್ರತಿರೂಪವನ್ನು ನೀಡಿದ್ದಾರೆ. ಕವಿತನ ಮತ್ತು ಕಲಿತನಗಳ ನಡುವೆ ನಿಂತು ಅವೆರಡನ್ನು ಅರ್ಥೈಸಿಕೊಂಡಿದ್ದಾರೆ. ಇಂತಹ ಕನಕದಾಸರನ್ನು ಮತ್ತೆ ಮತ್ತೆ ಓದುವುದೆಂದರೆ, ಗತಕಾಲವನ್ನು ಸಮಕಾಲೀನ ಗೊಳಿಸಿಕೊಳ್ಳುತ್ತಲೇ ಒಂದು 'ಬೌದ್ಧಿಕ ಎಚ್ಚರವನ್ನು' ನಮ್ಮದಾಗಿಸಿಕೊಂಡಂತೆ.

ಈ ಹಿನ್ನೆಲೆಯ ಕನಕದಾಸರನ್ನು ಭಾರತೀಯ ಜನಜೀವನ, ಕೃಷಿ, ಪರಿಸರ, ಕಾಯಕನಿಷ್ಠೆ, ಧಾರ್ಮಿಕ ಸಂಪ್ರದಾಯಗಳು ಪ್ರಭಾವಿಸಿರಬಹುದು. ಜೊತೆಗೆ ಇಲ್ಲಿ ಆಳವಾಗಿ ಬೆಸೆದುಕೊಂಡಿರುವ ನಾಗರಿಕತೆಯ ವಿಕಾಸದ ಮೂಲ ನೆಲೆಯಾದ ಪಶುಪಾಲನಾ ಪರಂಪರೆಯ ಸಂಬಂಧ ಮತ್ತು ಪ್ರಭಾವ; ಕನಕದಾಸರ ಬದುಕು ಮತ್ತು ಅವರ ಸೃಜನಶೀಲ ಕೃತಿಗಳ ರಚನೆಗೆ ಪ್ರೇರಣೆ ಆಗಿರಲೂಬಹುದು ಎಂಬ ಕಾರಣಕ್ಕಾಗಿ ಈ ಮುಂದಿನ ಶೀರ್ಷಿಕೆಗಳಡಿಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

*****

# ಅಧ್ಯಾಯ-ಒಂದು

# ಅಧ್ಯಯನದ ಸ್ವರೂಪ

**ವಿಧಾನ:**

ಪ್ರಸ್ತುತ 'ಕನಕದಾಸರು ಮತ್ತು ಪಶುಪಾಲನಾ ಪರಂಪರೆ' ಎಂಬ ಈ ಅಧ್ಯಯನದಲ್ಲಿ ಕನಕದಾಸರ ಬದುಕು ಬರಹಗಳ ಮೇಲಾಗಿರುವ ಪಶುಪಾಲನಾ ಪರಂಪರೆಯ ಪ್ರಭಾವ, ಪ್ರೇರಣೆ ಮತ್ತು ಸಂಬಂಧ ಕುರಿತು ಚರ್ಚಿಸಲಾಗಿದ್ದು; ಈ ಸಂಬಂಧ ಸಂಶೋಧನೆಯ ಉದ್ದೇಶ, ವ್ಯಾಪ್ತಿ, ಸ್ವರೂಪದ ದೃಷ್ಟಿಯಿಂದ ನಿರ್ದಿಷ್ಟತೆಯನ್ನು ಕಂಡುಕೊಳ್ಳಲು ಇಲ್ಲಿನ ಅಧ್ಯಯನ ಕ್ರಮದ ಸ್ವರೂಪವನ್ನು ಮುಂದಿನಂತೆ ರೂಪಿಸಿಕೊಳ್ಳಲಾಗಿದೆ.

ಮಾನವನ ವಿಕಾಸದ ಹಂತದಲ್ಲಿ ಪಶುಪಾಲನೆ ಹಾಸುಹೊಕ್ಕಾಗಿ ಹೆಣೆದುಕೊಂಡಿದ್ದು; ಇದು ಆತನ ಬದುಕನ್ನು ರೂಪಿಸುವಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವುದಂತೂ ಸತ್ಯ. ಈ ಮಾತು ಎಲ್ಲಾ ಕಾಲಕ್ಕೂ ಅನ್ವಯಿಸುತ್ತಲೇ ಇದೆ. ಹಾಗಾಗಿಯೇ ಮಧ್ಯಕಾಲೀನ ಕಾಲಘಟ್ಟದ ಕರ್ನಾಟಕದ ಚರಿತ್ರೆಯ ಮೇಲೆ ಪಶುಪಾಲನೆಯ ಪ್ರಭಾವವಿದ್ದು, ಹದಿನಾರನೇ ಶತಮಾನದಲ್ಲಿ ಬಾಳಿ ಬದುಕಿದ್ದ ಕನಕದಾಸರನ್ನು ಈ ವಿಕಾಸದ ಪರಂಪರೆ ತಟ್ಟಿರಲೂಬಹುದು. ಆದ್ದರಿಂದ ದಾಸರ ಜೀವನದೊಂದಿಗೆ ನಿರಂತರವಾಗಿ ತಳುಕು ಹಾಕಿಕೊಂಡಂತೆ ಕಾಣುವ ಈ ಪಶುಪಾಲನೆಯ ಸ್ವರೂಪ ಮತ್ತು ಲಕ್ಷಣವನ್ನು ಅಧ್ಯಯನಕ್ಕೆ ಪೂರಕವಾಗಿ ಅರ್ಥೈಸಿಕೊಳ್ಳುವ ದೃಷ್ಟಿಯಿಂದ; ಪಶುಪಾಲನಾ ಪರಂಪರೆ ಬೆಳೆದುಬಂದ ಇತಿಹಾಸವನ್ನು ವಿಶ್ಲೇಷಣಾತ್ಮಕವಾಗಿ ಚರ್ಚಿಸಲಾಗಿದೆ.

ಹಾಗಾಗಿಯೇ ಪಶುಪಾಲನಾ ವಿಕಾಸದ ಹೆಜ್ಜೆ ಗುರುತುಗಳನ್ನು; ಮಧ್ಯಕಾಲೀನ ಸಂದರ್ಭದ ವಚನಚಳುವಳಿ, ಭಕ್ತಿಪಂಥ, ಸೂಫಿಚಳುವಳಿ ಹಾಗೂ ತತ್ವಪದಕಾರರ ಬದುಕು ಬರಹಗಳಲ್ಲಿಯೂ ಗುರುತಿಸಲು ಇಲ್ಲಿ ಯತ್ನಿಸಲಾಗಿದೆ. ಇವರುಗಳ ಮೇಲೆ ಈ ಕಾಲಘಟ್ಟದ ಸಮಾಜದಲ್ಲಿನ ಪಶುಪಾಲನಾ ಪರಂಪರೆ ಬೀರಿರುವ ಪ್ರಭಾವ ಏನೆಂಬುದನ್ನು ಪರಸ್ಪರ ಸಂಬಂಧ, ಪರಿಣಾಮದ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಜೊತೆಗೆ ನಮ್ಮದೇ ನೆಲದ ಸೊಗಡನ್ನು ಕಟ್ಟಿಕೊಂಡಿರುವ ಜನಪದ ಮೌಖಿಕ ಮಹಾಕಾವ್ಯಗಳ ಮೇಲೆ ಪಶುಪಾಲನಾ ಸಂಸ್ಕೃತಿಯ ಪ್ರಭಾವ ಉಂಟುಮಾಡಿರುವ ಪರಿಣಾಮದಂತೆಯೇ, ಕನಕಯುಗವನ್ನೂ ಪ್ರಭಾವಿಸಿರಬಹುದೆಂಬ ಕಾರಣಕ್ಕಾಗಿ ಈ ಸಂಶೋಧನೆಯನ್ನು ಜನಪದ ಮೌಖಿಕ ಮಹಾಕಾವ್ಯಗಳೊಂದಿಗೆ ತೌಲನಿಕ ಅಧ್ಯಯನ ಮಾಡಲಾಗಿದೆ.

ಪಶುಪಾಲನಾ ಪರಂಪರೆಯನ್ನು ಕುರಿತ ಇತಿಹಾಸವನ್ನು ಇದುವರೆಗೆ ಹೆಚ್ಚು ಅಧ್ಯಯನ ಮಾಡಿರುವ ಶಂ.ಬಾ. ಜೋಶಿ ಅವರ ಸಂಶೋಧನಾ ಬರಹಗಳೊಂದಿಗೆ; ಕನಕ ಪರಿಸರವನ್ನು ಹೋಲಿಸಿ, ಇಲ್ಲಿನ ಸಾಮ್ಯತೆ, ಭಿನ್ನತೆಗಳನ್ನು ಲಭ್ಯವಾಗುವ ಆಧಾರಗಳೊಂದಿಗೆ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಹಾಗೂ ಕನಕಯುಗದ ಜನ ಸಾಮಾನ್ಯರ ಜೀವನ ಕ್ರಮವನ್ನು ಅರ್ಥೈಸಿಕೊಳ್ಳಲು ಅಂದಿನ ವಿಭಿನ್ನ ವರ್ಗಗಳ ಬದುಕಿನ ಮಾದರಿಗಳನ್ನು ವರ್ತಮಾನದೊಂದಿಗೆ ಹೋಲಿಸಿ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಗುರುತಿಸಲಾಗಿದೆ.

ಕನಕದಾಸರು ಪಶುಪಾಲನಾ ಪರಂಪರೆಯಿಂದ ಪಡೆದುಕೊಂಡಿರುವ ಅನುಭವಗಳನ್ನು ಅವರ ಜೀವನ ಕ್ರಮ ಹಾಗೂ ಬರಹಗಳಲ್ಲಿ ಕಂಡುಕೊಳ್ಳಬಹುದು; ಎಂಬ ನಂಬಿಕೆಯಿಂದ ದಾಸರನ್ನು ಕುರಿತು ಇದುವರೆಗೆ ಬಂದಿರುವ ಸಂಶೋಧಕರ ಬರಹಗಳನ್ನು ಈ ಅಧ್ಯಯನದಲ್ಲಿ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಆದ್ದರಿಂದ ಈ ಆಕರಗಳು ಪಶುಪಾಲನೆಯನ್ನು ಹೇಗೆ ಪರಿಭಾವಿಸಿವೆ? ಇವುಗಳಲ್ಲಿ ಲಭ್ಯವಾಗಿರುವ ದಾಖಲೆಗಳು ಸತ್ಯಕ್ಕೆ ಎಷ್ಟು ಹತ್ತಿರದಲ್ಲಿವೆ? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲು ಈ ಸಂಶೋಧನಾ ಕೃತಿಗಳ ತೌಲನಿಕ ಅಧ್ಯಯನವನ್ನೂ ಇಲ್ಲಿ ನಡೆಸಲಾಗಿದೆ.

ಈ ಅಧ್ಯಯನದಲ್ಲಿ ಪಶುಪಾಲನೆಯನ್ನು ಮತ್ತು ಪಶುಪಾಲಕರನ್ನು ಸಮಾಜದ ಕೆಳವರ್ಗದವರೆಂದೂ, ತಳಸಮುದಾಯದಿಂದ ಬಂದವರೆಂದು ಹೇಳಲಾಗಿದ್ದು; ಅಂದಿನ ಮೇಲ್ವರ್ಗದವರಿಂದ ತುಳಿತಕ್ಕೆ ಒಳಪಟ್ಟವರು ಈ ಶೋಷಿತ ಸಮುದಾಯದವರೆಂದೇ ಇಲ್ಲಿ ನೋಡಲಾಗಿದೆ. ಇಂತಹ ಪರಂಪರೆಯ ಜೊತೆಗೆ ಬರುವ ಬೇಟೆಗಾರಿಕೆ, ಕೃಷಿ, ನೇಕಾರಿಕೆ, ಚಮ್ಮಾರಿಕೆ, ಕುಂಬಾರಿಕೆ ಮುಂತಾದ ಕೆಳ ಹಂತದವರ ಕಸುಬುಗಳು ಪಶುಪಾಲನೆಯಿಂದಲೇ ಮುಂದುವರಿದು ರೂಪುಗೊಂಡಂತಹವುಗಳು ಎಂಬ ಮಾಹಿತಿಯನ್ನು ಸಂಗ್ರಹಿಸಿ, ಇದರ ಚೌಕಟ್ಟಿನಲ್ಲಿಯೇ ಅಧ್ಯಯನವನ್ನು ನಿರೂಪಿಸಲಾಗಿದೆ.

ಪ್ರಸ್ತುತ ಸಂಶೋಧನೆಯಲ್ಲಿ, ಕನಕದಾಸರ ಮೇಲಾಗಿರುವ ಪಶುಪಾಲನೆಯ ಪ್ರಭಾವ, ಪ್ರೇರಣೆಯನ್ನು ಹಾಗೂ ಪಶುಪಾಲನೆಯ ಚಹರೆಗಳನ್ನು ಅರ್ಥೈಸಿಕೊಳ್ಳಲು; ಕನಕದಾಸರು ಬಾಳಿ ಬದುಕಿದ್ದ ಬಾಡ, ಬಂಕಾಪುರ, ಕಾಗಿನೆಲೆ, ಕುಮ್ಮೂರು, ಕಂದರಮಂಡಲಗಿ ಸ್ಥಳಗಳಿಗೆ ಭೇಟಿ ನೀಡಲಾಗಿದೆ. ಆ ಮೂಲಕ ಸಂಗ್ರಹಿಸಲಾಗಿರುವ ಚಿತ್ರಗಳು ಮತ್ತು ಹಿರಿಯರಾದ ಕನಕದಾಸರ ಸಂಬಂಧಿಕರೆಂದು ಕರೆಸಿಕೊಳ್ಳುವ ಕೆಲ ಸ್ಥಳೀಕರನ್ನು ಸಂದರ್ಶಿಸಿ ಲಭ್ಯ ಮಾಹಿತಿಯನ್ನು ಪಶುಪಾಲನಾ ಪರಂಪರೆಯ ಮೂಲ ಸ್ವರೂಪಕ್ಕೆ ಪೂರಕವಾಗಿ ನೀಡಲಾಗಿದೆ.

ಪಶುಪಾಲಕರೆಂದರೆ ತಾಳ್ಮೆ, ಸಹನೆ, ಹೊಂದಾಣಿಕೆಗಳಿಗೆ ಹೆಸರಾದವರು.

ಭಯ ಮತ್ತು ಅಗಾಧವಾದ ಭಕ್ತಿ ಇವರಲ್ಲಿ ಮನೆ ಮಾಡಿಕೊಂಡಿರುತ್ತದೆ. ಇವರು ಯಾರ ದ್ವೇಶವನ್ನೂ, ಶತ್ರುತ್ವವನ್ನೂ ಕಟ್ಟಿಕೊಳ್ಳುವವರಲ್ಲ. ತಾವು ಹೋದಲ್ಲೆಲ್ಲಾ ನಿಷ್ಠೆ, ಪ್ರಾಮಾಣಿಕತೆಗಳಿಂದ ತಮ್ಮ ದನ, ಕುರಿಗಳನ್ನು ಮೇಯಿಸಿಕೊಂಡು, ಎಲ್ಲರನ್ನು, ಎಲ್ಲವನ್ನೂ ನಂಬಿಕೊಂಡು, ಕಂಡಕಂಡ ಕಲ್ಲು ದೇವರಲ್ಲಿ ಬದುಕನ್ನೇ ಸಮರ್ಪಿಸಿ ಜೀವನ ಸಾಗಿಸಿದವರೆಂಬುದಾಗಿ ಪಶುಪಾಲಕರನ್ನು ಇದುವರೆಗೆ ಗುರ್ತಿಸಲಾಗಿದೆ. ಆದ್ದರಿಂದ ಈ ಪಶುಪಾಲನಾ ಸಂಸ್ಕೃತಿಯನ್ನು ಪ್ರಸ್ತುತ ಸಂಶೋಧನೆಯಲ್ಲಿ ವಿಸ್ತೃತವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರೊಂದಿಗೆ 'ಜೀವ ವಿಕಾಸದ ಸಾಂಸ್ಕೃತಿಕ ಪರಂಪರೆ'ಯೊಂದು ತನ್ನದೇ ಸ್ವರೂಪ ಲಕ್ಷಣಗಳೊಂದಿಗೆ, ಕನಕದಾಸರೂ ಸೇರಿದಂತೆ ಆಧುನಿಕ ಮಾನವನನ್ನು ಪ್ರಭಾವಿಸುತ್ತಲೇ ಬಂದಿದೆ; ಎಂಬುದನ್ನು ಹೋಲಿಕೆ ಮತ್ತು ವ್ಯತ್ಯಾಸಗಳ ನೆಲೆಯಲ್ಲಿ ನಿರೂಪಿಸಲಾಗಿದೆ.

**ಉದ್ದೇಶ:**

ಪರ್ಷಿಯಾ ದೇಶದ ಓರ್ವ ದಾರ್ಶನಿಕ ಕವಿ ಒಂದೆಡೆಯಲ್ಲಿ ಹೇಳಿರುವಂತೆ,

ಮಾ ಜಿ ಆಫಜ್ ಓ ಜಿ
ಅಂಜಾಮಿ ಜಹಾನ್ ಬಿ–ಖಬರ್–ಈಮಾ
ಅವ್ವಾಲ್–ಓ–ಚಿಬರೀ ಇನ್
ಕುಹಾನ ಕಿ ಬಾತ್ ಉಷ್ತಾದ್ ಅಸ್ತ್॥

ಅಂದರೆ,

ಮೊದಲ ಹಾಗೂ ಕಡೆಯ ಪುಟಗಳನ್ನು ಕಳೆದುಕೊಂಡ
ಪುಸ್ತಕ ಈ ವಿಶ್ವ, ಈ ಪುಸ್ತಕ ಹೇಗೆ ಆರಂಭವಾಯಿತೋ
ಗೊತ್ತಿಲ್ಲ; ಹೇಗೆ ಮುಕ್ತಾಯವಾಗಿದೆ ತಿಳಿದಿಲ್ಲ
ಮಾನವ ತನಗೆ ಬುದ್ಧಿ ಬಂದಾಗಿನಿಂದಲೂ ಕಳೆದುಕೊಂಡ
ಈ ಪುಟಗಳನ್ನು ಹುಡುಕುತ್ತಿದ್ದಾನೆ ॥*

ಇಂತಹ ಹುಡುಕಾಟ ಇತ್ತೀಚಿನ ದಿನಗಳಲ್ಲಿ ಸಂತ ಕವಿ ಕನಕದಾಸರನ್ನು ಕುರಿತಂತೆ ಸತ್ಯವೆನಿಸುತ್ತಲೇ ಇದೆ. ಈ ಅನ್ವೇಷಣೆ ಈಗಲೇ ಮುಗಿಯುವಂತೆ ಕಾಣುತ್ತಿಲ್ಲ. ಇದರ ಪರಿಣಾಮದಿಂದಾಗಿಯೇ, ಕನಕದಾಸರ ಭೌತಿಕ ಶರೀರ ಹೇಗೆ ಬಂತು, ಹೇಗೆ ಬಾಳಿತು, ಹೇಗೆ ಮುಗಿಯಿತು ಎಂಬ ಊಹೆಯಲ್ಲಿ ಸ್ಪಷ್ಟವಿರದ ಅಸಮಗ್ರ ಹೇಳಿಕೆಗಳು ಬಂದು ನಮ್ಮನ್ನು ಜಿಜ್ಞಾಸೆಗೆ ತಳ್ಳಿಬಿಟ್ಟಿವೆ.

---

*(ಅನು) ಡಾ.ಸಾ.ಶಿ. ಮರುಳಯ್ಯ, ಲೇಖನ, ಕನಕದಾಸರ ಸಮಗ್ರ ಜೀವನ ಚರಿತ್ರೆ.

ಹಾಗಾಗಿ ಕನಕನ ಹುಟ್ಟು, ಕಾಲ, ಜಾತಿ, ಧರ್ಮ, ಪ್ರಭುತ್ವ, ಓಡಾಡಿದ ಸ್ಥಳಗಳು, ದೇಗುಲ ಪ್ರವೇಶ, ಕನಕನ ಕಿಂಡಿ, ಗೋಪುರ, ಕೀರ್ತನೆಗಳಿಗೆ ಸಂಬಂಧಿಸಿದಂತೆ ಎದ್ದಿರುವ ಗೊಂದಲಗಳಿಗೆ, ಜೀವ ವಿಕಾಸದ ಮೂಲವಾದ ಪಶುಪಾಲನಾ ಪರಂಪರೆಯ ಸಂಬಂಧ, ಪ್ರಭಾವ, ಪ್ರೇರಣೆಗಳು ಕನಕದಾಸರನ್ನು ರೂಪಿಸಿದೆಯೇ? ಎಂಬುದರ ಬಗ್ಗೆ ತಿಳಿದುಕೊಳ್ಳುವ ಬಹು ಮುಖ್ಯ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಆದಿ ಮಾನವರು ಆಹಾರದ ಹುಡುಕಾಟಕ್ಕಾಗಿ ಅಲೆಮಾರಿಗಳಾಗಿ, ಬೇಟೆ ಕಾರ್ಯದಲ್ಲಿ ತೊಡಗಿದ್ದರು. ಕಾಲಾನಂತರದಲ್ಲಿ ಪಶುಪಾಲನೆಗೆ ಒಲಿದು ಅಲ್ಲಿಂದ ಕೃಷಿಗೆ ಧಾವಿಸಿದರು ಎಂಬುದರಲ್ಲಿ ಎರಡು ಮಾತಿಲ್ಲ. ಹೇಗೆಂದರೆ ಮಾನವ ವಿಕಾಸದ ಮೊದಲನೆಯ ಘಟ್ಟವಾದ ಬೇಟೆಗಾರಿಕೆಯಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧು ಪ್ರಾಣಿಗಳನ್ನು ಸಲಹುತ್ತಾ ಭಕ್ಷಿಸುತ್ತಾ, ಬೇಟೆಗಾರಿಕೆಯೊಂದಿಗೆ ಹಲವರು ಪಶು ಪಾಲಕರಾದರು. ಪಶುಪಾಲನೆಯಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಾಣಲು ಮತ್ತೆ ಕೆಲವರು ಕೃಷಿಯತ್ತ ವಾಲಿದರು. ಇವು ನಮ್ಮ ಮನುಕುಲದ ಸಾಮಾಜೀಕರಣ ಹಾಗೂ ಸಂಸ್ಕೃತೀಕರಣದ ಮಜಲುಗಳಾಗಿವೆ. ಪಶುಪಾಲನೆಯಲ್ಲಿಯೇ ನೆಮ್ಮದಿ ಕಂಡುಕೊಂಡವರು ಸಹಸ್ರಾರು ವರ್ಷಗಳಿಂದಲೂ ಅಲೆಮಾರಿ ಪಶು ಪಾಲಕರಾಗಿಯೇ ಜೀವಿಸತೊಡಗಿದರು. ಈ ಹಿನ್ನಲೆಯಲ್ಲಿ ಪಶುಪಾಲಕರ ಇತಿಹಾಸ, ಪರಂಪರೆಯನ್ನು; ಜೊತೆಜೊತೆಗೆ ಹುಟ್ಟಿಕೊಂಡ ಕಸುಬು ಪ್ರೇರಿತ ಜಾತಿಗಳೊಂದಿಗೆ ಚರ್ಚಿಸಿ 'ಮಾನವನ ವಿಕಾಸ'ದಲ್ಲಿ ಪಶುಪಾಲನೆಯ ಮಹತ್ವವೇನೆಂಬುದನ್ನು ತಿಳಿಯುವುದು ಈ ಅಧ್ಯಯನದ ಉದ್ದೇಶವಾಗಿದೆ.

ಮುಂದೆ ಈ ಪಶುಪಾಲಕರು ನದಿ ಹಾಗೂ ಜಲಾನಯನ ಪ್ರದೇಶಗಳಲ್ಲಿ ನೆಲೆ ನಿಂತು ತಮ್ಮೊಳಗೇ ಇದ್ದ ಪಾರಂಪರಿಕ ಸಂಪ್ರದಾಯವನ್ನು ತಮ್ಮ ಗುರುವಾದ ಪ್ರಕೃತಿಯೊಂದಿಗೆ, ಕರುಳು ಬಳ್ಳಿಯ ಸಂಬಂಧದಂತೆ ಇಟ್ಟುಕೊಳ್ಳುತ್ತಲೇ ಹಸು, ಕುರಿ, ಮೇಕೆ, ಕತ್ತೆ, ಅಶ್ವ, ಗಜ, ಮೀನುಗಾರಿಕೆ ವೃತ್ತಿಗೆ ಸಂಬಂಧಿಸಿದ ಪಶುಪಾಲನೆಯನ್ನು; ಪಶುಪಾಲನಾ ಪರಂಪರೆಯ ವಿಕಾಸದ ನೆಲೆಯಲ್ಲಿ ವಿಶ್ಲೇಷಿಸುವುದಾಗಿದೆ.

ಇಂತಹ ಒಂದು ಮೂಲ ಪರಂಪರೆ ಇತಿಹಾಸದ ಸಂದರ್ಭದಲ್ಲಿನ ವಚನಕಾರರು, ಭಕ್ತಿಚಳುವಳಿ, ಸೂಫಿಪಂಥ ಹಾಗೂ ಮಧ್ಯಕಾಲೀನ ಘಟ್ಟದಲ್ಲಿನ ಹರಿದಾಸರು ಸೇರಿದಂತೆ ಮುಖ್ಯವಾಗಿ ಕನಕದಾಸರ ಬದುಕು ಬರಹಗಳ ಮೇಲೆ ಬೀರಿದ ಪ್ರಭಾವ ಹಾಗೂ ಸಂಬಂಧಗಳನ್ನು, ಈ ಪರಂಪರೆಯ ಪ್ರೇರಣೆ ಮತ್ತು ಪರಿಣಾಮಗಳ ನೆಲೆಯಲ್ಲಿ ಇಲ್ಲಿನ ಅಧ್ಯಯನವು ಚರ್ಚಿಸುತ್ತಿದೆ.

ಆದ್ದರಿಂದ ಮಧ್ಯಕಾಲೀನ ಯುಗದ ಕನಕದಾಸರು, ವರ್ತಮಾನದ ಸಾಮಾಜಿಕ,

ಸಾಂಸ್ಕೃತಿಕ, ಧಾರ್ಮಿಕ ಬದುಕಿನಲ್ಲಿ ಸಾರ್ವಜನಿಕವಾಗಿ ಪ್ರಸ್ತುತವಾಗುತ್ತಲೇ ಇರುವುದಕ್ಕೆ ಅವರ ಚಿಂತನೆ ಮತ್ತು ಜೀವನ ಸಂದೇಶಗಳು ಹೇಗೆ ಕಾರಣವೆಂಬುದನ್ನು ಪಶುಪಾಲನಾ ಪರಂಪರೆಯ ಪ್ರೇರಣೆ, ಪ್ರಭಾವದ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದಾಗಿದೆ. ಕನಕದಾಸರು ತಮ್ಮ ಬದುಕು, ಸಾಹಿತ್ಯಕ ಬರವಣಿಗೆ ಹಾಗೂ ನಿರೂಪಣೆಗಳಲ್ಲಿ ಪ್ರತಿಪಾದಿಸಿದ ಮೌಲ್ಯಗಳಿಗೆ; ಪಶುಪಾಲನಾ ಪರಂಪರೆಯು ಮೂಲಕ ಪ್ರಾಯೋಗಿಕವಾದ ಅರ್ಥಕಂಡುಕೊಂಡು, ಆಧುನಿಕ ಸಮಾಜದ ಸಂದರ್ಭದಲ್ಲಿ ಈ ಮೌಲ್ಯಗಳು ಹೇಗೆ ಅನ್ವಯವಾಗುತ್ತಿವೆ? ಎಂಬುದನ್ನು ಚರ್ಚಿಸಲಾಗಿದೆ.

ಪ್ರತಿಯೊಬ್ಬ ಮನುಷ್ಯನ ಜೀವನದ ಮೇಲೆ ಅಗಾಧವಾದ ಪ್ರಭಾವ ಮತ್ತು ಪರಿಣಾಮ ಬೀರುವುದು ಅವನ ಬಾಲ್ಯದ ದಿನಗಳು. ಆ ದಿನಮಾನಗಳಲ್ಲಿ ಅವನು ಬೆಳೆದು ಬಂದ ಪರಿಸರ, ಜನಜೀವನ, ವೃತ್ತಿ, ಹಬ್ಬ- ಹರಿದಿನಗಳು, ಧಾರ್ಮಿಕ ಆಚರಣೆಗಳು, ಜಾತಿ ಸಂಬಂಧದ ಸಾರ್ವಜನಕ ಒಡನಾಟ, ಗಿಡ-ಮರ, ಹಳ್ಳ-ಕೊಳ್ಳ, ಬೆಟ್ಟ-ಗುಡ್ಡ, ಪ್ರಾಣಿ-ಪಕ್ಷಿ, ಆಹಾರಪದ್ಧತಿ ಹಾಗೂ ಧರಿಸಿದ ಒಡವೆ ವಸ್ತ್ರಗಳು ಕೊನೆಯವರೆವಿಗೂ ಆ ವ್ಯಕ್ತಿಯ ಮನಃಪಟಲದಲ್ಲಿ ಅಚ್ಚೊತ್ತಿ ಉಳಿದಿರುತ್ತವೆ. ಅಂತಹವರು ಮುಂದೆ ಸಾಹಿತಿಯೋ, ಕಲಾವಿದರೋ ಆದಾಗ ಈ ಅನುಭವಗಳು ಅವರ ಕೃತಿಗಳಲ್ಲಿ ವಿವಿಧ ರೂಪಗಳಲ್ಲಿ ಪ್ರಕಟಗೊಳ್ಳುತ್ತವೆ. ಹಾಗಾಗಿ ಬಾಲ್ಯದ ಈ ಪ್ರಭಾವಗಳಿಂದ ಮುಕ್ತನಾಗುವುದು ಯಾವ ವ್ಯಕ್ತಿಗೂ ಸುಲಭವಾಗಿ ಸಾಧ್ಯವಾಗುವುದಿಲ್ಲ, ಎಂದು ಮನಃಶಾಸ್ತ್ರಜ್ಞರೇ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಕನಕದಾಸರ ಬಾಲ್ಯದ ಮೇಲೆ ಪಶುಪಾಲನಾ ಪರಂಪರೆಯ ಪ್ರಭಾವವೇನಾದರೂ ಆಗಿದೆಯೇ ಎಂಬುದನ್ನು ಈ ಅಧ್ಯಯನದಲ್ಲಿ ಗಮನಿಸಲಾಗಿದೆ.

ಮಧ್ಯಕಾಲೀನ ಕರ್ನಾಟಕದ ಪರಂಪರೆಯ ಅರ್ಥಪೂರ್ಣ ಸಾಂಸ್ಕೃತಿಕ ಸಂಕೇತದಂತಿರುವ ಕನಕದಾಸರು ತಮ್ಮ ಬದುಕಿನುದ್ದಕ್ಕೂ ಕೃಷಿ ಸಂಸ್ಕೃತಿಯ ಎಲ್ಲಾ ಅನುಭವಗಳನ್ನು ತಮ್ಮ ಕೃತಿಗಳಲ್ಲಿ ಸಂಕೇತಗಳಾಗಿ, ರೂಪಕಗಳಾಗಿ, ಹೋಲಿಕೆಗಳಾಗಿ ಬಳಸಿಕೊಂಡಿದ್ದಾರೆ. ಕಾಡಿನ ವರ್ಣನೆ, ಕಾಡು ಪ್ರಾಣಿಗಳನ್ನು ಕುರಿತ ಚಿತ್ರಣಗಳು ಅವರು ಬೇಟೆಗಾರರಾಗಿದ್ದರೆಂಬುದನ್ನೂ, ಕೃಷಿ ಉಪಕರಣಗಳು, ಕೃಷಿ ಮೂಲದ ಬೆಳೆಗಳ ವಿವರಣೆ, ಕೆರೆ, ಕಾಲುವೆಗಳನ್ನೂ ಕುರಿತಂತೆ ಇರುವ ಸಂಕೇತಗಳು, ಗೋಶಾಲೆ, ಗಾಂಧಾರ ಹಾಗೂ ಇನ್ನಿತರ ಪಶುಪಾಲನಾ ಪ್ರೇರಿತ ಪ್ರದೇಶಗಳ ಹೆಸರುಗಳ ದಾಖಲೆಯೂ ಕೂಡ, ಕನಕದಾಸರು ಪಶುಪಾಲನೆಯ ಅನುಭವವನ್ನು ಹೊಂದಿದ್ದರು ಎಂಬುದನ್ನು ಚರ್ಚಿಸಲು ಪುಷ್ಟೀಕರಿಸುತ್ತವೆ. ಹಾಗಾಗಿ ಪ್ರಸ್ತುತ ಪಶುಪಾಲನಾ ಕೇಂದ್ರಿತ ವೃತ್ತಿಗಳು, ಊರಿನ ಹೆಸರುಗಳು ಈಗಲೂ ನಮ್ಮ ಸುತ್ತಲೂ ಕಂಡು ಬರುತ್ತಿವೆ, ಎಂಬುದನ್ನು ಸಂಸ್ಕೃತಿ ಸಂಶೋಧಕರ

ಚಿಂತನೆಗಳೊಂದಿಗೆ ಇಲ್ಲಿ ದಾಖಲಿಸಲಾಗಿದೆ.

ಮಧ್ಯಕಾಲೀನ ಕಾಲಘಟ್ಟದಲ್ಲಿ ಪಶುಪಾಲನಾ ಕೇಂದ್ರಿತ ಕಸುಬುಗಳು ಅಂದಿನ ಸಂದರ್ಭಗಳಿಗನುಸಾರವಾಗಿ ಒಂದೇ ಸಮುದಾಯದ ಒಳಗಡೆ ಪರಸ್ಪರ ಅದಲು-ಬದಲಾಗಿರಬಹುದೇನೋ ಎಂಬ ಈಗಿರುವ ನಮ್ಮ ಸಂದೇಹಗಳಿಗಾಗಿ; ಪಶುಪಾಲನಾ ಪರಂಪರೆಯ ವಿಕಾಸದ ನೆಲೆಯಲ್ಲಿ ಸ್ಪಷ್ಟತೆಯನ್ನು ಕಂಡುಕೊಳ್ಳಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಪಶುಪಾಲನಾ ಪರಂಪರೆಯ ವೃತ್ತಿಯನ್ನು ನಿರಂತರವಾಗಿ ಬಹು ಹಿಂದಿನಿಂದಲೂ ರೂಪಿಸಿಕೊಂಡು ಬಂದ ಜನಾಂಗವೆಂದರೆ ಹಟ್ಟಿಕಾರರು. ಇವರನ್ನು ಶಂಬಾಜೋಶಿ ಅವರು ಕುರುಬ,ಕುರುಕ, ಧನಗರ, ಎಂದು ನಿರೂಪಿಸಿದ್ದಾರೆ. ಈ ಕಾರಣಕ್ಕಾಗಿ ಹಾಲುಮತ ಸಂಸ್ಕೃತಿಯ ಮೂಲ ನೆಲೆಗಳು ಕನಕದಾಸರ ಜೀವನ ಹಾಗೂ ಬರಹಗಳಲ್ಲಿ ಕಂಡು ಬರುತ್ತವೆಯೇ ಎಂಬುದನ್ನು ವಿಶ್ಲೇಷಿಸಲಾಗಿದೆ. ಜೊತೆಗೆ ಪಶುಪಾಲನೆಯ ಪ್ರಭಾವ ಕನಕದಾಸರ ವ್ಯಕ್ತಿತ್ವ ಮತ್ತು ಕೃತಿಗಳಲ್ಲಿ ಪಡೆದುಕೊಂಡ ಹೊಸ ಹೊಳಹುಗಳು ಹಾಗೂ ಕಂಡುಬರುವ ಸಾಮ್ಯತೆಗಳನ್ನು ಈ ಸಂಶೋಧನೆಯು  ನಿರೂಪಿಸಲು ಪ್ರಯತ್ನಿಸುತ್ತಿದೆ.

ಜೊತೆಗೆ ಕೆಲವು ಜನಪದರ ಮೌಖಿಕ ಮಹಾಕಾವ್ಯಗಳಲ್ಲಿ ಕಂಡುಬರುವ ಪಶುಪಾಲನಾ ಪರಂಪರೆಯ ನೆಲೆ, ಸ್ವರೂಪ, ಲಕ್ಷಣಗಳನ್ನು ಇಲ್ಲಿನ ನಾಯಕರ ಬದುಕಿನೊಂದಿಗೆ; ಕನಕದಾಸರ ಬದುಕು ಬರಹಗಳಲ್ಲಿನ ಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ವಿಶ್ಲೇಷಿಸಲಾಗಿದೆ.

ಮಧ್ಯಕಾಲೀನ ಕರ್ನಾಟಕವನ್ನು ಹನ್ನೆರಡನೆಯ ಶತಮಾನದಿಂದ ಹದಿನಾರನೆಯ ಶತಮಾನದವರೆಗಿನದೆಂದು ಗುರುತಿಸಲಾಗಿದ್ದು; ಕನಕದಾಸರು ಜೀವಿಸಿದ್ದ ಕಾಲಘಟ್ಟವನ್ನು ಹದಿನಾರನೆಯ ಶತಮಾನವೆಂದು ಪರಿಭಾವಿಸಲಾಗಿದೆ. ಹಾಗಾಗಿ ವಿಕಾಸಗೊಳ್ಳುತ್ತಲೇ ಬಂದ ಪಶುಪಾಲನಾ ವೃತ್ತಿ ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ಬೀರಿದ ಪ್ರಭಾವ; ಇದು ಕನಕಪರಿಸರದಲ್ಲಿನ ಜನಜೀವನದ ಮೇಲೆ ಉಂಟುಮಾಡಿದ ಪರಿಣಾಮ, ಕನಕನ  ಬದುಕು ಬರಹಗಳಲ್ಲಿ ಪ್ರತಿಧ್ವನಿಸಲ್ಪಟ್ಟಿದೆಯೇ ಎಂಬುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ 'ಪಶುಪಾಲಕ'ರೆಂದರೆ ದನ, ಕರು, ಹಸು, ಎಮ್ಮೆ, ಕುರಿ, ಆಡು, ಆನೆ, ಕುದುರೆ ಕತ್ತೆಯಂತಹ ಪ್ರಾಣಿಗಳನ್ನು ಸಾಕಿ ಸಲಹುವವರು ಎಂದು ಅರ್ಥೈಸಿರುವುದರ ಜೊತೆಗೆ ಅಂದಿನ ಸಮಾಜದಲ್ಲಿದ್ದ ಕೆಳವರ್ಗದವರೆನಿಸಿಕೊಂಡ ಶ್ರಮಿಕರು, ಕೃಷಿಕರು, ಕುರುಬರು, ಕುಂಬಾರ, ಚಮ್ಮಾರ, ಬಡಗಿ ಮುಂತಾದ ಕುಲ ಕಸುಬಿನವರೂ ಕೂಡ ಈ 'ಪರಂಪರೆ'ಯ

ಹಿನ್ನೆಲೆಯವರೆಂದೇ ಈ ಅಧ್ಯಯನವು ಪರಿಗಣಿಸಿದೆ.

ಹೀಗೆ ಮಧ್ಯಕಾಲೀನ ಕಾಲಘಟ್ಟದ ಸಾಮಾಜಿಕ ಪರಂಪರೆಯಾದ ಪಶುಪಾಲನೆಯು, ಈ ನೆಲದ ಸಂಸ್ಕೃತಿಯ ಬಿಂಬದಂತಿದ್ದು; ಸಾಹಿತ್ಯಕ, ಸಾಂಸ್ಕೃತಿಕ, ಹಾಗೂ ಆಧ್ಯಾತ್ಮಿಕ ಪರಂಪರೆಯ ರೂಪಕದಂತಿರುವ ಕನಕದಾಸರ ಬದುಕು ಬರಹಗಳ ಮೇಲೆ ಬೀರಿರುವ ಪ್ರಭಾವ, ಪ್ರೇರಣೆ, ಸಂಬಂಧಗಳನ್ನು ಹಾಗೂ ಇದು ಉಂಟುಮಾಡಿರುವ ಪರಿಣಾಮಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

**ವ್ಯಾಪ್ತಿ:**

ಕನಕದಾಸರನ್ನು ಕುರಿತಂತೆ ಭಿನ್ನ ಭಿನ್ನ ನೆಲೆಗಳಲ್ಲಿ ಮರು ವ್ಯಾಖ್ಯಾನಿಸುತ್ತಿರುವ ಈ ಹೊತ್ತಿನಲ್ಲಿ ಪ್ರಸ್ತುತ ಅಧ್ಯಯನವು ರೂಪಿಸಿಕೊಂಡಿರುವ ದೃಷ್ಟಿಕೋನಕ್ಕೆ; ಲಭ್ಯ ಆಕರಗಳ ಮೂಲಕ, ಸಂಶೋಧನಾತ್ಮಕ ಗ್ರಹಿಕೆಯೊಂದಿಗೆ, ನಿರ್ದಿಷ್ಟ ಚೌಕಟ್ಟನ್ನು ಈ ಮುಂದಿನಂತೆ ಗುರುತಿಸಿಕೊಳ್ಳಲಾಗಿದೆ.

ವ್ಯಕ್ತಿ ಕೇಂದ್ರಿತ ಮಧ್ಯಕಾಲೀನ ಸಂಕಥನವೊಂದು, ಆಧುನಿಕ ಭಾರತ ಹಾಗೂ ಕರ್ನಾಟಕದ ನಾಡು-ನುಡಿಯ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಸಾಹಿತ್ಯಕ ಸಂಕಥನದಂತೆ ಕಂಡು ಬರುತ್ತಿರಲು, ಕಾರಣವೇನೆಂಬುದನ್ನು ಇದುವರೆಗಿನ ಅಧ್ಯಯನಗಳು ಕಂಡುಕೊಂಡಿವೆ. ಆದ್ದರಿಂದ ಕನಕದಾಸರ ಜೀವನವನ್ನು ಕುರಿತಂತೆ ಇದುವರೆಗೆ ಬಂದಿರುವ ಜಾನಪದ ಕಥೆ, ಗೀತೆಗಳು, ಸಂಶೋಧನಾತ್ಮಕ ಕೃತಿಗಳು, ಲೇಖನಗಳನ್ನು ಅವಲೋಕಿಸುವುದರ ಜೊತೆಗೆ ಕನಕದಾಸರ ಕೃತಿಗಳು, ಕೀರ್ತನೆಗಳು ಮುಂಡಿಗೆಗಳು ಮತ್ತು ನಿರೂಪಣೆಗಳನ್ನು ಕುರಿತು ಬಂದಿರುವ ಅಧ್ಯಯನಗಳನ್ನು ಇಲ್ಲಿನ ಸಂಶೋಧನೆಗೆ ಆಕರವಾಗಿ ಬಳಸಿಕೊಳ್ಳಲಾಗಿದೆ.

'ಪಶುಪಾಲನೆ' ಎಂದರೆ ಅದು ಈ ನೆಲದ ಪ್ರಧಾನ 'ಸಂಸ್ಕೃತಿ'. ಇಂತಹದ್ದೊಂದು ಸಂಸ್ಕೃತಿಯ ಅರ್ಥ, ಸ್ವರೂಪ, ಪರಂಪರೆಯನ್ನು; ಹಾಲುಮತ ಕಾವ್ಯ, ಜುಂಜಪ್ಪನ ಕಾವ್ಯ, ಮಲೈಮಹದೇಶ್ವರಕಾವ್ಯ, ಮಂಟೆಸ್ವಾಮಿಕಾವ್ಯ, ಬೀರಪ್ಪ ಪರಂಪರೆ, ರೇವಣಸಿದ್ಧ ಪರಂಪರೆ, ಮೈಲಾರಲಿಂಗನ ಕಾವ್ಯ ಎಂಬ ಬುಡಕಟ್ಟು ಜನಪದರ ಮೌಖಿಕ ಮಹಾ ಕಾವ್ಯಗಳ ಮೂಲಕ ಅರ್ಥೈಸಿಕೊಳ್ಳಲಾಗಿದೆ. ಹಾಗೆಯೇ ಪಶುಪಾಲನಾ ಸಂಸ್ಕೃತಿಯ ವಿಕಾಸವನ್ನು ಅಧ್ಯಯನಕ್ಕೆ ಪೂರಕವಾಗಿ ಚರ್ಚಿಸಲು ಭಾರತವೂ ಸೇರಿದಂತೆ ಜಗತ್ತಿನ ನಾಗರಿಕತೆಗಳ ಬೆಳವಣಿಗೆ ಕುರಿತು ವಿವೇಚಿಸಿರುವ ಇತಿಹಾಸದ ದಾಖಲೆಗಳನ್ನು ಈ ಅಧ್ಯಯನಕ್ಕೆ ಆಕರವಾಗಿ ತೆಗೆದುಕೊಳ್ಳಲಾಗಿದೆ.

ಪಶುಪಾಲನಾ ಪರಂಪರೆಯ ಪ್ರಭಾವ, ವಚನ ಚಳುವಳಿ, ಭಕ್ತಿಚಳುವಳಿ,

ಹರಿದಾಸಪರಂಪರೆ, ತತ್ವಪದಕಾರರು ಹಾಗೂ ಸೂಫಿಸಂತತಿಯವರ ಮೇಲೆ ಬೀರಿರುವ ಪರಿಣಾಮವೇನಾದರೂ ಇದೆಯೇ? ಎಂಬುದನ್ನು ಅರಿಯಲು; ವಚನಕಾರರು, ಭಕ್ತಿ ಚಳುವಳಿಯ ಪ್ರವರ್ತಕರು, ಹರಿದಾಸರ ಜೀವನ ಚರಿತ್ರೆ, ತತ್ವ ರಚನಕಾರರು ಹಾಗೂ ಸೂಫಿಸಂತರ ಉಪದೇಶಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಹರಿದಾಸ ಯುಗದ ಸುವರ್ಣ ಕಾಲದಲ್ಲಿ ಬಾಳಿ ಬದುಕಿದ ಕನಕದಾಸರ ಪ್ರಭುತ್ವ, ಧಾರ್ಮಿಕ ಸಂಪ್ರದಾಯ ಮತ್ತು ಕಸುಬುಗಳ ನಿರ್ವಹಣೆಯಲ್ಲಿ; ಪಶುಪಾಲನೆಯ ಪ್ರಭಾವ, ಪರಿಣಾಮ ಮತ್ತು ಸಂಬಂಧವೇನಾದರೂ ಇದೆಯೇ ಎಂಬುದನ್ನು ತಿಳಿಯಲು ಕನಕದಾಸರ ಎಲ್ಲಾ ರೀತಿಯ ಬರವಣಿಗೆಗಳನ್ನು ಈ ಅಧ್ಯಯನದಲ್ಲಿ ಮೂಲ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಈಗಿರುವ ಪಶುಪಾಲನೆಯ ಗುಣಲಕ್ಷಣಗಳಾದ ಪಾಲನೆ, ಸಾಕಾಣಿಕೆ, ಸಹಕಾರ, ಹೊಂದಾಣಿಕೆ, ಹಾಲಿನ ಉತ್ಪನ್ನಗಳ ಸಂಗ್ರಹ ಇವುಗಳೊಟ್ಟಿಗೆ ಕನಕಯುಗದ ಮೌಲ್ಯ, ಜನಜೀವನ, ಸಂಸಾರ, ಬದುಕು ಎಂಬ ಸಾಮಾಜಿಕ ಅಂಶಗಳನ್ನು ಹೋಲಿಸಿ ಚರ್ಚಿಸಲು; ಅಂದು ಕನಕದಾಸರು ನಡೆದಾಡಿದ ಪ್ರದೇಶಗಳಾದ ಹಂಪಿ, ಉಡುಪಿ, ಬೇಲೂರು, ಹಳೇಬೀಡು, ಶ್ರೀರಂಗಪಟ್ಟಣ, ಕಾಗಿನೆಲೆ, ಬಾಡ ಊರುಗಳಿಗೆ ಭೇಟಿ ನೀಡಿ, ಪೂರಕ ಪ್ರಶ್ನೆಗಳೊಂದಿಗೆ ಮಾಹಿತಿಯನ್ನು ಅಲ್ಲಿನ ಜನಪದರಿಂದ ಸಂಗ್ರಹಿಸಿ ದಾಖಲಿಸಲಾಗಿದೆ.

ಒಂದು ಕಾಲದ ಸಾಹಿತ್ಯವು ಆ ಕಾಲಘಟ್ಟವನ್ನು ಪ್ರತಿನಿಧಿಸುತ್ತಲೇ ಇರುತ್ತದೆ ಎಂಬ ಮಾತಿಗೆ ಪೂರಕವಾಗಿ, ಕನಕದಾಸರು ಬರೆದಿರುವ ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯಚರಿತೆ, ಹರಿಭಕ್ತಿಸಾರ, ಕೀರ್ತನೆಗಳು ಹಾಗೂ ಮುಂಡಿಗೆಗಳಲ್ಲಿ; ಪಶುಪಾಲನೆಯ ಕುರುಹು ಅಥವಾ ನೆಲೆಗಳನ್ನು ಅಧ್ಯಯನದ ಹಿನ್ನಲೆಯಲ್ಲಿ ಗಮನಿಸಲಾಗಿದೆ.

ಮಾನವನ ವಿಕಾಸದ ಮೂಲ ಪರಂಪರೆಯೊಂದಿಗೆ ಕನಕದಾಸರನ್ನು ಅರ್ಥೈಸಿಕೊಳ್ಳುವಲ್ಲಿ; ಅಂದಿನ ವಿಶಾಲ ಸಾಮ್ರಾಜ್ಯವಾದ ವಿಜಯನಗರದಲ್ಲಿನ ಜನಜೀವನ, ಆಡಳಿತ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ನಿರ್ವಹಣೆಯ ವಿಧಾನಗಳನ್ನು ಗಮನಿಸುವುದು ಕೂಡ ಈ ಅಧ್ಯಯನದ ವ್ಯಾಪ್ತಿಯಲ್ಲಿದೆ.

ಹೀಗೆ ಕನಕದಾಸರ ಕಾಲ ಘಟ್ಟದ ಚಾರಿತ್ರಿಕ, ಧಾರ್ಮಿಕ, ಸಾಹಿತ್ಯಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂಕಥನದ ವಿನ್ಯಾಸಗಳನ್ನು ಪ್ರಮುಖ ಸಂಸ್ಕೃತಿ ಚಿಂತಕರಾದ. ಶಂ.ಬಾ.ಜೋಶಿ, ಎಂ.ಚಿದಾನಂದಮೂರ್ತಿ, ಎಂ.ಎಂ.ಕಲುಬುರ್ಗಿ ಮುಂತಾದವರ

ಪರಂಪರೆ ಕುರಿತಂತಹ ವಿಚಾರಗಳ ಬೆಳಕಿನಲ್ಲಿಟ್ಟು, ಇಲ್ಲಿನ ಅಧ್ಯಯನವನ್ನು ಕೈಗೊಳ್ಳಲಾಗಿದೆ.

# ಅಧ್ಯಾಯ : ಎರಡು

## ಪಶುಪಾಲನಾ ಪರಂಪರೆ ಮತ್ತು ವಿಕಾಸ

**ಜೀವ ಮೂಲ:**

ಜೀವಿಗಳ ಸೃಷ್ಟಿಯ ಮೂಲ ನಿಜಕ್ಕೂ ನಿಗೂಢವಾದುದು. ಜೀವಿಗಳು ನಿಸರ್ಗದಲ್ಲಿ ಹುಟ್ಟಿ ವಿಕಾಸವಾಗಿರುವ ಬಗ್ಗೆ ಈಗಲೂ ಸಂಶೋಧನೆಗಳು ನಡೆಯುತ್ತಲೇ ಇವೆ. ಭೂಮಿಯ ಮೇಲೆ ಪ್ರಾಣಿಗಳು, ಸಸ್ಯಗಳು, ಜಲಚರಗಳು, ಜೀವಜಂತುಗಳು ಹುಟ್ಟಿ ವಿಕಾಸಗೊಂಡು ಸಂತಾನೋತ್ಪತ್ತಿಯೊಂದಿಗೆ ಅಂತ್ಯವಾಗುತ್ತಲೇ ಇವೆ. ಇದೆಲ್ಲಾ ನಿಸರ್ಗದ ವೈಶಿಷ್ಟ್ಯ. ಜೀವವಿಜ್ಞಾನಿಗಳು ಹಾಗೂ ಸಂಶೋಧಕರು ಈ ರೀತಿಯ ಜೀವ ಮೂಲಕ್ಕೆ ಏಕಕೋಶ ಜೀವಿಯಾದ 'ಅಮೀಬಾ' ಮೂಲವೆಂದು ಗುರುತಿಸಿದ್ದಾರೆ.[೧]

**ಜೀವ ವಿಕಾಸ:**

ಜೀವ ವಿಕಾಸದ ಕ್ರಮವು ಏಕ ಇಂದ್ರಿಯ ಹೊಂದಿದ ಜೀವಿಗಳಿಂದ ಪ್ರಾರಂಭಗೊಂಡು, ಇಂದಿನ ಆರು ಇಂದ್ರಿಯ ಹೊಂದಿದ ಪ್ರಬುದ್ಧ ಮಾನವನವರೆಗೆ ಮುಂದುವರೆದಿದೆ. ಹೀಗಿರುವಾಗ ಎರಡು ಇಂದ್ರಿಯಗಳನ್ನು ಪಡೆದುಕೊಂಡಿರುವ ಮೃದಂಗಿಗಳು ಸ್ಪರ್ಶ ಮತ್ತು ರುಚಿಯನ್ನು ಪಡೆದಿದ್ದರೆ, ಮೂರು ಇಂದ್ರಿಯಗಳನ್ನು ಪಡೆದ ಕೀಟಾಣುಗಳಾದ ಗೆದ್ದಲು, ಇರುವೆ ಮುಂತಾದುವು ಸ್ಪರ್ಶ, ರುಚಿ, ವಾಸನೆಗಳನ್ನು ಹೊಂದಿವೆ. ನಾಲ್ಕನೆಯ ವರ್ಗದಲ್ಲಿ ಏಡಿಯ ಜಾತಿಗೆ ಸೇರಿದ ಜೀವಿಗಳು ಸ್ಪರ್ಶ, ರುಚಿ, ವಾಸನೆಯ ಜೊತೆಗೆ ಕಣ್ಣು ಎಂಬ ನಾಲ್ಕನೆಯ ಇಂದ್ರಿಯವನ್ನು ಪಡೆದವು. ಹಾಗೆಯೇ ಐದನೇ ಇಂದ್ರೀಯ 'ಕೇಳುವಿಕೆ'ಯನ್ನು ಹೊಂದಿದ ಪ್ರಾಣಿ ಮಂಗ, ಗೋರಿಲ್ಲಾ, ಚಿಂಪಾಂಜಿಯವರೆಗೆ ವಿಕಾಸದ ಹಂತ ಬೆಳೆದು ಬರುತ್ತದೆ. ಇನ್ನು ಆರನೆಯ ಇಂದ್ರಿಯವಾದ 'ಬುದ್ಧಿ' ಅಥವಾ ವಿಚಾರವಂತಿಕೆಯ ಮೂಲಕ ತರ್ಕ ಶಕ್ತಿಯನ್ನು ಹೊಂದಿದವನೇ 'ಮಾನವ' ಎಂದು ವಿಷ್ಣುಪುರಾಣ(ಅಜಪುರಾಣ) ಹೇಳುತ್ತದೆ.

ಈ ಹಿನ್ನೆಲೆಯಿಂದಾಗಿ ಮಾನವ ಶಾಸ್ತ್ರದಲ್ಲಿಯೂ ಕೂಡ ಜೀವಿಯ ಉಗಮವನ್ನು ಕುರಿತು ಗಾಢವಾದ ವಿಚಾರ ಮಂಥನಗಳಾಗಿವೆ. ಇದರಿಂದಾಗಿ ಒಬ್ಬೊಬ್ಬ ಮಾನವಶಾಸ್ತ್ರಜ್ಞರು ಒಂದೊಂದು ಅರ್ಥ ಹೊಮ್ಮುವ ರೀತಿಯಲ್ಲಿ ಜೀವವಿಕಾಸದ ಅರ್ಥವನ್ನು ನೀಡಿದ್ದಾರೆ. ಅಂದರೆ ಜೀವವು ಮೂಲದಲ್ಲಿ ಏಕಕೋಶವುಳ್ಳ ಅಣುಗಾತ್ರದ ಜೀವಿಯಾಗಿ ರೂಪುಗೊಂಡಿತು. ಕಾಲಾನುಕ್ರಮದಲ್ಲಿ ಪರಿಸರದಲ್ಲಾದ ಬದಲಾವಣೆಗೆ ತಕ್ಕಂತೆ ಜೀವಿಗಳ ದೇಹ ರಚನೆಯಲ್ಲಿ ಬದಲಾವಣೆಗಳಾಗಿ ಅವುಗಳನ್ನು ಅನೇಕ

ಪ್ರಕಾರಗಳಾಗಿ ವಿಂಗಡಿಸಲಾಯಿತು ಎಂದು, ಜೀವ ವಿಕಾಸದ ತಜ್ಞ 'ಡಾರ್ವಿನ್' ಅಭಿಪ್ರಾಯ ಪಡುತ್ತಾನೆ. ಈ ದೇಹರಚನೆಯ ವಿಕಾಸದ ಬಗ್ಗೆ ಮತ್ತೋರ್ವ ಜೀವವಿಕಾಸ ತಜ್ಞನಾದ 'ವ್ಯಾಲ್ಲಾಸ' ಎಂಬುವವನು ಜೀವವಿಕಾಸದಲ್ಲಿ ಬರುವ ಮಂಗ, ಗೋರಿಲ್ಲಾ, ಚಿಂಪಾಂಜಿಯಂತೆ 'ನರ' ಎಂಬ ಪ್ರಾಣಿ ಇದ್ದುದಾಗಿ ತಿಳಿಸುತ್ತಾನೆ.[೨] ಏಕೆಂದರೆ ಮಾನವ ಮತ್ತು ಚಿಂಪಾಂಜಿಗಳ ನಡುವೆ ಶಾರೀರಿಕ ಲಕ್ಷಣಗಳಿಗೆ ಸಂಬಂಧಿಸಿದ ಭಿನ್ನತೆಗಳಿವೆ. ಇದನ್ನು ಇವರಿಬ್ಬರ ಮಿದುಳಿನ ರಚನೆಯಲ್ಲೂ ಕಾಣಬಹುದು. ಯೋಚನಾಶಕ್ತಿ ಎಂಬುದು ಈ ಪ್ರಾಣಿಗಳಿಗೆ ಇಲ್ಲ. ಇನ್ನು ಮಂಗನ ಮೆದುಳು ಈಗಲೂ ಇಂದ್ರಿಯಗಳ ದಾಸ್ಯದಲ್ಲೇ ಉಳಿದಿದೆ. ಹಾಗೆಯೇ ಉಳಿದಿರುವ (ಮಾನವನನ್ನು ಬಿಟ್ಟು) ಯಾವ ಪ್ರಾಣಿಗಳಲ್ಲೂ ಕಲ್ಪನಾ ಶಕ್ತಿಯ ಅಂಗವೇ ಇಲ್ಲ. ಎಂಬುದು 'ವ್ಯಾಲ್ಲಾಸ' ಅವರ ಅಭಿಪ್ರಾಯವಾಗಿದೆ.

ಹಾಗಾದರೆ ಈ 'ನರ' ಯಾರು? ರಾಮಾಯಣ ಅಥವಾ ವೇದಗಳಲ್ಲಿ ಉಲ್ಲೇಖಗೊಂಡ ನರನೇ? ರಾಮಾಯಣದ ಕಾಲ, ಕ್ರಿ.ಪೂ. ೫೦೦೦ ವರ್ಷಗಳ ಇತ್ತೀಚಿನದು.[೩] 'ಡಾ.ಪದ್ಮಾಕರ.ವಿ.ವರ್ತಕ' ಅವರ ಪ್ರಕಾರ ರಾಮಾಯಣದ ಕಾಲಮಾನ ಕ್ರಿ.ಪೂ.೭೬೬೧. ಮಹಾಭಾರತದ ಕಾಲಮಾನ ಕಿ.ಪೂ.೫೦೦೦ದ ಹಿಂದಕ್ಕೆ ಸರಿಯುತ್ತದೆ.[೪] ವಾನರ ಮತ್ತು ಮಾನವನ ಮಧ್ಯೆ 'ನರ' ಎಂಬ ಪ್ರಾಣಿಯ ಘಟ್ಟ ಇದೆ. ಈ ಮಾನವ ಪ್ರಾಣಿಯು ಪ್ರಾರಂಭದಲ್ಲಿ ಸ್ವಭಕ್ಷಿಯಾಗಿದ್ದು, ಕಾಲಾನಂತರದಲ್ಲಿ, ಪರಭಕ್ಷಿಯಾಗಿದ್ದನ್ನು ಜೀವ ವಿಕಾಸ ಕ್ರಮದಲ್ಲಿ ನಾವು ಕಾಣುತ್ತೇವೆ.

**ಮಾನವನ ವಿಕಾಸ:**

ಮಾನವನ ಚರಿತ್ರೆಯಲ್ಲಿ ಎರಡು ಕಾಲ ಘಟ್ಟಗಳಿವೆ. ಮೊದಲನೆಯದು ಆಹಾರ ಸಂಚಯನದ ಕಾಲ. ಎರಡನೆಯದು ಆಹಾರ ಉತ್ಪಾದನೆಯ ಕಾಲ. ನಾಗರಿಕತೆಯು ಸುಧಾರಿಸಿದಂತೆ ಮತ್ತೆರಡು ಕಾಲಘಟ್ಟಗಳು ಇವುಗಳಲ್ಲಿ ಸೇರ್ಪಡೆಯಾಗುತ್ತವೆ. ಅವುಗಳೆಂದರೆ ಆಹಾರ ವಿತರಣೆಯ ಕಾಲ ಮತ್ತು ಆಡಳಿತ (ರಾಜಕಾರಣ)ದ ಕಾಲ.

ಮಾನವ ಜೀವವಿಕಾಸದ ಹಂತದಲ್ಲಿ ಅನ್ನ ಸಂಗ್ರಹಕ್ಕಾಗಿ ಕಾಡು-ಮೇಡು, ಹಳ್ಳಕೊಳ್ಳಗಳಲ್ಲಿ ಅಲೆಯಬೇಕಾಗಿತ್ತು. ನಿಂತಲ್ಲೇ ನಿಲ್ಲುವುದು ಅಸಾಧ್ಯವಾಗಿತ್ತು. ಹೊಟ್ಟೆ ಪಾಡಿಗಾಗಿ ಮಾಡುವ ಈ ಹೋರಾಟದಲ್ಲಿ ಅವನಿಗೆ ಬಿಡುವೇ ಇರಲಿಲ್ಲ. ಆಹಾರದ ಉತ್ಪಾದನೆ ಅರಿಯದ ಮಾನವ ಮೊದಲು ಹಣ್ಣು-ಹಂಪಲು, ಕಾಯಿ, ಬೇರುಗಳನ್ನು ತಿಂದು ಬದುಕುತ್ತಿದ್ದ. ಆಹಾರ ಸಂಗ್ರಹಣೆಯ ಘಟ್ಟದಲ್ಲಿ ಮಾನವನ ಜೀವನವು ಗಿಡಮರ ಹಾಗೂ ಸಸ್ಯ ಪ್ರಪಂಚದ ಮೇಲೆ ಅವಲಂಬಿತವಾಗಿತ್ತು. ಹೀಗಾಗಿ ಮರಗಳೇ ಮಾನವನಿಗೆ ಕಾಲಕ್ರಮೇಣ ದೈವಗಳಾದವು.

ಮುಂದೆ ಇವನಿಗೆ ಸಸ್ಯಾಹಾರದ ಕೊರತೆಯುಂಟಾದಾಗ, ಪ್ರಾಣಿಗಳು ಪ್ರಾಣಿಗಳನ್ನೇ ಕೊಂದು ತಿನ್ನುವ ಸೃಷ್ಟಿ ವೈಚಿತ್ರ್ಯ ಕಂಡು ಪ್ರಾಣಿಗಳನ್ನು ಬೇಟೆಯಾಡತೊಡಗಿದ. ಬೇಟೆಯಿಂದ ಸಿಗುವ ಹಸಿಮಾಂಸವನ್ನು ತಿನ್ನತೊಡಗಿ ನಂತರ ಬೇಯಿಸಿ ಸೇವಿಸತೊಡಗಿದ. ಮುಂದಿನ ಕಾಲಘಟ್ಟಗಳಲ್ಲಿ ಮಾನವ ಬಹುತೇಕವಾಗಿ ಮಾಂಸಾಹಾರದ ಮೇಲೆಯೇ ಅವಲಂಬಿತನಾದನೆಂದು ತಿಳಿದು ಬರುತ್ತದೆ. ಈ ಕಾರಣದಿಂದ ಬೇಟೆಗಾರಿಕೆಯು ಮಾನವನ ಪ್ರಥಮ ಕಸುಬಾಯಿತೆಂದು ನಂಬಲಾಗಿದೆ. ಇದು ಮುಂದೆ 'ಬೇಟೆಗಾರ' ಅಥವಾ 'ವ್ಯಾಧ' ಎಂಬ ಜಾತಿಯಾಯಿತೆಂದು ಹಾಗಾಗಿಯೇ ಭಾರತದ ಮೂಲನಿವಾಸಿಗಳಾದ ದ್ರಾವಿಡರನ್ನು 'ವ್ಯಾಧ' ಮೂಲದವರು ಎಂದು ಕರೆದಿರುವುದನ್ನು ಗಮನಿಸಬಹುದು.[೫] ಆದರೆ ಎಲ್ಲಾ ಮಾನವರು ಹೊಮೋಸೆಫಿಯನ್ಸ್ (ಮನುಷ್ಯಜಾತಿ) ಎಂಬ ಒಂದೇ ಜಾತಿಗೆ ಸೇರಿದವರು, ಎಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂಬುದು ವಿದ್ವಾಂಸರ ಅಭಿಮತವಾಗಿದೆ.

ಈ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಆಧುನಿಕ ಮಾನವನ ಜನ್ಮ, ಎಲ್ಲಿಂದ ಪ್ರಾರಂಭವಾಯಿತು? ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡರೆ, ಅದಕ್ಕಾಗಿ 'ಪ್ರೊ.ಸ್ಟೀವನ್ ಆಫನ್ ಹೈವನ್' ಎಂಬ ಸಂಶೋಧಕನ ತೀರ್ಮಾನವನ್ನು ಗಮನಿಸಬೇಕಾಗುತ್ತದೆ. ಈತನ ಪ್ರಕಾರ ಪ್ರಪಂಚದ ಆಧುನಿಕ ಮಾನವನ ಜನ್ಮ ಆಫ್ರಿಕಾದ ಇಂದಿನ ಇಥಿಯೋಪಿಯಾದಲ್ಲಿ ಎಂಬ ತೀರ್ಮಾನಕ್ಕೆ ಬರುತ್ತಾರೆ.* ಈ ಇಥಿಯೋಪಿಯಾದಲ್ಲಿನ ಮಾನವರು ಬೇಟೆಯ ಬೆನ್ನುಹತ್ತಿ 'ಮಿಶ್ರ' (ಈಜಿಫ್ಟ್)ದವರೆಗೆ ಬಂದಾಗ ಅವರಿಗೆ ಮುಂದೆ ಹೋಗಲು ಕೆಂಪುಸಮುದ್ರ ದೊಡ್ಡ ಸಮಸ್ಯೆಯಾಗಿ ಕಾಣಿಸಿಕೊಂಡಿತು. ಕೆಂಪುಸಮುದ್ರ ದಾಟುವ ಯಾವ ಪರಿಕರಗಳು ಅವರಲ್ಲಿಲ್ಲದ

---

* ಮೆಟ್ರೊ ಕ್ರಾಂಡಿಯಲ್ ವಂಶದ ಬೇಟೆಗಾರರು ೨೫ ಪಂಗಡಗಳಾಗಿ ಬೇಟೆಯ ಬೆನ್ನು ಹತ್ತಿ ಉತ್ತರದ ಮಿಶ್ರ (ಈಜಿಫ್ಟ್) ವರೆಗೆ ಬಂದರು. ಸಹರಾ ಮರುಭೂಮಿ ದಾಟಿಕೊಂಡು ಬರುವಾಗ ಅಲ್ಲಿಯ ವಾತಾವರಣಕ್ಕೆ ಅರ್ಧದಷ್ಟು ಮಾನವರು ಬಲಿಯಾದರು. ಸಹರಾ ಮರುಭೂಮಿಯಲ್ಲಿ ದೊರೆತ ೧೩ ತಲೆ ಬರುಡೆಗಳು ಇಂದಿನ ಮಾನವರ ತಲೆ ಬುರುಡೆಗೆ ಹೊಂದಾಣಿಕೆಯಾಗುತ್ತಿದ್ದು ಅವು ಒಂದು ಲಕ್ಷ ವರ್ಷಗಳಷ್ಟು ಪುರಾತನವಾಗಿರುವ ಸಂಗತಿ ಅವರನ್ನು ಆಶ್ಚರ್ಯಗೊಳಿಸಿತು. ಆ ಮೊದಲು,ಸಿಕ್ಕ ತಲೆಬುರುಡೆಗಳು ಪಿರಮಿಡ್ ಕಾಲದವು ಆಗಿರಬಹುದೆಂಬ ತರ್ಕ 'ಹೈವನ್' ಅವರದ್ದು. ಈ ಹೊಸ ಸಂಶೋಧನೆಯಿಂದ ಮಾನವನ ಉಗಮದ ಇತಿಹಾಸವು ಸುಮಾರು ೨.೫ಲಕ್ಷ ವರ್ಷಗಳಷ್ಟು ಹಿಂದಕ್ಕೆ ಸರಿಯಿತು. ಹಾಗಾಗಿ ಆಧುನಕ ಮಾನವನ ಜನ್ಮವು ೧.೨೫ ಲಕ್ಷ ವರ್ಷಗಳ ಹಿಂದೆಯೇ ಮಧ್ಯ ಆಫ್ರಿಕಾ ಖಂಡದಲ್ಲಿ ಆಯಿತೆಂಬ ನಿರ್ಧಾರಕ್ಕೆ ಈ ಸಂಶೋಧಕ ಬರುತ್ತಾನೆ.

ಕಾರಣ, ಆಹಾರಕ್ಕಾಗಿ ಕೆಂಪು ಸಮುದ್ರವನ್ನೇ ಆಶ್ರಯಿಸಬೇಕಾದ ಅನಿವಾರ್ಯತೆ ಉಂಟಾಯಿತು. ಆದ್ದರಿಂದ ಸಮುದ್ರ ಜೀವಿಗಳೇ ಇವರ ಪ್ರಮುಖ ಆಹಾರವಾದವು. ಭೂ ಪ್ರದೇಶದ ಪ್ರಾಣಿಗಳ ಬೇಟೆಗಾರರಾದ ಇವರಿಗೆ ಮೀನುಗಾರರಾಗಲು ಇಲ್ಲಿನ ಪ್ರಕೃತಿಯೇ ಅನುವು ಮಾಡಿಕೊಟ್ಟಿತು. (ಸುಮಾರು ೮೦ ಸಾವಿರ ವರ್ಷಗಳ ಹಿಂದೆ). ಕಾಲಾನಂತರದಲ್ಲಿ ಕೆಂಪು ಸಮುದ್ರವನ್ನು ದಾಟಿ ಮೆಸಪಟೋಮಿಯಾಕ್ಕೆ ಬಂದು ನೆಲೆಸಲು ಸುಮಾರು ೩೦ ಸಾವಿರ ವರ್ಷಗಳೇ ಬೇಕಾದವು.[೬] ಈ ಸಮಯದಲ್ಲಿ ತೆಪ್ಪ ತಯಾರಿಸುವ ಮತ್ತು ಅದರ ಸಹಾಯದಿಂದ ಸಮುದ್ರ ದಾಟುವುದನ್ನು ಅಲ್ಲಿನ ಮಾನವರು ಕಲಿತುಕೊಂಡರು. ನಂತರ ಮುಂದೆ ೪೪ ಸಾವಿರ ವರ್ಷಗಳ ನಂತರ 'ಲೆಬನಾನ್' ತಲುಪಿದರು. ಈ ಸಂದರ್ಭದಲ್ಲಿ 'ಹೈವನ್' ಎಂಬ ಸಂಶೋಧಕರ ಮಾತನ್ನು ಮತ್ತೆ ಗಮನಿಸುವುದಾದರೆ "ಲೆಬನಾನ್‌ಗೆ ಬಂದು ತಲುಪಿದ ಮೆಟ್ರೋ ಕಾಂಡ್ರಿಯಲ್ ವಂಶದ ಮಾನವರೇ ಉತ್ತರದ ಕಡೆಯಿಂದ ಭಾರತಕ್ಕೆ ಬಂದರು. ನಂತರ ಮಲಯಾ, ಸುಮಾತ್ರ, ಆಸ್ಟ್ರೇಲಿಯಾ ಮುಂದೆ ಝಕ್ ಪ್ರದೇಶದ ಮುಖಾಂತರ ಸೈಬೀರಿಯಾ, ಜರ್ಮನ್ ಮಾರ್ಗವಾಗಿ ಯುರೋಪಿನ ಕಡೆ ಬಂದರು" ಎಂದು ಹೇಳಿದ್ದಾರೆ. ಇದೆಲ್ಲಾ ನಡೆದದ್ದು ಸುಮಾರು ೩೫ ಸಾವಿರ ವರ್ಷಗಳಷ್ಟು ಪುರಾತನ ಕಾಲದಲ್ಲಿ. ಹಾಗೆಯೇ ಅಮೇರಿಕಾದಲ್ಲಿ ೨೫ ಸಾವಿರ ವರ್ಷಗಳ ಹಿಂದೆ ಮಾನವ ನೆಲೆಸಿರುವ ಕುರಿತು ಸಂಶೋಧನಾ ವರದಿಗಳು ದೊರೆಯುತ್ತವೆ.

ಹಾಗಾಗಿ ಭಾರತದ ಮಟ್ಟಿಗೆ ಮಾನವನ ವಿಕಾಸವನ್ನು ಕುರಿತು ಹೇಳುವುದಾದರೆ ಇಲ್ಲಿನ ಮೂಲನಿವಾಸಿಗಳಲ್ಲಿ, (ಮೆಟ್ರೋ ಕಾಂಡ್ರಿಯಲ್ ಎಂದು ಹೇಳಲಾಗುವ) ನಂತರ ಹುಟ್ಟಿಕೊಂಡ ಜನಾಂಗಗಳಾದ ಫಣಿ, ಸಮಾ, ನಾಯಕ, ಕೋಲಾ, ಮುಂಡಾ, ಜುವಾಂಗ, ಪಾಶುಪತ, ಪುಂಡ, ಖಂಡ, ಮಲೆಯ, ಪುಲಿಯ, ಕಾಡ, ಗರುಡ, ನಾಗ, ಅಂಗದ, ನೀಲ, ಯದು, ತುರ್ವಸು, ಅನೂ, ಬ್ರುಹೂ ಮತ್ತು ಪುರು ಮುಂತಾದವರ ಉಲ್ಲೇಖಗಳು ವೇದ, ರಾಮಾಯಣ, ಮಹಾಭಾರತಗಳಲ್ಲಿ ದೊರೆಯುತ್ತವೆ.

ಇಂತಹ ಕೆಲವು ಜನಾಂಗಗಳ ದೈಹಿಕ ಲಕ್ಷಣಗಳನ್ನು ವಾಲ್ಮೀಕಿ ಬರೆದ ರಾಮಾಯಣದಲ್ಲಿ ಕಾಣಬಹುದಾಗಿದೆ. ಹಾಗಾಗಿ ರಾಮ ಆರು ದವಡೆ ಹಲ್ಲುಗಳನ್ನು ಹೊಂದಿದ್ದರೆ, ಹನುಮ (ಹನುಮ ಎಂದರೆ ದವಡೆ) ಉದ್ದವಾದ ದವಡೆಯನ್ನು ಹೊಂದಿದ್ದನು. (ಮೂಲ ರಾಮಾಯಣ) ಆದ್ದರಿಂದ ವಾಲ್ಮೀಕಿಗೆ ಮಾನವನ ಉಗಮದ ಹಿಂದಿರುವ ರಹಸ್ಯದ ಕಥೆಗಳು ತಿಳಿದಿದ್ದವೆಂದು ತೋರುತ್ತದೆ.[೭] ಆ ರಹಸ್ಯಗಳ ಕಥೆಗಳ ರೂಪವೇ ವಾಲ್ಮೀಕಿ ರಾಮಾಯಣ.

ಹೀಗೆ ಜೀವ ವಿಕಾಸ ಕ್ರಮದಲ್ಲಿ ಮಾನವ (ನರ) ಎಂಬ ಪ್ರಾಣಿ ಉಳಿದೆಲ್ಲಾ ಪ್ರಾಣಿಗಳಿಗಿಂತ ಭಿನ್ನವಾಗಿ ರೂಪುಗೊಳ್ಳತೊಡಗಿದನು. ಇದಕ್ಕೆಲ್ಲಾ ಆತನ ಜೈವಿಕ ಅಂಶಗಳನ್ನು ಆಧಾರವಾಗಿ ತೆಗೆದುಕೊಳ್ಳಬಹುದು. ಈ ಹಿನ್ನೆಲೆಯಲ್ಲಿಯೇ ವಿಕಾಸಗೊಳ್ಳತೊಡಗಿದ ಮಾನವ ಜನಾಂಗವು ಮೊದಮೊದಲು ಈಜಿಪ್ಟ್, ಮೆಸಪಟೋಮಿಯಾ, ಸುಮೇರಿಯಾ, ಬ್ಯಾಬಿಲೋನಿಯಾ, ಮಾಯಾ ಮತ್ತು ಭಾರತದ ಸಿಂಧು ಕಣಿವೆ ಪ್ರದೇಶಗಳಲ್ಲಿ ಕಾಣಿಸಿಕೊಂಡಿತು. ಇಲ್ಲೆಲ್ಲಾ ಈ ಮಾನವ ಗುಂಪಾಗಿ ವಾಸಿಸುವುದು ಪ್ರಾರಂಭವಾಯಿತು. ಇದುವರೆಗೆ ಬೇಟೆಯಾಡುತ್ತಿದ್ದ ಅಲೆಮಾರಿ ಮಾನವ ಗುಂಪು ಜೀವನದೊಂದಿಗೆ ತನ್ನ ಆಹಾರ ಮತ್ತು ಬದುಕಿಗಾಗಿ ಆಯ್ಕೆ ಮಾಡಿಕೊಂಡ ವೃತ್ತಿಯೇ ಪಶುಪಾಲನೆ. ನಾಗರಿಕತೆಯ ಮೆಟ್ಟಿಲನ್ನು ತುಳಿದ ಈ ಪಶುಪಾಲಕರು ಕಾಲಾಂತರದಲ್ಲಿ ಜೀವನದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಕಂಡುಕೊಳ್ಳುತ್ತಾ ಸುಸಂಸ್ಕೃತರಾಗತೊಡಗಿದರು.[೮]

ಈ ಕಾರಣದಿಂದ ಮಾನವನ ವಿಕಾಸದ ಕ್ರಮದಲ್ಲಿ ನಾಲ್ಕು ಅವಸ್ಥೆಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ,[೯]

೧. ಆಹಾರದ ಸಲುವಾಗಿ ಅಲೆದಾಡುವ ಬೇಡರು.

೨. ಪಶುಗಳನ್ನು ಸಾಕುವ ಸಲುವಾಗಿ ಅಲೆದಾಡುವ ಹಾಗೂ ಪಶುಸಂಗೋಪನೆಯಲ್ಲಿ ತೊಡಗಿರುವ ಪಶುಪಾಲಕರು

೩. ವೃಕ್ಷ, ವನಸ್ಪತಿಗಳ ತಿಳುವಳಿಕೆಯಿಂದ ಅವುಗಳನ್ನು ಬೆಳಸುವ, ಆಹಾರ ಉತ್ಪಾದಿಸುವ ಒಕ್ಕಲಿಗ ಕುಟುಂಬಗಳು.

೪. ಒಕ್ಕಲುತನದ ಮೇಲಿನ ವ್ಯಾಪಾರ, ಉದ್ಯೋಗ ಮತ್ತು ರಾಜಕಾರಣದ ಕೆಲಸಗಾರರು.

ಹೀಗೆ ಬೇಡನಾಗಿದ್ದ ಮಾನವ ವಿಕಾಸಗೊಳ್ಳುತ್ತಾ ತನ್ನ ಬದುಕಿಗಾಗಿ ಪಶುಪಾಲನಾ ವೃತ್ತಿಯನ್ನು ಆಯ್ಕೆ ಮಾಡಿಕೊಂಡು, ಸೃಷ್ಟಿವೈಚಿತ್ರ್ಯಗಳನ್ನು ಭಯ ಭಕ್ತಿಯಿಂದ ನಂಬಿ ದೇವರು, ಕುಲ, ಗೋತ್ರ, ಬೆಡಗುಗಳನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದನು. ನಂತರ ವೃತ್ತಿ, ಉಪವೃತ್ತಿಗಳು, ಧರ್ಮ, ಜಾತಿಗಳು, ಸುಸಂಸ್ಕೃತವಾದ ಉಡುಗೆ-ತೊಡುಗೆ, ಆಹಾರ, ರೂಢಿ, ಪದ್ಧತಿ, ಸಾಹಿತ್ಯ, ಕಲೆ, ಆಚರಣೆಗಳನ್ನು ನಾವೀನ್ಯಯುತವಾಗಿ ಪರಿಭಾವಿಸತೊಡಗಿದನು. ಮುಖ್ಯವಾಗಿ ವ್ಯವಸಾಯ ಹಾಗೂ ಇದಕ್ಕೆ ಹೊಂದಿಕೊಂಡಂತೆ ಚಮ್ಮಾರಿಕೆ, ಕಮ್ಮಾರಿಕೆ, ಬಡಗಿ, ಕುಂಬಾರಿಕೆ, ನೇಯ್ಗೆ, ಉಪ್ಪಾರ, ದೋಣಿಗಾರ, ಮೀನುಗಾರ, ಹೈನುಗಾರಿಕೆಯ ವೃತ್ತಿಗಳು, ಹುಟ್ಟಿಕೊಂಡವು. ಜೊತೆಗೆ ವ್ಯಾಪಾರ ಮತ್ತು ಪ್ರಭುತ್ವದ (ರಾಜ ಮನೆತನಗಳ ಆಡಳಿತ) ಬೇರೆ ಬೇರೆ

ರೂಪಗಳು ವಿಕಾಸಗೊಳ್ಳತೊಡಗಿದವು. ಈ ವೃತ್ತಿಗಾರಿಕೆಗಳೇ ಮುಂದೆ ಜಾತಿ ಸಂಕರಗಳಾಗಿ ವಿಕಾಸವಾಗಿದ್ದನ್ನು ಗುರುತಿಸಬಹುದು.

**ಪಶುಪಾಲನೆಯ ಅರ್ಥ:**

ಮಾನವ ತನ್ನ ಪ್ರಾರಂಭಿಕ ಹಂತದಲ್ಲಿ ಆಹಾರಕ್ಕಾಗಿ ಬೇಟೆಯಾಡುತ್ತಾ ಓಡಾಡಿ, ದಣಿಯುತ್ತಿದ್ದಾಗ, ಇದರಿಂದ ತಪ್ಪಿಸಿಕೊಳ್ಳಲು, ಬೇಟಿಯಾಡಿದ ಪ್ರಾಣಿಗಳನ್ನೇ ಸಾಕತೊಡಗಿದನು. ಹೀಗೆ ಸಾಕತೊಡಗಿದ ಪ್ರಾಣಿ-ಪಕ್ಷಿಗಳೊಂದಿಗೆ, ಧ್ವನಿ ಮತ್ತು ಶಬ್ದಗಳ ಅನುಕರಣೆ ಕಂಡುಕೊಂಡು ಸಾಕು ಪ್ರಾಣಿಗಳೊಂದಿಗೆ ವ್ಯವಹರಿಸುವ ಪರಿಣಿತಿ ಹೊಂದಿದನು. ನಂತರ ಧ್ವನಿ ಮಾಧ್ಯಮದಿಂದ ಪ್ರಾಣಿಗಳ ಮೇಲೆ ಸ್ವಾಮಿತ್ವ ಸಾಧಿಸಿ ಬಾಂಧವ್ಯ, ವಿಶ್ವಾಸ ಬೆಳೆಸಿಕೊಂಡು ಮುಂದೆ ಪಶುಪಾಲನೆಗೆ ದಾರಿಮಾಡಿಕೊಂಡನು. ಕಾಲಾನಂತರ ಈ ಪ್ರಕ್ರಿಯೆಯೇ ಪಶುಪಾಲನೆಗೆ ನಾಂದಿಯಾಯಿತು. ಜೊತೆಗೆ ಹುಲ್ಲುಗಾವಲಿನಲ್ಲಿ ಬದುಕಬಹುದಾದಂತಹ ಮತ್ತು ಮನುಷ್ಯನ ಅಧೀನಕ್ಕೆ ಸುಲಭವಾಗಿ ಒಳಪಡಬಹುದಾದಂತಹ ಕುರಿ, ಆಡು, ಹಸು, ಎಮ್ಮೆ, ಕೋಳಿ, ಬೆಕ್ಕು, ಕುದುರೆ, ಪ್ರಾಣಿಗಳನ್ನು ಮೊದಲು ಪಶುಪಾಲನೆಗೆ ಬಳಸಿಕೊಂಡನು.[೨] ಶಂ.ಬಾ.ಜೋಶಿ ಅವರು ಪಶುಪಾಲಕರ ಜೀವನಕ್ರಮ, ವಾಸದ ಸ್ಥಳ, ಭಾಷಿಕ ಹಿನ್ನೆಲೆಗೂ ಪರಸ್ಪರ ಸಂಬಂಧವನ್ನು ಗುರುತಿಸಬಹುದು ಎಂದಿದ್ದಾರೆ. ಹಟ್ಟಿ, ವಾಟಿಕಾ ಪದಗಳು ಈ ಕಾರಣದಿಂದಲೇ ಹುಟ್ಟಿಕೊಂಡಂತಹವು.

ಪ್ರೊ. ಥಾಮ್ಸನ್ ಅವರು, ಪಶುಪಾಲನೆಯನ್ನು ಆರ್ಥಿಕ ಬೆಳವಣಿಗೆಯ ವ್ಯಾಪ್ತಿಯಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾರೆ. ಮಾನವನ ವಿಕಾಸ ಮೊದಲು ಬೇಟೆಗಾರಿಕೆ, ಬೇಟೆ ಮತ್ತು ಆಹಾರ ಸಂಗ್ರಹಣೆಯ ಉದ್ದೇಶವನ್ನು ಮಾತ್ರ ಹೊಂದಿದ್ದು ಇದು ಬೇಟೆಗಾರಿಕೆಯ 'ಕೆಳಹಂತ'ವೆಂದು ಗುರುತಿಸಿಕೊಂಡಿತು. ಮುಂದಿನ ಶತಮಾನಗಳಲ್ಲಿ ಕಂಡು ಬಂದ ಬೇಟೆ ಜೊತೆಗಿನ ಮೀನುಗಾರಿಕೆ ಬೇಟೆಗಾರಿಕೆಯ 'ಮೇಲಿನಹಂತ'ವಾಗಿ ಕಂಡುಬಂದು, ಇಲ್ಲಿ ಕೃಷಿಯೂ ಸೇರ್ಪಡೆಯಾಯಿತು. ಮೂರನೆಯ ಹಂತದಲ್ಲಿ ಕೃಷಿಯಲ್ಲಿ 'ನೇಗಿಲ' ಆವಿಷ್ಕಾರವಾಗಿ ಇದರೊಂದಿಗೆ ಪಶುಸಂಗೋಪನೆ ಪೂರಕವಾಗಿ ಬೆಳೆಯತೊಡಗಿತು. ಈ ಹಂತದಲ್ಲಿ ಕರಕುಶಲ ವಸ್ತುಗಳ ತಯಾರಿಕೆಯೂ ಆರಂಭವಾಗುತ್ತದೆ.

ಹಾಗಾಗಿ ಇಲ್ಲಿ ಕಂಡುಬರುವ ನೇಕಾರ, ಚಮ್ಮಾರ, ಬಡಗಿ, ಶಿಲ್ಪಿ, ಅಂಬಿಗ, ಮಾವಟಿಗ, ವ್ಯಾಪಾರಿ, ಶೆಟ್ಟಿ, ಕುಂಬಾರ, ಕಮ್ಮಾರ, ಮುಂತಾದ ಜಾತಿ ಆಧಾರಿತ ವೃತ್ತಿನಿರತರು, ಕೃಷಿ ಮತ್ತು ಪಶುಪಾಲನೆಯನ್ನೇ ಮೂಲದಲ್ಲಿ ನಂಬಿಕೊಂಡರು. ಆದ್ದರಿಂದ ಹುಲ್ಲುಗಾವಲುಗಳು ಇರುವ ಕಡೆ ದನ, ಕುರಿಗಳು ತಮ್ಮ ಪಾಡಿಗೆ ತಾವೇ ಮೇಯ್ದುಕೊಂಡು ಕರುಗಳನ್ನು ಹಾಕುವ ಹಾಗೂ ಇವುಗಳನ್ನು ಪಾಲನೆ

ಮಾಡುವ ಪ್ರಕ್ರಿಯೆಗೆ ಪಶುಪಾಲನೆ ಎಂದೂ ಕರೆಯಲಾಯಿತು. ಈ ಪಶುಪಾಲನೆಯನ್ನು ಮೊದಲು ಅಲೆಮಾರಿ ಮಾನವ ಜನಾಂಗದವರು ಪಾಲಿಸಿಕೊಂಡು ಬಂದರು. ಇದೇ ಮಾನವ ಒಂದು ಕಡೆ ನೆಲೆ ನಿಂತಾಗ ನದೀಬಯಲು ಹಾಗೂ ಹುಲ್ಲುಗಾವಲು ಪ್ರದೇಶಗಳಲ್ಲಿ ವಸತಿಗಳನ್ನು ನಿರ್ಮಿಸಿಕೊಳ್ಳತೊಡಗಿದನು. ಈ ವಸತಿ ಪ್ರದೇಶಗಳನ್ನೇ ಹಟ್ಟಿಗಳೆಂದು ಕರೆಯಲಾಯಿತು.[೨] ಹೀಗೆ ವಾಸಿಸುತ್ತಿದ್ದ ಹಟ್ಟಿ ಪ್ರದೇಶದ ಬಂಡೆಗಲ್ಲುಗಳ ಮೇಲೆ ಮಾನವ ಪ್ರಾಣಿ ಚಿತ್ರಗಳನ್ನು ಕೆತ್ತುತ್ತಿದ್ದನು.* ಹಟ್ಟಿಯಲ್ಲಿ ವಾಸಿಸುವರನ್ನು ಹಟ್ಟಿಕಾರ, ದನಗಾರ ಎಂದು ಕರೆಯಲಾಯಿತು. ದನಕರುಗಳನ್ನು ಸಾಕುತ್ತಿದ್ದ ಇವರು ಪಶುಪಾಲಕರೆನಿಸಿಕೊಂಡರು. ಈ ಪಶುಪಾಲಕರ ಮುಂದಿನ ಹೆಜ್ಜೆಯೇ  ಒಕ್ಕಲುತನ, ಎಂದು 'ಶಂ.ಬಾ.ಜೋಶಿ' ಅವರು ಅಭಿಪ್ರಾಯ ಪಡುತ್ತಾರೆ.

ಪಶುಪಾಲಕರು ಪ್ರಕೃತಿ ಆರಾಧಕರಾಗಿದ್ದು, ಇಲ್ಲಿ ಕಂಡು ಬರುವ ನೆಲ, ಮುಗಿಲು, ಮಳೆ, ಬೆಳೆ, ಮರ, ಹುತ್ತ, ಕುರಿ, ಮೇಕೆ, ಹಸುಕರುಗಳನ್ನು ಪೂಜಿಸುವುದು, ಎತ್ತುಗಳ ಮೆರವಣಿಗೆ, ಹಿರಿಯರ ಪೂಜೆ, ಹುಲುಸಾಗಿ ಬೆಳೆದ ಹೊಲಗದ್ದೆಗಳ ಪೂಜೆಯನ್ನು; ಮನಸ್ಸಿಗೆ ಹರ್ಷವನ್ನುಂಟು ಮಾಡುವ ನೆಪದಲ್ಲಿ ಪೂಜಿಸತೊಡಗಿದರು. ಇದನ್ನು 'ಹಟ್ಟಿಹಬ್ಬ'ವೆಂದು ಕರೆಯಲಾಯಿತು. ಈ ಆಚರಣೆಗಳೆಲ್ಲಾ ದನಗಳ ರಕ್ಷಣೆ ಮತ್ತು ಸಂವರ್ಧನೆಗೆ ಹುಟ್ಟಿಕೊಂಡ ಆರಾಧನೆಗಳಾಗಿದ್ದವು. ಇಂತಹ ಹಟ್ಟಿ ಸ್ವರೂಪಗಳ ಬಗ್ಗೆ ಹೇರಳವಾಗಿ ಪುರಾಣ, ಐತಿಹ್ಯ ಹಾಗೂ ಮೌಖಿಕ ಕಾವ್ಯಗಳಲ್ಲಿ ಕಾಣಬಹುದಾಗಿದೆ. ಹಾಲುಮತ ಪುರಾಣ, ಜುಂಜಪ್ಪನ ಕಾವ್ಯಗಳು ಹಟ್ಟಿಯ ಮೂಲ ಮತ್ತು ಉಗಮದ ವಿವರಗಳನ್ನು ತಿಳಿಸುತ್ತವೆ.

ಕಡೆಯದಾಗಿ ಶಂ.ಬಾ.ಜೋಶಿ ಅವರ ಪ್ರಕಾರ "ಮಾನವ ಮೊದಲಿನ ಅವಸ್ಥೆಯಾದ ಆಹಾರಕ್ಕಾಗಿ ಅಲೆಯುವ ಬೇಟೆ ಸಂಸ್ಕೃತಿಯ ಕಾಲಘಟ್ಟದಿಂದ, ಅವನು ಒಂದು ಕಡೆ ನೆಲೆಸಿ ಕುರಿ, ಆಡು, ಹಸು ಮೊದಲಾದ ಪ್ರಾಣಿಗಳನ್ನು ಸಾಕಿದನು. ಈ ಅವಸ್ಥೆಯಿಂದಲೇ ಪಶುಪಾಲನಾ ಜನಾಂಗದ ಇತಿಹಾಸ ಆರಂಭವಾಯಿತು. ಆದ್ದರಿಂದ ಮಾನವನ ನಾಗರಿಕತೆಯ ಮೂಲ ಪುರುಷರೆಂದರೆ ಈ ಪಶುಪಾಲಕರೇ ಎನ್ನಬಹುದು."[೨೩] ಒಟ್ಟಾರೆ ತಮಿಳು ಕೃತಿ 'ಶಿಲಪ್ಪದಿಕಾರಂ'ನಲ್ಲಿನ ಉಲ್ಲೇಖ, ಐತರೇಯ ಬ್ರಾಹಣದಲ್ಲಿನ ಉಲ್ಲೇಖ, ಶಂ.ಬಾ.ಜೋಶಿ ಅವರ ವಿವರಣೆ, ಪಾಶ್ಚಾತ್ಯ ವಿದ್ವಾಂಸರ

---

* ಇಂತಹ ರೇಖಾ ಚಿತ್ರಗಳನ್ನು ಹಂಪಿ ಪರಿಸರದಲ್ಲಿ ಈಗಲೂ ನೋಡಬಹುದಾಗಿದೆ.

ಅಭಿಪ್ರಾಯ; ಇವೆಲ್ಲವನ್ನು ಅವಲೋಕಿಸಿದಾಗ, ಪಶುಪಾಲನೆಯ ಅರ್ಥವನ್ನು ಆಧುನಿಕ ಪಶುಪಾಲನಾ ತಜ್ಞರು ಈ ಮುಂದಿನಂತೆ ಅರ್ಥೈಸಿ ಕ್ರೋಢೀಕರಿಸಿದ್ದಾರೆ.

ಸಾಕು ಪ್ರಾಣಿಗಳ ಪಾಲನೆಗೆ ಹಾಗೂ ಉತ್ಪಾದನೆಗೆ ಸಂಬಂಧಿಸಿದ ಒಕ್ಕಲುತನದ ಭಾಗವೇ ಪಶುಸಂಗೋಪನೆ. ಈ ಒಕ್ಕಲುತನವು ಹಾಲು, ಮಾಂಸ, ಮೊಟ್ಟೆ ಇತ್ಯಾದಿಗಳಿಗಾಗಿ ಪ್ರಾಣಿಗಳ ಪೋಷಣೆ ಮಾಡುತ್ತದೆ. ಇದರಿಂದ ಪಶುಸಂಗೋಪನೆಯು ಜೀವನಾಧಾರದ ವೃತ್ತಿಯಾಗಿ ಮುಂದೆ ಮಾನವ, ಒಂದು ಕಡೆ ನೆಲೆ ನಿಲ್ಲಲು ಕಾರಣವಾಗುತ್ತದೆ. ಹಾಗಾಗಿ ಇದು ಆತನ ಆರ್ಥಿಕ ಪರಿವರ್ತನೆಯ ಮೇಲೂ ಪ್ರಭಾವ ಬೀರಿ ಜೀವನ ಕ್ರಮ ಮತ್ತು ಜೀವನ ದೃಷ್ಟಿಗಳು, ವಿಕಾಸವಾಗಿ ಸಾಂಸ್ಕೃತಿಕ ಪರಂಪರೆಯೊಂದು ಬೆಳೆಯತೊಡಗುತ್ತದೆ ಎಂದು ಪಶುಪಾಲನೆಯ ಅರ್ಥವನ್ನು ವಿಶ್ಲೇಷಿಸಲಾಗಿದೆ. ಹೀಗೆ ಪ್ರಾಣಿಗಳ ಪಾಲನೆಯನ್ನೇ ವೃತ್ತಿಯನ್ನಾಗಿ ಮುಂದುವರೆಸಿದ ಪಶುಪಾಲಕರೇ, ಮಾನವ ಜನಾಂಗದ ಪ್ರಮುಖರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

**ಪಶುಪಾಲನೆಯ ಸ್ವರೂಪ:**

ಆದಿ ಮಾನವನ ಕಾಲಘಟ್ಟವನ್ನು 'ಹೀಗೆ' ಎಂದು ನಿರ್ಧರಿಸಲು ಅನೇಕ ತೊಡಕುಗಳಿವೆ. ನಮ್ಮ ಭೂಮಿ ಉಗಮವಾದ ನಂತರ ಉಂಟಾಗುತ್ತಿದ್ದಂತಹ ಮಹಾ ಪ್ರಳಯಗಳು ಕಾಯಿಲೆ, ಹಾಗೂ ವನ್ಯ ಪ್ರಾಣಿಗಳಿಂದ ಆದಿಮಾನವನ ಮೇಲೆ ಅನೇಕ ಬಾರಿ ಅಪಾಯಗಳುಂಟಾಗಿ ಆತನ ಜೀವ ವಿಕಾಸದಲ್ಲಿ ವ್ಯತ್ಯಯಗಳು ಉಂಟಾಗಿರಬಹುದು.* ಆದರೆ ಇವನು ಪ್ರಾರಂಭದಲ್ಲಿ ಅಲೆಮಾರಿಯಾಗಿದ್ದು ಹೊಟ್ಟೆಪಾಡಿಗಾಗಿ ಗೆಡ್ಡೆಗೆಣಸು, ಪ್ರಾಣಿಬೇಟೆಯನ್ನು ಅವಲಂಬಿಸಿದ್ದಂತೂ ಸತ್ಯ. ಕಾಲ ಉರುಳಿದಂತೆ ಪಶುಪಾಲನೆಯನ್ನು, ನಂತರ ಬೇಸಾಯವನ್ನೂ ಹಾಗೂ ಗೃಹ ಕೈಗಾರಿಕೆಗಳನ್ನು ಕಲಿತು ತಮಗೆ ಯುಕ್ತವೆನಿಸಿದ ಪ್ರದೇಶಗಳಲ್ಲಿ ನೆಲೆಸಿದರು. ಈ ಸಂದರ್ಭದಲ್ಲಿ ಪರದೇಶಗಳಿಂದ ಬಂದ ಜನ ಸ್ಥಳೀಯ ಆದಿವಾಸಿಗಳೊಂದಿಗೆ ಹೋರಾಟ ನಡೆಸಿ, ಇವರಲ್ಲಿ ಯಾರು ಬಲಾಢ್ಯರಿದ್ದರೋ ಅವರು ಆ ಸ್ಥಳದಲ್ಲಿ ಉಳಿದರು. ಸೋತ ಮಂದಿ ನಾಡಿನ ಬೇರೆ ಬೇರೆ ಕಡೆಗೆ ಹೋಗಿ ನೆಲೆಸಿದರು.[೯೩]

ಪಶುಪಾಲಕರಿಗೆ ಪಕೃತಿಯೇ ಮೊದಲ ಗುರುವಾಯಿತು. ಬೇಟೆಗಾರಿಕೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಇವರಲ್ಲಿ ಅನೇಕರು ಪಶುಪಾಲಕರಾಗುತ್ತಾರೆ.

---

* ಬೈಬಲ್,ಖುರಾನ್, ರಾಮಾಯಣ, ಮಹಾಭಾರತ, ವೇದಗಳು ಮತ್ತು ಉಪನಿಷತ್ತುಗಳಲ್ಲಿಯೂ ಈ ಉಲ್ಲೇಖವಿದೆ.

ಪಶುಪಾಲಕರಾದವರಲ್ಲಿ ಕೆಲವರು ಒಂದುಕಡೆ ನಿಂತು ನೆಮ್ಮದಿಯ ಬದುಕನ್ನು ಕಟ್ಟಿಕೊಂಡರೆ, ಮತ್ತೆ ಕೆಲವರು ಅಲೆಮಾರಿ ಪಶುಪಾಲಕರಾದರು. ಇಂದಿಗೂ ಈ ತರಹದ ಅಲೆಮಾರಿ ಪಶುಪಾಲಕರು ನದಿ ಹಾಗೂ ಜಲಾನಯನ ಪ್ರದೇಶಗಳಲ್ಲಿ ಕಾಣಸಿಗುವರು. ಇಂತಹ ಪಶುಪಾಲಕರನ್ನೆಲ್ಲಾ ಶಂ.ಬಾ. ಅವರು ಹಟ್ಟಿಕಾರರು, ಕುರುಬರು ಎಂದು ಸಂಬೋಧಿಸುತ್ತಾರೆ.

ಹಾಗೆಯೇ ಪಶುಪಾಲನೆಯನ್ನು ಮಾನವನ ಆಹಾರ ಉತ್ಪಾದನೆಯ ಹಂತ ಎಂದೂ 'ಶಂ.ಬಾ' ಅವರು ದಾಖಲಿಸುತ್ತಾರೆ. ಮಾನವನಿಗೆ ಆಹಾರ ಉತ್ಪಾದನೆ ತಿಳಿಯದೆ ಇರುವ ಸಮಯದಲ್ಲಿ ಪ್ರಾಣಿಗಳ ಮಧ್ಯದಲ್ಲಿ ಪ್ರಾಣಿಗಳಂತೆಯೇ ಬದುಕುತ್ತಿದ್ದ. ಇದರಿಂದ ಅವುಗಳ ಮಾಂಸವನ್ನೇ ಆಹಾರವಾಗಿ ಬಳಸುತ್ತಿದ್ದ. ಆದರೆ ಇದು ಒಂದು ವೃತ್ತಿಯಾಗಿ ಅಥವಾ ಸಂಸ್ಕೃತಿಯಾಗಿ ಇತಿಹಾಸದಲ್ಲಿ ದಾಖಲಾಗಲೇ ಇಲ್ಲ. ಆದ್ದರಿಂದ ಆಹಾರ ಉತ್ಪಾದನೆಗೆ ಒಂದರ್ಥ ಬಂದದ್ದು ಪ್ರಾಣಿಸಾಕಾಣಿಕೆಯಿಂದ. ಈ ಪ್ರಾಣಿಸಾಕಾಣಿಕೆ ಮಾಂಸಕ್ಕಾಗಿ ಪ್ರಾರಂಭವಾದರೂ ಕಾಲಗತಿಸಿದಂತೆ, ಪಶುಗಳ ಹಾಲು, ಆ ಹಾಲಿನಿಂದ ಉತ್ಪಾದಿಸಲ್ಪಡುವ ಇನ್ನಿತರ ಉತ್ಪನ್ನಗಳು ಮಾನವನ ಆಹಾರ ಉತ್ಪಾದನೆಯ ಮಾರ್ಗವನ್ನು ಸುಗಮಗೊಳಿಸುತ್ತಲೇ ಸಂಸ್ಕೃತಿಯ ರೂಪವನ್ನು ಪಡೆದುಕೊಂಡಿತು. ಇದರ ಪರಿಣಾಮದಿಂದ ಬೇಟೆ ಒಂದು ಪ್ರಾಸಂಗಿಕ ಕ್ರಿಯೆಯಾಗಿ ಉಳಿಯಿತು. ನಂತರ ಅದು ಹವ್ಯಾಸವಾಗಿಯೂ ಪರಿವರ್ತನೆಗೊಂಡಿತು.* ನಂತರ ಪಶುಪಾಲನಾ ಸಂಸ್ಕೃತಿಯು ಆದಿಮಾನವನ ಪ್ರಥಮ ಸಂಸ್ಕೃತಿಯ ಮೆಟ್ಟಿಲಾಗಿ ಉಳಿದುಕೊಂಡಿತು. ಈ ಸಂಸ್ಕೃತಿಯಿಂದ ಮಾನವ ಸಮಾಜ ಜೀವಿಯಾಗಿ, ಪರಂಪರೆಯನ್ನು ರೂಢಿಸಿಕೊಂಡು ತಮ್ಮತಮ್ಮಲ್ಲೇ ವಿನಿಮಯ, ಹಂಚುವಿಕೆ, ಗೌರವ ಕ್ರಿಯೆಗಳು, ಅಲೋಚನೆಗಳ ಜೊತೆಗೆ ಮೌಲ್ಯಗಳು ಹಾಗೂ ನಿರ್ಮಾಣ ಪ್ರಕ್ರಿಯೆಗಳನ್ನು ಬೆಳಸಿಕೊಳ್ಳತೊಡಗಿದನು.* ಪಶುಪಾಲನಾ ಅವಸ್ಥೆಗೆ ಬಂದ ಮಾನವನು ಕಾಲಕ್ರಮೇಣ ಅನುಕಂಪ, ಧಾರುಣತೆ, ಪ್ರೀತಿ–ಪ್ರೇಮಗಳನ್ನು ತನ್ನ ಮನಸ್ಸಿನಲ್ಲಿ ರೂಢಿಸಿಕೊಳ್ಳಲಾಗಿ ಆತನಿಗೆ 'ಮಾನವ' ಎಂಬ ಅಭಿದಾನವನ್ನು ನಮ್ಮ ಮಾನವಶಾಸ್ತ್ರಜ್ಞರು ನೀಡಿದರು.

ಅಪಾರವಾದ ಕಾರ್ಯತತ್ಪರತೆಯುಳ್ಳ ಈ ಪಶುಪಾಲಕರಲ್ಲಿ ಪುರುಷ ಪ್ರಧಾನ ಕುಟುಂಬಗಳು ನಂತರದ ದಿನಮಾನಗಳಲ್ಲಿ ಕಾಣಿಸಿಕೊಳ್ಳತೊಡಗಿದವು. ಹೆಣ್ಣಿನ ಪಾತಿವ್ರತ್ಯದ ಬಗ್ಗೆ ಗೌರವ, ನಾಯಕತ್ವ, ಕುಟುಂಬ ಪ್ರೀತಿಗಳು ಪಶುಪಾಲಕರ

---

* ಇಂದಿಗೂ ವಿಶೇಷ ಹಬ್ಬ, ಹರಿದಿನ, ಜಾತ್ರೆಗಳ ಸಂದರ್ಭಗಳಲ್ಲಿ ಗ್ರಾಮದ ಜನರು ಬೇಟೆಯಾಡಲು ಹೋಗುವುದನ್ನು ಕಾಣಬಹುದು.

ಗುಣಗಳಾಗಿ ಬೆಳೆಯ ತೊಡಗಿದವು. ಜೊತೆಗೆ ಗುಂಪುಗಾರಿಕೆ, ಉಪಾಯದ ಗುಣಗಳು, ಆಳುವ ವರ್ಗಗಳನ್ನು ಬೇಕೆನಿಸಿದಾಗ ಕಾಪಿಡುವ, ಇಲ್ಲವಾದಲ್ಲಿ ಪ್ರತಿರೋಧಿಸುವ ಗುಣಗಳನ್ನು ಪಶುಪಾಲಕರು ರೂಢಿಸಿಕೊಳ್ಳತೊಡಗಿದರು. ಇಂತಹ ಪಶುಪಾಲನಾ ಸಂಸ್ಕೃತಿಯ ಅರಿವಿದ್ದ ಕನಕದಾಸರು ಸಹಜವಾಗಿಯೇ ನಳದಮಯಂತಿ, ರಾಮಧಾನ್ಯಚರಿತೆ, ಮೋಹನತರಂಗಿಣಿ ಮತ್ತು ಕೀರ್ತನೆಗಳಲ್ಲಿ ಪಶುಪಾಲನಾ ಸ್ವರೂಪದ ಕುರುಹುಗಳನ್ನು ಇಲ್ಲಿನ ಪಾತ್ರ ಮತ್ತು ಸನ್ನಿವೇಶದ ಚಿತ್ರಣಗಳ ಮೂಲಕ ತರುತ್ತಾರೆ. ಈ ಕುರಿತ ವಿಚಾರವನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

ಮುಂದೆ ಬೇಟೆಗಾರಿಕೆಯಿಂದ ಕವಲೊಡೆದು ಪಶುಪಾಲಕರಾಗಿ ಬದುಕು ರೂಪಿಸಿಕೊಂಡ ಇವರನ್ನು ಕುರಿಗಾರರು, ಕುರುಬರು, ಅಥವಾ ಸಮಾಜದ ಪ್ರಥಮ ನಾಗರಿಕರು ಎಂದು ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. ಇವರು ಮೊದಮೊದಲು ತಮ್ಮ ಸುತ್ತಲ ಹಳ್ಳಕೊಳ್ಳ, ಸಾಧಾರಣ ಹುಲ್ಲುಗಾವಲುಗಳಲ್ಲಿ ಬದುಕಬಹುದಾದ ಮತ್ತು ತಮ್ಮ ಅಧೀನಕ್ಕೆ ಸುಲಭವಾಗಿ ಒಳಪಡಬಹುದಾದಂತಹ ಆಡು ಹಾಗೂ ಸೌಮ್ಯ ಪ್ರಾಣಿಗಳನ್ನೇ ಪಾಲನೆಗೆ ಬಳಸಿಕೊಂಡರು. ಇಂತಹ ಬದುಕಿನ ಲಕ್ಷಣಗಳನ್ನು ಈ ನೆಲದ ಜನಪದ ಕಾವ್ಯಗಳಲ್ಲಿ ನಾವು ಕಾಣಬಹುದು. ಜುಂಜಪ್ಪ, ಬೀರಪ್ಪ, ಮಾದಪ್ಪ ಇವರೆಲ್ಲಾ ಪಶುಪಾಲಕರೇ ಎಂಬುದನ್ನು ಮುಂದೆ ಚರ್ಚಿಸಲಾಗಿದೆ.*

ನಂತರ, ಇದೇ ಪಶುಪಾಲಕರು ಹಾಲಿನಿಂದ ನಾನಾ ವಿಧದ ಅನುಕೂಲತೆಗಳನ್ನು ಮನಗಂಡು ಮಾಂಸಕ್ಕಿಂತಲೂ ಹಾಲು ಸಾವಿರ ಪಟ್ಟು ಉತ್ತಮ ಎಂಬ ಅಂಶವನ್ನು ಅನುಭವದಿಂದ ಕಂಡುಕೊಳ್ಳುತ್ತಲೇ ಹಾಲಿನ ಜನಕರಾದರು. ಹಾಲುಮತಸ್ತರಾದರು. ಹಾಲಿನ ಉತ್ಪನ್ನಗಳಾದ ಮೊಸರು, ಕೆನೆ, ಬೆಣ್ಣೆ, ತುಪ್ಪ, ಗಿಣ್ಣ, ಮಜ್ಜಿಗೆ ಮುಂತಾದ ಹೈನು ಪದಾರ್ಥಗಳ ಆವಿಷ್ಕಾರದ ಮೂಲ ಈ ಪಶುಪಾಲಕರೇ. ಆದ್ದರಿಂದ ಹೈನುಗಾರ ವೃತ್ತಿಯ ಜನಕರು ಮತ್ತು ಹಾಲುಮತ ಸ್ಥಾಪಕರು ಕೂಡ ಪಶುಪಾಲಕರೇ ಆಗಿದ್ದಾರೆ.[೧೦] ಇದೇ ಸಂದರ್ಭದಲ್ಲಿ ಭಾರತಕ್ಕೆ ಆರ್ಯರು ವಲಸೆ ಬಂದದ್ದು ಕುರಿಗಾರರಾಗಿಯೇ. ನಂತರ ಬಂದ ಆರ್ಯರ ಎರಡನೆಯ ತಂಡದಲ್ಲಿ ದನಗಳಿದ್ದವು. ಇವರು ಭಾರತಕ್ಕೆ ಹೀಗೆ ವಲಸೆ ಬರಲು ಮುಖ್ಯ ಕಾರಣ, ಕುರಿ, ಆಡು, ದನಗಳ ಪಾಲನೆಗೆ ಬೇಕಾಗಿರುವ ಸಮೃದ್ಧ ನೀರು ಮತ್ತು ಮೇವಿಗಾಗಿ. ಹೀಗೆ ಬಂದ

---

* ಈ ವಿಚಾರವನ್ನು ಕುರಿತು ಖ್ಯಾತ ಮಾನವ ಶಾಸ್ತ್ರಜ್ಞ ಹೀಗೆ ಹೇಳುತ್ತಾನೆ "culture or civilization is that complex whole which includes knowledge, belief, arn, morals, low custom and any other capabilities and habits acquired by man as a member of the society."

ಆರ್ಯರ ದನಗಾರಿಕೆಯಿಂದ, ಸಿಂಧೂ ಪ್ರಾಂತ್ಯದ ಮೂಲ ಭಾರತೀಯರ ಪ್ರಾದೇಶಿಕ ಬದುಕು ಹಾಗೂ ಪಶುಪಾಲನಾ ಭೇದದ ನಡುವೆ ವ್ಯತ್ಯಾಸ ಉಂಟಾಗಿ ಇವರಲ್ಲಿ ಆಗಾಗ ಕಲಹಗಳು ನಡೆಯುತ್ತಿದ್ದವು. ಇದನ್ನೇ ಋಗ್ವೇದದ ಖಂಡ ೯, ಅಧ್ಯಾಯ ೯೩ , ಶ್ಲೋಕ ೫ ರಲ್ಲಿ ಯುದ್ಧ ಎಂಬಂತೆ ಬಣ್ಣಿಸಲಾಗಿದೆ. ಇಲ್ಲಿನ ಶ್ಲೋಕ ಒಂದರಲ್ಲಿ ವಿಶ್ವದಲ್ಲಿನ ಎಲ್ಲರಲ್ಲೂ ಆರ್ಯರನ್ನಾಗಿ ಮಾಡು ಎನ್ನುವ ಪ್ರಾರ್ಥನೆಯೂ ಇದೆ. ಇದೆಲ್ಲದರ ನಡುವೆಯೂ ಹೈನುಗಾರಿಕೆ, ಮಾಂಸ, ಚರ್ಮದ ಉತ್ಪತ್ತಿ, ಕೃಷಿ ಕಾರ್ಯಗಳಿಗೆ ಸಂಬಂಧಿಸಿದ ದನಗಳ ಬಳಕೆಯು, ಭಾರತೀಯ ಮೂಲನಿವಾಸಿಗಳ ಕುರಿ ಆಡುಗಳಿಗಿಂತ ಮೇಲುಗೈ ಸಾಧಿಸಿದವು. ಹಾಗಾಗಿ ಆರ್ಯರು, ದ್ರಾವಿಡರಿಗಿಂತ ಬಹು ಬೇಗನೆ ಆರ್ಥಿಕವಾಗಿ ಬಲಿಷ್ಠರಾದರು. ವಲಸೆ ಬಂದ ಆರ್ಯರಿಗೆ ತಾಂತ್ರಿಕವಾಗಿ ಭಾರತೀಯ ಮೂಲನಿವಾಸಿಗಳು ಸೋತರೂ ಇಲ್ಲಿನವರೊಂದಿಗೆ ಬಹಳಷ್ಟು ಕಾಲ ವೈರತ್ವವನ್ನು ಮುಂದುವರಿಸಿಕೊಂಡು ಹೋಗಲಿಲ್ಲ. ಕಾಲ ಗತಿಸಿದಂತೆ ಪರಸ್ಪರರು ಹೊಂದಾಣಿಕೆಯಿಂದ ದನ ಕುರಿಗಳನ್ನು ಒಟ್ಟಾಗಿ ಸಾಕತೊಡಗಿದರು. ಪರಸ್ಪರ ವೈವಾಹಿಕ ಸಂಬಂಧಗಳು ಏರ್ಪಟ್ಟವು. ಹಾಗಾಗಿ ದನ+ಕುರಿ=ದನಗುರಿ=ದನಗರ, ದನಗಾರ ಎಂಬ ರೂಪಗಳು ಕೂಡಿಕೊಂಡವು. ಹೀಗೆ ಕೂಡಿಕೊಂಡ ಮಾತೃ ಪ್ರಧಾನ ಕುಟುಂಬದ ದ್ರಾವಿಡರು ಆರ್ಯರ ಪಿತೃ ಪ್ರಧಾನ ಕುಟುಂಬವನ್ನು ಒಪ್ಪಿಕೊಂಡರು.

**ಪಶುಪಾಲನೆಯ ವಿಕಾಸ:**

ಜಗತ್ತಿನಲ್ಲಿ ಆದಿಮಾನವನ ಕಾಲವನ್ನು ನಿರ್ಧರಿಸಲು ಅನೇಕ ತೊಡಕುಗಳಿವೆ. ಇದರ ನಡುವೆಯೇ ಭರತವರ್ಷ, ಭರತನಾಡು, ಜಂಬೂದ್ವೀಪ (ಆನೆಗಳ ನಾಡು) ಎಂದು ಕರೆಯುವ ಭಾರತ ದೇಶಕ್ಕೆ ಆಧುನಿಕ ಮಾನವ ಪಾದಾರ್ಪಣೆ ಮಾಡಿದ್ದು ೫೦ ಸಾವಿರ ವರ್ಷಗಳ ಪೂರ್ವದಲ್ಲಿ. ಹೀಗೆ ವಲಸೆ ಬಂದ ಮಾನವ ಪಶುಪಾಲಕನೇ ಅಥವಾ ಕಾಡುಮಾನವನೇ ಎಂದು ಖಚಿತವಾಗಿ ಹೇಳಲಿಕ್ಕಾಗದು.[೧೧] 'ಮೇಕೆ ಇಲ್ಲವೆ ಆಡು' (The bezor-copra Hircus Aeyagrus) ಜಗತ್ತಿನಲ್ಲಿಯೇ ಮೊಟ್ಟ ಮೊದಲ ಸಾಕುಪ್ರಾಣಿ. ಈ ಮೇಕೆಯನ್ನು ಕ್ರಿ.ಪೂ.೮೦೦೦ ವರ್ಷಗಳಷ್ಟು ಹಿಂದೆಯೇ ಸಿಂಧೂ ತೀರದಿಂದ ಕಾವೇರಿ ತೀರದವರೆಗಿನ ಪ್ರದೇಶದಲ್ಲಿ ಸಾಕಲಾಗುತ್ತಿತ್ತು.[೧೨] ಇತ್ತೀಚಿನ ಸಂಶೋಧನೆಯೊಂದರಲ್ಲಿ ೧೦ ಸಾವಿರ ವರ್ಷಕ್ಕಿಂತಲೂ ಪ್ರಾಚೀನದ್ದಾಗಿರುವ ಕುರಿಯ ಶಿಲಾಚಿತ್ರ ದೊರೆತಿದೆ. ಇದು ಈಗಿನ ರಶಿಯಾ ದೇಶದ 'ಅಜರಬೈಜಾನ' ದೇಶದ ರಾಜಧಾನಿ 'ಬಾಕು'ಗೆ ಸಮೀಪದಲ್ಲಿದೆ. ಜೊತೆಗೆ ಪುರಾತನ, ಜನವಸತಿ, ಇದ್ದ ಕುರುಹುಗಳು ಇಲ್ಲಿ ದೊರೆತಿವೆ.

ಜೊತೆಗೆ ಕುರಿ ಮತ್ತು ಹಡಗಿನ ಚಿತ್ರಗಳು ಇಲ್ಲಿ ದೊರೆತಿರುವುದರಿಂದ ಮಾನವ

ನೌಕಾಯಾನದ ಮೂಲಕ ಕುರಿ ಸಾಕಾಣಿಕೆ ಮತ್ತು ಸಾಗಾಣಿಕೆಯನ್ನು ರೂಪಿಸಿಕೊಂಡಿದ್ದನೆಂದು ಊಹಿಸಬಹುದಾಗಿದೆ.[೧೩] ಇತ್ತೀಚಿನ ಕೆಲವು ಸಂಶೋಧನೆಗಳು ನವಶಿಲಾಯುಗದಲ್ಲಿನ ಕೆಲವು ಬುಡಕಟ್ಟು ಜನಾಂಗಗಳು ಕುರಿ ಮೇಕೆ ಸಾಕುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿವೆ. ಈ ಜನಾಂಗಗಳನ್ನೇ ಪಶುಪಾಲಕರು, ಕುರುಬರು ಎಂದು ಕರೆಯಾಲಾಯಿತೆಂದು ಎಂ. ಎಸ್. ರಾಧವಾ ಹೇಳುತ್ತಾರೆ.(Sheep and Goats were the First to be domesticated in Neolitrie period) ಮೆಸಪಟೋಮಿಯಾ, ಸುಮೇರಿಯನ್ ನಾಗರೀಕತೆಯಲ್ಲಿ (ಕ್ರಿ.ಪೂ.೩೦೦೦ ವರ್ಷಗಳು) ಹಾಲು, ಮಾಂಸ, ಮತ್ತು ಉಣ್ಣೆಗಾಗಿ ಕುರಿಗಳನ್ನು ಭಾರಿ ಪ್ರಮಾಣದಲ್ಲಿ ಪಳಗಿಸಿ ಸಾಕುತ್ತಿದ್ದರು. ಸುಮಾರು ೬೦೦೦ ಜನಸಂಖ್ಯೆಯ ಈ ಪಶುಪಾಲಕರು, ಒಂದೇ ಕಡೆ ೧೦,೦೦೦ ಕುರಿಗಳನ್ನು ಸಾಕುತ್ತಿದ್ದರು. ಗ್ರೀಕ್ ದೇಶದಲ್ಲಿ ಕಿ.ಪೂ.೬೦೦ ರಲ್ಲಿ ಪಳಗಿಸಿದ ದನ ಕುರಿಗಳು ಇದ್ದವೆಂದು ಎನ್ಸೈಕ್ಲೋಪಿಡಿಯಾ ಬ್ರಿಟಾನಿಕ ಹೇಳುತ್ತದೆ. ಹಾಗೂ ಪಾಲೆಸ್ಥೇನಿನ ನಟುಫಿಯನ್ ಜನಾಂಗ ಮತ್ತು ಇರಾಕಿನ ತಾಕಿದರ್ ಜನಾಂಗ ಕಾಡು ಜಾತಿಯ ಕುರಿ ಆಡುಗಳನ್ನು ಕಿ.ಪೂ.೨೦೦೦ ವರ್ಷಗಳ ಹಿಂದೆಯೇ ಸಾಕುತ್ತಿದ್ದರೆಂದು ಇದೇ ವಿಶ್ವಕೋಶವು ಹೇಳುತ್ತದೆ. ಜೊತೆಗೆ ಇಟಲಿ, ಆಸ್ಟ್ರಿಯಾ ದೇಶಗಳ ಸರಹದ್ದಿನಲ್ಲಿರುವ ಆಲ್ಫ್ ಪರ್ವತಗಳ ಹಿಮಚ್ಛಾಧಿತ ಪರ್ವತ ಪ್ರದೇಶದಲ್ಲಿ ಸುಮಾರು ೫೦೦೦ ವರ್ಷಗಳಷ್ಟು ಪುರಾತನವಾದ ಪಶುಪಾಲಕನೋಪಾದಿಯ ಶವವೊಂದು ದೊರೆತಿದೆ.[೧೪] ಕರ್ನಾಟಕದಲ್ಲೂ ಕ್ರಿಪೂ ೧೮೦೦ ರಲ್ಲಿ ಹಿರೇಕೆರೂರು ತಾಲ್ಲೂಕಿನ ಹಳ್ಳೂರು ಪ್ರದೇಶದಲ್ಲಿ ಪಶುಪಾಲಕರು ಇದ್ದರೆಂದು ಎಂ.ಎಸ್.ನಾಗರಾಜು ತಿಳಿಸುತ್ತಾರೆ.

ಕೊಪ್ಪಳದ ಗವಿಮಠದ ಪ್ರದೇಶದಲ್ಲಿ ಆಕಳು ಮತ್ತು ಟಗರಿನ ಚಿತ್ರಗಳನ್ನು ಕಾಣಬಹುದು. ಹಂಪಿಯ ಬಂಡೆಗಲ್ಲುಗಳ ಮೇಲೂ ದನ, ಕುರಿ ರೇಖಾ ಚಿತ್ರಗಳು ಇರುವುದರಿಂದ ಶಿಲಾಯುಗದಲ್ಲಿಯೇ ದನಗಾರರು, ಕುರಿಗಾರರು ಇದ್ದರೆಂದು ಇದರಿಂದ ತಿಳಿಯುತ್ತದೆ. ಇತ್ತೀಚಿನ ಸಂಶೋಧನೆಗಳ ಪ್ರಕಾರ ವಿಶ್ವದ ಮೊಟ್ಟಮೊದಲ ಪಶುಪಾಲಕರು (D.N.A, R.N.A ಆಧರಿಸಿ) ರಷ್ಯಾದ ನೈರುತ್ಯ ಮತ್ತು ಆಫ್ಘಾನಿಸ್ತಾನದ ಉತ್ತರ ಭಾಗದಲ್ಲಿ ನೆಲೆಸಿದ್ದರು, ಎಂಬ ತೀರ್ಮಾನಕ್ಕೆ ಬರಲಾಗಿದೆ. ಈ ಪ್ರದೇಶವನ್ನೇ ಮಹಾಭಾರತದ ಕಾಲದಲ್ಲಿ ಗಾಂಧಾರ* ಪ್ರದೇಶವೆಂದು ಗುರುತಿಸಲಾಗಿತ್ತು. ಆರಂಭದಲ್ಲಿ ಈ ಭಾಗದಿಂದ ಅಲೆಮಾರಿಗಳಾಗಿದ್ದ ಪಶುಪಾಲಕರು ಸಿಂಧೂ ನದಿಯನ್ನು ದಾಟಿ,

---

* 'ಗಾಂಧಾರ' ಪ್ರದೇಶದ ಅರ್ಥ ಕುರಿಗಾರರ ಪ್ರದೇಶವೆಂದು. ಇಂದಿನ ಬಲೂಚಿಸ್ತಾನ, ಸಿಂಧು, ಕಾಶ್ಮೀರ, ಪಶ್ಚಿಮ ಹಾಗೂ ಕಂದಹಾರ ಪ್ರದೇಶಗಳನ್ನು ಗಾಂಧಾರ ಎಂದೇ ಕರೆಯಲಾಗುತ್ತಿತ್ತು.

ಗಂಗಾ, ಯಮುನಾ ನದಿಗಳ ಮೂಲಕ ದಕ್ಷಿಣ ಭಾರತದ ಕಡೆಗೂ ಅರಬ್ ಮತ್ತು ಈಶಾನ್ಯ ಚೀನಾ ಕಡೆಗೂ ಈ ಅಲೆಮಾರಿಗಳು ಪಸರಿಸಿಕೊಂಡರು.[೧೫] ಇದರಿಂದಾಗಿ ಜಗತ್ತಿನ ಮತ್ತು ಭಾರತದ ಮೂಲ ಜನಾಂಗೀಯ ಅಧ್ಯಯನಗಳನ್ನು ಗಮನಿಸಿದಾಗ ಇಲ್ಲೆಲ್ಲಾ ಕುರಿ ಪಾಲನೆಯ ವಾಸನೆ ಎದ್ದು ಕಾಣುತ್ತದೆ. ಇನ್ನು ಭಾರತಕ್ಕೆ ಹೊರಗಿನಿಂದ ಬಂದ ಆರ್ಯರು ತಮ್ಮ ಜೀವನಾಧಾರವಾಗಿ ಪಶುಪಾಲನೆಯನ್ನು ಅವಲಂಬಿಸಿದ್ದರು. ಮಾದ್ರ, ಪೇಷಾವರ, ಪರ್ಶಿಯನ್. ಆಸ್ಸಿಯನ್(ಆಸ್ಟ್ರಿಯಾ) ಪ್ರದೇಶಗಳಲ್ಲಿ ಕಂಬಳ ನೇಕಾರರ ಇರುವಿಕೆಯನ್ನು ಇತಿಹಾಸಜ್ಞರು ಗುರುತಿಸಿದ್ದಾರೆ. ಹಾಗೆಯೇ ಭಾರತೀಯ ಮಹಾಕಾವ್ಯ ಮತ್ತು ಪುರಾಣಗಳಲ್ಲಿ ಕಂಡುಬರುವ ಆಶ್ರಮಗಳಲ್ಲಿ ಗೋಶಾಲೆಗಳಿದ್ದುದನ್ನು ಕಾಣಬಹುದು. ಇಲ್ಲಿನ ಶಿಷ್ಯರು ಗೋವು, ಹುಲ್ಲುಗಾವಲುಗಳ ಮೇಲ್ವಿಚಾರಣೆ, ಕುರಿ–ದನಗಳನ್ನು ಕಾಯುವುದು, ಉಣ್ಣೆ ತೆಗೆಯುವ, ನೂಲುವ ಕಾಯಕದಲ್ಲಿ ನಿರತರಾಗಿರುತ್ತಿದ್ದರು. ಜೊತೆಗೆ ಕ್ರೈಸ್ತ ಧರ್ಮ ಜನ್ಮ ತಳೆಯುವ ೫೦೦ ವರ್ಷಗಳ ಮೊದಲೇ ಅಸ್ತಿತ್ವಕ್ಕೆ ಬಂದಿದ್ದ ಜೈನ ಧರ್ಮದ ಪ್ರಥಮ ತೀರ್ಥಂಕರನಾದ ವೃಷಭನಾಥ ತನ್ನ ಹಳದಿಬಣ್ಣದ ಧ್ವಜದಲ್ಲಿ ವೃಷಭ(ಬಸವ)ನ ಸಂಕೇತವನ್ನು ಹೊಂದಿದ್ದರ ಮಹತ್ವ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು* ಕುರಿಗೆ ನೀಡಿರುವ ಧಾರ್ಮಿಕ ಮಹತ್ವ, ಹಾಗೂ ಹಿಂದೂಗಳು ಗೋವಿಗೆ ನೀಡಿರುವ ಪೂಜನೀಯ ಮಹತ್ವವನ್ನು ಗಮನಿಸಿದರೆ ಮಾನವನ ಮೊದಲ ವೃತ್ತಿ ಪಶುಪಾಲನೆ ಎಂಬುದು ತಿಳಿಯುತ್ತದೆ.

ಅರಬ್ ರಾಷ್ಟ್ರಗಳಾದ ಇರಾಕ್, ಇರಾನ್, ಆಫ್ಘಾನಿಸ್ತಾನ, ಪಾಕಿಸ್ತಾನ ಮುಂತಾದ ಪ್ರದೇಶಗಳಲ್ಲಿ ಕುರಿಸಾಕಾಣಿಕೆಯು ಒಂದು ವೃತ್ತಿಯಾಗಿರುವುದನ್ನು ಗಮನಿಸಬಹುದು ಹಾಗೂ ಆಫ್ರಿಕಾ ಖಂಡದಲ್ಲಿ ಮಸಾಯಿ ಎಂಬ ಪಶುಪಾಲನಾ ಪಂಗಡ ಇಂದಿಗೂ ಪಶುಪಾಲನೆಯಲ್ಲಿಯೇ ತೊಡಗಿದೆ.

ಈ ಎಲ್ಲದರ ಹಿನ್ನೆಲೆಯಲ್ಲಿ ಪ್ರಪಂಚದ ನಾನಾ ಭಾಗಗಳಲ್ಲಿ ನಡೆಸಿದ ಉತ್ಖನನ, ಇರುವ ಧಾರ್ಮಿಕ ಆಚರಣೆಗಳು, ಪ್ರಾಚೀನ ಸಾಹಿತ್ಯ, ಪರಂಪರಾಗತ ಜಾನಪದ ಕಥೆಗಳಿಂದ ಲಭ್ಯವಾಗಿರುವ ಮಾಹಿತಿಯಂತೆ, ಕಾಡು ಮಾನವ ನಾಗರಿಕತೆಯ ಮೆಟ್ಟಿಲೇರಿ, ಮೊಟ್ಟ ಮೊದಲು ಆಯ್ಕೆ ಮಾಡಿಕೊಂಡ ವೃತ್ತಿ 'ಪಶುಪಾಲನೆ' ಎಂಬ ತೀರ್ಮಾನಕ್ಕೆ ಬರಬಹುದು.

---

* ಇಸ್ಲಾಂ ಧರ್ಮದ ಸ್ಥಾಪಕ ಮಹಮ್ಮದ್ ಪೈಗಂಬರ್, 'ಕುರೇಶಿ' ಎಂಬ ಕುರುಬ ಪಂಗಡದ ಪೂಜಾರಿ ವರ್ಗಕ್ಕೆ ಸೇರಿದವನು. ಇದು ಆತನ ಜೀವನ ಚರಿತ್ರೆಯಿಂದಲೇ ಸ್ಪಷ್ಟವಾಗುತ್ತದೆ

ಹೀಗೆ ದೊರೆತಿರುವ ಎಲ್ಲಾ ಆಧಾರಗಳಿಂದಾಗಿ ಕಾಡು ಮಾನವ, ನಾಗರಿಕತೆಯ ಮೆಟ್ಟಿಲು ಹತ್ತಿದ್ದು ಪಶುಪಾಲನೆಯಿಂದ. ಈ ಆದಿಮಾನವ (ನಿಯೆಂಡರ್ ಥಲ್) ಭೂಮಿಯಲ್ಲಿ ಹುಟ್ಟಿದ್ದು ೫ ಲಕ್ಷ ವರ್ಷಗಳ ಹಿಂದೆ. ಈತನು ಆಧುನಿಕ ಮಾನವನಾಗಿ ಪರಿವರ್ತನೆ ಹೊಂದಿದ್ದು ಇಲ್ಲಿಗೆ ಸುಮಾರು ೨.೨೫ ಲಕ್ಷ ವರ್ಷಗಳಾಗಿವೆ ಎಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಬುದ್ಧಿ, ವಿಚಾರ, ವಿವೇಚನೆ ಎಂಬ ಆರನೆಯ ಅಂಗದ ಉತ್ಪತ್ತಿಯ ನಂತರ ಅವನಲ್ಲಿ 'ಕರುಣಾಮಯ ರಸ' ಉತ್ಪತ್ತಿಯಾದ ಮೇಲೆ ಅವನು ಪಶುಪಾಲನಾ ಅವಸ್ಥೆಗೆ ತೊಡಗಿಕೊಂಡನು. ಈ ಪಶುಪಾಲಕರೇ ಜಗತ್ತಿನ ಪ್ರಥಮ ನಾಗರಿಕರೆಂದು ಈಗ ಒಪ್ಪಿಕೊಳ್ಳಲಾಗಿದೆ.

ನಂತರ ಈ ಪಶುಪಾಲಕರು ತಮ್ಮ ಪಶುಪಾಲನೆಯ ಜೊತೆಗೆ ವ್ಯಾಪಾರ, ವ್ಯವಸಾಯ ಚಮ್ಮಾರಿಕೆ, ಕಮ್ಮಾರಿಕೆ, ಮರಗೆಲಸ, ಕಲ್ಲುಗಾರಿಕೆ, ನೇಕಾರಿಕೆ, ದೋಣಿ ನಡೆಸುವುದು ಮುಂತಾದ ತಮ್ಮ ತಮ್ಮ ಆಸಕ್ತಿದಾಯಕ ಕೆಲಸಗಳಲ್ಲಿ ತೊಡಗಿ ಇವೇ ಮುಂದೆ ವೃತ್ತಿಗಳಾಗಿ ಕಾಲಾನಂತರ ಸಮುದಾಯದ ಹೆಸರಿನಲ್ಲಿ ಜಾತಿಗಳಾಗಿ ಬೆಳೆಯ ತೊಡಗಿದವು. ಅದು ಹೇಗೆ ಎಂಬುದನ್ನು ಈ ಮುಂದೆ ಚರ್ಚಿಸಲಾಗಿದೆ.

**ಪಶುಪಾಲನೆಯೊಂದಿಗೆ ಹುಟ್ಟಿಕೊಂಡ ಜಾತಿಗಳು:**

ಪಶುಪಾಲನಾ ವೃತ್ತಿಯನ್ನೇ ಅವಲಂಬಿಸಿ ಬದುಕು ಮುಂದುವರೆಸಿದವರು 'ದನಗಾರ' ಅಥವಾ 'ಕುರುಬ' ಜಾತಿಯವರು ಎಂದು ಕರೆಯಲ್ಪಟ್ಟಂತೆಯೇ ಈಗಿನ ಎಲ್ಲಾ ಜಾತಿಗಳು ವೃತ್ತಿ ಆಧಾರಿತವಾಗಿಯೇ ಹುಟ್ಟಿಕೊಂಡಂತಹವು ಎಂಬುದನ್ನು ಎಲ್ಲಾ ಸಮಾಜ ಶಾಸ್ತ್ರಜ್ಞರು, ಜೀವಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಹಾಗಾಗಿ 'ಜಾತಿ' ಪದದ ಅರ್ಥ, ಸ್ವರೂಪ ಏನು ಎಂಬುದನ್ನು ಕುರಿತು ಸಮಾಜಶಾಸ್ತ್ರಜ್ಞರು ನೀಡಿರುವ ಬೇರೆ ಬೇರೆ ವ್ಯಾಖ್ಯಾನಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಉಂಡ್‌ಬರ್ಗ್ ಪ್ರಕಾರ, "ಒಂದು ಗುಂಪಿನ ಜನರು ಹುಟ್ಟಿನಿಂದ ಗುರುತಿಸಲ್ಪಡುವ ಅತ್ಯಂತ ಜಡವಾದ ಸಾಮಾಜಿಕ ವರ್ಗವೇ ಜಾತಿ."

ಗ್ರೀನ್‌ನ ಪ್ರಕಾರ, "ಜಾತಿ ಸಾಮಾಜಿಕ ವರ್ಗೀಕರಣದ ಒಂದು ವಿಭೇದ. ಇದರಲ್ಲಿ ಪ್ರತಿಷ್ಠೆಗಾಗಿ ಏಣಿಯ ಮೂಲಕ ಮೇಲೇರುವುದು ಇಲ್ಲವೆ ಕೆಳಗಿಳಿಯುವುದು ಸಾಮಾಜಿಕವಾಗಿ ಸಾಧ್ಯವಿಲ್ಲದ ಒಂದು ವರ್ಗೀಕರಣ."

ಅಂಡರ್‌ಸನ್ ಅವರು, "ಸಾಮಾಜಿಕ ವರ್ಗೀಕರಣದಲ್ಲಿ ಜಾತಿ ಎನ್ನುವುದು ಅತ್ಯಂತ ತುದಿಯ ವರ್ಗೀಕರಣ, ಇದರಲ್ಲಿ ವ್ಯಕ್ತಿಗಳ ಸ್ಥಾನಮಾನ ಅವರ ಹುಟ್ಟಿನಿಂದಲೇ ನಿರ್ಧಾರವಾಗಿರುತ್ತದೆ." ಎಂದಿದ್ದಾರೆ.

ಮಾಕ್ಕೈವರ್ ಅವರ ಪ್ರಕಾರ, " ಮನುಷ್ಯನು ತಮ್ಮ ಅದೃಷ್ಟಕ್ಕೆ ಅನುಗುಣವಾಗಿ ಸಮಾಜದಲ್ಲಿ ಜನ್ಮ ತಾಳುತ್ತಾನೆ. ಅವರ ಸ್ಥಾನಮಾನ ಪೂರ್ವ ನಿರ್ಧಾರಿತವಾಗಿರುತ್ತದೆ. ವರ್ಗವು ಇಂತಹ ಪರಿಸ್ಥಿತಿಯಲ್ಲಿ ಜಾತಿಯ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತದೆ".

ರಿಸ್ಲೈ ಅವರ ಪ್ರಕಾರ, "ಜಾತಿ ಎನ್ನುವುದು ಕೆಲವು ಕುಟುಂಬಗಳ ಒಂದು ಗುಂಪು. ಈ ಕುಟುಂಬಗಳಿಗೆ ಒಂದು ಹೆಸರಿರುತ್ತದೆ. ಅವರು ಅನುವಂಶೀಯವಾಗಿ ಒಂದೇ ರೀತಿಯ ಆಚರಣೆಗಳನ್ನು ಹೊಂದಿರುತ್ತಾರೆ."

ಇ.ಎ.ಎಚ್. ಬ್ಲಂಟ್ ಅವರ ಪ್ರಕಾರ "ಜಾತಿ ಎನ್ನುವುದು ಒಂದು ಗುಂಪಿನ ಗುರುತು. ಈ ಗುಂಪು ಕೊಂಡು ತರುವುದನ್ನು ನಿರ್ಬಂಧಿಸುತ್ತದೆ. ಮತ್ತು ಕೆಲವೊಮ್ಮೆ ಸಾಂಪ್ರದಾಯಿಕ ವೃತ್ತಿಯನ್ನೇ ಅನುಸರಿಸುತ್ತದೆ." ಸಿ.ಎಚ್. ಕೂಲೆ ಅವರ ಪ್ರಕಾರ, "ಒಂದು ವರ್ಗ ಅನುವಂಶೀಯವಾದಾಗ ಅದು ಜಾತಿಯ ಸ್ವರೂಪ ಪಡೆಯುತ್ತದೆ."

ಈಟ್ಕರನ ಪ್ರಕಾರ, "ಒಂದೇ ಗುಂಪಿನಲ್ಲಿ ಅನುವಂಶೀಯವಾಗಿ ಜನ್ಮ ಪಡೆಯುವುದು ಮತ್ತು ಒಂದು ನಿರ್ದಿಷ್ಟವಾದ ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಲಕ್ಷಣಗಳನ್ನು ಹೊಂದಿರುತ್ತದೆ."

ಹೀಗೆ ಅನೇಕ ಸಮಾಜಶಾಸ್ತ್ರಜ್ಞರು 'ಜಾತಿ' ಯನ್ನು ಕುರಿತಂತೆ ವ್ಯಾಖ್ಯಾನಿಸಿರುವುದನ್ನು ಗಮನಿಸಬಹುದು. ಇಂದು ಸುಶಿಕ್ಷಿತರಾದವರು ಜಾತಿಯನ್ನು ಕುರಿತಂತೆ ಏನೇ ವ್ಯಾಖ್ಯಾನ ನೀಡಿದರೂ, ಆ ಪದದ ನಿಷ್ಪತ್ತಿಯು 'ಒಂದು ಗುಂಪಿನ ಕಸುಬಿನೊಂದಿಗೆ ಅಂಟಿಕೊಂಡಿರುವುದನ್ನು' ಕಾಣುತ್ತೇವೆ. ಜಾತಿ ವೃತ್ತಿಗೆ ಸಂಬಂಧಿಸಿದ ನಾಮವಾಗಿ ಮೊದಲು ಕಂಡು ಬಂದಿತು."[೭] ಹಾಗಾದರೆ ವಿಶ್ವದ ಪ್ರಥಮ ಜಾತಿ ಯಾವುದು ಎಂಬ ಪ್ರಶ್ನೆಗೆ ಕೆಲವರು ವ್ಯಾಧ(ಬೇಟೆಗಾರ) ಎಂತಲೂ, ಕೆಲವರು ಮೀನುಗಾರರೆಂದೂ ವಾದಿಸುವುದುಂಟು. ಈ ಎರಡೂ ವಾದಗಳಿಂದಲೂ ಆದಿ ಮಾನವನ ಪ್ರಾಥಮಿಕ ವೃತ್ತಿ 'ಬೇಟೆಗಾರಿಕೆ' ಎಂದು ಒಪ್ಪಿಕೊಳ್ಳಬಹುದು.* ನಂತರ ಮಾನವ ತನ್ನ ವಿಕಾಸ ಕ್ರಮದಲ್ಲಿ ಮೊದಲು ಆಯ್ಕೆ ಮಾಡಿಕೊಂಡ ವೃತ್ತಿಯೇ ಪಶುಪಾಲನೆ. ಈ ಪಶುಪಾಲಕರು ತಮ್ಮ ಸುತ್ತಲಿನ ಸೃಷ್ಟಿಯಲ್ಲಿ ನಡೆಯುತ್ತಿದ್ದ ವೈಚಿತ್ರ್ಯಗಳನ್ನು (ಪ್ರವಾಹ. ಬಿರುಗಾಳಿ. ಭೂಕಂಪ, ಕಾಳ್ಗಿಚ್ಚು) ಕಂಡು ಭಯಭೀತರಾಗಿ ಅಗ್ನಿ, ವಾಯು, ಆಕಾಶ, ಭೂಮಿ, ನೀರು, ಇವುಗಳನ್ನು ಪೂಜಿಸತೊಡಗಿದರು.

---

* ಪಾಶ್ಚಾತ್ಯ ಸಂಶೋಧಕ ಪ್ರೊ.ಹೈವನ್ "೧..೨೫ ಲಕ್ಷ ವರ್ಷಗಳ ಹಿಂದೆ ಆಧುನಕ ಮಾನವನ ವಿಕಾಸವಾಗಿ, ಇವನ ಬದುಕುವ ಸಹಜ ಕ್ರಿಯೆ ಬೇಟೆಗಾರಿಕೆಯಾಗಿದ್ದರಿಂದ, ಇದನ್ನು ವೃತ್ತಿ ಎಂದು ಪರಿಗಣಿಸಲಾಗದು ಎಂದು ಹೇಳಿದ್ದಾರೆ.

ಮುಂದೆ ಇವೆಲ್ಲವುಗಳಿಗೆ ತದ್ರೂಪಿ ಸ್ತ್ರೀ ಪುರುಷ ರೂಪದ ದೇವತೆಗಳನ್ನು ಕಲ್ಪಿಸಿಕೊಂಡು ಬ್ರಹ್ಮ, ವಿಷ್ಣು, ಮಹೇಶ್ವರನ ಹುಟ್ಟಿಗೆ ಕಾರಣರಾಗುತ್ತಾರೆ. ಈ ದೇವತೆಗಳ (ಕಲ್ಲು ಅಥವಾ ಲಿಂಗರೂಪದಲ್ಲಿ) ಪೂಜೆಗಾಗಿ ಪಶುಪಾಲಕರು ತಮ್ಮಲ್ಲಿಯೇ ಒಂದು ಗುಂಪಿಗೆ ಪೂಜೆ ಮಾಡುವ ಕೆಲಸ ನೀಡುತ್ತಾರೆ. ಹೀಗೆ ಪಶುಪಾಲಕರಿಂದ ಪುರೋಹಿತ (ಬ್ರಾಹ್ಮಣ) ಜಾತಿ ಹುಟ್ಟಿಕೊಳ್ಳುತ್ತದೆ.

ಮೊದಲು ಕೇವಲ ಮಾಂಸಕ್ಕಾಗಿ ಪಶುಗಳ ಪಾಲನೆ ಮಾಡುತ್ತಿದ್ದ ಈ ಪಶುಪಾಲಕರು ಪಶುಗಳ ಹಾಲು, ಪೂರ್ಣಾಹಾರ ಎಂದು ತಿಳಿದು, ಹಾಲಿನಿಂದ ನಾನಾ ವಿಧದ ಅನುಕೂಲತೆಗಳನ್ನು ಮನಗಂಡರು. ಹಾಲು ರಸಾಹಾರ ಎಂದು ಅರಿವು ನೀಡಿದವರೇ ದೇಸೀ ಪಶುಪಾಲಕರು. ಮೊಸರು, ಕೆನೆ, ಬೆಣ್ಣೆ, ತುಪ್ಪ, ಮಜ್ಜಿಗೆ ಮುಂತಾದ ಪದಾರ್ಥಗಳ ಜನಕರೇ ಇವರು. ಅಂದಿನಿಂದ ಈ ಪಶುಪಾಲಕರು ತಮ್ಮನ್ನು 'ಹಾಲುಮತದವರು' ಎಂದು ಕರೆದುಕೊಂಡರು* ಇವರೆಲ್ಲರೂ ಕುರಿ, ಆಡು, ದನ, ಗೋವು, ಎಮ್ಮೆಗಳನ್ನು ಹಾಲಿಗಾಗಿ ಸಾಕುತ್ತಿದ್ದರು. ಹೀಗೆ ಹಾಲು-ಹೈನು ತಯಾರಿಕೆಯಿಂದ ಬಲಿಷ್ಠರಾಗಿ ಮತ್ತೆ ಕೆಲವರು ಭೂಪಾಲಕರಾದರು.

ಕುರಿಯ ತುಪ್ಪಳದಿಂದ ನೂಲು ತೆಗೆದು ಬಟ್ಟೆ ನೇಯುವ ನೇಕಾರರು ಕೆಲವರಾದರೆ, ಹಾಗೆಯೇ ಕುರಿ ಅಥವಾ ದನ ಕಾಯುವ ಕಾಯಕದಲ್ಲಿ ಉಳಿದುಕೊಂಡವರಿಗೆ ಕಾಡುಕುರುಬ, ಅಥವಾ ಕಾಡುಗೊಲ್ಲರು (ಗೊಲ್ಲ) ಎಂಬ ಹೆಸರು ಪ್ರಾಪ್ತವಾಯಿತು.

ಈ ಕಾರಣಕ್ಕಾಗಿಯೇ ಗೊಲ್ಲರ ನಾಯಕ ಜುಂಜಪ್ಪ ಗೋಪಾಲಕನೂ ಹೌದು, ಕುರಿ ಪಾಲಕನೂ ಹೌದು. ಇಂದಿಗೂ ದಕ್ಷಿಣ ಭಾರತದ ಅನೇಕ ರಾಜ್ಯಗಳಲ್ಲಿ ಕುರುಬರನ್ನು 'ಗೊಲ್ಲ' ಎಂತಲೇ ಕರೆಯುತ್ತಾರೆ. ಉದಾಹರಣೆಗೆ, ತೆಲುಗಿನಲ್ಲಿ ಕುರಿಯನ್ನು 'ಗೊರ್ರಲು' ಎಂದೇ ಕರೆಯುತ್ತಾರೆ.[೧೮]

ಆರಂಭದಲ್ಲಿ ಅಲೆಮಾರಿಗಳಾಗಿದ್ದ ಪಶುಪಾಲಕರು ಉತ್ತರ ಭಾರತದ ಸಿಂಧೂನದಿ, ಗಂಗಾ ಯಮುನಾ ತಟಗಳನ್ನು ದಾಟಿ ದಕ್ಷಿಣದ ಕಡೆ ಬರತೊಡಗಿದರು. ಹೀಗೆ ಬಂದ ೧೮ ಕುಲದ ಈ ದನಗಾರರು ಇಲ್ಲಿ 'ಆಡಂಗಾಯ್ಟು' ಮತ್ತು 'ಕೊಟ್ಟವಳ್' ಕುಲದವರೆನಿಸಿಕೊಡು ಮುಂದೆ ಕನ್ನಡ, ತೆಲುಗು, ತಮಿಳು ಭಾಷೆಗಳನ್ನು ಹುಟ್ಟು ಹಾಕಿದರು. ಹಾಗಾಗಿ ತೆಲುಗು ನಾಡಿನಲ್ಲಿ ಕುರಿಗಳನ್ನು ಸಾಕುವವನಿಗೆ 'ಕುರುಪ'

---

* ಇಂದಿಗೂ ನಮ್ಮ ನಡುವಿನ ಅನೇಕರಲ್ಲಿ ಹಾಲು ಮತದವರೆಂದರೆ 'ಕುರುಬರು' ಎಂಬ ನಂಬಿಕೆ ಇದೆ.

ಎಂದು ಕರೆಯುತ್ತಾರೆ. ಕುರುಪ ಎಂದರೆ 'ಉಣ್ಣೆ ನೇಕಾರ' ಎಂದರ್ಥ. (ತೆಲುಗು ನಿಘಂಟು).

ಈ ಕುರುಪ ಅಥವಾ 'ಕುರುಂಬರು' ಪ್ರಾಚೀನ ಜಾಡ ಜನಾಂಗಕ್ಕೆ ಸೇರಿದವರೆಂದು ಹೇಳಲು ಇತಿಹಾಸದಲ್ಲಿ ಸಾಕ್ಷಿಗಳಿವೆ.[೧೯] ಆಂಧ್ರದ ತಿರುಮಲ್ಯೆ ಬೆಟ್ಟದ ಸುತ್ತ, ತಮಿಳು ನಾಡಿನ 'ಮಲ್ಯೆ' ಪ್ರಾಂತದಲ್ಲಿ ಹಾಗೂ ಕರ್ನಾಟಕದಲ್ಲಿ ಈಗಲೂ ಕುರುಬರ ಸಂಖ್ಯೆ ಹೆಚ್ಚಿರುವುದನ್ನು ಗಮನಿಸಬಹುದಾಗಿದೆ. ತಮಿಳುನಾಡಿನಲ್ಲಿ ಹಾಲುಮತದವರನ್ನು 'ಕಳ್ಳಲ್' ಎನ್ನುವ ಹಾಗೆ ಕರ್ನಾಟಕದಲ್ಲಿ 'ಒಡೆಯರು' ಎಂದು ಸಂಬೋಧಿಸಲಾಗಿದೆ.

ಹಾಗೆಯೇ ಜಗತ್ತಿನ ಮೂಲ ಪಶುಪಾಲನಾ ಕೇಂದ್ರಗಳಾದ ಪರ್ಷಿಯನ್, ಆಸ್ಟ್ರಿಯಾ. ಮಾದ್ರ, ಪೇಷಾವರ ಮುಂತಾದ ಪ್ರದೇಶಗಳಲ್ಲಿ ಕಂಬಳಿ ನೇಕಾರರಿದ್ದರೆಂಬುದನ್ನು ಅಲ್ಲಗಳೆಯುವಂತಿಲ್ಲ.[೨೦] ಈ ಹಿನ್ನೆಲೆಯಲ್ಲಿ ಪ್ರಪಂಚದ ಬಹುಪಾಲು ಪ್ರದೇಶದ ಮೂಲ ಜನಾಂಗೀಯ ಲಕ್ಷಣಗಳಾದ ನಡವಳಿಕೆ, ಆಚಾರ-ವಿಚಾರ, ದೈವಾರಾದನೆಗಳನ್ನು ಗಮನಿಸಿದಾಗ ಅಲ್ಲೆಲ್ಲ ಆಡು, ಕುರಿ ಪಾಲನೆಯ ವಾಸನೆ ಎದ್ದುಕಾಣುತ್ತದೆ.

ಮುಂದೆ ನಾಗರಿಕತೆ ಬೆಳೆದಂತೆ ಸಮಾಜದಲ್ಲಿನ ಕಟ್ಟುಪಾಡುಗಳು ಬಿಗಿಗೊಳ್ಳತೊಡಗಿದವು. ಸಾಮಾಜಿಕ ಮತ್ತು ಆಡಳಿತದ ದೃಷ್ಟಿಯಿಂದ ಜನಸಾಮಾನ್ಯರು ತಮ್ಮ ವೃತ್ತಿಯ ಕುಲ ಕಸುಬುಗಳನ್ನು ಮುಂದುವರೆಸಿಕೊಂಡು ಹೋಗುವುದು ಅನಿವಾರ್ಯವಾಗಿತ್ತು. ಜೊತೆಗೆ ಎಲ್ಲರೂ ತಂತಮ್ಮ ಅನುಕೂಲಕ್ಕೆ ತಕ್ಕಂತೆ ಒಂದೋ, ಎರಡೋ ಎಂಬಂತ ಲಾಭದಾಯಕ, ಶ್ರಮರಹಿತ ವೃತ್ತಿಗಳನ್ನು ಆಯ್ದುಕೊಂಡರು. 'ಮನು'ವಿನ ಪ್ರಕಾರ "ಜನಸಾಮಾನ್ಯರಿಗೆ ಅವಶ್ಯವಿರುವ ಸೇವಾವೃತ್ತಿಗಳು ಅಕ್ಷರಶಃ ನಿಂತುಹೋಗುವ ಸಾಧ್ಯತೆಯಿದ್ದುದರಿಂದ ವಂಶಪಾರಂಪರಿಕ ವೃತ್ತಿಗಳನ್ನು ಕಡ್ಡಾಯಗೊಳಿಸಲಾಗಿ, ಅನುವಂಶೀಯ ಕುಲ ಕಸುಬುಗಳು ಮುಂದುವರೆದವು" ಎನ್ನುತ್ತಾನೆ. ಇದೇ ಮುಂದೆ ಜಾತಿಯ ರೂಪವನ್ನು ಪಡೆದುಕೊಂಡಿತು ಎಂದು ಈತ ಹೇಳುತ್ತಾನೆ. ಹೀಗೆ ಹುಟ್ಟಿಕೊಂಡ ಕಸುಬು ಆಧಾರಿತ ಜಾತಿಗಳೆಂದರೆ, ಆದಿಬಣಜಿಗರು, ಜೈನರು, ಕ್ಷತ್ರಿಯರು, ಬ್ರಾಹ್ಮಣರು, ಹಂಡೆ ಕುರುಬರು, ಮರಾಠರು, ರಡ್ಡಿಗಳು, ಜಾಡರು, ಬೇಡರು, ಒಕ್ಕಲಿಗರು, ಲಾಳಗೊಂಡರು, ಈಡಿಗರು ಮುಂತಾದ ಜಾತಿಗಳವರಾಗಿದ್ದಾರೆ. ಮುಂದೆ ಈ ಜಾತಿಗಳನ್ನೇ ವರ್ಗ, ವರ್ಣ ಹಿನ್ನೆಲೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವ್ಯಾಪ್ತಿಯಲ್ಲಿ ತರಲಾಯಿತು.

**ಆದಿ ಬಣಜಿಗರು:**

ಪಶುಪಾಲಕರು ತಾವು ಸಾಕಿಕೊಂಡಿರುವ ಪ್ರಾಣಿಗಳ ಮೇಲೆ ಸರಕುಗಳನ್ನು ಹೇರಿಕೊಂಡು ಜನವಸತಿಗಳಿದ್ದಲ್ಲಿಗೆ ಹೋಗಿ ಮಾರಾಟ ಮಾಡುತ್ತಿದ್ದರು. ಮೊದಲು

ಉತ್ತಮ ತಳಿಯ ಕುರಿ-ಟಗರುಗಳ ಮೇಲೆ ಭಾರವನ್ನು ಸಾಗಿಸುತ್ತಿದ್ದರು. ನಂತರ ಅವುಗಳ ಸ್ಥಾನದಲ್ಲಿ ಕತ್ತೆ, ಕುದುರೆ, ಒಂಟೆ, ದನ, ಸಾರಂಗ ಮುಂತಾದ ಪ್ರಾಣಿಗಳು ಬಳಕೆಗೆ ಬಂದವು. ಹಾಗಾಗಿ ಪಶುಪಾಲಕರ ಉಪಕಸುಬಾಗಿ ಬಣಜಿಗತನ (ಶೆಟ್ಟಿ) ರೂಪುಗೊಂಡಿತು. ಯಾರು ಕತ್ತೆಗಳ ಮೇಲೆ ಸರಕುಗಳನ್ನು ಸಾಗಿಸುತ್ತಿದ್ದರೋ ಅವರನ್ನು 'ಕತ್ತಿಶೆಟ್ಟರು' ಎಂದೂ, 'ಎತ್ತು'ಗಳ ಮೇಲೆ ಸರುಕುಗಳನ್ನು ಹೇರಿಕೊಂಡು ಹೋಗುವವರನ್ನು 'ನಂದಿಶೆಟ್ಟರು' ಎಂದೂ, ಗಂಜಿಯಿಲ್ಲದ ತೆಳ್ಳನೆಯ ನುಣುಪಾದ ಕಂಬಳಿ, ಕೋರಿ ಮಾರಾಟ ಮಾಡುತ್ತಿದ್ದವರನ್ನು 'ಕೋರಿಶೆಟ್ಟ'ರು ಎಂದೂ ಈಗಲೂ ವೈಶ್ಯರಲ್ಲಿ ಕೆಲವರನ್ನು ಸಂಬೋಧಿಸುವುದುಂಟು. 'ತಗರಪವಾಡ' ದಲ್ಲಿನ ಉಲ್ಲೇಖದಂತೆ ಕುರುಬರು 'ಶೆಟ್ಟಿ' ಎಂಬ ಹೆಸರಿನಿಂದಲೇ ಹೈನು ವ್ಯಾಪಾರ ಮಾಡುತ್ತಿದ್ದರು ಎಂಬುದು ತಿಳಿದು ಬರುತ್ತದೆ.

**ಜೈನರು:**

ಪ್ರಪಂಚದ ಎಲ್ಲಾ ಪ್ರಾಚೀನ ಧರ್ಮಗಳ ಅಸ್ತಿತ್ವಕ್ಕೆ ಪಶುಪಾಲಕರೇ ಮೂಲಾಧಾರ. ಪ್ರಾಚೀನ ಧರ್ಮಸಂಸ್ಥಾಪಕರು ಪಶುಪಾಲಕರೇ ಆಗಿರುವುದು ಅಷ್ಟೇ ಸತ್ಯ. ಹಾಗಾಗಿ ಜೈನ ಧರ್ಮ ಪುರಾಣವು "ಎಲ್ಲಾ ಪ್ರಾಣಿಗಳಿಗೂ ಸುಖವನ್ನು ಬಯಸಬೇಕೆಂದು ಹೇಳುತ್ತದೆ". ಆದಿನಾಥನ ನಾಮ (ಹೆಸರು) ಪಶುವಿಗೆ ಸಂಬಂಧಿಸಿದ್ದೆಂದೂ, ಮತ್ತು ಜೈನಧರ್ಮದ ಎಲ್ಲಾ ಚಿಹ್ನೆಗಳೂ ಪಶುಗಳೇ ಆಗಿವೆ ಎಂದು ಹೇಳಲಾಗಿದೆ.[೨೧]

ಜೈನರು ಪಶುಪತಿಯಾದ ಶಂಕರನನ್ನು, ಆದಿನಾಥನಲ್ಲಿ ಕಂಡುಕೊಳ್ಳುತ್ತ, ತೀರ್ಥಂಕರನಾದ ಕುಂಥುನಾಥನ ಹಳದಿ ಧ್ವಜದಲ್ಲಿ ಲಾಂಛನವಾಗಿ 'ಮೇಷ' ಇರುವುದನ್ನು ಕಾಣಬಹುದು. ಶ್ರವಣಬೆಳಗೊಳದ ೫೭ ಅಡಿ ಎತ್ತರದ ಏಕಶಿಲೆಯ ಬಾಹುಬಲಿ ಮೂರ್ತಿಯನ್ನು ಕೆತ್ತಿಸಿದ ಚಾವುಂಡರಾಯ ಉಣ್ಣೆನೇಕಾರ ಕುಲಕ್ಕೆ ಸೇರಿದವನು. ಅದಕ್ಕಾಗಿಯೇ ಅವನಿಗೆ ಚಾವುಂಡರಾಯ* ಎಂಬ ಹೆಸರುಬಂದಿತು. ಜೈನ ಮತಾವಲಂಬಿ ಪಂಪನ ಕಾವ್ಯದಲ್ಲಿ ಬರುವ ಕುಂತಲದೇಶ ಉಣ್ಣೆ ನೇಕಾರಿಕೆಗೆ ಪ್ರಸಿದ್ಧಿ ಪಡೆದಿತ್ತು. ಹೇಮಚಂದ್ರನ ಶ್ವೇತಾಂಬರ ಪರಂಪರೆಯ ಪುರಾಣದಲ್ಲಿ ಕುರುಚಂದ್ರ ಅರಸನಿಗೆ ಕುರುಮತಿ ಎಂಬ ಪತ್ನಿ ಇದ್ದಳೆಂಬ ಉಲ್ಲೇಖ ಸಿಗುತ್ತದೆ.[೨೨] ಇಲ್ಲಿಯ ನಾಮಗಳ ಪೂರ್ವಪದವಾದ 'ಕುರು' ಪಶುಪಾಲಕರಲ್ಲಿದ್ದ ಜಾತಿ ಸೂಚಕದ ಸಂಕೇತವಾಗಿದೆ.

---

* ಚೌಡ, ಚಾವುಂಡ, ಚೌಡಿ ಪದಗಳು, ಉಣ್ಣೆ ಕೂದಲನ್ನು ಸಂಕೇತಿಸುತ್ತವೆ.

ಈ ಕುರುಬರು ವೃತ್ತಿ ಪ್ರತಿಷ್ಠೆಯಿಂದ ಧರಿಸುವ ಉಣ್ಣೆ ಕಂಕಣವನ್ನು ಜೈನರು ತಮ್ಮ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಧರಿಸುವುದನ್ನು ಕಾಣಬಹುದು. ಮಹಾವೀರನ ನಂತರ ಬಂದ ಅನೇಕ ಜೈನ ಮುನಿಗಳು ಕುರುಬ ಕುಲದವರೇ ಆಗಿದ್ದರು. ಹಾಗೆಯೇ ೧೧ ನೇ ಶತಮಾನದಲ್ಲಿ ಉಣ್ಣೆ ನೇಕಾರರ ಕುಲಕ್ಕೆ ಸೇರಿದ ಗುಲ್ಬರ್ಗ ಜಿಲ್ಲೆ ಸುರಪುರ ತಾಲ್ಲೂಕಿನ ದೇವರ ದಾಸಿಮಯ್ಯ ಮೊದಲು ಜೈನ ಮತಾವಲಂಬಿಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಕುರುಬ ವಂಶಿಕರಾದ ವಿಜಯನಗರದ ಅರಸರು ಕೂಡ ಜೈನ ಮಂದಿರಗಳನ್ನು ರಕ್ಷಿಸಿದರು. ಇದಕ್ಕೆ ಶ್ರವಣ ಬೆಳಗೊಳದ ಬಾಹುಬಲಿ ಮೂರ್ತಿಯೇ ಸಾಕ್ಷಿ. ಇದರ ಶ್ರೇಯಸ್ಸು ಬುಕ್ಕರಾಯನಿಗೆ ಸಲ್ಲುತ್ತದೆ.

**ಬ್ರಾಹ್ಮಣರು:**

ಸೃಷ್ಟಿಯ ವೈಚಿತ್ರ್ಯಗಳನ್ನು ಕಂಡ ಪಶುಪಾಲಕರು ಭಯ-ಭಕ್ತಿಗಳಿಂದ ಸೂರ್ಯ, ಚಂದ್ರ, ಅಗ್ನಿ, ವಾಯು, ಗಾಳಿ, ನೀರನ್ನು ಪೂಜಿಸತೊಡಗಿದರು. ಇದು ವಂಶವಾಹಿನಿಯ ರೂಪವನ್ನು ಪಡೆದುಕೊಂಡು ಪೂಜೆಗಾಗಿಯೇ ಪೌರೋಹಿತ್ಯ ಪಡೆ ಹುಟ್ಟಿಕೊಂಡಿತು. ಕಾಲಕ್ಕೆ ತಕ್ಕಂತೆ ಈ ಪುರೋಹಿತರು (ಬ್ರಾಹ್ಮಣರು) ದೇವರುಗಳಿಗೆ ಜನ್ಮ ನೀಡುತ್ತಾ ಬಂದರು. ಕುರುಬ ಪೂಜಾರಿಯೊಬ್ಬ (ಪುರೋಹಿತ) ಕಲ್ಲಿಗೆ ಅರಿಷಿಣ, ಕುಂಕುಮ ಲೇಪಿಸಿದರೆ, ಮರುಗಳಿಗೆಯಲ್ಲಿಯೇ ಅದರಲ್ಲಿ ದೈವದ ಕಳೆ ತುಂಬಿಕೊಳ್ಳಲು ಪ್ರಾರಂಭಿಸುತ್ತಿತ್ತು. ಆದ್ದರಿಂದ ದೈವಗಳ ಸೃಷ್ಟಿಕರ್ತ ಪಶುಪಾಲಕನೇ ಆದನು. ಇಂತಹ ಕ್ರಿಯೆಗಳನ್ನು ಅನುವಂಶಿಕವಾಗಿ, ಪಾರಂಪರಿಕವಾಗಿ ಅನುಸರಿಸಿಕೊಂಡು ಬರುತ್ತಲೇ ಇದು ವೃತ್ತಿಯಾಗತೊಡಗಿತು. ಹೀಗೆ ಬೆಳೆದು ಬಂದ ವೃತ್ತಿಗಳನ್ನು* ಆಯಾ ಗುಂಪಿನವರು ಬೇರೆಯವರಿಗೆ ಬಿಟ್ಟುಗೊಡದೆ ಮುಂದುವರೆಸಿಕೊಂಡು ಬಂದರು. ಹಾಗೂ ವಿವಾಹ ಸಂಬಂಧಗಳನ್ನು ತಮ್ಮೊಳಗೆ ಮಾಡುತ್ತಾ ಬಂದದ್ದರ ಪರಿಣಾಮವೇ ಇದು ಮುಂದೆ ಜಾತಿಯ ರೂಪವನ್ನು ಪಡೆದುಕೊಳ್ಳಲು ಕಾರಣವಾಯಿತು.[೨೩]

ಆದ್ದರಿಂದ ವೇದಾಧ್ಯಯನ, ಪೂಜೆ, ಯಜ್ಞ ಯಾಗಾದಿಗಳಲ್ಲಿ ಪೌರೋಹಿತ್ಯ ಮಾಡುವವರಿಗೆ ಬ್ರಾಹ್ಮಣನೆಂದೂ, ದೇಶಕೋಶಗಳನ್ನೂ ರಕ್ಷಿಸುವವರಿಗೆ ಕ್ಷತ್ರಿಯರೆಂದೂ, ವ್ಯಾಪಾರದ ಮೂಲಕ ಐಶ್ವರ್ಯ ಸಂಪಾದನೆ ಮಾಡುವವರಿಗೆ ವೈಶ್ಯರೆಂದೂ, ಇವರೆಲ್ಲರ ಸೇವೆ ಮಾಡುವ ಶ್ರಮಿಕರಿಗೆ ಕೆಳದರ್ಜೆಯ ಶೂದ್ರರೆಂದು

---

* ಋಗ್ವೇದದಲ್ಲಿ ಬಡಗಿ, ಚಮ್ಮಾರ , ನಾಯಕ, ವ್ಯಾಪಾರಿ, ರಥಕಾರ ಎಂಬಂತಹ ವೃತ್ತಿಪರ ಹೆಸರುಗಳನ್ನು ಗುರುತಿಸಲಾಗಿದೆ.

ಕರೆಯಲಾಯಿತು. ಭಗವದ್ಗೀತೆಯು "ಚತುರ್ವರ್ಣಮ್ ಮಾಯಾಸೃಷ್ಟಂ ಗುಣಕರ್ಮ ವಿಭಾಗಃ" ಎಂದು ಹೇಳುತ್ತದೆ. ಅಂದರೆ ಸಮಾಜದ ನಾಲ್ಕು ವರ್ಣಗಳು ಗುಣ ಕರ್ಮಗಳ ಆಧಾರದ ಮೇಲೆ ಹುಟ್ಟಿದವು. ಇಲ್ಲಿ ಗುಣ ಎಂದರೆ ದೃಷ್ಟಿಕೋನ, ಕರ್ಮವೆಂದರೆ

ಕೈಕೊಳ್ಳುವ ಕಸುಬು ಎಂದರ್ಥ. ಇದರ ಪರಿಣಾಮ, ಕಸುಬನ್ನು ಕೇಂದ್ರೀಕರಿಸಿಕೊಂಡೇ ಜಾತಿಗಳು ಹುಟ್ಟಿಕೊಂಡವು. ಇದರಿಂದ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಪರಸ್ಪರ ಪ್ರತ್ಯೇಕತೆ ಬೆಳೆಯತೊಡಗಿತು. ಇಲ್ಲಿ ವೃತ್ತಿಗೆ ಸ್ವಾತಂತ್ರ್ಯವಿರಲಿಲ್ಲ. ಕಸುಬಿನ ಗೌಪ್ಯತೆಯನ್ನೂ ಬಿಟ್ಟು ಕೊಡುವಂತಿರಲಿಲ್ಲ. ಹಾಗಾಗಿ ಕಸುಬುಗಳು ಪರಂಪರಾಗತವಾಗಿ ಮುಂದುವರೆದವು.

ಹೀಗೆ ಪೌರೋಹಿತ್ಯದ ಕಸುಬನ್ನಾಧರಿಸಿದ ಬ್ರಾಹ್ಮಣರು ಕೆಳವರ್ಗದವರ ಮೇಲೆ ಇಲ್ಲಸಲ್ಲದ ಕಲ್ಪಿತ ನಿಷೇಧಗಳನ್ನು ಹೇರುತ್ತಾ ಮುಂದೆ ಬಲಿಷ್ಠರಾಗತೊಡಗಿದರು. ತಮ್ಮ ಓದು ಬುದ್ಧಿಮತ್ತೆಯಿಂದ ಇವರು ಉಳಿದವರನ್ನು ನಿಯಂತ್ರಣಕ್ಕೆ ತೆಗೆದುಕೊಂಡದ್ದನ್ನು ಇತಿಹಾಸದಲ್ಲಿ ಸ್ಪಷ್ಟವಾಗಿ ಗಮನಿಸಬಹುದು.[೨೪] ನಂತರ ಇದು ಶೋಷಣೆಯ ರೂಪವನ್ನು ಪಡೆದುಕೊಂಡಿತು. ಇದಕ್ಕೆಲ್ಲಾ ಕಾರಣ, ಸಾಮಾನ್ಯ ಜನರ ಬಡತನ, ಮೌಢ್ಯತೆ, ಅಜ್ಞಾನಗಳು ಎಂಬುದನ್ನು ಮರೆಯುವಂತಿಲ್ಲ.

**ಕ್ಷತ್ರಿಯರು:**

ಪಶುಪಾಲಕರು ಮೊದಲು ಕಾಡು–ಮೇಡು, ಬೆಟ್ಟ–ಗುಡ್ಡಗಳಲ್ಲಿ ವಾಸಿಸುತ್ತಿದ್ದರು. ಇವರು ಅಜಾನುಬಾಹುಗಳಾಗಿಯೂ, ದೃಢಕಾಯರಾಗಿಯೂ, ಧೈರ್ಯಶಾಲಿಗಳಾಗಿಯೂ, ಕಷ್ಟಸಹಿಷ್ಣುಗಳಾಗಿಯೂ ಬದುಕುತ್ತಿದ್ದರು. ನಂತರ ಇವರು ಗುಂಪುಗಳಲ್ಲಿ ವಾಸಿಸತೊಡಗಿದರು. ಇಲ್ಲಿ ಗುಂಪುಗಳ ರಕ್ಷಣೆ, ಮೇಲ್ವಿಚಾರಣೆ, ಒಡೆಯನ ಪ್ರಶ್ನೆ ಬಂದಾಗ ಗುಂಪಿನಲ್ಲಿ ಬಲಾಢ್ಯರೆನಿಸಿಕೊಂಡಿದ್ದ ವೀರ ಶೂರರು ಅದನ್ನು ನಿರ್ವಹಿಸಲು ಪ್ರಾರಂಭಿಸಿದರು. ಇಂತಹ ಕ್ಷಾತ್ರತ್ವವೇ ವ್ಯಕ್ತಿಗಳನ್ನು ಕ್ಷತ್ರಿಯರನ್ನಾಗಿ ಮಾಡಿತು. ಇದೇ ಗುಂಪು ಮುಂದೆ ಕ್ಷತ್ರಿಯರೆಂದು ಗುರುತಿಸಲ್ಪಟ್ಟಿತು. ಕ್ಷತ್ರಿಯರೆಂದು ಗುರುತಿಸಲ್ಪಟ್ಟ ಇವರಲ್ಲಿ ಸುಮಾರು ೫೫ ಕ್ಕೂ ಹೆಚ್ಚು ಒಳಪಂಗಡಗಳಿರುವುದನ್ನು ಕಾಣಬಹುದು. ಇವುಗಳಲ್ಲಿ 'ಸೂರ್ಯ' ಮತ್ತು 'ಚಂದ್ರ' ವಂಶೀಯ ಪಂಗಂಡಗಳಿದ್ದು, ಸೂರ್ಯ ವಂಶೀಯರನ್ನು ಉತ್ತರ ಭಾರತದವರೆಂದೂ, ಚಂದ್ರವಂಶೀಯರನ್ನು ದಕ್ಷಿಣ ಭಾರತದವರೆಂದೂ ಗುರುತಿಸಲಾಗಿದೆ. ಕ್ಷತ್ರಿಯರಲ್ಲಿ ಉಪಕುಲ ಮತ್ತು ಶಾಖೆಗಳಿದ್ದು, ಸೂರ್ಯ ವಂಶದವರಲ್ಲಿ ಬ್ರಹ್ಮನಾಗ ಮತ್ತು ಹರಿ (ಯದು)ಗಳೆಂಬ ಉಪಶಾಖೆಗಳನ್ನು

ಕಾಣಬಹುದು.. ಇದೇ ರೀತಿ ಮರಾಠಿ ಕ್ಷತ್ರಿಯರಲ್ಲಿ ೯೬, ರಜಪೂತರಲ್ಲಿ ೩೬, ಗೋಸಾವಿ ಕ್ಷತ್ರಿಯರಲ್ಲಿ ೧೭, ಮಾಳಿ ಕ್ಷತ್ರಿಯರಲ್ಲಿ ೨೨, ಬ್ರಹ್ಮ ಕ್ಷತ್ರಿಯರಲ್ಲಿ ೪೯ ಒಳಭೇದದ ಕುಲಗಳು ಕ್ಷತ್ರಿಯ ವರ್ಣದಲ್ಲಿ ಸೇರಿವೆ.

ಕ್ಷತ್ರಿಯರಲ್ಲಿ ಸೂರ್ಯವಂಶೀಯರೇ ಪ್ರಮುಖರು ಹಾಗೂ ಬಹುಸಂಖ್ಯಾತರು.[೨೫] ಇವರು ಅಗ್ನಿಯ ಆರಾಧಕರು. ಅಗ್ನಿಯ ವಾಹನ ಮೇಷ (ಕುರಿ). ಇವುಗಳನ್ನು ಸಾಕುತ್ತಿದ್ದವರು ಕುರುಬರು. ಕುರುಬರಲ್ಲಿದ್ದ ವೀರರೇ ಕಾಲಾನಂತರದಲ್ಲಿ ಸೂರ್ಯವಂಶೀಯ ಕ್ಷತ್ರಿಯರೆಂದು ಗುರುತಿಸಿಕೊಂಡರು. ಸೂರ್ಯವಂಶದಲ್ಲಿ ಬರುವ ಪುರಾಣ ಪ್ರಸಿದ್ಧ ರಘು, ಹರಿಶ್ಚಂದ್ರ, ವಸುದೇವ, ನಾರಾಯಣ, ಬಲರಾಮ ಮುಂತಾದವರೆಲ್ಲಾ ಪಶುಪಾಲಕ ಕುಲದವರೇ ಆಗಿದ್ದಾರೆ.[೨೬]

**ಹಂಡೆ ಕುರುಬರು:**

'ಹಂಡೆ'ಎನ್ನುವ ಪದ ಮಹಾಭಾರತ ಕಾಲದಿಂದಲೂ ಬಳಕೆಯಲ್ಲಿದೆ. ಶ್ರೀಕೃಷ್ಣ ಅಂಧಕ–ವೃಷ್ಣಿ ಕುಲದವನು. ಯಾದವರಿಗೆ ಅಂಧಕ–ವೃಷ್ಣಿ ಎಂಬ ಕುಲನಾಮವಿದೆ. ಅಂಧಕ ವೃಷ್ಣಿಗಳು ಯಾದವ ವಂಶೀಯ ದನಗಾರರಾಗಿದ್ದರೆಂದು ಪ್ರೊ..ಪ್ರಿಲಾಸ್ಕಿ ಅವರು ಸಂಶೋಧಿಸಿದ್ದಾರೆ. ಶಂಬಾ ಅವರು ಆರ್ಯೇತರರಾಗಿರುವ ಇವರು ಗೋಪಾಲಕರು ಕೂಡ ಎಂದು ಒಪ್ಪಿಕೊಳ್ಳುತ್ತಾರೆ.[೨೭] "ಯಾದವಂ ಗೋಧನೇ" (ಮಹಿಷಾದಿಕೇ) ಇಲ್ಲಿನ ಯಾದವಂ 'ರಸಾರ್ಥ' ಶಬ್ದವಾಗಿದೆ. ಅನ್ನಾಹಾರಕ್ಕೆ ಸಮನಾದ ಇನ್ನೊಂದು ಆಹಾರವೇ ರಸಾಹಾರ. 'ರಸ' ಎಂಬಲ್ಲಿ 'ಹಾಲು' ಎಂದೇ ಅರ್ಥ ಬರುತ್ತದೆ.

ಭಾರತದ ಸಿಂಧೂ ನದಿ ಪ್ರದೇಶದಲ್ಲಿ ಹಂಡೆ ಕುರುಬ, ಮತ್ತು ಅಂಡೆಕುರುಬ ಎಂಬ ಎರಡು ಪಂಗಡಗಳಿವೆ. 'ಅಂಡಿ' ಮತ್ತು 'ಅಂಡರ' ಗೋವಳರ ಕುಲಕ್ಕೆ ಸಂಬಂಧಿಸಿದವು ಎಂದು ಶಂಬಾ ಅವರು ಅಭಿಪ್ರಾಯಪಟ್ಟಿದ್ದಾರೆ. ಕ್ರಿ.ಶ ೫ ನೇ ಶತಮಾನದಲ್ಲಿ 'ಅಂಡಿ' ಕುರುಬರು ಮಹಾರಾಷ್ಟ್ರದಲ್ಲಿ ಹಾಲಿನ ವ್ಯಾಪಾರಿಗಳಾಗಿದ್ದರು. ಇವರನ್ನು ಮಹಾರಾಷ್ಟ್ರದಲ್ಲಿ 'ಕುಲಪತ್' ಎಂತಲೂ, ತಮಿಳಿನಲ್ಲಿ 'ಇಡೈಯಾರ್' ಎಂತಲೂ ಕರೆಯಲಾಗುತ್ತದೆ. ಈ ಹೆಸರುಗಳು ಹಟಗಾರ, ದನಗಾರ ಎಂಬ ಅರ್ಥವನ್ನು ಹೊಂದಿವೆ. ಅಂಡೆಗಳು ಹಟಗಾರ, ದನಗಾರರೇ ಆಗಿದ್ದು ಇವರ ವೃತ್ತಿಯೂ ಸಹ ಪಶುಪಾಲನೆಯೇ ಆಗಿದ್ದಿತು. ಅಂಡರ್ ಮತ್ತು ಅಂಡೆ ಜಾತಿಯ ಜನರು ತಮಿಳು, ಆಂಧ್ರ, ಮತ್ತು ಕರ್ನಾಟಕಗಳಲ್ಲಿ ಕಂಡುಬರುತ್ತಾರೆ. ಮುಂದೆ ಬಳಕೆಗೆ ಬಂದ ಅಂಧಕ ಎಂಬ ವೃತ್ತಿವಾಚಿ ಪದವೇ ಕಾಲಾಂತರದಲ್ಲಿ ಪ್ರದೇಶವಾಚಕವಾಗಿ 'ಆಂಧ್ರ' ಎಂದಾಗಿರುವ ಬಗ್ಗೆ ಅನೇಕ ವಿದ್ವಾಂಸರು ಸಮರ್ಥಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಈಗಲೂ ದನಗಾರರಲ್ಲಿ 'ಹಂಡೆ' ಎಂಬ

ಉಪಜಾತಿ ಇರುವುದನ್ನು 'ಶಂಬಾ' ಉಲ್ಲೇಖಿಸುತ್ತಾರೆ.[೨೮]

ಕರ್ನಾಟಕದಲ್ಲಿ ಹಂಡೆ ಕುರುಬರ ಕುರಿತು ೧೨ನೆಯ ಶತಮಾನದಲ್ಲಿ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ಹಾಲು, ಮೊಸರು, ಬೆಣ್ಣೆ, ತುಪ್ಪ ಮಾರುವ ಕುರುಬರನ್ನು 'ಹಂಡೆಕುರುಬ'ಎಂದು ಕರೆಯಲಾಗಿದೆ. 'ಸಿದ್ಧಮಾಂಕ ಚರಿತೆ' ಅಥವಾ 'ತಗರ ಪವಾಡ' ಹಾಗೂ ಮುದ್ದೇಬಿಹಾಳದ ಸರೂರು ಗ್ರಾಮದಲ್ಲಿ ದೊರೆತಿರುವ ಹಸ್ತ ಪ್ರತಿಗಳಲ್ಲಿ ಹಂಡೆ ಕುರುಬರ ಪ್ರಸ್ತಾಪವಿದೆ. ಈ ದಾಖಲೆಗಳ ಪ್ರಕಾರ ಕಲ್ಯಾಣ ಪಟ್ಟಣದಲ್ಲಿ ಹಂಡೆ ಕುರುಬರು, ಟೊಳ್ಳಾದ ಬಿದಿರು ಬಂಬುಗಳಲ್ಲಿ, ಹಾಲು ಮೊಸರನ್ನು ಹೊತ್ತು ಮಾರುತ್ತಿದ್ದರು. ಹಾಗೆಯೇ ಸತ್ತ ಕುರಿಗಳನ್ನು ಉದ್ದವಾದ ಬಂಬುಗಳ ಮೇಲಿಟ್ಟು ಮಾರುತ್ತಿದ್ದರು. ಇದನ್ನು ಜನವಿರೋಧಿಸಲಾಗಿ ಕಲ್ಯಾಣದ ರಾಜ; ಹಂಡೆ ಕುರುಬರನ್ನು ನಗರ ಪ್ರವೇಶಿಸದಂತೆ ಬಹಿಷ್ಕರಿಸಿ ಉಚ್ಚಾಟಿಸುತ್ತಾನೆ.

ಹಾಲ (ಕಂಬಿಗೆ) ಸತ್ತ ಕುರಿ ಮಾಂಸವಕಟ್ಟಿ
ಸಾಲುವಿಡಿದು ಕಂಬಿ ಬರಲು
ಮೇಲನರಿಯದ ರಾಯನು ಮಾದಿಗರು ಗೂಡಿ
ಹಾಳು ಮಾಡಿದರು ಪಟ್ಟಣವ (೩–೫೫ ಸಿದ್ಧಮಂಕ ಚರಿತೆ)
ಒಂದು ದಿನದಿ ಸತ್ತ ಕುರಿಯ ಕಂಬಿಯ ಮೇಲೆ
ಬಂಧಿಸಿ ತಂದರೆಮ್ಮ
ತಂದು ಮೊಸರ ಮಾರುತಿರಲು ನಮ್ಮವರೆಲ್ಲ
ಬಂದಿತು ಕೇಡು ಕೇಳೊಡೆಯ॥ (ಪದ್ಯ ೪೯, ಸಂಧಿ ೬ ತಗರಪವಾಡ)]

ಹಂಡೆ ಕುರುಬರು ಎಂದರೆ ಸತ್ತ ಕುರಿಗಳನ್ನು ಮಾರುವವರು ಎಂಬ ಅಂಶ ಇಲ್ಲಿ ಸ್ಪಷ್ಟವಾಗಿದೆ. ಅಂದು ಈಗಿನಂತೆ ಮಾಂಸದ ಅಂಗಡಿಗಳು ಇರುತ್ತಿರಲಿಲ್ಲ. ಹಾಲು–ಮೊಸರು ಮಾರುವವರೆ ಹಟ್ಟಿಯಲ್ಲಿ ಸತ್ತ ಕುರಿ ಆಡುಗಳನ್ನೂ ಹೊತ್ತು ಮಾರುತ್ತಿದ್ದರು. ಇಂದಿಗೂ ಮಹಾರಾಷ್ಟ್ರದಲ್ಲಿ 'ಹಾಂಡೆ' ಎಂದು ಕರೆಯಲ್ಪಡುವ 'ಹಂಡೆಕುರುಬರು' ಮಾಂಸದ ವ್ಯಾಪಾರ ಮಾಡುತ್ತಾರೆ. ಇವರನ್ನು 'ಖಾಟಿಕಾ ಕುರುಬ' ಎಂತಲೂ ಅಲ್ಲಿನ ಜನರು ಸಂಬೋಧಿಸುತ್ತಾರೆ. ಸರೂರ ಒಡೆಯರು ಸಂಪಾದಿಸಿರುವ ತಗರ ಪವಾಡದ ಹಸ್ತ ಪ್ರತಿಯ ಒಂದನೆಯ ಸುರುಳಿಯಲ್ಲಿ, ಉಣ್ಣೆಕಂಕಣ, ಹತ್ತಿಕಂಕಣ, ಹಂಡೆಕುರುಬ, ಆವಾಗುರುಬ, ಪಂಚಮಗುರುಬ, ಕಂಬಳಿಗುರುಬ, ಉಪಪಂಗಡಗಳನ್ನು ಕಾಣಬಹುದಾಗಿದೆ.[೨೯]

## ಮರಾಠರು:

ಮರಗಳಿಂದ ಗುಡಿಸಲುಗಳನ್ನು ನಿರ್ಮಿಸಿಕೊಂಡು ಹಟ್ಟಿ ಅಥವಾ ಊರುಗಳನ್ನು ಕಟ್ಟಿಕೊಂಡ ಪಶುಪಾಲಕರೇ ಮರಹಟ್ಟಿ, ಮರ್ಹಾಟಿ, ಮರಾಠಿಗರಾಗಿದ್ದಾರೆ ಎನ್ನುತ್ತಾರೆ ಶಂಬಾಜೋಶಿಯವರು. ಮರಾಠಿ ಜನವಾಚಿ ಶಬ್ದವೇ ಹೊರತು ಜಾತಿವಾಚಿಯಲ್ಲ ಎಂಬುದು ಕೂಡ ಶಂಬಾ ಅವರ ತೀರ್ಮಾನವಾಗಿದೆ. ಮರಾಠಿಗರಲ್ಲಿ ಪ್ರಮುಖವಾಗಿ ಎರಡು ಒಳಭೇದಗಳಿವೆ. ೧. ಬಾರಾಮಾಸಿ ಮರಾಠ ೨. ಅಕರಮಾಸಿ ಮರಾಠ. ಇಲ್ಲಿ 'ಮಾಸಿ' ಎಂಬ ಶಬ್ದ 'ಶುದ್ಧ' ಎಂಬರ್ಥದಲ್ಲಿ ಬಳಕೆಯಾಗಿದೆ. ಇವರಲ್ಲಿ ಸೂರ್ಯವಂಶಿ ಮತ್ತು ಚಂದ್ರವಂಶಿ ಕುಲದ ಶಾಖೆಯವರು ಇದ್ದಾರೆಂದು ಮರಾಠರ ಇತಿಹಾಸ ಹೇಳುತ್ತದೆ.[೩೦] ಶಿವಾಜಿಯ ತಾತ 'ಬಾರ್ಗಿ' ದನಗರನಾಗಿದ್ದು, ಉಣ್ಣೆ ನೇಕಾರರ ಕುಲದವನಾಗಿದ್ದನು. ಮರಾಠಿ ದನಗಾರರಲ್ಲಿ 'ಬಾರಗಿ' ಮತ್ತು 'ಸಾದಾ' ಎಂಬ ಎರೆಡು ಒಳಪಂಗಡಗಳಿದ್ದು ಇವುಗಳು ವೃತ್ತಿ ಭೇದದಿಂದುಂಟಾಗಿವೆ ಎಂದು ಶಂಬಾ ಜೋಶಿಯವರು ಸ್ಪಷ್ಟಪಡಿಸುತ್ತಾರೆ.[೩೧]

ಮರಾಠರ ಆರಾಧ್ಯ ದೇವರುಗಳಾದ, ಭವಾನಿ (ಎಲ್ಲಮ್ಮ), ಪರ್ವತಮಲ್ಲಯ್ಯ (ಮಹಾದೇವ), ಭೋಗೇಶ್ವರಿ, ಸೂರ್ಯಕಾಂತಿ, ಜ್ಯೋತಿಬಾ, ಜೋಗವ್ವ, ಇವರೆಲ್ಲಾ ಕುರುಬ ಜನಾಂಗದ ಕುಲದೈವಗಳೇ. ಈ ದೇವರುಗಳ ಪೂಜೆಗೆ ಸಾಮಾನ್ಯವಾಗಿ ಅರಿಶಿನ ಮತ್ತು ಸಿಂಧೂರವನ್ನು ಹೆಚ್ಚು ಬಳಕೆ ಮಾಡುತ್ತಾರೆ ಎಂದು ಶಂಬಾ ಜೋಶಿ ಅವರು ಹೇಳುತ್ತಾರೆ. ಮರಾಠ, ಗೌವ್ವಳ, ದನಗರ, ಹಟ್ಟಿಕಾರ ಇವುಗಳೆಲ್ಲಾ ಕುರುಬರ ಹೆಸರಿನ ಬೇರೆ ಬೇರೆ ಪದಗಳಾಗಿವೆ.

## ರಡ್ಡಿಗರು:

ಕರ್ನಾಟಕ ಮತ್ತು ಆಂಧ್ರದಲ್ಲಿರುವ 'ರಡ್ಡಿ' ಸಮುದಾಯ ಧಾರ್ಮಿಕವಾಗಿ ಹೇಮರಡ್ಡಿ ಮಲ್ಲಮ್ಮ (ನರಸಾಂಬಾಳ್)ಳನ್ನು ತಮ್ಮ ಕುಲದೈವವೆಂದು ಸ್ವೀಕರಿಸಿದ್ದಾರೆ. ಈ ಹೇಮರಡ್ಡಿ ಮಲ್ಲಮ್ಮ ಮತ್ತು ಅವರ ವಂಶಸ್ಥರು ಕುಡುಒಕ್ಕಲಿಗರ ಮತ್ತು ಕುರುಬರ ಸೋದರ ಸಂಬಂಧಿಗಳೆಂದು ಕಂಡುಬರುತ್ತಾರೆ. ಇವರ ವಿವಾಹ ಸಮಯದಲ್ಲಿ ಮನೆಯ ಮುಂದೆ ನೆಡುವ ಹಾಲುಗಂಭವು, ಇವರು ಮೊದಲು ಹಾಲುಮತದವರು ಎಂಬುದನ್ನು ಬಹಿರಂಗಪಡಿಸುತ್ತದೆ. ಮದುವೆ ಮನೆ ಮುಂದೆ ಹಾಲುಗಂಭ ಸ್ಥಾಪಿಸುವ ಪರಂಪರೆ, ಹಾಲುಮತದವರಲ್ಲಿ ಅನಾದಿಕಾಲದಿಂದಲೂ ರೂಢಿಯಲ್ಲಿದೆ. ರಡ್ಡಿ ಜನಾಂಗದ ವಿವಾಹ ಸಮಾರಂಭದಲ್ಲಿ ಮೊದಲು ಕುರುಬರಿಗೆ ವೀಳ್ಯ ನೀಡಲಾಗುತ್ತದೆ. ಹಾಗೆಯೇ ಹಾಲುಮತಸ್ತರ ಸಂಪ್ರದಾಯದಂತೆ ರಡ್ಡಿಗಳು ಸಹ ಮದುವೆ ಮಂಟಪ ಹಾಕಿ ಹಾಲುಗಂಬ ಸ್ಥಾಪಿಸಿ ಅದಕ್ಕೆ ಉಣ್ಣೆಯ ಕಂಕಣ ಕಟ್ಟಿ ಮುತ್ತೈದೆಯರು ಪೂಜೆ ಸಲ್ಲಿಸುತ್ತಾರೆ. (ಕೆಲವರು ಹತ್ತಿ ಕಂಕಣವನ್ನು ಕಟ್ಟುತ್ತಾರೆ)

ಕುಲಾಚರಗಳಲ್ಲಿ ಕಂಬಳಿ ಗದ್ದುಗೆಯನ್ನೇ ಬಳಸುತ್ತಾರೆ. ಇಂದು ರಡ್ಡಿಗಳ ಮನೆಗಳಲ್ಲಿ ಕಂಬಳಿ ಇಲ್ಲವಾಗಿದ್ದರೂ, ಶಾಸ್ತ್ರಕ್ಕಾಗಿ ಹೊಸ ಕಂಬಳಿಯನ್ನೇ ಖರೀದಿಸುತ್ತಾರೆ. ಮದುವೆಯ ಪ್ರತಿಹಂತದಲ್ಲಿ ಕುರುಬರ ಆಚರಣೆಗಳೇ ಎದ್ದು ಕಾಣುತ್ತವೆ. ಆದ್ದರಿಂದ ರಡ್ಡಿಗಳು ಹಾಲುಮತದವರ ಪೂರ್ವ ಸಂಬಂಧಿಗಳೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.[೨೧] ಹಾಗಾಗಿಯೇ ಕನಕದಾಸರ ಹೆಗಲ ಮೇಲೆ ಯಾವಾಗಲೂ ಕಂಬಳಿಯಿರುತ್ತಿದ್ದುದನ್ನು ಇಲ್ಲಿ ಗಮನಿಸಬಹುದು.

ಇದೆಲ್ಲದರ ಜೊತೆಗೆ ಸಮಾಜದಲ್ಲಿ ಯಾವುದೇ ಜನಾಂಗದವರು ಶುಭಕಾರ್ಯಗಳನ್ನು ಮಾಡುವಾಗ ಕುರುಬರಿಂದ ಪೂಜೆ ಮಾಡಿಸುವುದು, ಹಾಗೂ ವ್ಯಾಪಾರ ಮಾಡುವವರು ಕುರುಬರಿಂದಲೇ ಮೊದಲು ಬೋಣಿಗೆ ಮಾಡಿಸುವುದು ರೂಢಿ. ಒಂದು ವೇಳೆ ಕುರುಬರು ದೊರೆಯದೇ ಇದ್ದಾಗ ರಡ್ಡಿಗಳಿಂದಲೇ ಆ ಕೆಲಸವನ್ನು ಮಾಡಿಸುತ್ತಾರೆ. ಆಂಧ್ರದ ರಡ್ಡಿಗಳು ಮಾಂಸಾಹಾರಿಗಳು. ಉತ್ತರ ಕರ್ನಾಡಕದ ರಡ್ಡಿಗಳು ವೀರಶೈವತ್ವವನ್ನು ಸ್ವೀಕರಿಸಿರುವುದಂದಿನಿಂದ ಮಾಂಸಹಾರವನ್ನು ತ್ಯಜಿಸಿದ್ದಾರೆ.

ಕರ್ನಾಟಕದಲ್ಲಿರುವ ರಡ್ಡಿಗಳಲ್ಲಿ ಸುಮಾರು ೩೦ ಕ್ಕಿಂತಲೂ ಅಧಿಕ ಬೆಡಗುಗಳಿವೆ. ಇವರಲ್ಲಿ ಶಿವಪೂಜಕರು ಹಾಗೂ ವಿಷ್ಣುಪೂಜಕರು ಎಂಬ ಎರಡು ಭೇದಗಳಿವೆ. ಆದರೂ ವಿಷ್ಣುಪೂಜಕರಾದ ವೈಷ್ಣವರು ನಾಮಧಾರಿಗಳಾಗಿ ತಿರುಪತಿ ತಿಮ್ಮಪ್ಪನ ಒಕ್ಕಲಾಗಿದ್ದಾರೆ. ಮೂಲತಃ ತಿರುಪತಿ ತಿಮ್ಮಪ್ಪನೇ ಬೀರಪ್ಪ. ಕೆಲವು ರಡ್ಡಿಗಳ ಶುಭಕಾರ್ಯಗಳಿಗೆ ವೈಷ್ಣವ ಬ್ರಾಹ್ಮಣರು, ಮತ್ತೆ ಕೆಲವು ರಡ್ಡಿಗಳಿಗೆ ಜಂಗಮರು ಪುರೋಹಿತರಾಗಿರುತ್ತಾರೆ. ಏಕೆಂದರೆ ವೈಷ್ಣವರಾಗಲಿ ಜಂಗಮರಾಗಲಿ ಹಾಲುಮತದವರೇ ಆಗಿರುವುದರಿಂದ, ವೈಷ್ಣವ ದೀಕ್ಷೆ ಪಡೆದ ಮೇಲೆ ಜನಿವಾರ ಹಾಕಿಕೊಂಡು ಇವರೆಲ್ಲಾ ಬ್ರಾಹ್ಮಣರೆನಿಸಿಕೊಂಡರು. ಹಾಗಾಗಿಯೇ ವೈಷ್ಣವ ರಾಮಾನುಜಾಚಾರ್ಯರು ಹಾಲುಮತ ಮೂಲದ ಹೂಗಾರ ಒಳಪಂಗಡಕ್ಕೆ ಸೇರಿರುವುದನ್ನು ಇಲ್ಲಿ ಸ್ಮರಿಸಬಹುದು.[೨೨]

**ಜಾಡರು:**

ಕನ್ನಡದ ಜಾಡ, ಪ್ರಾಕೃತದ 'ಝಾಡ' ಎಂಬ ಪದದಿಂದ ನಿಷ್ಪತ್ತಿಗೊಂಡಿದೆ. ಉತ್ತರ ಭಾರತದ ಎಲ್ಲಾ ಭಾಷೆಗಳಲ್ಲಿ ಝಾಡ ಪದವು ಮರ, ಗಿಡ, ಎಂಬರ್ಥದಲ್ಲಿ ಬಳಕೆಯಾಗಿದೆ. ಮಾನವ ತನ್ನ ವಿಕಾಸ ಕ್ರಮದಲ್ಲಿ ಪ್ರಕೃತಿ ದತ್ತವಾದ ಮಳೆ, ಚಳಿ, ಗಾಳಿ, ಬಿಸಿಲುಗಳಿಂದ ದೇಹವನ್ನು ರಕ್ಷಿಸಿಕೊಳ್ಳಲು ಆರಂಭದಲ್ಲಿ ಮರಗಳನ್ನೇ ಆಶ್ರಯಿಸಿದನು. ಮರದ ಹಣ್ಣುಗಳೇ ಈತನಿಗೆ ಆಹಾರವಾದವು. ಕಾಲಾನಂತರದಲ್ಲಿ ಇದೇ ಕಾಡುಮಾನವ ಓರನ್, ತೆಂಗು, ತಾಳೆ ಮುಂತಾದ ಮರಗಳಿಂದ

ತೊಗಟೆ(ಪೊರೆ, ಪಟ)ಯನ್ನು ತೆಗೆದು ಅದನ್ನು ಬಟ್ಟೆ*ಯ ರೂಪದಲ್ಲಿ ಉಪಯೋಗಿಸುವುದನ್ನು ಕಲಿತನು. ಇಂತಹ ಕಲೆಯಲ್ಲಿ ಕರಗತವಾದ ಗುಂಪನ್ನು 'ಜಾಡವ' ಎಂದು ಕರೆಯಲಾಯಿತು. ಹಾಗೆಯೇ ಕೆಲವರು ತಾವು ವಾಸಿಸುತ್ತಿದ್ದ ಗಿಡಮರಗಳಿಂದ ಗಿಡಮೂಲಿಕೆಯ ಔಷಧಿ ಬಲ್ಲವರಾದರು. ಇವರನ್ನು 'ಮರವ' ಎಂದು ಕರೆಯಲಾಯಿತು. (ಹನುಮಂತ 'ಮರವ' ಜನಾಂಗದ ಮುಖಂಡ) ಆದ್ದರಿಂದ ಜಾಡರು ಮತ್ತು ಮರವರು ಮೂಲ ಪಶುಪಾಲಕರಾಗಿದ್ದು ವೃತ್ತಿ ಭೇದದಿಂದಾಗಿ ಎರಡು ಪಂಗಡಗಳಾಗಿ ಬೆಳೆದರು.

ಈ ಹಿನ್ನೆಲೆಯ ಜಾಡರನ್ನು ಇಂದು ದೇವಾಂಗ, ನೇಕಾರ, ಜೇಡ, ಝಾಡಿ, ಕೋಷ್ಠಿ, ಪಟವೆಗಾರ, ಮುಂತಾದ ನಾಮಗಳಿಂದ ಗುರುತಿಸುತ್ತಾರೆ. ಜಾಡರು ಮೊದಲು ನಾರಿನಿಂದ ಬಟ್ಟೆ ತಯಾರಿಕೆಯನ್ನು ಕಲಿತರು. ಸಂಸ್ಕೃತದಲ್ಲಿ ನಾರಿಗೆ 'ವಲ್ಕಲ' ಎಂದು ಹೆಸರು. ರಾಮಾಯಣ ಮಹಾಭಾರತಗಳಲ್ಲಿ ವಲ್ಕಲಾ ಬಟ್ಟೆಗಳ ಉಲ್ಲೇಖವು ದೊರೆಯುತ್ತದೆ. ನಾಗರಿಕತೆ ವಿಕಾಸಗೊಂಡಂತೆಲ್ಲಾ ಹೆಚ್ಚು ಕಾಲ ಬಾಳಿಕೆಗೆ ಬರದ ನಾರಿನ ಬಟ್ಟೆಗಳ ಸ್ಥಾನದಲ್ಲಿ ಜಾಡರು ಕುರಿಗಳ ತುಪ್ಪಳದಿಂದ ಉಣ್ಣೆ ಬಟ್ಟೆ ತಯಾರಿಕೆಗೆ ತೊಡಗಿದರು. ಈ ಬಟ್ಟೆಗಳಿಂದ ಮಾನವ ಹೆಚ್ಚು ಸುರಕ್ಷತೆಯನ್ನು ಕಂಡುಕೊಂಡ. ಉಣ್ಣೆ ಬಟ್ಟೆ ನೇಕಾರಿಕೆಯು, ಹೆಚ್ಚು ಮಹತ್ವ ಪಡೆದು ಕುರುಬರಿಗೆ ಹೆಚ್ಚು ಲಾಭ ತಂದುಕೊಟ್ಟಿತು.

ಜಗತ್ತಿನಲ್ಲಿ ಉಣ್ಣೆ ನೇಕಾರಿಕೆ ಮೊದಲು ಪ್ರಾರಂಭವಾದದ್ದು ಭಾರತದಲ್ಲಿಯೇ. ಈ ಬಟ್ಟೆಯನ್ನು ಜಗತ್ತಿನ ವಿವಿಧ ದೇಶಗಳಿಗೆ ನಿರ್ಯಾತ ಮಾಡುವ ಪ್ರಕ್ರಿಯೆಯೂ ಪ್ರಾರಂಭವಾಯಿತು. ವೀರರೂ ಶೂರರೂ ಆದ ಕುರುಬರು ಆರ್ಥಿಕವಾಗಿ ಸದೃಢರಾದ ಮೇಲೆ ಸುಲಭವಾಗಿ ಅರಸರಾದರು. ಇದರ ಪ್ರತಿಫಲವೇ ಭಾರತದಲ್ಲಿ ಮೌರ್ಯ, ಶಾತವಾಹನ, ಪಲ್ಲವ, ಗಂಗರು, ಚೋಳರು, ಪಾಂಡ್ಯರು, ಚಾಲುಕ್ಯರು, ಕಳಚೂರಿ, ಕುಂತಲ, ಭೋಜ, ಕಂಭೋಜ, ಭೋಸಲೆ, ಹೋಳ್ಕರ ಮುಂತಾದ ಉಣ್ಣೆ ನೇಕಾರ ಮನೆತನಗಳು ರಾಜ್ಯ ಕಟ್ಟಿ ಆಡಳಿತವನ್ನೂ ನಡೆಸಿದರು. ಈ ರಾಜ್ಯಾಡಳಿತವನ್ನು ನಡೆಸಲು ಉಣ್ಣೆ ನೇಕಾರಿಕೆಯ ಉತ್ಪಾದನೆ, ಮಾರಾಟಗಳಿಂದ ಬರುವ ಆದಾಯವೇ ರಾಜರಿಗೆ ತೆರಿಗೆ ರೂಪದಲ್ಲಿ ಹೆಚ್ಚು

---

* 'ಪಟ' ಉಚ್ಚಾರದೋಷದಿಂದ ಬಟ್ಟೆ ಆಗಿದೆ. ಪ್ರಾಚೀನ ಈಜಿಪ್ಟಿನಲ್ಲಿ ಭಾರತದ ಬಟ್ಟೆಗಳಿಗೆ 'ಪಟ' ಎಂದೇ ಕರೆಯಲಾಗುತ್ತಿತ್ತು. 'ಪಟ' ಎಂಬ ವಸ್ತ್ರವಾಚಕ ಶಬ್ದ ಪ್ರಾಕೃತ ಮತ್ತು ಬಹುರೂಪಿ ಭಾಷೆಯದ್ದು–ಡಾ.ಪಂಚಾನನ ಮಿತ್ರ.

ಬರುತ್ತಿತ್ತು. ಈ ಕಾರಣಕ್ಕಾಗಿಯೇ 'ನಂದ'ರ ನಂತರ ಎಲ್ಲಾ ಉತ್ತರ ಭಾರತದ ರಾಜರು ದಕ್ಷಿಣದ ಕಡೆ ದಂಡೆತ್ತಿ ಬಂದದ್ದು.[೩೪]

ನೇಕಾರಿಕೆ ವೃತ್ತಿ ವಿಕಾಸಗೊಂಡಂತೆ ಉಪಕಸುಬುಗಳು ಹುಟ್ಟಿಕೊಂಡವು. ಇದರಿಂದ ಹಿಂಜುವ, ನೂಲುವ, ಲಡಿತೋಡುವ, ಹಾಸುತೋಡುವ, ಉಂಕಿಮಾಡುವ, ಕುಂಚಿ ಮಾಡುವ, ಬಣ್ಣಹಾಕುವ, ನೇಯುವ, ಕರಿಕಟ್ಟುವ, ಹೊತ್ತುಮಾರುವ, ಬಟ್ಟೆಹೊಲೆಯುವ, ಬಟ್ಟೆ ಒಗೆಯುವ ಮುಂತಾದ ಕಸುಬುಗಳು ಒಂದೊಂದಾಗಿ ಹುಟ್ಟಿಕೊಂಡವು. ಜೊತೆಗೆ ಸೀರೆ, ಕುಪ್ಪಸ, ಧೋತರ, ತಟ್ಟು, ಜಾಡಿ, ಪಂಚೆ ಎಂಬ ಬಟ್ಟೆಗಳ ವಿವಿಧ ಪ್ರಕಾರಗಳು ಬಳಕೆಗೆ ಬಂದವು.

**ಒಕ್ಕಲಿಗರು :**

ಕಾಡುಮಾನವ ಬೇಟೆಗಾರನಾಗಿ, ಪಶುಪಾಲಕನಾಗಿ ವಿಕಾಸಗೊಳ್ಳುತ್ತಿದ್ದ ಸಂದರ್ಭದಲ್ಲಿ ತಾವು ವಾಸಿಸುತ್ತಿದ್ದ ಹಾಗೂ ನೀರಿದ್ದ ಪ್ರದೇಶಗಳಲ್ಲಿ ಕೆಲವು ಬೀಜಗಳನ್ನು ನಾಟಿ ಮಾಡಿ ಫಲ ನೀಡುವ ಗಿಡ ಮರ ಬೆಳಸತೊಡಗಿದನು. ನಂತರ ತನಗೆ ತಿನ್ನಲು ಇಷ್ಟವಾದ ಧಾನ್ಯಗಳನ್ನು ಬಿತ್ತಿ ಬೆಳೆಯತೊಡಗಿದನು. ಪಶುಪಾಲನೆಯ ಜೊತೆಗೆ ಒಕ್ಕಲುತನವನ್ನು ಉಪಕಸುಬಾಗಿ ಸ್ವೀಕರಿಸಿದನು. ವಿಶ್ವದಲ್ಲಿ ಒಕ್ಕಲುತನವು ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ ಪ್ರಾರಂಭಗೊಂಡಿತೆಂದು ಸಂಶೋಧನಾ ವರದಿಗಳು ಹೇಳುತ್ತವೆ.

ಹೀಗೆ ಕೃಷಿ ಚಟುವಟಿಕೆ ಆರಂಭದಿಂದಾಗಿ ಮಾಂಸಹಾರದ ಜೊತೆಗೆ ಸಸ್ಯಹಾರವನ್ನೂ ರೂಢಿಸಿಕೊಂಡನು. ಕೃಷಿಗೆ ಯೋಗ್ಯವಾದ ನೀರಿನ ಪ್ರದೇಶಗಳಲ್ಲಿ ತೋಟಗಾರಿಕೆ, ಮಳೆಯಾಧಾರಿತ ಪ್ರದೇಶಗಳಲ್ಲಿ ಒಣ ಬೇಸಾಯವನ್ನೂ ಮಾಡತೊಡಗಿದನು. ಇದರಿಂದ ಕೆಲವು ಪಶುಪಾಲಕರು ಕೃಷಿಯನ್ನೇ ಉಪವೃತ್ತಿಯನ್ನಾಗಿ ಮಾಡಿಕೊಂಡಿದ್ದರಿಂದ ಇವರೇ ಒಕ್ಕಲಿಗರೆನಿಕೊಂಡರು.

ಕರ್ನಾಟಕದ ಒಕ್ಕಲಿಗರಲ್ಲಿ ಮೈಸೂರು ಪ್ರದೇಶದ ಒಕ್ಕಲಿಗರು, ಉತ್ತರಕರ್ನಾಟಕದ ಒಕ್ಕಲಿಗರು, ಎಂಬ ಎರಡು ಪಂಗಡಗಳಿವೆ. ಉತ್ತರ ಕರ್ನಾಟಕದ ಒಕ್ಕಲಿಗರನ್ನು 'ಕುಡ' ಒಕ್ಕಲಿಗರೆಂದೂ, ಮೈಸೂರು ಭಾಗದ ಒಕ್ಕಲಿಗರನ್ನು 'ಒಕ್ಕಲಿಗ ಗೌಡ' ಎಂದು ಕರೆಯಲಾಗುತ್ತದೆ.

ಮಹಾಭಾರತದ ಕಾಲದಲ್ಲಿ ಕುರುಬರು ಹಾಗೂ ಒಕ್ಕಲಿಗರನ್ನು ಸೋದರರೆಂದು ಗುರುತಿಸಲಾಗಿದೆ. ಶ್ರೀಕೃಷ್ಣ, ವೃಷ್ಣಿ(ಕುರಿ) ಕುಲದವನು. ಅವನ ಕೈಯಲ್ಲಿ ಪಶುಪಾಲನೆಯ ಮಹತ್ವವನ್ನು ಬಿಂಬಿಸುವ ಹಾಗೂ ಸಂಪರ್ಕ ಸಾಧನಗಳಾದ ಕೊಳಲು ಮತ್ತು ಶಂಖವಿದೆ. ಶ್ರೀಕೃಷ್ಣನ ಸಹೋದರನಾದ ಬಲರಾಮ ಕೃಷಿಯ

ಸಂಕೇತವಾದ ನೇಗಿಲನ್ನು ಧರಿಸಿದ್ದಾನೆ. ಹಾಗಾಗಿ ಪಶುಪಾಲಕರು ಕೃಷಿಕರು, ಮೂಲದಲ್ಲಿ ಅಣ್ಣತಮ್ಮಂದಿರು. ಈ ಕಾರಣದಿಂದಾಗಿಯೇ ವ್ಯಾಸರು ಪಶುಪಾಲನೆ ಮತ್ತು ಕೃಷಿಯ ಮೂಲ ಒಂದೇ ಕುಟುಂಬದಲ್ಲಿರುವಂತೆ ಮಹಾಭಾರತ ಕಥೆ ರಚಿಸಿರುವುದು.

'ಒಕ್ಕಲಿಗ' ಎಂಬ ಕೃಷಿ ವೃತ್ತಿ ವಾಚಕ ಪದವು ಮಧ್ಯ ಯುಗದಿಂದ ಅಸ್ತಿತ್ವಕ್ಕೆ ಬಂದಿದೆ. ಬ್ರಿಟಿಷರ ಆಡಳಿತ ಕಾಲದಲ್ಲಿ ಯಾರನ್ನು ಒಕ್ಕಲಿಗ ಎನ್ನಬೇಕು ಎಂಬ ದೊಡ್ಡ ಗೊಂದಲವೇ ಇದ್ದಿತು. ೧೭೯೯ ಮತ್ತು ೧೮೦೪ ರಲ್ಲಿ ಮೈಸೂರು ರಾಜ್ಯದಲ್ಲಿ ನಡೆಸಿದ ಜನಗಣತಿ ಸಂದರ್ಭದಲ್ಲಿ ಒಕ್ಕಲಿಗ ಪದದ ಅರ್ಥವ್ಯಾಪ್ತಿಯಲ್ಲಿ ಕೃಷಿಕರು ಮತ್ತು ಪಶುಪಾಲಕರು ಒಳಗೊಂಡಿದ್ದರು. ೧೮೭೧ ರ ಜನಗಣತಿಯಲ್ಲಿ ಇದನ್ನೇ ಮುಂದುವರೆಸಿದರು.[೩೫] ೧೯೦೧ ರ ಜನಗಣತಿಯ ನಂತರ ಒಕ್ಕಲಿಗ ಜಾತಿಯನ್ನು ಪ್ರತ್ಯೇಕ ಜಾತಿಯೆಂದು ಪರಿಗಣಿಸಲಾಯಿತು.

ಒಕ್ಕಲಿಗರಿಗೆ 'ಗೌಡ' ಎಂಬ ಉಪನಾಮವಿದ್ದು ಇದು 'ಗೊಂಡ' ಪದದಿಂದ ನಿಷ್ಪನ್ನಗೊಂಡಿದೆ. ಗೊಂಡ ಪದವು ಗೊಂಡಾರಣ್ಯದಲ್ಲಿ ಪಶುಪಾಲನೆ ಮಾಡುತ್ತಿದ್ದ ಬುಡಕಟ್ಟು ಜನಾಂಗವನ್ನು ನಿರ್ದೇಶಿಸುತ್ತದೆ. ಈ ಒಕ್ಕಲಿಗರ ಒಳಪಂಗಡಗಳಲ್ಲಿನ 'ಕುಂಚಿಟಿಗ' ಎಂಬ ಪದವು 'ಕುಂಚ'ದಿಂದ ಹುಟ್ಟಿಕೊಂಡಿದೆ. ಕುರುಬರು ಕಂಬಳಿ ನೇಕಾರಿಕೆಗೆ ಕುಂಚವನ್ನು ಬಳಸುತ್ತಿದ್ದು, ಈ ಕುಂಚದಿಂದ 'ಸರಿ' ಹಚ್ಚುವ ಉಪಕಸುಬನ್ನು ಕೆಲವರು ಮಾಡುತ್ತಿದ್ದರು. ಆದ್ದರಿಂದ ಇವರಿಗೆ 'ಕುಂಚಟಿಗ' ಎಂಬ ವೃತ್ತಿ ವಾಚಕ ಶಬ್ದ ಪ್ರಚಲಿತವಾಯಿತು.[೩೬] ಹಾಗೆಯೇ 'ಗಂಗಟೆಕಾರ' ಎನ್ನುವ ಪದಕ್ಕೆ ಡಾ.ವೈ.ಸಿ. ಭಾನುಮತಿ ಅವರು 'ಕುರಿಸಾಕುವವ' ಎಂಬ ಅರ್ಥ ಉಂಟೆಂದು ಹೇಳುತ್ತಾರೆ.[೩೭] ಜೊತೆಗೆ ಡಾ.ದೇ.ಜವರೇಗೌಡರು ಪಶುಪಾಲನೆ ಮತ್ತು ಬೇಟೆ ಹಿನ್ನೆಲೆಯಲ್ಲಿ ಬದುಕುತ್ತಿದ್ದ ಗುಂಪುಗಳು ಕ್ರಮೇಣ ಬೇಸಾಯ ಅರಿತ ಮೇಲೆ ಕೃಷಿಗೆ ಬೇರ್ಪಟ್ಟಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ.

**ಲಾಳಗೊಂಡರು:**

ಒಕ್ಕಲಿಗರಂತೆಯೇ ಕಂಡುಬರುವ ಲಾಳಗೊಂಡರು ತಮಿಳುನಾಡು, ಆಂಧ್ರ, ಮಹರಾಷ್ಟ್ರ ಹಾಗೂ ಕರ್ನಾಟಕದ ಬಳ್ಳಾರಿಯಿಂದ, ದೊಡ್ಡಬಳ್ಳಾಪುರದವರೆಗೂ ಕಂಡು ಬರುತ್ತಾರೆ. ಕರ್ನಾಟಕದ ಲಾಳಗೊಂಡರಲ್ಲಿ ಕುರುಬಗೊಂಡ, ಒಡೆಯಗೊಂಡ, ಕುಡಒಕ್ಕಲಿಗ, ಲಾಳಕೊಂಡ, ರಾಜಗೊಂಡ, ಸಾಸಲಿಂಗಾಯತಗೊಂಡ, ಹೆಳವಗೊಂಡ ಎಂಬ ಪಂಗಡಗಳಿದ್ದು,'ಗೊಂಡ'ಎಂಬುದು ಪಶುಪಾಲಕ ವೃತ್ತಿಯನ್ನು ಸೂಚಿಸುತ್ತದೆ. 'ಲಾಣ' ಎಂಬುದು ಮಧ್ಯಪ್ರದೇಶದ ಗಡಿ ಭಾಗವಾಗಿದ್ದು 'ಗೊಂಡ' ಎಂಬ ರಾಜರು

ಇದನ್ನು ಆಳುತ್ತಿದ್ದರಿಂದ ಈ ಭಾಗದವರನ್ನು 'ಲಾಣಗೊಂಡ'ರೆಂದು ಕರೆಯಲಾಯಿತು. ಎಂದು ಆರ್.ವಿ.ರಸೇಲ್ ಅಭಿಪ್ರಾಯ ಪಡುತ್ತಾರೆ.[೩೮]

ಲಾಳಗೊಂಡೇಶ್ವರ ಪುರಾಣದ ಪ್ರಕಾರ (ಸಿದ್ಧರಾಮ ಶಾಸ್ತ್ರಿಗಳು) ಕೆಲವು ಅಲೆಮಾರಿ ಪಶುಪಾಲಕರು, ತಮ್ಮ ಸಾಮಾನುಗಳನ್ನು ಎತ್ತುಗಳ ಮೇಲೆ ಲಗಳೆ ಹಾಕಿಕೊಂಡು ಸಂಚರಿಸುತ್ತಿದ್ದರಿಂದ ಇವರಿಗೆ 'ಲಾಳಗೊಂಡ' ಎಂಬ ಹೆಸರು ಬಂದಿರಬೇಕೆಂದು ಊಹಿಸುತ್ತಾರೆ. 'ಲಾಳಿ ಎಂದರೆ ನೇಯ್ಗೆಯವರು ಎಂಬ ಅರ್ಥವೂ ಬರುತ್ತದೆ. ಕಂಬಳಿ ನೇಕಾರಿಕೆಯಲ್ಲಿ ಲಾಳಿಯನ್ನು ಬಳಸಲಾಗುತ್ತದೆ. ಇವರಲ್ಲಿ ಕಂಬಳಿ ಬಗ್ಗೆ ಪೂಜ್ಯ ಭಾವನೆಯೂ ಇದೆ. ಹಾಗಾಗಿ ಕಂಬಳಿ ನೇಕಾರ ಕುರುಬರಾಗಿದ್ದು, ಇವರು ಭಂಡಾರ ಸಂಸ್ಕೃತಿಯಿಂದ ವಿಭೂತಿ ಸಂಸ್ಕೃತಿಯತ್ತ ವಾಲಿರಬಹುದು. ಇವರ ಮನೆ ದೇವರು ಮೈಲಾರ. ಈಗಲೂ ಮಂಗಳ ಕಾರ್ಯಗಳಲ್ಲಿ ಲಾಳಗೊಂಡರು ಭಂಡಾರ(ಅರಿಶಿಣ)ವನ್ನೇ ಬಳಸುತ್ತಾರೆ.

**ಬೇಡರು:**

'ಬೇಡ' ಪದದ ನಿಷ್ಪತ್ತಿಯನ್ನು ವೇಂಟಿಗ, ಬೇಂಟಿಗ, ಬೇಟಿಗ, ಬೇಟೆಗಾರ ಎಂದು ಬಿಡಿಸಲಾಗಿದೆ. ಕರ್ನಾಟಕದಲ್ಲಿ ಬೇಡರನ್ನು ಕುರಿತು ವ್ಯಾಧ, ಫಣಿ, ಬೇಂಟೆಗಾರ ಬಿಲ್ಲ, ಶಬರ, ವಾಲ್ಮೀಕಿ, ಬೇಡ, ನಾಯಕ, ತಳವಾರ, ಕಣ್ಣಯ್ಯ ಮುಂತಾದ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಈ ಬೇಡರಲ್ಲಿ ಊರಬೇಡ, ಮ್ಯಾಸಬೇಡ* (ಅಡವಿ ಬೇಡ) ಎಂಬ ಎರಡು ಒಳಪಂಗಡಗಳಿವೆ. ಮ್ಯಾಸಬೇಡರಿಗೆ ಗೊಲ್ಲರು ಹತ್ತಿರದ ಸಂಬಂಧಿಗಳು, ಈ ಇಬ್ಬರು ಒಟ್ಟಾಗಿಯೇ ಪಶುಪಾಲನೆ ಮಾಡುತ್ತಿದ್ದರು.[೩೯] ಈ ಸಮಾಜದವರೇ ಹೇಳುವಂತೆ ಬೇಡರಲ್ಲಿ ಕೆಲವರು ಹಟ್ಟಿಗಳನ್ನು ಕಟ್ಟಿಕೊಂಡು ಕೃಷಿಯಲ್ಲಿ ತೊಡಗಿದ್ದರಿಂದ ಊರ ಬೇಡರಾದರು. ಊರಬೇಡರು ಕೃಷಿಗೆ ಮಹತ್ವ ನೀಡಿ ಪಶುಪಾಲನೆಯನ್ನು ಉಪಕಸುಬನ್ನಾಗಿ ಸ್ವೀಕರಿಸಿದರು. ವಾಯುವ್ಯ ಭಾರತದಲ್ಲಿ ಕುರಿ, ಆಡು ಮೇಯಿಸುವವರನ್ನು ಭೇಡ-ಬಕರಿ-ಚಿರವಾಯಿ(ಭೇಡ=ಕುರಿ, ಬಕರಿ=ಆಡು, ಚಿರವಾಯಿ= ಮೇಯಿಸುವವನು) ಎಂದು ಕರೆಯುತ್ತಾರೆ. ಈ ಕುರಿಗಾರರು ಕರ್ನಾಟಕಕ್ಕೆ ಬಂದಾಗ ಬೇಡ ಚಿರವಾಯಿ, ಇಲ್ಲವೆ ಬೇಡ ಎಂಬ ಹೆಸರಿನೊಂದಿಗೆ ಪರಿಚಯಿಸಿಕೊಂಡರು.

ಉತ್ತರ ಭಾರತದ ಕುರುಬರಲ್ಲಿ ಸಿಗುವ ಬೆಡಗುಗಳಾದ ಸೂರ್ಯವಂಶ, ಚಂದ್ರವಂಶ, ಪ್ರತಿಹಾರ, ದೇವಲ, ರಘೋಜಿ, ರಾಜಪುತ್ರ, ಗುಜ್ಜರು, ಮುಂತಾದವು

---

*'ಮ್ಯಾಸ' ಪದವು ಮೇಯಿಸು, ಮೇಯಿಸುವವರು, ಮೇಸರ್ರು ಎಂಬ ಮೂಲದಿಂದ ಬಂದಿದೆ.

ವಾಲ್ಮೀಕಿ (ಬೇಡ) ಜನಾಂಗದಲ್ಲಿಯೂ ಕಂಡು ಬರುತ್ತಿರುವುದು ಸೋಜಿಗದ ಸಂಗತಿ. ಹೀಗೆಯೇ ಮ್ಯಾಸಬೇಡರು ಶೈವಾರಾಧಕರಾಗಿದ್ದು ಪಶುಪಾಲಕರ ಬುಡಕಟ್ಟಿನ ಲಕ್ಷಣಗಳನ್ನೇ ಹೊಂದಿದ್ದಾರೆ.[೪೦]. ಮ್ಯಾಸಬೇಡ ಹಟ್ಟಿಗಳು ಸಹಜವಾಗಿ ಪಶುಗಳ ಹೆಸರನ್ನು ಹೊಂದಿರುತ್ತವೆ. ಕುರಿಹಟ್ಟಿ, ಎತ್ತಿನಹಟ್ಟಿ, ಗೊಲ್ಲರಹಟ್ಟಿ ಎಂದು.[೪೧] ಈ ಎಲ್ಲ ಕಾರಣದಿಂದ ಬೇಡರು ಮೂಲದಲ್ಲಿ ಪಶುಪಾಲಕರೇ ಆಗಿದ್ದು (ಕುರಿಗಾರರು) ಉತ್ತರಭಾರತದಿಂದ ದಕ್ಷಿಣ ರಾಜ್ಯಗಳತ್ತ ವಲಸೆ ಬಂದ ಕಾರಣ ಸ್ಥಳೀಯ ಕುರುಬರಿಗಿಂತ ಸ್ವಲ್ಪ ಭಿನ್ನರಾಗಿ ಕಾಣುತ್ತಾರೆ.

**ಈಳಿಗ(ಈಡಿಗ)ರು :**

ತಮಿಳು ಭಾಷೆಯ 'ಇಡೈಯ್ಯ' ಕನ್ನಡದ ಈಳಿಗ(ಈಡಿಗ) ಆಗಿದೆ. ಇಡೈಯ್ಯ ಪದವನ್ನು ತಮಿಳಿನಲ್ಲಿ ಪ್ರಾಚೀನ ಕಾಲದಿಂದಲೂ ಕುರುಬರಿಗೆ ಬಳಸಲಾಗುತ್ತಿದೆ. ಆಂಧ್ರ, ಕೇರಳ, ಕರ್ನಾಟಕ, ತಮಿಳುನಾಡಿನ ಈಳಿಗರಲ್ಲಿ ಕಳ್ಳುಬಳ್ಳಿಯ ಸಂಬಂಧವಿದೆ. ತಮಿಳಿನಲ್ಲಿ 'ಇಡೈಯ್ಯ' ಎಂದರೆ ಕಳ್(ಹೈನುಗಾರರು) ಹಾಲು ಉತ್ಪಾದಕರು ಎಂದು ಗುರುತಿಸಲಾಗಿದೆ.[೪೨] ಹೀಗೆಯೇ ಪಶುಪಾಲನಾ ವೃತ್ತಿಯಿಂದ ಬೇರೆ ಬೇರೆ ಕಾರಣಗಳಿಂದಾಗಿ ಕವಲೊಡೆದಿರುವ ಕೊರವ, ಡೊಮರ, (ದೊಂಬ), ಕೋಲಾಟಿಗ, ಅಂಬಿಗ, ಮೀನುಗಾರ, ಬಿಲ್ಲುಗಾರ, ಕೋಲುಕಾರ, ದಂಡಪಾಣಿ, ಗಡೆಕಾರ, ಎಂಬ ವೃತ್ತಿ ಪ್ರಧಾನ ಜಾತಿಗಳು ಹುಟ್ಟಿಕೊಂಡವು. ಇದಕ್ಕೆಲ್ಲಾ ಮೂಲವಾದವರು ಪಶುಪಾಲಕರೇ ಎಂಬುದನ್ನು ಇಲ್ಲಿ ಮರೆಯುವಂತಿಲ್ಲ. ಈ ಎಲ್ಲಾ ಕಸುಬು ಆಧಾರಿತ ಜಾತಿಗಳು ಮುಂದೆ ಸಮಾಜದ ತಳ ಸಮುದಾಯದ ಜಾತಿಗಳಾಗಿ ಗುರುತಿಸಲ್ಪಟ್ಟಿದ್ದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು.

## ಕೊನೆ ಟಿಪ್ಪಣಿಗಳು:

೧. ಡಾ. ಎಸ್.ಎಸ್. ಅಂಗಡಿ: ಕುರುಬ ಸಮುದಾಯ, ಆನಂದ ಕಂದ ಗ್ರಂಥಮಾಲೆ, ಪುಟ.ಸಂ. ೨೧

೨. ಡಾ. ಚಂದ್ರಕಾಂತ ಬಿಜ್ಜರಗಿ: ಕುರುಬರ ಹೆಜ್ಜೆಗಳು–ಪುಟ.ಸಂ. ೩೫

೩. ಅದೇ ಪುಟ. ಸಂ. ೩೫

೪. ಅದೇ ಪುಟ. ಸಂ. ೩೬

೫. ಅದೇ ಪುಟ. ಸಂ. ೩೬

೬. ದಿನಾಂಕ ೨೯–೦೮–೨೦೦೪ರಂದು ಡಿಸ್ಕವರಿ ಚಾನಲ್‌ನಲ್ಲಿ The real eve ಸಂಜೆ ೮ ರಿಂದ ೧೦ ಘಂಟೆಯವರೆಗೆ ಮಾಡಲಾದ ಪ್ರಸಾರದ ಆಧಾರ ಪಡೆಯಲಾಗಿದೆ.

೭. ಡಾ.ಪ.ವಿ.ವರ್ತಕ, ವಾಸ್ತವರಾಮಾಯಣ ಮೂಲ ಮರಾಠಿ ಕನ್ನಡಕ್ಕೆ ಹೇಮಂತರಾಜ.– ಪುಟ.ಸಂ.೨೬೬

೮. ಡಾ. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು–ಪುಟ.ಸಂ. ೧೮

೯ಎ. ಶಂಬಾ ಜೋಶಿ, ಮರ್ಹಾಠಿ, ಸಂಸ್ಕೃತಿ ಕೆಲವು ಸಮಸ್ಯೆಗಳು, ಮರಾಠಿಯಿಂದ ಕನ್ನಡಕ್ಕೆ ಅನುವಾದ ಕೀರ್ತಿನಾಥ ಕುರ್ತುಕೋಟಿ, ಪುಟ.ಸಂ. ೪೧

೯ಬಿ. ಡಾ. ಎಸ್.ಎಸ್.ಅಂಗಡಿ, ಕುರುಬ ಸಮುದಾಯದ ಭಾಷೆ ಆನಂದಕಂದ ಗ್ರಂಥಮಾಲೆ, ಪುಟ.ಸಂ.೬

೯ಸಿ. (ಅನು) ಜಿ. ರಾಮಕೃಷ್ಣ, ಲೋಕಾಯತ ಪುಟ. ಸಂ. ೧೬೯

೯ಡಿ. (ಸಂ) ಡಾ. ಎಫ್.ಟಿ. ಹಳ್ಳಿಕೇರಿ, ಹಾಲುಮತ ಅಧ್ಯಯನ, ಲೇಖನ ಡಾ. ಎಸ್.ಎಸ್.ಅಂಗಡಿ, ಹಾಲುಮತ ಸಂಸ್ಕೃತಿ, ಶಂಬಾ ಜೋಶಿ ಚಿಂತನೆಗಳು, ಪುಟ.ಸಂ. ೧೩೪

೧೦. ವಿಜಾಪುರ ಗೆಜೆಟಿಯರ್ ೧೯೯೯– ಪುಟ. ಸಂ. ೧೦೪೧

೧೧ Toy knowledge vol..೩೦ (encyclopedia) page. ೧೧೫೮

೧೨. ಅದೇ.ಪುಟ.ಸಂ. ೧೧೬೦

೧೩. ಡಿಸ್ಕವರಿ ಚಾನೆಲ್, ಸಾಕ್ಷ್ಯಚಿತ್ರದ ಪ್ರಸಾರ, ದಿನಾಂಕ:೨೦–೦೮–೨೦೦೪

೧೪. (ಸಂ) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ಕನ್ನಡ ವಿಶ್ವಕೋಶ (ಇತಿಹಾಸ ಮತ್ತು ಪುರಾತತ್ವ). ಪುಟ.ಸಂ. ೧೦೪

೧೫. ಡಿಸ್ಕವರಿ ಚಾನೆಲ್ ವರದಿಯನ್ನು ಆಧರಿಸಿ, ದಿನಾಂಕ:೨೦–೦೮–೨೦೦೪೧೬. ಬಿ.ಎಂ.ಶರ್ಮ (ಕನ್ನಡಕ್ಕೆ), ವೊಲ್ಗಾ–ಗಂಗಾ, ಮೂಲ ರಾಹುಲ ಸಾಂಕೃತ್ಯಾಯನ, (ಕ್ರಿ.ಪೂ.೬೦೦೦ ದಿಂದ ಕ್ರಿ.ಶ.೧೯೪೨) ಪುಟ.ಸಂ.೬೬

೧೭. ಡಾ. ಚಂದ್ರಕಾಂತ ಬಿಜ್ಜರಗಿ: ಕುರುಬರ ಹೆಜ್ಜೆಗಳು, ಪುಟ.ಸಂ.೧೬

೧೮. ಅದೇ ಪುಟ ಸಂ. ೩೦

೧೯. ಅದೇ ಪುಟ ಸಂ.೩೧

೨೦. ಬಿ.ಎಂ. ಶರ್ಮ (ಕನ್ನಡಕ್ಕೆ), ವೋಲ್ಗಾ–ಗಂಗಾ, ಮೂಲ ರಾಹುಲ ಸಾಂಕೃತ್ಯಾಯನ,(ಕ್ರಿ.ಪೂ. ೬೦೦೦ ದಿಂದ ಕ್ರಿ.ಶ.೧೯೪೨) ಪುಟ.ಸಂ.೬೬

೨೧. ದೇ. ಪಾಂಡುರಂಗರಾಯ, ವಿಜಯನಗರ ಸಾಮ್ರಾಜ್ಯ, ಪುಟ.ಸಂ.೯೪

೨೨. (ಸಂ) ಡಾ.ಎಸ್.ಸಿ.ಪಾಟೀಲ, ಡಾ.ಸರಸ್ವತಿ, ಲೇಖನ, ದಿಗಂಬರ ಶ್ವೇತಾಂಬರ ಪರಂಪರೆಗಳಲ್ಲಿ ಆದಿಪುರಾಣ ಪ್ರಸಂಗಗಳು. ಪುಟ.ಸಂ.೧೭

೨೩. ಡಾ. ಚಿದಾನಂದ ಮೂರ್ತಿ–ಬಸವಣ್ಣ, ಕರ್ನಾಟಕ, ಭಾರತ ಪುಟ.ಸಂ. ೧೭೮

೨೪. (ಅನು) ಕುಮಾರ ವೆಂಕಣ್ಣ ಅಸ್ಪೃಷ್ಯರು, ಪುಟ.ಸಂ. ೭೮

೨೫. (ಅನು) ಎಸ್.ಪಿ.ಪಾಟೀಲ, ಲೇಖನ, ಡಾ. ವಿದ್ಯಾಧರ ಜೋರಾಪೂರಕರ ಮಹಾವೀರ ಉಪದೇಶ ಪರಂಪರೆ–ಪುಟ.ಸಂ. ೧–೫

೨೬. ಬಿ.ಎಸ್. ರಾಮಭಟ್ಟ: ಬುಡಕಟ್ಟು ಜನಾಂಗದ ಕುರುಬರು: ಚಾರಿತ್ರಿಕ ವಿಶ್ಲೇಷಣೆ (ಲೇಖನ) ಕಸ್ತೂರಿ ಮಾಸ ಪತ್ರಿಕೆ ಸೆಪ್ಟೆಂಬರ್ ೨೦೦೩. ಪುಟ.ಸಂ. ೩೪–೩೫

೨೭. ಶಂ.ಬಾ. ಜೋಶಿ: ಶಂಬಾ ಕೃತಿ ಸಂಪುಟ ಪುಟ.ಸಂ ೧೩೮

೨೮. ಅದೇ ಪುಟ.ಸಂ. ೧೩೭

೨೯. ರಾಜೇಶ ದೀಕ್ಷಿತ: ನವನಾಥ ಚರಿತೆ–ಪುಟ.ಸಂ.೪೧೬

೩೦. ವಿ.ಕಾ. ರಾಜವಾಡೆ ಮರಾಠ್ಯಾಂಚೆ, ಇತಿಹಾಸಾಂಚಿ ಸಾಧನೆ ೮ನೆಯ ಖಂಡ– ಪುಟ.ಸಂ. ೯೩–೯೫

೩೧. ಶಂಬಾ.ಜೋಶಿ: ಶಂಬಾ ಕೃತಿ ಸಂಪುಟ–೨ ಪುಟ–ಸಂ. ೩೪೪

೩೨. ಅದೇ ಪುಟ.ಸಂ. ೧೯೬

೩೩. ಡಾ. ಚಂದ್ರಕಾಂತ ಬಿಜ್ಜರಗಿ: ದಾರ್ಶನಿಕ ಕವಿ ಕನಕದಾಸರು, ಪುಟ ಸಂ. ೧೭೮

೩೪. ಡಾ. ಚಂದ್ರಕಾಂತ ಬಿಜ್ಜರಗಿ,ಕುರುಬರ ಹೆಜ್ಜೆಗಳು_ಪುಟ.ಸಂ ೨೩೪

೩೫. B.I.Rice: Mysore Gazetteer 1897. Page. 318

೩೬. ಡಾ. ಚಂದ್ರಕಾಂತ ಬಿಜ್ಜರಗಿ: ಕುರುಬರ ಹೆಜ್ಜೆಗಳು_ಪುಟ.ಸಂ ೨೪೪

೩೭ ಡಾ. ವೈ.ಸಿ. ಭಾನುಮತಿ, 'ಮಲೆನಾಡ ಶೈವ ಒಕ್ಕಲಿಗರು ಒಂದು ಜಾನಪದೀಯ ಅಧ್ಯಯನ' ಪುಟ.ಸಂ. ೧೩೪

೩೮. R.V. Russell : The tribes and cast of the central prominees of India. ೧೯೭೫ New Delhi

೩೯. (ಸಂ) ಹರ್ತಿಕೋಟೆ ವೀರೇಂದ್ರಸಿಂಹ, ಡಾ. ಅಮರೇಶ ಯತಗಲ್, ಲೇಖನ, ಡಾ. ಎಂ.ಎನ್.ವೆಂಕಟೇಶ, ವಾಲ್ಮೀಕಿ ಮಂದಾರ, ಪುಟ.ಸಂ. ೧೩೪

೪೦. ಆರ್.ಬಿ. ಕಿತ್ತೂರ: ವಾಲ್ಮೀಕಿವಂಶಜರ ವಂಶಗಳು, ಗೋತ್ರಗಳು ಹಾಗೂ ಬೆಡಗುಗಳು, ಪುಟ.ಸಂ.೨೦೬

೪೧. (ಸಂ).ಹರ್ತಿಕೋಟೆ ವೀರೇಂದ್ರ ಸಿಂಹ, ಡಾ.ಅಮರೇಶಯತಗಲ್, ಲೇಖನ ಡಾ. ಎಲ್.ಲಕ್ಷ್ಮಿದೇವಿ. ಬೇಡನಾಯಕ ಬುಡಕಟ್ಟಿನ ವೈವಿಧ್ಯತೆಗಳು. ಪುಟ.ಸಂ. ೮೬

೪೨. ಡಾ. ಚಂದ್ರಕಾಂತ ಬಿಜ್ಜರಗಿ: ಕುರುಬರ ಹೆಜ್ಜೆಗಳು ಪುಟ.ಸಂ. ೨೬೪

# ಅಧ್ಯಾಯ–ಮೂರು

## ಮೌಖಿಕ ಮಹಾ ಕಾವ್ಯಗಳಲ್ಲಿ ಪಶುಪಾಲನಾ ಪರಂಪರೆಯ ಸಮೀಕ್ಷೆ

"ಜನವಾಣಿ ಬೇರು ಕವಿವಾಣಿ ಹೂವು" ಎಂದು 'ಶ್ರೀ' ಅವರು ಹೇಳಿದ ಮಾತು ಅರ್ಥಪೂರ್ಣವಾದುದು. ಯಾವುದೇ ದೇಶದ ಅಥವಾ ಜನಾಂಗದ ಶಿಷ್ಟ ಸಾಹಿತ್ಯ ಮತ್ತು ಸಂಸ್ಕೃತಿಯ ಮೂಲ ನೆಲೆ; ಆ ದೇಶದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಸುಪ್ತವಾಗಿ ಅಡಗಿರುವುದನ್ನು ಕಾಣಬಹುದು. ಜಗತ್ಪ್ರಸಿದ್ಧ ರಾಮಾಯಣ, ಮಹಾಭಾರತ, ಇಲಿಯೆಡ್, ಓಡಿಸ್ಸಿ, ಅರೇಬಿಯನ್ ನೈಟ್ಸ್, ಮುಂತಾದ ಮಹಾ ಕಾವ್ಯಗಳಿಗೆ ಜನಪದ ಸಾಹಿತ್ಯವೇ ಮೂಲ ಆಕರ ಎಂದು ವಿದ್ವಾಂಸರು ಗುರುತಿಸಿದ್ದಾರೆ.

ಅಕ್ಷರ ಸಂಸ್ಕೃತಿಯ ಶಿಷ್ಟ ಸಾಹಿತ್ಯ ರೂಪುಗೊಳ್ಳುವುದಕ್ಕಿಂತಲೂ, ಮೊದಲು ಮೌಖಿಕ ಪರಂಪರೆಯ ಜನಪದ ಸಾಹಿತ್ಯವು ಶ್ರೀಮಂತವಾಗಿ ಬೆಳೆದಿರುವುದನ್ನು ಕಾಣಬಹುದು. ಕನ್ನಡದ ಪ್ರಥಮ ಕೃತಿಯಾದ ಕವಿರಾಜ ಮಾರ್ಗವು "ಪದನರಿದು ನುಡಿಯಲುಂ ನುಡಿದುದನರಿದಾರೆಯಲು ಮಾರ್ಪರ ನಾಡವರ್ಗಳ್ ಚದುರರ್ ನಿಜದಿಂ ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂದು ಕನ್ನಡ ಜನಪದರ ಕಾವ್ಯ ರಚನಾ ಪರಿಣತಿಯನ್ನು ಕುರಿತು ಬಾಯಿ ತುಂಬಾ ಬಣ್ಣಿಸಿರುವುದು ಕೂಡ ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನೇ ಪ್ರತಿಬಿಂಬಿಸುತ್ತದೆ.[೧]

ನಮ್ಮ ನಾಡಿನಲ್ಲಿ ದೊರೆಯುವ ಅಪಾರವಾದ ಮೌಖಿಕ ಸಾಹಿತ್ಯವನ್ನು ನಮ್ಮ ಅಧ್ಯಯನದ ಅನುಕೂಲಕ್ಕಾಗಿ ಗದ್ಯ ಮತ್ತು ಪದ್ಯ ಸಾಹಿತ್ಯವೆಂದು ವಿಂಗಡಿಸಲಾಗಿದೆ. ಜನಪದ ಕಥೆ, ಒಗಟು, ಒಡಪು, ಗಾದೆ ಮುಂತಾದವುಗಳು 'ಗದ್ಯ ಸಾಹಿತ್ಯ' ಪ್ರಕಾರಕ್ಕೆ ಸೇರಿದರೆ, ಬೀಸುವ, ಕುಟ್ಟುವ ಹಾಡುಗಳು, ಸೋಬಾನೆಯ ಪದಗಳು, ತೊಟ್ಟಿಲ ಹಾಡುಗಳು, ಕೋಲು ಪದಗಳು, ಮದುವೆ ಸಂಪ್ರದಾಯದ ಹಾಡುಗಳು, ಹಂತಿಯ ಹಾಡುಗಳು, ಹೋಳಿಯ ಹಾಡುಗಳು, ಜೋಕುಮಾರನ ಹಾಡುಗಳು, ಡೊಳ್ಳಿನ ಹಾಡುಗಳು, ಲಾವಣಿ ಹಾಡುಗಳು, ಮಹಾಕಾವ್ಯ ಹಾಗೂ ಕಥನ ಗೀತೆಗಳು (ಕಥನ ಕಾವ್ಯ) 'ಪದ್ಯ ಸಾಹಿತ್ಯ'ಕ್ಕೆ ಸೇರುತ್ತವೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಆದಿ ಜನಾಂಗವಾದ ಪಶುಪಾಲಕರಲ್ಲಿ ಅಪಾರವಾದ ಮೌಖಿಕ ಪರಂಪರೆಯ ಸಾಹಿತ್ಯವಿರುವುದನ್ನು ಕಾಣುತ್ತೇವೆ. ಮೂಲ ಜನಾಂಗವಾದ ಇವರಲ್ಲಿ ಶತಶತಮಾನಗಳಿಂದಲೂ ಈ ಸಾಹಿತ್ಯ ಬಾಯಿಂದ ಬಾಯಿಗೆ ಹರಿದು ಬರುತ್ತಿತ್ತು. ಆದರೆ ನಮ್ಮ ಇತ್ತೀಚಿನ ಆಧುನಿಕ ವಿದ್ವಾಂಸರು ಮೌಖಿಕ ಸಾಹಿತ್ಯವನ್ನು ಹಾಡುವವರ ಮತ್ತು ಹೇಳುವವರ ಬಳಿ ಹೋಗಿ ಅವರೊಂದಿಗೆ ತಾವೂ ಒಬ್ಬರಾಗಿ, ತಿಂಗಳು, ವರ್ಷಗಟ್ಟಲೆ ಅವರೊಂದಿಗಿದ್ದು,

ಹಾಡಿಸಿ, ಹೇಳಿಸಿ, ಸಂಗ್ರಹಿಸಿಕೊಂಡು ಪ್ರಕಟಿಸುತ್ತಿರುವುದರಿಂದ, ಇತ್ತೀಚಿನ ಜನಾಂಗವು ಜನಪದ ಸಾಹಿತ್ಯ ಮತ್ತು ಜನಪದ ಕಲೆಗಳ ಶ್ರೇಷ್ಠತೆಯನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ.

ಮೂಲ ಪಶುಪಾಲಕರಾದ ಕುರುಬ, ಗೊಲ್ಲ ಜಾತಿಯವರ ಜೊತೆಗೆ ಕಸುಬು ಆಧಾರಿತವಾಗಿ ಹುಟ್ಟಿಕೊಂಡ ಕುಂಬಾರ, ನೇಕಾರ, ಚಮ್ಮಾರ ಅಕ್ಕಸಾಲಿಗ ಮುಂತಾದ ಜನಾಂಗದವರು ತಾವು ಆಚರಿಸುತ್ತಿದ್ದ ಹಬ್ಬ-ಹರಿದಿನ, ಜಾತ್ರೆ ಉತ್ಸವ, ಧಾರ್ಮಿಕ ಆಚರಣೆಗಳಂತಹ ಸಂದರ್ಭದಲ್ಲಿ ತಮ್ಮ ಅನುಭವ, ಸಂತೋಷ ಹಾಗೂ ರಂಜನೆಯ ಸಲುವಾಗಿ ಮೌಖಿಕವಾದ ಹಾಡು ಕಥೆಗಳನ್ನು ಕಟ್ಟಿ ಹಾಡುವುದನ್ನು, ಹೇಳುವುದನ್ನು ಮಾಡುತ್ತಾ ಬಂದರು. ಮುಖ್ಯವಾಗಿ ಉತ್ತರ ಕರ್ನಾಟಕದ ಕುರುಬ ಜನಾಂಗವು ಬಹುಪಾಲು, ಮೌಖಿಕ ಸಾಹಿತ್ಯ, ಡೊಳ್ಳಿನ ಹಾಡುಗಳ ಮೂಲಕವೇ ಪರಿಚಿತವಾಗಿದೆ.* ಹಾಗೆಯೇ ಮಧ್ಯ ಮತ್ತು ದಕ್ಷಿಣ ಕರ್ನಾಟಕ ಭಾಗದ ಕುರುಬ ಜನಾಂಗದವರು ತೋಪು(ಪರೇವು), ಜಾತ್ರೆ, ಉತ್ಸವ, ಕೋಲ ಮುಂತಾದ ಧಾರ್ಮಿಕ ಆಚರಣೆಯಂತಹ ಸಂದರ್ಭಗಳನ್ನು ಏರ್ಪಡಿಸಿದಾಗ, ಈ ಮೌಖಿಕ ಸಾಹಿತ್ಯವು ಹಾಡುಗಳ ರೂಪದಲ್ಲಿಯೇ ಪ್ರಸ್ತುತಗೊಂಡಿರುವುದನ್ನು ಕಾಣಬಹುದು. ಹಾಗಾಗಿ ನಮ್ಮ ಜನಪದರ ಡೊಳ್ಳಿನ ಪದಗಳಾಗಲಿ, ಹಾಡುಗಳಾಗಲಿ, ಕಾವ್ಯಗಳಾಗಲಿ, ಆಗತಾನೆ ಹಿಂಡಿದ ನೊರೆ ಹಾಲಿನ ಸ್ವರೂಪದಲ್ಲಿರುತ್ತವೆ.[೨] ಎಂದೇ ಹೇಳಬಹುದು.

ಜನಪದರ ವಿಶೇಷವೆಂದರೆ ಏನನ್ನು ಮುಚ್ಚಿಡುವುದಿಲ್ಲ. ಪಾಲಿಷ್ ಮಾಡುವುದಾಗಲಿ, ಬದುಕಿಗೆ ಚಿತ್ತ ಚಿತ್ತಾರದ ಬಣ್ಣಹಚ್ಚುವುದಾಗಲಿ ಮಾಡುವವರಲ್ಲ. ತಮ್ಮ ಸಂಸಾರದಂತೆಯೇ ತಾವು ನಂಬಿರುವ ದೇವರ ಸಂಸಾರವೂ ಕೂಡ ಎಂದು ನಂಬಿದವರು, ಹಾಗಾಗಿ, ತಮ್ಮ ಹಾಡು, ಕಥೆ, ಕಾವ್ಯಗಳಲ್ಲಿ ಪ್ರೇಮ, ಕಾಮ, ಜಗಳ, ಶಾಂತಿ, ಸುಖ-ದುಃಖ, ಆನಂದ, ಭಕ್ತಿ, ಕಾಯಕ, ಪರಮಸಿದ್ಧಿ, ಮುಂತಾದವುಗಳನ್ನು ತಾವು ಕಂಡಂತೆ, ಅನುಭವಿಸಿದಂತೆಯೇ ಕಟ್ಟುತ್ತಾರೆ.

ಈ ಅಂಶಗಳನ್ನು ಗರ್ಭೀಕರಿಸಿಕೊಂಡಂತೆ ಕಂಡುಬರುವ ಜನಪದರ ಮಹಾಕಾವ್ಯಗಳಾದ, ರೇವಣಸಿದ್ಧನ ಪರಂಪರೆ, ಹಾಲುಮತ ಕಾವ್ಯ, ತಗರ ಪವಾಡ, ಬೀರಪ್ಪನ ಪರಂಪರೆ, ಮಲೆಮಾದೇಶ್ವರ ಕಥೆ, ಜುಂಜಪ್ಪನ ಕಥೆ, ಯತ್ತಪ್ಪನ ಕಥೆ, ಮಂಟೆಸ್ವಾಮಿ ಕಥೆ, ಬಸವಪುರಾಣ, ಕುಮಾರರಾಮ ಕಾವ್ಯ, ಪಿರಿಯಾಪಟ್ಟಣ ಕಾಳಗ, ಗಂಗೆಗೌರಿ ಜಗಳ, ಮೈಲಾರಲಿಂಗನ ಕಾವ್ಯ, ಅಮೋಘಸಿದ್ಧ ಹಾಗೂ

---

* ಈ ಹಾಡುಗಳನ್ನೆಲ್ಲಾ ಸಂಗ್ರಹಿಸಿದರೆ ಬೃಹತ್ ಗಾತ್ರದ ಹತ್ತು ಸಂಪುಟಗಳನ್ನು ಪ್ರಕಟಿಸಬೇಕಾಗುತ್ತದೆ ಎಂದು ಡಾ. ಟಿ.ಎಫ್. ಹಳ್ಳಿಕೇರಿ ಅಂದಾಜಿಸಿದ್ದಾರೆ.

ಮಾಳಿಂಗರಾಯನ ಕಾವ್ಯದಂತಹ ಹತ್ತು ಹಲವಾರು ನೈಜ ಬದುಕಿನ ವಿಷಯ ವಸ್ತುವನ್ನು ಹೊಂದಿದ ಕಥೆಗಳನ್ನು ನಮ್ಮ ಜನಪದರು ಡೊಳ್ಳಿನ ಹಾಡುಗಳು, ಗೊರವರ ಹಾಡುಗಳು. ಕೋಲಾಟ, ಸೋಬಾನೆ, ಪದಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಆದ್ದರಿಂದ ಪ್ರಸ್ತುತ ಸಂದರ್ಭದಲ್ಲಿ ನಾವು ಮೇಲಿನ ಕೆಲವು ಮಹಾ ಕಾವ್ಯಗಳಲ್ಲಿ ಪಶುಪಾಲನೆಯ ಹಿನ್ನೆಲೆ, ಸಂಸ್ಕೃತಿ ಲಕ್ಷಣಗಳು ಹೇಗೆ ಕಂಡುಬರುತ್ತವೆ ಹಾಗೂ ಈ ಕಾವ್ಯಗಳ ಪ್ರಭಾವ ಕನಕದಾಸರ ಮೇಲೆ ಆಗಿದೆಯೇ ಎಂಬುದನ್ನು ಈ ಮುಂದೆ ಚರ್ಚಿಸಲಾಗಿದೆ.

**ಹಾಲುಮತಕಾವ್ಯ**

**ಸ್ವರೂಪ:**

ಭಾರತದ ನೂರಾರು ಸಮುದಾಯದ ಸಂಸ್ಕೃತಿಯು ವೈವಿಧ್ಯಮಯವಾಗಿರುವುದನ್ನು ಇತಿಹಾಸದಿಂದ ತಿಳಿಯಬಹುದು. ಒಂದೊಂದು ಸಮುದಾಯದವರನ್ನು ಅವರದೇ ಆದ ಐತಿಹಾಸಿಕ, ಸಾಹಿತ್ಯಕ, ಸಾಮಾಜಿಕ ಹಿನ್ನೆಲೆಯಲ್ಲಿ ಗುರುತಿಸಬಹುದು. ಇವುಗಳಲ್ಲಿ ಪಶುಪಾಲಕ ಸಮುದಾಯವು ತನ್ನದೇ ಆದ ಮಹತ್ವವನ್ನು ಪಡೆದಿದೆ. ಧರ್ಮ, ಇತಿಹಾಸ, ಆಚರಣೆ, ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ತನ್ನದೇ ಆದ ಮೌಖಿಕ ಪರಂಪರೆಯನ್ನು ಈ ಪಶುಪಾಲಕ ಸಮುದಾಯವು ಬೆಳೆಸಿಕೊಂಡು ಬಂದಿದೆ.

ಹೀಗೆ ಬೆಳೆಸಿಕೊಂಡು ಬಂದ ಮೌಖಿಕ ಕಾವ್ಯಗಳಲ್ಲಿ ಹಾಲುಮತ ಮಹಾಕಾವ್ಯವೂ ಒಂದು. ಈ ಮಹಾಕಾವ್ಯವನ್ನು ಕಲುಬುರ್ಗಿ ಜಿಲ್ಲೆಯ ಶಹಾಪುರ ತಾಲ್ಲೂಕಿನ, ಸೈದಾಪುರದ ಸಿದ್ಧಪ್ಪ ಮೇಟಿಯವರು ಹಾಡಿದ್ದು, ಜನಪದ ವಿದ್ವಾಂಸರಾದ ವೀರಣ್ಣ ದಂಡೆಯವರು ಕಾವ್ಯವನ್ನು ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ.[*೧] ಶಿವ ಸ್ವರೂಪನಾದ ಬೀರಪ್ಪನ ಅಸಾದೃಶ ವ್ಯಕ್ತಿತ್ವವನ್ನು, ಮಾಳಿಂಗರಾಯನ ಗುರುಭಕ್ತಿಯನ್ನು, ಮಾಯವ್ವಳ ಸೋದರ ವಾತ್ಸಲ್ಯದ ಅತಃಕರಣವನ್ನು ಈ ಕಾವ್ಯ ಪ್ರತಿಪಾದಿಸುತ್ತದೆ.

ಜನಪದ 'ಹಾಲುಮತ ಮಹಾಕಾವ್ಯ' ಅಧಿಕೃತವಾಗಿ ಹಾಲುಮತದ[*೨] ಬಗ್ಗೆ ಮಾಹಿತಿಯನ್ನು ಒದಗಿಸುವ ಮೂಲ ಆಕರ. ಮೌಖಿಕ ಪರಂಪರೆಯಲ್ಲಿ ದೊರೆತ ಈ ಕೃತಿ ಜನಪದ ಪುರಾಣ ಕೃತಿ. ಸುದೀರ್ಘವಾಗಿರುವ ಈ ಕೃತಿಯ ಕಥೆಗೆ ಪೌರಾಣಿಕ ನೆಲೆಗಳೇ ಒಂದು ಅಲೌಕಿಕ ಹಾಸನ್ನು ಒದಗಿಸುತ್ತವೆ. ಪ್ರಸ್ತುತ ಈ ಕೃತಿ

---

*೧ ಕನ್ನಡ ಪುಸ್ತಕ ಪ್ರಾಧಿಕಾರದಿಂದ ೨೦೦೦ ದಲ್ಲಿ ಮುದ್ರಿತವಾಗಿದೆ.

*೨ ಈಗಿರುವ ಕುರುಬ ಸಮುದಾಯವನ್ನು ಹಾಲುಮತಸ್ಥರು ಎಂದು ಕರೆಯುವುದು ವಾಡಿಕೆ.

ಸಂಪೂರ್ಣವಾಗಿ ಡೊಳ್ಳಿನ ಹಾಡಿನ ರೂಪದ ಅಂಶಗಣ ಪ್ರಧಾನ ಕಥನರೂಪದ ಕಥೆಯಾಗಿದೆ.

**ವಾಡಿಕೆಯಲ್ಲಿರುವಂತೆ ಕಥೆ:**

ವಾಡಿಕೆಯಂತೆ ಕಥೆಯು ಕೈಲಾಸದಲ್ಲಿ ಪ್ರಾರಂಭವಾಗುತ್ತದೆ. ಹಾಲುಮತ ಸಮುದಾಯದ ದೈವೀಪುರುಷನಾದ ಬೀರಪ್ಪನ ಪವಾಡ ಲೀಲೆಗಳು, ಭರಮದೇವನ ಶಿವನೆಡೆಗಿನ ಭಕ್ತಿ, ಮಾಳಿಂಗರಾಯನ ಭಕ್ತಿ, ರೇವಣಸಿದ್ಧ, ಮಾಯವ್ವ, ಕಮಳಾದೇವಿ, ಕನ್ನಕಾಮವ್ವ, ಶರಣರ ವೃತ್ತಾಂತಗಳನ್ನು ಒಳಗೊಂಡಂತೆ ಒಟ್ಟು ೧೪ ಅಧ್ಯಾಯಗಳನ್ನು ಕಾವ್ಯವು ಹೊಂದಿದೆ.

ಈ ಜನಪದ ಹಾಲುಮತ ಮಹಾಕಾವ್ಯವು ಪೌರಾಣಿಕ ಕಲ್ಪನೆಯ ತಳಹದಿಯ ಮೇಲೆ ಹುಟ್ಟಿದ ಕಾವ್ಯವಾಗಿದೆ. ಇಲ್ಲಿನ ಸನ್ನಿವೇಶಗಳೆಲ್ಲಾ ಪೌರಾಣಿಕ ಮತ್ತು ಜಾನಪದ ಆಶಯಗಳಿಂದ

vÀA©º ÉÆÃVzÉ ಕಥೆಯ ಎಳೆಯ ಉದ್ದಕ್ಕೂ ಒಮ್ಮೆ ಪೌರಾಣಿಕ ಆವರಣ ಪ್ರವೇಶಿಸಿದರೆ, ಮರು ಹೆಜ್ಜೆಗೆ ಸಾಮಾನ್ಯವಾದ ಘಟನೆಗಳನ್ನು ಬಿತ್ತರಿಸುತ್ತಲೇ ಪೌರಾಣಿಕ ಅಂಗಣಕ್ಕೆ ಏರಿ ಹೋಗುತ್ತದೆ. ಕೇಳುಗರಲ್ಲಿ ಭಕ್ತಿ, ನಿಷ್ಠೆಗಳನ್ನು ತುಂಬಲು ಪುರಾಣದ ಲೇಪನ ಕಾರಣವಾಗಿದೆ ಎನ್ನಿಸುತ್ತದೆ. ಕಾವ್ಯದ ಮುಖ್ಯ ನಾಯಕನಾದ ಬೀರಪ್ಪನು ಶಿವನ ಅವತಾರಿಯಂತಿದ್ದು ಆತನ ಪ್ರತಿರೂಪವೇ ಆಗಿದ್ದಾನೆ. ಹಾಗಾಗಿ ಸಂಪೂರ್ಣ ಕಾವ್ಯವು ಶಿವಲೀಲೆ ಎಂಬಂತೆಯೇ ಚಿತ್ರಿತವಾಗಿದೆ.

ಹಾಲುಮತ ಮಹಾಕಾವ್ಯವು, ಹಾಲುಮತ ಸಂಪ್ರದಾಯದ ಆರಾಧ್ಯ ದೈವಗಳಲ್ಲಿ ಪ್ರಮುಖನಾದ 'ಬೀರಪ್ಪ'ನ ವೃತ್ತಾಂತವನ್ನು ನಿರೂಪಿಸುವ ಮಹತ್ವದ ಕೃತಿಯಾಗಿ ಮೂಡಿಬಂದಿದೆ. ಬೀರಪ್ಪ ದಕ್ಷಿಣ ಭಾರತದ ದೇಶೀ ದೈವಗಳಲ್ಲಿ ಒಬ್ಬ. ಕುರುಬ ಸಮುದಾಯದ ಆರಾಧ್ಯ ದೈವವಾಗಿ ಪ್ರಸಿದ್ಧಿಯನ್ನು ಹೊಂದಿದ್ದಾನೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ಆರಾಧಿಸಲ್ಪಡುವ 'ಬೀರಪ್ಪನ ಚರಿತ್ರೆ' ರೋಚಕವಾಗಿದೆ.

ವೀರ ಪರಂಪರೆಗೆ ಸೇರಿದ ಈ ಬೀರಪ್ಪ ಹಾಲುಮತ ಸಮುದಾಯದ ಸಾಂಸ್ಕೃತಿಕ ನಾಯಕ. ಈತನನ್ನು ಕುರಿತು ಕಾವ್ಯ, ಪುರಾಣಗಳಲ್ಲಿ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೀರಲಿಂಗ, ಬೀರದೇವರು, ಬೀರೋಬಾ, ಕರಿಸಿದ್ಧ, ವೀರಬೀರೇಶ್ವರ, ಕೆಂಚರಾಯ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಕಾವ್ಯದಲ್ಲಿ ಬೀರಪ್ಪ ಶಿವನ ವರಪ್ರಸಾದದಿಂದ ಜನಿಸಿದವನಾಗಿದ್ದು ಅಥವಾ ಶಿವನೇ ಬೀರಪ್ಪನ ಅವತಾರಿಯಾಗಿರುವುದನ್ನು

ಚಿತ್ರಿಸಲಾಗಿದೆ. ಭರಮದೇವ ಮತ್ತು ಸೂರಮ್ಮದೇವಿಯರ ಸುಪುತ್ರನಾಗಿ ಬೀರಪ್ಪ ಜನಿಸಲು ಕಾರಣನಾದ ಹಿನ್ನೆಲೆಯನ್ನು ಈ ಕಾವ್ಯವು ಹೇಳುತ್ತದೆ.

ವಿಭಾಗ ಗೋತ್ರದ ಮಂದಾರನೆಂಬ ಮಹಾಮಹಿಮನಿಂದ ಬಿಲ್ಲಾಸುರನೆಂಬ ದೈತ್ಯನು ಜನಿಸಿದನು. ಮೂರು ಲೋಕವನ್ನೆಲ್ಲಾ ತಾನೇ ಆಳಬೇಕೆಂಬ ಆಸೆಯಿಂದ ಇವನು ಪರಶಿವನ ಸತಿಯಾದ ಪಾರ್ವತಿಯನ್ನು ಕುರಿತು ಕಠಿಣ ತಪಸ್ಸು ಮಾಡುತ್ತಾನೆ. ಅವನ ತಪಸ್ಸಿಗೆ ಮೆಚ್ಚಿ ಪಾರ್ವತಿಯು ಪ್ರತ್ಯಕ್ಷಳಾದಾಗ 'ನನಗೆ ದೇವಾನು ದೇವತೆಗಳಿಂದ, ದೈತ್ಯ, ನರರಿಂದ ಮರಣವಾಗಬಾರದೆಂದೂ, ಮರಣವಾದರೆ ಶಿವನ ಅಂಶದಿಂದ ಹುಟ್ಟಿದ ಮಗನಿಂದಲೇ ಮರಣವಾಗಬೇಕೆಂದು ಬೇಡಿ ಪಾರ್ವತಿ ದೇವಿಯಿಂದ ವರವನ್ನು ಪಡೆಯುತ್ತಾನೆ.

ದೇವಿಯಿಂದ ವರವನ್ನು ಪಡೆದ ಬಿಲ್ಲಾಸುರನು ಅಹಂಕಾರಿಯಾಗಿ ದೇವಾನುದೇವತೆಗಳನ್ನು, ಕಿನ್ನರ ಕಿಂಪುರುಷರನ್ನು, ನರರನ್ನು ತೊಂದರೆಗೆ ಈಡು ಮಾಡಿದನು. ದೇವಾನು ದೇವತೆಗಳು ಬಿಲ್ಲಾಸುರನ ಉಪಟಳದಿಂದ ತಮ್ಮನ್ನು ರಕ್ಷಿಸಬೇಕೆಂದು ಪರಶಿವನಿಗೆ ಮೊರೆಯಿಡುತ್ತಾರೆ. ಆಗ ಶಿವನು ಉಗ್ರ ಕೋಪಾರೂಢನಾಗಲು ಅವನ ಹಣೆಗಣ್ಣಿನಿಂದ ವೀರೇಶನು ಜನಿಸುತ್ತಾನೆ. ಈ ವೀರೇಶನು ತಂದೆಯ ಆಜ್ಞೆಯಂತೆ ಬಿಲ್ಲಾಸುರನನ್ನು ಸಂಹರಿಸುತ್ತಾನೆ.

ಹೀಗೆ ಬಿಲ್ಲಾಸುರನನ್ನು ವಧಿಸಿದ ವೀರೇಶನನ್ನು ನೋಡಿ ಸಂತೋಷಗೊಂಡ ಶಿವನು 'ಮಗನೇ ಬಿಲ್ಲಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಿದ ಕಾರಣ ಬೀರೇಶನೆಂಬ ಹೆಸರಿನೊಂದಿಗೆ ಸತ್ಯಶೀಲನೂ, ದೃಢಭಕ್ತಿಯುಳ್ಳವನೂ, ಆಗಿ ಪಶುಪಾಲಕರಾದ ಹಾಲುಮತ ಜನಾಂಗದಲ್ಲಿ ಅವರ ಕುಲದೇವರಾಗಿ ಮೆರೆದು ಬರಬೇಕೆಂದು ಅಪ್ಪಣೆ ಕೊಡುತ್ತಾನೆ.' ಅದರಂತೆ ಶಿವನ ಅಂಶದ ಶಿಶುವೇ ಆಗಿ ಬೀರಪ್ಪ ಜನಿಸುತ್ತಾನೆ. ಹೀಗೆ ದೈವೀಸಂಭೂತನಾದ ಬೀರಪ್ಪ ಹುಟ್ಟಿನಿಂದಲೇ ಪವಾಡಪುರುಷ.

ಕಥೆಯಲ್ಲಿ, ಭರಮಪ್ಪನ ಹೆಂಡತಿಯಾದ ಸೂರಮ್ಮದೇವಿ ಗರ್ಭವತಿಯಾದ ಸುದ್ದಿ ಕೇಳಿ ಆಕೆಯ ಸಹೋದರ ಕಾಳಿನಾರಾಯಣನು ಇದರಿಂದ ತನ್ನ ಜೀವಕ್ಕೆ ಅಪಾಯವಿದೆಯೆಂದು ತಿಳಿದು ಶಿಶುವನ್ನು ಗರ್ಭದಲ್ಲಿಯೇ ಹೊಸಕಿ ಹಾಕಲು ಪ್ರಯತ್ನಿಸುತ್ತಾನೆ. ಇದೇ ವೇಳೆಗೆ ಸೂರಮ್ಮದೇವಿ ಬಯಸುವ ತವರು ಮನೆಯ ಬಯಕೆಯ ಬುತ್ತಿಯನ್ನು, ಕಾಳಿನಾರಾಯಣನು ತಂಗಿಗಾಗಿ, ಗರ್ಭದಲ್ಲಿರುವ ಶಿಶುವನ್ನು ಕೊಲ್ಲಲಿಕ್ಕಾಗಿಯೇ ಅಣಿಗೊಳಿಸಿ ಕಳುಹಿಸುತ್ತಾನೆ.

ಎಳ್ಳು ಹಚ್ಚಿದ ರೊಟ್ಟೀನ ಎಣ್ಣಬದನೆಕಾಯೀನ
ಹುರಿದ ಹೂರಣ ಕಡಲೇನ, ಕರದ ಕಾರಚಿ ಕಾಯೇನ
ಮರದ ಬಾನದ ಬುತ್ತೇನ, ಹಸರ ನಂಬಿಯ ಹೋಳೇನ
ಹಸುರ ನಂಬಿಯ ಹೋಳೇನ ನೆನೆಯ ದಂಡಿಯ ಬೇಡ್ಯಾಳ
ನೆನೆಯ ದಂಡಿಯ ಬೇಡ್ಯಾಳ ಹಸುರ ಸೀರಿ ಬೇಡ್ಯಾಳ
ಹಸುರ ಸೀರಿ ಬೇಡ್ಯಾಳ ಕುಸಲದ ಕುಬುಸ ಬೇಡ್ಯಾಳ
ಹ್ಯಾಂಗ ಮಾಡಬೇಕೆಂದಾಳೆ ಎಂತು ಮಾಡಬೇಕೆಂದಾಳೆ
ತವರು ಮನಿಯ ಬಾನದ ಬುತ್ತಿಯ ಬೇಡಿ ಬಗಸೆನೆಂದಾಳೆ॥

ಕಂಡದ್ದನ್ನೇ ಆಡುವ, ಉಂಡದ್ದನ್ನೇ ತೇಗುವ ನಮ್ಮ ಜನಪದರ ಅಭಿವ್ಯಕ್ತಿ ಅವರ ಬದುಕಿನಷ್ಟೇ ಸಹಜ, ಸುಂದರ. ಸೂರಮ್ಮದೇವಿಯು ಬಯಸಿದ ಬಯಕೆಯ ವಿವರಗಳು ಉತ್ತರ ಕರ್ನಾಟಕದ ಜನ ಜೀವನದಲ್ಲಿ ಪ್ರಚಲಿತದಲ್ಲಿರುವ ಎಳ್ಳು ಹಚ್ಚಿದ ರೊಟ್ಟಿ, ಎಣ್ಣೆಗಾಯಿಪಲ್ಲೆ, ಹುಳಿಯ ಬಾನ, ಹೂರಣ ಕಡುಬು, ಕರಿದ ಕರಚಿಕಾಯಿ, ಲಿಂಬೆ ಹಣ್ಣಿನ ಉಪ್ಪಿನ ಕಾಯಿ ಮುಂತಾದ ಜನಪದೀಯರ ಆಹಾರ ಪದಾರ್ಥಗಳು ಕೇಳಿದವರ ಬಾಯಿಯಲ್ಲಿ ನೀರೂರಿಸುತ್ತವೆ. ಇಂತಹ ಬಯಕೆಯ ಬುತ್ತಿಯನ್ನು ತರುವಂತೆ ಸೂರಮ್ಮ ದೇವಿ ಅಣ್ಣನಾದ ಕಾಳಿನಾರಾಯಣನಿಗೆ ಹೇಳಿಕಳುಹಿಸುತ್ತಾಳೆ. ಅವನಾದರು ತಂಗಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನು ತನಗೆ ವೈರಿಯಾಗುತ್ತಾನೆಂದು ಭಾವಿಸಿ ತಂಗಿಯ ಹೊಟ್ಟೆಯಲ್ಲಿರುವ ಪಿಂಡವನ್ನು ನಾಶಪಡಿಸಲು ಬುತ್ತಿಯಲ್ಲಿ ವಿಷವನ್ನು ಬೆರಸುತ್ತಾನೆ. ಆದರೆ ಇದನ್ನು ಅರಿತ ಗರ್ಭದ ಶಿಶುವು ನಿದ್ರೆಯಲ್ಲಿರುವ ತಾಯಿಗೆ ಈ ರೀತಿ ತಿಳಿಸುತ್ತದೆ.

ತವರು ಮನಿಯ ಬುತ್ತೆಂತ ಹಿಗ್ಗಲಿ ಉಣ್ಣುವಲ್ಲಿ ಬ್ಯಾಡವ್ವ
ಮೊದಲಿನ ತುತ್ತ ತಾಯವ್ವ ನಾಯಿಗೆ ಹಾಕಲಿ ಬೇಕವ್ವ
ಹಿಂದಿನ ತುತ್ತ ತಾಯವ್ವ ಬೆಕ್ಕಿಗೆ ಹಾಕಲಿ ಬೇಕವ್ವ
ಮುಂದಿನ ತುತ್ತ ತಾಯವ್ವ ಮನಸಿಗೆ ಬಂದಾಂಗ ಮಾಡವ್ವ॥

ಅದರಂತೆ ತಾಯಿಯ ಮನೆಯಿಂದ ಅಣ್ಣ ತಂದ ತವರು ಮನೆಯ ಬುತ್ತಿಯನ್ನು ಸೂರಮ್ಮದೇವಿ ಮನೆಯ ಗರ್ಭಿಣಿ ಬೆಕ್ಕಿಗೆ ಮತ್ತು ನಾಯಿಗೆ ಹಾಕಿದಾಗ, ತಿಂದ ಅವು ಗರ್ಭಪಾತವಾಗಿ ಸಾಯುತ್ತವೆ. ಆಗ ಸೂರಮ್ಮದೇವಿಯು ತವರ ಬುತ್ತಿಯನ್ನು ತಿಪ್ಪೆಗೆ ಚೆಲ್ಲುತ್ತಾಳೆ. ನಂತರ ಹೆರಿಗೆ ಮಾಡಿಸಲು ಬಂದ ಸೂಲಗಿತ್ತಿಯರನ್ನು ಕೊಂದು ತನ್ನ ತಾಯಿಯ ಮಗ್ಗುಲಲ್ಲಿ ಮಗು ಮಲಗುತ್ತದೆ. ಈ ಮಗುವಿನ ಅಸಾಮಾನ್ಯ ಲಕ್ಷಣವನ್ನು ಹಾಲುಮತ ಕಾವ್ಯ ಹೀಗೆ ಬಣ್ಣಿಸುತ್ತದೆ.

ಹೊನ್ನ ಚಕ್ಕರ ಸುಳಿಯುವನೆ ಬೆಳ್ಳಿ ಮುಖದವನಿದ್ದವನೇ
ಅಂಗಾಲ ಪದಮ ಇದ್ದವನೊ ಹೊನ್ನ ವಸ್ತುರದವನೇನೋ
ಬೆಳ್ಳಿ ಮುಖದವನಿದ್ದಾನೆ ಬಂಗಾರ ಚಂಡಿಕಿದವನೇನ
ಮುಂದಿನ ಮುರಗಿ ಸುಳಿಯೇನ ಕಣ್ಣಾಗ ದೇವಿಯ ಮಣಿಯೇನ
-------------------
ಗಾಡಿಕಾರನ ಕಂಡೇನೋ ಮೋಡಿಕಾರನ ಮಿಂಡೇನೋ॥[೪]

ಆದರೂ ಶಿಶುವನ್ನು ಕೊಲ್ಲಲೇಬೇಕೆಂದು ನಿಶ್ಚಯಿಸಿ ಕಾಳಿನಾರಾಯಣ, ಭರಮಪ್ಪ ಮತ್ತು ಸೂರಮ್ಮನಿಗೆ ಮೋಸದ ಭವಿಷ್ಯವನ್ನು ಹೇಳುತ್ತಾನೆ. ಇದನ್ನು ನಂಬಿ ತಂದೆ ತಾಯಿಗಳು ಮಗುವನ್ನು ಕೊದಲಿ ವನದಲ್ಲಿ ಬಿಡುತ್ತಾರೆ. ಆಗ ಆ ಮಗು ಕುರಿಗಾಹಿ ಅಕ್ಕನಾಗಮ್ಮನಿಗೆ ದೊರೆಯುತ್ತದೆ. ಮುಂದೆ ಬೀರಪ್ಪ ಬಾಲಕನಾಗಿ ಬೆಳೆಯುತ್ತಲೇ ಅಕ್ಕನಾಗಮ್ಮನ ಜೊತೆ ಕುರಿಕಾಯುತ್ತಲೇ ತನ್ನ ಲೀಲೆಗಳನ್ನು ಮೆರೆಯುತ್ತಾನೆ. ಕನ್ಯೆ ಕೋಮಾಲಿಯನ್ನು ವರಿಸಿದ್ದು, ಕೋಣಾಸುರನೆಂಬ ರಾಕ್ಷಸನನ್ನು ಸಂಹರಿಸಿದ್ದು, ಮಾಳಿಂಗರಾಯನಂಥ ಶಿಷ್ಯನನ್ನು ಪಡೆದಿದ್ದು ಸೊಗಸಾಗಿ ಕಾವ್ಯದಲ್ಲಿ ಮೂಡಿ ಬಂದಿದೆ.

ಶಿವನ ಮೇಲಿನ ಅನನ್ಯ ಭಕ್ತಿಯಿಂದ ಬೀರಪ್ಪ ಮಾಳಿಂಗರಾಯನಂತಹ ಶಿಷ್ಯನನ್ನು ಪಡೆಯುತ್ತಾನೆ. ಅನೇಕ ಪರೀಕ್ಷೆಗಳನ್ನು ಒಡ್ಡಿ ಶಿಷ್ಯನ ಭಕ್ತಿಯನ್ನು ಪರೀಕ್ಷಿಸುತ್ತಾನೆ. ಆ ಮೂಲಕ ಮಾಳಿಂಗರಾಯನ ಶಕ್ತಿಯನ್ನು ಜಗತ್ತಿಗೆ ತಿಳಿಯುವಂತೆ ಮಾಡುತ್ತಾನೆ. ತನ್ನನ್ನು ಬೆಳೆಸಿದ ಗುರು ಬೀರಪ್ಪನಿಗಾಗಿ ಮಾಳಿಂಗರಾಯ ಹಾಲಹಳ್ಳದ ಒಳಗಿನ 'ಕೊದಲಿವನದಲ್ಲಿ' ಗದ್ದುಗೆಯನ್ನು ನಿರ್ಮಿಸುತ್ತಾನೆ.

ಜಾಗನೋಡುತಾರೇನ ಪಾಯಹಾಕುತಾರೇನ
ಲಿಂಗ ಬೀರಣ್ಣ ದೇವರಿಗೆ ಕುಂದ್ರ ಮುನ್ನೂಣಿ ಮಾಡ್ಯಾನ
ಕುಂದ್ರ ಮುನ್ನಣಿ ಮಾಡ್ಯಾನೆ ಗದ್ದುಗೆ ಕಟ್ಟುತಾನೇನ
ಗಚ್ಚಿನ ಗುಡಿಯ ಕಟ್ಟಿದ ಗದ್ದುಗಿ ಮಾಡಿ ಮುಗಿಸಿದ
ಲಿಂಗ ಬೀರಣ್ಣ ದೇವರ ಜಡದ ಗದ್ದುಗಿ ಏರ್‍ಯಾನ
ಜಡದ ಗದ್ದುಗಿ ಏರ್‍ಯಾನ ಸಂಜೆ ಪೂಜಕ ಬಂದಾನ॥[೫]

ಹೀಗೆ ಗದ್ದುಗೆಯನ್ನು ಮಾಡಿ ಗುರು ಲಿಂಗಬೀರಣ್ಣನನ್ನು ಅನನ್ಯ ಭಕ್ತಿಯಿಂದ ಪೂಜಿಸುತ್ತಾನೆ. ಬೀರಪ್ಪ ಹುಲಿಗಿಣ್ಣ ಬೇಡಿದರೆ ಮಾಳಿಂಗರಾಯ ತಂದು ಕೊಡುತ್ತಾನೆ. ಮಾಳಿಂಗರಾಯ ತನ್ನ ಗುರು ಬೀರಪ್ಪನನ್ನು ಪೂಜಿಸಿದ ವಿವರಗಳನ್ನು ಹಾಲುಮತ ಮಹಾಕಾವ್ಯ ವಿವರವಾಗಿ ವರ್ಣಿಸುತ್ತದೆ.

ಹರಿಹರ ನಮ್ಮ ದೇವ್ರು ಮಾಳಿಂಗರಾಯ
ಹೂವಿನ ಝೊಲ್ಯಾ ಹಿಡಿದಿಹನೋ
ಹೂವಿನ ಝೊಲ್ಯಾ ಹಿಡಿದಾನ ಮಾಳಿಂಗರಾಯ
ಸೀತಾಳ ಬಿಂದಿಗಿ ಹಿಡಿದಿಹನೋ।
ಹೋಮದ ಕಂಬಳಿ ಹೊತ್ತಿಹನೋ।
ನೇಮದ ಬೆತ್ತ ಹಿಡಿದಿಹನೋ।

ಗುರುವಾರ ಲಿಂಗ ಬೀರಪ್ಪನಿಗೆ ನಿತ್ಯ ಪೂಜೆಗೆ ಹೊಸ ಹೂವು, ಕಾಯಿ, ಸೀತಾಳವನ್ನು ಮಾಳಿಂಗರಾಯ ಭಕ್ತಿಯಿಂದ ತರುತ್ತಾನೆ. ಮಾಳಿಂಗರಾಯ ಶ್ರದ್ಧೆ, ನಿಷ್ಠೆ, ವಿನಯವಂತ ಶಿಷ್ಯ. ಅದಕ್ಕಾಗಿಯೇ "ಬೀರಪ್ಪನಂತಹ ಗುರುವಿರಬೇಕು, ಮಾಳಪ್ಪನಂತಹ ಶಿಷ್ಯನಿರಬೇಕು" ಎಂಬ ಗಾದೆ ಹಾಲುಮತ ಜನಾಂಗದಲ್ಲಿ ಜನಜನಿತವಾಗಿದೆ.

**ಹಾಲುಮತ, ಬೀರಪ್ಪ ಮತ್ತು ಕನಕದಾಸರು:**

ಬೀರಪ್ಪನನ್ನು ಕುರಿತ ಮೌಖಿಕ ಪರಂಪರೆಯ ಸಾಹಿತ್ಯ ಹಾಲುಮತಸ್ಥರೆಂದು ಕರೆಯಲ್ಪಡುವ ಕುರುಬ ಜನಾಂಗದಲ್ಲಿ ಅಪಾರವಾಗಿದೆ. ಅವನೊಬ್ಬ ಅಸಮಾನ್ಯ ದೈವೀ ಪುರುಷ ಹಾಗೂ ಕುರುಬ ಜನಾಂಗದ ಕುಲದೈವ. ಬೀರಪ್ಪನು ಜನಿಸಿದ ಚಂದನಗಿರಿ, ಕೊದಲಿವನ, ಪವಾಡ ಸ್ಥಳಗಳಾದ ಕೊರಗನೂರು, ಶಿರಡಾಳು, ಮುಂಡಗನೂರು, ಹುಲಜಾತಿ, ಕುರಿಹಟ್ಟಿ, ಮರಿಹಟ್ಟಿಗಳು ಈಗಲೂ ಕುರುಬ ಜನಾಂಗದ ಪವಿತ್ರ ಧಾರ್ಮಿಕ ಕ್ಷೇತ್ರಗಳಾಗಿವೆ. ಇಂತಹ ಬೀರಪ್ಪನ ಕಾಲವನ್ನು; ಕುರುಬ ಜನಸಮುದಾಯದ ಹಿನ್ನೆಲೆಯಲ್ಲಿ ಕ್ರಿ.ಶ. ೨ನೆಯ ಶತಮಾನವೆಂದು ಗುರುತಿಸಿದ್ದಾರೆ.[೬] ಕ್ರಿ.ಶ. ೪ನೇ ಶತಮಾನದಲ್ಲಿ ಮಹಾರಾಷ್ಟ್ರದ ಖಂಡೋಬಾ ಮತ್ತು ಬೀರೋಬಾ ಭಾಗಗಳಲ್ಲಿ ಬೀರಪ್ಪ ಆರಾಧನೆಗೊಳ್ಳುತ್ತಿದ್ದುದರ ಬಗ್ಗೆ ದಾಖಲೆಗಳಿವೆ.[೭] ಬೀರಪ್ಪನನ್ನು ಕುರಿತಂತೆ ಬಸವಣ್ಣನವರು ವಚನವೊಂದರಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ.

ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ
ಕೆರೆ ಬಾವಿ ಹೂ ಗಿಡ ಮರಂಗಳಲ್ಲಿ
ಗ್ರಾಮ ಮಧ್ಯಂಗಳಲ್ಲಿ ಚೌಪಥ ಪಟ್ಟಣ ಪ್ರದೇಶಗಳಲ್ಲಿ
ಹಿರಿಯಾಲದ ಮರದಲ್ಲಿ ಮನೆಯ ಮಾಡಿ
ಕರೆವೆಮ್ಮೆಯ ಹಸುಗೂಸು ಬಸುರಿ ಬಾಣಂತಿ
ಕುಮಾರಿ ಕೊಡಗೂಸು ಎಂಬುವರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರ ಬೆಂತರ
ಕಾಳಯ್ಯ ಮಾಳಯ್ಯ ಕೇತಯ್ಯಗಳೆಂಬ ನೂರು ಮಡಕೆಗೆ
ನಮ್ಮ ಕೂಡಲ ಸಂಗಮದೇವ ಶರಣೆಂಬುದೊಂದೆ ಬಡಿಗೆ ಸಾಲದೆ॥[೮]

ಈ ವಚನದಲ್ಲಿ ಬೀರಯ್ಯನ ಹೆಸರು ಬರುತ್ತಿದ್ದು, ಆತ ದೇಸೀ ದೈವವಾಗಿ ಬಸವಣ್ಣನವರ ಕಾಲದಲ್ಲಿ ಆರಾಧನೆಗೊಳ್ಳುತ್ತಿದ್ದುದು ಸ್ಪಷ್ಟವಾಗುತ್ತದೆ. ಇಲ್ಲಿನ ಬೀರಯ್ಯ ಬೀರಪ್ಪನಾಗಿದ್ದು ಬಸವಣ್ಣನವರಿಗಿಂತ ಪ್ರಾಚೀನನೆಂಬುದು ಈ ದಾಖಲು ಸಾಹಿತ್ಯದಿಂದ ಅರಿವಿಗೆ ಬರುತ್ತದೆ.

ಜನಪದ ದೈವವಾದ ಬೀರಪ್ಪ, ಕುರುಬ ಜನಾಂಗದ ಕ್ಷಾತ್ರ ತೇಜಸ್ಸನ್ನು ಪ್ರತಿನಿಧಿಸುತ್ತಾನೆ. ಶಿವನ(ಪಶುಪತಿ) ಅಂಶವಾಗಿ ಹೊರಹೊಮ್ಮಿದ ಬೀರಪ್ಪನ ಚರಿತ್ರೆಯಲ್ಲಿ ಪುರಾಣ, ಐತಿಹ್ಯ, ಪವಾಡ, ಅತಿಮಾನುಷ ಘಟನೆಗಳು ಸೇರಿಕೊಂಡಿವೆ. ಹಾಲುಮತ ಹೆಸರಿನಲ್ಲಿ ಗುರುತಿಸಿಕೊಂಡಿರುವ ಕುರುಬ ಕುಲ ಭಾರತದ ಪ್ರಾಚೀನ ಜನಸಮುದಾಯವೆಂದು, ಮೌಖಿಕ ಪರಂಪರೆಯಲ್ಲಿ ದೊರೆತ ಕೆಲವು ಶಾಸನಗಳು ಆಕರಗಳಾಗಿ ಪುಷ್ಟಿನೀಡುತ್ತವೆ* ಹಾಗಾಗಿಯೇ ಶಾಸನಗಳಲ್ಲಿ ಕಂಡು ಬರುವ ಬೀರಗಲ್ಲು, ಬೀರವಣ, ಬೀರಶ್ರೀಯಂಪಡೆದನ್, ಬೀರಸ್ವರ್ಗಂ ಪಡೆದನ್, ಬೀರಗಾವುಂಡ, ಬೀರಪ್ಪ ಗೌಡ ಮೊದಲಾದ ಉಲ್ಲೇಖಗಳಲ್ಲಿ ಕುರುಬರ ಸಾಂಸ್ಕೃತಿಕ ವೀರ ಬೀರಪ್ಪನನ್ನು ಗುರುತಿಸಲಾಗಿದೆ. ಆಚರಣೆ, ಸಂಪ್ರದಾಯ, ನಂಬಿಕೆಗಳ ಹಿನ್ನೆಲೆಯಲ್ಲಿ ಬೀರಪ್ಪನ ಈ ಆರಾಧನೆಯು ಆದಿಮ ಕಾಲದ್ದು ಎಂದು ತಿಳಿಯಬಹುದು.

ಶಾಸನ, ಕಲೆ, ಮತ್ತು ವಾಸ್ತುಶಿಲ್ಪದ ಹಿನ್ನೆಲೆಯಲ್ಲಿ ಬೀರಪ್ಪನನ್ನು ಗಮನಿಸಿದಾಗ ಬೀರಪ್ಪ, ಬೀರಗಾವುಂಡ, ಬೀರೇಗೌಡ ಎಂಬ ವ್ಯಕ್ತಿನಾಮಗಳು ಸೇರಿದಂತೆ ಬೀರನಹಳ್ಳಿ, ಬೀರುಗೆಹಳ್ಳಿ, ಬೀರಗೌಡನ ಹಳ್ಳಿ ಎಂಬ ಸ್ಥಳ ನಾಮಗಳು, ೧೩-೧೪ನೆಯ ಶತಮಾನದ ಬಳಿಕ ಶಾಸನಗಳಲ್ಲಿ ಕಂಡುಬರುತ್ತವೆ. ಆದರೆ ಬೀರಪ್ಪ ದೇವರ ಉಲ್ಲೇಖಗಳು ಕಂಡುಬರುವುದು ಕ್ರಿ.ಶ. ೧೨ನೆಯ ಶತಮಾನದಲ್ಲಿ. ೧೦೬೧ರ ಶಾಸನದಲ್ಲಿ (Ec-೭ ಶಿಕಾರಿಪುರ ೬೯) "ಯಿ ಬೀರಲಿಂಗಕ್ಕೆ ಹೊಲ ಬಾವಿ ಕಳೆಕೊಟ್ಟರು" ಎಂದಿದೆ. ಹಾಗೆಯೇ ಕ್ರಿ.ಶ.೧೧೪೯-೫೦ರ ಶಾಸನದಲ್ಲಿ ಜಮಖಂಡಿಯ ಬೀರಣದೇವರ ಅರವಟ್ಟಿಗೆಗೆ ಕೊಣೆಗನೂರು ಮಹಾಜನರಿಂದ ಭೂಮಿ ಮತ್ತು ಗೃಹದಾನ ಮಾಡಿದ ಉಲ್ಲೇಖಗಳಿವೆ.[೯]

---

* ಸೌದತ್ತಿ ತಾಲ್ಲೂಕಿನ ಸೊಗಲದ ಕ್ರಿ.ಶ. ೯೮೦ರ ಶಾಸನ. ಮುದ್ದೇಬಿಹಾಳ ತಾಲ್ಲೂಕಿನ ಸರೂರ ಶಾಸನ. ೧೦೫೭ರ ದೇಕಬ್ಬೆ ಶಾಸನ. ಹೊಳಲ್ಕೆರೆ ತಾಲ್ಲೂಕಿನ ತಾಳಿಕಟ್ಟೆ ಗ್ರಾಮದ ಬೀರಲಿಂಗೇಶ್ವರ ದೇವಸ್ಥಾನ.

ಈ ಶಾಸನಗಳಲ್ಲಿ ವ್ಯಕ್ತವಾಗಿರುವ ಉಲ್ಲೇಖಗಳು ಬೀರಲಿಂಗೇಶ್ವರನ ಅಸ್ಥಿತ್ವವನ್ನು ಸಾರುವ ಮಹತ್ವದ ಆಕರಗಳಾಗಿವೆ. ಆದರೆ ಬೀರಪ್ಪನ ಅಸ್ಥಿತ್ವವನ್ನು ತಿಳಿಸುವ ಈ ಶಾಸನಗಳ ದಾಖಲೆ ಹಾಗೂ ಲಿಖಿತ  ಆಧಾರಗಳಿಗೆಲ್ಲಾ ಜನಪದರ ಮೌಖಿಕ ಹಾಲುಮತಮಹಾಕಾವ್ಯವೇ ಮೂಲ ಆಕರ ಎಂಬುದನ್ನು ಮರೆಯುವಂತಿಲ್ಲ.[೧೦]

ಕರ್ನಾಟಕದಲ್ಲಿ ಬಹುಮುಖ್ಯವಾಗಿ ಕಂಡುಬರುವ ಬೀರಪ್ಪನ ನೆಲೆಗಳಾದ ಕುರುವಂಕದ ಈಶ್ವರ ದೇವಾಲಯ(ಅರಸೀಕೆರೆ ತಾಲ್ಲೂಕು), ತಾಳಿಕಟ್ಟೆ ಬೀರಲಿಂಗೇಶ್ವರ ದೇವಾಲಯ(ಹೊಳಲ್ಕೆರೆ ತಾಲ್ಲೂಕು), ಸೂಜಿಗಲ್ಲು ಬೀರಲಿಂಗೇಶ್ವರ ದೇವಾಲಯ (ಹೊಸದುರ್ಗ ತಾಲ್ಲೂಕು), ರಾಮಗಿರಿ ಬೆಟ್ಟದ ಕರಿಸಿದ್ದೇಶ್ವರಸ್ವಾಮಿ ದೇವಾಲಯ(ಹೊಳಲ್ಕೆರೆ ತಾಲ್ಲೂಕು), ಹಿರೇಸಿಂಧೋಗಿ ಬೀರಲಿಂಗೇಶ್ವರ ದೇವಾಲಯ (ಕೊಪ್ಪಳ), ಜೊತೆಗೆ ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚನ್ನಪಟ್ಟಣ, ಮಂಡ್ಯ, ಕೋಲಾರ, ಮೈಸೂರು ಹಾಗೂ ಮಲೆನಾಡಿನ ಜಿಲ್ಲೆಗಳಲ್ಲಿ ಬೀರದೇವರ ದೇವಾಲಯಗಳಿರುವುದನ್ನು ಕಾಣಬಹುದು. ಈ ಎಲ್ಲಾ ದೇವಾಲಯಗಳಲ್ಲೂ ಪೂಜೆ, ಆರಾಧನೆ, ಜಾತ್ರೆ, ಉತ್ಸವಗಳು, ಕುರುಬರ ಸಾಂಸ್ಕೃತಿಕ ಲಕ್ಷಣಗಳನ್ನು ಪ್ರತಿಬಿಂಬಿಸುವಂತಹ ಆಚರಣೆಗಳಾಗಿರುವುದನ್ನು ಗಮನಿಸಬಹುದು.[೧೧]

ಬೀರಪ್ಪನ ಕಲೆಗಳಾದ ದಳವಾಯಿ ಕುಣಿತ, ಈರಗಾರರ ಕುಣಿತ, ಕದಳಿ ಕುಣಿತ, ಡೊಳ್ಳು ಕುಣಿತ, ದೀಪನೃತ್ಯ, ಹುಲಿಮನೆ ಕುಣಿತ, ವೀರಭದ್ರನ ಈರಗಾಸೆ, ಚೌಡಿಕೆಹಾಡು, ಸದರಕಲೆ, ಗುಡ್ಡರ ಕುಣಿತ, ನಂದಿ ಕಂಬ ಕುಣಿತ, ಭೃದಂಗಿ ಕುಣಿತ, ಕರಡಿ ಮಜಲು, ಕುಣಾಕುರುಬರ ಕಲೆ, ಮುಳ್ಳುಪಲ್ಲಕ್ಕಿ ಕುಣಿತ, ಕೋಲಾಟ, ಗೊಂದಲಿಗರಮೇಳ, ಟಗರಕಾಳಗ ಮುಂತಾದ ಆಚರಣೆಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆ ಕಂಡುಬಂದರೂ, ಸಂಪ್ರದಾಯಗಳಲ್ಲಿ ಸಾಮ್ಯತೆ ಹೊಂದಿದೆ. ಈ ಎಲ್ಲಾ ಕಲೆಗಳನ್ನು ಇಂದಿಗೂ ಕುರುಬ(ಹಾಲುಮತ) ಜನಾಂಗದವರೇ ನಡೆಸಿಕೊಂಡು ಬರುತ್ತಿರುವುದರಿಂದ ಬೀರಪ್ಪನಿಗೂ ಕುರುಬರಿಗೂ ಸಂಬಂಧವಿರುವುದು ಕಂಡು ಬರುತ್ತದೆ.[೧೨]

ಕುರುಬರು, ಬೀರಪ್ಪನನ್ನು ಸಂಬೋಧಿಸುವಂತೆ ತಗರಪ್ಪ, ತೋಪಿನ ಬೀರಪ್ಪ, ಹಟ್ಟಿ ಬೀರಪ್ಪ, ಆನೆ ಬೀರಪ್ಪ, ಮುಂತಾದ ಹೆಸರುಗಳು ಪಶುಪಾಲನೆಗೆ ಸಂಬಂಧಿಸಿರುವ ನಾಮಗಳಾಗಿರುವುದನ್ನು ನಾವಿಲ್ಲಿ ಗಮನಿಸಬೇಕಾಗುತ್ತದೆ.

ಹಾಗೆಯೇ ಬೀರಪ್ಪನ ಜಾತ್ರೆ ಉತ್ಸವದ ಮೆರವಣಿಗೆ ಸಂದರ್ಭದಲ್ಲಿ ರಾಜಪಲ್ಲಕ್ಕಿ, ಮುಳ್ಳುಪಲ್ಲಕ್ಕಿ, ಮುಳ್ಳಾವಿಗೆ, ಚಾಮರ, ದೀವಟಿಗೆಗಳಂತಹ ರಾಜಪರಿಕರಗಳು, ದಳವಾಯಿ, ಈರಗಾರರಂತಹ ರಾಜಪರಿವಾರ, ಕೋಲುಕಾರರು, ವಾದ್ಯಗಾರರು, ಹೊಗಳುಭಟ್ಟರು, ಡೊಳ್ಳು, ಕಹಳೆ, ಗಂಟೆ, ಜಾಗಟೆಗಳಂಥ ರಾಜವಾದ್ಯಗಳು,

ಚಾಮರಸೇವೆ, ಸತ್ತಿಗೆ ಸೇವೆ, ಪರಾಕು ಹಾಕುವವರು, ವಾದ್ಯ ಸೇವೆ, ಕದಳಿಸೇವೆ, ರಾಜಗೌರವಗಳು, ವೀರಾಯುಧಗಳು, ಆನೆ, ಒಂಟೆ, ಕುದುರೆಗಳಂತಹ ವೀರವಾಹನಗಳು, ಅಗ್ನಿಸೇವೆ, ದಳವಾಯಿ ಮೈದುಂಬಿ ಕುರುವು ನೀಡುವಂತಹ ವೀರ ಪರಂಪರೆಗಳು ಬೀರಪ್ಪ ಧಾರ್ಮಿಕ ಸಾಮ್ರಾಜ್ಯದ ಚಕ್ರವರ್ತಿ[೧೩] ಎಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಎಲ್ಲಾ ಪರಂಪರೆ ಮತ್ತು ಸಂಪ್ರದಾಯದ ಆಚರಣೆಗಳು ಕುರುಬರ ಸಾಂಸ್ಕೃತಿಕ ನಾಯಕ ಬೀರಪ್ಪನಿಗಾಗಿಯೇ ನಡೆಯುತ್ತಿರುವುದು ಮತ್ತು ನಡೆಸುತ್ತಿರುವುದನ್ನು ನೋಡಿದರೆ, ಪಶುಪಾಲಕರಾದ ಕುರುಬರ ನಾಯಕ ಬೀರಪ್ಪ ಎಂಬುದು ಮನದಟ್ಟಾಗುತ್ತದೆ.

ಈ ಎಲ್ಲಾ ಹಿನ್ನಲೆಯಲ್ಲಿಯಿಂದಾಗಿಯೇ ಶೈವ ಪರಂಪರೆಯ ಕುರುಬರು ಮೂಲದಿಂದಲೂ ಶಿವ ಸ್ವರೂಪಿ ಬೀರಪ್ಪನನ್ನೇ ಪೂಜಿಸುತ್ತಾ ಬಂದು ಆತನ ಒಕ್ಕಲಾಗಿರುವುದು ಹಾಗೂ ಹುಟ್ಟುವ ಮಕ್ಕಳಿಗೆ ಹೆಸರಿಡುವಾಗ ಬೀರಪ್ಪನ ಹೆಸರಿಡುತ್ತಲೇ ಬಂದಿರುವುದನ್ನು ಕಾಣಬಹುದು. ಹಾಗಾಗಿ ಕನಕದಾಸರ ತಂದೆ ಬೀರಪ್ಪ ಎಂಬ ಹೆಸರಿನವನಾಗಿದ್ದು, ಮೂಲದಲ್ಲಿ ಬೀರಪ್ಪನ ಪ್ರತಿರೂಪವಾದ ತಿರುಪತಿ ತಿಮ್ಮಪ್ಪನಿಗೆ ನಡೆದುಕೊಳ್ಳುತ್ತಿದ್ದರು. ತನ್ನ ಮಗ ಕನಕನಿಗೆ ಮೊದಲು ತಿಮ್ಮಪ್ಪ ಎಂದು ಹೆಸರನ್ನಿಟ್ಟಿದ್ದು, ಮುಂದೆ ಈ ತಿಮ್ಮಪ್ಪ ಕನಕದಾಸನಾದ ಮೇಲೂ ತಿರುಪತಿಗೆ ನಡೆದುಕೊಂಡಿದ್ದನ್ನು ಗಮನಿಸಿದರೆ ಕನಕದಾಸರು ಇಂತಹ ಜನಪದ ಹಾಲುಮತಕಾವ್ಯವನ್ನು ಕೇಳಿಸಿಕೊಂಡಿರಲೇ ಬೇಕು. ಹಾಗೂ ಕಾವ್ಯದಲ್ಲಿನ ಪಾತ್ರಗಳ ಪ್ರಭಾವ ಕನಕದಾಸರ ಮೇಲೆ ಆಗಿರಲೇಬೇಕು. 'ನಾವು ಕುರುಬರು ನಮ್ಮ ದ್ಯಾವರು ಬೀರಪ್ಪ' ಎಂಬ ಕೀರ್ತನೆಯು ಇದಕ್ಕೆ ಸ್ಪಷ್ಟ ನಿದರ್ಶನ. ಈ ಕೀರ್ತನೆಯು ಕನಕದಾಸರಿಗಿದ್ದ ಕುರಿ ಪಾಲನೆಯ ಗಾಢವಾದ ಅನುಭವವನ್ನು ಪ್ರತಿಬಿಂಬಿಸುವಂತಿದೆ. ಆದ್ದರಿಂದ ಇಂತಹ ಕೀರ್ತನೆಗಳು ಕನಕದಾಸರಿಂದ ರಚಿಸಲ್ಪಡಲು ಅವರು ಹಾಲುಮತಸ್ಥ ಸಮುದಾಯದವರಾಗಿರಲೂ ಬೇಕು; ಇಲ್ಲ, ಪಶುಪಾಲನಾ ಸಮಾಜದ ಪ್ರಭಾವಕ್ಕೆ ಒಳಗಾಗಿರಲೇಬೇಕಾಗುತ್ತದೆ ಎಂಬ ಅಭಿಪ್ರಾಯಕ್ಕೆ ನಾವಿಲ್ಲಿ ಬರಬಹುದಾಗಿದೆ.

**ಕಾವ್ಯದಲ್ಲಿ ಬರುವ ಪಶುಪಾಲನೆಯ ವಿವರಗಳು:**

ಕಾವ್ಯವು ಪಶುಪಾಲನಾ ಸಂಸ್ಕೃತಿ, ಹಿನ್ನೆಲೆ ಲಕ್ಷಣಗಳನ್ನು ಒಳಗೊಂಡಂತೆಯೇ ಪ್ರಾರಂಭವಾಗುವುದರಿಂದ ಇಂತಹ ಕಾವ್ಯಗಳ ಸೃಷ್ಟಿಯ ಸಮಯದಲ್ಲಿ ಸೃಷ್ಟಿಕರ್ತನಾದ ಜನಪದ ಕವಿಯೂ ಸೇರಿದಂತೆ ಆತನ ಸುತ್ತಲೂ ಪಶುಪಾಲನೆಯ ವೃತ್ತಿ ಜನಜನಿತವಾಗಿದ್ದುದನ್ನು ನಿರೂಪಿಸುತ್ತದೆ. ಹಾಗಾಗಿಯೇ ಹಾಲುಮತ ಮಹಾಕಾವ್ಯದಲ್ಲಿ ಕಥಾನಾಯಕ, ಕಥೆಯ ಸಂದರ್ಭ ಮತ್ತು ಕಥೆಯ ಚಲನೆಗೆ ಅಗತ್ಯವಾದ ರೀತಿಯಲ್ಲಿ

ಪಶುಪಾಲನ ವೃತ್ತಿಯ ಅನುಭವವನ್ನು ಜನಪದ ಕವಿ ಬಳಸಿಕೊಂಡಿದ್ದಾನೆ ಎಂಬುದು ತಿಳಿದುಬರುತ್ತದೆ.

ಕಥೆಯ ಪೀಠಿಕಾ ಭಾಗಕ್ಕೆ ಮುನ್ನವೇ ಬ್ರಹ್ಮಾಂಡದ ಸ್ವರೂಪವನ್ನು ನಿರೂಪಿಸಲಾಗುತ್ತದೆ. ಮೊದಲಿಗೆ ಭೂ ಮಂಡಲದ ನೀರಿನ ಮೇಲೊಂದು ಗುರುಳಿ(ಗುಳ್ಳೆ) ಎದ್ದು ರುಂಡವಾಗಿ, ಕೈಕಾಲು ರಕ್ತಮಾಂಸ, ವಿದ್ಯಾಬುದ್ಧಿಗಳು ಬಂದ ಅಖಂಡೇಶ್ವರ ಸೃಷ್ಟಿಯಾಗುತ್ತಾನೆ. ಅವನು ತನ್ನ ಎಡ ಪಕ್ಕೆಲುಬುಗಳಿಂದ ಆದಿಶಕ್ತಿಯನ್ನು ಸೃಷ್ಟಿಸಿದನು. ಆದಿಶಕ್ತಿಯ ಗರ್ಭದಿಂದ ರಕ್ಕಸರ ಜನನವಾಗುತ್ತದೆ.

ಮುಂದೆ ಬ್ರಹ್ಮ, ವಿಷ್ಣು, ಮಹೇಶ್ವರ, ಮಹದೇವ ಹಾಗೂ ಶಾಂತಮುತ್ತಯ್ಯನ ಜನನವಾಗುತ್ತದೆ. ಈ ಶಾಂತಮುತ್ತಯ್ಯ, ಐದು ಮಂದಿ ರಕ್ಕಸರನ್ನು ಕುರಿಗಳನ್ನಾಗಿಸುತ್ತಾನೆ. ಮತ್ತೊಬ್ಬ ರಕ್ಕಸನನ್ನು ಟಗರು ಮಾಡುತ್ತಾನೆ. ಕುರಿಯ ಉಣ್ಣೆಯನ್ನು ತೆಗೆದು ಕಂಬಳಿ ತಯಾರಿಸಲು 'ಡೊಳ್ಳರಸನೆಂಬ' ದೈತ್ಯನ ಶಿರ ಒಡೆದು ಅವನ ಅಂಗಾಂಗಳಿಂದ ನೇಯಲು ಬೇಕಾದ ಸಾಮಗ್ರಿಗಳನ್ನು ತಯಾರಿಸುತ್ತಾನೆ.

ಶಾಂತಮುತ್ತಯ್ಯನ ಜನನವು ತ್ರಿಮೂರ್ತಿಗಳ ಜೊತೆಗೆ ಆಗಿರುವುದನ್ನು ಕಾವ್ಯವು ತಿಳಿಸುತ್ತದೆ. ಇಂತಹ ಶಾಂತಮುತ್ತಯ್ಯನು ಕುರುಬ ಸಮುದಾಯಕ್ಕೆ ಸಂಬಂಧಿಸಿದ ಕುರಿಗಳ ಸೃಷ್ಟಿಕರ್ತನು, ಹಾಗೂ ಕಂಬಳಿ, ಡೊಳ್ಳಿನ ತಯಾರಕನು. ಮುಂದೆ ಶಾಂತಮುತ್ತಯ್ಯ ಕುರಿಗಳನ್ನು ಕಾಯುತ್ತಾನೆ. ಈತನಿಗೆ ಬೇಸರವಾದ ಸಂದರ್ಭದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ಕುರಿಗಳನ್ನು ಕಾಯುತ್ತಿದ್ದರು. ಕುರಿಕಾಯುವುದು ಶಿವನಿಗೆ ಬೇಸರವಾಗಿ ಪಾರ್ವತಿಯನ್ನು ಕುರಿ ಕಾಯಲು ಕಳುಹಿಸಿದನು. ಆಕೆಗೂ ಬೇಸರವಾಗಿ ಆ ಕುರಿಗಳನ್ನು ಭೂಲೋಕಕ್ಕೆ ಹೊಡೆತಂದು ಹುತ್ತದಲ್ಲಿ ಹುದುಗಿಸಿದಳು. ಹೀಗೆ ಭೂಮಿಗೆ ಮೊದಲ ಪಾದಾರ್ಪಣೆ ಪಾರ್ವತಿಯಿಂದಾಯಿತು. ಭೂಗರ್ಭದ ಕುರಿಗಳ ಪಾಲನೆಗಾಗಿ ಪಾರ್ವತಿ ತನ್ನ ಮೊಲೆಯ ಹಾಲು ಮತ್ತು ಭೂಮಿಯ ಮಣ್ಣಿನಿಂದ ಎರಡು ಬೊಂಬೆಗಳನ್ನು ತಯಾರಿಸಿ, ಅವಕ್ಕೆ ಶಿವನು ಜೀವ ತುಂಬಲಾಗಿ ಮುದ್ದವ್ವ-ಮುದ್ದುಗೊಂಡ, ಎಂದು ಹೆಸರಿಟ್ಟಳು. ಇವರೇ ಹಾಲುಮತದ ಮೂಲ ಪುರುಷರೆಂದು ಈ ಕಾವ್ಯವು ಹೇಳುತ್ತದೆ.

ಧರ್ಮ ದೇವರ ಮೇಲೆ ಅಚಲವಾದ ಶ್ರದ್ಧಾಭಕ್ತಿ ಕಾರಣವಾಗಿ ಹಾಲುಮತದವರ ಕುರಿತು ಒಂದು ಗಾದೆ ಮಾತಿದೆ. 'ಹಾಲು ಕೆಟ್ಟರೂ ಕೆಡುವುದು; ಆದರೆ ಹಾಲುಮತದವರು ಕೆಡುವುದಿಲ್ಲ'[೧೪] ಎಂದು. ಈ ಮಾತು ಕುರುಬರ ನೈತಿಕ ಜೀವನ ಮೌಲ್ಯವನ್ನು ಸಾರುತ್ತದೆ. ಜೊತೆಗೆ ಕುರುಬರು, ಸ್ವಾಭಿಮಾನಿಗಳು, ಶ್ರಮಜೀವಿಗಳು, ಸಾಮಾಜಿಕವಾಗಿ ಇತರ ಸಮುದಾಯಗಳೊಂದಿಗೆ ಉತ್ತಮ ಸಂಬಂಧ

ಇಟ್ಟುಕೊಂಡವರು. ಸಾಮರಸ್ಯ ಸೌಹಾರ್ದತೆಗೆ ಹೆಸರಾಗಿದ್ದಾರೆ.[೧೫] ಕರ್ನಾಟಕದ ಎಲ್ಲಾ ನಗರ ಹಳ್ಳಿಗಳಲ್ಲಿಯೂ ಕಂಡುಬರುತ್ತಾರೆ. 'ಆಡು ಮುಟ್ಟದ ಸೊಪ್ಪಿಲ್ಲ, ಕುರುಬರಿಲ್ಲದ ಊರಿಲ್ಲ' ಎನ್ನುವಂತೆ ರಾಜ್ಯದ ಜನಸಂಖ್ಯೆಯಲ್ಲಿ ಮೂರನೆಯವರಾಗಿದ್ದಾರೆ. ಏಕೆಂದರೆ ಐತಿಹಾಸಿಕ, ಹಾಗೂ ಸಾಂಸ್ಕೃತಿಕ ವ್ಯಕ್ತಿಯಾಗಿರುವ ಬೀರಪ್ಪ, ತಾನೊಬ್ಬ ಕುರಿಗಾಹಿಯಾಗಿ, ಪಶುಪಾಲಕನಾಗಿ, ಒಂದು ಸಮುದಾಯದ ನಾಯಕನಾಗಿ, ನಾಡಿನಾದ್ಯಂತ ಸಂಚರಿಸಿ ಹೋದಲೆಲ್ಲಾ ತನ್ನ ಸಮುದಾಯವನ್ನು ಬೆಳೆಸಿದ್ದಾನೆ, ರಕ್ಷಿಸಿದ್ದಾನೆ. ಹಾಗೆಯೇ ಮಧ್ಯಕಾಲೀನ ಕನಾಟಕದ ಸಂದರ್ಭದಲ್ಲಿನ ಈ ಪಶುಪಾಲನಾ ಸಂಸ್ಕೃತಿಯ ಪರಿಣಾಮ ಕನಕದಾಸರ ಕುಟುಂಬದ ಮೇಲೂ ಬೀರಿದ್ದಿರಬಹುದಾದ ಕಾರಣ ಕುಲದ ಮೂಲ ಪುರುಷ ಬೀರಪ್ಪನನ್ನು ತಮ್ಮ ಆರಾಧ್ಯ ದೈವವನ್ನಾಗಿ ಈ ಕುಟುಂಬ ಕಂಡುಕೊಂಡಿರಬೇಕು. ಕನಕದಾಸರಂತೂ ಡೊಳ್ಳಿನ ಹಾಡುಗಳ ಮೂಲಕ ಕುಲದೈವವನ್ನು ಪ್ರಾರ್ಥಿಸಿ ಕುಣಿದು ಕುಪ್ಪಳಿಸಿರುವುದನ್ನು ಕೀರ್ತನೆಗಳಲ್ಲಿ ಕಾಣಬಹುದು. ಕುರಿಗಾಹಿ ಬೀರಪ್ಪನಂತೆಯೇ ಕನಕದಾಸರೂ ಕುರಿಗಾಹಿ ಸಂಪ್ರದಾಯದಿಂದ ಬಂದವರಾದ್ದರಿಂದ ನಿಂತಲ್ಲಿ ನಿಲ್ಲದೆ ಊರೂರು ತಿರುಗಲು ಬೀರಪ್ಪನ ಇದೇ ಸಂಸ್ಕೃತಿ ಅವರ ಮೇಲೆ ಪ್ರಭಾವ ಬೀರಿರಬಹುದೆಂದು ಹೇಳಬಹುದು.

ಬೀರಪ್ಪ ಸಂಚರಿಸಿದ ಮಾರ್ಗವನ್ನು ಜನಪದ ಹಾಲುಮತ ಮಹಕಾವ್ಯದಲ್ಲಿ ಗುರುತಿಸಬಹುದಾಗಿದೆ. ಶಹಪೂರ ತಾಲ್ಲೂಕಿನ ಶಿರಹಾಳದಿಂದ ಪ್ರಾರಂಭಿಸಿ, ಸಗರ ನಾಡಿನ ವ್ಯಾಪ್ತಿಯನ್ನು ಹಿಡಿದುಕೊಂಡು ಸುರಪುರ, ಜೇವರ್ಗಿ, ಅಫಜಲಪುರ, ಬೆಳಗಾಂವ, ಬಿಜಾಪುರ, ಬಾಗಲಕೋಟೆ, ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಶಿರಿಡೋಣ(ಬೀರಪ್ಪನ ಸಮಾಧಿ ಸ್ಥಳ) ಮಹರಾಷ್ಟ್ರ, ಸೊಲ್ಲಾಪುರ, ಮಂಗಳವಾಡ, ಹುಲಜಂತಿ (ಮಾಳಿಂಗರಾಯನ ಸಮಾಧಿಸ್ಥಳ) ಯಿಂದ ಪಂಡರಾಪುರದವರೆಗೆ ಮುಂದುವರೆಯುತ್ತದೆ.[೧೬] ಇದರಿಂದ ಕರ್ನಾಟಕ ಮತ್ತು ಮಹಾರಾಷ್ಟ್ರದವರೆಗೂ ಹಾಲುಮತ ಪರಂಪರೆ ಹಬ್ಬಿತ್ತು ಎಂಬುದು ಈ ಮಹಾಕಾವ್ಯದಿಂದ ಸ್ಪಷ್ಟವಾಗುತ್ತದೆ.[೧೭]

ಮುಂದೆ ಬೀರಪ್ಪ, ಶಿಷ್ಯನಾದ ಮಾಳಿಂಗರಾಯನ ವಿನಂತಿಯ ಮೇರೆಗೆ ಹಾಲುಹಳ್ಳದಲ್ಲಿ ಪಂಢರಾಪುರದ ವಿಠಲನಿಗೆ ಲಿಂಗರೂಪದಲ್ಲಿ ದರ್ಶನ ಕೊಟ್ಟಿದ್ದು, ಬೀರಪ್ಪ ಪಂಢರಾಪುರದ ವಿಠಲನ ಸಮಕಾಲೀನ ಎಂಬ ಸತ್ಯ ತಿಳಿಯಲು ಸಹಕಾರಿಯಾಗುತ್ತದೆ. ಹಾಗೆಯೇ ಇಲ್ಲಿ ಬರುವ ಹಾಲುಹಳ್ಳ ಎಂಬುದು ಪಶುಪಾಲನಾ ವೃತ್ತಿಯ ನಿಷ್ಪನ್ನವಾಗಿದೆ ಎಂಬುದನ್ನು ಅರ್ಥೈಸಿಕೊಳ್ಳಬಹುದು.

ಈ ಎಲ್ಲಾ ಹಿನ್ನೆಲೆಯಿಂದಾಗಿ, ಬೀರದೇವರು ಜನಪದರು ಸೃಷ್ಟಿಸಿ ಆರಾಧಿಸುತ್ತಿದ್ದ ದೈವವೆಂದೇ ಹೇಳಬಹುದು. ಹಾಲುಮತ ಕಾವ್ಯದ ಪ್ರಕಾರ ಶಿವಸಿದ್ಧನಾದ ಬೀರಪ್ಪ ಕುರುಬರ ಒಬ್ಬ ಸಾಂಸ್ಕೃತಿಕ ವೀರನಾಗಿದ್ದಾನೆ.[೧೮] ಹಾಲುಮತ ಕಾವ್ಯದಲ್ಲಿ

ಬಿಂಬಿತವಾಗುವಂತೆ ಬೀರಪ್ಪ, ಧಾರ್ಮಿಕ ಕ್ಷೇತ್ರವೊಂದರ ಸಾಮ್ರಾಟ. ಇವನಿಗೆ ಇರುವಷ್ಟು ದೇವಾಲಯಗಳು, ಭಕ್ತರ ಸಂಖ್ಯೆ ಕರ್ನಾಟಕದ ಇನ್ಯಾವ ದೇವರಿಗೂ ಇಲ್ಲವೆಂದೇ ಹೇಳಬೇಕು. ಬೀರಪ್ಪನಿಗೆ ಕುರುಬ ಸಮುದಾಯದ ಅಪಾರ ಭಕ್ತ ವರ್ಗವಿರುವುದಂತೂ ಗಮನಾರ್ಹವಾದ ಅಂಶವೆಂದು ಇಲ್ಲಿ ತಿಳಿಯಲಾಗಿದೆ.

ದನಗಾರರ ಗೀತೆ ಎಂದೇ ಕರೆಯಲ್ಪಡುವ ಕುರುಬರ ಹಾಡು, ಜನಪದರ ನಾಲಗೆಯ ಮೇಲೆ ಹಾಲುಮತ ಕಾವ್ಯವಾಗಿ ಹರಿದಾಡುತ್ತಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದೆಂದರೆ, ಯದು, ಧನಗರ, ಗೌಳಿಗಳ ಕುಲದೇವತೆಯಾದ ಬೀರಪ್ಪನ ಪ್ರಾಣ ಸ್ನೇಹಿತನಾಗಿ ವಿಠಲನೆಂಬ ದೈವದ ಉದಯವಾದದ್ದು. ವಿಠಲನದೂ ಪಶುಪಾಲನ ಸಂಸ್ಕೃತಿಯೇ. ಎರಡೂ ದೈವಗಳು ದನ ಕುರಿಗಳನ್ನು ಕಾಯುತ್ತಲೇ ಬೆಳೆದು ಬಂದವರು. ಇಬ್ಬರೂ ನೆಲೆ ನಿಲ್ಲಲು ಇನ್ನಿತರ ದೈವಗಳೊಂದಿಗೆ ಧಾಮಿಕ ಸಂಘರ್ಷಕ್ಕೆ ಇಳಿಯಬೇಕಾಯಿತು. ಇದು ಬೀರಪ್ಪ ಮತ್ತು ವಿಠಲನ ನಡುವೆ ಇದ್ದ ಆ ಕಾಲದ ಧಾರ್ಮಿಕ ಸಮುದಾಯಗಳ ದೈಹಿಕ ಮಾನಸಿಕ ಬಡಿದಾಟದಂತೆಯೂ ಕಂಡುಬರುತ್ತದೆ.[೧೯] ಈ ಸಂಘರ್ಷ ತಾವು ದೈವಿಕ ನೆಲೆ ಕಂಡುಕೊಳ್ಳುವುದಕ್ಕಾಗಿಯೇ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಹಾಗೆಯೇ ಕನಕದಾಸರು ಕೂಡ ತಮ್ಮ ಕಾಲದ ವೈದಿಕಶಾಹಿಯ ವಿರುದ್ಧ ಸೆಣಸುತ್ತ ಮತ್ತೊಮ್ಮೆ ಅದರೊಂದಿಗೆ ರಾಜಿಮಾಡಿಕೊಳ್ಳುತ್ತಲೇ ಮುನ್ನಡೆದರು. ಹಾಗೂ ಕನಕದಾಸರೂ ಕೂಡ ಬೀರಪ್ಪನಂತೆಯೇ ತನ್ನ ಕಾಲದ ಸಮುದಾಯವೊಂದರ ನಾಯಕನಂತೆ ಕಂಡುಬರುತ್ತಿದ್ದು ನಿಂತಲ್ಲಿ ನಿಲ್ಲದೆ ನೊಂದ ತನ್ನವರ ಪರವಾಗಿ ಧ್ವನಿಯೆತ್ತಿ ಮೇಲ್ವರ್ಗದವರ ಗಮನಸೆಳೆದವರು. ಜೊತೆಗೆ ಬೀರಪ್ಪನಂತೆಯೇ ಕಂಬಳಿಯನ್ನು ಹೊದ್ದು ಮುಂಡಾಸನ್ನೂ ಧರಿಸದೆ ಕಾಲುದಾರಿಯಲ್ಲಿ ನಡೆದಾಡಿದವರು.

ಹೀಗೆ ಹಾಲುಮತ ಮಹಾಕಾವ್ಯವು ತನ್ನ ಕಥಾ ಸ್ವರೂಪದಿಂದ, ಅಲೌಕಿಕತೆಯಿಂದ, ಪೌರಾಣಿಕ ಜನಪದೀಯ ಅಂಶಗಳಿಂದಾಗಿ ಮೌಖಿಕ ಪರಂಪರೆಯಲ್ಲಿ ಮಂಟೇಸ್ವಾಮಿ, ಮೈಲಾರಲಿಂಗ, ಮಲೈ ಮಹದೇಶ್ವರ, ಜುಂಜಪ್ಪನ ಕಾವ್ಯಗಳ ಜೊತೆಗೆ ಉನ್ನತ ಸ್ಥಾನ ಪಡೆದುಕೊಂಡಿದೆ. ಹಾಗಾಗಿ ಕರ್ನಾಟಕದ ಮೌಖಿಕ ಪರಂಪರೆ ಬಹು ಎತ್ತರಕ್ಕೆ ಬೆಳೆಯುವಂತಾಗಿದೆ. ಹಾಲುಮತ ಸಂಪ್ರದಾಯದ ಆರಾಧ್ಯ ದೈವಗಳಲ್ಲಿ ಒಬ್ಬನಾದ ಬೀರಪ್ಪನ ವೃತ್ತಾಂತವನ್ನು ನಿರೂಪಿಸುವ ಮಹತ್ವದ ಆಕರ ಗ್ರಂಥವಾಗಿ ಈ ಕಾವ್ಯ ಕರ್ನಾಟಕ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದೆ.[೨೦]

**ಮಾಳಿಂಗರಾಯನ ಕಾವ್ಯ**

ಮಹಾಳಿಂಗರಾಯನ ಜೀವನ ಸಾಧನೆಗಳನ್ನು ಡಾ. ವೀರಣ್ಣದಂಡೆಯವರು ಸಂಪಾದಿಸಿರುವ ಜನಪದ ಹಾಲುಮತ ಮಹಾಕಾವ್ಯದಲ್ಲಿ ಹಾಡುಗಾರ ಸಿದ್ಧಪ್ಪ

ಮೇಟಿಯವರು ಕಟ್ಟಿಕೊಟ್ಟಿದ್ದಾರೆ. ಸಿದ್ಧಪ್ಪ ಮೇಟಿಯವರು ಇಂದಿನ ಯಾದಗಿರಿ ಜಿಲ್ಲೆಯ ಶಹಪುರ ತಾಲ್ಲೂಕಿನ ಸೈದಾಪುರ ಗ್ರಾಮದ ಹಾಲುಮತದ ಕುರಿಗಾಹಿ ಕುಟುಂಬದ ೬೦ ರ ಹರೆಯದವರು.

**ಹಿನ್ನೆಲೆ:**

ಹಾಲುಮತದ ಸಾಂಸ್ಕೃತಿಕ ವೀರರಲ್ಲಿ ಮಾಳಿಂಗನು ಬಹು ಮುಖ್ಯನಾದವನು. ಇಂತಹ ಸಾಂಸ್ಕೃತಿಕ ವೀರನ ಚರಿತ್ರೆಯ ಮೂಲಕ ಪಶುಪಾಲನಾ ಪರಂಪರೆಯ ಐತಿಹಾಸಿಕ ಮಹತ್ತವನ್ನು ಅರಿಯಬಹುದಾಗಿದೆ. ಇಲ್ಲಿನ ಮಹಾಲಿಂಗನ ಪರಿಕಲ್ಪನೆಯನ್ನು ಹಾಲುಮತ ಕಾವ್ಯ ಮತ್ತು ಮಧ್ಯಭಾರತದ ಪಶುಪಾಲಕರಾದ 'ಗೊಂಡರ' ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಕಥೆಯಲ್ಲಿನ ಮುದ್ದವ್ವ, ಮುದ್ದುಗೊಂಡರು ಪಾರ್ವತಿ ಪರಮೇಶ್ವರ ಮಾನಸ ಪುತ್ರರು, ಇವರಿಂದಲೇ ಹಾಲುಮತ ಬೆಳೆಯುವುದು.[೨೧] ಈ ದಂಪತಿಗಳಿಗೆ ಆದಿಗೊಂಡ, ಅನಂತಗೊಂಡ, ಸಿದ್ಧಗೊಂಡ, ಪರಮಗೊಂಡ ಎಂಬ ನಾಲ್ಕು ಮಕ್ಕಳು. ಪರಮಗೊಂಡನಿಗೆ 'ಉಂಡಾಡೋ ಪದ್ಮಗೊಂಡ' ಎಂದೂ ಕರೆಯಲಾಗುವುದು. ಈ ಪದುಮಗೊಂಡನ ಮುಂದಿನ ಅವತಾರವೇ ಮಹಾಕಾಳಿಂಗರಾಯ.

ಮಧ್ಯಭಾರತದ ಗೊಂಡ ಬುಡಕಟ್ಟಿನಲ್ಲಿ ಕಂಡು ಬರುವ ಮಹಾಲಿಂಗ ಇಂದು ಪಶುಪತಿ, ಫೆರ್ಸಾಫೇನ್, ಶಂಭುಮಹಾದೇವ ಎಂದು ಕರೆಸಿಕೊಳ್ಳುತ್ತಿದ್ದಾನೆ. ದಕ್ಷಿಣ ಭಾರತದ ಹಾಲುಮತಸ್ಥರಲ್ಲಿ ಮಹಾಲಿಂಗ, ಮಾಳಿಂಗ, ಮಾಳಿಂಗರಾಯ ಎಂಬ ಹೆಸರುಗಳಿಂದ ಈ ಸಮುದಾಯದ ಸಾಂಸ್ಕೃತಿಕ ವೀರನಾಗಿ ಕಾಣಿಸಿಕೊಂಡಿದ್ದಾನೆ.[೨೨]

**ಮಾಳಿಂಗರಾಯ:**

ಬೀರಪ್ಪನು ಕುರಿಕಾಯುವ ಜನಾಂಗದವನಾದರೆ, ಮಾಳಿಂಗರಾಯನು 'ಆಕಳು'ಗಳನ್ನು ಕಾಯುವ ಜನಾಂಗದವನೆಂದು ಈ ಕಾವ್ಯ ಹೇಳುತ್ತದೆ. ಈ ಜನಾಂಗವು ಅಡವಿಯಲ್ಲಿ ವಾಸಮಾಡುತ್ತಿದ್ದು ಬಿಲ್ಲು ಬಾಣಗಳ ಪ್ರಯೋಗದಲ್ಲಿ ಪರಿಣತರು. ಈ ಶೂರತನ ಸಹಜವಾಗಿಯೇ ಮಾಳಿಂಗರಾಯನಿಗೂ ಬಂದಿತ್ತು. ಸ್ವತಃ ಹೋರಾಡುವ ಪ್ರವೃತ್ತಿಯವನಾದ ಮಾಳಿಂಗರಾಯ, ಸ್ವಾಭಿಮಾನದ ಅಗಾಧ ಗುರುಭಕ್ತಿಯ ವ್ಯಕ್ತಿತ್ವವನ್ನು ಹೊಂದಿದವನಾಗಿದ್ದನು. ಗುರು ಬೀರಪ್ಪ ಶಿವನಿಂದ ಬೇಡಿ ಮಾಳಿಂಗರಾಯನನ್ನು ಶಿಷ್ಯನನ್ನಾಗಿ ಪಡೆದುಕೊಂಡಂತೆಯೇ, ಅಗಾಧವಾದ ಗುರುಭಕ್ತಿ ಹೊಂದಿದ್ದ ಕನಕದಾಸರನ್ನೂ ಸಹ ವ್ಯಾಸರಾಯರು ಬಹು ಇಷ್ಟದಿಂದ ಸ್ವೀಕರಿಸಿ ತಮ್ಮ ಪ್ರೀತಿಯ ಶಿಷ್ಯನೆಂದು ಒಪ್ಪಿಕೊಂಡಿದ್ದರು.

**ಜನನ ಮತ್ತು ವಿದ್ಯಾಭ್ಯಾಸ :**

ಅಣ್ಣತಮ್ಮಂದಿರಾದ ಸೋಮರಾಯ ಮತ್ತು ತುಕ್ಕಪ್ಪರಾಯ ಎಂಬುವವರು ಆಕಳುಗಳನ್ನು ಮೇಯಿಸಲು ಹೊರಗೆ ಹೊಡೆದುಕೊಂಡು ಹೋದಾಗ, ಶಿವ ಪಾರ್ವತಿಯರು ಮುದುಕರ ವೇಷದಲ್ಲಿ ಈ ಇಬ್ಬರ ಮನೆಗೆ ಬರುತ್ತಾರೆ. ಸೋಮರಾಯನ ಹೆಂಡತಿಯಾದ ಕಾನಾಬಾಯಿ, ತುಕ್ಕಪ್ಪರಾಯನ ಹೆಂಡತಿಯಾದ ಅಮೃತಬಾಯಿಯವರು ಮನೆಗೆ ಬಂದ ವೃದ್ಧರನ್ನು ಆದರಾತಿಥ್ಯದಿಂದ ಸತ್ಕರಿಸಿದರು. ಮಕ್ಕಳಿಲ್ಲದ ಇವರಿಗೆ ಮಾರುವೇಷದ ಶಿವ ಪಾರ್ವತಿಯರು, ಮಾಣಿಕ್ಯದ ಮತ್ತು ಜಂಬುನೀಲದ ಹರಳನ್ನು ಜಗುಲಿಯ ಮೇಲಿಟ್ಟು ಪೂಜಿಸಿ ಎಂದು ಹೇಳಿ ಹೊರಟುಹೋದರು. ಸೋಮರಾಯ ಮತ್ತು ತುಕ್ಕಪ್ಪರಾಯ ಬಂದ ನಂತರ ಎಲ್ಲರೂ ಕೂಡಿ ಜಗುಲಿ ನೋಡಿದರೆ ಅಲ್ಲಿ ಎರಡು ಗಂಡು ಮಕ್ಕಳು ಆಡುತ್ತಿದ್ದವು. ಇವರೇ ಜಕ್ಕಪ್ಪ ಮತ್ತು ಮಾಳಪ್ಪ. ಅಲ್ಲಿ ಜಯನೀಲದ ಹರಳಿನಿಂದ ಜಕ್ಕಪ್ಪ, ಮಾಣಿಕ್ಯದ ಹರಳಿನಿಂದ ಮಾಳಿಂಗರಾಯರ ಜನನವಾಗಿತ್ತು.

ದಿನಗಳು ಕಳೆದಂತೆ ಒಂದು ದಿನ ಕಳ್ಳ ಬೇಟೆಗಾರರ ಕೈಯಲ್ಲಿ ತುಕ್ಕಪ್ಪರಾಯ ಸಿಕ್ಕಿ ಮರಣವನ್ನು ಹೊಂದುತ್ತಾನೆ. ಮಕ್ಕಳ ಜವಾಬ್ದಾರಿಯನ್ನು ಹೊತ್ತ ಸೋಮರಾಯ, ಗೋರಖನಾಥರ ಬಳಿ ಇವರನ್ನು ವಿದ್ಯಾಭ್ಯಾಸಕ್ಕಾಗಿ ಬಿಡುತ್ತಾನೆ. ಸರ್ವರೀತಿಯ ವಿದ್ಯೆಯಲ್ಲಿ ಪಳಗಿದ ಮಕ್ಕಳಿಗೆ ಸೋಮರಾಯ, ಮದುವೆ ಮಾಡಲು ನಿಶ್ಚಯಿಸುತ್ತಾನೆ. ಅದರಂತೆ ಮಾಳಿಂಗರಾಯನಿಗೆ ಈರಮ್ಮ ಹಾಗೂ ಶರಣಮ್ಮ ಎಂಬ ಇಬ್ಬರು ಹೆಂಡಿರನ್ನು ಮದುವೆ ಮಾಡಿಸುತ್ತಾನೆ.[೨೨]

**ಬೀರಪ್ಪನ ಶಿಷ್ಯನಾಗಿ:**

ಮಾಳಿಂಗರಾಯನ ಹಿರಿಯರು, ಶ್ರೇಷ್ಠ ಗುರುಗಳ ಬಳಿ ಉತ್ತಮ ಶಿಷ್ಯತ್ವವನ್ನು ಪಡೆದಿದ್ದ ಪರಂಪರೆಯನ್ನು ಹೊಂದಿದ್ದರಿಂದ, ಮಾಳಿಂಗರಾಯನು ಸಹ ಶಿಷ್ಯತ್ವದ ವ್ಯಕ್ತಿತ್ವವನ್ನು ಪಡೆದವನಾಗಿದ್ದನು. 'ಹಾಲಿನಂಥ ಗುರು, ಸೀತಾಳದಂತ ಶಿಷ್ಯರಿರಬೇಕೆಂಬುದೇ' ಈ ಕಾವ್ಯದ ಸಂದೇಶ. ಇಡೀ ಕಾವ್ಯದ ತುಂಬ ಗುರು ದೇವರಾಗಿ, ಶಿಷ್ಯ ಪೂಜಾರಿಯಾಗಿ ಕಾಣುತ್ತಾರೆ. ನಿಷ್ಠೆ, ತ್ಯಾಗ, ವಿಶ್ವಾಸ, ಸ್ಥೈರ್ಯ ಗುಣಗಳಿಗೆ ಮಾಳಿಂಗರಾಯನದು ಹೇಳಿ ಮಾಡಿಸಿದ ವ್ಯಕ್ತಿತ್ವ. ಇಂತಹ ಎಲ್ಲಾ ಗುಣಗಳು ಕನಕದಾಸರನ್ನು ಪ್ರಭಾವಿಸಿದ್ದುದನ್ನು ಅವರ ವ್ಯಕ್ತಿತ್ವದಿಂದಲೇ ತಿಳಿಯಬಹುದು.

ಶಿವನ ವರಪ್ರಸಾದದಿಂದಾಗಿ ಬೀರಪ್ಪನಿಗೆ, ಮಾಳಿಂಗರಾಯ ಶಿಷ್ಯನಾಗಿ ದೊರೆತ. ಬೀರಪ್ಪನ ದರ್ಶನದಿಂದಾಗಿ ಮಾಳಿಂಗರಾಯ ಕೊನೆಯವರೆವಿಗೂ ಆತನ

ಶಿಷ್ಯನಾಗಿಯೇ ಉಳಿಯುತ್ತಾನೆ. ಮುಂದೆ ಮಾಳಿಂಗರಾಯ ಬೀರಪ್ಪನ ಕುರಿಗಳ ಮೇಲ್ವಿಚಾರಣೆಯನ್ನು ತಾನೇ ವಹಿಸಿಕೊಂಡು ಗೌಡಗಿರಿಯ ಅಡವಿಯಿಂದ ಆ ಕುರಿಗಳನ್ನು ಹೊಡೆದು ತಂದು ಬಿಜ್ಜಳಗುಂತಿಯಲ್ಲಿ ದೊಡ್ಡಿಯನ್ನು ಕಟ್ಟಿ ಇವುಗಳನ್ನು ಕಾಯಲು ತನ್ನ ಮಕ್ಕಳನ್ನು ನೇಮಿಸಿದನು.

ಶಿಷ್ಯನಾದ ಮಾಳಿಂಗರಾಯನನ್ನು ಬೀರಪ್ಪ ಪರಿಪರಿಯಾಗಿ ಪರೀಕ್ಷಿಸುತ್ತಾನೆ. ಇಂತಹ ಪರೀಕ್ಷೆಗಳ ಪ್ರಭಾವವೋ ಎಂಬಂತೆ ವ್ಯಾಸರಾಯರು ಕೂಡ ಕನಕದಾಸರನ್ನು ಪರಿಪರಿಯಾಗಿ ಪರೀಕ್ಷಿಸುತ್ತಾನೆ. ಈ ಎಲ್ಲಾ ಪರೀಕ್ಷೆಗಳ ಹಿಂದೆ ಕನಕದಾಸರ ಶ್ರೇಷ್ಠತೆಯನ್ನ ಲೋಕಕ್ಕೆ ತಿಳಿಸುವುದು ವ್ಯಾಸರಾಯರ ಹಂಬಲವಾಗಿತ್ತು. ಇಲ್ಲಿಯೂ ಮಾಳಿಂಗರಾಯನ ಶ್ರೇಷ್ಠತೆಯನ್ನು ಲೋಕಕ್ಕೆ ತಿಳಿಸುವುದು ಬೀರಪ್ಪನ ಉದ್ದೇಶವಾಗಿರುತ್ತದೆ. ಇಲ್ಲಿನ ಬೀರಪ್ಪ ನೀಡಿದ ಎಲ್ಲಾ ಪರೀಕ್ಷೆಗಳನ್ನು ಎದುರಿಸಲು ಸಾಧ್ಯವಾದುದು ಮಾಳಪ್ಪನೂ ವೀರಪರಂಪರೆಯವನಾಗಿದ್ದುದರಿಂದಲೇ.[೨೪]

ಮಾಳಪ್ಪನ ಪೂರ್ವಜರು ನಿರಂತರವಾಗಿ ಬೇಡರೊಂದಿಗೆ ಹೋರಾಟವನ್ನು ಮಾಡಿಕೊಂಡು ಬಂದವರೇ ಆಗಿದ್ದಾರೆ. ವೀರ ಪರಂಪರೆಯ ಇತಿಹಾಸ ಹೊಂದಿದ ಮಾಳಪ್ಪ ಹನ್ನೆರಡುನೂರು ದಂಡಿನ ಮಾಲಿಕನಾಗಿದ್ದು, ಬಿಳಿಯ ಕುದುರೆ ಮತ್ತು ಹಸಿರು ನಿಶಾನೆ ಹೊಂದಿದವನಾಗಿದ್ದಾನೆ. ಮಾಳಿಂಗರಾಯ ಸಿಡಿಯಾಣದಲ್ಲಿ ಬೀರಪ್ಪನಿಗೆ ಗುಡಿ ಕಟ್ಟಿಸುತ್ತಾನೆ. ಹಾಗೂ ಶ್ರದ್ಧೆ ನಿಷ್ಠೆಯಿಂದ ಪೂಜೆಯನ್ನೂ ಮಾಡುತ್ತಾನೆ. (ಈ ವಿಚಾರವನ್ನು ಹಾಲುಮತ ಕಾವ್ಯದಲ್ಲಿ ಚರ್ಚಿಸಲಾಗಿದೆ.) ಕನಕದಾಸರೂ ಕೂಡ ತಾನು ಢಣಾಯಕನಾಗಿ ಒಂದು ಪಾಳೆಪಟ್ಟಿನ ಅಧಿಕಾರಿಯಾಗಿದ್ದಾಗ ದಂಡಿನ ಮಾಲೀಕನಾಗಿದ್ದುದರ ಜೊತೆಗೆ ಗುಡಿ ಕಟ್ಟಿಸುವುದು, ಶ್ರದ್ಧೆ ನಿಷ್ಠೆಯಿಂದ ವಿಶೇಷ ಪೂಜೆ ಮಾಡಿಸುವ ಕೈಂಕರ್ಯದಲ್ಲಿ ತೊಡಗಿರುತ್ತಿದ್ದುದು ಕೂಡ ಇಂತಹ ಜನಪದೀಯ ಹಿನ್ನಲೆಯಿಂದಲೇ ಎಂಬುದನ್ನು ಮನಗಾಣಬಹುದು.

ಮುಂದೆ ಮಾಳಪ್ಪನನ್ನು ಪರೀಕ್ಷಿಸಲು ಬಂದ ಅಮೋಘಸಿದ್ಧನು ಸಹ ಸೋತು ತಾನು ಕಲಿತ ಎಲ್ಲಾ ವಿದ್ಯೆಗಳನ್ನು ಮಾಳಿಂಗರಾಯನಿಗೆ ನೀಡಿ ಬಿಳಿಯ ನಂದಿ, ಕರಿಕಂಬಳಿ, ಪ್ರಸಾದದ ಬಟ್ಟಲು, ಎಲ್ಲವನ್ನು ಕೊಡಮಾಡಿದನು. ಇದಕ್ಕೆ ಪ್ರತಿಯಾಗಿ ಮಾಳಿಂಗರಾಯ(ಮಾಳ) ಅಮೋಘಸಿದ್ಧನಿಗೆ ಐದು ಕುರಿಗಳನ್ನು ನೀಡಿ ಬೀಳ್ಕೊಟ್ಟನು. ಈ ಕಾಲ ಧರ್ಮದ ಪ್ರಭಾವ ಕನಕದಾಸರನ್ನು ಹೆಚ್ಚು ತಟ್ಟಿರಬಹುದು. ಹಾಗಾಗಿಯೇ ಅವರ ಹೆಗಲ ಮೇಲೆ ಕರಿಕಂಬಳಿ ಯಾವಾಗಲೂ ಇರುತ್ತಿದ್ದುದು, ಎಂಬುದನ್ನು ನಾವು ಊಹಿಸಬಹುದು. ಮುಂದೆ ಮಾಳಿಂಗರಾಯ ಬೀರಪ್ಪನೊಡಗೂಡಿ ಹಾಲುಹಳ್ಳಕ್ಕೆ ಬಂದು ಲಿಂಗವಾಗಿ ನಿಂತರು. ಗುರುಶಿಷ್ಯರ ದರ್ಶನದಿಂದ ಜನ ಹರ್ಷಗೊಂಡರು. ಮೀಸಲು ಎಡೆಮಾಡಿ ಪೂಜಿಸತೊಡಗಿದರು.

**ಮಾಳಿಂಗರಾಯ ಮತ್ತು ಪಶುಪಾಲನೆ :**

ಕಾವ್ಯದಲ್ಲಿ ಬರುವಂತೆ ಬೀರಪ್ಪ ಕುರಿಕಾಯುವ ವೃತ್ತಿಯನ್ನು ಹೊಂದಿದ್ದರೆ, ಮಾಳಿಂಗರಾಯ ಆಕಳುಗಳನ್ನು ಕಾಯುವ ಕುಲದವನಾಗಿದ್ದನು. ಮಾಳಿಂಗರಾಯನ ಪೂರ್ವಜರು ದನಗಾಹಿಗಳಾಗಿದ್ದು ಸುಮಾರು ಏಳುನೂರು ಆಕಳುಗಳನ್ನು ಹೊಂದಿದ್ದರು. ಮಾಳಿಂಗರಾಯನೂ ದನಗಾಹಿಯಾಗಿದ್ದು ಪಶುಪಾಲನೆಯ ವೃತ್ತಿಯ ಮನೆತನದವನಾಗಿದ್ದರಿಂದ ಕುರಿಗಾಹಿ ಬೀರಪ್ಪನ ಮೇಲೆ, ಆತನಶಕ್ತಿ, ಸಾಮರ್ಥ್ಯಗಳ ಮೇಲೆ ನಂಬಿಕೆಯುಂಟಾಗಲು ಕಾರಣವಾಯಿತು.

ಕಾವ್ಯದಲ್ಲಿ ಬರುವ ಕುರಿ, ಎತ್ತು, ಆಕಳು, ಕಂಬಳಿ, ಹಾಲುಹಳ್ಳ ಈ ಎಲ್ಲಾ ಪದಗಳು ನಮ್ಮ ಜನಪದರು ಪಶುಪಾಲನೆಯನ್ನು ಮುಖ್ಯ ಕಸುಬಾಗಿ ಹೊಂದಿದ್ದು, ಇಲ್ಲಿ ಬರುವ ನಾಯಕರು ಪಶುಪಾಲಕರ ರಕ್ಷಕರಾಗಿದ್ದರು ಎಂಬುದಕ್ಕೆ ಪುಷ್ಟಿ ನೀಡುತ್ತವೆ. ಇಲ್ಲಿನ ಕಥೆ; ಪಶುಪತಿ ಶಿವನ ಅಣತಿಯಂತೆಯೇ ನಡೆಯುವುದರಿಂದ ಪಶುಪಾಲನ ವೃತ್ತಿಯು, ಕಾವ್ಯ ಸೃಷ್ಟಿಯ ಸಂದರ್ಭದಲ್ಲಿ ಗಾಢವಾಗಿ ಬೆಳೆದಿತ್ತು ಎಂಬುದು ಓದುಗರಿಗೆ ವೇದ್ಯವಾಗುತ್ತದೆ. ಬೀರದೇವರ ಗುಡಿಗಳಲ್ಲಿ ಪರಿವಾರದ ದೇವರುಗಳಾಗಿ, ಮಾಳಿಂಗರಾಯ, ಮೈಲಾರಲಿಂಗ, ಭರಮಲಿಂಗ, ದೈವಗಳು ಪೂಜೆಗೊಳ್ಳುತ್ತವೆ. ಈ ದೇವರುಗಳ ಬಗ್ಗೆ ಮುಂದೆ ಕನಕದಾಸರಾದರೋ 'ಠಕ್ಕು ದೇವರ ಗೊಡವೆ ಬೇಡ ನರಕ ತಪ್ಪದು' ಎಂದು ಹೇಳಿರುವುದು ಧರ್ಮ ಮತ್ತು ದೇವರ ಬಗ್ಗೆ ಬಡಾಯಿ ಬಡುಕರ ಢಾಂಬಿಕತೆಯನ್ನು ವಿರೋಧಿಸುವುದಾಗಿದೆ. ನೀತಿ ತಪ್ಪಿದವರು ಹೀನ ವೃತ್ತಿಯನ್ನು ಮಾಡುತ್ತಲೇ ಪಟ್ಟೆ ನಾಮವ ಬಳಿದು ತಾವೇ ಸೃಷ್ಟಿಸಿದ ಡೊಂಬಿ ದೈವಗಳನ್ನು ಭಜಿಸುವುದು ಪೂಜಿಸುವುದು ವೃಥಾ ಕೂಡದೆಂದು ಹೇಳುವುದರ ಮೂಲಕ ನಿಜ ಭಕ್ತಿಯ ಸೃಷ್ಟಿಕಾರರಾದ ಪಶುಪಾಲಕರ ಪರವಾಗಿ ನಿಲ್ಲುತ್ತಾರೆ.

ಹಾಗೆಯೇ ಸಿಂಧು ಕಣಿವೆ ಪ್ರದೇಶದಲ್ಲಿದ್ದ ಪಶುಪಾಲಕರು ಪಶುಪತಿ ರೂಪದಲ್ಲಿ ಮಹಾಲಿಂಗನನ್ನು ಪೂಜಿಸುತ್ತಿದ್ದರು. ಹಾಗೂ ಮಧ್ಯ ಭಾರತದಲ್ಲಿ ಗೊಂಡರು ಪಶುಪತಿಯ ರೂಪದಲ್ಲಿ ಮಾಳಿಂಗರಾಯನನ್ನು ಪೂಜಿಸುತ್ತಿದ್ದರು. ಅಂದರೆ ಮಹಾಲಿಂಗ ಕುರುಬ ಕುಲದವನಾಗಿದ್ದು ಪಶುಪಾಲಕನಾಗಿದ್ದನೆಂಬುದು ಇದರಿಂದ ತಿಳಿಯುತ್ತದೆ. ಇಂದು ಕಂಡು ಬರುತ್ತಿರುವ ಮಾಳಿಂಗನ ಪ್ರಮುಖ ನೆಲೆಗಳಾದ ಗುಲ್ಬರ್ಗ ವಿಶ್ವವಿದ್ಯಾಲಯದ ಅತಿಥಿಗೃಹದ ಆವರಣದಲ್ಲಿರುವ ಮಹಲಿಂಗ ದೈವದ ಮೂಲ, ಪಕ್ಕದ ಕುಶನೂರು ಗ್ರಾಮದ ಹಾಲುಮತ ಕುರಿಗಾಹಿಗಳಿಗೆ ಸೇರಿದುದಾಗಿತ್ತು. ಈ ಗ್ರಾಮದ ಗುಡ್ಡಕ್ಕೆ ಮಹಾಲಿಂಗನ ಗುಡ್ಡವೆಂದು ಈಗಲೂ ಕರೆಯುತ್ತಾರೆ.[೨೫] ಈ ಗುಡ್ಡದ ಮೇಲೆ ವಿಶಾಲವಾದ ಬಯಲಿದ್ದು ಕುರುಚಲು ಸಸ್ಯರಾಶಿ ಹಾಗೂ

ಸಮೀಪದಲ್ಲಿ ನೀರಿನಸೆಲೆ ಇರುವುದನ್ನು ಕಾಣಬಹುದು. ಇಲ್ಲಿ ಬಹುಕಾಲದವರೆಗೆ ಕುರಿಗಾರರು ನೆಲೆನಿಂತಿರುವ ಸಾಧ್ಯತೆಗಳು ಇರುವುದನ್ನು ಊಹಿಸಬಹುದು. ಹಾಗಾಗಿ ಗುಲ್ಬರ್ಗ ವಿಶ್ವವಿದ್ಯಾಲಯದ ಅತಿಥಿ ಗೃಹದ ಪ್ರಾಂಗಣದ ಏಳುಮಕ್ಕಳ ತಾಯಿಯ ಪ್ರಾಕೃತಿಕ ದೇಗುಲಕ್ಕೆ ಹೊಂದಿಕೊಂಡಂತೆ ಇರುವ ಹುತ್ತದ ಕಲ್ಲುಕುಪ್ಪೆಯ ಮಹಾಲಿಂಗನ ದೇವಾಲಯ, ಈಗ ಜೀರ್ಣೋದ್ಧಾರವಾಗಿ ಪೂಜಿಸಲ್ಪಡುತ್ತಿದೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳಲ್ಲಿನ ಕಾಡು–ಮೇಡಿರುವ ಭಾಗಗಳಲ್ಲಿ ಮಹಾಲಿಂಗ ಮತ್ತು ಬೀರಪ್ಪ ಕಲ್ಲು ಕುಪ್ಪೆಯ ದೇವರುಗಳಾಗಿಯೇ ಪೂಜಿಸಲ್ಪಡುತ್ತಿದ್ದರು.

ಸಹಜವಾಗಿ ಕುರಿಗಾಹಿಗಳು ಅಲೆಮಾರಿಗಳಾಗಿದ್ದು, ತಮ್ಮ ರಾಸುಗಳಿಗೆ ಮೇವು ನೀರನ್ನು ಅರಸಿಕೊಂಡು ಕಾಡು, ಬೆಟ್ಟ, ಗುಡ್ಡಗಳನ್ನು ಚಾರಣ ಮಾಡುತ್ತಿದ್ದರು. ಹೀಗೆ ಚಾರಣ ಸಂದರ್ಭದಲ್ಲಿ ಪ್ರಕೃತಿಯ ವಿಸ್ಮಯಗಳಿಗೆ ಹೆದರುತ್ತಿದ್ದ ಅವರು, ತಮ್ಮ ರಾಸುಗಳನ್ನು ಕಾಳ್ಗಿಚ್ಚು, ಬಿರುಗಾಳಿ, ಭೂಕಂಪ, ಅತಿವೃಷ್ಟಿ, ಬರಗಾಲ, ಮತ್ತು ರೋಗ ರುಜಿನಗಳಿಂದ ರಕ್ಷಿಸಲು ಸೂರ್ಯ, ಚಂದ್ರ, ಭೂಮಿ, ಬೆಂಕಿ, ಗಾಳಿಯನ್ನು ಪೂಜಿಸುತ್ತಿದ್ದಂತೆಯೇ ಕಂಡಕಲ್ಲುಗಳನ್ನು ಕುಪ್ಪೆ ಮಾಡಿ ಅದನ್ನು ದೇವರೆಂದು ನಂಬಿ ಪೂಜಿಸತೊಡಗಿದರು.[೨೬]

ಕ್ರಮೇಣ ಈ ಕಲ್ಲು ಕುಪ್ಪೆಗಳಿಗೆ ಆಯಾ ಕುರಿ ಮತ್ತು ಪಶುಪಾಲಕರು ಸಮುದಾಯದ ರಕ್ಷಣೆಗಾಗಿ ಶ್ರಮಿಸಿ ಗತಿಸಿದ ನಾಯಕರ ಹೆಸರಿಟ್ಟು ಭಕ್ತಿಯಿಂದ ನಡೆದುಕೊಳ್ಳತೊಡಗಿದರು. ಅದಕ್ಕಾಗಿಯೇ ಈಗಿನ ಬೀರಪ್ಪ, ಮಾಳಿಂಗ, ಮೈಲಾರ, ಯತ್ತಪ್ಪ, ಭೂತಪ್ಪ, ಜುಂಜಪ್ಪನ ಮೂಲದೇವಾಲಯಗಳಲ್ಲಿರುವ ಮೂರ್ತಿಗಳು ಮೂಲ ಕಲ್ಲಿನ ರೂಪದಲ್ಲಿಯೂ, ಲಿಂಗಾಕೃತಿಯಲ್ಲಿಯೂ ಕಂಡುಬರುತ್ತವೆ. ಈ ಲಿಂಗಗಳನ್ನು ಪಾನವಟಲಿಂಗ, ಶಿವಲಿಂಗ, ಶಂಕರಲಿಂಗ, ಉದ್ಭವಲಿಂಗ, ಮಹಾಲಿಂಗ, ಮಹದೇವ, ಇತ್ಯಾದಿ ವಿಭಿನ್ನ ಹೆಸರುಗಳಿಂದ ಕರೆಯಲಾಗುತ್ತಿದೆ. ಇವೆಲ್ಲವೂ ಪಶುಪಾಲಕರ ಆರಾಧ್ಯ ದೈವಗಳೇ. ಕಾಲಾನಂತರದಲ್ಲಿ ಈ ಭಾಗದಲ್ಲಿ ಕೃಷಿ ಕಾಯಕ ಕೈಗೊಂಡ ಕೃಷಿಕರು ಮೂಲ ಮೂರ್ತಿಗಳ ಪೂಜೆಯನ್ನು ಮುಂದುವರೆಸಿಕೊಂಡರು. ನಂತರ ದೇವಾಲಯ ನಿರ್ಮಾಣವಾಗಿ ದೇವರೆಂದು ನಂಬಿ ಪೂಜಿಸುತ್ತಿದ್ದು, ಕಲ್ಲು ಕುಪ್ಪೆಗಳ ಜಾಗದಲ್ಲಿ* ಸುಂದರ ಆಕೃತಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರು.[೨೭]

---

* ಗುಲ್ಬರ್ಗ ವಿಶ್ವವಿದ್ಯಾಲಯದ ಹತ್ತಿರದ ಗ್ರಾಮವಾದ ಈಗಿನ ಕುಶನೂರು ಗ್ರಾಮದ ಮಹಾಲಿಂಗನ ಹಳೆಯ ದೇಗುಲದ ಜೀರ್ಣೋದ್ಧಾರ ಸಂದರ್ಭದಲ್ಲಿ ಗರ್ಭಗುಡಿಯಲ್ಲಿದ್ದ ಮೂಲ ಶಿಲ್ಪವನ್ನು ಗುಡಿಯ ಹಿಂದೆ ಈಗಲೂ ಇರಿಸಲಾಗಿದೆ. ಈ ಶಿಲ್ಪಕ್ಕೆ ಯಾವ ರಕ್ಷಣೆಯನ್ನು ಇಲ್ಲಿನ ಜನ ನೀಡಿಲ್ಲ.

ಹೀಗೆ ಭಾರತದಲ್ಲಿ ಕುರಿ ಮತ್ತು ಪಶುಪಾಲಕರ ಆರಾಧ್ಯ ದೈವವಾದ ಮಾಳಿಂಗರಾಯ (ಮಾಳಪ್ಪ, ಮಹಾಲಿಂಗ) ಈ ಸಮುದಾಯದ ನಾಯಕನಾಗಿ, ಬೀರಪ್ಪನಂತಹ ಸಾಂಸ್ಕೃತಿಕ ವೀರನ ಶಿಷ್ಯನಾಗಿ ಅಲೆಮಾರಿ ಪಶುಪಾಲಕರ ಸವಾಲುಗಳನ್ನು ಎದುರಿಸುತ್ತಲೇ ಸಮುದಾಯದ ರಕ್ಷಕನಾಗಿ ಬದುಕಿದಂತಹವನು. ಹಾಗಾಗಿಯೇ ಮುಂದೆ ಕನಕದಾಸರಾಗಲಿ ಆತನ ತಂದೆ ಬೀರಪ್ಪನಾಯಕನಾಗಲೀ ಒಂದು ಸಮುದಾಯದ ರಕ್ಷಕರಾಗಿ ಬೆಳೆದು ನಿಲ್ಲುವುದು ಈ ಪಶುಪಾಲನಾ ಪರಂಪರೆಯ ಪ್ರಭಾವದಿಂದಲೇ ಎಂದು ಗಮನಿಸಬಹುದು. ಇಂತಹ ಜವಾಬ್ದಾರಿ ಕನಕದಾಸರಿಗೆ ಬೇಸರಾದಾಗ, 'ಸಾಕು ಸಾಕು ಮನುಜ ಸೇವೆಯು ರಂಗಯ್ಯ ಇನ್ನು, ಸಾಕು ಸಾಕು ಮನುಜ ಸೇವೆಮಾಡಿ ದಣಿದು ನೊಂದೆ ನಾನು ಎನ್ನುತ್ತಲೇ; ಹಲವು ದಾಸರ ಮನೆಯ ಹೊಲೆಯ ದಾಸ ನಾನಯ್ಯಾ' ಹಾಗಾಗಿ 'ಶ್ರೀಪತಿ ನೆಲೆಯಾದಿ ಕೇಶವನ ಚರಣ ಸಮೀಪದಲಿ ವಾಸಿಸುವುದೇ ವಾಸಿ ಮನವೇ' ಎಂಬ ತೀರ್ಮಾನಕ್ಕೂ ಬರುತ್ತಾರೆ. ಈ ನಿರ್ಧಾರ ಕಾಲಧರ್ಮದ ಪರಿಣಾಮದಿಂದ ಎನ್ನಬಹುದು. ಮಾಳಿಂಗರಾಯ ಮಾತ್ರ ಅಂದಿನಿಂದಲೂ ಪಶುಪಾಲಕರಿಂದ ಪೂಜಿಸಲ್ಪಡುತ್ತಿದ್ದು ಆಧುನಿಕವಾಗಿ ವಿವಿಧ ಜನಾಂಗಗಳಿಂದಲೂ ಈಗ ಆರಾಧಿಸಲ್ಪಡುತ್ತಿದ್ದಾನೆ.

**ಕುರಿಗಾರರ ಕಾಲಜ್ಞಾನ (ರಟ್ಟಮತಶಾಸ್ತ್ರ)**

ಕುರಿಗಾರರು ಭೂಮಿಯನ್ನೇ ಹಾಸಿಗೆಯನ್ನಾಗಿಯೂ, ಆಕಾಶವನ್ನೇ ಹೊದಿಕೆಯನ್ನಾಗಿಸಿಕೊಂಡು, ಪೂರ್ವಕಾಲದಿಂದಲೂ ನಿಸರ್ಗದ ಕ್ರಿಯೆಗಳೊಂದಿಗೆ ಕ್ರಿಯಾಶೀಲರಾಗಿ ತಮ್ಮ ಬದುಕನ್ನು ಸಾಗಿಸಿಕೊಂಡು ಅದನ್ನೇ ತಮ್ಮ ಜ್ಞಾನದ ತೆರೆದ ಗ್ರಂಥವೆಂದು ಭಾವಿಸಿ, ಬದುಕು ಕಟ್ಟಿಕೊಂಡವರು. ನೀರು ಬೆಂಕಿ, ವಾಯು, ಭೂಮಿ ಮತ್ತು ಆಕಾಶಗಳ ರಹಸ್ಯವನ್ನು ತಮ್ಮ ಅನುಭವದ ಆಳದಿಂದ ಕಂಡುಕೊಳ್ಳಲು ಪ್ರಯತ್ನಿಸಿದವರು.

ಹಿಂದಿನ ಆರೇಳು ತಲೆಮಾರುಗಳ ಪ್ರಯತ್ನದ ಫಲವಾಗಿ 'ಕುರುಬರ ರಟ್ಟಮತಶಾಸ್ತ್ರ' ಎಂಬ ಗ್ರಂಥ ಹೊರಹೊಮ್ಮಿತು. ಈ ಗ್ರಂಥ ಜನಮಾನಸದಲ್ಲಿ ಬಹು ಜನಪ್ರಿಯತೆಯನ್ನು ಪಡೆದುಕೊಂಡು, ಇಲ್ಲಿನ ಪ್ರತಿಯೊಂದು ಹೇಳಿಕೆಗಳೂ ಭವಿಷ್ಯವಾಣಿಯಾಗಿ ಮೂಡಿಬಂದಿದ್ದರಿಂದ ಕಾಲಜ್ಞಾನ ಹೇಳುವ ಮೂಲ ಗ್ರಂಥವೆಂಬ ಹೆಸರಿಗೆ ಈ ಕೃತಿ ಭಾಜನವಾಯಿತು. ಇಲ್ಲಿನ ಅನುಭವಗಳು ಕುರಿಗಾರರಲ್ಲಿ ಹೆಚ್ಚಾಗಿ ಕಂಡು ಬರುವುದರಿಂದ ಪಶುಪಾಲಕರೆನಿಸಿಕೊಂಡ ಕುರುಬ ಸಮುದಾಯದ ಮಹಾಕಾವ್ಯವೆಂದೇ ಕರೆಯಲ್ಪಡುತ್ತಿದೆ.[೨೮]

**ಹಿನ್ನೆಲೆ :**

ನಕ್ಷತ್ರ, ಗ್ರಹ, ಸೂರ್ಯ, ಚಂದ್ರ ಮುಂತಾದ ಆಕಾಶ ಕಾಯಗಳು, ಮಾನವನ ಜೀವನದ ಮೇಲೆ ಬೀರುವ ಪ್ರಭಾವವನ್ನು ಗುರುತಿಸುವ ಶಾಸ್ತ್ರವೇ 'ಜ್ಯೋತಿಷ್ಯ ಶಾಸ್ತ್ರ'. ಬಹಳ ವರ್ಷಗಳ ಹಿಂದೆಯೇ ನಕ್ಷತ್ರಗಳ ವಿಜ್ಞಾನವನ್ನು ನೈಸರ್ಗಿಕ ಜ್ಯೋತಿಷ್ಯ ಶಾಸ್ತ್ರವೆಂದು ಕರೆಯಲಾಗುತ್ತಿದೆಯಾದರೂ ಅದಕ್ಕೆ ವಿಜ್ಞಾನ ವಿಷಯದಲ್ಲಿ ಖಗೋಳ ವಿಜ್ಞಾನವೆಂದು ಕರೆಯುವುದು ರೂಢಿಯಾಗಿತ್ತು.ಹೀಗೆ ಆಕಾಶದಲ್ಲಿ ನಕ್ಷತ್ರಗಳ ಸ್ಥಾನ ಬದಲಾವಣೆ, ಭೂಮಿಯ ಮೇಲಾದ ಋತುಗಳ ಬದಲಾವಣೆಗಳು, ನಕ್ಷತ್ರ ಹಾಗೂ ಭೂಮಿಗೂ ಇರುವ ಸಂಬಂಧ ಮತ್ತು ಮನುಷ್ಯನ ಮೇಲೆ ಬೀರುವ ಪ್ರಭಾವವನ್ನು ಕುರಿತಂತೆ, ಜ್ಯೋತಿಷ್ಯ ಶಾಸ್ತ್ರ ಚರ್ಚಿಸಲು ಹಾಗೂ ದಾಖಲಿಸಲು ಪ್ರಾರಂಭಿಸಿತು. ಈ ಹಿನ್ನೆಲೆಯಲ್ಲಿ ಹಾಗೂ ಪರಿಸರದಲ್ಲಾಗುವ ವಿದ್ಯಾಮಾನಗಳಾದ ಗ್ರಹಣ, ಮಳೆ, ಚಳಿ, ಬೇಸಿಗೆ, ಅಮವಾಸ್ಯೆ, ಹುಣ್ಣಿಮೆ, ರಾತ್ರಿ, ಹಗಲು, ಗ್ರಹಚಲನೆ, ಆಕಾಶಕಾಯ ಇತ್ಯಾದಿ ವಾಯುಮಂಡಲದ ಸ್ಥಿತಿಗತಿಗಳನ್ನು ತಿಳಿಯುವ ಸಲುವಾಗಿ ಅಂದಿನ ಪಶುಪಾಲಕರು ಶಾಸ್ತ್ರವೊಂದನ್ನು ರೂಪಿಸಿಕೊಂಡರು. ಇಂತಹ ಅನುಭವಾತ್ಮಕ ಪರಿಶೀಲನೆಯ ವಿಧಾನಗಳನ್ನು ಒಳಗೊಂಡ ಶಾಸ್ತ್ರವೇ 'ಕುರುಬರ ರಟ್ಟಮತಶಾಸ್ತ್ರ' ಅಥವಾ ಕುರುಬರ ಕಾಲಜ್ಞಾನ.[೨೯]

**ಕುರಿಗಾರರ ಕಾಲಜ್ಞಾನ ಮತ್ತು ಪಶುಪಾಲನಾ ಪರಂಪರೆ**

ಕುರಿಗಾರರು ಸಾಮಾನ್ಯರಲ್ಲ. ಭವಿಷ್ಯವಾಣಿಗಳನ್ನು ನುಡಿದ ಮೊದಲನೆಯ ಕಾಲಜ್ಞಾನಿಗಳೆನಿಸಿಕೊಳ್ಳುತ್ತಾರೆ. ಬೆಟ್ಟದ ಮೇಲೆ ನಿಂತು ಕಂಬಳಿಯನ್ನು ಬೀಸಿ ಮಳೆಗರೆದವರು. ರಾತ್ರಿಯ ವೇಳೆಯಲ್ಲಿ ಆಕಾಶದಲ್ಲಿ ಕಾಣುವ ಗ್ರಹ, ನಕ್ಷತ್ರ ರಾಶಿ ಮುಂತಾದ ಆಕಾಶ ಕಾಯಗಳನ್ನು ಗುರುತಿಸಿ ಅವುಗಳಿಗೆ ಒಂದೊಂದು ಹೆಸರನ್ನಿಟ್ಟು ಅವುಗಳ ಪರಿಣಾಮವನ್ನು ಗುರುತಿಸಿದರು. ಆಯಾ ದಿಕ್ಕಿನಿಂದ ಬೀಸುವ ಗಾಳಿಗಳ ವಸ್ತು ಸ್ಥಿತಿಯನ್ನು ಅರಿತು ಅವುಗಳಿಗೆ ವಿವಿಧ ಹೆಸರುಗಳನ್ನು ಕೊಟ್ಟು ಅವುಗಳ ಫಲಾಫಲಗಳನ್ನು ಆಯಾ ಮಳೆಗಳಿಗೆ ಅವುಗಳ ಸ್ವಭಾವಕ್ಕೆ ತಕ್ಕಂತೆ, ನಕ್ಷತ್ರಗಳ ಹೆಸರನ್ನಿಟ್ಟು ಅವುಗಳ ಬರುವಿಕೆಯನ್ನು, ಬಾರದಿರುವಿಕೆಯನ್ನು ಹೇಳುತ್ತಿದ್ದರು. ಹೀಗೆ ಹತ್ತು ಹಲವಾರು ವಿಷಯಗಳ ಕುರಿತಾಗಿ ನಿಖರವಾಗಿ ಹೇಳುತ್ತಿದ್ದ ಅನುಭಾವಿ ಕುರಿಗಾರರನ್ನು ಕಾಲ ಜ್ಞಾನಿಗಳೆಂದು ಕರೆಯುತ್ತಾರೆ.[೩೦] ಕನಕದಾಸರೂ ಸಹ ಕಾಲಜ್ಞಾನವನ್ನು ಬಲ್ಲವರಾಗಿದ್ದರು. ಕೀ.ರಂ.ನಾಗರಾಜು ಅವರು ತಮ್ಮ ಕನಕದಾಸರನ್ನು ಕುರಿತ ನಾಟಕದಲ್ಲಿ 'ಕಾಲಜ್ಞಾನಿ ಕನಕ' ಎಂದೇ ಸಂಭೋದಿಸಿದ್ದಾರೆ. ಈ ನಾಟಕದಲ್ಲಿ ಕನಕದಾಸರನ್ನು ಕೀ.ರಂ.ನಾಗರಾಜು ಅವರು ಸಾರ್ವಕಾಲಿಕ ಪ್ರತಿನಿಧಿಯಾಗಿಸಿಕೊಂಡು ವರ್ತಮಾನದ ಪಿಡುಗುಗಳಿಗೆ ಉತ್ತರವನ್ನು ಕೊಡಲೆತ್ನಿಸಿದ್ದಾರೆ.

ನಿಸರ್ಗದ ಸಹಜ ಕ್ರಿಯೆಗಳಿಗೆ ಹೊಂದಿಕೊಂಡು ತನ್ನ ಕುರಿಗಳೊಂದಿಗೆ ಭೂ ಪ್ರದೇಶವನ್ನು ತಿರುಗುವ ಕುರಿಗಾರರು, ಯಾವ ಯಾವ ಪ್ರದೇಶಗಳಲ್ಲಿ ಪರ್ವತ, ಗುಡ್ಡ, ಗಹ್ವರಗಳು, ಕಾಡುಮರಡಿಗಳ ಇರುವಿಕೆ, ಅವುಗಳಿಗೆ ಹೊಂದಿಕೊಂಡಿರುವ ನದಿಗಳ, ಹಳ್ಳಕೊಳ್ಳಗಳ, ಝುರಿಗಳ, ಕೆರೆಗಳ, ಸರೋವರಗಳ ತಿಳಿವಳಿಕೆ, ಮಳೆಬೀಳುವ ಪ್ರದೇಶವಾರು ಪ್ರಮಾಣ, ಬೆಳೆಯುವ ಬೆಳೆಗಳು, ಋತುಮಾನಕ್ಕನುಗುಣವಾಗಿ ಬೀಸುವ ಗಾಳಿಯ ದಿಕ್ಕು, ಅಮವಾಸ್ಯೆ ಹುಣ್ಣಿಮೆಗಳ ಪರಿಣಾಮ ಕುರಿತ ಹತ್ತು ಹಲವಾರು ವಿಷಯಗಳನ್ನು ಒಬ್ಬ 'ಭೂಗೋಳ ಶಾಸ್ತ್ರಜ್ಞನಂತೆ'ಕುರಿಗಾರರು ಬಲ್ಲವರಾಗಿದ್ದರು.[೨೧] ಕನಕದಾಸರು ತಮ್ಮ ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯಚರಿತೆ ಹಾಗೂ ಕೀರ್ತನೆಗಳಲ್ಲಿ ತರುವ ಕಾಡಿನ ವರ್ಣನೆ, ಪ್ರಾಣಿ, ಪಕ್ಷಿ, ಬೆಟ್ಟ, ಗುಡ್ಡ, ನದಿ, ಸರೋವರಗಳು, ಹೂಹಣ್ಣುಗಳ ಚಿತ್ರಣಕ್ಕೆ ಪ್ರೇರಣೆ ಈ ಪಶುಪಾಲನಾ ಪರಿಸರದ ಪರಿಣಾಮವೇ ಮೂಲ ಕಾರಣ ಎನ್ನಬಹುದು. ಅಡವಿ, ಮರಡಿ, ವಿಶಾಲವಾದ ಗಿರಿ ಪರ್ವತಗಳಲ್ಲಿ ಬೆಳೆದುನಿಂತ ಪ್ರತಿಯೊಂದು ಗಿಡ, ಮರ, ಬಳ್ಳಿಗಳ ಹೆಸರುಗಳೊಂದಿಗೆ ಅವುಗಳ ತೊಗಟೆ, ಎಲೆ, ಹೂವು, ಕಾಯಿ, ಬೇರು ಮುಂತಾದವುಗಳ ಸಹಾಯದಿಂದ ಔಷಧೀಯ ಗುಣವನ್ನು ಕುರಿಗಾರರು ಕಂಡುಕೊಂಡಿದ್ದರು. ತಮ್ಮ ಕುರಿ, ಪಶು, ಹಾಗೂ ಪರಿವಾರದವರಿಗೆ ರೋಗ ರುಜಿನಗಳು ಬಂದಾಗ ಯಾವ ರೋಗಕ್ಕೆ ಯಾವ ಔಷಧಿಯನ್ನು ಬಳಸಬೇಕು ಎಂಬುದು ಈ ಕುರಿಗಾರರಿಗೆ ತಿಳಿದಿರುತ್ತಿತ್ತು. ಹೀಗೆಯೇ ಗಿಡ, ಮರಗಳು ಹೂ, ಹಣ್ಣು ಬಿಡುವ ಋತುಮಾನಗಳು ಮನುಷ್ಯನು ತಿನ್ನುವ ಹಣ್ಣುಗಳು, ಆಡು, ಕುರಿ, ದನಗಳಿಗೆ ಅಡವಿಯಲ್ಲಿ ಮೇವು ಎಲ್ಲಿ, ಎಷ್ಟು ಪ್ರಮಾಣದಲ್ಲಿ ದೊರೆಯುತ್ತದೆ ಎಂಬುದನ್ನು ಹಾಗೂ ಗಿಡ ಮರಗಳ ಬಗ್ಗೆ 'ಸಸ್ಯಸಾಸ್ತ್ರಜ್ಞರಂತೆ' ಅನುಭವವನ್ನು ಹೊಂದಿದವರಾಗಿದ್ದರು.[೨೨]

ಇಂತಹ ಅನುಭವ ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿಯೂ ಮುಂದುವರೆದಿದ್ದರಿಂದ; ಕನಕದಾಸರು ತಮ್ಮ ನಳಚರಿತ್ರೆಯಲ್ಲಿನ ರಾಜ ಋತುಪರ್ಣ, ವೃಕ್ಷವಿದ್ಯೆಯಲ್ಲಿ ಅಸಮಾನ್ಯ ಜ್ಞಾನವನ್ನು ಪಡೆದಿರುವಂತೆ ರೂಪಿಸಲು ಅವರಿಗೆ ಸಾಧ್ಯವಾದುದು. ಜೊತೆಗೆ ಆಯಾ ಪಕ್ಷಿ, ಪ್ರಾಣಿ, ಕ್ರಿಮಿ, ಕೀಟಗಳ ಸ್ವಭಾವಕ್ಕನುಗುಣವಾಗಿ ಕುರಿಗಾರರು ಅವುಗಳಿಗೆ ಹೆಸರನ್ನಿಟ್ಟರು. ಅವುಗಳ ವಾಸ, ಸಂತನಾಭಿವೃದ್ಧಿ, ಗೂಡುಗಳ ವಿನ್ಯಾಸದಿಂದಲೇ ಇಂತಹುದೇ ಪಕ್ಷಿಯ ಗೂಡೆಂದು ಇವರು ಹೇಳುತ್ತಿದ್ದರು. ಪಕ್ಷಿಗಳ ವಲಸೆ, ಅವುಗಳ ಧ್ವನಿ ಕುರಿತು ವಿಶೇಷವಾದ ಅನುಭವವನ್ನು ಪಡೆದಿದ್ದರು. ಪ್ರಾಣಿಗಳನ್ನು ಯಾವಾಗ ಹೇಗೆ ಬೇಟೆಯಾಡಬೇಕೆಂಬ ತಿಳಿವಳಿಕೆಯನ್ನು ಹೊಂದಿದ್ದ ಈ ಕುರಿಗಾರರು 'ಪ್ರಾಣಿಶಾಸ್ತ್ರಜ್ಞರಂತೆಯೂ' ಕಂಡುಬರುತ್ತಾರೆ.[೨೩]ನಳಚರಿತ್ರೆಯ ನಳನು ಸಹ ಅಶ್ವವಿದ್ಯೆ ಚತುರನಾಗಿದ್ದುದು ಹಾಗೂ ಹಂಸ ಪಕ್ಷಿಯೊಂದರ ಅಂತರಾಳವನ್ನು

ರಾಜನೊಬ್ಬ ಅರಿಯುವಂತೆ ಕಾವ್ಯ ರಚಿಸಿರುವುದು ಕನಕಯುಗದ 'ಕಾಲಧರ್ಮ' ಮತ್ತು ಇದರ ಪರಿಣಾಮದ ಅನುಭವದಿಂದಾಗಿಯೇ ಅವರಿಗೆ ಸಾಧ್ಯವಾಯಿತು ಎಂದು ಊಹಿಸಬಹುದು.

ನಾವು ಇಂದು ನಿತ್ಯ ಜೀವನದಲ್ಲಿ ಬಳಸುವ, ಸಾಮಗ್ರಿಗಳು, ಆಚರಿಸುವ ಹಬ್ಬ ಹರಿದಿನಗಳಿಗೆ ಮೂಲ ಕಾರಣವಾದ ಜನಸಮುದಾಯವೇ ಈ ಕುರಿಗಾರರು. ಪ್ರಪಂಚದ ನಾಗರಿಕತೆ ಪ್ರಾರಂಭವಾದುದೇ ಪಶುಪಾಲನೆಯಿಂದ. ಪ್ರಾಚೀನ ಕಾಲದಿಂದಲೂ ಬಂದಿರುವ ರೂಢಿಗಳು ಇಂದು ನಮ್ಮ ನಡುವೆ ಭವ್ಯ ಸಂಸ್ಕೃತಿಗಳಾಗಿ ಬೆಳೆದು ನಿಂತಿವೆ. ಹಾಗಾಗಿ ನಿಸರ್ಗದ ಪ್ರತಿಯೊಂದು ಕ್ರಿಯೆಗಳಲ್ಲಿ ಕ್ರಿಯಾಶೀಲರಾದ ಪಶುಪಾಲಕರು ಅಥವಾ ಕುರಿಗಾರರು ನಾಗರಿಕತೆಯ ವಿಕಾಸಕ್ಕೆ ಕಾರಣರಾಗಿದ್ದಾರೆ. ನಿಸರ್ಗದ ಮಕ್ಕಳಂತೆ ಇದ್ದ ಕುರಿಗಾರರು ಭೂಮಿ, ಗಾಳಿ, ಆಕಾಶ, ಗ್ರಹ, ನಕ್ಷತ್ರಗಳ ಬಗೆಗೆ ನಿಖರವಾದ ಅನುಭವವುಳ್ಳವರಾಗಿದ್ದರು.

ಮಳೆಯ ವಿಚಾರದಲ್ಲಂತೂ ಈ ಕುರಿಗಾರರು ಗಾಢವಾದ ಅನುಭವವನ್ನು ಹೊಂದಿದ್ದರು. ಈಗಲೂ ಹಳ್ಳಿಯ ಕಡೆ, ಬೀಳುವ ಮಳೆಯ ಬಗ್ಗೆ ಮಾತನಾಡುವಾಗ ಕುರುಬರ ಕಾಲಜ್ಞಾನದಲ್ಲಿ ಏನು ಹೇಳಿದೆ? ಎಂದೇ ಕೇಳುತ್ತಾರೆ. ಪ್ರತಿ ಮಳೆಗೂ ನಕ್ಷತ್ರಗಳ ಹೆಸರನ್ನು ನೀಡಿ ಆಯಾ ಮಳೆಗಳ ಸ್ವಭಾವ, ಗುಣಗಳನ್ನು ತಿಳಿಸುತ್ತಾರೆ. ಹಾಗಾಗಿ ಇಂತಹ ಮಳೆಗಳನ್ನು ಕುರಿತು ಗ್ರಾಮೀಣ ಭಾಗದಲ್ಲಿ ಗಾದೆ ಮಾತುಗಳು ಬಳಕೆಯಲ್ಲಿರುವುದನ್ನು ಗಮನಿಸಬಹುದು.

ಉದಾ: ಮಗಿ ಮಳೆಯನ್ನು ಕುರಿತು ಇರುವ ಗಾದೆ ಮಾತು; 'ಆದರ ಮಗಿ, ಆಗದಿದ್ದರ ಹೊಗಿ' ಹಸ್ತದ ಮಳೆ ಕುರಿತು; 'ಆದರೆ ಹಸ್ತ, ಆಗದಿದ್ದರೆ ಹಲ್ಲು ಕಿಸ್ತ, ಹತ್ತದ ಮಳೆ ಎತ್ತಲದಾದ್ರು ಬರುತ್ತೆ' ಇತ್ಯಾದಿ ಗಾದೆ ಮಾತುಗಳಿವೆ.

ಕುರಿ, ಎತ್ತು, ಪಕ್ಷಿ, ಹಾಗೂ ಕ್ರಿಮಿ ಕೀಟಗಳ ಚಲನವಲನಗಳನ್ನು ಗಮನಿಸಿ ಮಳೆ ಬರುವ ಹಾಗೂ ಬಾರದಿರುವುದನ್ನು ಕುರಿಗಾರರು ಕಾಲಜ್ಞಾನಿಗಳಂತೆ ನಿಖರವಾಗಿ ಹೇಳುತ್ತಾರೆ. ಕುರಿಗಳು ಮೇಯುವುದನ್ನು ಬಿಟ್ಟು ಗುಂಪು ಗುಂಪಾಗಿ ನಿಂತು ಕೊಂಡರೆ, ಮಳೆ ಬರುತ್ತದೆ. ನಾಯಿಗಳು ಆಕಾಶದತ್ತ ಮುಖ ಮಾಡಿ ಬೊಗಳತೊಡಗಿದರೆ ಮಳೆ ಬರುತ್ತದೆ. ಇರುವೆಗಳು ಸಾಲಿಟ್ಟರೆ, ಗುಬ್ಬಿಗಳು ಮಣ್ಣಿನಲ್ಲಿ ಸ್ನಾನ ಮಾಡಿದರೆ, ಕೀಟಗಳು ಹಾರತೊಡಗಿದರೆ ಕುರಿಗಾಹಿಗಳ ಪ್ರಕಾರ ಖಂಡಿತ ಮಳೆ ಬರುತ್ತದೆ.

ಕುರಿಗಾರರು ಇಂಥ ನೂರಾರು ಅನುಭವದ ಜ್ಞಾನವನ್ನು ತಲೆಮಾರಿನಿಂದ ತಲೆಮಾರಿಗೆ ಹೇಳುತ್ತಾ ಬಂದಿದ್ದಾರೆ. ಇವರ ಈ ಅನುಭವಗಳೇ ಗಾದೆಗಳಾಗಿ, ಹೇಳಿಕೆಗಳಾಗಿ, ಕಾಲಜ್ಞಾನದ ಮಾತುಗಳಾಗಿ ಉಳಿದುಕೊಂಡು ಬಂದಿವೆ. ಹಾಗಾಗಿ

ಅನುಭವಿ ಕುರಿಗಾರರ ಈ ಹೇಳಿಕೆಗಳು ಶಾಸ್ತ್ರಾಧ್ಯಯನ ಮಾಡಿದ ಪಂಡಿತರಿಗಿಂತಲೂ ನಿಖರವಾಗಿರುತ್ತವೆ ಎಂಬುದು ಮಾತ್ರ ಸತ್ಯ.[೩೪] ಇಂತಹ ಕಾಲಜ್ಞಾನದ ಅರಿವು ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿಯೂ ಮುಂದುವರೆದಿದ್ದು; ಇದರ ಪರಿಣಾಮದಿಂದಲೇ ಎಂಬಂತೆ ಕನಕ 'ಕೀರ್ತನೆ'ಗಳು ಹಾಗೂ ಮುಂಡಿಗೆಗಳು ಸಹ ಕಾಲಜ್ಞಾನದ ಸಂಕೇತಗಳಾಗಿ ನಮ್ಮ ನಡುವೆ ಇವೆ.

**ಜುಂಜಪ್ಪನ ಮಹಾಕಾವ್ಯ**

ನಮ್ಮ ನಾಡಿನ ಸಾಂಸ್ಕೃತಿಕ ಪುರಾಣವನ್ನು ಬಿಂಬಿಸುವ ಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಂತೆಯೇ ಇಲ್ಲಿನ ಬುಡಕಟ್ಟು ಮಹಾಕಾವ್ಯಗಳೂ ಸಹ ಕನ್ನಡ ಸಂಸ್ಕೃತಿಯ ಮೂಲ ಆಕರಗಳಾಗಿ ಕಂಡು ಬರುತ್ತವೆ. ಭಾರತೀಯ ಸಂಸ್ಕೃತಿ ಎಂಬ ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರ ಬಂದು ಪ್ರತಿ ಭಾಷೆಯ ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆ ಹಾಗೂ ಸಂಸ್ಕೃತಿಯೂ ಇದೆ ಎಂಬ ವಾಸ್ತವದ ನೆಲೆಯನ್ನು, ಈ ಬುಡಕಟ್ಟು ಮಹಾಕಾವ್ಯಗಳ ಮೂಲಕ ಆಧುನಿಕ ಜ್ಞಾನ ಪರಂಪರೆ ಕಂಡುಕೊಳ್ಳಲೆತ್ನಿಸುತ್ತಿದೆ. ಒಂದು ಬುಡಕಟ್ಟಿನ ಪರಂಪರೆಯಲ್ಲಿ ಸೃಷ್ಟಿಯಾಗಿರುವ ದೈವ ಪುರುಷರು ಇಲ್ಲಿ ನಿರ್ಲಕ್ಷಿಸಲ್ಪಟ್ಟ ಜನವರ್ಗಗಳಿಂದ ಪೂಜಿಸಲ್ಪಡುತ್ತಿದ್ದಾರೆ. ಕಾಡು ಮತ್ತು ನಾಡಿನ ಜನವರ್ಗಗಳು ದೈವಗಳ ಬಗ್ಗೆ ಕಟ್ಟಿಕೊಂಡ ಕಥೆಗಳು ನಮ್ಮ ಸಂಸ್ಕೃತಿಯ ಇತಿಹಾಸದ ಪರಂಪರೆಯನ್ನು ನಿರೂಪಿಸಬಲ್ಲ ಮುಖ್ಯ ಸಂಗತಿಗಳಾಗಿಯೂ ಕಂಡು ಬರುತ್ತಿವೆ.

ಈ ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡಂತೆ ಕಂಡು ಬರುವ ಸಾಂಸ್ಕೃತಿಕ ಪರಂಪರೆಯ ನಾಯಕರುಗಳಾದ ಮಂಟೆಸ್ವಾಮಿ, ಮಲೆಮಾದೇಶ್ವರ, ಜುಂಜಪ್ಪ, ಮೈಲಾರಲಿಂಗನ ಕುರಿತಾದ ಜನಪದರ ಕಥನಕಗಳು, ತಾವಿರುವ ನೆಲದ ಜನ, ಭಾಷೆ, ಆಚಾರವಿಚಾರಗಳು ರೂಢಿಸಿಕೊಂಡ ಮೌಲ್ಯ, ಅಲ್ಲಿನ ಲೋಕದೃಷ್ಟಿ, ಹಾಗೂ ಸಂಸ್ಕೃತಿಯ ವಿಶೇಷಗಳನ್ನು ತಮ್ಮೊಳಗೆ ಇಟ್ಟುಕೊಂಡ, ಸಾಂಸ್ಕೃತಿಕ ಜೀವ ಕೋಶಗಳಂತೆ ಈ ಕಥನಕಗಳು ಕಂಡುಬರುತ್ತಿವೆ.

ಜನಪದ ಕಥಾನಕಗಳ ಬಹುಮುಖ್ಯ ವಿಶಿಷ್ಟತೆ ಎಂದರೆ ಜನಸಾಮಾನ್ಯರಿಗೆ ಇತಿಹಾಸದ ಬಗ್ಗೆ ಅರಿವು ಮೂಡಿಸುವುದು. ಪರಂಪರಾನುಗತವಾದ ಶಿಷ್ಟ ಮನಸ್ಸಿನ ನಂಬಿಕೆಗಳಿಗೆ ತದ್ವಿರುದ್ಧವಾಗಿ, ತಮ್ಮದೇ ಮೌಲ್ಯಗಳೊಂದಿಗೆ ವಾಸ್ತವತೆಯ ಜೀವನ ದೃಷ್ಟಿಯ ಮೂಲಕ, ಅಲ್ಲಿನ ಕಥಾನಾಯಕರು ಸಂದರ್ಭ ಬಂದಾಗ ತಮ್ಮ ಅಗಾಧತೆಯನ್ನು ಮೆರಯಬಲ್ಲರು. ಸ್ವಾಭಿಮಾನಕ್ಕೆ ಕುಂದು ಬಂದಾಗ ಉಗ್ರವಾಗಿ ಪ್ರತಿಭಟಿಸಿ ನಿಲ್ಲಬಲ್ಲರು. ಹಾಗೂ ದುಷ್ಟರನ್ನು ಕೊಲ್ಲದೆ ಪಳಗಿಸಬಲ್ಲಂತ ವಿಶೇಷ ಗುಣ ಇವರದು.

ಇಂತಹ ನಾಯಕರಲ್ಲಿ ಒಬ್ಬನಾದಂತಹ ಜುಂಜಪ್ಪ ದನಕಾಯುವ ಅನಾಥ. ಕಾಡು ಮತ್ತು ನಾಡಿನ ಸಂಬಂಧ ಸ್ಥಾಪಿಸಿಕೊಳ್ಳುತ್ತಲೇ ಬೆಳೆದವನು. ನಾಗರಿಕ ಸಮಾಜದ ದಬ್ಬಾಳಿಕೆಯಿಂದ ತಮ್ಮನ್ನು ನಂಬಿದ ಜನ ವರ್ಗಗಳನ್ನು ರಕ್ಷಿಸಿದವನು. ಈ ಹಿನ್ನಲೆಯಿಂದಾಗಿಯೇ ಕನ್ನಡನಾಡನ್ನು ಹದಿನೈದು ಹದಿನಾರನೇ ಶತಮಾನದವರೆಗೂ ಇಂತಹ ಜನಪದ ಮಹಾಕಾವ್ಯಗಳೇ ಗಾಢವಾಗಿ ಪ್ರಭಾವಿಸಿವೆಯೆಂದು ತಿಳಿಯಬಹುದು.

**ಕಾವ್ಯದ ನಾಯಕನಾಗಿ ಜುಂಜಪ್ಪ:**

ಜುಂಜಪ್ಪನ ಕಾವ್ಯ ಸಹಜವಾಗಿ ಎರಡು ಪಾಥಳಿಗಳಲ್ಲಿ ಹರಿಯುತ್ತಾ ಹೋಗುತ್ತದೆ. ಮೊದಲಿಗೆ ಜುಂಜಪ್ಪ, ತಮ್ಮ ದನಗಳನ್ನೇ ನಂಬಿಕೊಂಡು ಅವುಗಳನ್ನು ಮೇಯಿಸುವ ಕಾಯಕಕ್ಕಾಗಿ ಕಾಡು-ಮೇಡು ಅಲೆಯುವ ಅಲೆಮಾರಿ ಜನವರ್ಗವೊಂದರ ಅತಂತ್ರ ಸ್ಥಿತಿಯ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾನೆ. ಜುಂಜಪ್ಪ ಶಿವನ ವರಪ್ರಸಾದವಾಗಿ 'ಸಿನ್ನಮ್ಮ' ಎಂಬ ತಾಯಿಯ ಗರ್ಭದಲ್ಲಿ ಜನಿಸುತ್ತಾನೆ. ಕೈಲಾಸದಿಂದ ರಥಾರೂಢನಾಗಿ ಬಂದ ಶಿವನು,

ರಥಾರೂಢನಾಗಿ ಶಿವನೋ
ಇಳುದು ಬಂದನು ಸ್ವಾಮಿ
ರಾಯನೇ ಕಳುವರಲ್ಲಿ ಊರೊಳಗೆ
ಅಲೆಗೌಡನು ಮನೆಮನೆ ಮೇಲೂಕು
ರಥವೇನೆ ಇಳಿಯದಯ್ಯೋ ಗಳಿಗಾಗೋ॥
ಅಲೆಗೌಡರುಮನೆ ಮೇಲಕ್ಕೆ
ಶಿವುವನೆ ರಥವಣ್ಣ
ಇಳುದೀತು ಶಂಕರನೇ
ಆಗಲೇ ಪರಮೇಶ್ವರನು
ತಾಯಿನೇ ಸೀನಮ್ಮನ ಗರ್ಭಕು
ಇಬ್ಬರು ತಮ್ಮೊಗಳ ನಾಕಿದುನಣ್ಣಾ
ಜುಂಜಪ್ಪನ್ನ ಬಲಗಡೆ ಭುಜಕೆ
ಬಂಗಾರದ ಹಲ್ಲಿ ಮಾಡಿ
ಕಚ್ಚಿದುನೊ ಸ್ವಾಮಿ ಗಳಿಗಾಗೋ॥
ಅಂತೆಂಬ ಗಳಿಗೆವೊಳುಗೆ
ಮೂರೇಟು
ಬೆತ್ತದೊಳಗೆ ಸಿನ್ನಮ್ಮನ್ನ
ವಡುದನೋ ಪರಮೇಶ್ವರನು॥[೩೫]

ಹೀಗೆ ಶಿವ ಪಾರ್ವತಿಯರ ವರಪ್ರಸಾದದಿಂದ ಬಂಗಾರದ ಹಲ್ಲಿ ರೂಪಧರಿಸಿ

ಜುಂಜಪ್ಪ ಸೀನಮ್ಮನ ಗರ್ಭ ಸೇರಿಕೊಂಡವನು. ಇಂತಹ ಜುಂಜಪ್ಪ ಒಬ್ಬ ಪವಾಡ ಪುರುಷನಾಗಿದ್ದು ಹುಟ್ಟುವಾಗಲೇ.

ಮುಂಗಾರಿನ ಗುಡುಗೋ
ಗುಡುಗಿದಂಗಾಗಿತಣ್ಣ
ಮುಂಗಾರಿ ಸಿಡುಲಿ ವಾಲಿದಂಗಾಯಿತು
ಹಾವಿನ ಮಿಂಚೋ ಮಿಂಚಿದಂಗೆ
ತಳಕ್ಕನು ಹೊಳುದು ಸ್ವಾಮಿ
-----------------
ಪಟ್ಟನೆ ಒಡೆದು ನೆಲದ ಮೇಲೆ ಬಿದ್ದೋ ಮಗುವಾಗಿ
ಕಾರುಕಾರೆಂದತ್ತನೊ ಜುಂಜಪ್ಪ ಗಳಿಗಾಗೋ॥

ಶಿವ ಸ್ವರೂಪದ ಮಗುವಾಗಿ ಹುಟ್ಟಿ ಮುಂದೆ ತನ್ನ ತಾಯಿಗೆ ಸತ್ವ ಪರೀಕ್ಷೆಯನ್ನು ಒಡ್ಡುತ್ತಾನೆ. ತಂಗಿ (ಮಾರಕ್ಕ) ಮತ್ತು ಇಬ್ಬರು ತಮ್ಮಂದಿರಿಗೆ(ಮಾರಣ್ಣ, ಮೈಲಣ್ಣ) ಅನ್ನಾಹಾರವಿಲ್ಲದಂತೆ ಮಾಡುತ್ತಾನೆ. ಕಾಡಿನಲ್ಲಿ ಅಲೆಯುತ್ತಿದ್ದ ಸಿನ್ನಮ್ಮ ಮಕ್ಕಳಿಗೆ ಕಾಡಿನ ಸೊಪ್ಪನ್ನು ಬೇಯಿಸಿ ಕೊಡುವಾಗ,

ಸೊಪ್ಪು ನೀರೊಂದು ಮಾಡಿ
ಒಲೆಯ ಮ್ಯಾಲಿಟ್ಟವಳೇ
ಉರಿಯನ್ನ ಹಾಕ್ಯವುಳೋ
ಸೀನಮ್ಮ ಸೊಪ್ಪನ್ನೇ
ಬೇಯ್ಸವುಳ್ಳಣ್ಣ
ಮಾರಣ್ಣುನಿಗೊಂದಿಂಡಿಳಿಕೆ
ಮೈಲಣ್ಣನಿಗೊಂದಿಂಡಿಳಿಕೆ
ಸಿಕ್ಕಳು ಮಾರಿಕಾಂಬ
ಹೆಣ್ಣು ಮಗುವಿಗೊಂದಿಂಡಿಳಿಕೆ
ಸಿನ್ನಮ್ಮ ಕೊಟ್ಟವಳೊ॥

ಇದನ್ನೆಲ್ಲಾ ಕಾಡಿನಲ್ಲಿ ಮೂಗುತ್ತದ ಮರೆಯೊಳಗೆ ಜುಂಜಪ್ಪ ಕುತ್ಕಂಡು ಮಕ್ಕಳ ಕೈಯಾಗಳ ಸೊಪ್ಪನ್ನು ವಾರೆಗಣ್ಣಿನಲ್ಲಿ ನೋಡಿದ ಕೂಡಲೇ ಆ ಸೊಪ್ಪು ವಿಷ ಆಗಿಬಿಡುತ್ತದೆ. ಮಕ್ಕಳ ಹೊಟ್ಟೆ ಪಾಡಿಗಾಗಿ ಕಾಡಿನ ಸೌದೆಯನ್ನು ಹೊತ್ತು ದೂರದ ಹಿರಿಯೂರ ಪ್ಯಾಟಿಗೆ ಹೋಗಿ ಮಾರುತ್ತಿದ್ದ ಸಿನ್ನಮ್ಮನಿಂದ ನಿತ್ಯವೂ ಸೌದೆಯನ್ನು ಕೊಳ್ಳುತ್ತಿದ್ದ ಕ್ವಾಮಟಿಗ ಶೆಟ್ಟಿಯೊಂದಿಗಿರುವ ಸಂಬಂಧದಲ್ಲಿ ಜುಂಜಪ್ಪ ತನ್ನ ತಾಯಿಯ ಶೀಲದ ಬಗ್ಗೆ ಅನುಮಾನವನ್ನು ಪಡುತ್ತಾನೆ.

ಇಲ್ಲಿಗೆ ಮೂರುತಿಂಗಳಿಂದ ಒಬ್ಬ ಕ್ವಾಮಾಟಿಗರವನಿಗೆ ಸೌದೆ ಹಾಕ್ತಿದ್ಲು

ಹಿರಿಯೂರ ಪ್ಯಾಟೆಯೊಳಗೆ ಆ ಕ್ವಾಮಾಟಿಗರೋನ್ನ ಬಳಕೆ ಮಾಡ್ಕೊಂಡು, ಅವನ ಮನೆಯೊಳಗೆ ಪ್ರತಿದಿನ,

ರಾತ್ರಿ ತಾಣ ದೀವಿಗೆ ಹಚ್ಚಿ
ನಿಲುವುಗನ್ನಡಿಯ ಕಚ್ಚಿ
ನಿನ್ನ ತೋಳಿನ ಮ್ಯಾಲವನ ತಲಿಯಮ್ಮ
ಅವುನ ತೋಳಿನ ಮ್ಯಾಲೆ ನಿನ್ನ ತಲಿಯಮ್ಮ॥

ಬೆಳಿಗ್ಗೆ ಎದ್ದು
ತೌರುಮನಿಗೋದೋಳಂತೆ ಬಂದಿದ್ದೀಯಾ
ಆಗಲೇ ತಾಯಿ ಮಕ್ಕಳು ನ್ಯಾಯ
ಕಳುವಾರಳ್ಳಿ ದಿನ್ನಿ ಒಳಗೆ
ಹನ್ನೆರಡು ತಿಂಗಳು
ನೆಡೆಯಾಲೆಂದೇಳಿ ಜುಂಜಪ್ಪ
ತಮ್ಮುಗಳ್ನೆತಿಗೊಂಡು ಕಂಕುಳು ಕವುಸಿಗೊಂಡು
ಹಾರಿದನೋ ಸ್ವಾಮಿ ಗಳಿಗಾಗೋ॥

ಹೀಗೆ ತನ್ನ ತಮ್ಮಂದಿರು ಮತ್ತು ತಂಗಿಯರೊಂದಿಗೆ ಕಾಡಿನಿಂದ ಹೊರಟವನು ಕಳುವಾರಳ್ಳಿ ಕಲ್ಯಾಣಿ ಪಕ್ಕದ ಸುರಹೊನ್ನೆ ಮರದಡಿಯಲ್ಲಿ ಬಂದು ನಿಂತನು. ಇತ್ತ ಸಿನ್ನಮ್ಮ ಬಿಳಿಸೀರೆ, ಹಂಗದಾರ, ಮಡ್ಲಕ್ಕಿ ತಕ್ಕಂಡು ತವರಿನಿಂದ ಬಂದವಳು ಮಕ್ಕಳನ್ನು ಹುಡುಕುತ್ತಾ,

ತಂಗಡೆಯ ಗಿಡುಗಳಿರ
ಬಂದ್ರೆಯ್ಯಾ ಗಿಡುಗಳಿರಾ
ನಮ್ಮ ಈರಯ್ಯಾ ಜುಂಜಪ್ಪ ಎಲ್ಲವುರೆ ಹೇಳಿರಯ್ಯೋ॥

ಎಂದು ಕೂಗಿಕೊಂಡು ಕಾಡಲೆಲ್ಲಾ ಅಲೆದು ಕಳುವಾರಳ್ಳಿ ಕಲ್ಯಾಣಿ ಹತ್ತಿರಕ್ಕೆ ಸಿನ್ನಮ್ಮನೂ ಬರುತ್ತಾಳೆ. ಆಗ ಜುಂಜಪ್ಪ ತನ್ನ ತಾತ ಹೊನ್ನಟ್ಟಲೀಗೌಡನ ಬಳಿ ಹೋಗಿ ತಾಯಿ ಸಿನ್ನಮ್ಮನ ಪತುರತೆ ಪರೀಕ್ಷಿಸಲು ಪ್ರಪಂಚಕ್ಕೆಲ್ಲಾ ಸುದ್ದಿ ಸಾರು ಎಂದು ಹೇಳಿದನು. ತಾಯಿ ಮಕ್ಕಳು ಒಂದಾಗ್ರಿ ಅಂತ ಆವಜ್ಜ ಹೇಳಿದ್ರು, ಜುಂಜಪ್ಪ ಒಪ್ಪದೆ ಸುದ್ದಿಯನ್ನು ಲೋಕಕ್ಕೆ ಸಾರಿಸಿಯೇ ಬಿಡುತ್ತಾನೆ.

ಒಂದು ಸೋಮಾರದ್ದಿನ ಸೂರ್ಯ ಪ್ರಕಾಶದೊಂದಿಗೆ,
ಐವತ್ತಾರು ದೇಸದ ದೊರಿಗಾಳು
ದೇವಾನೆ ಪ್ರಜೆಗಾಳು
ಆನೆ ಒಂಟೆಗಳ ಮೇಲೆ
ಕಲ್ತಾರಮ್ಮೊ ಕಡುವಾರಳ್ಳಿ ಕಲ್ಯಾಣಿ ಮ್ಯಾಲಕ್ಕೆ

ಇಂತಹ ತುಂಬಿದ ಸಭೆಯಲ್ಲಿ ಜುಂಜಪ್ಪ ತನ್ನ ತಾಯಿಯ ಪಾತಿವ್ರತ್ಯವನ್ನು ಪರೀಕ್ಷಿಸಲು ಒಣಗಿದ ಒನಕೆ ಸಿಗಿದು ನಾರು ತೆಗೆಯುವಂತೆ, ತೂತು ಜರಡಿಯಲ್ಲಿ ಕಲ್ಯಾಣಿಯಿಂದ ನೀರು ತರುವಂತೆ, ಸಮುದ್ರಕ್ಕೆಸೆಯಲಾದ ಮುತ್ತಿನ ಉಂಗುರವನ್ನು ಹನ್ನೆರಡು ಗಂಟೆಯಲ್ಲಿ ತರುವಂತೆ, ಸೀಗೆ ಎಲೆಯಿಂದ ಒಂದಾಳು ಉಣ್ಣುವಂತ ಇಸ್ತ್ರಾ ಕಟ್ಟುವಂತೆ(ಊಟದ ಎಲೆ), ಕಳಸ ಹೊತ್ತು ಅಗ್ನಿ ಪ್ರವೇಶ ಮಾಡುವಂತೆ, ತ್ಯಾಗದ ಎಲೆಯ ಉಡುಗೆ ತೊಡುವಂತೆ ಹೇಳುತ್ತಾನೆ. ಈ ಎಲ್ಲಾ ಸವಾಲುಗಳನ್ನು ಸಿನ್ನಮ್ಮ ಈಶ್ವರನ ಕೃಪೆಯಿಂದ ಗೆಲ್ಲುತ್ತಾಳೆ.

ಹೀಗೆ ಜುಂಜಪ್ಪ ತನ್ನ ತಾಯಿಯ ಪಾತಿವ್ರತ್ಯದ ಬೆಳಕನ್ನು ಮೂರುಲೋಕಕ್ಕೆ ಬೆಳಗುವಂತೆ ಮಾಡುತ್ತಾನೆ. ಇಲ್ಲಿಂದ ಜುಂಜಪ್ಪ ತನ್ನ ತಾಯಿ, ತಂಗಿಯರು, ಹಾಗೂ ತಮ್ಮಂದಿರನ್ನು ಕರಕೊಂಡು ಕಳುವಾರಳ್ಳಿಯ ತನ್ನ ಮೂಲ ಅರಮನೆಗೆ ಬರುತ್ತಾನೆ. ಆಗ ಹೊರಹೋಗಿದ್ದ ಭಾಗ್ಯಲಕ್ಷ್ಮಿ ಮತ್ತೆ ಅವರ ಮನೆಯನ್ನು ಸೇರಿಕೊಳ್ಳುತ್ತಾಳೆ.

ಹೀಗಿರುವಾಗ ಜುಂಜಪ್ಪನ ಮಾವ ದೊಡ್ಡ ಸಿನ್ನೇಗೌಡ ಜುಂಜಪ್ಪನ ಅರಮನೆಗೆ ಬಂದು ತಮ್ಮನಾದ ಕಟ್ಟಾಣಿ ನಾಗನಿಗೆ ಜುಂಜಪ್ಪನ ತಂಗಿ ಮಾರಕ್ಕನನ್ನು ಮದುವೆ ಮಾಡಿಕೊಡುವಂತೆ ಕೇಳುತ್ತಾನೆ. ಇದಕ್ಕೆ ಒಪ್ಪಿದ ಸಿನ್ನಮ್ಮ ಮತ್ತು ಜುಂಜಪ್ಪ ಮಾರಕ್ಕನ ಮದುವೆಗೆ ಸಿದ್ಧತೆ ಮಾಡಿಕೊಳ್ಳುತ್ತಾರೆ.

ಒಂದು ಸೋಮಾರೊತ್ತುಟ್ಟಿ ಬರುವಾಗ
ಶಂಕರನೇ
ಸಿನ್ನಮ್ಮನ ಮಗಳು ಮಾರಕ್ಕನಿಗೂ
ಆಗಲೇ ಸಿನ್ನಮ್ಮನ ಚಿಕ್ಕಣ್ಣಿ
ಆ ಕಟ್ಟಾಣಿ ನಾಗನಿಗೂ
ಮದುವೇನೇ ಮಾಡಿದರುಗಳಿಗಾಗೋ||

ಮದುವೆಯಾದ ಮೂರುತಿಂಗಳ ನಂತರ ಜುಂಜಪ್ಪನ ಮನೆಯಲ್ಲಿದ್ದ ಮಾರಕ್ಕನ್ನ ದೊಡ್ಡಸಿನ್ನೇಗೌಡರು ಕರೆಯಲು ಬಂದು,

ಹಂದರು ಪಲ್ಲಕ್ಕಿಯೊಳಗೆ
ಕರಕಂಡು ಕಂಬೇರಟ್ಟಿಗೊರಟರಲ್ಲೋ
ಜುಂಜಪ್ಪ ಮಾರಣ್ಣ ಮೈಲಣ್ಣ
ತಾಯಿ ಸಿನ್ನಮ್ಮ ಶಿವನಿಗೋ||

ಹೀಗೆ ಕಂಬೇರಹಟ್ಟಿಗೋಗಿ ಅವರಣ್ಣಗಳ ಅರಮನೆಯಲ್ಲಿ ಜುಂಜಪ್ಪನ ತಂಗಿ ಬಿಟ್ಟು, ಅಂದು ರಾತ್ರಿ ಎಲ್ಲರೂ ಅಲ್ಲಿಯೇ ಇದ್ದು ಬೆಳಿಗ್ಗೆ,

ಹೋಗ್ತೀವಣ್ಣಯ್ಯ ನಮ್ಮೂರಿಗೆ
ಕಳುವರಳ್ಳಿಗೆ ಅಂತ ಹಿರೇ ಅಣ್ಣನಿಗೆ
ಸಿನ್ನಮ್ಮ ಹೇಳಿದಳು॥

ಅದಕೆ ಅವರಣ್ಣ "ಏನಮ್ಮ ತಾಯಿ, ನಮಗೆ ಏಳು ಗೂಡಿನ ದನಗಳಿವೆ. ನಾವೇಳು ಜನ ಅಣ್ಣುಗಳು ಸೇರಿ ಏಳು ಕರುಗಳು ಹಿಡ್ಕೊಡ್ತಿವಿ. ಬಳೂಳಿ ಕರುಗಳು ನಿನಗೆ. ನನ್ನ ಮನೆಯೊಳಗೆ ಮೂರು ಜನ ಗಂಡು ಮಕ್ಕಳವ್ರೆ, ಈ ಏಳು ಕರ ಹೊಡಕ್ಕೊಂಡು ಹೋಗಿ ಮೇಯಿಸಿಕೊಳ್ರಿ, ದನ ಹೆಚ್ಚಿಗೆಂಬತ್ತವೆ." ಇದಕ್ಕೆ ಸಿನ್ನಮ್ಮ ಒಪ್ಪಿಕೊಂಡು ಜುಂಜಪ್ಪನೂ ಸಹ 'ಅಂಗೆ ಮಾಡ್ರಿ ಮಾವ' ಅಂತ ಒಪ್ಪಿಕೊಂಡು, ತಾಯಿ ತಮ್ಮಂದಿರೊಂದಿಗೆ ಕೊಟ್ಟ ಕರುಗಳನ್ನು ಕಳುವರಳ್ಳಿಗೆ ಹೊಡಕ್ಕೊಂಡು ಬಂದ್ರು.

ಮಾರಣ್ಣ ಮೈಲಣ್ಣ
ಜುಂಜಪ್ಪ ಭಗುವಂತ
ದನಗಳು ಕಾಯಿಕಂಡು
ಕೆಲವಾರು ದಿನಗಾಳು
ದನಗಾಳು ಕಾಯುವಾಗ
ಈಸ್ವುರುನ ಶಾಪದಿಂದ
ಬೇಕಾದೋಷ್ಟು ದನುಗಳು
ಹೆಚ್ಚಿಗೊಂಡಾವಣ್ಣ
ಜುಂಜಪ್ಪನಿಗೂ
ಮಾರಣ್ಣ ಮೈಲಣ್ಣನಗೆ ಶಿವನಿಗೋ॥

ಈ ದನಗಳು ಹೇಗೆ ಹೆಚ್ಚಿಗೊಂಡವೆಂದರೆ,

ಬಣ್ಣಕ್ಕೊಂದು ಲಕ್ಷ
ಬಾಲಕ್ಕೊಂದು ಲಕ್ಷ
ಏಳುಲಕ್ಷದ ದನುಗಳಾದವಣ್ಣ
ಜುಂಜಪ್ಪನವುಂಗೆ ಗಳಿಗಾಗೋ ೩೬

ಹೀಗೆ ಜುಂಜಪ್ಪನ ಮಾವಂದಿರು ಕೊಟ್ಟ ಏಳು ಕರುಗಳಿಂದ ಜುಂಜಪ್ಪನಗೆ

ಲಕ್ಷಲಕ್ಷ ದನುಗಳು ಹೆಚ್ಚಾದವು. ಇದನ್ನು ಸಹಿಸದ ಮಾವಂದಿರ ಎಲ್ಲಾ ತಂತ್ರ ಮಂತ್ರಗಾರಿಕೆಯನ್ನು ಜುಂಜಪ್ಪ ಎದುರಿಸುತ್ತಾನೆ.

ಜುಂಜಪ್ಪನ ದನಗಳ ಹಿಂಡಿನಲ್ಲಿದ್ದ ಓರಿಯಾದ 'ಬಡಮ್ಮೈಲ' ಎಂಬ ಬಸವ ಆತನ ಆತ್ಮಬಲದ ಸಂಕೇತದಂತಿದ್ದು, ನೆಚ್ಚಿನವನಾಗಿದ್ದನು. ಈ ಬಸವ,

ಕಾಲ್ಕೆರೆದು
ಗುಡ್ಡೂರಿಕೆ ಹೊಡದೇಟೆ
ನರಲೋಕ ಸುರಲೋಕ
ಅಳ್ಳಾಡೋಗುತ್ತಣ್ಣಾ ಶಿವನಿಗೋ॥

ಕಾಡುಗೊಲ್ಲರ ನಂಬಿಕೆ ಮತ್ತು ಪ್ರೀತಿಗೆ ಪ್ರತೀಕದಂತಿದ್ದ 'ಬಡಮ್ಮೈಲ' ಕಷ್ಟದಿಂದ ಇವರನ್ನು ಪೊರೆಯಬಲ್ಲ. ಗೊಲ್ಲರ ಅನುಪಸ್ಥಿತಿಯಲ್ಲೂ ದನಗಳ ಹಿಂಡನ್ನು ರಕ್ಷಿಸಬಲ್ಲ ಹಾಗೂ ನಿಯಂತ್ರಿಸಬಲ್ಲವನಾಗಿದ್ದ. ಅನೀತಿಯವರಿಗೆ ಅಸೂಯೆಯವರಿಗೆ, ಕುತಂತ್ರಿಗಳಿಗೆ ಸಿಂಹ ಸ್ವಪ್ನದವನಾಗಿದ್ದನು. ಕಡೆಗಾಣಿಸಿ ಬಿಸಾಡಿದ ಹಸುವಿನ ಕರುವೊಂದು(ಬಡಮ್ಮೈಲ) ಅಸಮಾನ್ಯವಾಗಿ ಜುಂಜಪ್ಪನ ಆಸರೆಯಲ್ಲಿ ಬೆಳೆದು ವೈರಿಗಳ ಹುಟ್ಟಡಗಿಸಿದ್ದೇ ಕಾವ್ಯದ ಪ್ರಧಾನ ವಸ್ತುವಾಗಿ ನಿಲ್ಲುತ್ತದೆ.

ನರಲೋಕ ಸುರಲೋಕ
ದೇವುಲೋಕ
ಅಳ್ಳಾಡೋಗಿತ್ತಣ್ಣ
ಭೂಮೀ ನಡುಗಿತು ಸ್ವಾಮಿ
ಬಸವಾ ಉಡ್ರಿಕಿ ಹೊಡಿತಿದ್ದಂಗೆ
ಅವುರ ಮನಿಯೊಳುಗೊ

ಕರಿ ಬಾನುಗಳು

ಗಂಗಾಳ ಚಂಬು ಜಣ್ಣನೆ
ಬಿದ್ದವು ಶಂಕರನೆ

---------

ನುಗ್ಗಿತು ಸೇಳೂರೂರು॥
ಬಾಗಲೊಳಗೆ ಬಸವಾ
ನುಗ್ಗಿದೇಟಿಗು ಊರ ಬಾಗುಲು
ಇಗಲಿ ತಳುತಳುಕಾಗಿ ನಿಂತೈತೊ॥[೩೭]

ಹೀಗೆ ಬಡಮ್ಮೈಲ ಜುಂಜಪ್ಪನ ಆತ್ಮಬಲದ ಮತ್ತೊಂದು ರೂಪದಂತೆ ಬೆಳೆದು ನಿಲ್ಲುತ್ತದೆ. ಸ್ವತಹ ಜುಂಜಪ್ಪ ಕೂಡ ಅಷ್ಟೇ ಪರಾಕ್ರಮಿ, ಪವಾಡ ಪುರುಷನಾದರೂ

ಆತ ಒಬ್ಬ ಬಡವ ಎನ್ನುವ ಮಾತು ಸುಳ್ಳಲ್ಲ. ಈತ ತನ್ನ ದನಗಳಿಗಾಗಿ ಅನೇಕ ಹುಲ್ಲುಗಾವಲುಗಳನ್ನು ಗೆಲ್ಲುತ್ತಾನೆ. ಚೇಳೂರು ದೊರೆಗಳನ್ನು ಸೋಲಿಸುತ್ತಾನೆ. ಶ್ರೀಮಂತರಾದ ತನ್ನ ಸೋದರ ಮಾವಂದಿರ ಕುತಂತ್ರವನ್ನು ಬಯಲು ಮಡುತ್ತಾನೆ.

ಜುಂಜಪ್ಪನನ್ನು ನೇರವಾಗಿ ಎದುರಿಸಿ ಗೆಲ್ಲಲಾಗದ ಸೇಳೂರು ದೊರೆಗಳು ಕುತಂತ್ರದ ಪಗಡೆಯಾಟದ ಮೂಲಕ ಜುಂಜಪ್ಪನನ್ನು, ಆತನ ಬಡಮ್ಮೈಲ ಸೇರಿದಂತೆ ದನಕರುಗಳನ್ನು ಗೆಲ್ಲಲು ಬರುತ್ತಾರೆ. ಜುಂಜಪ್ಪ ಪಗಡೆ ಆಟ ಒಪ್ಪಿಕೊಂಡು,

ಗೋವಿನಲ್ಲಿ ಕವುಡೆ ತೊಳದು
ಹಾಕಿದ ಮೂರು ಕೈ ಕವುಡೇಲಿ"
ಜುಂಜಪ್ಪನಿಗೆ ಕವಡೆ,
ಗೆಲುವಿಗೆ ಬಿದ್ದುವು
ಕಡೆಯಲ್ಲಿನ ಮೂರು,
ಮೂರಾಟನೂ ಗೆಲುವಿಗೆ
ಜುಂಜಪ್ಪನಿಗೆ ಬಿದ್ದವು ಕವುಡೆ॥

ಆಗ ಶಾನುಭೋಗರು ಜುಂಜಪ್ಪ ಗೆದ್ದ, ಸೇಳೂರು ದೊರಿಗಳು ಸೋತ್ರು, ಎಂದು ಹೇಳಿದಾಗ ತಟ್ಟಿ ವಡ್ರಂತೆ ಸೇಳೂರು ದೊರೆಗಳು ಜುಂಜಪ್ಪನಿಗೆ ಇದ್ದ ರಾಜ್ಯವನ್ನು ಬರೆಕೊಟ್ಟು ಮಾತಿನಂತೆ,

ಸಲಿಕೆ ಗುದ್ಲಿ ಇಡಕ್ಕಂಡು
ಸೇಳೂರು ಕೆರೆಯ ಕಟ್ಟುದಕ್ಕೊರಟ್ರು ಶಿವನಿಗೋ॥

ಮುಂದೆ ಜುಂಜಪ್ಪ ಸೇಳೂರಿನಲ್ಲಿ,

ರಾಜ ಮುದ್ರಿಕೆ
ಉಂಗುರ ಸ್ವಾಮಿ
ಬೆರಳಿಗೆ ಧರಿಸೋನೋ
ಜುಂಜಪ್ಪ
ಏಳುವರ್ಷ
ಸೇಳೂರೊಳಗೆ
ರಾಜ್ಯವಾಳಿದನೋ ಸ್ವಾಮಿ ಜುಂಜಪ್ಪ॥

ಇಷ್ಟೆಲ್ಲದರ ನಡುವೆಯೂ ಜುಂಜಪ್ಪ ಒಬ್ಬಂಟಿಯಾಗಿಯೇ ಗೋಚರಿಸುತ್ತಾನೆ. ಆದರೆ ಅವನ ಛಲ, ಆತ್ಮವಿಶ್ವಾಸ, ತಾಳ್ಮೆ ಹಾಗೂ ತನ್ನ ಕಾಯಕದಲ್ಲಿನ ಪ್ರಾಮಾಣಿಕತೆ ಜುಂಜಪ್ಪನನ್ನು ಕಾವ್ಯದ ನಾಯಕನನ್ನಾಗಿಸುತ್ತದೆ. ಕಾಡುಗೊಲ್ಲರು ತಮ್ಮನ್ನು ಜುಂಜಪ್ಪನ ಜೊತೆಗೆ ಸಮೀಕರಿಸಿಕೊಳ್ಳುತ್ತಾರೆ.

ಸ್ವಾಮಿ ಜುಂಜಪ್ಪ
ನಮ್ಮ ತಪ್ಪು ನೆಪ್ಪು
ನಿನ್ನೊಟ್ಟ್ಯಾಗಿಕ್ಕಂಡು
ಈವಾಗೊಂದ್ಯೆದುನಿಮಿಷ
ಕಾಪಾಡು ಬೇಕೋ ತಂದೆ
ಹರಹರನೆ ಶಂಕರನೆ ಶಿವನಿಗೋ॥

ಎಂದು, ತಮ್ಮನ್ನೇ ಜುಂಜಪ್ಪನಿಗೆ ಕಾಡುಗೊಲ್ಲರ ಸಮುದಾಯದವರು ಅರ್ಪಿಸಿಕೊಳ್ಳುತ್ತಾರೆ. ಹೀಗೆ ಎಲ್ಲರಿಂದಲೂ ಜನ ಮನ್ನಣೆ ಪಡೆದುಕೊಂಡ ಜುಂಜಪ್ಪ ಬೆಳೆಯುತ್ತಲೇ ಹೋಗುತ್ತಾನೆ. ಈತನ ಏಳಿಗೆಯನ್ನು ಸಹಿಸದ ಕಂಬೇರು ಗೊಲ್ಲರು (ಜುಂಜಪ್ಪನ ಮಾವಂದಿರು) ಜುಂಜಪ್ಪನನ್ನು ಆತನ ತಮ್ಮಂದಿರನ್ನು ವಿಷ ನೀಡಿ ಕೊಲ್ಲಲು ಯೋಚಿಸಿದರು. ಅದಕ್ಕಾಗಿ ಜುಂಜಪ್ಪನು ಇಲ್ಲದ ಸಮಯದಲ್ಲಿ ಆತನ ತಾಯಿ ಬಳಿ ಹೋಗಿ ಮಾವನ ಮನೆಗೆ ದೀಪಾವಳಿ ಹಬ್ಬಕ್ಕೆ ಕಳುಹಿಸುವಂತೆ ತಂಗಿ ಸಿನ್ನಮ್ಮನಿಂದ ಭಾಷೆಯನ್ನು ತೆಗೆದುಕೊಳ್ಳುತ್ತಾರೆ.

ಹಾವಿನ ಗಡಿನಲ್ಲಿ ಹಾಲಬ್ಬ ಮಾಡಬೇಕು
ದೇವರ ಗುಡಿಲ್ಲಿ ದೇವುರುಮಾಡಬೇಕು
ದೊಡ್ಡು ದೀಪಾವಳಿ ಹಬ್ಬ ಮಾಡ್ತೀವಿ
ಉತ್ತುದು ಪೂಜೆ ನಿಮ್ಮದು
ಉತ್ತುದು ಪೂಜೆ ಮಾಡದಿಕೆ
ನೀವೆ ಬರಬೇಕಪ್ಪ ನಮ್ಮ ಊರಿಗೆ,

ಎಂದು ಜುಂಜಪ್ಪನ ಮಾವಂದಿರು ಕರುದ್ರು .

ತಾಯಿ ಕೊಟ್ಟ ಭಾಷೆಯನ್ನು ಉಳಿಸಲಿಕ್ಕಾಗಿ ಜುಂಜಪ್ಪ ತನ್ನ ದನಗಳನ್ನೆಲ್ಲಾ ಮಾರಿಕಣಿವೆ ಕೆರೆಗೆ ಮೇಯುವುವುದಕ್ಕೆ ಬಿಟ್ಟು ಅವುಗಳ ರಕ್ಷಣೆಗೆ ಕಾವಲು ನಾಯಿಗಳನ್ನು ಇಟ್ಟು, ತಮ್ಮಂದಿರ ಜೊತೆಯಲ್ಲಿ ಮಾವಂದಿರ ಮನೆಗೆ ಹೋಗುತ್ತಾನೆ. ಜುಂಜಪ್ಪನಿಗೆ ಮಾವನ ಮನೆಯಲ್ಲಿ ಅದ್ದೂರಿ ಸ್ವಾಗತ ದೊರೆತು ಮಾವಂದಿರು ಅಳಿಯನ ಊಟಕ್ಕಾಗಿ,

ಉರಿಮದ್ದ
ವಿಷದಾನೆ ಕಜ್ಜಾಯ
ಕೆಂಬಕ್ಕಿ ಪಾಯಸ
ತೇಲಿಸಿ ತಂದಾಕ್ಯಾವುರೋ,

ಜುಂಜಪ್ಪ ಮಾರಣ್ಣ
ಮಲ್ಲಣ್ಣರ ಅಗುಲೀಗೆ ೩೮

ಈ ವಿಷದೂಟದಿಂದ ಜುಂಜಪ್ಪನಿಗೆ ಮೈಯೆಲ್ಲಾ ಉರಿ ಬಂದು, ಮಾವಂದಿರ ಆರ್ಕದ ಹುಲ್ಲಿನ ಬವಣೆ, ಸ್ಯಾವೆ ಹುಲ್ಲಿನ ಬವಣೆ ಹೊಕ್ಕು ಸುಟ್ಟು ಹಾಕಿದನು. ದೇಹದ ಉರಿಯ ತಡೆಯಲಾರದೆ ಕೈಲಾಸಕ್ಕೆ ಹೋದ ಜುಂಜಪ್ಪ ಮತ್ತು ತಮ್ಮಂದಿರು ಪರಮೇಶ್ವರನಿಂದ ಸತ್ಯ ದರ್ಶನವನ್ನು ಪಡೆದುಕೊಳ್ಳುತ್ತಾರೆ. ಪರಮೇಶ್ವರನ ಸತ್ಯ ದರ್ಶನದ ನಂತರ ಜುಂಜಪ್ಪನು ತನ್ನ ಮಾವಂದಿರನ್ನು ಕೈಲಾಸದ ದ್ವಾರಪಾಕರಾನ್ನಾಗಿಸಲು ಮತ್ತೆ ಭೂಲೋಕಕ್ಕೆ ಬಂದು ಕಂಬೇರು ಗೊಲ್ಲರನ್ನು ಸುಟ್ಟುಹಾಕಿ, ಅವರನ್ನು ಶಿವನ ದ್ವಾರಪಾಲಕರನ್ನಾಗಿಸುತ್ತಾನೆ. ನಂತರ ಜುಂಜಪ್ಪ ಕಳ್ಳೋರಳ್ಳಿ ದಿಣ್ಣೆ ಒಳಗೆ ನೆಲಮಾಳಿಗೆಯ ಸಮಾಧಿ ತೆಗೆಸಿಕೊಂಡು ಜೀವಂತ ಐಕ್ಯವಾಗಿ, ಈಗ ಜನಪದರೆಲ್ಲರ ಆರಾಧ್ಯ ದೈವವಾಗಿದ್ದಾನೆ.

**ಜುಂಜಪ್ಪನ ಕಾವ್ಯದಲ್ಲಿರುವ ಪಶುಪಾಲನೆಯ ವಿವರಗಳು :**

ಕರ್ನಾಟಕದ ಪಶುಪಾಲನಾ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಪ್ರಮುಖ ಸಮುದಾಯಗಳೆಂದರೆ, ಕಾಡುಗೊಲ್ಲರು, ಮ್ಯಾಸಬೇಡರು ಮತ್ತು ಕುರುಬರು. ಇವರು ದನ ಕುರಿಗಳನ್ನು ಸಾಕಲು ಅಲೆಮಾರಿಗಳಾಗಿಯೇ ಊರೂರು ಕಾಡು ಮೇಡುಗಳನ್ನು ಸುತ್ತಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ನಂತರದ ದಿನಗಳಲ್ಲಿ ಊರುಗಳನ್ನು ಕಟ್ಟಿಕೊಂಡವರು ಊರುಗೊಲ್ಲರಾಗಿಯೂ, ಉಳಿದವರು ಕಾಡು ಗೊಲ್ಲರಾಗಿಯೂ ಉಳಿದರು. ಇದೇ ರೀತಿಯ ಹಣೆಪಟ್ಟಿಯನ್ನು ಕಟ್ಟಿಕೊಂಡಿರುವ ಊರಕುರುಬರು ಮತ್ತು ಕಾಡುಕುರುಬರು ಪಶುಸಂಗೋಪನಾ ವೃತ್ತಿಯನ್ನೇ ಅವಲಂಬಿಸಿಕೊಂಡು ಬಂದಿದ್ದು, ಕೃಷಿ ಚಟುವಟಿಕೆಗಳನ್ನು ನಂಬಿಕೊಂಡಿದ್ದಾರೆ. ಹಾಗೆಯೇ ಊರು ಸೇರಿದವರು ಅಲ್ಲಿ ತಮ್ಮೊಡನೆ ಬಾಳುವ ಇತರೆ ಜನವರ್ಗಗಳ ಸಂಸ್ಕೃತಿಯ ಜೊತೆ ಬೆರೆತಿದ್ದಾರೆ. ಹೀಗಾಗಿ ಊರುಗೊಲ್ಲರು, ಹಾಗೂ ಊರುಕುರುಬರ ಜೀವನ ವಿಧಾನ ಮತ್ತು ಸಂಸ್ಕೃತಿಯನ್ನು ಗುರುತಿಸುವುದು ಕಷ್ಟಸಾಧ್ಯ. ಆದರೆ ಕಾಡು ಕುರುಬರು ಮತ್ತು ಕಾಡು ಗೊಲ್ಲರ ಜೀವನ ವಿಧಾನ ಮತ್ತು ಸಂಸ್ಕೃತಿ ಇಂದಿಗೂ ವಿಶಿಷ್ಟವಾಗಿಯೇ ನಿಂತಿದೆ.

ಕರ್ನಾಟಕದ ಒಳನಾಡಿನ ಮಧ್ಯಭಾಗವೆನ್ನಬಹುದಾದ ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕುರುಚಲು ಕಾಡು, ಸಾಮಾನ್ಯ ಬೆಟ್ಟಗುಡ್ಡಗಳು, ಹುಲ್ಲುಗಾವಲು ಪ್ರದೇಶಗಳು, ಇರುವುದರಿಂದ, ಕುರಿಸಾಕಣಿಕೆ ಮತ್ತು ಪಶುಸಂಗೋಪನೆ ಹೆಚ್ಚಾಗಿರುವುದು ಕಂಡು ಬರುತ್ತದೆ. ಇದಕ್ಕೆ ಪೂರಕವಾಗಿ,

ಹಟ್ಟಿ*೧ಗಳ ಸಂಸ್ಕೃತಿಯನ್ನು ಕಾಣಬಹುದು. ಈ ಹಿನ್ನೆಲೆಯಲೆಯೊಂದಿಗೆ ಇಲ್ಲೇ ಹುಟ್ಟಿಕೊಂಡಿರುವ ಜುಂಜಪ್ಪನ ಕಾವ್ಯ*೨ ಕುರಿ ಹಾಗೂ ದನಕರುಗಳ ಪಶುಪಾಲನೆಯನ್ನೇ ಪ್ರಧಾನ ವಸ್ತುವನ್ನಾಗಿ ಹೊಂದಿದ್ದು, ಜುಂಜಪ್ಪನೇ ಕಾವ್ಯದ ನಾಯಕನಾಗಿ ಬಿಂಬಿಸಲ್ಪಟ್ಟಿದ್ದಾನೆ.

ಇಡೀ ಕಾವ್ಯದಲ್ಲಿ ಪಶುಪಾಲನಾ ಸಂಸ್ಕೃತಿ ಪ್ರತಿಫಲನಗೊಂಡಿದೆ. ಕಾವ್ಯದಲ್ಲಿ ಗಂಗ ಮಾಳವ್ವನ ಮದುವೆ ಸಂದರ್ಭದಲ್ಲಿ ಬರುವಂತೆ,

ಗೊಲ್ಲರಜ್ಜ ಕುರಿಬಿಟ್ಗೊಂಡು ಬಂದಿದ್ದ
ಅವನಜ್ಜನತ್ರ ಹಿಡುಕಂಡ್ರು ಒಂದು ಕೊಬ್ಬಿನ ಕುರಿ
ಆ ಕುರಿ ಕೊಯ್ದು
ಆಗಲೆ ಮಾಂಸದ
ಎಡೆಯನ್ನ ಮಾಡಿಕಂಡಿರಣ್ಣಾ||

ಎಂಬ ಸಾಲುಗಳು ಕುರಿಗಾಹಿ ಸಂಸ್ಕೃತಿಯನ್ನೇ ಮೈದುಂಬಿಕೊಂಡಂತೆ ಪ್ರತಿಫಲಿಸುತ್ತವೆ.

ಅರದು ಹಾಲು ತಗುದು
ತಂದರು ಭಗವಂತ
ಏಳು ದನಗಳು ಮ್ಯಾಲೆ
ಏಳು ಕುರಿಗಳು ಮ್ಯಾಲೆ
ದ್ಯಾವುರು ದೈಮಾರುನ್ನ ಎದೆಯಾಗುಳ
ನೆಣದ ಎರುಕಿಸ್ಯಾರೋ
ಆವಾಗ ಜನಗೆ ಕುರಿಗಳೋ
ದನಗಳೆಂಬ ಜನಗೆ
ಹೆಸರಾಯಿತಣ್ಣ
ದ್ಯಾಮರು ದೈಮಾರಜ್ಜನಿಗೆಯ್ಯೋ||

---

*೧ ಗೊಲ್ಲರು ಸಹಜವಾಗಿ ಊರಿನ ಇತರ ಜನ ಸಮೂಹಗಳೊಡನೆ ವಾಸಿಸಲು ಇಷ್ಟಪಡುವುದಿಲ್ಲ. ಹಾಗಾಗಿ ತಮ್ಮ ವಾಸದ ನೆಲೆಗಳನ್ನು ಊರಿನಿಂದ ಸ್ವಲ್ಪ ದೂರದಲ್ಲಿ ಕಟ್ಟಿಕೊಂಡಿರುತ್ತಾರೆ. ಹೀಗೆ ವಾಸಿಸುವ ಗೊಲ್ಲರ ಈ ವಸತಿ ಪ್ರದೇಶಕ್ಕೆ 'ಹಟ್ಟಿ' ಎಂದು ಕರೆಯುತ್ತಾರೆ. ತುಮಕೂರು ಜಿಲ್ಲೆಯ, ಶಿರಾ, ಗುಬ್ಬಿ, ಚಿಕ್ಕನಾಯನಹಳ್ಳಿ, ತಿಪಟೂರು, ಮಧುಗಿರಿ ತಾಲ್ಲೂಕುಗಳಲ್ಲಿ ಹಟ್ಟಿ ಸಂಸ್ಕೃತಿಗಳು(ಗೊಲ್ಲರ ಹಟ್ಟಿ, ಕುರುಬರ ಹಟ್ಟಿ, ನಾಯಕರ ಹಟ್ಟಿ) ಹೆಚ್ಚಾಗಿ ಕಂಡು ಬರುತ್ತವೆ.

*೨ ಗುಬ್ಬಿ ತಾಲ್ಲೂಕಿನ ಹಾಗಲವಾಡಿ, ಜುಂಜಪ್ಪನ ಕಾವ್ಯ ಹುಟ್ಟಿಕೊಂಡ ನೆಲೆಯಾಗಿದೆ.

ಎಂಬ ಪದ್ಯ ಜುಂಜಪ್ಪನ ಸಮುದಾಯದವರಿಗೆ ದೈವಾನುಗ್ರಹದಿಂದಲೇ ಕುರಿ, ದನಕರುಗಳು ಒಲಿದು ಬಂದವೆಂಬುದನ್ನು ಪ್ರಸ್ತುತಪಡಿಸುತ್ತದೆ. ಇಡೀ ಕಾವ್ಯ, ಹಾಗೂ ಇಲ್ಲಿನ ಸನ್ನಿವೇಶಗಳೆಲ್ಲಾ ಜುಂಜಪ್ಪನನ್ನು ದೈವಪುರುಷನೆಂಬಂತೆ ಆಗಲೇ ವೈಭವೀಕರಿಸಿ ಪ್ರಾರ್ಥಿಸುತ್ತವೆ.

ಮೊದಲೇ ನೆನೆದೇವು
ಮದನಾರಿ ವೀರಾನ
ಮುದುಗೊಂಡು ಗುಡ್ಡದ
ಕಲಿಬೀರೋ ಜುಂಜಪ್ಪನ
ಮೊದಲೇ ಸೊಲ್ಲಾಗಿ ನೆನುದೇವೋ॥

ಏಕೆಂದರೆ ಜುಂಜಪ್ಪನು ಪವಾಡ ಪುರುಷನಾಗಿ ಕಂಡುಬಂದರೂ ಆತನು ಒಬ್ಬ ದನಗಾಹಿ. ತನ್ನ ಮಾವಂದಿರು ಕೊಟ್ಟ ಏಳು ಬಳುವಳಿ ಕರುಗಳಿಂದ ಏಳು ಲಕ್ಷ ಲಕ್ಷ ದನಗಳ ಅಭಿವೃದ್ಧಿ ಮಾಡಿಕೊಂಡವನು.

ಏಳು ಲಕ್ಷದ ದನ
ಏಳು ಬಣ್ಣದ ದನ
ಬಣ್ಣಕ್ಕೊಂದು ಲಕ್ಷ
ಬಾಲಕ್ಕೊಂದು ಲಕ್ಷ
ಆಳಿದನು ಜುಂಜಪ್ಪ॥

ಜುಂಜಪ್ಪನು ಮುಟ್ಟಿದ, ದೃಷ್ಟಿ ಬೀರಿದ, ಎಲ್ಲರ ದನಗಳು ಹೀಗೆಯೇ ಬೆಳೆದವು. ಕಾವ್ಯದಲ್ಲಿನ ಗಾದೆ ನುಡಿಯಂತೆ ಕಂಡು ಬರುವ 'ಗೋ ಮುಟ್ಟಿದ್ದು ಗೊಡ್ಡಾಗದುಂಟೇನಯ್ಯಾ' ಎಂಬುದು ಕೂಡ ಆಗಿನ ದನಗಾಹಿ ಸಂಸ್ಕೃತಿಯನ್ನೇ ಬಿಂಬಿಸುತ್ತದೆ.

ಜರುಮಲೆ ಸೀಮೆಯೊಳಗೆ ದನಮೇಯಿಸುವುದು, ಕುರುಬ ಉಂಡಾಡ್ ಪದ್ಮಣ್ಣನ ದನಗಳಿಗೆಲ್ಲಾ ಸಪ್ಪೆ ರೋಗ ಬರಲಾಗಿ, ಕಳುವರಳ್ಳಿ ಮಾರಮ್ಮನಿಗೆ ಹರಕೆ ಹೊರುವುದು, ದನಗಾರರು ಎದುರಿಸುವ ಸವಾಲುಗಳನ್ನು, ಕಂಡು ಕೊಳ್ಳುವ ಪರಿಹಾರೋಪಾಯಗಳನ್ನು ಸೂಚಿಸುತ್ತದೆ. ಜುಂಜಪ್ಪನಂತೂ ತನ್ನ ಲಕ್ಷ ಲಕ್ಷ ದನಗಳನ್ನು ನೂರಾವೊಂದು ಕಾವುಲು ಮೇಯಿಸಿಗೊಂಡು ಸಂಜೆಗೆ ಏಣಿಕಲ್ಲು ಗುಡ್ಡದ ಕಾವುಲಿಗೆ ದನಗಳನ್ನು ಕರೆಯುತ್ತಿದ್ದನು.

ಮುದುಗುದು ಕಾವುಲುನ
ಮನಿಕಂಡೆ ಮೇಯಿಸೋನು
ಕುಂದಲಿಪ್ಪೆ ಕಾವುಲನ
ಕುಂತೇನೆ ಮೇಯಿಸೋನು
ಬಾಣೆಗೇರಿ ಕಾವುಲನ
ಬಾರಾಡಿ ಮೇಯಿಸೋನು
ಜೂಜಿನ ಗುಂಡಿನು ಕಾವುಲ
ಜೂಜುನಾಡಿ ಮೇಯಿಸೋನು
ಹೊತ್ತಾಡಿ ಕಾವುಲನ
ಹೊತ್ತಡಿ ಮೇಯಿಸೋನಣ್ಣ
ಚುಂಚನಗಿರಿ ಕಾವುಲನ
ಚುಂಚನಾಡಿ ಮೇಯಿಸೋನಯ್ಯಾ॥

ಹೀಗೆ ಮೇಯಿಸಿಕೊಂಡು ಪುರಸಕ್ಕನ ಕೆರೆಯೊಳಗೆ ದನಗಳಿಗೆ ನೀರು ಕುಡಿಸಿಕೊಂಡು ಸೂರ್ಯಾಸ್ತದ ವೇಳೆಗೆ ದನಕರು ಹೊಡಕ್ಕೊಂಡು ಆವಿನ ಗೂಡಿಗೆ ಬರುತ್ತಿದ್ದನು.

ಜುಂಜಪ್ಪನ ಬಡಮ್ಯೆಲ ಎಂಬ 'ಬಸವ' ಆತನ ಆತ್ಮ ಬಲವೇ ಆಗಿದ್ದಿತು. ಜುಂಜಪ್ಪನ ಬಸವನಿಗೆ ಒಂಬತ್ತು ಜನ ರಂಗಪ್ಪಗಳು ಕಾಸಿ ಪಟ್ಟಕಟ್ಟಿ ಮುದ್ರೆ ಒತ್ತಿದರು.

ಪಟ್ಟ ಕಟ್ಟಿದಂಗೆ ಜುಂಜಪ್ಪ
ಬಸವುಗೆ ಹೆಸರಿಡ್ತಾನೆ ಮುಂಧ್ಗಡೆ ನಿತ್ಕಂಡ
ಕಂಬಿನಲ್ಲಿ ಸಮರಂತಾ
ನಲಿಯಲಿ ಸರಸ್ವತಿ
ಕಣ್ಣಿನಲ್ಲಿ ಬಲುಗಂಬೆ
ನೆಟ್ಟಿ ನಾಗರುವಿರುವ
ಭೂಮಿ ತೂಕದ ಬಡಮ್ಯೆಲ॥

ಬಡಮ್ಯೆಲ ಅಂತ ಹೆಸರಿಡ್ತಿದ್ದಂಗೆ ಬಡ ಕರ ಇದ್ದದ್ದು ಮಧುಗಿರಿ ಪರ್ವತವೇ ಆಗಿಹೋದ. ಮುಂದೆ ಜುಂಜಪ್ಪನ ದನುಗಳಿಗೆಲ್ಲಾ ಬಡಮ್ಯೆಲನೇ ರಕ್ಷಕನಾದ.

ಕಲ್ಲು ಕಂಬ ಮುರ್ದು
ಕಬ್ಬುದ್ದು ಸರವರ್ದು
ಮುದ್ದು ಸೇಳೂರ
ತೆನಿಮುರ್ದು ಬಡಮ್ಯೆಲ
ಬಡಮ್ಯೆಲ ಗೆದ್ದು ಬಂದನು ಕಾಲಗಳಿಗಾಗೋ॥

ಹಾಗೂ,

ಸೇಳೂರು ಗೆದ್ದು ನಮ್ಮ
ಸೇದಾ ಬಾವಿ ಗೆದ್ದ
ಮ್ಯಾಲೇನ ಗೆದ್ದ ಬಡಮ್ಮೈಲೋ
ಬಡಮ್ಮೈಲ ಸೇಳೂರು
ತೆನಿಕ್ವಾಟೆಗೆದ್ದ ಕಾಣಿರೋ॥

ಹೀಗೆ ಬಡಮ್ಮೈಲನ ಸಾಹಸಗಳು, ಪವಾಡಗಳ ರೂಪದಲ್ಲಿ ರೋಮಾಂಚನವನ್ನುಂಟುಮಾಡುತ್ತವೆ. ಬಡಮ್ಮೈಲನ ಹುಟ್ಟು, ನಾಮಕರಣ, ಜುಂಜಪ್ಪನ ಮಾವಂದಿರೊಂದಿಗಿನ ಪ್ರತೀಕಾರ, ಬಡಮ್ಮೈಲ ಬರಗಾಲವೊಂದನ್ನು ನಿಭಾಯಿಸಿದ್ದು, ಜುಂಜಪ್ಪನ ಬಗ್ಗೆ ಬಡಮ್ಮೈಲನಿಗೆ ಇದ್ದ ನಂಬಿಕೆ, ಇಲ್ಲೆಲ್ಲಾ ದನಗಾರರ ಬದುಕಿನ ವಿಭಿನ್ನ ರೂಪಗಳ ಸಂಸ್ಕೃತಿಯೇ ಅನಾವರಣಗೊಳ್ಳುತ್ತದೆ. ಜುಂಜಪ್ಪ ಏಳುವರ್ಷ ಸೇಳೂರ ದೊರಿತಾನ ಮಾಡಲು ಬಡಮ್ಮೈಲನೂ ಕಾರಣನಾಗುತ್ತಾನೆ.

ಇದೇ ರೀತಿಯಾಗಿ ಜುಂಜಪ್ಪನ ಏಳು ಲಕ್ಷ ದನದೊಳಗೆ 'ಪಂಚಕಲ್ಯಾಣಿ' ಎಂಬ ಹಸುವೂ ಇತ್ತು. ಈ ಹಸುವಿನ ವಿಶೇಷವೇನೆಂದರೆ,

ಪ್ರಪಂಚದಲ್ಲಿ ಏನೇ ಕರ್ತವ್ಯ ಆಗ್ತೈತೆಂಬುದೆಲ್ಲ
ಮುಂದಾಗಲ್ಲೆ ಗೊತ್ತಾಗಬಿಡೋದು
ಈ ಪಂಚಕಲ್ಯಾಣಿ ಹಸುವಿಗೆ॥

ಜುಂಜಪ್ಪ ಈ ಪಂಚಕಲ್ಯಾಣಿಯ ಮಾತನ್ನೇ ತಪ್ಪದೇ ಕೇಳುತ್ತಿದ್ದನು. ದನಗಳನ್ನು ಮೇಯಿಸುವ ಕಾವಲಿನ ವಿಚಾರ, ಬರಗಾಲದಲ್ಲಿ ದನಗಳ ನೀರು, ಮೇವಿಗಾಗಿನ ಹುಡುಕಾಟದ ವಿಚಾರವೆಲ್ಲಾ ಪಂಚಕಲ್ಯಾಣಿ ಹೇಳಿದಂತೆಯೇ ನಡೆಯುತ್ತಿತ್ತು. ಜುಂಜಪ್ಪ ಆತನ ತಮ್ಮಂದಿರು ಸೇರಿದಂತೆ ದನಗಳ ಗುಂಪಿಗೆ ಪಂಚ ಕಲ್ಯಾಣಿಯೇ ತಾಯಿಯಂತೆ ರೂಪುಗೊಂಡಿದ್ದಳು. ಇದು ಜುಂಜಪ್ಪ ತನ್ನ ದನಗಳ ಬಗ್ಗೆ ಹೊಂದಿದ್ದ ಮಮತೆ, ವಾತ್ಸಲ್ಯ, ಅಭಿಮಾನ, ಕಾಳಜಿಯನ್ನು ಸೂಚಿಸುತ್ತದೆ.

ಪ್ರತಿನಿತ್ಯ ಮನೆಯ ಕಂದಮ್ಮಗಳಿಗೆ ದನಗಳು ಮೇಯುಲು ಹೋಗುವ ಮೊದಲೇ ಹಾಲು ಕರೆದು ಕುಡಿಸುವರು.

ಎದ್ದೇಳಿರೋ ಕಂದಮ್ಮ
ದನಕರೂಗಳೂ ಹೊರವಡುದು
ಹಾಲು ಕುಡಿಸಿರೆಂದು
ತಮ್ಮುಗೊಳಿಗ್ಹೇಳಿದನೂ ಸ್ವಾಮಿ ಶಿವುನಿಗೋ॥

ಮತ್ತೆ ಸಂಜೆ ಇದೇ ತಾಯಿ ಹಸುಗಳು ತಮ್ಮ ತಮ್ಮ ಕರುಗಳಿಗೆ ಹಾಲು ಕುಡಿಸಲು ಕಾವಲಿನಲ್ಲಿ ಮೈಯ್ಯುದ್ದ ಹಿಂದಿರುಗುವಾಗ,

ನೂರೊಂದು ಕಾವುಲು
ಮೇಯಿಸ್ಗಂಡು ಜುಂಜಪ್ಪ
ದನುಗೂಳು ಕರುಕೊಂಡ್ಹೋಗಿ
ಊರಿಗೂ ಬರುತ್ತಾನಯ್ಯಾ ಗಳಿಗಾಗೋ [೩೯]

ಹೀಗೆ ಬರುವ ಜುಂಜಪ್ಪನ ದನಗಳ ಬರುವಿಕೆಯನ್ನು ಶಿವನು ನೋಡಿ ಖುಷಿ ಪಡುತ್ತಾನೆ. ಊರಿನ ಜನ ಜಗುಲಿಯ ಮೇಲೆ ಕುಳಿತು; ತಮ್ಮ ಏಳು ಏಳು ಜನ್ಮದ ಪುಣ್ಯವೆಂಬಂತೆ ಕಣ್ತುಂಬಿಕೊಳ್ಳುತ್ತಾರೆ.

ದಿನೇ ದಿನೇ ಬೆಳೆಯುತ್ತಲೇ ಇದ್ದ ಜುಂಜಪ್ಪನ ದನಗಳು, ಅದರಿಂದ ಜುಂಜಪ್ಪನ ಅಭಿವೃದ್ಧಿ, ಸಹಿಸದ ಆತನ ಮಾವಂದಿರು, ಜುಂಜಪ್ಪನನ್ನು ಹೇಗಾದರೂ ಸರಿ ನಾಶಗೊಳಿಸಲು ನಿಶ್ಚಯಿಸಿ, ಒಂದು ಮಂಗಳ್ವಾರ ಹೊತ್ತು ಹುಟ್ಟಿ ಬರೋ ವೇಳೆಗೆ 'ತಾಳೆದುರ್ಗಿ' ಎಂಬ ದೇವತೆಯ ಬಳಿಹೋದಾಗಲೂ, ಆ ದುರ್ಗಿ ಜುಂಜಪ್ಪನಿಗೆ ಬರೆದ ಪತ್ರದಲ್ಲಿ ದನಗಳು, ಕಾವಲು, ತೋಪು, ಮೇವು, ನೀರು, ಗೋಕುಲ ಹುಲ್ಲುಗಾವಲಿನ ಸಂಕೇತಗಳ ಮೂಲಕವೇ 'ದುರ್ಗಿ' ಜುಂಜಪ್ಪನನ್ನು ಆಹ್ವಾನಿಸುತ್ತಾಳೆ. ದುರ್ಗಿ ಈಶ್ವರನ ಮಗನಾದ ಜುಂಜಪ್ಪನನ್ನು ಕಾಡುಗೊಲ್ಲ ಎಂದೇ ಕರೆಯುತ್ತಾಳೆ. ಇವೆಲ್ಲಾ ಪಶುಪಾಲನಾ ಜೀವನವೃತ್ತಿಯ ಅನುಭವಾತ್ಮಕ ಮಾತುಗಳೇ ಆಗಿರುವುದನ್ನು ಇಲ್ಲಿ ಗುರುತಿಸಬಹುದು.

ಕಾವ್ಯದೊಳಗಿನ ಗೋವಿನ ಕರುಮಂತ್ರ, ಗೊಡ್ಡು ಹಸುಗಳು ಹಾಲುಕೊಡುವುದು; ಹೋಲಿಕೆಯ ಮಾತುಗಳಾಗಿ ಬರುವ, ಹಾಲಿನಂತೆ ಬೆಳ್ಳ ಬೆಳ್ಳಗೆ, ಹಾಲು ಉಕ್ಕಿಸಿದಂತೆ, ಹಾಲು ಪಾಯಿಸದ ಅಡಿಗೆ, ಇವೆಲ್ಲಾ ದನಗಾಹಿ ಪರಂಪರೆಯಲ್ಲಿ ಬಳಕೆ ಮಾಡುವ ಮಾತುಗಳಾಗಿರುವುದರಿಂದ ಜುಂಜಪ್ಪ ಒಬ್ಬ ಪಶುಪಾಲಕನಾಗಿಯೇ ತನ್ನ ಬದುಕು ರೂಪಿಸಿಕೊಂಡ 'ದೈವಮಾನವ'ನೆಂದೇ ಹೇಳಬಹುದು. ಜುಂಜಪ್ಪನ ಕಾವ್ಯದ ತುಂಬಾ ಯಾವ ಜೀವವನ್ನು ಕೊಲ್ಲದೆ ಪಳಗಿಸುವ, ಅಲ್ಲಿ ಜೀವನವನ್ನು ಕಟ್ಟಿ ಕೊಡುವ ಪಶುಪಾಲನೆಯ ಮಹಾನ್ ಸೂತ್ರವಾದ ಮಾನವತಾವಾದಿ ನಿಲುವು ನಮ್ಮನ್ನು ತಟ್ಟುತ್ತದೆ.

ಇಂತಹ ಕನ್ನಡ ಸಂಸ್ಕೃತಿಯ ಮಧ್ಯಕಾಲೀನ ಕಾಲಘಟ್ಟದ ಪರಿಸರದ ಪ್ರತಿರೂಪದಂತಿರುವ ಜುಂಜಪ್ಪನ ಮಹಾಕಾವ್ಯ ಹಾಗೂ ಇದೇ ಸ್ವರೂಪದಲ್ಲಿಯೇ

ಮುಂದುವರೆದುಕೊಂಡು ಬಂದ ಆ ಪಶುಪಾಲನಾ ಪರಿಸರ ಕನಕದಾಸರನ್ನು ಸಂಪೂರ್ಣವಾಗಿ ಪ್ರಭಾವಿಸಿದೆ. ಇಲ್ಲಿನ ಸಂಸ್ಕೃತಿ ಪರಂಪರೆಯಲ್ಲಿ ಕೊಟ್ಟ ಭಾಷೆ, ಆಡಿದ ಮಾತು ಎಂದರೆ ಪ್ರಾಣಕ್ಕಿಂತ ಮಿಗಿಲು. 'ಮೋಸದಿ ಜೀವನ ಘಾಸಿ ಮಾಡಿದ ಪಾಪ ಕಾಶಿಗೆ ಹೋದರೆ ಹೋದೀತೆ' ಮೋಸ ಮಾಡಿ ದೇವರಿಗೆ ಪ್ರದಕ್ಷಿಣೆ ಹಾಕುವುದರಿಂದ, ಕಾಣಿಕೆ ಕೊಡುವುದರಿಂದ ಮಾಡಿದ ಪಾಪದ ಕೆಲಸಗಳು ಪರಿಹಾರವಾಗುವುದಿಲ್ಲ. ಜುಂಜಪ್ಪನಿಗೆ ಮಾವಂದಿರು ಮಾಡಿದಂತ ಮೋಸ ಅಂದಿನ ಸಮಾಜದಲ್ಲಿ ನಡೆಯುತ್ತಿದ್ದುದರ ಪ್ರತಿರೂಪ. ಇದು ಕನಕದಾಸರನ್ನು ಬಹಳವಾಗಿ ಕಾಡಿದ್ದಿದೆ. 'ಉಂಡ ಮನೆಗೆರಡ ಎಣಿಸುವಾತನ ಸಂಗ, ಕೊಂಡೆಯವ ಪೇಳಿ ಕಾದಿಸುವವನ ಸಂಗ, ನಿಂದಕರ ಸಂಗ ಬಲು ಭಂಗ' ಎಂದಿರುವ ಕನಕದಾಸರ ಕೀರ್ತನೆಯು ವಿಶ್ವಾಸಘಾತುಕರ ಸಂಗ ಮಾಡಬಾರದು ಹಾಗೂ ಇವರ ಸ್ನೇಹ ಸಂಬಂಧಗಳು ಅಪಾಯಕಾರಿ ಎಂಬುದಾಗಿ ಹೇಳಿದ್ದಾರೆ. 'ಕೂಡಿದೆಡೆಯಲಿ ಕಪಟವೆಸಗುವವನು, ಮಾಡಿದುಪಕಾರವನು ಮರೆವವನು, ಚಾಡಿ ಕೊಂಡೆಗಳನಾಡಿ ನಡೆವವನು ದ್ರೋಹಿ' ಎಂಬ ಕೀರ್ತನೆಯು ಸಮಾಜದಲ್ಲಿ ಉಪಕಾರ ಮಾಡಿದ ವ್ಯಕ್ತಿಗಳನ್ನೇ ಮರೆತು ಬಿಡುವ ಹಾಗೂ ವಂಚಿಸುವ ಜನರೇ ಇದ್ದಾರೆ ಎಂಬ ಸಂದೇಶವನ್ನು ಸಾರುತ್ತದೆ. ಸಂಬಂಧಗಳನ್ನೇ ಮರೆತು ಮಾತನಾಡುವ ಜನರನ್ನು ನಂಬುವುದಾದರೂ ಹೇಗೆಂಬ ಆತಂಕವನ್ನು ಇಲ್ಲಿನ ಮಹಾಕಾವ್ಯದ ಜುಂಜಪ್ಪನೂ ಸೇರಿದಂತೆ ಸಮಾಜದ ಸಾಮಾನ್ಯ ಜನರು ಅನುಭವಿಸುತ್ತಲೇ ಇದ್ದರು. ಇಂತಹ ಸ್ಥಿತಿ ಅಂದಿನ ಸಮಾಜದಲ್ಲಿ ಸಾಮಾನ್ಯವಾಗಿತ್ತು ಎಂಬುದನ್ನು, ಪ್ರಸ್ತುತ ಇಲ್ಲಿನ ಕನಕದಾಸರ ಈ ಕೀರ್ತನೆಗಳು ಯಥಾವತ್ತಾಗಿ ಪ್ರತಿನಿಧಿಸುತ್ತವೆ.

ಎಲ್ಲಾ ಕಾಲಘಟ್ಟದಲ್ಲೂ ಸಮಾಜದೊಳಗೆ ನಿಂದಿಸುವ, ವ್ಯಂಗ್ಯದ ಮಾತನಾಡುವ, ದೌರ್ಜನ್ಯದ ಕುಹಕಿಗಳಿರುವುದು ಸಹಜ. ಇಂತಹವರನ್ನು ಪ್ರತಿಭಟಿಸಿ ನಿಲ್ಲುವಂತಹ ದಿಟ್ಟ ಭಾವನೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಮುಂದೆ ಬರಲು ಸಾಧ್ಯ. ಈ ಸಿದ್ಧಾಂತಕ್ಕೆ ಜುಂಜಪ್ಪ ಸ್ಪಷ್ಟ ನಿದರ್ಶನ. ಏಕೆಂದರೆ ಬಲಾಢ್ಯರೂ ಶ್ರೀಮಂತರೂ ಮತ್ತು ಕುಹಕಿಗಳೂ ಆದ ತನ್ನ ಮಾವಂದಿರನ್ನು ಮಾನವತಾ ನೆಲೆಯಿಂದ ಎದುರಿಸಿ, ನಂಬಿದ ಸಮುದಾಯಕ್ಕೆ ಬದುಕು ರೂಪಿಸಿಕೊಟ್ಟವನು ಇಲ್ಲಿನ ಜುಂಜಪ್ಪ. ತಾನೂ ಬದುಕಿ ತನ್ನ ಸಮುದಾಯವೂ ಒಂದು ಬದುಕು ಕಟ್ಟಿಕೊಳ್ಳುವಂತೆ ಮಾಡಿದ ಜುಂಜಪ್ಪನ ಸಾತ್ವಿಕತೆಯನ್ನು; ಕನಕದಾಸರು ರಾಮಧಾನ್ಯಚರಿತೆಯ 'ರಾಗಿ' ತನ್ನ ನಿರಂತರ ಹೋರಾಟ ಮತ್ತು ಪ್ರತಿಭಟನೆಯ ಮೂಲಕ ಸಮಾಜದಲ್ಲಿ ದಕ್ಕಿಸಿಕೊಂಡ ಮನ್ನಣೆಯೊಂದಿಗೆ ಕಾಣಲೆತ್ನಿಸಿದ್ದಾರೆ.

ಕೃಷಿ ಮತ್ತು ಪಶುಪಾಲನಾ ವೃತ್ತಿಯೇ ಗಾಢವಾಗಿದ್ದ ಕನಕನ ಪರಿಸರದಲ್ಲಿ

ಅನುಭವಗಳು ರೂಪುಗೊಳ್ಳುತ್ತಿದ್ದುದ್ದೂ ಇಲ್ಲಿಂದಲೇ. ಹಾಗಾಗಿ ಜುಂಜಪ್ಪನಂತಹ ದಿಟ್ಟ ವ್ಯಕ್ತಿತ್ವದವರನ್ನು ಕನಕ ಹತ್ತಿರದಿಂದ ನೋಡಿರಲೂಬಹುದು. ಆದ್ದರಿಂದಲೇ ಮೋಹನತರಂಗಿಣಿಯ ಗೋಪಾಲಕನಾದ ಕೃಷ್ಣ; ಕತೆಯ ನಾಯಕನಾಗುತ್ತಾನೆ. 'ಕಾವ ನಮ್ಮಜ್ಜ ನರಕುರಿ ಹಿಂಡುಗಳ' ಎಂಬ ಕೀರ್ತನೆಯಲ್ಲಂತೂ ದೇವರನ್ನು ಕುರುಬನಿಗೆ ಹೋಲಿಸಿ ನರರನ್ನು ಕುರಿಗಳಿಗೆ ಹೋಲಿಸುವುದರ ಮೂಲಕ ಪಶುಪಾಲನೆಯ ನೈಜ ಚಿತ್ರಣವನ್ನು ಕಟ್ಟಿಕೊಡುತ್ತಾರೆ. ಇಂತಹ ರಚನೆಗಳು ಕನಕದಾಸರಿಂದ ಮೂಡಿಬರಲು ಅವರ ಮೇಲಾಗಿದ್ದ ಪಶುಪಾಲನೆಯ ಪ್ರಭಾವ ಕಾರಣ ಎನ್ನಬಹುದು.

**ಮಲೆಯ ಮಾದೇಶ್ವರನ ಮಹಾ ಕಾವ್ಯ:**

ನಾಗರಿಕತೆಯ ಸೋಂಕಿಲ್ಲದ ನಮ್ಮ ಜನಪದರು ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ಮಾನವನ ಜ್ಞಾನಭಂಡಾರದಲ್ಲಿ ಅಕ್ಷರ ರೂಪದ ವಿದ್ಯೆ ಬಂದದ್ದು ಇತ್ತೀಚೆಗೆ. ಗವಿ ಮಾನವನಿಂದ, ಗಗನಗಾಮಿಗಳವರೆಗೂ ವಿಕಾಸಗೊಳ್ಳುತ್ತಲೇ ಬಂದ ಮಾನವನ ಜ್ಞಾನಗರ್ಭದ ಅನಂತ ಮುಖಗಳನ್ನು ಈಗೀಗ ಗ್ರಂಥರೂಪದಲ್ಲಿ ನಮ್ಮ ವಿದ್ವಾಂಸರು ಹಿಡಿದಿಡುವ ಪ್ರಯತ್ನಮಾಡುತ್ತಿದ್ದಾರೆ. ಅಜ್ಞಾತವಾಗಿ ಉಳಿದಿರುವುದರ ಸುತ್ತ ಹುಡುಕಾಟಗಳು ನಡೆಯುತ್ತಲೇ ಇವೆ. ಆದಿಮಾನವನಿಂದ ಇಂದಿನವರೆಗೂ ಜ್ಞಾನ ಮತ್ತು ವಿಜ್ಞಾನಗಳನ್ನು ಒಳಗೊಂಡಂತೆ ಬೆಳೆದುಬಂದಿರುವ ಸಂಸ್ಕೃತಿಯನ್ನು 'ಶಿಷ್ಟಸಂಸ್ಕೃತಿ' ಎಂದು ಗುರುತಿಸಲಾಗಿದ್ದು, ಇದರ ಅಧ್ಯಯನವನ್ನು ಜಾನಪದ ಅಧ್ಯಯನ ಎಂದು ಕರೆಯಲಾಗಿದೆ.

**ಹಿನ್ನೆಲೆ:**

ಮಾನವನ ಮನಸ್ಸು ಸೃಷ್ಟಿ ಸೌಂದರ್ಯವನ್ನು ಅನುಭವಿಸಿ ಸೃಷ್ಟಿರಹಸ್ಯವನ್ನು ಅರಿಯಲು ಪ್ರಾರಂಭಿಸಿದಾಗಲೇ ತನ್ನ ಅಪೂರ್ವ ಅನುಭವಗಳನ್ನು ಅಭಿವ್ಯಕ್ತಿಪಡಿಸಲು ಪ್ರಯತ್ನಿಸಿದ ಫಲವಾಗಿ ಕಲೆ ಹಾಗೂ ವಿಜ್ಞಾನಗಳು ಉದಯವಾದವು. ಕಲ್ಪನಾ ಪ್ರಧಾನವಾದ ಪ್ರಾಚೀನ ಮಾನವನ ಮನಸ್ಸು, ವಿಶ್ವದ ಎಲ್ಲಾ ವಿಷಯಗಳಿಗೂ ವಿವರಣೆ ಕೊಡಲು ಯತ್ನಿಸಿದಾಗ ಪುರಾಣಗಳು ಸೃಷ್ಟಿಯಾದವು. ಇದಕ್ಕೆ ವೇದಗಳ ಅಧ್ಯಯನಗಳು ಕಾರಣವಾದವು. ಜೊತೆಗೆ ಐತಿಹಾಸಿಕ ಸಾಮಗ್ರಿಯನ್ನು ಬಳಸಿಕೊಂಡು ಪುರಾಣ ಕಲ್ಪನೆ ತನ್ನೊಳಗಿನ ಆಶಯದಿಂದಾಗಿ ಆದರ್ಶ ದೇವತೆಗಳ ಬೃಹತ್ ಪ್ರತಿಮೆಗಳನ್ನು ನಿರ್ಮಿಸಿತು. ಹಾಗೂ ಅಭಿವ್ಯಕ್ತಿಯ ಸಂದರ್ಭದಲ್ಲಿ ಕಥನರೂಪವನ್ನು ಕಂಡುಕೊಂಡು ವಸ್ತು ನಿಷ್ಠ ಕಾವ್ಯಗಳು ಸೃಷ್ಟಿಯಾಗತೊಡಗಿದವು. ಹೀಗೆ ಬೆಳೆದ ಕಾವ್ಯ ಒಬ್ಬ ವ್ಯಕ್ತಿಯದಾಗದೆ, ಸಮಗ್ರ ದೇಶ ಅಥವಾ ಜನಾಂಗದ ಭಾಷೆ ಸಂಸ್ಕೃತಿ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳ ಪ್ರಜ್ಞೆಯ ಪ್ರತಿನಿಧಿಯಾಗಿ

ರೂಪುಗೊಂಡು ಅದು ಮಹಾಕಾವ್ಯ ಎನಿಸಿಕೊಂಡಿತು.

ಇಂತಹ ಜನಪದ ಮಹಾಕಾವ್ಯಗಳಲ್ಲಿ ಕರ್ನಾಟಕದ ವ್ಯಾಪ್ತಿಗೆ ಒಳಪಡುವಂತೆ ಕಂಡು ಬರುವ ಕಾವ್ಯವೇ 'ಮಲೆಯ ಮಹಾದೇಶ್ವರ ಮಹಾ ಕಾವ್ಯ'. ಇದು ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬೆಳೆದು ಬಂದಿದೆ. ಈ ಕಾವ್ಯವನ್ನು ರಾಷ್ಟ್ರೀಯ ಮಹಾಕಾವ್ಯಗಳ ಸಾಲಿನಲ್ಲಿ ಇಂದಿಗೂ ಗುರುತಿಸಲಾಗದಿದ್ದರೂ ಸ್ಥಳೀಯ ಜನಪದ ಮಹಾಕಾವ್ಯಗಳೆಂದು ಒಪ್ಪಲೇ ಬೇಕಾಗುತ್ತದೆ. ಈ ಮಹಾಕಾವ್ಯದಲ್ಲಿ ಹದಿನಾಲ್ಕು ಕಾವ್ಯ ಭಾಗಗಳಿದ್ದು ಇಲ್ಲಿನ ಪ್ರತಿಯೊಂದು ಕಥನ ಭಾಗವನ್ನು 'ಸಾಲು' ಎಂದು ಕರೆಯಲಾಗುತ್ತದೆ. ರಾಮೇಗೌಡ ಅವರು ಈ ಮಹಾಕಾವ್ಯವನ್ನು 'ಲಾವಣಿಗಳ ಸರಣಿ' ಅಥವಾ 'ಲಾವಣಿ ಮಹಾಕಾವ್ಯ' ಎಂದು ಕರೆದಿದ್ದಾರೆ. ಕನ್ನಡ ನಾಡಿನ ಮಹಾಮಹಿಮನಾಗಿ ಮೆರೆದ ಮಲೆಯ ಮಾದೇಶ್ವರನ ಪ್ರಭಾವಶಾಲಿ ವ್ಯಕ್ತಿತ್ವ ಜನಸಾಮಾನ್ಯರ ಮೇಲೆ ಉಂಟುಮಾಡಿರಬಹುದಾದ ಪರಿಣಾಮವೇ ಈ ಮಹಾ ಕಾವ್ಯದ ಸೃಷ್ಟಿಗೆ ಕಾರಣವಾಗಿದೆ.

**'ಮಾದೇಶ್ವರ'– ವ್ಯಕ್ತಿ ಮತ್ತು ಇತಿಹಾಸ :**

ಮಲೆ ಮಾದೇಶ್ವರ ಕಾವ್ಯದ ಮಾದಪ್ಪನದು ಸದಾ ಪಯಣದ ಬದುಕು. ಭಿಕ್ಷೆ ಬೇಡುವುದೇ ಅವನ ವೃತ್ತಿ. ಅವನಿಗೆ ಒಬ್ಬ ಸಾಮಾನ್ಯ ವ್ಯಕ್ತಿಗಿರಬಹುದಾದ ಆಸೆಗಳಿವೆ. ತನ್ನ ಒಕ್ಕಲುಗಳನ್ನು ಹೆಚ್ಚಿಸಿಕೊಂಡು ಒಂದುಕಡೆ ನೆಲೆ ನಿಲ್ಲಬೇಕೆಂಬ ತವಕ ಅವನದು. ಈ ಆಸೆಯಿಂದಲೇ ಹಲವು ಜನವರ್ಗಗಳ ಪ್ರಮುಖರನ್ನು ತನ್ನೆಡೆಗೆ ಸೆಳೆಯುವ ಹುನ್ನಾರ ಹೂಡುತ್ತಾನೆ. ಅಂತೆಯೇ ಅವರನ್ನು ತನ್ನ ಪರಿಧಿಗೆ ಸೇರಿಸಿಕೊಡು ಅವರೆಲ್ಲರ ಜೀವನವನ್ನು ಹಸನುಗೊಳಿಸಬೇಕೆಂಬುದು ಅವನ ಉದ್ದೇಶ. ಇಂತಹ ಮಾದೇಶ್ವರ ಐತಿಹಾಸಿಕ ವ್ಯಕ್ತಿ ಎಂಬುದು ನಿರ್ವಿವಾದವಾದರೂ ಅವನ ಕಾಲದ ಬಗ್ಗೆ ಖಚಿತವಾಗಿ ಹೇಳುವುದು ತುಂಬಾ ತೊಡಕಿನದಾಗಿದೆ.[೪೦]

ಈ ಸಂದರ್ಭದಲ್ಲಿ ಮಾದೇಶ್ವರನ ಕಾಲ ಕುರಿತು ಚರ್ಚೆ ಮಾಡಲಾಗಿರುವ ಇ.ಎನ್. ಲಿಂಗಣ್ಣನವರ ವಿಚಾರ ಎಂ.ಜಿ.ನಂಜುಡಾರಾಧ್ಯರ ಚರ್ಚೆ (ಸಿದ್ಧಪ್ಪ ಶಾಸ್ತ್ರಿಗಳ ಮಲೆಮಹದೇಶ್ವರ ನಿಜ ಪುರಾಣಕ್ಕೆ ಬರೆದ, 'ಮುನ್ನುಡಿ'ಯಲ್ಲಿರುವಂತೆ) ಹೈದರಾಲಿ ಶಾಸನ* ಹಾಗೂ ಜನಪದ ಸಾಹಿತ್ಯಗಳ ಶೋಧನೆಯ ಪ್ರಕಾರ ಮಾದೇಶ್ವರ ಸುತ್ತೂರು ಮಠಕ್ಕೆ ಬಂದಿದ್ದನೆಂಬ ಹೇಳಿಕೆಗಿಂತಲೂ ಕುಂತೂರು ಮಠಕ್ಕೆ ಬಂದಿದ್ದರು

---

* ಬಹದ್ದೂರು ಹೈದರಾಲಿ ಖಾನ್ ತಾಮ್ರ ಶಾಸನ: ಈ ಶಾಸನದ ಸಂಪೂರ್ಣ ಭಾಗವನ್ನು ಬಿ.ಶಿವಮೂರ್ತಿಶಾಸ್ತ್ರಿಗಳು 'ಮಾದೇಶ್ವರಚರಿತ್ರೆ'ಯಲ್ಲಿ ಅಚ್ಚಿಸಲಾಗಿದೆ.

ಎಂಬುದನ್ನು  ಹೆಚ್ಚು ಖಚಿತಪಡಿಸಿಕೊಳ್ಳಲಾಗಿದೆ. ಕ್ರಿ.ಶ. ೧೫೧೨ರ ಕುಂತೂರು ಶಾಸನದಲ್ಲಿರುವಂತೆ ಮಠದ ಪ್ರಾಚೀನತೆ ಹಿನ್ನೆಲೆಯಲ್ಲಿ ಮಾದೇಶ್ವರನ ಕಾಲ ೧೬ನೇ ಶತಮಾನವೆಂದು ನಿರ್ವಿವಾದವಾಗಿ ಒಪ್ಪಬೇಕಾಗುತ್ತದೆ.

ಮಾದೇಶ್ವರನ ತಂದೆ ತಾಯಿಗಳ ಬಗ್ಗೆ ಜನಪದ ಸಾಹಿತ್ಯ, ಉತ್ತರ ದೇಶದ ಉತ್ತಮ ಪುರದ ಕಾಳಿಕಲ್ಯಾಣ ದೇವರು ಮತ್ತು ಉತ್ತರೋಜಮ್ಮ ಎಂದು ಹೇಳುತ್ತದೆ. ಕುಂತೂರಿನ ಸಿದ್ಧಪ್ಪ ಶಾಸ್ತ್ರಿಗಳ ಮಲೆಮಹದೇಶ್ವರ ನಿಜಪುರಾಣ ಮಾದೇಶ್ವರನ ತಂದೆ ತಾಯಿಗಳನ್ನು ಚುಂಚ ದಂಪತಿಗಳೆಂದು ಹೇಳಿದೆ. ಮಾದೇಶ್ವರ ಹರಿಜನರಲ್ಲಿ ಎಡಗೈ ಪಂಗಡಕ್ಕೆ ಸೇರಿದವನೆಂದು ಜನಪದ ಸಾಹಿತ್ಯ ತಿಳಿಸುತ್ತದೆ. ಹಾಗೂ ಇದನ್ನು ಕ್ರಿ.ಶ. ೧೮೩೮ ರ ದೇವಚಂದ್ರನ 'ರಾಜಾವಳಿ ಕಥೆ' ಸಮರ್ಥಿಸುತ್ತದೆ.

ಮಾದೇಶ್ವರ ತನ್ನ ಮಹಾಮಹಿಮೆಯಿಂದ ಜನಪದವನ್ನೆಲ್ಲಾ ತನ್ನೆಡೆಗೆ ಸೆಳೆದುಕೊಂಡು ಈಶ್ವರನೆನಿಸಿಕೊಂಡಮೇಲೆ, ಎಲ್ಲಾ ಮಠಗಳೂ ಮಾದೇಶ್ವರ ನಮ್ಮವನು, ತಮ್ಮವನು ಎಂದು ಕೊಂಡಾಡಿದಂತೆ ಕಾಣುತ್ತದೆ. ಆದರೆ ಜನಪದ ಸಾಹಿತ್ಯದ ಪ್ರಕಾರ ಮಾದೇಶ್ವರ ಸುತ್ತೂರು, ಕುಂತೂರು, ಬದನಾಳು, ಇತ್ಯಾದಿ ಮಠಗಳಿಗೆ ಬಂದಾಗ ಅವು ಈತನ ಯೋಗ್ಯತೆಯನ್ನು ಗುರುತಿಸದೆ ಅವನಿಗೆ ತಕ್ಕ ಸ್ಥಾನಮಾನಗಳನ್ನು ಕೊಡಲಿಲ್ಲ ಎಂಬುದನ್ನು ಒಪ್ಪಬೇಕಾಗುತ್ತದೆ.

ಈ ಮಠಗಳಲ್ಲಿ ಮಾದೇಶ್ವರನಿಗೆ ಪುರಸ್ಕಾರ ಸಿಕ್ಕಿದ್ದರೆ ಅವನು ಏಳುಮಲೆಗೆ ಹೋಗಿ ನೆಲೆಗೊಳ್ಳುವ  ಅವಶ್ಯಕತೆಯೇ ಬರುತ್ತಿರಲಿಲ್ಲವೆಂದು ಕಾಣುತ್ತದೆ. ಈ ಮಠದ ಅಯ್ಯಗಳು ಅವನಲ್ಲಿ ವಿಶೇಷ ಗುಣಗಳನ್ನು ಗಮನಿಸಿದರೂ, ಅವನಿಗೆ ಊಳಿಗವಾಗಿ, ರಾಗಿ ಬೀಸುವುದು, ಸೌದೆ ಹೊಡೆಯುವುದು, ದನಕಾಯುವುದು, ಹೂ ತರುವುದನ್ನು ನೇಮಿಸಿದ್ದರು.[೪೧] ಹುಟ್ಟು ವೀರಶೈವನಾಗಿರದ ಮಾದೇಶನು ಶೈವ ದೀಕ್ಷೆಗಾಗಿ ಈ ಮಠಗಳಲೆಲ್ಲಾ ಅಡ್ಡಾಡಿ ಜಾತಿಯ  ಭೂತದ ಹೊಡೆತದಿಂದ ಪಾರಾಗಲು ದುರ್ಗಮವಾದ ಏಳುಮಲೆ ನಡುವೆ ನೆಲೆಸಿದನೆಂದು ಕಾಣುತ್ತದೆ.

ಮಾದೇಶ್ವರನಿಗೆ ಮಾರ್ಗದರ್ಶಕರೆಂದು ತಿಳಿದುಬಂದ ಪ್ರಭುಸ್ವಾಮಿಗಳು ಕುಂತೂರು ಸಮೀಪದ ಪ್ರಭುಸ್ವಾಮಿ ಬೆಟ್ಟದಲ್ಲಿದ್ದರೆಂದೂ, ಇವರು ಕುಂತೂರು ಮಠಾಧೀಶರೆಂದೂ ಜನಪದ ಸಾಹಿತ್ಯ ನಮಗೆ ಮಾಹಿತಿ ನೀಡುತ್ತದೆ. ಅಂತೆಯೇ ಜನಪದ ಸಾಹಿತ್ಯದ ಪ್ರಕಾರ 'ಸೋಲಿಗರ ಮಠ'ವನ್ನು 'ಸಾಳೂರು ಮಠ' ಎಂದು ಕರೆಯಲಾಗುತ್ತಿದ್ದು; ಈ ಮಠದಲ್ಲಿ ಮಾದೇಶ್ವರ ಬಳಸುತ್ತಿದ್ದ ವಸ್ತುಗಳೆಂದು ಹೇಳಲಾಗಿರುವ ಎರಡು ಜೋಳಿಗೆಗಳು, ನಾಗಬೆತ್ತ, ಸಂತರ ಪಾದರಕ್ಷೆ, ಮರದ ಕರಡಿಗೆ, ಪಾದಪೆಂಡೆ, ಶಂಖ, ಕಂಸಾಳೆ, ಮರದ ಬಚ್ಚೆಕಲ್ಲು ಇವುಗಳನ್ನೂ ಈಗಲೂ ಸಂರಕ್ಷಿಸಿಕೊಂಡು ಬರಲಾಗಿದೆ. ತನ್ನ ಕಾಯಕದ ಮೂಲಕ ಜನಪದರ ಹೃದಯವನ್ನು

ಸೂರೆಗೊಂಡಿರುವ ಮಾದೇಶ್ವರ, ಭಕ್ತರಿಗೆ ಈಶ್ವರ, ಸಂಶೋಧಕರಿಗೆ ಇತಿಹಾಸ ಪುರುಷ, ಸಾಹಿತ್ಯ ರಸಾಸ್ವಾದಕರಿಗೆ ಕಥಾನಾಯಕ, ಧರ್ಮ ಜಿಜ್ಞಾಸುಗಳಿಗೆ ವಿಭೂತಿ ಪುರುಷ, ಎಲ್ಲಾ ಮತದವರನ್ನು ತನ್ನತ್ತ ಸೆಳೆದುಕೊಂಡಿರುವ ಜಾತ್ಯತೀತ ಪ್ರಭು. ಇಂತಹ ಭಕ್ತ, ಜನಪ್ರಿಯ ಮಹಾದೇಶ್ವರ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಮನೋಹರ ಪರ್ವತಾರಣ್ಯಗಳ ನಡುವೆ,

ಆನುಮಲೆ ಹಾಸುಕೊಂಡು
ಜೇನುಮಲೆ ಹೊದ್ದುಕೊಂಡು
ಎಪ್ಪತ್ತೇಳು ಮಲೆಯನ್ನು ಸುರುಳಿಸುತ್ತಿ
ತಲೆದಿಂಬನ್ನಾಗಿ ಮಾಡಿಕೊಂಡು
ಮಲಗಿರುವಂತ ನಮ್ಮಪ್ಪಾಜಿ
ಮುದ್ದು ಮಾದೇವನ ಪಾದುಕ್ಕೊಂದ್ಸಲ ಉಘೇ ಅನ್ನಿ॥

ಎನ್ನುವಂತೆ, ಬೆಟ್ಟದಲ್ಲಿ ಆನುಮಲೆ, ಜೇನುಮಲೆ, ಜೊತೆಗೆ ಗುಂಜಿಮಲೆ, ಗುಲಗಂಜಿಮಲೆ, ಕಾನುಮಲೆ, ಕಂಬತ್ತಿಮಲೆ ಕಡುದಾಕ್ಷಿಮಲೆ, ಪದುಮಮಲೆ, ಪಚ್ಚೆಮಲೆ, ಪೂಜೆಮಲೆ, ಪೊನ್ನಾಚಿಮಲೆ, ಕೊಂಗುಮಲೆ, ಸಂಕುಮಲೆ, ರುದ್ರಾಕ್ಷಿಮಲೆ, ನಾಗಮಲೆ, ನಡುಮಲೆ, ಗಾಳಿಮಲೆಗಳೆಂಬ ಎಪ್ಪತ್ತೇಳು ಮಲೆಗಳಿವೆಯೆಂದೂ ಇಲ್ಲೆಲ್ಲಾ ಮಾದೇಶ್ವರ ಸಂಚರಿಸಿ ತಪಸ್ಸು ಮಾಡಿದನೆಂದೂ ಈಗಲೂ ಪ್ರತೀತಿ ಇದೆ. ಹಾಗಾಗಿ ಮಲೆಯ ಮಾದೇಶ್ವರ ಎಂಬ ಈ ಜನಪದ ಮಹಾಕಾವ್ಯ ಒಬ್ಬ ವ್ಯಕ್ತಿಯ ಸೃಷ್ಟಿಯಲ್ಲ. ಹಾಗೆಯೇ ಒಂದು ದಿನದ ಸೃಷ್ಟಿಯೂ ಅಲ್ಲ. ಇದೊಂದು ಪುರಾಣ ಕಥೆ. ಜೀವನಾನುಭವಗಳ ಅಭಿವ್ಯಕ್ತಿ ಎನಿಸಿಕೊಂಡಿರುವ ಜನತಾ ಕಾವ್ಯ. ಈಗ ಈ ಕಾವ್ಯವನ್ನು ಹಾಡುತ್ತಿರುವವರೇ ಇದರ ಕರ್ತೃವಲ್ಲ. ಆತ ಪರಂಪರೆಯಿಂದ ಬಂದ ಕಾವ್ಯವಾಹಿನಿಯನ್ನು ಉಳಿಸಿಕೊಂಡು ಬಂದ ಪ್ರತಿಭಾವಂತ ಪ್ರತಿನಿಧಿ. ಕಾವ್ಯದಲ್ಲಿ ಬರುವ ಪಾತ್ರಗಳನ್ನೆಲ್ಲಾ ನಡೆಸುವ ಚಾಲಕ ಶಕ್ತಿ ಇರುವುದು ಕಾವ್ಯದ ಕಥಾನಾಯಕನಾದ ಮದೇಶ್ವರನಿಗೆ ಮಾತ್ರ, ಕಾವ್ಯದ ಕೇಂದ್ರ ವ್ಯಕ್ತಿಯೇ ಮಾದೇಶ್ವರ. ಒಂದು ಜನಾಂಗದ ಮೇಲೆ ಅಚ್ಚಳಿಯದೆ ಪ್ರಭಾವ ಬೀರಿದ ಈ ಮಾದೇಶ್ವರ ತನ್ನ ರಚನಾತ್ಮಕ ಕಾರ್ಯಗಳು ಮತ್ತು ಪವಾಡಗಳ ಮೂಲಕ ವಿಕಾಸ ಹೊಂದಿ ಪುರಾಣ ಪುರುಷನಾಗಿ ಪರಿವರ್ತನೆ ಹೊಂದಿದ್ದಾನೆ.[೪೨]

**ಮಾದೇಶ್ವರನ ಕಾವ್ಯದಲ್ಲಿರುವ ಪಶುಪಾಲನೆಯ ವಿವರಗಳು:**

ಮಾದೇಶ್ವರನ ಅವತರಣದ ಮೂಲ ಉದ್ದೇಶ ಶ್ರವಣ ದೊರೆಯ ಸಂಹಾರ. ಈ ಕಾರ್ಯ ನಿರ್ವಿಘ್ನವಾಗಿ ನಡೆದು; ದೇವ ದೇವಮಾನವರ ಸೆರೆತಪ್ಪಿದ ಬಳಿಕ,

ಪಿಶಾಚ ಪ್ರವೃತ್ತಿಯ ಇಕ್ಕೇರಿ ದೇವಮ್ಮನನ್ನು ನಾಶಮಾಡಿ ಆಕೆಯ ಏಳುಕೊಪ್ಪರಿಕೆ ಐಶ್ವರ್ಯವನ್ನು ಏಳುಮಲೆಗೆ ಮಾದೇಶ್ವರನು ತರಿಸಿಕೊಳ್ಳುತ್ತಾನೆ. ಈ ಅಪಾರ ದ್ರವ್ಯದಿಂದ ದೇವಾಲಯ ನಿರ್ಮಾಣ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದ ಮಾದೇಶ್ವರನು ಇಂತಹ ಮಹಾಕಾರ್ಯಕ್ಕೆ ಅಲಂಬವಾಡಿಯ ಜುಂಜೇಗೌಡನೇ ಸಮರ್ಥನೆಂದು ನಿಶ್ಚಯಿಸುತ್ತಾನೆ. ದನ, ಕುರಿ, ರಾಸುಗಳೊಂದಿಗೆ ಶ್ರೀಮಂತನಾಗಿದ್ದ ಜುಂಜೇಗೌಡ ತನ್ನ ದೊಡ್ಡಸ್ತಿಕೆಗೆ ಕುಂದಕವೆಂದು ಬಗೆದು ನಿರಾಕರಿಸುತ್ತಾನೆ. ಹೇಗಾದರೂ ಮಾಡಿ ಜುಂಜೇಗೌಡನಿಂದಲೇ ಗುಡಿ ಕಟ್ಟಿಸಿಕೊಳ್ಳಬೇಕೆಂದು ಬಗೆದ ಮಾದೇಶ್ವರರು,

ಏಳ್ಮಲೆ ಹತ್ತಯ್ಯ
ಮೊಕದ್ತುಂಬ ಭಸುಮಂಗವಂತೆ
ಕೊರಳ್ತುಂಬ ರುದ್ರಾಕ್ಷಿಯಂತೆ
ಕಂಚು ಕಂಸಾಳೆ ಬಲಗೈಲಿ ಹಿಡ್ಕೊಂಡು
ಜುಂಜೇಗೌಡನ ನಡಟ್ಟಿಯೊಳಗೆ ಬಂದು
ಅಲ್ಲಿ ಧರ್ಮ ಸಾರ್ತಾ
ಅವ್ರು ಭಿಕ್ಷಾ ಸಾರ್ತಾ ನಿಂತವ್ರೆ
ಮಾದೇವ ನೋಡಿ ನಮ್ಮ ಶಿವನಾ॥ [೪೩]

ಆಗ ಆಲಂಬಾಡಿ ಜುಂಜಪ್ಪನ ಮಡದಿ ಆಲಮ್ಮನವರು, ದನಗಳ ಹಿಂಡಿನಲ್ಲಿಯೇ ಮೇಲಾದ ಜಲುಗೊಂಬನ ಹಸಿಗೆ, ಕರುವನ್ನು ಬುಟ್ಕೊಂಡು ಚಿನ್ನದಂಡೆಯನ್ನು ಮುಂದೇ ಮಡೀಕೊಂಡು ಹಾಲ ಹಿಂಡ್ತಾ ಕುಂತಿದ್ದಳು. ಈ ಸಂದರ್ಭದಲ್ಲಿ ಹಾಲನ್ನು ಹಿಂಡುತ್ತಿದ್ದ ಜಲುಗೊಂಬನ ಬಿಳಿಹಸ ನಮ್ಮ ಮಾದೇಶ್ವರನ ದನಿ ಕೇಳಿ ತಿರುಗಿ ನೋಡ್ತಂತೆ. ಆಗ ಜುಂಜಪ್ಪನ ಮನೆ ಒಳಗೆ ಮಾದೇಶ್ವರ ಬಂದು ಬಿಳಿ ಹಸುವನ್ನು ಕುರಿತು,

ಅಪ್ಪಾ ಹಿಂಡುಗೇಕದ ಜಲುಕೊಂಬುವ ಬೀಳೀ ಹಸ್ವೆ
ನಾನು ಏಳ್ಮಲೆ ಕೈಲಾಸದಲ್ಲಿ ನೆಲೆಗೊಂಡಿವ್ನಿ
ನಾನು ನೆಲೆಗೊಂಡಿರುವಂತಹ ಸ್ಥಳದಲ್ಲಿ ಬಂದು
ನಾನಿರುವ ಮೂಗುತ್ತಕೆ
ನಾಲಕ್ಕಾಲ್ನು ಪೊತ್ತುರ್ಸುಬುಟ್ಟು
ನನ್ನ ಅವಸೋಕುಕ್ಕೆ ಹಾಲನ್ನು ಹಿಂಡು, ಅಂತ ಹೇಳಿ
ಮಾದೇಶ್ವರ ಬಿಳೀ ಹಸಿನ ಮೇಲೆ ದೃಷ್ಟಿ ಮಡುಗ್ಬುಟ್ರು
ಜುಂಜಪ್ಪನ ಮಡ್ದಿ ಆಲಮ್ಮನ ಕೈಲಿ ಭಿಕ್ಷವನ್ನು ತಕ್ಕೊಂಡು
ಜುಂಜಪ್ಪನ ಮನೆ ಬಿಟ್ಟು ಅರಣ್ಯಕ್ಕೆ ಬರ್ತವುರೆ ಮಾದೇವ॥

ಮರುದಿನ ಜುಂಜಪ್ಪ ದನಗಳನ್ನು ಮೇಯಿಸುವುದಕ್ಕೆ ಬಂದಾಗ ಜಲುಗೊಂಬಿನ ಬಿಳಿ ಹಸ, ದನಗಳನ್ನೆಲ್ಲಾ ಬಿಟ್ಟು ಪಕ್ಷಿಯಂತೆ ಹಾರಿಕೊಂಡು ಸ್ವಾಮಿ ಇರುವ ಜಾಗಕ್ಕೆ ಬಂದು ನಿಂತುಕೊಂಡು ಏಳುಬಾಯ ಹುತ್ತ ತುಂಬಿ ಹರಿಯುವಂತೆ ಹಾಲು ಹಿಂಡಿತು. ಪ್ರತಿನಿತ್ಯ ಇದೇ ರೀತಿ ಹಾಲು ಹಿಂಡುತ್ತಿದ್ದ ಜಲುಗೊಂಬಿನ ಬಿಳಿಹಸ ಮನೆಯಲ್ಲಿ ಮಾತ್ರ ರಕ್ತಾನೆ ಹಿಂಡುತ್ತಿದ್ದುದರಿಂದ ಜುಂಜಪ್ಪ ತನ್ನ ಅಣ್ಣತಮ್ಮಂದಿರನ್ನೆಲ್ಲಾ ಕರೆದುಕೊಂಡು ಹಸು ಹಾಲನ್ನು ಹಿಂಡುತ್ತಿದ್ದ ಹುತ್ತದ ಭಾಗವನ್ನು ಪತ್ತೆ ಮಾಡುತ್ತಾನೆ.

ಮರುದಿನ ಜುಂಜಪ್ಪ ತನ್ನ ದನಕುರಿ ಜೊತೆಗೆ ಹನ್ನೆರಡುಮಂದಿ ಜೀತಗಾರರನ್ನು ಕರೆದುಕೊಂಡು, ಕೊಡಲಿ ಮಚ್ಚನ್ನು ಕೈಲಿಡಿದುಕೊಂಡು ಬಂದು ಹಾಲಿನಿಂದ ತುಂಬಿ ಹರಿಯುತ್ತಿದ್ದ ಹುತ್ತವನ್ನು ಕೊಚ್ಚಿ ಹಾಕುತ್ತಾರೆ. ಈ ಕೊಚ್ಚುವಿಕೆಯ ಏಟು ಹುತ್ತದ ಒಳಗಿದ್ದ ಮಾದೇಶ್ವರನ ಬಲಗಡೆ ಹಣೆಯ ಮೇಲೆ ಬೀಳುತ್ತದೆ. ಆಗ ಮಾದೇಶ್ವರ 'ಯಾರಪ್ಪ ಹೊಡೆದೋರು ಅಂತಾರೆ' ಈ ಧ್ವನಿಯನ್ನು ಪೀಡೆಯದೆಂದು ತಿಳಿದ ಜುಂಜಪ್ಪ ಹುತ್ತವನ್ನು ಬೇಯಿಸುವುದಕ್ಕೆ ಮುಂದಾಗುತ್ತಾನೆ. ಆಗ ಮಾದೇಶ್ವರನು ಆಕಾಸ್ಕೂ, ಭೂಮ್ಗೂ ಕೀಲ್ಕೊಟ್ಟಂಗೆ ನಿಜರೂಪು ತೋರಿದರು. ಕೂಡಲೇ ಜುಂಜಪ್ಪ ನೀನಾರು? ಎಂದು ಪ್ರಶ್ನಿಸಿದಾಗ ನಾನು ಮಾದಪ್ಪ ನನಕಂದ, ನನಗೆ ಒಂದು ಅಂಕಣದ ಗುಡಿ ಕಟ್ಟಿಸಿಕೊಡು ಅಂತ ಕೇಳಿ, ನಿನಗಿರೋ ಭಾಗ್ಯದ ಜೊತೆಗೆ ಇನ್ನಷ್ಟು ಭಾಗ್ಯವ ಕೊಡುತೇನೆ ಎಂದು ಹೇಳಿದನು. ನಿನ್ನಂತಹ ಕಾಡು ಪರದೇಶಿಯಿಂದ ನನಗೆ ಭಾಗ್ಯ ಬೇಕಿಲ್ಲ ಎಂದು ಹೇಳಿ ಗುಡಿ ಕಟ್ಟಿ ಕೊಡಲು ಒಪ್ಪದೆ ಆಲಂಬೋಡಿಗೆ ಕುರಿ ದನ ಕರು ಹಸುವಿನೊಂದಿಗೆ ಹೋದ ಜುಂಜಪ್ಪನಿಂದಲೇ ಮತ್ತೆ ಗುಡಿ ಕಟ್ಟಿಸಿಕೊಂಡ ಮಾದೇಶ್ವರ. ಹೀಗೆ ಆಲಂಬಾಡಿ ಜುಂಜಪ್ಪ ಗುಡಿ ಕಟ್ಟಿ ಮಹಾನ್ ಭಕ್ತನಾದನು.

ಇಲ್ಲಿ ಮಾದೇಶ್ವರ ಮತ್ತು ಆಲಂಬಾಡಿಯ ಜುಂಜಪ್ಪನೊಂದಿಗೆ ಬೆಳೆಯುವ ಕಾವ್ಯವನ್ನು ಗಮನಿಸಿದರೆ ಜುಂಜಪ್ಪನ ಕುರಿ, ದನ, ಹಸು, ಹಾಲಿನ ಸಂದರ್ಭವೆಲ್ಲಾ ಪಶುಪಾಲನೆಯ ನೆಲೆಯನ್ನು ಬಿಂಬಿಸುತ್ತದೆ.

ಹಾಗೆಯೇ ಕಾವ್ಯದ ಸಂಕಮ್ಮ ನೀಲಯ್ಯರ ಮದುವೆ ಕವಟ್ಲು ಸಾಲಿನಲ್ಲಿ ನೀಲಯ್ಯ ದನ,ಕುರಿ ಮೇಯಿಸೋ ವಿಚಾರವಾಗಿ ಅಣ್ಣಂದಿರ ಮಾತಿಗೆ ಪ್ರತಿ ಉತ್ತರ ಕೊಡದೆ ಊಟ ಮಾಡಿಕೊಂಡು, ರಾಗಿ ಹಿಟ್ಟು, ಹುರುಳಿಕಾಳು ಕಟ್ಟಿಕೊಂಡು ಬಾಯ್ತುಂಬ ವೀಳ್ಯ ಹಾಕ್ಕೊಂಡು,

ಒಂದು ಬೂದುಗಂಬಳಿ ತಗದವುನೆ
ಹೆಗಲ ಮೇಲೆ ಮಡಗವುನೆ
ಒಂದಣ್ಮಟ್ಟಿ ದೊಣ್ಣೆ ತಗುದವುನೆ
ಒಂದಿಡು ಮಟ್ಟದ್ ಜೋಡ ಮೆಟ್ಟವುನೆ
ಸರಳೆಮ್ಮೆ ದೊಡ್ಡಿಗೆ ಬಂದವ್ನೆ
ಎಮ್ಮೆಗಳ ಬಿಟ್ಟವುನೆ
ದನಗಳ ದೊಡ್ಡಿಗೆ ಬಂದವುನೆ
ಕುರಿಗಳನಾದ್ರು ಬುಟ್ಟವುನೆ
ಕಾಡು ಪೋಡುನೊಳಗೆ ಗುರುವೆ
ಅಟ್ಕೊಂಡುದಟ್ಕೊಂಡು ಬರ್‍ತಾನೆ॥

ಇಲ್ಲೆಲ್ಲಾ ಪಶುಪಾಲನಾ ಪರಂಪರೆಯ ಸ್ಪಷ್ಟ ಚಿತ್ರಣವನ್ನು ಕಾವ್ಯವು ನೀಡುತ್ತದೆ.

ಪತುರತಾ ಶಿರೋಮಣಿ ಸಂಕಮ್ಮ ಮತ್ತು ನೀಲೇಗೌಡನ ಸಂಸಾರದ ವಿಚಾರವನ್ನು ಬಿಂಬಿಸುವ 'ದಟ್ಟ ಧರಣಿ ಹುಟ್ಟು ಬಂಜೆ ಕವಟ್ಲು' ಸಾಲಿನಲ್ಲಿನ,

ಅತ್ತಲಾಗಿ ಗುರುದೇವ
ದೇವುಸ್ವಾಲುಗ ನೀಲೇಗೌಡ
ದನಕುರಿ ಆಡ್ನೆಲ್ಲಾ ಮೇಯ್ಸಾಕೆ
ಬೆಟ್ಟ ಗುಡ್ಡಾದ್ ಕಡೆಗೋದ ಗಳುಗೇಲಿ[೪೨]

ಎನ್ನುವ ಕಾವ್ಯದ ಕಥಾ ಸಂದರ್ಭವೂ ಕೂಡ, ಪಶುಪಾಲನೆಯು ಮಾದೇಶ್ವರನ ಕಾಲದಲ್ಲಿ ಪ್ರಮುಖ ವೃತ್ತಿಯಾಗಿತ್ತು ಎಂಬುದನ್ನು ತಿಳಿಸುತ್ತದೆ.

ಅದೇರೀತಿ ಮಾದೇಶ್ವರನ ಕಾವ್ಯವು ಬೇಟೆಗಾರಿಕೆಯನ್ನು ಒಂದು ಕಾಲದ ಜನ ತನ್ನ ಪರಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು, ಎಂಬುದನ್ನು ಸಾದರಪಡಿಸುತ್ತದೆ. ಊರಿನ ಜಾತ್ರೆ ಹಬ್ಬ ಹರಿದಿನಗಳಲ್ಲಿ ವರ್ಷಕ್ಕೆ ಒಂದಾವರ್ತಿ ಬೇಟೆಗೆ ಊರಿನ ಜನರೆಲ್ಲ ಒಟ್ಟಿಗೆ ಸೇರಿ  ಹೋಗಿಬರುತ್ತಿದ್ದರು.

ತಮ್ಮ ಜಾತಿ ಕಸುಬುದ ರೀತೀಲಿ
ವರ್ಷಕೊಂದವರತಿ ಬ್ಯಾಟೆನ್ನಾಡಕ್ಕೋಗ್ಬೇಕು॥

ಈ ಸಂಬಂಧ ಊರಿನವರೆಲ್ಲಾ ಒಂದು ಕಡೆ ಕಲೆತು ಪರಸ್ಪರ ಮಾತನಾಡಿಕೊಂಡು, ದಿನವನ್ನು ಗೊತ್ತುಮಾಡಿ ಸಾಮಾನು ಸರಂಜಾಮುಗಳೊಂದಿಗೆ ತಿಂಗಳು ಗಟ್ಟಲೆ ಹೋಗಿಬರುತ್ತಿದ್ದರು. ಬೇಟೆ ಕಾಯಕಕ್ಕೆ ಬಾರದವರನ್ನು ಊರಿನಿಂದಲೇ ಬಹಿಷ್ಕಾರವನ್ನು ಹಾಕುತ್ತಿದ್ದರು. ಕಾವ್ಯದಲ್ಲಿ ನೀಲೇಗೌಡ ಒಬ್ಬಂಟಿಗನಾಗಿದ್ದು ತನ್ನ

ಹೆಂಡತಿ ಸಂಕಮ್ಮನನ್ನು ಬಿಟ್ಟು ಎಲ್ಲರೊಂದಿಗೆ ಬೇಟೆಗೆ ಹೋಗಿ ಬಂದ ಕಥೆಯಂತೂ ರುದ್ರ ರಮಣೀಯವಾಗಿ ಮೂಡಿ ಬಂದಿದೆ. [೪೩]

ತಿನ್ನಲು ಅನ್ನವಿಲ್ಲದೆ ಉಡಲು ಬಟ್ಟೆಯಿಲ್ಲದೆ ಬಡತನದ ಬೇಗೆಯಲ್ಲಿ ತತ್ತರಿಸಿ ಹೋಗಿದ್ದ ಬೇವಿನ್ನಟ್ಟಿ ಕಾಳಮ್ಮ, ಮಾದೇಶ್ವರನ ಕೃಪಾಕಟಾಕ್ಷದಿಂದ ಬಡತನವಳಿದು ಸಿರಿವಂತೆಯಾಗುತ್ತಾಳೆ. ಈ ಶ್ರೀಮಂತಿಕೆಯ ಸೊಕ್ಕು, ಮಾದೇಶ್ವರನನ್ನು ಮರೆಸುವಷ್ಟರ ಮಟ್ಟಿಗೆ ಆಕೆಯಲ್ಲಿ ಬೆಳೆದು ಹೆಮ್ಮರವಾಯಿತು.

ಕಾಳಮ್ಮಂಗೆ ಏಳು ಸಲುಗೆ ಕುರಿಯಾದವಂತೆ
ಏಳು ಸಲುಗೆ ದನವಾದುವಂತೆ
ದನಕರಾ ಕಟ್ಟಾಕೋ ಗೂಟುಗಳೆಲ್ಲಾ ಚಿನ್ ಬೆರಳಿ ಗೂಟುಗಳಂತೆ
ಇಷ್ಟೊಂದ್ ಸಿರೀ ಸಂಪತ್ನಲ್ಲಿ ವಾಲಾಡ್ತಿರೋ ಕಾಳಮ್ಮ
--------------------
ಯಾವ ದೇವ್ರೂ ಬ್ಯಾಡ ಯಾವ ದೆಯ್ಯು ಬ್ಯಾಡ ಅಂತ
ಭಾಗ್ಯ ಕೊಟ್ಟಂತ ಮಾದೇವ ಅನ್ನೋದ್ನೆ ಮರೆತ್ಬುಟ್ಟವ್ಳೆ ಕಾಳಮ್ಮ॥

ಆಗ ಭಾಗ್ಯವನ್ನು ಕೊಟ್ಟ ಭಗವಂತನೇ ಬಾಗಿಲಿಗೆ ಬಂದರೂ ಕಣ್ಣೆತ್ತಿ ನೋಡದೆ, ಮಾತ್ರವಲ್ಲ ಬೇಡಿದರೂ ಕೈಯೆತ್ತಿ ಸ್ವತಹ ಮಾದೇಶ್ವರನಗೆ ನೀಡಲಾರದೆ ಹೋಗುತ್ತಾಳೆ. ಹೀಗೆ ಸೊಕ್ಕಿದವರನ್ನು ಎಚ್ಚರಿಸಬೇಕೆಂದು ಬಂದ ಮಾದೇಶ್ವರ ಕಾಳಮ್ಮನಿಂದ ಭಿಕ್ಷವನ್ನು ಪಡೆದುಕೊಂಡದ್ದು, ಕಾವ್ಯದಲ್ಲಿ ಸೊಗಸಾಗಿ ಮೂಡಿಬಂದಿದೆ.

ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶವೆಂದರೆ ಮಾದೇವನ ಕಾಲದಲ್ಲೂ ಕೊಟ್ಟಿಗೆಯಲ್ಲಿನ ದನಕರು ರಾಸುಗಳೊಂದಿಗೆ ಅವರ ಸಿರಿವಂತಿಕೆಯನ್ನು ಗುರುತಿಸಲಾಗುತ್ತಿತ್ತು. ಹಾಗೂ ದನಕರುಗಳ ಸಾಕುವಿಕೆಯೊಂದಿಗೆ ಕೃಷಿಯೂ ಆ ಕಾಲದ ಮುಖ್ಯ ಕಸುಬಾಗಿತ್ತು, ಎಂಬುದನ್ನು ತಿಳಿಯಬಹುದು.

ಕಾವ್ಯದಲ್ಲಿ ಬೇವುನ ಕಾಳಿ ದರಬಾರದ ಸಂದರ್ಭವನ್ನು ಬಣ್ಣಿಸುವಾಗ ಕಾಳಮ್ಮನ ಸೊಸೆಯಂದಿರಾದ ದೇವಾಜಮ್ಮ, ಜಾವಾಜಮ್ಮ, ನಿಂಗ್ರಾಜಮ್ಮ, ನೀಲಾಜಮ್ಮ, ಭೋರಾಜಮ್ಮ, ಮಲ್ಲೋಜಮ್ಮ, ಸುವರ್ಣಮ್ಮಂದಿರು ಪ್ರತಿನಿತ್ಯವೂ,

ಏಳಟ್ಟಿ ಎಮ್ಮೆ ಕರಿಯದು
ಏಳಟ್ಟಿ ದನ ಕರಿಯದು
ಹಾಲ್ಕರಿಯದು ಹೆಪ್ಪಾಕಿ
ಮೊಸ್ರು ದಡುಮಿ ಬೆಣ್ಣೆ ತೆಗಿಯೋ ಕೆಲ್ಸ ಮಾಡ್ತಿದ್ದಿರೋ॥

ಜೊತೆಗೆ ಕರುಗಳಿಗೆ ಹುಲ್ಹಾಕಿ ನೀರ್ಕುಡುಸೋದು, ದನೀನ ಮೈಯ್ತೊಳೆಯದು, ಹುಲ್ಲಾಕೋದು, ಕೆಲಸಗಳನ್ನು ನಿಂತ ನಿಲುವಿಲ್ಲದೆ ಮಾಡುತ್ತಿದ್ದರು, ಎಂಬುದನ್ನು ಕಾವ್ಯ ಹೇಳುತ್ತದೆ. ದನಕರು ಕುರಿ, ಆಡುಗಳನ್ನು ಕಾವಲಿಗೆ ಹೊಡಕ್ಕೊಂಡು ಹೋಗಿ ಮೇಯಿಸೋದು, ಹೊಲ ಉಳೋದು, ರಾಗಿ, ಉದ್ದು, ಹುಳ್ಳಿ, ಎಳ್ಳು, ಜೋಳ, ಬಿತ್ತೋದು, ಮುನ್ನೂರು ಮುನ್ನೂರು ಮೂಟೆಗಟ್ಲೆ ಎಲ್ಲವನ್ನು ಬೆಳೆಯೋದೆ, ಕಾಳಮ್ಮನ ಗಂಡ ಕೆಂಡೇಗೌಡನ ಕೆಲಸವಾಗಿರುತ್ತೆ. ಇಂತಹ ಪ್ರಸಂಗಗಳೆಲ್ಲವೂ ಪಶುಪಾಲನೆ ಮತ್ತು ಕೃಷಿ ಕಸುಬಿನ ನಡುವಿನ ಸಂಬಂಧವನ್ನು ಕಾವ್ಯ, ಹುಟ್ಟಿಕೊಂಡ ಕಾಲದ ಜನಜೀವನದೊಂದಿಗೆ ಬಿತ್ತರಿಸುತ್ತದೆ.

ಗ್ರಾಮ ಜೀವನದ ಕೌಟುಂಬಿಕ ಚಿತ್ರಣ, ಬಡತನದ ದಾರುಣ ಸ್ಥಿತಿಯನ್ನು ಸರಗೂರಿನ ಶರಣರಾದ ಮೂಗಪ್ಪ ಮತ್ತು ರಾಮವ್ವೆ ಎಂಬ ಮುಗ್ಧ ದಂಪತಿಗಳ ಭಕ್ತಿ ಪ್ರಧಾನತೆಯ ಜೀವನದೊಂದಿಗೆ ಕಾವ್ಯ ಅಂದಿನ ಜನಪದರ ಬದುಕನ್ನು ಕಟ್ಟಿಕೊಡುತ್ತದೆ.[೪೪] ಹೆಣ್ಣಿನ ಬಾಳೇ ಕಣ್ಣೀರು ಎನ್ನುವ ತೀರ್ಮಾನವನ್ನು ಸಂಕಮ್ಮನ ಕಥೆಯ ಮೂಲಕ ಹೇಳಿದರೆ, ದುಂಡಮ್ಮನ ಸಾಲಿನ ಕಥೆ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ಕಡೆಯಲ್ಲಿನ ಕಾಳಯ್ಯ ಬಿಲ್ಲಯ್ಯರ ಸಾಲು(ಭಾಗ), ನಾಗಮಲೆಯಲ್ಲಿ ನೆಲೆಗೊಂಡ ಸಾಲು, ಪಂಚಲಿಂಗ ಮಾದಪ್ಪನ ಸಾಲು, ದುರ್ಗದ ಮಲ್ಲಮ್ಮನ ಸಾಲು(ಈ ಸಾಲಿನಲ್ಲೇ ಮಾದೇಶ್ವರನ ಐಕ್ಯವನ್ನು ಹೇಳಲಾಗಿದೆ.)ಕತೆಗಳಲ್ಲಿಯೂ ಕೂಡ ದನಕರು, ಹಸು, ಕುರಿ, ಬೆಣ್ಣೆ, ತುಪ್ಪ, ಇವುಗಳೊಟ್ಟಿಗೆ ಕಾವ್ಯ ಬೆಳೆಯುವುದನ್ನು ನೋಡಬಹುದು.

ಬಹುಮುಖ್ಯವಾಗಿ ಮೈಬಣ್ಣ ಕಪ್ಪಾಗಿದ್ದ ಮಾದೇವ ಮೂಲ ದನಗಹಿಯಾಗಿದ್ದು, ಕೊಣವೇಗೌಡನ ಹೊಲಕ್ಕೆ ದನಗಳನ್ನು ಬಿಟ್ಟು, ಪುಟ್ಟಗೆ ಮೇಯಿಸುತ್ತಿದ್ದ ಎಂಬ ಕಾವ್ಯದಲ್ಲಿನ ಚಿತ್ರವು ಪಶುಪಾಲನೆಯನ್ನು ಹೊರತು ಪಡಿಸಿ; ಮಾದೇಶ್ವರನ ಕಾವ್ಯ ರೂಪುಗೊಂಡಿಲ್ಲವೆಂದೇ ಹೇಳಬಹುದು. ಕಾವ್ಯದುದ್ದಕ್ಕೂ ಕೃಷಿ, ಪಶುಪಾಲನೆ, ಹಾಗೂ ಬೇಟೆಯ ರೂಪಕಗಳು ಹಾಗೂ ಪ್ರತಿಮೆಗಳು, ತುಂಬಿಕೊಂಡು ಕಾವ್ಯ ಔನತ್ಯಕ್ಕೇರಿದೆ.

ಮಾನವನ ಬದುಕು ರೂಪುಗೊಂಡಿರುವುದೇ ಪಶುಪಾಲನೆಯ ವೃತ್ತಿಯೊಂದಿಗೆ. ಕನ್ನಡನಾಡಿನ ಜನಪದರ ಜೀವನವಂತೂ ಪಶುಪಾಲನೆಯನ್ನು ಬಿಟ್ಟು ಇಲ್ಲವೇ ಇಲ್ಲ. ಅನಾದಿ ಕಾಲದಿಂದಲೂ ನಮ್ಮವರು ನಿರ್ವಹಿಸಿಕೊಂಡು ಬಂದಿರುವ ಈ ವೃತ್ತಿ ಈಗಲೂ ಜನರ ಬದುಕಿನ ಭಾಗವಾಗಿ ಮುಂದುವರೆಯುತ್ತಿರುವುದು ವಿಶೇಷ. ಹಾಗಾಗಿ ಇದುವರೆಗಿನ ಎಲ್ಲಾ ಕಾಲಘಟ್ಟಗಳನ್ನು ತಟ್ಟಿರುವ ಈ ಪಶುಪಾಲನಾ ವೃತ್ತಿಯು ಮಹದೇಶ್ವರನ್ನು ಪ್ರಭಾವಿಸಿರುವುದನ್ನು ನಾವು ಗಮನಿಸಿದ್ದೇವೆ. ಹಾಗಾಗಿಯೇ

ಮಧ್ಯಕಾಲೀನ ಕರ್ನಾಟಕದಲ್ಲಿ ಜೀವಿಸಿದ್ದ ಕನಕದಾಸರ ಬದುಕು ಬರಹಗಳಲ್ಲಿಯೂ; ಮಹದೇಶ್ವರನ ಜೀವನದಲ್ಲಿ ನೆಡೆದಿರಬಹುದಾದಂತಹ ಅದೆಷ್ಟೋ ಪರಂಪರೆಯ ಸಂಗತಿಗಳು ತಾಳೆ ಹೊಂದುವುದನ್ನು ಈ ಮುಂದೆ ಚರ್ಚಿಸಲಾಗಿದೆ.

ಮಹದೇಶ್ವರನದು ಒಂದು ಅಲೆಮಾರಿ ಬದುಕು. ಕಾಲುದಾರಿಯಲ್ಲಿ ಸಂಚರಿಸುತ್ತಲೇ ಊರೂರು ತಿರುಗಿ ಸಿಕ್ಕಿದ ಜನರಲ್ಲಿ ಭಿಕ್ಷೆ ಬೇಡಿ ಸಮಾಜದಲ್ಲಿ ಅಪಾರ ಜನರ ಭಕ್ತಿ, ವಿಶ್ವಾಸ, ಪ್ರೀತಿಗಳನ್ನು ಗಳಿಸಿಕೊಳ್ಳುತ್ತಾ ಏಳು ಮಲೆಗೆ ಹೋಗಿ ನೆಲೆ ನಿಂತವನು. ಕನಕದಾಸರೂ ಕೂಡ ಕಾಲುದಾರಿ ಪಯಣಿಗರಾಗಿಯೇ ಸಂಚರಿಸಿದವರು, ಮಹದೇವನು ಸುತ್ತೂರು, ಕಂತೂರು, ಬದನಾಳು, ಏಳುಮಲೆಗಳಲ್ಲಿ ಬದುಕು ರೂಪಿಸಿಕೊಳ್ಳುತ್ತಾ ನಡೆದರೆ; ಕನಕದಾಸರು ಬಾಡ, ಕುಮ್ಮೂರು, ಬಂಕಾಪುರ, ವಿಜಯನಗರ, ಮೇಲುಕೋಟೆ, ಬೇಲೂರು, ತಿರುಪತಿ, ಉಡುಪಿಯಲ್ಲೆಲ್ಲಾ ಸಂಚರಿಸಿ ಕಡೆಗೆ ಕಾಗಿನೆಲೆಯಲ್ಲಿ ನೆಲಸಿ ಇಲ್ಲಿಯೇ ಐಕ್ಯರಾದವರು. ಪಶುಪಾಲಕರೂ ಹೀಗೆ ಅಲ್ಲವೇ? ನಿಂತಲ್ಲಿ ನಿಲ್ಲದೆ; ಕಾಡು ಮೇಡುಗಳನ್ನು ಅಲೆದು ತಮ್ಮ ದನ ಕರು ಆಡು ಕುರಿಗಳನ್ನು ಮೇಯಿಸಿಕೊಂಡು ಎಲ್ಲರು ಒಂದೇ ಎಂಬ ಭಾವನೆಯೊಂದಿಗೆ ಬದುಕ ನೂಕುವವರು. ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿನ ಕನಕದಾಸರ ನಿಲುವು; ಸಮಾಜವನ್ನು ತಿದ್ದುವುದು. ಜಾತಿ ಮತ ಕುಲ ಪಂಥಗಳಿಂದ ಜನರನ್ನು ಮುಕ್ತರನ್ನಾಗಿಸುವುದು. 'ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ' ಎಂಬುದಾಗಿದ್ದರೆ, ಮಹದೇಶ್ವರನೂ ಕೂಡ ಸಮಾನತೆಯ ಸಮಾಜವನ್ನು ಕಾಣುವುದಕ್ಕಾಗಿಯೇ ಶ್ರಮಿಸಿದವನು.

ಮಹದೇಶ್ವರ ಕಾವ್ಯದಲ್ಲಿ ಮಹದೇವನು 'ಸರಳೆಮ್ಮೆ ದೊಡ್ಡಿಗೆ ಬಂದವನೇ, ಎಮ್ಮೆಗಳನ್ನೆಲ್ಲಾ ಬಿಟ್ಟವನೇ, ದನಗಳ ದೊಡ್ಡಿಗೆ ಬಂದವನೇ ದನಗಳನೆಲ್ಲಾ ಬಿಟ್ಟವನೇ' ಎಂದು ಕಾವ್ಯ ಬೆಳೆದರೆ; 'ನಾವು ಕುರುಬರು ನಮ್ಮ ದೇವರು ಬೀರಯ್ಯ, ಕಾವ ನಮ್ಮಜ್ಜ ನರಕುರಿಯ ಹಿಂಡುಗಳ' ಎಂದು ದೇವರು ಭಕ್ತನ ನಡುವಿನ ಸಂಬಂಧವನ್ನು ಕೀರ್ತನೆಗಳಲ್ಲಿ ಕನಕದಾಸರು ಪಶುಪಾಲನೆಯ ಸಂಕೇತಗಳೊಂದಿಗೆ ಸಮೀಕರಿಸುತ್ತಾರೆ. ಹಾಗಾಗಿ ಹದಿನೈದು ಹದಿನಾರನೇ ಶತಮಾನದಲ್ಲಿ ಇಂತಹ ರಚನೆಗಳು ಹೆಚ್ಚಾಗಿ ಬರಲು ಈ ಕಾಲಘಟ್ಟದಲ್ಲಿ ಹೆಚ್ಚು ಜನಜನಿತವಾಗಿದ್ದ ಪಶುಪಾಲನಾ ವೃತ್ತಿಯ ಪ್ರಭಾವವೇ ಮುಖ್ಯ ಕಾರಣ ಎಂದು ಹೇಳಬಹುದು. ಇದರಿಂದಾಗಿ ಕನಕದಾಸರ ಮೇಲೆ ಪಶುಪಾಲನಾ ಬದುಕಿನ ಗಾಢ ಪ್ರಭಾವ ಬೀರಿತ್ತೆಂಬುದನ್ನು ಮನಗಾಣಬಹುದು.

## ಮೈಲಾರಲಿಂಗನ ಮಹಾಕಾವ್ಯ

'ಸಂಸ್ಕೃತಿ' ಎಂಬುದು ಸಮೂಹ ಸಮ್ಮತ ಜೀವನ ಪದ್ಧತಿಯಾಗಿದೆ. ಕನ್ನಡಿಗರ ಇಂಥ ಜೀವನ ಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ, ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತಾ ಬಂದ ಕನ್ನಡ ಸಮಾಜ ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿಯೇ ಬದುಕು ಮಾಡಿದೆ. ಹಿಂದೆ ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭವಾದರೆ, ಈಗ ಕನ್ನಡ-ಇಂಗ್ಲೀಷ್ ದ್ವಿಭಾಷಾ ಸಂದರ್ಭ. ಈ ಹಿನ್ನೆಲೆಯಲ್ಲಿಯೂ ಕನ್ನಡವು ತನ್ನ ಶಿಷ್ಟ ಸಂಸ್ಕೃತಿಯ ಮೂಲ ನೆಲೆಯಾದ ಜಾನಪದ ಬಹುಮುಖಿ ಪರಂಪರೆಯನ್ನು ತನ್ನೊಳಗೆ ಅಡಗಿಸಿಟ್ಟುಕೊಂಡಿದೆ. ಇಂತಹ ಜನಪದೀಯ ಕಾರ್ಯವನ್ನು ಇತ್ತೀಚೆಗೆ ವಿಶ್ವವಿದ್ಯಾನಲಯಗಳು ಸೇರಿದಂತೆ, ನಾಡಿನ ಅನೇಕ ವಿದ್ವಾಂಸರು ಕೂಡ ಶೋಧ ಮತ್ತು ಸಂಗ್ರಹ ಕಾರ್ಯದಲ್ಲಿ ತೊಡಗಿರುವುದರ ಫಲವಾಗಿ 'ಮೈಲಾರಲಿಂಗನ ಮಹಾಕಾವ್ಯ' ನಮಗೆ ದೊರೆಯುವಂತಾಗಿದೆ.

### ಹಿನ್ನೆಲೆ :

ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ದಟ್ಟವಾಗಿ ಪ್ರಚಲಿತವಾಗಿರುವ ಮೈಲಾರಲಿಂಗನ ಸಂಪ್ರದಾಯ ತುಂಬ ವಿಶಿಷ್ಟವಾದುದು. ಜಾತಿ, ಮತ ಮತ್ತು ವರ್ಗಗಳ ಎಲ್ಲೆ ಮೀರಿ ಸಾಂಸ್ಕೃತಿಕ ಮತ್ತು ದಾರ್ಶನಿಕ ಐಕ್ಯತೆಗಳನ್ನು ಒಂದೇ ಎಂದು ಪರಿಭಾವಿಸುವ ಕಾವ್ಯ ಇದಾಗಿದೆ. ಆದರೆ ನಮ್ಮ ಕಾಲದ ಏಕೀಕೃತ ಭಾರತೀಯತತ್ವದ ಸೈದ್ಧಾಂತಿಕ ಒತ್ತಡದಿಂದಾಗಿ, ಸುಪ್ತವಾಗಿರುವ ಈ ತರಹದ ಅನ್ಯದಾರ್ಶನಿಕ ಪರಂಪರೆಗಳು ಕಳೆದುಹೋಗುತ್ತಿವೆ. ಹಾಗಾಗಿ ಇಲ್ಲಿನ ನೆಲ, ಸಂಸ್ಕೃತಿಗಳೊಂದಿಗೆ ಸುಪ್ತವಾಗಿ ಸೇರಿಕೊಂಡಿರುವ ಸಂಕೀರ್ಣ ಮತ್ತು ಸಮೃದ್ಧ ಸಂಪ್ರದಾಯಗಳನ್ನು ಪ್ರತ್ಯೇಕವಾದ ಸಾಂಸ್ಕೃತಿಕ ಚೌಕಟ್ಟಿನೊಳಗೆ ಇಂತಹ ಕಾವ್ಯಗಳನ್ನು ಇಲ್ಲಿ ಅಧ್ಯಯನಕ್ಕಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ.

ಇಂತಹ ಜನಪದೀಯ ಮಹಕಾವ್ಯವಾದ ಮೈಲಾರಲಿಂಗನ ಕಾವ್ಯವನ್ನು ಅಧ್ಯಯನ ಮಾಡಲು ಹೊರಟವರಿಗೆ, ಈ ಕತೆಯ ಹಾಡುಗಾರರಾಗಿ, ದೇವಲಾಪುರದ ಒಗ್ಗರು (ಗೊರವ) ಹನುಮಂತಪ್ಪ, ಒಗ್ಗರು ಪಂಪಣ್ಣ, ಒಗ್ಗರು ಮಲ್ಲಯ್ಯ, ಒಗ್ಗರು ಮಾರಪ್ಪ, ಒಗ್ಗರು ಕಾವೇರು ಹನುಮಯ್ಯ ಇವರೆಲ್ಲಾ ಕಾವ್ಯದ ಸುಶ್ರಾವ್ಯ ಹಾಡುಗಾರರಾಗಿ ಕಂಡು ಬರುತ್ತಾರೆ.[೪೫]

ದುಷ್ಟಸಂಹಾರ, ಶಿಷ್ಟರಕ್ಷಣೆ, ಮದುವೆ, ಪವಾಡಗಳ ಮೂಲಕ ಅಪಾರ ಭಕ್ತ ಸಮೂಹವನ್ನು ಹೊಂದಿರುವ ಮೈಲಾರನನ್ನು ಕುರುಬರೇ ಹೆಚ್ಚಿನ ಸಂಖ್ಯೆಯಲ್ಲಿ ಪೂಜಿಸುತ್ತಾರೆ. ಹೆಚ್ಚಿನ ಭಕ್ತರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಮೈಲಾರದೈವದ

ಮಹಾಕಾವ್ಯ ತುಂಬಾ ಕುತೂಹಲಕಾರಿಯಾದುದು. ಸುದೀರ್ಘವಾದ ಕಥಾ ಸನ್ನಿವೇಶವನ್ನು ಹೊಂದಿರುವ ಈ ಮಹಾಕಾವ್ಯ, ಕನ್ನಡದ ಅತ್ಯುತ್ತಮ ಜನಪದ ಮಹಾಕಾವ್ಯಗಳಲ್ಲೊಂದು.

**ಕಥಾ ವೃತ್ತಾಂತ :**

ದಕ್ಷಿಣ ಒಳನಾಡಿನಲ್ಲಿ 'ಶ್ರೀಗಿರಿ' ಎಂಬ ಪರ್ವತವಿತ್ತು. ಅಲ್ಲಿ ಅತ್ರಿಕಮುನಿ, ಕಪಿಲಮುನಿ, ಪುರುಷ ಮುನಿ, ಜೋಕಮುನಿ ಎಂಬ ಋಷಿಗಳು ಯಜ್ಞ ಮಾಡುತ್ತಿದ್ದರು. ಆಗ ಕೊಂಕಣ ದೇಶದ ಮಣಿಕಾಸುರ, ಮಲ್ಲಾಸುರರೆಂಬ ರಾಕ್ಷಸರು ಯಜ್ಞ ಕೆಡಿಸಲು ಬರುತ್ತಾರೆ. ಋಷಿಗಳು ರಾಕ್ಷಸರು ನೀಡುವ ಕಷ್ಟವನ್ನು ತಡೆಯಲಾರದೆ ಶಿವನನ್ನು ನೆನೆಯಲು, ಶಿವನು ಪ್ರತ್ಯಕ್ಷನಾಗಿ ರಾಕ್ಷಸರನ್ನು ಧ್ವಂಸಮಾಡಿ, ಭೂಲೋಕದಲ್ಲಿಯೇ ನೆಲೆನಿಲ್ಲುತ್ತಾನೆ. ಮುಂದೆ ಈತನೇ 'ಮೈಲಾರಲಿಂಗ' ಎಂದು ಭಕ್ತರಿಂದ ಕರೆಯಿಸಿಕೊಳ್ಳುತ್ತಾನೆ.

ಈ ಮೈಲಾರಲಿಂಗನು ಮುಂದೆ ಮಾಳಮ್ಮ ಮತ್ತು ಕೋಮಾಲಿಯರನ್ನು ಪಡೆಯುವ ಪ್ರಸಂಗಗಳು ತುಂಬಾ ರಸವತ್ತಾಗಿ ಕಾವ್ಯದಲ್ಲಿ ಮೂಡಿ ಬರುತ್ತವೆ. ಬನ್ನಿಯ ಹಬ್ಬದಲ್ಲಿ ಬನ್ನಿ ಮುಡಿಯುವುದು. ಹಾಲಿನ ಭಾಷೆ ತೆಗೆದುಕೊಳ್ಳುವ ಸಂದರ್ಭಗಳು ಗಗನ ಮುಟ್ಟುವಂತೆ ಮೊಳಗುತ್ತವೆ. ಮಾಳಮ್ಮ-ಮಲ್ಲಯ್ಯನ ಮದುವೆ; ಈ ಮದುವೆಗೆ ಸೂರ್ಯಚಂದ್ರರೇ ಭೂಮಿಗೆ ಬರುವುದು; ಬ್ರಹ್ಮನೇ ಬಂದು ಬ್ರಹ್ಮ ಗಂಟು ಹಾಕುವುದು; ಈ ಎಲ್ಲಾ ಮದುವೆ ಕಾರ್ಯಗಳು ಭಕ್ತರೆನಿಸಿದ ಎಲ್ಲಾ ಜಾತಿ ಜನಾಂಗದವರ ಸಮ್ಮುಖದಲ್ಲಿಯೇ ನಡೆಯುತ್ತವೆ. ಇಲ್ಲಿ ಪಾರ್ವತಿ ದೇವಿಯೇ ಮಾಳಮ್ಮಳಾಗಿ ನೆಲೆ ನಿಂತಿದ್ದಾಳೆ. ಮಾಳಮ್ಮನನ್ನು (ಪಾರ್ವತಿ) ತೊಡೆಯ ಮೇಲೂ ಗಂಗೆಯನ್ನು ತಲೆಯಲ್ಲಿ ಧರಿಸಿ, ಮುನ್ನೂರ ಮುವತ್ತು ಕೋಟಿ ದೇವರುಗಳನ್ನು ಪೊರೆದು, ಆರುನೂರ ಅರವತ್ತುಕೋಟಿ ರಾಕ್ಷಸರನ್ನು ಧ್ವಂಸ ಮಾಡಿ, 'ಏಳುಕೋಟಿ ಭಕ್ತರ ಒಡೆಯ' ಎಂಬ ಬಿರುದನ್ನು ಮೈಲಾರ ಪಡೆಯುತ್ತಾನೆ.

ಪವಾಡ ಪುರುಷನಾದ ಮೈಲಾರಲಿಂಗ; ಗೋಮುನಿ ಕರಣದಲ್ಲಿ ಧರ್ಮಕರ್ತನಾಗಿ ಜನಿಸಿ ಭಂಡಾರಕ್ಕೆ ಕಲಿರಾಯ ಆಗುತ್ತಾನೆ. ಕೋರಿ ಅಂಗಿ ತೊಟ್ಟು ಭಕ್ತರ ಮನೆ ಬಾಗಿಲಲ್ಲಿ ತಿರುಗಾಡುತ್ತಾನೆ, ಜಪಮಾಡುವವರ ಕೈಯಲ್ಲಿನ ಲಿಂಗಮಾಯ ಮಾಡುವುದು, ಭಂಡಾರ ಚೀಲವನ್ನು ಕೈಯಲ್ಲಿ ಹಿಡಿದುಕೊಂಡು ಅಂಡೆ ಕುರುವತ್ತಿ ತಂದು ಏಳೇಳು ಲೋಕವನ್ನು ಸಲಹುವುದು, ರಾಣಿ ಶೀಲವಂತೆಗೆ ಮಕ್ಕಳ ವರ ಕೊಡುವುದು, ಮೈಲಾರಲಿಂಗನ ಮುಖ್ಯ ಪವಾಡಗಳಾಗಿವೆ.

ಮುಂದೆ ಕುರುಬರ ಯುವತಿಗೆ ಮರುಳಾದ ಮೈಲಾರಲಿಂಗ, ಮಾಳಮ್ಮನಿಗೆ ಸುಳ್ಳು ಹೇಳಿ ಕೋಮಾಲೆಯನ್ನು ತರಲು ಚಂದ್ರಗಿರಿ ಪಟ್ಟಣಕ್ಕೆ ಹೋಗುತ್ತಾನೆ.

ಅಲ್ಲಿ ಕೋಮಾಲೆಯನ್ನು ನೀರು ತರುವ ಬಾವಿಯ ಹತ್ತಿರ ಕಾಡಿಸುವುದು, ಆಕೆಯ ಏಳು ಜನ ಅಣ್ಣಂದಿರನ್ನು ಪರಿಚಯ ಮಾಡಿಕೊಂಡು ಅವರೊಟ್ಟಿಗೆ ಒಬ್ಬ ಮುದುಕನಂತೆ ಕುರಿಕಾಯುವುದು, ಕಂಬಳಿ ನೇಯ್ದು ಮಾರಾಟ ಮಾಡುವುದನ್ನು ಕೋಮಾಲೆಗಾಗಿಯೇ ಮಾಡುತ್ತಾನೆ. ತನ್ನ ಪವಾಡಗಳಿಂದಾಗಿ, ಕೋಮಾಲೆ ಮತ್ತು ಅಣ್ಣಂದಿರನ್ನು ಮೆಚ್ಚಿಸಿ ಮದುವೆಯಾಗಿ ತನ್ನ ಗುಡ್ಡಕ್ಕೆ ಕರೆತರುತ್ತಾನೆ. ಅಲ್ಲಿಂದ ಮಲ್ಲಿ, ಕೋಮಾಲೆಯರ ನಡುವೆ ಜಗಳವಾಗದಂತೆ ನೋಡಿಕೊಳ್ಳುತ್ತಾ, ಜನರ ಕಷ್ಟ, ಸುಖ, ನೋವು ನಲಿವುಗಳಿಗೆ ಸ್ಪಂದಿಸುತ್ತಾ, ಶರಣ ಮೈಲಾರಲಿಂಗನೆಂದು ನಾಡಿನಾದ್ಯಂತ ಸಂಚಾರ ಮಾಡುತ್ತಲೇ ತುಂಗಭದ್ರಾ ನೆಲದ ಮೈಲಾರ ಗ್ರಾಮದಲ್ಲಿ ನೆಲೆ ನಿಲ್ಲುತ್ತಾನೆ, ಯೋಗಿ ಎನಿಸಿಕೊಳ್ಳುತ್ತಾನೆ.[೪೬]

**ಮೈಲಾರಲಿಂಗನ ಕಾವ್ಯದ ಸ್ವರೂಪ:**

ಮೈಲಾರಲಿಂಗನ ಕಾವ್ಯವನ್ನು ಪ್ರಸ್ತುತ ಹೆಚ್ಚಾಗಿ ಗೊರವರು ಹಾಡುತ್ತಾರೆ. ಗೊರವರ ಶಬ್ದಕ್ಕೆ ಅರ್ಥದ ಮೂಲ 'ಗುರು' ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕಿಟೆಲ್‌ರವರ ನಿಘಂಟಿನಲ್ಲಿ 'ಗೊರವ' ಎಂಬುದಕ್ಕೆ 'ಶೈವ ಭಿಕ್ಷುಕರು' ಎಂದು ಹೇಳಲಾಗಿದೆ. ಗ್ವಾರಪ್ಪ, ವಗ್ಗಯ್ಯ, ಗೊರವ, ಗೊಗ್ಗಯ್ಯ, ಎಂದು ವಿಭಿನ್ನ ಹೆಸರುಗಳಿಂದ ಕರೆಸಿಕೊಳ್ಳುವ ಇವರು ಮೈಲಾರಲಿಂಗನ ದೀಕ್ಷೆ ಪಡೆದಿರುತ್ತಾರೆ. ಕಾವ್ಯವನ್ನು ಗೊರವರು, ಮೈಲಾರಲಿಂಗನ ಜಾತ್ರೆ, ದೋಣಿಸೇವೆ ಮುಂತಾದ ಆಚರಣೆಗಳ ಸಂದರ್ಭಗಳಲ್ಲಿ ಹಾಡುತ್ತಾರೆ. ಈ ಮೈಲಾರಲಿಂಗನ ಕಾವ್ಯ ಈಗ ಕೇವಲ ಸಿದ್ಧವಸ್ತುವಾಗಿ ನಮಗೆ ಸಿಗುತ್ತಿಲ್ಲ, ಯಥಾವತ್ತಾಗಿ ಪುನರಾವರ್ತನೆಯನ್ನು ಮಾಡುತ್ತಿಲ್ಲ. ಕಾವ್ಯ ಹಾಡುವ ಗೊರವರು ಕಾವ್ಯದಲ್ಲಿ ತಮ್ಮ ಸೃಜನ ಶೀಲತೆಯನ್ನು ಸಹ ಸೃಷ್ಟಿಸಿಕೊಂಡಿದ್ದಾರೆ. [೪೭]

ಮೈಲಾರಲಿಂಗನ ಕಾವ್ಯವು ಶೈವ ಮಾದರಿಯ ಕಥನ ಕ್ರಿಯೆಯಾಗಿದ್ದು ಕುರುಬರ ಜೀವನವನ್ನು ಮುಖ್ಯವಾಗಿ ಬಿಂಬಿಸುತ್ತದೆ. ಕುರುಬರ ಬದುಕಿನ ಮುಖ್ಯ ಅವಿಭಾಜ್ಯ ಅಂಶಗಳಾದ ಕಾಡು, ಕಡಲು, ನಿಸರ್ಗ, ಪ್ರಾಣಿವರ್ಗ ಈ ಎಲ್ಲವನ್ನು ಮೈಲಾರನ ಬದುಕಿನೊಂದಿಗೆ ತಳುಕುಹಾಕಲಾಗಿದೆ. ದಾರ್ಶನಿಕ ದಾಟಿಯೊಂದಿಗೆ ಮೈಲಾರ ಪರಂಪರೆಯ ಸಾಂಸ್ಕೃತಿಕ ಸತ್ಯವನ್ನು ಕಾವ್ಯ ನಮಗೆ ಕಟ್ಟಿಕೊಡುತ್ತದೆ.

ಸಾಂಸ್ಕೃತಿಕವಾಗಿರುವ ಮೈಲಾರಲಿಂಗನ ಸಂಪ್ರದಾಯ; ಕಾವ್ಯದಲ್ಲಿ ಪ್ರಕಟಗೊಳ್ಳುವಾಗ ಸಾಂಕೇತಿಕವೂ, ಕುತೂಹಲಕಾರಿಯೂ ಆಗಿದೆ. ಭಾರತೀಯ ನೆಲದ ಸಾವಿರಾರು ವರ್ಷಗಳ ಚರಿತ್ರೆಯಲ್ಲಿ, ಹಲವು ಜನಾಂಗ, ಸಂಸ್ಕೃತಿ, ಧರ್ಮ, ಪಂಥಗಳ ನಡುವೆ ಹೊಸ ಮಾರ್ಗವೊಂದು ಹುಟ್ಟಿಕೊಂಡಂತೆ ಮೈಲಾರಲಿಂಗನ ಸಂಪ್ರದಾಯ ಬೆಳೆದು ಬಂದಿದೆ. ಈ ಕಾರಣಕ್ಕಾಗಿ ಇಲ್ಲಿ ಹಲವು ಸಂಘರ್ಷಗಳು

ಉಂಟಾಗಿವೆ. ಆದರೂ ಸಂಘರ್ಷಗಳ ಹಿನ್ನೆಲೆಯಲ್ಲಿ ಮಧ್ಯಕಾಲೀನ ಕರ್ನಾಟಕದ ಸಂದರ್ಭ ಹಾಗೂ ಕಾವ್ಯದ ಹಿನ್ನೆಲೆಯಲ್ಲಿ, ಮೈಲಾರಲಿಂಗನ ಪಂಥವನ್ನು ಇಂದು ಹೆಚ್ಚು ಆಸಕ್ತಿಯಿಂದ ನೋಡಬೇಕಾದ ಸಂದರ್ಭ ನಮ್ಮ ಮುಂದೆ ಇದೆ.

**ಮೈಲಾರಲಿಂಗನ ಕಾವ್ಯದಲ್ಲಿರುವ ಪಶುಪಾಲನೆಯ ವಿವರಗಳು:**

ಕರ್ನಾಟಕದ ಪಶುಸಂಗೋಪನಾ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಪ್ರಮುಖ ಜನವರ್ಗಗಳಲ್ಲಿ ಕುರುಬರೂ ಕೂಡ ಒಬ್ಬರು. ಈಗಲೂ ಊರ ಕುರುಬರು ಪಶುಸಂಗೋಪನಾ ವೃತ್ತಿಯನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದು ಮತ್ತೆ ಕೆಲವರು ಕೃಷಿಯಲ್ಲಿ ತಮ್ಮ ಬದುಕು ರೂಪಿಸಿಕೊಂಡಿದ್ದಾರೆ.[೪೮]

ಕಾಡು ಮತ್ತು ನಾಡಿನ ನಡುವೆ ಸಂಬಂಧವನ್ನು ಕಲ್ಪಿಸಿಕೊಂಡಂತಹ ಈ ಕುರುಬ ಜನಾಂಗದ ಹರಿಕಾರನೆಂದೇ ನಂಬಲಾಗಿರುವ ಮೈಲಾರ ತಮ್ಮನ್ನು ನಂಬಿದ್ದ ಜನಸಮುದಾಯಗಳನ್ನು ರಕ್ಷಿಸತೊಡಗಿದ ಕಥನವೇ ಮೈಲಾರಲಿಂಗನ ಕಾವ್ಯ.

ಮೈಲಾರನಿಗೆ ಮೈಲಾರ, ಮೈಲಾರಲಿಂಗ, ಮಲ್ಹಾರಿ, ಮಾರ್ತಾಂಡ, ಮಲ್ಲಯ್ಯ, ಗಿರಿಮಲ್ಲ, ಗುಡ್ಡದ ಮಲ್ಲಯ್ಯ, ಗುಡ್ಡದ ಅಪ್ಪ, ಮಾಲತೇಶ, ಭೈರವ, ಮಲ್ಲೇಶ್ವರ, ಮಲ್ಲಿಕಾರ್ಜುನ, ಮಲ್ಲುಖಾನ, ಮಲ್ಲಣ್ಣ, ರಾವುತರಾಯ, ಖಂಡೋಬ, ನೀಲಣ್ಣ, ಜುಂಜಪ್ಪ, ಮಾದಯ್ಯ, ಮಲ್ಲಿನಾಥ, ಮಲುದೇವ, ಅಜಮತಖಾನ, ಕರಿಯಾಲ, ಹುಲ್ಲಪ್ಪ, ಚಂದ್ರಪ್ಪ ಮುಂತಾದ ಹೆಸರುಗಳಿವೆ. ಮೈಲಾರನ ಬಗ್ಗೆ ಶಂಬಾಜೋಶಿ, ಎಂ.ಎಂ.ಕಲಬುರ್ಗಿ, ಪಿ.ಬಿ.ದೇಸಾಯಿ, ಪಿ.ವಿ.ನಾರಾಯಣ, ಬಿ.ಎಸ್. ಕುಲಕರ್ಣಿ, ಎಂ.ಚಿದಾನಂದಮೂರ್ತಿ, ಕೆ.ವಿ.ರಮೇಶ, ಸೂರ್ಯನಾಥ ಕಾಮತ, ಸೀತಾರಾಮ ಜಹಗೀರದಾರ, ಶ್ರೀನಿವಾಸ ರಿತ್ತಿ, ಜಿ.ಶಂ. ಪರಮಶಿವಯ್ಯ, ಎಂ.ಎನ್. ವೆಂಕಟೇಶ, ಡಾ. ಎಂ.ಬಿ.ನೆಗಿನಾಳ ಮುಂತಾದವರುಗಳು ಕನ್ನಡದಲ್ಲಿಯೂ; ರಾ.ಚಿಂ.ಢೇರೆ, ನಾ.ಶ್ರೀ.ರಾಜಪುರೋಹಿತ, ಗಣೇಶಖರೆ, ಮುಂತಾದವರು ಮರಾಠಿಯಲ್ಲಿಯೂ, ಸಂಶೋಧನೆಗಳನ್ನು ಕೈಗೊಂಡಿದ್ದಾರೆ.

ಮೈಲಾರ ಎನ್ನುವುದು 'ಮಲಹರ'ದಿಂದ ಬಂದಿರುವುದಾಗಿ ಕೆಲವರ ಅಭಿಪ್ರಾಯ.[೪೯] ಮಲ=ಹೊಲಸು, ಪಾಪ, ಹರ=ನಿವಾರಣೆ, ಪರಿಹಾರ ಎಂದರ್ಥ. ಮಲಹರ>ಮಲ್ಹಾರ>ಮೈಲಾರ ಆಗಿದೆ.[೫೦] ಮಲ್ಲಾಸುರ, ಮಣಿಕಾಸುರ ಎಂಬ ರಾಕ್ಷಸರು ಜನಕ್ಕೆ ಕಂಟಕಪ್ರಾಯರಾಗಿದ್ದು ಅವರನ್ನು ಸಂಹರಿಸಿ ಸಾಮಾನ್ಯ ಜನರು ಮತ್ತು ಋಷಿ ಮುನಿಗಳ ಕಂಟಕವನ್ನು ನಿವಾರಿಸಿದ್ದರಿಂದ 'ಮಲಹರ' ಎಂಬ ಹೆಸರು ಪ್ರಾಪ್ತವಾಯಿತು. ಅದು ಮುಂದೆ ಮಲ್ಹಾರ, ಮೈಲಾರ ಎಂಬ ರೂಪ ಪಡೆಯಿತು. ('ಆ'ಕಾರ 'ಐ' ಕಾರವಾಗಿದೆ.)

ಎಂ. ಚಿದಾನಂದಮೂರ್ತಿ, ಪಿ.ಬಿ.ದೇಸಾಯಿ, ಶಂ.ಬಾ.ಜೋಶಿ, ಎಂ.ಎಂ. ಕಲುಬುರ್ಗಿ, ಅವರು ಮಲೆಯ+ಅರಸ=ಮಲೆಯರಸ, ಮೇಲರಸ, ಮೈಲಾರ (ಬೆಟ್ಟದದೈವ) ಎಂಬ ರೂಪ ಬಂದಿರಬಹುದೆಂದು ಒಪ್ಪುತ್ತಾರೆ.[೫೧] ಶಂಬಾ ಅವರು, ಮೈಲಾರನ ಉಲ್ಲೇಖಗಳು ಕದಂಬರ ಕಾಲದಲ್ಲಿಯೇ ಸಿಗುತ್ತವೆ ಎಂದು ಹೇಳಿದ್ದಾರೆ.

ಶಿವ, ಭೈರವ ಮುಂತಾದ ಹೆಸರುಗಳಿಂದ ಕರೆಸಿಕೊಂಡಿರುವ ಮೈಲಾರನ ರೂಪ, ಉಡುಗೆ, ತೊಡುಗೆ, ಆಯುಧ, ಕುದುರೆ ವಾಹನ, ನಂದಿ ಮತ್ತು ನಾಯಿಗಳನ್ನು ಗಮನಿಸಿದಾಗ ಇವನೊಬ್ಬ ಪಶುಪಾಲಕ (ಕುರುಬ, ದನಗಾರ) ಕುಲದ ವೀರನಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗೆಯೇ ಇಂದಿನ ಕುರಿಗಾರರು ಸಹ ತಮ್ಮ ಕುರಿಗಳ ಹಿಂಡಿನೊಂದಿಗೆ, ನಾಯಿಗಳು, ಕುರಿ ಹಿಂಡುಗಳ ಹಿಂದೆ ಕುರಿಗಾರರ ಹೆಣ್ಣುಮಕ್ಕಳು, ಕುದುರೆಗಳ ಮೇಲೆ ತಮ್ಮ ಸಂಸಾರಕ್ಕೆ ಬೇಕಾಗುವ ಸಾಮಾನು ಸರಂಜಾಮುಗಳನ್ನು ಹೇರಿಕೊಂಡು ಕುಟುಂಬ ಸಮೇತರಾಗಿ ಸಂಚರಿಸುವ ದೃಶ್ಯವನ್ನು ಈಗಲೂ ಕಾಣುತ್ತೇವೆ.

ಕರ್ನಾಟಕದಲ್ಲಿ ಮೈಲಾರನಿಗೆ ಕುರುಬ, ಕಬ್ಬಲಿಗ, ಬಣಜಿಗ, ಬಲಿಜ, ಬ್ರಾಹ್ಮಣ, ಗೊಲ್ಲ, ಶೆಟ್ಟಿ, ಹಾಗೂ ಶೈವ ಸಮುದಾಯದ ಪತ್ನಿ–ಉಪಪತ್ನಿಯರಿರುವುದನ್ನು ಅನೇಕ ಕಥೆ ಉಪಕಥೆಗಳಿಂದ ತಿಳಿಯಬಹುದು. ಹಾಗೆಯೇ ಮಹಾರಾಷ್ಟ್ರದಲ್ಲಿ ಈ ಮೈಲಾರನನ್ನು ಖಂಡೋಬ, ಕುರುಬರ ದೈವ ಎಂದು ಕರೆಯುವುದರಲ್ಲಿ ಸಂದೇಹವೇ ಇಲ್ಲ. 'ಭಾಣಾಯಿ' ಈತನ ಹೆಂಡತಿ. ಖಂಡೋಬ ಎಂದರೆ ಮೈಲಾರ. ಈತ ಕುರುಬರ ದೈವ ಎಂದು ಸಂಶೋಧಕರಾದ ರಾ.ಚಿಂ.ಢೇರೆ ಅವರು ಅಭಿಪ್ರಾಯ ಪಡುತ್ತಾರೆ. ಜನಪದ ಕಥೆಗಳಲ್ಲಿ ಮೈಲಾರ; ಮಲ್ಲನಗೌಡನಾಗಿ ಸಂಬೋಧಿಸಲ್ಪಟ್ಟದ್ದಾನೆ. ಇಲ್ಲಿನ ಜನಪದರ ಮಲ್ಲನಗೌಡನೇ ಕುರುಬ ಕುಲದವನಾಗಿದ್ದಾನೆ.[೫೨]

ಕಾವ್ಯದಲ್ಲಿ ಮೈಲಾರಲಿಂಗನು ಕರಿ ಕಂಬಳಿ, ಕರಿ ಟೊಪ್ಪಿಗೆ ಧರಿಸಿ, ಕೈಯಲ್ಲಿ ಢಮರುಗ ಹಿಡಿದು, ಭಂಡಾರ ಹಚ್ಚಿರುತ್ತಾನೆ. ಜಂಬುಲಿಂಗೇಶ್ವರ, ಕಪ್ಪಲ ಮುನೀಶ್ವರ, ಅಡ್ಡಗುಡ್ಡದ ಮಲ್ಲ, ಮಹೋಗುಡ್ಡರ ಮಲ್ಲ ಎಂದು ನೂರೆಂಟು ಹೆಸರುಗಳಿಂದ ಮೈಲಾರಲಿಂಗನ್ನು ಕರೆಯಲಾಗುತ್ತದೆ. ಹಾಲಿನ ಬಟ್ಟೆಯ ಮೇಲೆ ಆಡುತ್ತಾ, ತುಪ್ಪದ ಬಟ್ಟೆಯ ಮೇಲೆ ಕಣಿಯುತ್ತಾ, ಮುಸುಕಿನ ಬಟ್ಟೆಯ ಮೇಲೆ ಮೆರೆಯುತ್ತಾ ಮೈಲಾರಲಿಂಗ ಬರುತ್ತಾನೆ. ಆಗ ಭಕ್ತರೆಲ್ಲಾ ಮಡಿಯನುಟ್ಟು ಒಟ್ಟಾಗಿ,

ಮುತ್ತಿನಾರುತಿ ಎತ್ತುವೆವು
ಮಲ್ಲಯ್ಯ ಸ್ವಾಮಿಗೆ
ಮುತ್ತಿನಾರುತಿ ಎತ್ತುವೇವು
ಮಾಳಪ್ಪ ಸ್ವಾಮಿಗೆ

ಮಾರನನ್ನು ಜಯಿಸಿದಂತ
ಶಾಂತ ದೇವರಿಗೆ
ಮಾರನನ್ನು ಜಯಿಸಿದಂತ
ಶಾಂತ ದೇವರಿಗೆ ॥ಮು॥

ಎಂದು, ಚಂದ್ರಾಧರನಿಗೆ, ಸಿಂಧೂ ಗುಣ ದೇವನಿಗೆ, ಧೂಮಕೇಶ, ಕಾಮನಾಶ, ಧೀಮ ಗಿರಿಜಗೆ, ಉಮಾದೇವಗೆ, ಧರೆಯ ಜನರೆಲ್ಲಾ ಜಯಘೋಷ ಮಾಡುತ್ತಾರೆ. ಇಲ್ಲಿ ಮೈಲಾರ ಲಿಂಗನ ಅತಿಮಾನುಷ ಶಕ್ತಿಯನ್ನು ಜಗತ್ತಿಗೆ ಸಾರುವ ಪ್ರಯತ್ನಗಳಾಗಿವೆ.

ಕುರುಬರ ಯುವತಿ ಕೋಮಾಲೆಗೆ ಮರುಳಾದ ಮೈಲಾರ, ಅವರ ಮನೆಯಲ್ಲಿ ಆಕೆಯ ಏಳು ಜನ ಅಣ್ಣಂದಿರೊಂದಿಗೆ ಕುರಿಕಾಯುತ್ತಾನೆ. ಇಲ್ಲಿನ ಆತನ ಹಸಿವು, ಹಾಲು, ಅನ್ನ, ಹಸು, ಇವನ್ನೆಲ್ಲಾ ಕುರಿಗಾಹಿ ಸಂಸ್ಕೃತಿಗೆ ಒಪ್ಪುವಂತೆಯೇ ಕಾವ್ಯ ತನ್ನೊಳಗೆ ಸಂಸ್ಕರಿಸಿಕೊಂಡಿದೆ.

ಮಾಳವ್ವನನ್ನು* ಮೈಲಾರ ಮದುವೆಯಾಗುವ ಸಂದರ್ಭದಲ್ಲಿ,

ಕುರುಬರ ಕನ್ಯ ಕೂಡತೀನಿ
ಕುರಿಗಳನ್ನೆಲ್ಲಾ ಮೇಯಿಸುತೀನಿ
ಮರಿಗೆ ಮೇವು ತಂದು ಹಾಕುತೀನಿ॥

ಎಂದು ತೀರ್ಮಾನಿಸಿ, ಮಾಳವ್ವನಿದ್ದ ಊರಿಗೆ,

ಬಿಳಿಲು ತೇಜನು ಏರಿದ ಮಲ್ಲ
ಚೋಳರಾಯನ ಕಾಲದಲ್ಲಿ॥

ಈ ಮಾಳವ್ವ, ಕುರುಬರು ಮತ್ತು ಮೈಲಾರದ ನಡುವೆ ಪ್ರಬಲ ಕೊಂಡಿಯಾಗಿದ್ದಾಳೆ. ಆಂಧ್ರದ ಮೀನುಗೊಂಡಿಯ ಮಲ್ಲಣ್ಣ ಪೂಜಾರಿಗಳ ಪ್ರಕಾರ, ಮೈಲಾರನ ಮೊದಲನೆಯ ಪತ್ನಿ ಮೇಡಲದೇವಿ (ಗಂಗಿಮಾಳಮ್ಮ). ಮೇಡ, ಮೇಢ್ರದ ರೂಪಾಂತರ. ಮೇಢ್ರ ಅಂದರೆ ಟಗರು. ಟಗರುದೇವಿ ಮಾಳವ್ವ ಎಂದು.[೫೩] ಈಕೆಗೆ ಕುರಿಗಾಹಿ ಮೈಲಾರನು,

---

* ಮಾಳವ್ವನನ್ನು ಗಂಗಿ ಮಾಳವ್ವ, ತುಪ್ಪದ ಮಾಳವ್ವ ಎಂದು ಕರೆದಿರುವುದು ಇಬ್ಬರೂ ಪಾರ್ವತಿಯ ಅವತಾರವೆಂದೆ. (ಶಿವ–ಮೈಲಾರನಾದಂತೆ)–ಚಂದ್ರಕಾಂತ ಬಿಜ್ಜರಗಿ. ಮಾಳವ್ವ, ಎಂಬ ಶಬ್ದದ ಸಂಸ್ಕೃತ ಭಾಷಾಂತರ 'ಪಾರ್ವತಿ'–ಶಂಬಾ ಜೋಶಿ, (ಶಂಬಾ ಕೃತಿ ಸಂಪುಟ)

ಕೂದಲ ಮೈಯವಳು
ಕುರುಬರ ಮಾಳಮ್ಮಗೆ
ಗುಡ್ಡದ ಮಲ್ಲಯ್ಯ ।ಏ। ಮನಸೋತ
ಬಾ ನನ್ನ ಮಾ ಗುರುವೆ [೫೪]

ಹೀಗೆ ಮನಸೋತ ಮೈಲಾರ (ಗುಡ್ಡದ ಮಲ್ಲ) ಮಾಳವ್ವನನ್ನು ಧರ್ಮಪತ್ನಿಯಾಗಿ ಸ್ವೀಕರಿಸಿದನು. ಹಾಗಾಗಿ ಇಲ್ಲಿನ ಸನ್ನಿವೇಶಗಳು ಪಶುಪಾಲನಾ ಪರಂಪರೆಯ ಚೌಕಟ್ಟಿನಲ್ಲಿಯೇ ಕಾವ್ಯದಲ್ಲಿ ಪ್ರಸ್ತುತಗೊಂಡಿವೆ ಎಂದೇ ಹೇಳಬಹುದು. ಮುಂದೆ ಮೈಲಾರಲಿಂಗನು ಮಾಳವ್ವನಿಗೆ ಸುಳ್ಳು ಹೇಳಿ ಚಂದ್ರಗಿರಿ ಪಟ್ಟಣಕ್ಕೆ ಕೋಮಾಲಿ ಹೆಣ್ಣನ್ನು ವರಿಸಲು ಹೋಗುತ್ತಾನೆ. ಕಾವ್ಯದಲ್ಲಿ 'ಕೋಮಾಲೆ ಸಂಧಿ' ಯಂತೂ ತುಂಬಾ ರಸಾತ್ಮಕವಾಗಿ ಮೂಡಿ ಬಂದಿದೆ. ಇಲ್ಲಿ ಕೋಮಾಲೆಗಾಗಿ ಮೈಲಾರ, ಗೊರವನಾಗಿ ಅಣ್ಣಂದಿರ ಏಳು ಸಾವಿರ ಕುರಿ ಕಾಯುವ ಕಾಯಕ ಮಾಡುತ್ತಾನೆ. ಕೋಮಾಲೆಯಿಂದ ಕುರಿ ಕಾಯಿಸುತ್ತಾನೆ. ಕಂಬಳಿ ಮಾರಿಸುತ್ತಾನೆ. ತನ್ನನ್ನು ಮೆಚ್ಚಿ ಕೋಮಾಲೆ ಮದುವೆಯಾಗುವಂತೆ ಮಾಡುವ ಮೈಲಾರನ ಸಾಹಸಗಳೆಲ್ಲವೂ, ಮೈಲಾರ ಒಬ್ಬ ಅಲೆಮಾರಿ ಪಶುಪಾಲಕನ ಲಕ್ಷಣಗಳನ್ನು ಹೊಂದಿದಂತೆಯೇ ಕಾವ್ಯದಲ್ಲಿ ಮೂಡಿ ಬರುತ್ತದೆ. ಈತ ಒಮ್ಮೆ ಚಂದ್ರಗಿರಿಯ ಕಾಳಮ್ಮನ ಗುಡಿಯಲ್ಲಿ ಗೊರವನಾಗಿ ಇದ್ದಾಗ,

ಮೈಲಾರ ಲಿಂಗ
ಬೇವಿನ ತೊಪ್ಪಲು ತಂದು
ಕಾಳಮ್ಮನ ಗುಡಿಗೆ ಬಂದು
ಕಸಗಳು ತಾನೇ ಹೊಡುತಾನಾ
ಜಾಡಿ ಕಂಬಳಿಗೆ ಹಾಕ್ಯಾನಾ
ಗುಡಿಯೊಳಗೆ ತಾನೇ ಮಲಿಗ್ಯಾನ॥

ಗಸ್ತಿಯವರು ಊರಿನಲ್ಲಿಯೇ ಸೇರಿಕೊಂಡ ಗೊರವನನ್ನು ಅಲ್ಲಂದ ಬಿಡಿಸಲು ಪ್ರಯತ್ನಿಸಿದಾಗ, ಕಾಳಮ್ಮನ ಗುಡಿಯ ಭಂಡಾರವನ್ನೇ ತೆಗೆದುಕೊಂಡು,

ಆ ಮಾಯಿಕಾರ
ಒಂದಿಡಿ ಭಂಡಾರ ತಗುದಾನ
ಭಂಡಾರದ ಮಹಿಮಾ ನೋಡ್ಯಾನಲ್ಲ
ಆ ಮಾಯಿಕಾರ
ಹಲ್ಲಿ ಆಗಿ ತಾನೇ ಅಡಗೀದಾ
ದೇವರದೇವ॥

ಕೋಮಾಲೆಗಾಗಿ ಮೈಲಾರ ಆಕೆ ನೀರು ತರುವ ಬಾವಿಯ ಬಳಿ, ಬಟ್ಟೆ ಒಗೆಯುವ ಕಟ್ಟೆಯ ಬಳಿ, ಕಸ ಹಾಕುವ ತಿಪ್ಪೆಯ ಬಳಿ, ಗಂಟು ಬಿದ್ದು ಕಾಡಿಸುತ್ತಾನೆ. ಈ ಅಲೆಮಾರಿ ಮೈಲಾರನನ್ನು ಕೋಮಾಲೆ ತನ್ನ ಅಣ್ಣಂದಿರಿಗೆ,

ಏ ಅಣ್ಣನವರೆ
ಕೋರಿ ಗೊರವಯ್ಯ ಗಂಟು ಬಿದ್ದಾನೋ॥

ಎಂದು ಹೇಳಿದಾಗ, ಆಕೆಯ ಅಣ್ಣಂದಿರು ಗೊರವನನ್ನು ಹಿಡಿಯಲು ಗಸ್ತಿಯವರಿಗೆ ಹೇಳಿದಾಗ, ಆ ಗೊರವ,

ಊರ ಒಳಗೆ
ಅಣ್ಣ ತಮ್ಮಂದಿರಿಗೆ ಬಡಿದಾಟಿಟ್ಟು
ನಾಯಿ ನಾಯಿ ಕಡಿದಾಟಿಟ್ಟು
ಎತ್ತಿಗೆ ಎತ್ತಿಗೆ ಇರಿದಾಟಿಟ್ಟು
ಕುರುಬ ಕುರುಬರಿಗೆ ಹೊಡೆದಾಟಿಟ್ಟನಯ್ಯಾ ॥

ಈ ಘಟನೆಗಳೆಲ್ಲವೂ ಸೇರಿದಂತೆ ಮುಂದೆ ಕುರುಬರಾದ ಏಳು ಜನ ಅಣ್ಣಂದಿರ ಸತ್ತ ಕುರಿಗಳನ್ನು ಈ ಗೊರವ ಬದುಕಿಸಿದ ಸಲುವಾಗಿ,

ಏ ಕುರುಬರ
ನಿಮ್ಮ ಕುರಿಗಳು ಬದುಕುತಾವೋ
-------------------
ಮೂರು ಹಿಡಿ ಭಂಡಾರ ತೂಗುದಾನ
ಸತ್ತ ಕುರಿಗಳ ಮೇಲೆಲ್ಲ ಹಾಕ್ಯಾನ
ಎದ್ದೆದ್ದು ಅವು ಓಡುತಾವ
ದೇವರ ದೇವ॥ [೫೫]

ಆಗ ಆಡಿದ ಮಾತಿನಂತೆ ಏಳು ಜನ ಅಣ್ಣಂದಿರು, ತಮ್ಮ ತಂಗಿಯನ್ನು ಗೊರವನಿಗೆ ಕೊಟ್ಟು ಮದುವೆ ಮಾಡುತ್ತಾರೆ. ಇದೆಲ್ಲವೂ ಅಲೆಮಾರಿ ಕುರಿಗಾಹಿಗಳ ನೈಜ ಬದುಕನ್ನು ಕಟ್ಟಿಕೊಡುವಂತೆ ಕಾವ್ಯದಲ್ಲಿ ಮೂಡಿಬಂದಿದೆ. ಹೀಗೆ ಕುರುಬರ ಗುಡ್ಡದ ಮಲ್ಲಯ್ಯ ಗೊರವನಾಗಿ ಕುರಿಗಾಹಿಯಾಗಿ ಕರಿಯ ಕಂಬಳಿ ಅಂಗಿಯ ತೊಟ್ಟು, ಕರಡಿ ಚರಮ ಟೋಪಿಯನಿಟ್ಟು ಕುರುಬತಿ ಕೋಮಾಲೆಯನ್ನು ಗುಡ್ಡಕ್ಕೆ ಕರೆತಂದು ಬದುಕು ರೂಪಿಸಿಕೊಳ್ಳುತ್ತಾನೆ.

ಈ ಎಲ್ಲ ಹಿನ್ನೆಲೆಯೊಂದಿಗೆ, ಮೈಲಾರಲಿಂಗನ ಕಾವ್ಯವೂ ಸಂಕೀರ್ಣಗೊಳ್ಳುತ್ತಲೇ ಆತನ ಅತಿಮಾನುಷ ಶಕ್ತಿಯನ್ನು ದೈವೀಕರಣಗೊಳಿಸುವ ಹಾಗೂ ಕುರಿಗಾಹಿ ಸಂಸ್ಕೃತಿಯನ್ನು ದಾಖಲಿಸುವ ಪರಂಪರೆಯಂತೆ ಮೂಡಿಬಂದಿದೆ.

ಇಂತಹ ಮೈಲಾರಲಿಂಗನನ್ನು ಸಾವಿರಾರು ವರ್ಷಗಳಿಂದಲೂ ನಿರಂತರವಾಗಿ ಕುರುಬ, ಬಣಜಿಗ, ಅಂಬಿಗ, ಕ್ಷತ್ರಿಯ, ಶೈವ, ವೀರಶೈವ, ರಡ್ಡಿ, ಗೊಲ್ಲ, ಬಿಲ್ಲವ, ಜಾಡ, ಬಲಿಜ, ಮರಾಠ, ಹಾಗೂ ಎಲ್ಲಾ ಹಿಂದುಳಿದ ಕೋಮಿನವರು ಆರಾಧಿಸುತ್ತಿದ್ದಾರೆ. ವಿಶೇಷವೆಂದರೆ ಈ ಎಲ್ಲಾ ಜಾತಿಗಳು ಮೊದಲು ಪಶುಪಾಲಕರ ಕುಲಕ್ಕೆ ಸೇರಿದ್ದವೆಂಬುದನ್ನು[೫೬] ಈ ಸಂಶೋಧನೆಯು ಮುಖ್ಯವಾಗಿ ಗಮನಿಸಿದೆ.

ಹೀಗೆ ಚರಿತ್ರೆಯ ದೃಷ್ಟಿಯಿಂದ ನೋಡಿದರೆ ಮೈಲಾರಲಿಂಗನ ಭಕ್ತರು ವಲಸೆಗಾರರಾಗಿದ್ದು ಕರಿಯ ಕಂಬಳಿಯನ್ನು ಹೊದ್ದು ನಡೆದಾಡುವವರು. ಇವರ ಆರಾಧ್ಯ ದೈವ ಮೈಲಾರನಿಗೆ ಈ ಕಂಬಳಿ ಗದ್ದುಗೆಯ ಪೂಜೆಯೇ ಪರಮ ಶ್ರೇಷ್ಠ. ಈಗಲೂ ಮೈಲಾರಲಿಂಗನ ಭಕ್ತರು ಕಂಬಳಿಯ ಈ ಶ್ರೇಷ್ಠತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಕರಿಯ ಕಂಬಳಿಯನ್ನು ಬದುಕಿನ ಸಂಕೇತವೆಂದೇ ಇವರು ನಂಬಿದ್ದಾರೆ. ಆದ್ದರಿಂದ ಮಧ್ಯಕಾಲೀನ ಕನ್ನಡದ ಸಂದರ್ಭದಲ್ಲಿ ಕಂಬಳಿಯ ಪಾರುಪತ್ಯ ಹೆಚ್ಚಾಗಿತ್ತೆಂದೇ ಹೇಳಬಹುದು. ಹಾಗಾಗಿ ಕನಕದಾಸರು ಸಹ ಕಂಬಳಿಯನ್ನು ಹೆಗಲ ಮೇಲೆ ಹೊದ್ದೇ ದಾರಿ ಕಂಡು ನಡೆದವರು. ಆಗ ಕುರಿ ಸಾಕಣಿಕೆ ಪ್ರಮುಖವಾಗಿದ್ದಿರಲೂಬಹುದು. ಕುರಿಯ ತುಪಟದಿಂದ ತಯಾರಾಗುವ ಈ ಕಂಬಳಿ ಉದ್ಯಮ ಸಮಾಜದ ಹಲವರ ಉದ್ಯೋಗಕ್ಕೆ ಕಾರಣವಾದಂತೆ ಕಾಣುತ್ತದೆ. ಹಾಗಾಗಿ ಇದೆಲ್ಲದಕ್ಕೂ ಪಶುಪಾಲನೆ ಮೂಲ ಪ್ರೇರಕವಾಗಿತ್ತೆಂದು ಊಹಿಸಬಹುದು.

ಶಿವನ ಒದಂಶವಾದ ಮೈಲಾರ ಶೈವ ಪರಂಪರೆಯವರ ಆರಾಧಕ. ಕನಕದಾಸರ ತಂದೆ ಮತ್ತು ಇವರ ಕುಟಂಬ ಬೀರಪ್ಪದೇವರ ಪರಮಭಕ್ತರಾಗಿದ್ದು ತಂದೆಯ ಹೆಸರನ್ನು ಬೀರಪ್ಪ ಎಂದೇ ಕರೆಯಲಾಗುತ್ತಿತ್ತು.

ಈ ಬೀರಪ್ಪ ಹಿಂದೆ ಪಶುಪಾಲಕರ ನಾಯಕನಾಗಿದ್ದು ತನ್ನ ಸಮುದಾಯದ ಏಳಿಗೆಗಾಗಿ ಶ್ರಮಿಸಿದವನು. ಈತನ ನಂತರ ಪಶುಪಾಲಕರು ತಾವು ಹೋದಲ್ಲೆಲ್ಲಾ ಬೀರಪ್ಪನ ಹೆಸರಿನಲ್ಲಿ ಕಲ್ಲು ಕುಪ್ಪೆಗಳನ್ನು ಮಾಡಿ ತಮ್ಮ ರಕ್ಷಕನೆಂದು ಪೂಜಿಸತೊಡಗಿದರು. ಮುಂದೆ ಈ ಪರಂಪರೆ ಹಾಗೆಯೇ ಬೆಳೆದುಕೊಂಡು ಬಂದದ್ದು ಈಗಿರುವ ಇತಿಹಾಸ. ಈ ಬೀರಪ್ಪ ಮತ್ತು ಮೈಲಾರ ಸಮಕಾಲೀನವಾಗಿ ಪಶುಪಾಲಕರ ದೈವಗಳೇ.

ಕನಕದಾಸರು ತಮ್ಮ ಒಂದು ಕೀರ್ತನೆಯಲ್ಲಿ ಮೈಲಾರದೈವವನ್ನೂ ಸೇರಿದಂತೆ ಕೆಳ ಸಮುದಾಯಗಳ ಕೆಲದೈವಗಳನ್ನು ಟೀಕಿಸಿರುವುದನ್ನು ಗಮನಿಸಬಹುದು.

ಎಕ್ಕನಾತಿಯರು ಕಾಟಿ, ಜಕ್ಕಣಿಯರು ಜಲಜೆಯರು
ಸೊಕ್ಕಿನಿಂದ ಸೊಂಟ ಮುರುಕ ಭೈರೇ ದೇವರು
ಮಿಕ್ಕಮಾರಿ ಮಸಣಿ ಚೌಡಿ ಮೈಲಾರ ಮೊದಲದ
ಠಕ್ಕು ದೇವರ ಗೊಡವೆ ಬೇಡ ನರಕ ತಪ್ಪದು.॥

ಎಂದು ಕನಕದಾಸರು ಹೇಳಿರುವುದನ್ನು ನೋಡಿದರೆ ಬೀರಪ್ಪನೂ ಸೇರಿದಂತೆ ಮೈಲಾರ ಕೂಡ ಕೆಳ ವರ್ಗದವರ ದೈವವೇ ಆಗಿದ್ದಾನೆ. ಹಾಗಾಗಿ ಈ ಸಮುದಾಯ ಅನ್ಯ ದೇವರುಗಳ ಭಕ್ತಿ ಮತ್ತು ಆಚರಣೆಯ ಹೆಸರಿನಲ್ಲಿ ಗುಂಪು ಗುಂಪುಗಳಾಗಿ ಒಡೆದು ಬೇರೆಬೇರೆಯಾಗಬಹುದು ಎಂಬ ಭಯ ಇವರನ್ನು ಕಾಡಿರಬಹುದು. ಜೊತೆಗೆ ಈಗಾಗಲೇ ಒತ್ತರಿಸಿ ಬರುತ್ತಿದ್ದ ಮೇಲ್ವರ್ಗದವರ ಉಪಟಳ ಮತ್ತು ತಾರತಮ್ಯದ ಕಾಲ್ತುಳಿತಕ್ಕೆ ಸಿಕ್ಕಿ ಎಲ್ಲಿ ಇವರೆಲ್ಲಾ ಕಳೆದುಹೋಗುತ್ತಾರೆ ಎಂಬ ನೋವಿನಿಂದಲೂ ಕನಕದಾಸರು; ಬಹು ಜನಸಮುದಾಯದ ಬೀರಪ್ಪನ್ನೇ ಏಕ ದೇವೋಪಾಸನೆಯ ಹೆಸರಿನಲ್ಲಿ ಪೂಜಿಸಬೇಕೆಂಬ ಸಂದೇಶವನ್ನು ಈ ಕೀರ್ತನೆಯಲ್ಲಿ ನೀಡಿರುವಂತಿದೆ. ಆದರೂ ಮುಂದೆ ಕನಕದಾಸರಿಗೆ ಅಂದಿನ ಪುರೋಹಿತ ಶಾಹಿಯ ವೈಷ್ಣವಾರಾಧನೆಯ ಎದುರು ಈಜಲು ಸಾಧ್ಯವಾಗದೆ ವೈಷ್ಣವಾರಾಧಕರಾಗಿಯೂ ಬದುಕ ಸಾಗಿಸಿದವರು. ತಮ್ಮ ಬದುಕು ಮತ್ತು ಬರಹಗಳಲ್ಲಿ ಶೈವ ಮತ್ತು ವಿಷ್ಣು ಆರಾಧಕರಾಗಿ ಕಂಡು ಬಂದಂತೆಯೇ ತೊಡಿಗೆಯಲ್ಲಿಯೂ ಶೈವದ ಸಂಕೇತವಾಗಿ ಕಂಬಳಿಯನ್ನೂ, ವಿಷ್ಣು ಆರಾಧನೆಯ ರೂಪದಲ್ಲಿ ಚಿಟಿಕೆ ತಂಬೂರಿಯನ್ನು ಕನಕದಾಸರು ಸಾಮರಸ್ಯದ ಸಂಕೇತವಾಗಿ ಹೊಂದಿದ್ದುದು ವಿಸ್ಮಯವೇ ಸರಿ. ಹೀಗಿದ್ದರೂ ದಾಸರು ಪುರೋಹಿತಶಾಹಿಯನ್ನು ಕುರಿತು,

ಎಳ್ಳು ಕಾಳಿನಷ್ಟು ಭಕುತಿಯೆನ್ನೊಳಗಿಲ್ಲ
ಕಳ್ಳರಿಗೆ ಕಳ್ಳನಂತೆ ಬೆಳ್ಳಕ್ಕಿಯಂದದಿ
ಗುಂಡು ಮುಣುಗಿನ ಹಕ್ಕಿಯಂತೆ
ಕಂಡ ಕಂಡ ನೀರ ಮುಳುಗಿ
ಮಂಡೆ ಶೂಲೆ ಬಾಹುದ್ಯೆಸೆ ಗತಿಯ ಕಾಣೆನೋ॥

ಎಂದು ಭಕ್ತಿ ಇಲ್ಲದವನ ಮನಸ್ಸಿನವರು; ದೈವತ್ವದ ಬಗ್ಗೆ ಜನಸಾಮಾನ್ಯರಲ್ಲಿರುವ ಅಪಾರವಾದ ಭಕ್ತಿ, ಪ್ರೀತಿ, ವಿಶ್ವಾಸಗಳನ್ನು ವ್ಯಾಪಾರದ ಸರಕನ್ನಾಗಿ ಮಾಡಿಕೊಂಡಿದ್ದಾರೆ. ಈ ಮೂಲಕವೇ ಜೀವನ ನಡೆಸುವ ವ್ಯಾಪಾರಿ ಮನೋಭಾವದ, ಮೇಲ್ವರ್ಗದ ಸಮೂಹವನ್ನು ಇಲ್ಲಿ ಕನಕದಾಸರು ಕಟುವಾಗಿ ಟೀಕಿಸಿದ್ದಾರೆ.

ಅಲ್ಲದೆ ಮೇಲ್ವರ್ಗದ ಸಂಸ್ಕೃತಿ, ದೇವರುಗಳ ಆರಾಧನೆ, ಜೀವನ ವಿಧಾನಗಳನ್ನು

ಅಳವಡಿಸಿಕೊಳ್ಳುವಲ್ಲಿ ಮುಂದಾಗಿರುವ ಕೆಳವರ್ಗದವರು; ತಮ್ಮದೇ ಸಂಸ್ಕೃತಿಯ ಜೀವನ ಪದ್ಧತಿ, ಆಚರಣೆಗಳನ್ನು ಮರೆಯುತ್ತಿದ್ದಾರೆ. ಕೆಳವರ್ಗದವರ ಮೌಢ್ಯದಂತಿದ್ದ ಬೆತ್ತಲೆ ಪೂಜೆ, ಪ್ರಾಣಿಬಲಿಕೊಡುವಂತ ಅನಿಷ್ಠ ಪದ್ಧತಿಗಳನ್ನು, ಸ್ವತಃ ತಳ ಸಮುದಾಯದವರಾದ  ಕನಕದಾಸರು ವಿರೋಧಿಸುವುದರ ಮೂಲಕ, ತಮ್ಮ ಸಮಕಾಲೀನ ಪಶುಪಾಲಕರ ಹಿತವನ್ನು ಕಾಯಲೆತ್ನಿಸಿದ್ದಾರೆ.

ಜೊತೆಗೆ 'ಮೋಹನತರಂಗಿಣಿಯಲ್ಲಿ' ಬರುವ ಮನ್ಮಥ ಮೀನಿನ ಹೊಟ್ಟೆಯಲ್ಲಿ ಹುಟ್ಟುವುದು, ಅಶರೀರ ವಾಣಿಯು ನುಡಿಯುವುದು, ದೇವತೆಗಳು ಮತ್ತು ರಾಕ್ಷಸರ ನಡುವಿನ ಯುದ್ಧಗಳು ಮುಂತಾದ ಶಿವ  ಕೇಂದ್ರಿತ  ಸನ್ನಿವೇಶಗಳು ಕನಕದಾಸರಿಂದ ರೂಪುಗೊಳ್ಳಲು ಶೈವ ಕೇಂದ್ರಿತ ಕತೆಯಾದ ಮೈಲಾರಲಿಂಗನ ಕಾವ್ಯವೇ ಇದಕ್ಕೆ ಮೂಲ ಪ್ರೇರಣೆ ಹಾಗೂ ಅಂದಿನ ಪರಿಸರದಲ್ಲಿದ್ದ ಶೈವಾರಾಧನೆಯ ಪ್ರಭಾವವು ಮುಖ್ಯ ಕಾರಣವೆನ್ನಬಹುದು. ಬಾಣಾಸುರನ ಶಿವಪೂಜೆಯ ಸಂದರ್ಭದಲ್ಲಿ,

ಶಿವ ಶಿವ ಶಿವ ಎನ್ನಿರೋ
ಪೃಥ್ವಿಗೆ ಸದ್ಗುರು ಆಗಬೇಕಾದರೆ
ಶಿವ ಶಿವ ಶಿವ ಎನ್ನಿರೋ-ನೀವು
ತತ್ವಪತಿ ಆದಿಕೇಶವ ಕೂಡಬೇಕಾದರೆ
ಶಿವ ಶಿವ ಶಿವ ಎನ್ನಿರೋ॥

ಎನ್ನುವ ರಚನೆಯೊಂದಿಗೆ ಮೈಲಾರಲಿಂಗನ ಮಹಾಕಾವ್ಯದಲ್ಲಿ ಜನಪದರು ಮಲ್ಲಯ್ಯನನ್ನು ಸ್ತುತಿಸುವ,

ಸೋಬಾನ ಎನ್ನಿರೇ
ಏ$_{ss}$ ನನ್ನ ಅಯ್ಯಗೆ
ಈರೇಳು ಭುವನಾದ ಒಡೆಯಾಗೆ$_{ss}$ ॥ಮು॥ [೫೭]

ಇಂತಹ ಸಾಲುಗಳು ಜನಸಾಮಾನ್ಯರ ಗಾಢ ಭಕ್ತಿಯನ್ನೇ ಪ್ರತಿಬಿಂಬಿಸುತ್ತವೆ. ಏಕೆಂದರೆ ಕನಕನ ಪರಿಸರದಲ್ಲಿ  ಮೈಲಾರಲಿಂಗನ ಕಾವ್ಯದ ಸಾಲುಗಳನ್ನು ಜನಸಾಮಾನ್ಯರು ಬಾಯಿಂದ ಬಾಯಿಗೆ ನಿರಂತರವಾಗಿ ಆಡುತ್ತಲಿದ್ದು, ಇದರ ಕೇಳುವಿಕೆಯ ಪ್ರಭಾವ ಕನಕದಾಸರ ಮೇಲಾಗಿರುವಂತೆಯೂ ಇಲ್ಲಿ ಕಾಣುತ್ತದೆ. ತಮ್ಮ ಬದುಕಿನುದ್ದಕ್ಕೂ ಕನಕದಾಸರನ್ನು ಜನಪದರ ಜೀವನ ಸಂಸ್ಕೃತಿ ಪ್ರಭಾವಿಸಿದ್ದರೂ ಕಡೆಯಲ್ಲಿ ಅವರು ಅಪ್ಪಿಕೊಂಡದ್ದು  ದಾಸಕೂಟದ ಸಂಸ್ಕೃತಿಯನ್ನೇ. ಆದರೂ ಅವರ ಹೃದಯದಲ್ಲಿ ನೆಲೆಯೂರಿದ್ದ ಜನಪದ ಸಂಸ್ಕೃತಿ ಕೀರ್ತನೆಗಳ ರೂಪದಲ್ಲಿ

ಹೊರಬಂದಿದೆ. 'ನಾವು ಕುರುಬರು ನಮ್ಮ ದ್ಯಾವರು ಬೀರಪ್ಪ' ಎಂಬ ಕೀರ್ತನೆಯಲ್ಲಿ ಅಂದಿನ ಜನಪದರ ಪ್ರಧಾನ ವೃತ್ತಿಯಾದ ಕುರಿಸಾಕಣಿಕೆಯ ವಿವರಗಳನ್ನು ದಾಸರು ನೀಡಿದ್ದರೆ,

ದ್ಯಾವಿ ನಮ್ಮ ದ್ಯಾವರು ಬಂದರು ಬನ್ನೀರೆ
ನೋಡ ಬನ್ನೀರೆ
ಕೆಂಗಣ್ಣ ಮೀನನಾಗಿ ನಮರಂಗ
ಗುಂಗಾಡು ಸೋಮನ ಕೊಂಡಾನ್ಯ
---------------------
ಡೊಳ್ಳು ಹೊಟ್ಟೆಯ ಮ್ಯಾಲೋದ್ದಾನ್ಯಾ
----------------------
ಚೆಲುವ ಕನಕಪ್ಪ ಕುಣಿದಾನ್ಯಾ

ಡೊಳ್ಳಿನ ಮತ್ತೊಂದು ಕೀರ್ತನೆಯಲ್ಲಿ,

ಬ್ರಹ್ಮದೊಡ್ ಡಾಂವ ಬ್ರಹ್ಮ ದೊಡ್ ಡಾಂವ
ಹಿಡಿದ್ಯಾಂಗ್ ಬಿಟ್ಯಾಂಗ್

ಎನ್ನುವ ಈ ಕೀರ್ತನೆಗಳ ಸಾಲುಗಳು ಜನಪದರ ಡೊಳ್ಳಿನ ಹಾಡುಗಳ ದಾಟಿಯನ್ನು ಪ್ರಸ್ತುತ ಪಡಿಸುತ್ತವೆ. ಹಾಗಾಗಿ ಕನಕದಾಸರ ಮೇಲೆ ಜನಪದರ ಸಂಸ್ಕೃತಿಯ ಪ್ರಭಾವದ ಜೊತೆಗೆ,

ಹಿಂಡೆಮ್ಮಿ ಕೊಡುವಯ್ಯ
ಮದ್ದಾಲಿ ಗೊರವಯ್ಯ
ಅಂಬಾಲಿ ಮ್ಯಾಲಿ ಏ ಶಿವಧ್ಯಾನ
ಬಾ ನನ್ನ ಮಾಗುರುವೆ॥[೫೮]

ಎನ್ನುವ ಮೈಲಾರಲಿಂಗನ ಮಹಾಕಾವ್ಯದ ಪ್ರೇರಣೆಯೂ ಕನಕದಾಸರ ಮೇಲಾಗಿರುವುದನ್ನು ಇಲ್ಲಿ ಗಮನಿಸಬಹುದು.

ಹಾಗೆಯೇ 'ನಳಚರಿತ್ರೆ'ಯಲ್ಲಿನ ಕತೆಯಲ್ಲಿ ಬರುವ ನಳಮಹಾರಾಜನ ಹಚ್ಚಡವನ್ನು ಪಕ್ಷಿಗಳು ಹಾರಿಸಿಕೊಂಡು ಹೋಗುವುದು, ಕಾರ್ಕೋಟಕ ಎಂಬ ವಿಷದ ಹಾವಿನ ಪ್ರಸಂಗ, ಕಾಡಿನ ವರ್ಣನೆ, ವೃಕ್ಷವಿದ್ಯೆ ಮತ್ತು ಅಶ್ವವಿದ್ಯೆಗಳ ಪ್ರಸಂಗಗಳು, ಆಗಿನ ಜನಪದರ ಬಾಯಲ್ಲಿ ಬೇರೆಬೇರೆ ರೂಪಗಳಲ್ಲಿ ವಿಭಿನ್ನ ಸನ್ನಿವೇಶ ಸಂದರ್ಭಗಳಲ್ಲಿ

ಪ್ರಕಟಗೊಳ್ಳುತ್ತಿದ್ದು, ಕನಕದಾಸರು ಇಂತಹವುಗಳನ್ನು ನೋಡಿ ಮತ್ತು ಕೇಳಿ ತಮ್ಮ ಅನುಭವಕ್ಕೆ ತಂದುಕೊಂಡಿದ್ದರು. 'ರಾಮಧಾನ್ಯಚರಿತೆಯಲ್ಲಿ'ನ ಕೃಷಿ ಸಂಸ್ಕೃತಿಯ ಪ್ರಧಾನ ಸಂಕೇತಗಳಾಗಿ ಬರುವ ರಾಗಿ ಮತ್ತು ಭತ್ತದ ಪ್ರಸಂಗಗಳು ಕನಕದಾಸರ ಕಲ್ಪನೆಯಿಂದ ಮೂಡಿಬರಲು ಕೃಷಿ ಚಟುವಟಿಕೆಯನ್ನು ಹತ್ತಿರದಿಂದ ಬಲ್ಲವರಾಗಿದ್ದರು ಹಾಗೂ ಈ ಜನಪದ ಮಹಾಕಾವ್ಯಗಳಲ್ಲಿಯೂ ಪಶುಪಾಲನೆ ಮತ್ತು ಕೃಷಿ ಕೇಂದ್ರಿತ ಪ್ರಸಂಗಗಳಿದ್ದು, ಇವುಗಳ ಪ್ರೇರಣೆ ಮತ್ತು ಪ್ರಭಾವ ಕನಕದಾಸರ ಮೇಲಾಗಿದೆ. ಜೊತೆಗೆ ಈ ಎಲ್ಲಾ ಕಾವ್ಯಗಳ ಕಥಾ ನಿರೂಪಣೆಯು ಸಹ ಜನಪದರ ಮೌಖಿಕ ಮಹಾಕಾವ್ಯಗಳ ಶೈಲಿಯನ್ನೇ ಹೋಲುವುದರಿಂದ ದಾಸರು ಜನಪದರ ಬದುಕನ್ನು ಹತ್ತಿರದಿಂದ ಬಲ್ಲವರಾಗಿದ್ದರೆಂದು ಹೇಳಬಹುದು.

ಹೀಗೆ ಪಶುಪಾಲನಾ ಪರಂಪರೆಯ ಸಂಬಂಧ, ಜನಪದೀಯ ಮೌಖಿಕ ಮಹಾಕಾವ್ಯಗಳು ಕರ್ನಾಟಕದ ಮಧ್ಯಕಾಲೀನ ಕಾಲಘಟ್ಟದಲ್ಲಿ ಜೀವಿಸಿದ್ದ ಕನಕದಾಸರ ಮೇಲೆ ಬೀರಿದ ಪ್ರಭಾವ ಹಾಗೂ ಇವರ ಬದುಕು ಮತ್ತು ಬರವಣಿಗೆಗಳ ಮೇಲೆ ಉಂಟು ಮಾಡಿದ ಪರಿಣಾಮವನ್ನು ಇಲ್ಲಿ ದಾಖಲಿಸಲಾಗಿದೆ.

ಇದುವರೆಗೂ ಪ್ರಸ್ತುತಪಡಿಸಿರುವ ಈ ಅಧ್ಯಾಯದಲ್ಲಿ ಸ್ಥಳೀಯ ಸಾಂಸ್ಕೃತಿಕ ವೀರರ ಜನಪದೀಯ ಕಥನಗಳನ್ನು ಚರ್ಚಿಸಲಾಗಿದೆ. ಅವರ ಜೀವನ ಪ್ರೀತಿಯ ವಿಶೇಷಗಳಾದ ದನ, ಕುರಿ, ಹಸು, ಆಡು, ಆನೆ, ಕುದುರೆ, ನಾಯಿ, ಬೇಟೆ, (ಮದ್ಯ, ಮಾಂಸ, ಭಂಗಿಗಳೂ ಸೇರಿದಂತೆ) ಮುಂತಾದ ದ್ರಾವಿಡ ಮೂಲದ ಜೀವನ ಮೌಲ್ಯಗಳನ್ನು ಲೋಕ ದೃಷ್ಟಿಯೊಂದಿಗೆ ಹೇಳಲಾಗಿದೆ. ಇಲ್ಲಿನ ನಾಯಕರು ಅಂದಿನ ಪ್ರಭುತ್ವದ ದಬ್ಬಾಳಿಕೆಯಿಂದ ತಮ್ಮನ್ನು ನಂಬಿದ ಜನಸಮುದಾಯಗಳನ್ನು ರಕ್ಷಿಸುತ್ತಾ ಬೆಳೆದವರು. ರಾಜ್ಯವಾಳಿದವರಂತೂ ಇವರಲ್ಲ. ಅಲೆಮಾರಿಗಳಾಗಿ ನೆಲೆ ಕಂಡುಕೊಳ್ಳಲು ಪ್ರಯತ್ನಸಿದವರು. ತಮ್ಮ ಬೇಟೆ ಮತ್ತು ಪಶುಪಾಲನೆ ವೃತ್ತಿಯಿಂದ ಕಂಡುಕೊಂಡ ಸತ್ಯದಲ್ಲಿ ದುಷ್ಟರನ್ನು ಪಳಗಿಸಿದವರು. ಹಾಗಾಗಿ ಈ ನಾಯಕರು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಮೂಲ ಪುರುಷರಾಗಿ ಕನಕದಾಸರನ್ನೂ ಸೇರಿದಂತೆ ಇಂದು ನಮ್ಮೊಳಗೂ ಸೇರಿಕೊಂಡಿದ್ದಾರೆ ಎಂದೆನಿಸುತ್ತದೆ.

## ಕೊನೆ ಟಿಪ್ಪಣಿಗಳು:

೧. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ 'ಬೀರಪ್ಪ ಪರಂಪರೆ' ಲೇಖನ, ಬಿ.ಜಿ. ಬಿರದಾರ, ಮೌಖಿಕ–ಸಾಹಿತ್ಯ ಪುಟ.ಸಂ.೪೮

೨. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ 'ರೇವಣ್ಣ ಸಿದ್ಧ ಪರಂಪರೆ' ಸಿದ್ಧಣ್ಣ ಎಫ್ ಜಕಬಾಳ: ಲೇಖನ,ಮೌಖಿಕ ಸಾಹಿತ್ಯ, ಪುಟ.ಸಂ.೫೨

೩. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ ಹಾಲುಮತ ಅಧ್ಯಯನ. ಲೇಖನ, ವಿರೂಪಾಕ್ಷಿ ಎನ್.ಬಿ.ಜನಪದ ಹಾಲುಮತ ಕಾವ್ಯ ಪುಟ.ಸಂ.೨೯

೪. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ,'ಬೀರಪ್ಪ ಪರಂಪರೆ' ಲೇಖನ,ಬಿ.ಜಿ.ಬಿರದಾರ, ಮೌಖಿಕ-ಸಾಹಿತ್ಯ, ಪುಟ.ಸಂ. ೫೩

೫. ಅದೇ ಪುಟ.ಸಂ.೫೬

೬. ಲಿಂಗದ ಹಳ್ಳಿ ಹಾಲಪ್ಪ: 'ಬೀರದೇವರು' ಪುಟ.ಸಂ.೨೫

೭. ಚಂದ್ರಕಾಂತ ಬಿಜ್ಜರಗಿ: ಕುರುಬರ ಹೆಜ್ಜೆಗಳು ಪುಟ.ಸಂ.೮೩

೮. (ಸಂ) ಎಂ. ಎಂ. ಕಲಬುರ್ಗಿ, ಬಸವಣ್ಣನವರ ಸಮಗ್ರ ವಚನ ಸಂಪುಟ-೧. ಪುಟ.ಸಂ. ೧೩೮

೯. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ, ಬೀರಪ್ಪಪರಂಪರೆ, ಲೇಖನ,ಎಸ್.ವೈ.ಸೋಮಶೇಖರ,'ಪುರಾತತ್ವ', ಪುಟ. ಸಂ. ೬೦೧೦ ಅದೇ ಪುಟ.ಸಂ.೬೧

೧೧. ಅದೇ ಪುಟ.ಸಂ. ೧೯೪

೧೨. ಅದೇ ಪುಟ.ಸಂ.೯೬

೧೩. ಅದೇ ಪುಟ.ಸಂ.೯೯

೧೪. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ, ಬೀರಪ್ಪ ಪರಂಪರೆ, ಲೇಖನ, ಎಂ.ಎಂ. ಪಡಶೆಟ್ಟಿ, 'ಧಾರ್ಮಿಕ ವಿಷಯಗಳು' ಪುಟ.ಸಂ.೨೪೪

೧೫. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ, ಬೀರಪ್ಪ ಪರಂಪರೆ ,ಲೇಖನ, ಎ.ಆರ್. ಹೆಗ್ಗನ ದೊಡ್ಡಿ, ಸಾಮಾಜಿಕ ಸಂಗತಿಗಳು, ಪುಟ.ಸಂ. ೨೪೬

೧೬. (ಸಂ) ಡಾ.ಎಫ್.ಟಿ.ಹಳ್ಳಿಕೇರಿ 'ಬೀರಪ್ಪ ಪರಂಪರೆ, ಲೇಖನ, ವೀರಣ್ಣ ದಂಡೆ, ಶೈವ ಪರಂಪರೆಯ ಮಹಾಸಿದ್ಧ ಬೀರಪ್ಪ, ಪುಟ.ಸಂ. ೨೮೮

೧೭. ಅದೇ ಪುಟ.ಸಂ. ೨೮೮

೧೮. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ ಬೀರಪ್ಪ ಪರಂಪರೆ, ಲೇಖನ, ಲಿಂಗದ ಹಳ್ಳಿ ಹಾಲಪ್ಪ, ಉತ್ತರ ಕರ್ನಾಟಕದ ಬೀರಪ್ಪನ ನೆಲೆಗಳು, ಪುಟ.ಸಂ. ೧೩೨

೧೯. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ 'ಬೀರಪ್ಪ ಪರಂಪರೆ', ಲೇಖನ, ಲಿಂಗದ ಹಳ್ಳಿ ಹಾಲಪ್ಪ, ಪಂಥ-ಪ್ರಭಾವ, ಪುಟ.ಸಂ.೧೦೨

೨೦. (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಹಾಲುಮತ ಅಧ್ಯಯನ, ಲೇಖನ ಎನ್.ಬಿ. ವಿರೂಪಾಕ್ಷಿ, ಜನಪದ- ಹಾಲುಮತಕಾವ್ಯ ಪು.ಸಂ. ೩೦

೨೧. (ಸಂ) ಡಾ. ಟಿ.ಎಫ್.ಟಿ. ಹಳ್ಳಿಕೇರಿ 'ಹಾಲುಮತ ಅಧ್ಯಯನ, ಲೇಖನ, ಡಾ. ಕೆ.ಎಂ. ಮೈತ್ರಿ, ಮಾಳಿಂಗರಾಯನ ಕಾವ್ಯ, ಪುಟ.ಸಂ. ೪೪.

೨೨. ಅದೇ ಪುಟ.ಸಂ. ೪೫

೨೩. ಅದೇ ಪುಟ.ಸಂ. ೪೬

೨೪. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ, 'ಬೀರಪ್ಪ ಪರಂಪರೆ' ಲೇಖನ, ಚನ್ನಪ್ಪ ಕಟ್ಟಿ, 'ಇತಿ ವೃತ್ತ

ವಿಚಾರ' ಪುಟ.ಸಂ. ೮೧ ಮತ್ತು ೮೨

೨೫. ಅದೇ ಪುಟ.ಸಂ.೫೫

೨೬. ಎಸ್.ಜಿ. ಸಿದ್ಧರಾಮಯ್ಯ, 'ಅಮೃತವಾಕ್ಕು' ಲೇಖನ, ಹುಟ್ಟುಲಿಂಗ ಕಟ್ಟುಲಿಂಗ, ದಿನಾಂಕ:೩೦-೫-೨೦೧೬ರ ಪ್ರಜಾವಾಣಿದಿನ ಪತ್ರಿಕೆ, ಪುಟ.ಸಂ.೭

೨೭. ಎಸ್.ಎಫ್. ಜಕಬಾಳ : ಕುರುಬರ ರಟ್ಟಮತಶಾಸ್ತ್ರ, ಪುಟ.ಸಂ. ೩

೨೮. ಅದೇ ಪುಟ.ಸಂ. ೪

೨೯. (ಸಂ) ಡಾ.ಟಿ.ಎಫ್.ಟಿ.ಹಳ್ಳಿಕೇರಿ 'ಹಾಲುಮತ ಅಧ್ಯಯನ', ಲೇಖನ, ಎಸ್.ಎಫ್. ಜಕಬಾಳ, 'ಕುರಿಗಾರರ ಕಾಲಜ್ಞಾನ' ಪುಟ.ಸಂ. ೧೦೯

೩೦. ಅದೇ ಪುಟ.ಸಂ. ೧೦೯

೩೧. ಅದೇ ಪುಟ.ಸಂ. ೧೦೯

೩೨. ಅದೇ ಪುಟ.ಸಂ. ೧೧೦

೩೩. ಅದೇ ಪುಟ. ಸಂ.೧೧೯

೩೪. (ಸಂ) ಚೆಲುವರಾಜು, ಜುಂಜಪ್ಪ ಬುಡಕಟ್ಟು ಮಹಾ ಕಾವ್ಯ ಮಾಲೆ, ಪುಟ.ಸಂ.೧೪೮

೩೫. ಅದೇ ಪುಟ.ಸಂ. ೨೫೦

೩೬. ಅದೇ ಪುಟ. ೩೦೫

೩೭.. ಅದೇ ಪುಟ.ಸಂ. ೬೬೨

೩೮. ಅದೇ ಪುಟ.ಸಂ. ೬೮೩

೩೯. ಅದೇ ಪುಟ. ೨೫೦

೪೦. ಓ.ಎನ್. ಲಿಂಗಣ್ಣಯ್ಯ: ಶೂನ್ಯ ಸಿಂಹಾಸನ ಪುಟ.ಸಂ. ೧೦೫

೪೨. (ಸಂ) ಡಾ. ಪಿ.ಕೆ. ರಾಜಶೇಖರ, ಜನಪದ ಮಹಾಕಾವ್ಯ ,ಮಲೆಯ ಮಾದೇಶ್ವರ ಸಂಪುಟ-೧ ಪುಟ.ಸಂ.೧೬

೪೩. ಡಾ. ಪಿ.ಕೆ. ರಾಜಶೇಖರ: (ಸಂ) ಜನಪದ ಮಹಾಕಾವ್ಯ, ಮಲೆಯ ಮಾದೇಶ್ವರ ಸಂಪುಟ-೧

೪೪. ಅದೇ ಪುಟ ಸಂ. ೧೪

೪೫. (ಸಂ) ಡಾ. ಮಂಜುನಾಥ ಬೇವಿನ ಕಟ್ಟಿ, ಮೈಲಾರಲಿಂಗನ ಕಾವ್ಯ, ಪುಟ, ಪ್ರಸ್ತಾವನೆ.

೪೬. ಅದೇ ಪುಟ.ಸಂ. ೧೧

೪೭. ಡಾ. ಮಂಜುನಾಥ ಬೇವಿನ ಕಟ್ಟೆ, ಮೈಲಾರಲಿಂಗನ ಕಾವ್ಯ, ಪುಟ.ಸಂ. ೭

೪೮. (ಸಂ) ಚಲುವರಾಜು. ಜುಂಜಪ್ಪನ ಕಾವ್ಯ ಪುಟ, ಪ್ರಸ್ತಾವನೆ- ೧

೪೯. ಡಾ. ಚಂದ್ರಕಾಂತ ಬಿಜ್ಜರಗಿ: ಕುರುಬರ ಹೆಜ್ಜೆಗಳು, ಪುಟ.ಸಂ ೮೫

೫೦. ಅದೇ ಪುಟ.೮೫, ೮೬,

೫೧. ಎಂ.ಎನ್. ವೆಂಕಟೇಶ, ಮೈಲಾರನಜಾತ್ರೆಗಳು ಪ್ರದರ್ಶನ ಮತ್ತು ಅಧ್ಯಾಯನ, ಪುಟ.ಸಂ,೭೬, ೨೦೫,

೫೨. ಡಾ. ಚಂದ್ರಕಾಂತ ಬಿಜ್ಜರಗಿ ಕುರುಬರ ಹೆಜ್ಜೆಗಳು ಪುಟ.ಸಂ. ೮೭

೫೩. ಅದೇ ಪುಟ.ಸಂ. ೮೮

೫೪. (ಸಂ) ಡಾ. ಮಂಜುನಾಥ ಬೇವಿನ ಕಟ್ಟಿ, ಮೈಲಾರಲಿಂಗನ ಕಾವ್ಯ, ಪುಟ, ಸಂ. ೩೧೧,

೫೫. ಅದೇ ಪುಟ.ಸಂ. ೩೧೮.

೫೬. ಡಾ. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು ಪುಟ.ಸಂ. ೯೧.

೫೭ ಡಾ. ಮಂಜುನಾಥ ಬೇವಿನಕಟ್ಟೆ, ಮೈಲಾರಲಿಂಗನ ಕಾವ್ಯ, ಪುಟ, ಸಂ. ೧೧೦,

೫೮ ಡಾ. ಮಂಜುನಾಥ ಬೇವಿನಕಟ್ಟೆ, ಮೈಲಾರಲಿಂಗನ ಕಾವ್ಯ, ಪುಟ, ಸಂ. ೮೪,

# ಅಧ್ಯಾಯ- ನಾಲ್ಕು

## ಮಧ್ಯಕಾಲೀನ ಕರ್ನಾಟಕ ಮತ್ತು ಪಶುಪಾಲನಾ ಪರಂಪರೆ

ಕ್ರಿ.ಶ. ೧೨ನೇ ಶತಮಾನದಿಂದ ೧೬ನೇ ಶತಮಾನದವರೆಗಿನ ಕಾಲಾವಧಿಯನ್ನು ಕರ್ನಾಟಕದಲ್ಲಿ ಮಧ್ಯಕಾಲೀನ ಯುಗವೆಂದು ಗುರುತಿಸಲಾಗಿದೆ. ಈ ಅವಧಿಯಲ್ಲಿ ಕಂಡುಬರುವ ವಚನಚಳುವಳಿ, ಭಕ್ತಿಪಂಥ, ಹರಿದಾಸಪಂಥ, ತತ್ವಪದಕಾರರು ಮತ್ತು ಸೂಫಿಚಳುವಳಿಗಳ ಮೇಲೆ ಬೀರಿದ ಪಶುಪಾಲನೆಯ ಪ್ರಭಾವ ಮತ್ತು ಸಂಬಂಧ; ಮಧ್ಯಕಾಲೀನ ಕಾಲಘಟ್ಟದ ಕನಕದಾಸರ ಮೇಲೆ ಉಂಟು ಮಾಡಿದ ಪರಿಣಾಮವೇನೆಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈಗಾಗಲೇ ತಳಸಮುದಾಯದವರೆಂದು ಬಿಂಬಿಸಲ್ಪಟ್ಟಿರುವ ಪಶುಪಾಲಕರು, ಕೃಷಿಕರು ಹಾಗೂ ಇವರನ್ನೇ ನಂಬಿ ಬದುಕುತ್ತಿದ್ದ ಇತರ ಕಸುಬುಗಾರರನ್ನು ಸಮಾನವಾಗಿ ಕಾಣುವಂತೆ; ಸಮಾಜವನ್ನು ಪರಿವರ್ತಿಸುವ ಕಾಯಕಕ್ಕೆ ಮಧ್ಯಕಾಲೀನ ಯುಗವು ಕೈಹಾಕಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ. ಹಾಗಾಗಿ ಈ ಸಂದರ್ಭದ ಕನ್ನಡನಾಡಿನ ಇತಿಹಾಸವು ಸಮಾಜದಲ್ಲಿನ ಜಾತಿಭೇದ, ವರ್ಗಭೇದ ಮತ್ತು ಲಿಂಗತಾರತಮ್ಯಗಳನ್ನು ತೊಡೆದು ಹಾಕಲು ಮತ್ತು ಸುಳ್ಳು, ಮೋಸ, ವಂಚನೆಗಳಿಂದ ಮುಕ್ತವಾದ ಹಾಗೂ ಸಮಾಜಮುಖಿ ವ್ಯಕ್ತಿತ್ವವನ್ನು ಪ್ರತಿಯೊಬ್ಬರೂ ರೂಪಿಸಿ ಕೊಳ್ಳಲು ಬೇಕಾಗುವ ಸಲಹೆ ಮತ್ತು ಮಾರ್ಗದರ್ಶನವನ್ನು ಇಲ್ಲಿನ ಸಮಾಜ ಸುಧಾರಕರು ನೀಡಲು ಪ್ರಯತ್ನಿಸಿದರು ಎಂಬುದನ್ನು ಮನಗಾಣಬಹುದು. ಈ ಹಿನ್ನಲೆಯು ಕನಕದಾಸರನ್ನು ಹೇಗೆ ಪರಿಭಾವಿಸಿದೆ ಎಂಬುದನ್ನು ಕಂಡುಕೊಳ್ಳುವುದೇ ಇಲ್ಲಿನ ಮುಖ್ಯ ಉದ್ದೇಶವೂ ಆಗಿದೆ.

**ವಚನ ಚಳುವಳಿ:**

ವಚನ ಚಳುವಳಿಯ ಕಾಲ ೧೨ ನೆಯ ಶತಮಾನದ ಮಧ್ಯಭಾಗವಾದರೆ ಕನಕದಾಸರು ಜೀವಿಸಿದ್ದುದು, ೧೫ ನೆಯ ಶತಮಾನ. ವಚನ ಚಳುವಳಿಯಲ್ಲಿ ಬಸವಣ್ಣರಾದಿಯಾಗಿ ಎಲ್ಲ ವಚನಕಾರರು ಸಮಾಜದ ಆಚಾರ ವಿಚಾರಗಳಿಂದ ಬೇಸತ್ತು ಹೊರಬಂದವರಾದರೆ, ಕನಕದಾಸರು ಉಚ್ಚಕುಲದವರೆನಿಸಿಕೊಂಡವರಿಂದ ಅವಮಾನಕ್ಕೊಳಗಾಗಿ ಹೊರನಡೆದವರು. ವಚನಯುಗ ಸಮಾಜದ ಸಾಮೂಹಿಕ ಚಳುವಳಿಯಂತೆ ಕಂಡುಬಂದರೆ, ಕನಕದಾಸರು ವೈಯುಕ್ತಿಕ ನೆಲೆಯಲ್ಲಿ ಸಮಾಜದ ಸವಾಲುಗಳನ್ನು ಎದುರಿಸಿದವರು.

ಎಲ್ಲಾ ಕಾಲಕ್ಕೂ ಸಮಾಜದಲ್ಲಿ ಸಹಜವಾಗಿ ಕಂಡುಬರುವ ಮಹಾಚಿಂತಕರೆಲ್ಲರ ಮೂಲ ಉದ್ದೇಶ ಮಾನವೋದ್ಧಾರ. ಮಹಾಪುರುಷರೆನಿಸಿಕೊಂಡವರ ವ್ಯಕ್ತಿತ್ವ

ಪರಿಸ್ಫುಟಗೊಳ್ಳಲು, ಅವರು ಬೆಳೆದು ಬಂದ ಕಾಲ, ಪರಿಸರ, ಎದುರಾದ ಸವಾಲುಗಳೇ ಮುಖ್ಯ ಕಾರಣವಾಗಿ ನಿಲ್ಲುತ್ತವೆ. ವಚನಕಾರರು ಮತ್ತು ಕನಕದಾಸರ ಬರಹಗಳಲ್ಲಿ ಭಕ್ತಿಯೇ ಮುಖ್ಯವಾಗಿ ನಿಲ್ಲುತ್ತದೆ. ಹಾಗಾದರೆ ಈ ಭಕ್ತ ಯಾರು? ಎಂಬ ಪ್ರಶ್ನೆಯನ್ನೆತ್ತಿಕೊಂಡು ಕನಕದಾಸರು 'ಎಳ್ಳು ಕಾಳಿನಷ್ಟು ಭಕುತಿಯೆನ್ನೊಳಗಿಲ್ಲ, ಕಳ್ಳರಿಗೆ ಕಳ್ಳನಂತೆ ಬೆಳ್ಳಕ್ಕಿಯಂದದಿ ಡಂಬ ಮಾಡುತ್ತ ತಿರುಗುವುದು' ಎಂಬ ಮಾತು ವಾಸ್ತವಿಕ ಸತ್ಯವನ್ನು ಬಯಲು ಮಾಡಿದರೆ,

ಭಕ್ತಿ ಎಳ್ಳನಿತಿಲ್ಲ: ಯುಕ್ತಿ ಶೂನ್ಯನಯ್ಯಾ ನಾನು
ತನು ವಂಚಕ, ಮನ ವಂಚಕ, ಧನ ವಂಚಕ, ನಾನಯ್ಯಾ॥ –ಬಸವಣ್ಣ

ಎಂದು ವಚನಕಾರ ಬಸವಣ್ಣ ಸಂಬೋಧಿಸಿದ್ದಾರೆ. ಈ ಭಕ್ತಿಯೇ ವಚನ ಚಳುವಳಿಯಲ್ಲಿ ಎಲ್ಲಾ ವರ್ಗದ ಜನರ ನಡುವೆ ಪ್ರಧಾನ ಪಾತ್ರವಹಿಸಿದ್ದು ಇದು ಅನುಭಾವ, ಸಾಮಾಜಿಕತೆ, ತಾತ್ವಿಕತೆಗಳ ಚೌಕಟ್ಟಿನಲ್ಲಿ ಅನಾವರಣಗೊಳ್ಳುತ್ತದೆ. ಕನಕದಾಸರು ಸೇರಿದಂತೆ ಹರಿದಾಸರಿಗೆ ಶ್ರೀ ಹರಿಯ ಅವತಾರಗಳ ಮೂಲಕವೇ ಭಕ್ತಿಯ ಎಲ್ಲಾ ಬಾಗಿಲುಗಳು ತೆರೆದುಕೊಳ್ಳುತ್ತವೆ. ಹಾಗೆಯೇ ಭಕ್ತನ ಇರುವಿಕೆಯನ್ನು ಕುರಿತು ಇಬ್ಬರೂ ವಿಶ್ಲೇಷಿಸಿದ್ದಾರೆ.[೧] 'ಹಲವು ಮಣಿಯ ಕಟ್ಟಿ, ಕುಣಿ ಕುಣಿದಾಡಿ ಉಂಡು, ತಾಂಬೂಲಗೊಂಡು ಹೋಹುದೆಲ್ಲಾ' ಎಂಬ ವಚನಕಾರರ ಅಭಿಪ್ರಾಯದಂತೆಯೇ ಕನಕದಾಸರು ಕೂಡ ಇದೇ ಭಕ್ತನನ್ನು ಕುರಿತು; 'ಪಟ್ಟೆ ನಾಮವ ಬಳಿದು ಪಾತ್ರೆ ಕೈಯಲಿ ಪಿಡಿದು ಗುಟ್ಟಿನಲಿ ರಹಸ್ಯದ ಗುರುತನರಿಯದೆ ಕೆಟ್ಟ ಕೂಗನು ಕೂಗಿ ಬೊಗಳಿ ಬಾಯಾರುವಂತಹ ಹೊಟ್ಟೆಗಡ ಮೃಗಗಳೆಲ್ಲಾ ಶ್ರೀ ವೈಷ್ಣವರೇ ಕೃಷ್ಣ' ಎಂದು ಹೇಳಿಸಿದ್ದಾರೆ. ಇದರಂತೆಯೇ ಮನುಷ್ಯನ ಪಂಚೇಂದ್ರಿಯಗಳ ನಿಯಂತ್ರಣ, ಮನುಷ್ಯನಾದವನ ವ್ಯಕ್ತಿತ್ವ, ಕರ್ತವ್ಯಗಳು, ಸಂಸಾರದ ನಿಸ್ಸಾರವನ್ನು ಕನಕ ಮತ್ತು ವಚನಕಾರರಿಬ್ಬರೂ ಹೇಳಿರುವುದರಿಂದ ಇವರ ನಡುವಿನ ಸಾಮ್ಯತೆ ತಮ್ಮ ಅರಿವಿಗೆ ಬರುತ್ತದೆ.

ಜೊತೆಗೆ ಎರಡೂ ಕಾಲಧರ್ಮಗಳಲ್ಲೂ ಶ್ರಮಿಕರ ಮೇಲಿನ ಶೋಷಣೆ ಒಂದೇ ತೆರನಾಗಿದ್ದು ಮೇಲ್ವರ್ಗದವರ ದಬ್ಬಾಳಿಕೆಗಳನ್ನು ನಿಯಂತ್ರಿಸುವುದು; ವಚನ ಮತ್ತು ದಾಸ ಪರಂಪರೆಯಲ್ಲಿ ಸವಾಲಿನ ಪ್ರಶ್ನೆಗಳಾಗಿಯೇ ಉಳಿದುಕೊಂಡುಬಂದದ್ದನ್ನು ಗುರುತಿಸಬಹುದು. ಜಾತಿ, ಕುಲ, ಧರ್ಮ, ಮತ, ಆಚರಣೆ, ಪ್ರಭುತ್ವ ಹಾಗೂ ಸಂಸ್ಕೃತಿಗಳು ಸಮಾಜದಲ್ಲಿ ಏಕಮುಖವಾಗಿಯೇ ಚಲಿಸುತ್ತಿದ್ದು ಇವುಗಳ ಪ್ರಭಾವ ಸಮಾಜದ ಮೇಲೆ ಗಾಢವಾದ ಪರಿಣಾಮ ಉಂಟುಮಾಡಿದ್ದರಿಂದ ವಚನಕಾರರು ಮತ್ತು ಕನಕದಾಸರ ಅಭಿವ್ಯಕ್ತಿಗೆ ಈ ಅಂಶಗಳೇ ಕಾರಣವಾಯಿತೆಂದು ಹೇಳಬಹುದು.

ಗೋವು ತಿನ್ನುವವರನ್ನು ಜಾತಿ ನಿಂದನೆಯ ಸಂಕೇತವಾಗಿ ಬಳಸುತ್ತಿರುವುದನ್ನು ಕಂಡಿರುವ ಕನಕದಾಸರು,

ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣ್ಣರೇನಯ್ಯಾ
ಆ ಶೌಂಡಿಲ್ಯ ಪರಾಶರ ಎನಿಪನು
ವೇಶ್ಯೆಯ ಪುತ್ರ ವಸಿಷ್ಠ ಮುನಿ
ದಾಸಿಯ ನಂದನ ನಾರದ ಎನ್ನಿಪನು
ಕಾಶ್ಯಪ ಪುತ್ರನ ಕುಲ ಪೇಳಿರಯ್ಯಾ॥

ಎಂದು ಕುಲದ ಮೈಲಿಗೆ ಪರ ಮಾತನಾಡುವವರ ವಿರುದ್ಧ ದಂಗೆ ಎದ್ದಿದ್ದಾರೆ. ಕುಲಗಳ ಬಗ್ಗೆ ಮಾತನಾಡುವವರು ಜನಾಂಗಗಳ ನಡುವೆ ತಪ್ಪು ಕಲ್ಪನೆಯನ್ನು ಬಿತ್ತರಿಸುತ್ತಾ, ಬಿರುಕೊಡೆದ ಮನಸ್ಸುಗಳನ್ನು ಸೃಷ್ಟಿಸಿ ಲಾಭವನ್ನು ಪಡೆಯುತ್ತಿದ್ದಾರೆ. ಇದರಿಂದ ಜಾತಿಜಾತಿಗಳ ನಡುವಿನ ತಿಕ್ಕಾಟದಿಂದ ಉಂಟಾಗುವ ಕ್ರೂರ ರೂಪವನ್ನು ಖಂಡಿಸುವ ದೇಸೀಯ ಚಳುವಳಿಗಾರನಾಗಿ ದಾಸರು ಕಂಡುಬರುತ್ತಾರೆ. ಅನ್ನಕ್ಕೂ ಬಟ್ಟೆಗೂ ಕೊರತೆ ಇರುವ ವರ್ಗಗಳು ಮುಂದೆ ಬಾರದ ಹಾಗೆ ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಿರುವ ಮೇಲು ವರ್ಗದವರ ಕರಿ ನೆರಳಿನಿಂದ ಹೊರ ಬರುವ ಹಂಬಲವನ್ನು ಕಠೋರವಾಗಿಯೇ ಧ್ವನಿಸಿದ್ದಾರೆ. ಇಂತಹ ಹೋರಾಟದಲ್ಲಿ; ಮೇಲ್ವರ್ಗದವರು ಜಾತಿ ನಿಂದನೆಗಾಗಿ ಬಳಸಿಕೊಳ್ಳುತ್ತಿದ್ದ ಪಶುವನ್ನೇ ನಿದರ್ಶನಕ್ಕಾಗಿ ಎತ್ತಿಕೊಂಡು ಈ ಭೂಮಿಯ ಮೇಲಿನ ಮೇಲ್ವರ್ಗದವರೆಂದು ಕರೆದುಕೊಂಡಿರುವವರೂ ಹಸುವಿನ ಮಾಂಸದಿಂದ ಉತ್ಪತ್ತಿಯಾಗುವ ಹಾಲನ್ನೇ ಕುಡಿಯುತ್ತಿರುವುದರಿಂದ, ಇವರು ಯಾವ ಕುಲವೆಂದು? ದಾಸರು ಪ್ರಶ್ನಿಸುತ್ತಾರೆ. ದಾಸರು ಇಂತಹ ಸಂಕೇತಗಳ ಮೂಲಕವೇ ಜಾತಿನಿಂದಕರನ್ನು ಬಡಿಯುತ್ತಾರೆ. ಅಂದಿನ ಸಮಾಜದಲ್ಲಿಯೂ ಹಾಲು ಮುಖ್ಯ ಆಹಾರವಾಗಿದ್ದು ಹಸುಗಳನ್ನು ಹಾಲಿಗಾಗಿ ಮತ್ತು ಮಾಂಸಕ್ಕಾಗಿ ಸಾಕುವ ಪಶುಪಾಲನಾ ವೃತ್ತಿ ಹೆಚ್ಚಾಗಿತ್ತೆಂದು ಕಾಣುತ್ತದೆ. ಹಾಗಾಗಿಯೇ ಕನಕದಾಸರು ಗೋವನ್ನು ತಮ್ಮ ಕೀರ್ತನೆಯಲ್ಲಿ ಬಳಸಿಕೊಳ್ಳುತ್ತಾರೆ.

ಜೊತೆಗೆ ಸಮಾಜದಲ್ಲಿದ್ದ ಜಾತೀಯತೆಯನ್ನು ಹೊಡೆದೋಡಿಸಲು ಇಂತಹ ಪ್ರತಿರೋಧಗಳು ವಚನ ಯುಗದಿಂದಲೂ ಕಾಣಬರುತ್ತಿದ್ದು ಅಂಬಿಗರ ಚೌಡಯ್ಯನ ವಚನ ಒಂದರಲ್ಲಿ,

ಕುರಿ ಕೋಳಿ ಕಿರು ಮೀನ ತಿಂಬುವರ
ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬವರ
ಊರಿಂದ ಹೊರಗಿರು ಎಂಬರು [೨]

ಎಂದು ಜಾತಿನಿಂದನೆಯ ವಿರುದ್ಧ ಮಾತನಾಡಿದ್ದಾರೆ. ಇಲ್ಲಿಯೂ ಕುರಿ ಕೋಳಿ ಮೀನುಗಳ ಉದಾಹರಣೆಗಳನ್ನೇ ಅಂಬಿಗರ ಚೌಡಯ್ಯನು ನೀಡುತ್ತಿರುವುದು, ಹಾಗೂ ಬಸವಣ್ಣನವರು ವಚನವೊಂದರಲ್ಲಿ 'ಕೊಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ' ಎಂದು ಹೇಳಿರುವುದು, ಹನ್ನೆರಡನೆಯ ಶತಮಾನದಲ್ಲಿ ಹಸು ಕುರಿ ಕೋಳಿ ಹಾಗೂ ಮೀನುಗಾರಿಕೆಯನ್ನು ಒಳಗೊಂಡ ವೃತ್ತಿಯು ಜನಜನಿತವಾಗಿದ್ದುದನ್ನು ನಿರೂಪಿಸುತ್ತದೆ. ಹಾಗಾಗಿ ಹಾಲು ಮಾಂಸ ಮೊಟ್ಟೆಗಾಗಿ ಪ್ರಾಣಿಗಳನ್ನು ಸಾಕುತ್ತಿದ್ದ ಜನಸಮುದಾಯ ಈ ಕಾಲಘಟ್ಟದಲ್ಲಿ ಹೇರಳವಾಗಿ ಇದ್ದಿತೆಂದೇ ಹೇಳಬಹುದು. ಜೊತೆಗೆ ಅಲ್ಲಮಪ್ರಭುಗಳು ತಮ್ಮ ಒಂದು ವಚನದಲ್ಲಿ ಗುರು–ಶಿಷ್ಯ, ಗಂಡ–ಹೆಂಡತಿ, ದೈವ–ಭಕ್ತ ಇವರ ನಡುವಿನ ಸಂಬಂಧವನ್ನು ಕುರಿತು ಪ್ರಸ್ತಾಪಿಸುವಾಗ,

'ಅತ್ತಲಿಂದ ಒಂದು ಪಶುವು ಬಂದು,
ಇತ್ತಲಿಂದ ಒಂದು ಪಶುವು ಬಂದು,
ಒಂದರ ಮೋರೆಯನೊಂದು ಮೂಸಿ ನೋಡಿದಂತೆ
ಗುರುವು ಗುರುವಿನೊಳಗೆ ಸಂಬಂಧವಿಲ್ಲ,
ಶಿಷ್ಯರು ಶಿಷ್ಯರೊಳಗೆ ಸಂಬಂಧವಿಲ್ಲ
ಭಕ್ತರಲಿ ಭಕ್ತರಲಿ ಸಂಬಂಧವಿಲ್ಲ.
ಈ ಕಲಿಯುಗದೊಳಗುಪದೇಶವ ಮಾಡುವ ಹಂದಿಗಳಿರಾ ನೀವು ಕೇಳಿರೋ,
---------------------
ಈ ಭೇದವನರಿದು ಕಾರಣವ ಮಾಡುವ ಗುರುಶಿಷ್ಯ ಸಂಬಂಧವೆಲ್ಲ
ಉರಿ ಕರ್ಪೂರ ಸಂಯೋಗದಂತಹುದು ಕಾಣಾ ಗುಹೇಶ್ವರಾ.[೩]

ಎನ್ನುವ ವಚನದಲ್ಲಿ, ಪಶುಗಳು ಕೇವಲ ಒಂದರ ಮೋರೆಯನೊಂದು ಮೂಸಿ ನೋಡಿದರಾಗಲಿ ಅಥವಾ ಹಂದಿಯಂತಿದ್ದು ಕೇವಲ ಉಪದೇಶ ನೀಡುವ ವರ್ಗದವರಿಂದಗಲೀ ಯಾವುದೇ ಪ್ರಯೋಜನವಿಲ್ಲ. ಹಾಗಾಗಿ ಮನುಷ್ಯನ ಈ ಸಂಬಂಧಗಳು ಉರಿ ಮತ್ತು ಕರ್ಪೂರದ ಸಂಯೋಗದಂತಿರಬೇಕೆಂದು ಪ್ರಭುಗಳು ಹೇಳುತ್ತಾರೆ. 'ತುಂಬದ ಕೆರೆಗೆ ಮೇಯಾಕ ಬಂದವು ಮೂರು ಎಮ್ಮಿ, ಎರಡು ಗೊಡ್ಡು ಒಂದು ಕಂದು ಹಾಕಿ ಕರುವೆ ಇಲ್ಲ' ಎನ್ನುವಂತಹ ಕನಕದಾಸರ ಮುಂಡಿಗೆಗಳಲ್ಲಿಯೂ ಪಶುಪಾಲನಾ ಸಂಸ್ಕೃತಿಯ ಚಹರೆಗಳನ್ನು ಗುರುತಿಸಬಹುದು.

ಹಾಗಾಗಿ ವಚನ ಮತ್ತು ದಾಸಯುಗದಲ್ಲಿ ಜಾತಿ ನಿರ್ನಾಮದ ಜೊತೆಗೆ ಸಮಾಜಮುಖಿ ಚಿಂತನೆಗಳಿಗೆ ಬಳಸಿಕೊಂಡ ದೃಷ್ಟಾಂತಗಳು ಜನಸಾಮಾನ್ಯರ ಅನುಭವದಲ್ಲಿ ಇದ್ದಂತಹವುಗಳನ್ನೇ ತಮ್ಮ ಪರಿಣಾಮಕಾರಿ ಹೋರಾಟಕ್ಕೆ ಸಂಕೇತಗಳಾಗಿ ಬಳಸಿಕೊಳ್ಳಲು ಕಾರಣವಾಯಿತು. ಈ ಹೋರಾಟಗಳು ಬೇರೆ ಬೇರೆ ಹಂತಗಳಲ್ಲಿ ಸಮಾಜದಿಂದ ಸಮಾಜಕ್ಕೆ ಹರಿದು ಬಂದಿದ್ದು, ಕರ್ನಾಟಕದ ಮಧ್ಯಕಾಲೀನ ಸಂದರ್ಭವನ್ನು ಸಂಪೂರ್ಣವಾಗಿ ಪ್ರಭಾವಿಸಿತ್ತು ಎಂದು ಹೇಳಬಹುದು.

**ಭಕ್ತಿ ಪಂಥ:**

ಭಕ್ತಿಪಂಥದ ಉದಯ ಮತ್ತು ಬೆಳವಣಿಗೆ, ಮಧ್ಯಕಾಲೀನ ಭಾರತದ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಈ ಚಳುವಳಿಯು ಹಲವಾರು ಶತಮಾನಗಳ ಕಾಲ ತನ್ನ ಪ್ರಭಾವವನ್ನು ಸಮಾಜದ ಮೇಲೆ ಬೀರಿತು. 'ಭಕ್ತಿ' ಎಂದರೆ ದೇವರಿಗೆ ಸಮರ್ಪಿಸಿಕೊಳ್ಳುವುದು. ಅಂದರೆ ಭಗವಂತನಲ್ಲಿ; ಅಚಲವಾದ ನಂಬಿಕೆ ಮತ್ತು ಪರಿಶುದ್ಧ ಪ್ರೇಮದಿಂದ ಧ್ಯಾನಾಸಕ್ತನಾಗುವುದು. ಭಕ್ತಿ ಪಂಥದ ತತ್ವಗಳು ಹೊಸ ರೂಪಗಳಂತೇನೂ ಕಂಡು ಬರದೆ, ಇವೆಲ್ಲವೂ ಪ್ರಾಚೀನ ಭಾರತದ ತತ್ವ ಮತ್ತು ಜ್ಞಾನ ಕುರಿತ ಚಿಂತನೆ ಹಾಗೂ ಗ್ರಂಥಗಳಲ್ಲಿ ಕಂಡುಬರುತ್ತವೆ.

ಭಾರತೀಯ ಸಮಾಜದಲ್ಲಿದ್ದ ಜಾತಿಪದ್ಧತಿ, ವರ್ಣವ್ಯವಸ್ಥೆ, ಧಾರ್ಮಿಕ ನಂಬಿಕೆಗಳಂತೆ ಕಂಡುಬರುವ ವಿಗ್ರಹಾರಾಧನೆ, ಪೂಜೆ, ಮೂಢನಂಬಿಕೆಗಳು, ಯಜ್ಞಯಾಗಾದಿಗಳಲ್ಲಿ ಸುಧಾರಣೆಯನ್ನು ತರುವಲ್ಲಿ ಭಕ್ತಿ ಪಂಥ ಹಾಗೂ ಇಲ್ಲಿನ ಸುಧಾರಕರು ಪ್ರಮುಖ ಪಾತ್ರ ವಹಿಸುತ್ತಾರೆ. ಈ ಭಕ್ತಿ ಪಂಥದ ಪ್ರಮುಖ ಸುಧಾರಕರಾಗಿ ರಮಾನಂದರು, ಕಬೀರರು, ದೀನದಯಾಳರು, ಚೈತನ್ಯರು, ಮೀರಾಬಾಯಿ, ತುಳಸೀದಾಸರು, ಗುರುನಾನಕರು, ಶಂಕರದೇವ, ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಮುಂತಾದವರು ಕಂಡುಬರುತ್ತಾರೆ. ಇವರೆಲ್ಲರೂ ಹಿಂದೂ ಧರ್ಮದಲ್ಲಿದ್ದ, ಸನಾತನ ಪರಂಪರೆಯನ್ನು ತಮ್ಮ ತಮ್ಮ ದೃಷ್ಟಿಯಲ್ಲಿ ವ್ಯಾಖ್ಯಾನಿಸಿದ್ದರ ಫಲವೇ 'ಭಕ್ತಿಪಂಥ' ಉದಯವಾಗಲು ಕಾರಣವಾಯಿತು.

ಈ ಎಲ್ಲಾ ಸುಧಾರಕರು, ಕೂಡ ಆಡಂಬರದ ಕುರುಡು ಭಕ್ತಿಯನ್ನು ವಿಶ್ಲೇಷಿಸುತ್ತಾ, ಏಕಾಗ್ರತೆಯ ಭಕ್ತಿ ಶ್ರೇಷ್ಠವೆಂದು ಸಾರಿದರು. ರಾಮ ಮತ್ತು ಕೃಷ್ಣ ಪಂಥಗಳನ್ನು ಈ ಸುಧಾರಕರು ಹೊಸದಾಗಿ ಹುಟ್ಟುಹಾಕಿದರು. 'ವಿಶ್ವಭಾತೃತ್ವ' ಎಂಬ ಮೌಲ್ಯವನ್ನು ಆಚರಣೆಯಲ್ಲಿ ತರುವ ಮೂಲಕ ಗೊಡ್ಡು ಸಂಪ್ರದಾಯಗಳನ್ನು ಖಂಡಿಸಿದರು. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ; ಕುರುಡು ಭಕ್ತಿ ಮತ್ತು ಗೊಡ್ಡು ಸಂಪ್ರದಾಯ ಆಚರಣೆಗಳಲ್ಲಿ ತೊಡಗಿದ್ದವರು; ದುಡಿವ ಕುಶಲಕರ್ಮಿ ಹಾಗೂ ರೈತಾಪಿ ಸಮುದಾಯದ ಜನರೇ. ಅಂದರೆ

ಕಮ್ಮಾರರು, ಚಮ್ಮಾರರು, ಗಾಣಿಗರು, ನೇಕಾರರು, ಮಡಿವಾಳರು, ಪಶುಪಾಲಕರು ಮತ್ತು ಹೊಲಗಳಲ್ಲಿ ದಿನವಿಡೀ ಕೆಲಸಮಾಡುವ ರೈತರು. ಇವರೆಲ್ಲಾ ಪ್ರಭುತ್ವ ಮತ್ತು ಪುರೋಹಿತ ವರ್ಗದವರು ಹೇಳಿದಂತೆ ಕೇಳುವ ತಳಸಮುದಾಯಕ್ಕೆ ಸೇರಿದವರಾಗಿದ್ದು ಕಡು ಬಡವರೂ ಆಗಿದ್ದರು. ಅಕ್ಷರ ಬಲ್ಲ ಮೇಲ್ವರ್ಗದವರು ಇವರನ್ನು ತಮ್ಮ ಗುಲಾಮರಂತೆ ನಡೆಸಿಕೊಂಡು ಶೂದ್ರರನ್ನಾಗಿಸಿದರು. ಇದು ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತವನ್ನು ಗಾಢವಾಗಿ ಪ್ರಭಾವಿಸಿತ್ತು.

ಜೊತೆಗೆ ನಿರಂತರವಾದ ವಿದೇಶಿಯರ ಧಾಳಿ ಮತ್ತು ಆಕ್ರಮಣಕಾರಿ ಆಡಳಿತ ಹಾಗೂ ಇಲ್ಲಿನ ರಾಜ ಮತ್ತು ಮೇಲ್ವರ್ಗದವರ ಶೋಷಣೆಯಿಂದ ಮಧ್ಯಯುಗದ ಈ ಸಾಮಾನ್ಯ ಜನರು ಅನುಭವಿಸುತ್ತಿದ್ದ ಹಾಗೂ ಆಚರಿಸುತ್ತಿದ್ದ; ಸತಿಪದ್ಧತಿ, ಬಾಲ್ಯವಿವಾಹ, ಮೂಢನಂಬಿಕೆ, ದೇವಾಲಯ ನಿಷೇಧ, ವಿಗ್ರಹಾರಾಧನೆ, ಪ್ರಾಣಿಬಲಿ, ಬೆತ್ತಲೆಪೂಜೆ, ಉಪವಾಸ, ಜಾತೀಯತೆ, ಬಹುದೇವತಾರಾಧನೆ, ವರ್ಣವ್ಯವಸ್ಥೆ, ವರ್ಗವ್ಯವಸ್ಥೆ, ಮಹಿಳಾಶೋಷಣೆ, ತಾರತಮ್ಯ, ಧರ್ಮಭೇದ, ಯಜ್ಞಯಾಗಗಳ ಪರಿಕಲ್ಪನೆ, ಮಾಂಸಾಹಾರ, ಮಧ್ಯಸೇವನೆ, ಪರ್ದಾಪದ್ಧತಿ ಮುಂತಾದ ಅನಿಷ್ಠ ಪಿಡುಗುಗಳಿಂದಾಗಿ ಇವರ ಬದುಕು ಮತ್ತಷ್ಟು ಶೋಷಣೀಯವಾಗಿತ್ತು. ಈ ರೀತಿಯಿದ್ದ ಕೆಳವರ್ಗದವರ ದುಸ್ಥಿತಿ ಮುಂದೆ ಬಂದ ಕನಕದಾಸರ ಕಾಲದಲ್ಲೇನು ಬದಲಾಗಿರಲಿಲ್ಲ. ಏಕೆಂದರೆ ಕನಕದಾಸರು ಧಾರ್ಮಿಕವಾಗಿ ಒಂದು ಸಂಕರ ಸಂಸ್ಕೃತಿಯ ನಡುವೆ ಬಾಳಿ ಬದುಕಿದವರು. ಸ್ವತಃ ಅವರ ಕಾರ್ಯ ಕ್ಷೇತ್ರವಾದ ಕಾಗಿನೆಲೆಯೇ ಇದಕ್ಕೆ ಬಹುದೊಡ್ಡ ದಾಖಲೆ. ಕಾಗಿನೆಲೆಯಲ್ಲಿರುವ ಶೈವ ದೇವಸ್ಥಾನಗಳು, ವೈಷ್ಣವ ದೇವಾಲಯಗಳು, ಮಸೀದಿಗಳು ಮೇಲಿನ ಮಾತುಗಳಿಗೆ ಸ್ಪಷ್ಟೀಕರಣ ನೀಡುತ್ತವೆ. ಕನಕದಾಸರ ತಂದೆ ಬೀರಪ್ಪ ಗೌಡನು ವಿಜಯನಗರ ಸಾಂಮಂತರಲ್ಲಿ ಒಬ್ಬನಾಗಿದ್ದು, ಮೂಲ ಶೈವ ಧರ್ಮದ ದೇವರಾದ ಬೀರಪ್ಪದೇವರ ಒಕ್ಕಲಾಗಿದ್ದನು. ಹಾಗಾಗಿ ಶೈವ ಧರ್ಮದ ಮೂಲದಿಂದ ಬಂದ ಕನಕದಾಸರು ಮುಂದೆ ಡೊಳ್ಳಿನ ಪದಗಳೂ, ಶಿವಪರವಾದ ರಚನೆಗಳನ್ನೂ ಮಾಡಲು ಕಾರಣವಾಯಿತೆಂಬುದನ್ನು ಮುಂದೆ ಚರ್ಚಿಸಲಾಗಿದೆ.

ಕಾಗಿನೆಲೆಯ ಶಿವ ಸಂಬಂಧಿ ದೇವರುಗಳಾದ ಮಲ್ಲೇಶ್ವರ, ವೀರಭದ್ರ, ಭೈರವ ದೇವಸ್ಥಾನಗಳಿಂದಾಗಿ ಕನಕದಾಸರ ಕಾಲದಲ್ಲಿ ಶೈವಾರಾಧನೆ ಇದ್ದಿತೆಂದು ದಾಖಲೆಗಳು ಹೇಳುತ್ತವೆ. ಆದರೆ ಅಂದು ವಿಜಯನಗರದ ಅರಸರ ಕಾಲಕ್ಕೆ ಶೈವೀಕರಣ ವೈಷ್ಣವೀಕರಣಗಳು ಸಂಕರಗೊಳ್ಳುತ್ತಿದ್ದವೆಂದೇ ಹೇಳಬಹುದು. ಆದ್ದರಿಂದ ಮೂಲ ಶೈವಾರಾಧಕರಾದ ಈ ಜನಸಾಮಾನ್ಯರು ಮೇಲ್ವರ್ಗದವರೆನಿಸಿಕೊಂಡ ವೈಷ್ಣವರ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು. ಇದು ಆ ಕಾಲದ ಬಹು ದೊಡ್ಡ ಧರ್ಮ ಭೇದವಾಗಿ ಬೆಳೆಯತೊಡಗಿದ್ದು ವಿಪರ್ಯಾಸವೇ ಸರಿ.

ಹೀಗಿದ್ದರೂ ಕನಕದಾಸರು ತಮ್ಮ ಮೂಲ ಸಮುದಾಯದ ಶೈವ ಧರ್ಮದ ಶಿವನನ್ನು ಮರೆಯುವುದಿಲ್ಲ. ಮೋಹನ ತರಂಗಿಣಿ ಕಾವ್ಯದಲ್ಲಿ ಶಿವ ಪ್ರಸ್ತಾಪವಾದಾಗಲೆಲ್ಲಾ ಶಿವ ಭಕ್ತಿಯನ್ನು ಮೈದುಂಬಿಸಿಕೊಳ್ಳುತ್ತಾರೆ. ಬಾಣಾಸುರನ ಶಿವಪೂಜೆ; ಉಷೆ, ಚಿತ್ರಲೇಖೆಯರ ಶಿವಪೂಜೆ; ನಳಚರಿತ್ರೆಯಲ್ಲೂ ಶಿವನ ಪ್ರಸ್ತಾಪ ಪುನರಾವರ್ತನೆ ಗೊಳ್ಳುತ್ತದೆ. ಹಾಗಾಗಿ ಕನಕದಾಸರು; ಭಕ್ತಿ ಸುಧಾರಕರ ಪ್ರಭಾವವೂ ಸೇರಿದಂತೆ; ದ್ವೈತ, ವಿಶಿಷ್ಟಾದ್ವೈತ ತತ್ವಗಳಿಗೆ ಮಾರು ಹೋಗಿದ್ದರೂ ಶೈವವನ್ನು ಮರೆತಿರಲಿಲ್ಲ.

ಕರ್ನಾಟಕದ ಮಧ್ಯಕಾಲೀನ ಯುಗದ ಧಾರ್ಮಿಕ ಪರಿಸ್ಥಿತಿ ಇಂತಹ ಸಂದಿಗ್ಧತೆಯಲ್ಲಿಯೇ ಇದ್ದು, ಸಂಗಮ ವಂಶದ ಆಳ್ವಿಕೆಯಲ್ಲಿ ಜೈನರಿಗೂ ವೈಷ್ಣವರಿಗೂ ಆದ ಘರ್ಷಣೆಯನ್ನು ಬುಕ್ಕರಾಯನು ತಪ್ಪಿಸಿದ್ದು ಒಂದು ಐತಿಹಾಸಿಕ ಘಟನೆ. ನಂತರ ಬಂದ ರಾಜರುಗಳಾದ ವಿರೂಪಾಕ್ಷ ಮತ್ತು ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವ ಧರ್ಮ, ಪ್ರಭುತ್ವದ ಆಶ್ರಯವನ್ನು ಪಡೆದು ಕನಕದಾಸರ ಕಾಲಕ್ಕೆ ಮುಖ್ಯ ಧರ್ಮವಾಯಿತು.[೪]

ಮುಂದೆ ಕೃಷ್ಣದೇವರಾಯನು ಎಲ್ಲಾ ಧರ್ಮದವರನ್ನು ಸಮಾನ ಗೌರವದಿಂದ ಕಾಣುತ್ತಿದ್ದರೂ, ವೈಷ್ಣವಧರ್ಮ ಹೆಚ್ಚು ಬೆಳೆಯಲು ಕಾರಣ; ಬ್ರಾಹ್ಮಣೇತರ ಕೆಳಜಾತಿಯವರಿಗೆ ಮೇಲ್ವರ್ಗದವರು ವೈಷ್ಣವದೀಕ್ಷೆ ನೀಡುವುದರ ಮೂಲಕ ಜನಸಾಮಾನ್ಯರನ್ನು ಭಕ್ತಿಮಾರ್ಗದತ್ತ ಆಕರ್ಷಿಸಿದ್ದು ಎನ್ನಬಹುದು. ಆರಂಭಿಕ ಹಂತದಲ್ಲಿ ವೈಷ್ಣವರಾದವರೆಲ್ಲರೂ ಕೆಳಮಟ್ಟದ ಜಾತಿಗೆ ಸೇರಿದವರೇ ಆಗಿದ್ದರು. ಮೇಲಾಗಿ ಕೃಷ್ಣದೇವರಾಯನೂ ಕೂಡ ಕೆಳ ಜಾತಿಯ ಒಡೆಯರ ಕುಲದವನೇ ಆಗಿದ್ದರಿಂದ, ಹೂಗಾರ ಜಾತಿಯವರಾದ ರಾಮಾನುಜರಂತಹ ವ್ಯಕ್ತಿಗೆ ಮತ್ತು ಅವರ ಮತಕ್ಕೆ ಮಹತ್ವ ನೀಡಿದನು.[೪]

ಹಾಗಾಗಿಯೇ ಇಂದಿಗೂ ಕರ್ನಾಟಕದಲ್ಲಿ ಬೇಡ, ಬೋವಿ, ನೇಕಾರ, ಕುರುಬ ಮುಂತಾದ ಕೆಳ ಸಮುದಾಯದವರು ನಾಮಧಾರಿಗಳಾಗಿಯೇ ಕಂಡು ಬರುತ್ತಾರೆ. ಅನೇಕರು ತಿರುಪತಿಯ ತಿಮ್ಮಪ್ಪನಿಗೂ ಒಕ್ಕಲಾಗಿದ್ದಾರೆ. ಕೆಲವರಂತೂ ಸಸ್ಯಹಾರಿಗಳಾಗಿಯೇ ಉಳಿದುಕೊಂಡಿದ್ದಾರೆ. ಈ ಪ್ರಭಾವವನ್ನು ಕಾಗಿನೆಲೆ ಪರಿಸರದಲ್ಲೂ ಕಾಣುತ್ತೇವೆ. ಇದು ಕನಕದಾಸರ ಕಾಲಕ್ಕೆ ಶ್ರೀ ವೈಷ್ಣವ ಧರ್ಮ ಮತ್ತಷ್ಟು ವ್ಯಾಪ್ತಿಯನ್ನು ಪಡೆದುಕೊಂಡಿತು. ಇಲ್ಲಿ ವೈಷ್ಣವ ಧರ್ಮದ ವಿಷ್ಣುವಿನ ಕಲ್ಪನೆಗೆ ಹೈನುಗಾರ(ಗೌಳಿ) ಕುರುಬರೇ ಕಾರಣಕರ್ತರು ಎಂಬ ಸತ್ಯವನ್ನು ಈ ಅಧ್ಯಯನವು ಚರ್ಚಿಸಿದೆ. ಕಟ್ಟೆ ಶೇಷಾಚಾರ್ಯರ ಪ್ರಕಾರ ಕನಕದಾಸರು ಶ್ರೀ ವೈಷ್ಣವ ಸಂಪ್ರದಾಯದವರು. ರಾಮಾನುಜರಿಂದ ಶ್ರೀ ವೈಷ್ಣವ ತತ್ವಗಳನ್ನು ಸ್ವೀಕರಿಸಿ

'ರಾಮಾನುಜರೇ ನಮೋ ನಮೋ ಸ್ವಾಮಿ ಲಕ್ಷಣ ರೂಪ ನಮೋ ನಮೋ' ಎಂದು ತಮ್ಮ ಗುರುಗಳನ್ನು ಕೊಂಡಾಡಿದ್ದಾರೆ. ಇಂತಹ ವೈಷ್ಣವ ಮತ್ತು ಶೈವ ಆಚರಣೆಯ ವೈರುಧ್ಯಗಳಿಂದೇನು ಕನಕದಾಸರು ಮುಕ್ತರಾಗಿಲ್ಲದಿರುವುದು ನಮ್ಮನ್ನು ಕಾಡುತ್ತಿರುವ ಬಹು ದೊಡ್ಡ ಜಿಜ್ಞಾಸೆಯಾಗಿ ಉಳಿದುಕೊಂಡೇ ಬಂದಿದೆ.

ಆದರೂ ಅಂದಿನ ಸಮಾಜದಲ್ಲಿದ್ದ ಉತ್ಪಾದಕ ಸಮುದಾಯದವರಾದ ಈ ಕೆಳವರ್ಗದವರ ಬದುಕು, ಆಚರಣೆ, ಸಂಪ್ರದಾಯಗಳನ್ನು ಒಳಗೊಂಡ ಇಂತಹ ಪಿಡುಗುಗಳನ್ನು ಸುಧಾರಿಸಲು ಭಕ್ತಿಪಂಥದ ಎಲ್ಲಾ ಸುಧಾರಕರು ಪ್ರಯತ್ನಿಸಿದರು.

ಮೊದಲಿಗೆ ಜನಸಾಮಾನ್ಯರ ಮಧ್ಯದಲ್ಲಿಯೇ ಇದ್ದು ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಬೋಧನೆಯನ್ನು ಈ ಸುಧಾರಕರು ಆರಂಭಿಸಿದರು. ಜಾತಿಪದ್ಧತಿಯ ವಿರೋಧದ ಮೂಲಕ ಮಾನವನಿಗೆ ಸಾಮಾಜಿಕ ಅಂತಸ್ತಿನ ಮೇಲೆ ಗೌರವ ಸ್ಥಾನಮಾನಗಳನ್ನು ಕೊಡುವುದಕ್ಕೆ ಬದಲಾಗಿ ಅವನ ಭಕ್ತಿಗೆ ಗೌರವ ಕೊಡಬೇಕೆಂದು ಪ್ರಚಾರ ಮಾಡಿದರು. ವಿಗ್ರಹಾರಾಧನೆಯನ್ನು ಕಟುವಾಗಿ ಟೀಕಿಸಿದರು. ದೇವರು ನಿರಾಕಾರ; ಅವನಿಗೆ ಯಾವುದೇ ಆಕಾರವಿಲ್ಲ. ಆತನಿಗೆ ಮಾನವನ ರೂಪದಲ್ಲಿ ಅವತಾರಗಳನ್ನು ಕೊಟ್ಟು ಪೂಜಿಸಬಾರದು ಎಂದು ಹೇಳಿದರು. ಈ ಮೂಲಕ ಏಕ ದೇವತಾರಾಧನೆಯನ್ನು ಪುನರುದ್ಧಾರಗೊಳಿಸಿದರು. ಧರ್ಮ ಭೇದವನ್ನು ತಡೆಯಲು; ಧರ್ಮ ಎಂಬುದು ಕೇವಲ ಶಬ್ದಗಳಿಂದಾದುದಲ್ಲ, ಅದೊಂದು ಅಖಂಡವಾದ ಪ್ರೀತಿ ಎಂದು ಸಾರಿದರು. ಮದ್ಯಪಾನ, ಧೂಮಪಾನದ ದುಶ್ಚಟಗಳಿಂದಾಗುವ ಪರಿಣಾಮಗಳ ಬಗ್ಗೆ ಜನಸಾಮಾನ್ಯರಿಗೆ ತಿಳಿ ಹೇಳಿದರು. ಅಹಿಂಸೆ, ಹೃದಯವೈಶಾಲ್ಯತೆ, ಔದಾರ್ಯ, ಮತ್ತು ಪರಿಶುದ್ಧತೆ ಎಂಬುದು ಬೇರೆಲ್ಲಿಯೂ ಇಲ್ಲ. ಇದು ನಾವೇ ತಂದುಕೊಳ್ಳಬೇಕಾದ್ದು. ಹಾಗಾಗಿ ಮೇಲ್ಜಾತಿಯೆನಿಸಿಕೊಂಡವರು ಶ್ರೇಷ್ಠರಂತೂ ಅಲ್ಲ, ಎಂದು ಈ ಚಿಂತಕರು ಸಾರಿದರು. ಜೊತೆಗೆ ಸ್ತ್ರೀ ಮತ್ತು ಪುರುಷರಿಬ್ಬರೂ ದೇವರ ಮುಂದೆ ಸಮಾನರು. ದೇವರು ಪ್ರತಿಯೊಬ್ಬರ ಹೃದಯದಲ್ಲಿಯೂ ನೆಲೆಸಿರುತ್ತಾನೆ. ಪ್ರೀತಿ ಮತ್ತು ಭಕ್ತಿಯ ಮೂಲಕ ಆತನಲ್ಲಿ ಲೀನವಾಗಬಹುದು ಎಂದು ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿಯೇ ಬೋಧಿಸಿದರು. ವಿಗ್ರಹಾರಾಧನೆ, ಜಾತೀಯತೆಗಳನ್ನು ಉಗ್ರವಾಗಿ ಖಂಡಿಸಿದರು. ಅನವಶ್ಯಕ ಯಜ್ಞಯಾಗಾದಿಗಳನ್ನು ಗೊಡ್ಡು ಸಂಪ್ರದಾಯಗಳನ್ನು ತೀವ್ರವಾಗಿ ವಿರೋಧಿಸಿದರು. ಸಂಸ್ಕೃತ ಭಾಷೆಯನ್ನು ಕಟುವಾಗಿ ವಿರೋಧಿಸತ್ತಾ ಇಲ್ಲಿ ಯಾರೂ ಹೆಚ್ಚು ಅಲ್ಲ ಕಡಿಮೆಯೂ ಅಲ್ಲ. ಎಲ್ಲಾ ಮಾನವರು ಸಮಾನರು ಎಂದು ಹೇಳಿದರು. ಉದಾತ್ತ ಚಿಂತನೆಗಳನ್ನು ಜನಸಾಮಾನ್ಯರಲ್ಲಿ ಬೆಳೆಸಲು ಪ್ರತಿಯೊಬ್ಬರನ್ನೂ ಶಿಷ್ಯರನ್ನಾಗಿ ನೇಮಿಸಿಕೊಂಡರು.

ಹೀಗೆ ಭಕ್ತಿ ಪಂಥದ ತೀವ್ರತೆಯು ದಕ್ಷಿಣ ಭಾರತದಲ್ಲಿ ಕಾಣಿಸಿಕೊಂಡು ಮಧ್ಯಕಾಲೀನ ಕರ್ನಾಟಕವನ್ನೂ ಪ್ರಭಾವಿಸಿತು.[೫] ಇದರ ಪರಿಣಾಮ ಕನಕದಾಸರು ಮತ್ತು ಅಂದಿನ ಸಮಾಜದ ಮೇಲೂ ಆಗಿರಬಹುದು. ಹಾಗಾಗಿ ಕರ್ನಾಟಕದಲ್ಲಿ ನೆಲೆಗೊಂಡ ಈ ಭಕ್ತಿ ಪಂಥವು ಮೂರು ನೆಲೆಗಳಲ್ಲಿ ತನ್ನ ವಿಸ್ತಾರವನ್ನು ಕಂಡುಕೊಂಡಿತು.[೬] ಇವುಗಳಲ್ಲಿ ಭಕ್ತಿ ಪಂಥಕ್ಕೆ ನೇರವಾಗಿ ಸಂಬಂಧಪಟ್ಟದ್ದು ಎರಡು ನೆಲೆಗಳು ಮಾತ್ರ. ಅಷ್ಟೊಂದು ಭಕ್ತಿ ಪಂಥಕ್ಕೆ ನಂಟನ್ನು ಬೆಳೆಸಿಕೊಳ್ಳದವರಂತೆ ಕನಕದಾಸರು ಕಂಡು ಬಂದರೂ, ಇವರನ್ನು ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಎಂಬ ಭಕ್ತಿ ಪಂಥ ಸುಧಾರಕರ ನೆಲೆಯಲ್ಲಿ ಗುರುತಿಸಲಾಗಿದೆ. ಮೊದಲು ವಿಶಿಷ್ಟಾದ್ವೈತದ ಅನುಯಾಯಿಗಳಾಗಿಯೋ, ವೈಷ್ಣವ ಅನುಯಾಯಿಗಳಾಗಿಯೋ, ಅಥವಾ ಮಾಧ್ವ ಮತದ ಅನುಯಾಯಿಗಳಾಗಿಯೋ ಇದ್ದಿರಬಹುದೆಂಬ ಪ್ರಶ್ನೆಗಳು ವಿದ್ವಾಂಸರನ್ನು ಕಾಡಿದೆ, ಎಂದು ಎಂ.ಎಂ. ಕಲಬುರ್ಗಿಯವರು ಹೇಳುತ್ತಾರೆ.[೭]

ಆದರೆ 'ಕನಕದಾಸರ ಮೇಲೆ ದಯಮಾಡಲು ವ್ಯಾಸಮುನಿ ಮಠಿಕರೆಲ್ಲರೂ ದೂರುತಿಹರೋ' ಎನ್ನುವ ಮಾತಿನಂತೆ, ವ್ಯಾಸರಾಯರಂತಹವರ ಸರ್ವಸಮತಾಭಾವದ ಉದಾರ ದೃಷ್ಟಿಯಿಂದಾಗಿ ಕೆಳ ಜಾತಿಯ ಕನಕದಾಸರಿಗೆ ಅವರ ಶಿಷ್ಯತ್ವ ದೊರೆತದ್ದು; ಸಹಜವಾಗಿಯೇ ಕಾವ್ಯಪ್ರತಿಭೆಯನ್ನು ಹೊಂದಿದ್ದ ಇವರಿಗೆ ಗುರುಕೃಪೆ ದೊರೆತ ಮೇಲೆ ತನ್ನ ಅನುಭವದ ಕೀರ್ತನೆಗಳನ್ನು ರಚಿಸಲು ಪ್ರೇರಣೆ ನೀಡಿತು. ಜೊತೆಗೆ ಈ ಎಲ್ಲಾ ಅನುಭವವನ್ನು ಜನಮನಕ್ಕೆ ಮುಟ್ಟಿಸಲು ಸಂಚಾರವನ್ನೂ ಕೈಗೊಂಡರು. ಜನಸಾಮಾನ್ಯರನ್ನು ಬಹಳವಾಗಿ ಕಾಡುತ್ತಿದ್ದ ಜಾತಿನಿಂದನೆಯನ್ನು ಕುರಿತು, 'ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?' ಎಂದು ಪ್ರಶ್ನಿಸುತ್ತಾರೆ. ಜನಸಾಮಾನ್ಯರು ಬಹುದೇವತಾರಾಧನೆಯೊಂದಿಗೆ ಒಡೆದು ಹಂಚಿ ಹೋಗಿರುವುದನ್ನು ಕಂಡು 'ಏಕನಾತಿ ಎಲ್ಲಮ್ಮ ಮಾರಿ ದುರ್ಗಿಯ ಚೌಡಿ ಅಕ್ಕರೆಯಿಂದಲಿ ಪೂಜೆ ಮಾಡಬೇಕೆ?'ಎಂದು ವಿರೋಧಿಸಿ 'ನಾವು ಕುರುಬರು ನಮ್ಮ ದ್ಯಾವರು ಬೀರಪ್ಪ' ಎನ್ನವುದರ ಮೂಲಕ ಏಕದೇವೋಪಾಸನೆಯೊಂದಿಗೆ ಅವರನ್ನೆಲ್ಲಾ ಒಟ್ಟಿಗೆ ತರಲು ಯತ್ನಿಸಿದ್ದಾರೆ. 'ತೀರ್ಥವನು ಪಿಡಿದವರೆಲ್ಲಾ ತಿರುನಾಮಧಾರಿಗಳೇ' ಎನ್ನುವ ಕೀರ್ತನೆಯಲ್ಲಿ ಆಡಂಬರದ ಪೂಜೆಯನ್ನು ಸಾರಸಗಟಾಗಿ ತಳ್ಳಿ ಹಾಕುತ್ತಾರೆ. ಬಡಾಯಿ ಬಡುಕರ ಡಾಂಭಿಕ ಭಕ್ತಿಯನ್ನು ತಿರಸ್ಕರಿಸಿ, 'ತನು ನಿನ್ನದು ಜೀವನ ನಿನ್ನದು, ರಂಗ ಅನುದಿನದಲಿ ಬಾಹೋ ಸುಖ ದುಃಖ ನಿನ್ನದಯ್ಯಾ' ಎಂದು ತಮ್ಮನ್ನು ಸಂಪೂರ್ಣವಾಗಿ ಭಗವಂತನಿಗೆ ಅರ್ಪಿಸಿಕೊಳ್ಳುವುದೇ ನಿಜವಾದ ಭಕ್ತಿಯೆಂಬುದನ್ನು ಅನುಭವಕ್ಕೆ ತಂದುಕೊಂಡ ಕನಕದಾಸರು ಶ್ರೀ ಸಾಮಾನ್ಯರ ಮುಗ್ಧ ಭಕ್ತಿಗೆ ಪ್ರೇರಣೆ ನೀಡುತ್ತಾರೆ. ಉಳ್ಳವರ ಉಪಟಳದಿಂದಾಗಿ ಹಸುವಿನಿಂದ ನರಳುತ್ತಿರುವ

ಸಾಮಾನ್ಯರನ್ನು ಕಂಡು 'ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ' ಎಂದು ಹಸಿದವರಿಗೆ, ನೊಂದವರಿಗೆ ಧೈರ್ಯ ತುಂಬುತ್ತಾರೆ. ಜನಸಾಮಾನ್ಯರ ಬದುಕನ್ನು ಹಸನುಗೊಳಿಸಲು ಕಾಲುದಾರಿಯಲ್ಲಿಯೇ ಊರು ಊರು ಅಲೆದು ಬೀದಿಬೀದಿ ತಿರುಗಿ ಕೇರಿಕೇರಿಯ 'ಮುತ್ತಾಗಿ' ಜ್ಞಾನದ ಅಡಿಗೆಯನ್ನು ಮಾಡಿ ಉಣಬಡಿಸುತ್ತಾರೆ. ಅರಿವಿನ ರಂಗನನು ಭಕ್ತರು ಕರೆಯೆ, ಅಲ್ಲಿ ಬಂದೊದಗುವನು ಇದಕೆ ಸಂಶಯ ಬೇಡವೆಂದು ದಾಸರು ದೃಢಪಡಿಸುತ್ತಾರೆ.

ಇನ್ನು ಕನಕದಾಸರು ತಮ್ಮ 'ರಾಮಧಾನ್ಯಚರಿತೆ'ಯಲ್ಲಿ ರಾಗಿ ಮತ್ತು ಭತ್ತಗಳ ನಡುವಿನ ತರತಮ ಜಗಳವನ್ನು ಅಂದಿನ ಸಮಾಜದಲ್ಲಿ ಮೇಲ್ವರ್ಗದವರು ಕೆಳಹಂತಸ್ತಿನ ಜನಸಾಮಾನ್ಯರಿಗೆ ನೀಡುತ್ತಿದ್ದ ಕಿರುಕುಳ ಮತ್ತು ತಾರತಮ್ಯವನ್ನು ಎದುರಿಸಲು ಬೇಕಾಗುವ ಗಟ್ಟಿ ಧ್ವನಿಯನ್ನು 'ರಾಗಿ'ಯ ಮೂಲಕ ತರಲೆತ್ನಿಸಿದ್ದಾರೆ. 'ದೀನ ನಾನು ಸಮಸ್ತ ಲೋಕಕೆ ದಾನಿ ನೀನು' ಎನ್ನುವ 'ಹರಿಭಕ್ತಿಸಾರ'ದ ಷಟ್ಪದಿಯ ಸಾಲುಗಳು ಸಹಜವಾಗಿ ಉಕ್ಕಿ ಹರಿಯುವ ಸಾಮಾನ್ಯನೊಬ್ಬನ ಶರಣಾಗತಿಯ ಭಕ್ತಿ ಪ್ರವಾಹದಂತೆ ಕಂಡು ಬಂದು ಕನಕದಾಸರು ತಮ್ಮ ಕಾಲದ ಜನಸಾಮಾನ್ಯರೊಂದಿಗೆ ಮಾಡಿಕೊಂಡಿದ್ದ ಅನುಸಂಧಾನವನ್ನು ದರ್ಶಿಸುವಂತಿದೆ.

ಆದರೆ ಕನಕದಾಸರು ಮಧ್ಯಕಾಲೀನ ಸಂದರ್ಭದಲ್ಲಿ 'ಅದ್ವೈತ' ಸಿದ್ಧಾಂತಕ್ಕೆ ಹೆಚ್ಚು ಸಂಬಂಧಪಟ್ಟವರಂತೆ ಕಂಡುಬಂದರೂ, ಅವರು ಕಡೆಯವರೆವಿಗೂ ಭಕ್ತಿ ಪಂಥದೊಂದಿಗೆ ಹೆಚ್ಚು ಸಂಪರ್ಕವನ್ನು ಪಡೆದುಕೊಳ್ಳಲೇ ಇಲ್ಲ. ಹರಿದಾಸ ಮತ್ತು ಭಕ್ತಿಪಂಥದೊಂದಿಗಿನ ಮಾಧ್ವ ಮತ್ತು ಶ್ರೀವೈಷ್ಣವ ಪಂಥಗಳನ್ನೂ ಜೋಡಿಸಿದರೂ, ಇಲ್ಲೆಲ್ಲಾ ಕನಕದಾಸರು ಯಾವ ನೆಲೆ ಕಂಡುಕೊಂಡಿದ್ದಾರೆ ಎಂಬ ಚಿಂತನೆಯನ್ನು ಹೆಚ್ಚು ಮಾಡಬೇಕಿರುವುದು ಇಂದಿನ ಅಗತ್ಯವೆಂದು 'ಬಂಜಗೆರೆ ಜಯಪ್ರಕಾಶ್' ಅವರು ಹೇಳುತ್ತಾರೆ[೮] ಏಕೆಂದರೆ ಅಂದು ಸಮಾಜವನ್ನು ಪ್ರಭಾವಿಸಲ್ಪಟ್ಟಿದ್ದ ಭಕ್ತಿ ಪಂಥದ ತತ್ವಗಳು ಸಮಾನತೆಯನ್ನು ತರಲೆತ್ನಿಸಿಯೂ ಕನಕದಾಸರು ಮತ್ತೆ ಗುಡಿ ಸಂಸ್ಕೃತಿಯ ನೆಲೆಯಲ್ಲೇ ನಿಂತಿದ್ದರ ವಿಚಾರವನ್ನು ಇನ್ನೂ ಚರ್ಚಿಸಬೇಕಾಗಿದೆ. ಹೀಗೆ ೧೨ ಮತ್ತು ೧೬ನೇ ಶತಮಾನದಲ್ಲಿನ ರಾಮಾನುಜಾಚಾರ್ಯರ ಪ್ರಭಾವದಿಂದ 'ವಿಶಿಷ್ಟಾದ್ವೈತ ಸಿದ್ಧಾಂತವೂ'; ಮಧ್ವಾಚಾರ್ಯರ ಪ್ರಭಾವದಿಂದ 'ದ್ವೈತ ಸಿದ್ಧಾಂತವೂ' ಹಾಗೂ ಉತ್ತರ ಭಾರತದ ಭಕ್ತಿ ಸುಧಾರಕರ ಪ್ರೇರಣೆ ಕನಕದಾಸರ ಮೇಲೆ ಪ್ರಭಾವ ಬೀರಿದರೂ, ಅವರ ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ ಹಾಗೂ ಕೀರ್ತನೆ, ಮುಂಡಿಗೆಗಳಲ್ಲಿ ಈ ಎಲ್ಲಾ ಒತ್ತಡಗಳ ಹೊರತಾಗಿಯೂ, ಕಡೆಯಲ್ಲಿ ಕನಕದಾಸರು ತತ್ವಾತೀತರಾಗಿಯೇ ಉಳಿದಿರುವುದನ್ನು ಇನ್ನೂ ಶೋಧಿಸಬೇಕಿದೆ.

**ಹರಿದಾಸ ಪರಂಪರೆ :**

ಮಾನವನ ಬದುಕಿನ ಸ್ವಾರಸ್ಯವನ್ನು ತಿಳಿಸುವ ಈ ಹರಿದಾಸ ಪರಂಪರೆಯು ಭಕ್ತಿ ಮಾರ್ಗವನ್ನು ನಂಬಿ, ಧರ್ಮತತ್ವಗಳ ಮೂಲಕ ಸಮಾಜದಲ್ಲಿ ನೀತಿಯುಕ್ತ ಬದುಕನ್ನು ಕಟ್ಟಿಕೊಡುವುದೇ ಈ ಪರಂಪರೆಯ ಮುಖ್ಯ ಉದ್ದೇಶ. ಹರಿದಾಸ ಪರಂಪರೆಯಲ್ಲಿ ಆನಂದತೀರ್ಥರು, ಶ್ರೀಪಾದರಾಯರು, ವ್ಯಾಸರಾಯರು, ಪುರಂದರದಾಸರು, ಗೋಪಾಲದಾಸರು, ವಿಜಯದಾಸರು, ಜಗನ್ನಾಥದಾಸರು, ವಾದಿರಾಜರು, ಮಹೀಪತಿದಾಸರು, ಕನಕದಾಸರೂ ಕೂಡ ಸೇರಿಕೊಳ್ಳುತ್ತಾರೆ.

ಮುಂದೆ ವ್ಯಾಸಕೂಟಕ್ಕೆ* ದಾಸಕೂಟದಿಂದ ಬಂದ ಕನಕದಾಸರ ಆಗಮನವು ಇಲ್ಲಿನವರನ್ನು ಹೆಚ್ಚು ಗೊಂದಲಕ್ಕೆ ಕಾರಣವಾಗುವಂತೆ ಪ್ರೇರಣೆನೀಡಿರಬೇಕು. ಹಾಗೂ ಶ್ರೇಣೀಕರಣದ ಕನಕದಾಸರಿಗೆ ಬಹುದೊಡ್ಡ ಸವಾಲು ಇಲ್ಲಿ ಎದುರಾಗಿರಬೇಕು. ಹಾಗಾಗಿಯೇ ದಾಸಪಂಥ ಕನಕದಾಸರಿಗೆ; ಕೊನೆಯವರೆಗೂ ಮಾಧ್ವಮತದ ದೀಕ್ಷೆಯನ್ನು ವ್ಯಾಸರಾಯರು ಮತ್ತು ಪುರಂದರದಾಸರ ಆಪ್ತರಾಗಿದ್ದಾಗ್ಯೂ ದೊರೆಯಲು ಅವಕಾಶ ಕಲ್ಪಿಸಲಿಲ್ಲ. ಅದರಿಂದಾಗಿಯೋ ಏನೋ, ಕನಕದಾಸರು ದ್ವೈತ, ಅದ್ವೈತ, ವಿಶಿಷ್ಟಾದ್ವೈತವೂ ಸೇರಿದಂತೆ ಕೆಳವರ್ಗದವರ ದೈವವಾದ ಬೀರಪ್ಪನನ್ನೂ ಒಳಗೊಳ್ಳುತ್ತಾ ವಿಭಿನ್ನರಾಗಿಯೇ ಉಳಿಯುತ್ತಾರೆ.

ಆದರೂ ಹರಿದಾಸ ಪರಂಪರೆಯು, ಶ್ರಮಿಕ ಜನಸಮುದಾಯಗಳ ಒಳಿತಿಗಾಗಿ ದುಡಿದಿದೆ. ಜನಸಾಮಾನ್ಯರ ನುಡಿಗಳಿಗೆ ಸಾಮಾಜಿಕ ಮಾನ್ಯತೆಯನ್ನು ತಂದುಕೊಟ್ಟಿದೆ. ಈ ಮೂಲಕ ಸಾಮಾಜಿಕ ವಿವೇಕವನ್ನು ಬೆಳೆಸಿ ಜನಸಾಮಾನ್ಯರಲ್ಲಿ ತಾಳ್ಮೆ ಮತ್ತು ಕೂಡಿಬಾಳುವುದನ್ನು ಕಲಿಸಿಕೊಟ್ಟಿದೆ. 'ತಾಳುವಿಕೆಗಿಂತ ತಪವು ಇಲ್ಲ, ಕೇಳ ಬಲ್ಲವರಿಗೆ ಹೇಳುವೆನು ಸೊಲ್ಲ' ಎಂದಿರುವ ಶ್ರೀ ವಾದಿರಾಜರು ತಮ್ಮ ಈ ಕೀರ್ತನೆಯಲ್ಲಿ ಸಮಾಜದ ಸಾಮಾನ್ಯ ವ್ಯಕ್ತಿಯು ತಾಳ್ಮೆ ತಂದುಕೊಳ್ಳಲೇ ಬೇಕಾದ ಸಂದರ್ಭಗಳನ್ನು ಹೇಳಿದ್ದಾರೆ. ಶೂದ್ರರೆನಿಸಿಕೊಂಡ ಸಾಮಾನ್ಯರು ಸದಾ ದುಷ್ಟರಾದ ಮೇಲ್ವರ್ಗದವರು ಹೇಳುವ ನಿಷ್ಠುರ ಮಾತುಗಳನ್ನು ಸಹನೆಯಿಂದಲೇ ಕೇಳಿಸಿಕೊಳ್ಳಬೇಕಾಗುತ್ತದೆ. ಇವರನ್ನು ಕೀಳು ಎಂದು ಹಂಗಿಸುವ ಹಗೆಗಳ ಮಾತನ್ನು ತಾಳಬೇಕಾಗುತ್ತದೆ.

---

* ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರು ವ್ಯಾಸಕೂಟ, ದಾಸಕೂಟಗಳನ್ನು ಹೀಗೆ ಅರ್ಥೈಸುತ್ತಾರೆ. ಜನಸಾಮಾನ್ಯರನ್ನು ಕುರಿತು ಜನಸಂಪರ್ಕದೊಂದಿಗೆ ಕನ್ನಡ ಪರ ಒಲವು ಹೊಂದಿದವರು ದಾಸಕೂಟದವರೆಂದೂ, ಜನಸಂಪರ್ಕಕ್ಕೆ ಬರದೇ ಗಂಭೀರ ಸ್ವಭಾವದವರಾಗಿ ಸಂಸ್ಕೃತ ಬಳಸುತ್ತಿದ್ದ ವಿದ್ವತ್ ವರ್ಗವೇ ವ್ಯಾಸಕೂಟದವರೆಂದೂ ಎಂದು ವರ್ಗಿಕರಿಸಿದ್ದಾರೆ. (ಕೃತಿ; ಹರಿದಾಸ ಪರಂಪರೆ)

ಉತ್ತಮರೆಂದು ಹೇಳಿಕೊಳ್ಳುವ ಮೇಲುಜಾತಿಯವರ ಕುಹಕದ ನುಡಿಯನ್ನು, ನಗುವನ್ನು ಈ ಶ್ರಮಿಕರು ಸಹಿಸಿಕೊಳ್ಳಬೇಕಿದೆ. ಹಾಗಾಗಿ 'ಪಕ್ಷೀಶ ಹಯವದನನನ್ನು ಶರಣೆಂದು ಬಾಳುವುದರಿಂದ ಸಾಮಾನ್ಯರ ಬದುಕು ಸಾಧಿತವಾಗುತ್ತದೆ' ಎಂದು ವಾದಿರಾಜರು ಹೇಳಿದ್ದಾರೆ. ಪುರಂದರದಾಸರಂತೂ ಜನಸಾಮಾನ್ಯರನ್ನು ಕರಿತು 'ಈಸ ಬೇಕು ಇದ್ದು ಜೈಸಬೇಕು' ಎಂದು ತಾಳ್ಮೆಯ ಮಾತನ್ನಾಡಿದ್ದಾರೆ. ಕನಕದಾಸರು 'ತಲ್ಲಣಿಸದಿರು ತಾಳು ಮನವೇ' ಎಂದು ಶ್ರೀಸಾಮಾನ್ಯನಿಗೆ ಬದುಕುವ ದಾರಿ ತೋರಿಸಿದ್ದಾರೆ.

ದಾಸಸಾಹಿತ್ಯದಲ್ಲಿ ನಿರಪೇಕ್ಷತೆಯನ್ನು ಹೇಳುವ ರಚನೆಗಳು ಕಡಿಮೆಯಿದ್ದರೂ ದಾಸಪರಂಪರೆಯ ಮಧ್ಯಯುಗೀನ ಕಾಲಘಟ್ಟದ ಊಳಿಗಶಾಹಿಯನ್ನು ಪ್ರತಿನಿಧಿಸುವಂತಹ ಕೆಲವು ರಚನೆಗಳನ್ನು ಕನಕದಾಸರಲ್ಲಿ ಕಾಣಬಹುದು.

ಕಲಿಯುಗದ ಮಹಿಮೆಯನು ಕಂಡಷ್ಟು ಪೇಳುವೆನು
ವಾವವರಸೆಯು ತಪ್ಪಿವರಿವರ್ಗವು ಹೆಚ್ಚಿ
ದೇವ ಬ್ರಾಹ್ಮಣ ಗುರುಹಿರಿಯರನು ಜರಿದು
ಕೇವಲಾದವರೆಲ್ಲ ಸಿರಿಮದದಿ ಸೊಕ್ಕಿದರು
ಕಾವರಾರ್ಯೆ ಸಾಧು ಸಜ್ಜನರೀಗ॥

ಇದೇ ರೀತಿ ಮತ್ತೊಂದು ಕಡೆ 'ವೇದವನೋದಬೇಕು ಮನದೊಳಗಿದ್ದ ಭೇದವ ಕಳೆಯಬೇಕು' ಎನ್ನುತ್ತಾರೆ. ಹೀಗೆ ಪುರಂದರದಾಸರಲ್ಲೂ ಉದಾಹರಣೆಗಳಿವೆ. ವಿಜಯದಾಸರ ಕೆಲವು ಪದ್ಯಗಳಲ್ಲಂತೂ ಮಧ್ಯಯುಗೀನ ಕ್ರೌರ್ಯ ನೈಜವಾಗಿ ಕಾಣುತ್ತದೆ.

ಮೃತಿಕ ಶೌಚದ ಗಂಧ ಪೋಗುವಂತೆ
ನಿತ್ಯದಲ್ಲಿ ಸ್ನಾನ ಮಾಡದೆ ಸುಮ್ಮನೆ
ತೊತ್ತು ಒಡತಿಯಾಗಿ ಮುಖವ ತೊಳೆಯದಿಪ್ಪ
ಕತ್ತೆ ಹೆಂಗಸರನು ಕಡಿದು ಕೊಲ್ಲಿರೊ ಎಂದು॥

ದಾಸ ಸಾಹಿತ್ಯದ ಇಂತಹ ಮಂಡನೆಗಳಿಂದ ಜನಸಾಮಾನ್ಯನ ಊಳಿಗ ಸ್ಥಿತಿಯ ಅರಿವು ನಮಗಾಗುತ್ತದೆ.

ಹಾಗಾದರೆ ಈ ಶ್ರೀಸಾಮಾನ್ಯನಾದರೂ ಯಾರು? ಅಂದಿನ ಸಮಾಜದಲ್ಲಿ ಓದಲು ಮತ್ತು ಬರೆಯಲು ಬಾರದ ಶ್ರಮಿಕ ಮತ್ತು ದುಡಿಯುವ ಕೆಳವರ್ಗದವರು ಅಂದು ಬರಿ ಕೇಳುವ ಪರಂಪರೆಯನ್ನೇ ರೂಢಿಸಿಕೊಂಡವರಾಗಿದ್ದರು. ಮಧ್ಯಯುಗದ

ಸಂದರ್ಭದಲ್ಲಿ ಎಲ್ಲಾ ರೀತಿಯ ಶೋಷಣೆಯನ್ನು ಅನುಭವಿಸುತ್ತಿದ್ದ ಈ ವರ್ಗದವರಿಗಾಗಿ ಹರಿದಾಸರು ತಮ್ಮ ವಿಚಾರಧಾರೆಗಳನ್ನು ತಲುಪಿಸಲು ಗೇಯತೆಯ ರೂಪದ ರಚನೆಗಳಲ್ಲಿ ತೊಡಗಿದರು. ಏಕೆಂದರೆ ಅಕ್ಷರ ಬಾರದ ಈ ದುಡಿವ ವರ್ಗದೊಂದಿಗೆ ದಾಸರು ಸಂವಾದ ಮಾಡಲು ಚಂಪುವಿನಂತಹ ಛಂದಸ್ಸು ಸಹಕರಿಸುತ್ತಿರಲಿಲ್ಲ. ಹಾಗೂ ವೈದಿಕರೆನಿಸಿಕೊಂಡವರ ಸಂಸ್ಕೃತ ಪ್ರಧಾನ ಭಾಷೆಯನ್ನು ವಿರೋಧಿಸುವುದೂ ಇಲ್ಲಿನ ಮೂಲ ಉದ್ದೇಶವಾಗಿತ್ತು. ಜೊತೆಗೆ ಕನ್ನಡದ ಪ್ರಜ್ಞೆಯೂ ಬೆಳೆಯಿತು. ಹಾಗಾಗಿಯೇ ಈ ಸಂದರ್ಭದಲ್ಲಿ ವಚನ, ಕೀರ್ತನೆ, ದ್ವಿಪದಿ, ತ್ರಿಪದಿಗಳಂತಹ ನೂತನವಾದ ಜನಭಾಷೆಯ ಸರಳ ಪ್ರಕಾರಗಳನ್ನು ಬಳಸಿಕೊಂಡರು. ನೊಂದ ಮತ್ತು ದುಡಿವ ವರ್ಗಗಳ ಜನರಿಗೆ ಆಧ್ಯಾತ್ಮ ಹಾಗೂ ಸಾಮಾಜಿಕ ಅಸಮಾನತೆಯ ವಿಚಾರಗಳನ್ನು ಬೋಧಿಸಿದರು. ಜನರ ನಡುವೆ ವೈಚಾರಿಕತೆಯನ್ನು ಬೆಳೆಸಲು ಯತ್ನಿಸಿದರು. ಇದರಿಂದಾಗಿ ದುಡಿವ ವರ್ಗಗಳಲ್ಲಿ ಒಂದು ಬಗೆಯ ಸಾಮಾಜಿಕ ವಿವೇಕ ಬೆಳೆಯಲು ಕಾರಣವಾಯಿತು. ಹೀಗೆ ಹರಿದಾಸ ಪರಂಪರೆಯು ಶ್ರೀ ಮಧ್ವಾಚಾರ್ಯರ ಜನಮುಖಿಯಾದ ತಾತ್ವಿಕ ನೆಲೆಯಿಂದ ಪ್ರಾರಂಭವಾಗಿ ಕನಕ ಪುರಂದರರವರೆಗೂ ಪರಿಭಾವಿಸಿದ್ದರೂ; ಅಬ್ರಾಹ್ಮಣನಾಗಿದ್ದ ಕನಕದಾಸರಿಗಿದ್ದಷ್ಟು ಸಮಾಜದ ಕೆಳವರ್ಗದ ಜನಸಾಮಾನ್ಯರೊಂದಿಗಿನ ಅನುಭವಗಳ ಪರಿಧಿ ಉಳಿದ ಮೇಲು ಪಂಕ್ತಿಯ ಹರಿದಾಸರಿಗೆ ಇರಲಿಲ್ಲವೆಂದೇ ಹೇಳಬಹುದು.

ಎಲ್ಲಾ ಹರಿದಾಸರು ಗೋವು ಕಾಯುವ ಕೃಷ್ಣನ್ನೇ ತಮ್ಮ ಆರಾಧ್ಯ ದೈವವನ್ನಾಗಿಸಿಕೊಡಿದ್ದಂತೆಯೇ ಕನಕದಾಸರೂ ಸಹ ಪಶುಪಾಲಕನಾದ ಈ ಕೃಷ್ಣನನ್ನೇ 'ಬಾ ರಂಗ ಎನ್ನ ಮನಕೆ' 'ಬಾರೋ ಬಾರಯ್ಯ ಮನೆಗೆ' ಎಂದು ಶ್ರೀ ಹರಿಯನ್ನು ತಮ್ಮ ಹೃದಯ ಸದನಕ್ಕೆ ಭಕ್ತಿಯಿಂದ ಆಹ್ವಾನಿಸಿದ್ದಾರೆ. 'ಎಲ್ಲಿ ನೋಡಿದರಲ್ಲಿ ರಾಮ, ಎಲ್ಲಿರುವೆಯೋ ರಂಗ' ಎಂದು ಕೃಷ್ಣನ ಪ್ರತಿರೂಪಗಳನ್ನು ಧ್ಯಾನಿಸಿದ್ದಾರೆ. ತನ್ನ ಸುತ್ತಲ ಜನರಿಗೆ ಜ್ಞಾನದ ಅಡಿಗೆಯನ್ನು ಮಾಡಿ ಉಣಬಡಿಸಿದ್ದಾರೆ. ಸಮಾಜದ ಸರ್ವ ಸಮಾನತೆಗಾಗಿ 'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎನ್ನುವ ಮೂಲಕ ಸಮಾಜದಲ್ಲಿನ ಎಲ್ಲರೂ ಒಂದೆ ಎಂದು ನಿರೂಪಿಸಿದ್ದಾರೆ. ಜನರ ನಡುವೆಯೇ ಬಾಳಿ ಬದುಕಿದ ಕನಕದಾಸರು; 'ದೇವಿ ನಮ್ಮಯ ದ್ಯಾವರು ಬಂದಾರೆ ಬನ್ನೀರೆ ನೋಡ ಬನ್ನೀರೆ'; 'ದಾಸನಾಗಬೇಕು ಸದಾಶಿವನ ದಾಸನಾಗಬೇಕು'; 'ನಾವು ಕುರುಬರು ನಮ್ಮ ದ್ಯಾವರು ಬೀರಪ್ಪ'; 'ಡೊಳ್ಳಿನ ಮ್ಯಾಲೆ ಕೈಯ ಬರಮಪ್ಪ ಹಾಕ್ಯಾನು,; ತಾಳವ ಶಿವನಪ್ಪ ತಟ್ಟ್ಯಾನ್ಯ್ಯಾ'; ಎಂಬ ಕೀರ್ತನೆಗಳಲ್ಲಿ ಕೆಳವರ್ಗದವರ ಆಡುಮಾತಿನ ಸ್ವ ಅನುಭವದ ಸೊಗಡನ್ನು ಇವರ ಸಂಪ್ರದಾಯವನ್ನೂ ಉಳಿಸಿ ಮುನ್ನೆಲೆಗೆ ತಂದವರಂತೆ ಕನಕದಾಸರು ಕಂಡುಬರುತ್ತಾರೆ.

ಜೊತೆಗೆ 'ಮೋಹನತರಂಗಿಣಿ'ಯಲ್ಲಿ 'ಕೇಶವನೆಡೆಗೆನ್ನೆಡೆಗಾವನೋರ್ವನು ದ್ವೇಷ ಬುದ್ಧಿಯ ಮಾಡಿದಡೆ ದೋಷ ಸಂಭವಿಪುದು' ಎಂದು ಹರನ ಬಾಯಲ್ಲಿ ಹೇಳಿಸುವುದರ ಮೂಲಕ ಮತವನ್ನೂ ಮೀರಿದ ಭಕ್ತರಾಗಿ ಕಾಣಿಸಿಕೊಂಡಿದ್ದಾರೆ. 'ರಾಮಧಾನ್ಯಚರಿತೆ'ಯಂತೂ ಅಂದಿನ ಸಮಾಜದಲ್ಲಿದ್ದ ಶ್ರಮಿಕರ ಧ್ವನಿಯೇ ಆಗಿದೆ. 'ನಳಚರಿತ್ರೆ'ಯಲ್ಲಿನ ನಳ ದಮಯಂತಿಯರು ಪ್ರಭುತ್ವವನ್ನೂ ಪಡೆದಿದ್ದರೂ ಒಬ್ಬ ಸಾಮಾನ್ಯ ಮನುಷ್ಯನು ಅನುಭವಿಸುವಂತಹ ಕಷ್ಟ ಮತ್ತು ಸವಾಲುಗಳನ್ನು ಎದುರಿಸಿ; ವಿಧಿಯ ಮುಂದೆ ಎಲ್ಲರೂ ಸಮಾನರು ಎಂದು ಸಾರುವ ಸಂದೇಶ ನೀಡಿದ್ದಾರೆ. ಇನ್ನು 'ಹರಿಭಕ್ತಿಸಾರ'ವಂತೂ ದೀನನೊಬ್ಬನ ಮೊರೆಯೇ ಆಗಿದೆ.

ಈ ಎಲ್ಲಾ ಹಿನ್ನೆಲೆಯಿಂದಾಗಿ ಕನಕದಾಸರಿಗೆ ದಾಸ ಪರಂಪರೆಯಲ್ಲಿ; ಇತರ ದಾಸರಿಗೆ ಸಿಕ್ಕಿದಂತಹ ಸ್ಥಾನಮಾನ ಸಿಗದಿದ್ದರೂ, "ಕನಕದಾಸರ ಆಗಮನ ಕನ್ನಡ ಸಾಹಿತ್ಯಚರಿತ್ರೆಗೆ ಹೊಸ ಸದಸ್ಯತ್ವ, ಹೊಸ ಸಂಯೋಗ, ಹೊಸ ಅಭಿವ್ಯಕ್ತಿಯೊಂದು ಸೇರಿದಂತೆ ಮಾತ್ರವಾಗಿರದೆ, ಕರ್ನಾಟಕದ ಅದುವರೆಗಿನ ಭಿನ್ನ ಸಂಸ್ಕೃತಿಧಾರೆಗಳು ಕನ್ನಡ ಸಾಹಿತ್ಯವಾಗುವುದರ ಕಡೆಗಿನ ಪರಿಶ್ರಮ ಎಂದು ತಿಳಿಯಬೇಕಾಗುತ್ತದೆ." ಎಂದು ಡಾ. ಹಿ.ಶಿ. ರಾಮಚಂದ್ರೇಗೌಡರು ಹೇಳಿರುವುದು ಕನ್ನಡ ಸಂಸ್ಕೃತಿ ಸಂದರ್ಭದಲ್ಲಿ ಕನಕದಾಸರ ಸ್ಥಾನ ಕುರಿತಂತೆ, ಅರ್ಥಪೂರ್ಣವಾದ ಮಾತುಗಳಾಗಿವೆ.[೧೦]

**ಸೂಫಿ ಪಂಥ:**

ಮುಸ್ಲಿಮರ ಸಂಪರ್ಕದಿಂದಾಗಿ ಭಕ್ತಿ ಪಂಥ ಹಿಂದೂ ಸಮಾಜದಲ್ಲಿ ಹುಟ್ಟಿಕೊಂಡರೆ, ಹಿಂದೂ ಸಮಾಜದ ಪ್ರಭಾವ ಇಸ್ಲಾಂ ಧರ್ಮದ ಮೇಲೆ ಉಂಟಾಗಿದ್ದರ ಪರಿಣಾಮವೇ 'ಸೂಫಿಪಂಥ' ಉಗಮವಾಗಲು ಕಾರಣವಾಯಿತು.[೧೧] ಈ ಸೂಫಿ ಪಂಥವು ಇಸ್ಲಾಂ ಧರ್ಮದ ಆಧ್ಯಾತ್ಮಿಕತೆಯ ಇನ್ನೊಂದು ಹೆಸರಿನ ರೂಪವಾಗಿದೆ. 'ಸೂಫಿ' ಪಂಥಕ್ಕೆ 'ಕುರಾನ್' ಗ್ರಂಥವೇ ಮೂಲಾಧಾರ. ಉದಾರವಾದ ಮತ್ತು ಸಮಾನತೆಯ ತತ್ವದಲ್ಲಿ ನಂಬಿಕೆಯುಳ್ಳ ಸೂಫಿಗಳು, ಹದಿನಾಲ್ಕನೆಯ ಶತಮಾನದ ವೇಳೆಗೆ ಭಾರತದಲ್ಲಿ ನೆಲೆಗೊಂಡು, ಶಾಂತಿ, ಸಹಬಾಳ್ವೆ ಮತ್ತು ಪರಮತ ಸಹಿಷ್ಣತೆಯ ತತ್ವಗಳನ್ನು ಸಮಾಜದಲ್ಲಿ ಬೋಧಿಸಿದರು.

"ದೇವರು ಒಬ್ಬನೆ, ಯಾರು ಮಾನವನನ್ನು ಪ್ರೀತಿಸುತ್ತಾರೋ ಅವರು ದೇವರ ಪ್ರೀತಿಗೆ ಪಾತ್ರರಾಗುತ್ತಾರೆ. ಸತ್ಯವನ್ನು ಅರಿಯುವುದೇ ಧರ್ಮಗಳ ಉದ್ದೇಶ." ಎಂದು ಬೋಧಿಸುವುದರ ಜೊತೆಗೆ ಉತ್ತಮ ಕಾಯಕಕ್ಕೆ ಆದ್ಯತೆ ನೀಡಿದ ಸೂಫಿ ಪಂಥವು ಸರ್ವಸಮಾನತೆಯ ತತ್ವಗಳನ್ನು ಸಮಾಜಕ್ಕೆ ತಿಳಿ ಹೇಳಿತು. ಪ್ರೇಮ, ಭಕ್ತಿ,

ಪ್ರಾಮಾಣಿಕತೆ, ಮಾನವೀಯ ಸ್ನೇಹವನ್ನು ಜನರಿಗೆ ಸೂಫಿಗಳು ಬೋಧಿಸಿದರು. ಹಜರತ್ ಕ್ವಾಜ ಮೊಯಿನುದ್ದೀನ್ ಚಿಸ್ತಿ, ನಿಜಾಮುದ್ದೀನ್ ಔಲಿಯ, ನಾಸಿರ್ ಉದ್ದೀನ್ ಚೀರಾಗ್, ಪ್ರಮುಖ ಸೂಫಿ ಪಂಥದ ಸುಧಾರಕರಾಗಿ ಕಂಡುಬರುತ್ತಾರೆ.

ಬಾಹ್ಯಕ್ಕಿಂತ, ಅಂತರಂಗಕ್ಕೆ ಹೆಚ್ಚು ಒತ್ತು ಕೊಡುವ ಸೂಫಿಗಳು ಕಾಲಕ್ರಮೇಣ ಕರ್ನಾಟಕವೂ ಸೇರಿದಂತೆ ಭಾರತದಾದ್ಯಂತ ಇಲ್ಲಿನ ದೇಶೀ ಜ್ಞಾನ ಪರಂಪರೆಗಳೊಂದಿಗೆ ತಾತ್ವಿಕ ರಾಜಿ ಮಾಡಿಕೊಂಡಂತೆ ಕಾಣುತ್ತಾರೆ. ಹಾಗಾಗಿ ವಚನಕಾರರ ಜ್ಞಾನ ಹಾಗೂ ಕಾಯಕ ನಿಷ್ಠೆ, ದಾಸರು ಮತ್ತು ತತ್ವಪದಕಾರರಲ್ಲಿನ ಗುರುವಿನ ಹಿರಿಮೆ, ಸೂಫಿಗಳು ಕಂಡುಕೊಂಡ ಪ್ರಭುವಿನ ಮಹತ್ವ, ಇವು ಮೂರು ಒಂದೇ ಎಂಬಂತೆ ಕಾಣಿಸಿಕೊಳ್ಳುತ್ತವೆ. ಸೂಫಿಗಳ ಪ್ರೇಮ, ಸಂತರ ಶಾಂತ ಸ್ಥಿತಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಇವರೆಲ್ಲಾ ಜಗತ್ತನ್ನು ಕಾಣಲು ದೇಹ ಮತ್ತು ಮನಸ್ಸಿನ ಶುದ್ಧತೆಗೆ ಹಾತೊರೆಯುತ್ತಾರೆ. ಈ ಹಿನ್ನೆಲೆಯ ಎಲ್ಲಾ ಒಳಗಣ್ಣನ್ನು ಹೊಂದಿದ್ದ ಕನಕದಾಸರು ಕೂಡ ಗುರುವೇ ಮುಖ್ಯ ಎನ್ನುವಾಗ ಸೂಫಿಗಳ ಪ್ರಭು ನಮಗೆ ಗೋಚರವಾಗುತ್ತಾನೆ. ಅಂದಹಾಗೆ ಸೂಫಿ ತತ್ವಜ್ಞಾನ ಮತ್ತು ಕನಕದಾಸರ ದೇಹತತ್ವಗಳು ಸಾಮರಸ್ಯದ ಸೇತುವೆಯಂತಿರುವುದನ್ನು ಇಲ್ಲಿ ಗಮನಿಸಬಹುದು.[೧೨]

ಒಂದು ಕಾಯಲಿ ನಾನು ಒಲಿದು ದಂಡಿಗೆಯಾದೆ
ಎರಡು ಕಾಯಲಿ ನಾನು ವೀಣೆಯಾದೆ
ಮೂರು ಕಾಯಲಿ ನಾನು ವೀಣೆಯಾದೆ
ನೀಟಾದ ಕಾಯಲಿ ನಾನು ನಾಗಸ್ವರವಾದೆ
ದಪ್ಪ ದಪ್ಪ ಕಾಯಲಿ ದರವೇಶಿಗಳಾದೆ
ಮಿಕ್ಕ ಕಾಯಲಿ ನಾನು ಸನ್ನೇಸಿಗಳಾದೆ
ಕೈತಪ್ಪಿ ಬಿದ್ದರೆ ಕದಿರಿಗೆ ಬಿಲ್ಲಾದೆ
ಮತ್ತೆ ದೇವರ ಗುಡಿಗೆ ದೀಪವೇ ನಾನಾದೆ॥ [೧೩]

ಈ ಕೀರ್ತನೆಯಲ್ಲಿ ಮನುಷ್ಯನ ನಾನಾ ಅವಸ್ಥೆಗಳನ್ನ, ಪಕ್ವ, ಅಪಕ್ವತೆಯನ್ನು ಕಾಯಿಯ ಮೂಲಕ ಸೂಚಿಸಿದ್ದಾರೆ. ಇಲ್ಲಿ ಭಕ್ತ ಮತ್ತು ದೈವದ ಲೀನತೆಯೂ ಸೇರಿಕೊಂಡಿದೆ. ಕನಕದಾಸರ ಈ ಕೀರ್ತನೆಯಲ್ಲಿ 'ಕಾಯ' ಮತ್ತು 'ನಾನು' ಮತ್ತೆಮತ್ತೆ ಬರುತ್ತದೆ. ಆತ್ಮ ಸಾಧನೆಯ ತಲ್ಲಣ ಇದರಲ್ಲಿ ಕಾಣಬಹುದು. 'ದಪ್ಪದಪ್ಪ ಕಾಯಲಿ ದರವೇಶಿಗಳಾದೆ' ಎಂಬ ನೇರ ಮಾತೂ ಬರುತ್ತದೆ.. ದರವೇಶಿಗಳನ್ನು* 'ಸೂಫಿ'

---

* ದರವೇಶಿ– ಮನೆ ಮನೆಯ ಬಾಗಿಲಿಗೆ ಬರುವ ಮುಸಲಾನ ಭಿಕ್ಷುಕರು (ದರ–ದ್ವಾರ–ಬಾಗಿಲು)

ಎಂದೇ ಕರೆಯುತ್ತಿದ್ದರು. ದೇವರಗುಡಿಗೆ ದೀಪವೇ ಆಗುವುದು, ಉಕ್ಕುವ ಹೊಳೆಯಲಿ ತೆಪ್ಪವೇ ಆಗುವ ಸ್ಥಿತಿ ಇವೆಲ್ಲಾ ದೇವಬ್ರಹ್ಮರನ್ನು ಒಗ್ಗೂಡುವುದಾಗಿದೆ. ಇದು ಸೂಫಿಗಳಲ್ಲಿ ಸಿರ್‍್ರ(ರಹಸ್ಯ) ಹಂತ ತಲುಪುವುದೆಂದು ಹೇಳುತ್ತಾರೆ.[೧೦] ಇದನ್ನೇ ಅನುಭಾವದ ಸಾಮರಸ್ಯದ ತಾತ್ವಿಕತೆ ಎಂದು ಗುರುತಿಸಲಾಗಿದೆ. ಸನ್ಯಾಸಿಗಳು, ದರವೇಶಿಗಳು, ದಾಸಯ್ಯ ಇವರೆಲ್ಲಾ ಸಾಮಾನ್ಯ ತತ್ವಗಳನ್ನು ಜನರ ಬಳಿ ಸಾರುತ್ತಿದ್ದರು. ಇದರಿಂದಾಗಿ ದಾಸರು ಮತ್ತು ಸೂಫಿಗಳು ಸ್ಥಾಪಿಸಿದ ಧರ್ಮಗಳ, ಮತಗಳ ಮತ್ತು ಮಸೀದಿಗಳ ಸವಾಲುಗಳನ್ನು ಎದುರಿಸಬೇಕಾಯಿತು. ಈ ಕಾರಣದಿಂದಾಗಿ ಕನಕದಾಸರಿಗೆ ಮಾಧ್ವ ಪಂಡಿತರು ಮತ್ತು ವ್ಯಾಸಕೂಟಗಳು ಬಹು ದೊಡ್ಡ ಸವಾಲನ್ನು ಒಡ್ಡಿದರೆ, ಸೂಫಿಗಳಿಗೆ 'ಮುಲ್ಲಾಗಳ ಕೂಟ' ಎದುರಾಯಿತು. ಇದು ಚರಿತ್ರೆಯಲ್ಲಿ ದಾಖಲಾಗಿರುವ ವಿಚಾರ.

ವಾಸ್ತವವಾಗಿ ಕನಕದಾಸರ ಕಾಲಕ್ಕೆ ಬಹುಮನಿ ಸಾಮ್ರಾಜ್ಯ ಸ್ಥಾಪಿತವಾಗಿ ಮುಸ್ಲಿಂ ದೊರೆಗಳು ತಮ್ಮ ಪ್ರಭುತ್ವದ ನೆಲೆಗಳನ್ನು ವಿಸ್ತರಿಸಿದ್ದರು. ಸುಲ್ತಾನರ ಕಾಲದಲ್ಲಿ ಸೂಫಿಗಳು ಅನುಭಾವದ ಸಾಧನೆಗಳನ್ನು ಮಾಡಿ ಸುಲ್ತಾನರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಸಾಮಾನ್ಯವಾಗಿ ದಾಸ ಹಾಗೂ ಸೂಫಿಗಳ ಅನುಭಾವಲೋಕ ಸಮಕಾಲೀನ ಧರ್ಮಗಳ ಮೂಲದಲ್ಲಿರುವ ಮಡಿವಂತ ಆಚರಣೆಗಳ ವಿರುದ್ಧ ಸೌಮ್ಯ ರೀತಿಯಲ್ಲೆ ದಂಗೆ ಎದ್ದಿವೆ. ಹೀಗಾಗಿ ದಾಸ ಕೂಟದವರು ಹಾಗೂ ಸೂಫಿಗಳು ಅನುಭಾವಕ್ಕೆ ಹತ್ತಿರವಾಗಿ ಕಾಣುತ್ತಾರೆ. ಹಾಗಾಗಿ ದೇವರು ಕೇವಲ ಸಿರಿವಂತರ ಅಥವಾ ಮಡಿವಂತರೆನಿಸಿಕೊಂಡವರ ಬಳಿ ಮಾತ್ರವೇ ಇಲ್ಲ. ಆತನು ಒಬ್ಬನೇ ಆಗಿದ್ದು ಅವನು ಎಲ್ಲದರಲ್ಲೂ ಇದ್ದಾನೆ ಮತ್ತು ಎಲ್ಲವೂ ಅವನಲ್ಲಿದೆ. ಎಂದು ಸೂಫಿಗಳು ಬೋಧಿಸಿದರೆ; ಇದೇ ಅರ್ಥ ಬರುವ ಕನಕದಾಸರ ಈ ಮುಂದಿನ ಕೀರ್ತನೆಗಳನ್ನು ಗಮನಿಸಬಹುದು.

'ನಾನು ನೀನು ಎನ್ನದಿರು ಹೀನ ಮಾನವ
'ನನ್ನಿಂದ ನಾನೆ ಜನಿಸಿ ಬಂದನೆ ದೇವ'
'ನಾರಿ ಮಕ್ಕಳು ತನು ಮನ ನಿನ್ನವಯ್ಯ'
'ಕೇಶವನೊಲುಮೆಯು ಆಗುವ ತನಕ'

ಇಂತಹ ಆತ್ಮ ನಿವೇದನೆಯ ಕೀರ್ತನೆಗಳಲ್ಲಿ; ಶರಣಾಗತಿಯ ತತ್ವ, ತನ್ನ ತನದ ನಿರಾಕರಣೆ, ದೈವ ಸಾಕ್ಷಾತ್ಕಾರ , ದೇವರಲ್ಲಿ ಮೊರೆ, ದೈನ್ಯತೆ, ದೈವ ಭಕ್ತರಲ್ಲಿ ದಾಸತ್ವ, ದೈವ ದರ್ಶನದ ಹಂಬಲ ಇತ್ಯಾದಿ ರೂಪದ ಪ್ರಾರ್ಥನೆಯನ್ನು ಗುರುತಿಸಬಹುದು. ಇದರಿಂದಾಗಿ ತಳ ಸಮುದಾಯದಿಂದ ಬಂದಂತಹ ದಾಸರಿಗೆ

ಇದೇ ಸಮುದಾಯದ ದೀನತೆಯ ಮೊರೆ ಏನೆಂಬುದನ್ನು ಸೂಫಿಗಳ ಚಿಂತನಾ ಲಹರಿಯಲ್ಲೇ ಅರ್ಥೈಸಿಕೊಡಿದ್ದರು. ದೇವರ ದಯೆ ಇಲ್ಲದೆ ಯಾರೂ ಈ ಆಧ್ಯಾತ್ಮದ ಮಿಲನವನ್ನು ಸಾಧಿಸುವುದು ಸಾಧ್ಯವಾಗದು. ಆದರೂ ಇದನ್ನು ತಮ್ಮ ನಿರಂತರ ಸಾಧನೆಯಿಂದ ದೇವರನ್ನು ಸಂಪ್ರೀತಗೊಳಿಸುವ ಮೂಲಕ ಸಾಧಿಸಬಹುದೆಂದು ಸೂಫಿಗಳು ಅಭಿಪ್ರಾಯ ಪಡುತ್ತಾರೆ. ಅಂದಿನ ಸಮಾಜದಲ್ಲಿ ಶ್ರಮಿಕರಾದ ಕೆಳ ಜಾತಿಯವರು ತಮ್ಮ ಬದುಕು ನೂಕಲು ದೇವರ ದಯೆಯನ್ನು ಪಡೆಯಬೇಕೆಂದು ಕಲ್ಪಿಸಿಕೊಂಡು ಕಂಡ ಕಂಡ ಕಲ್ಲು ದೇವರುಗಳನ್ನು ಪೂಜಿಸುತ್ತಾ ಊರೂರು ಅಲೆಯುತ್ತಿದ್ದರೆ; ಕೇವಲ ತಮ್ಮ ಸಿರಿ ಮತ್ತು ಆಡಂಬರದ ಭಕ್ತಿಯಿಂದಲೇ ದೇವರ ದಯೆ ಪಡೆದವರಂತೆ ಬೀಗುವ ಮೇಲ್ವರ್ಗದ ಪುರೋಹಿತ ಶಾಹಿಗಳು, ತಳ ಸಮುದಾಯದ ಶ್ರಮಿಕರಿಂದಲೇ ಗುಡಿ ಗೋಪುರಗಳನ್ನು ಕಟ್ಟಿಸಿಕೊಂಡು ಇವರನ್ನು ಹೊರಗಿಟ್ಟರು. ತಾವು ಮಾತ್ರ ಕಟ್ಟಿದ ಗುಡಿಯೊಳಗೆ ಕಲ್ಲು ದೇವರ ಮಾಡಿ ಹೊಟ್ಟೆಪಾಡಿನ ವೃತ್ತಿ ಆರಂಬಿಸಿದರು. ಇಂತಹುದನ್ನು ಕಂಡು ನೊಂದ ಕನಕದಾಸರು,

ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು
ಏನ ಬಲ್ಲೆನು ನಾನು ನೆಲಸು
ಜ್ಞಾನ ಮೂರುತಿ ನೀನು ನಿನ್ನ ಸ
ಮಾನರುಂಟೆ ದೇವ ರಕ್ಷಿಸು ನಮ್ಮನನವರತ॥

ಎಂದು ದೈನ್ಯತೆಯಿಂದ ಬೇಡಿಕೊಳ್ಳುತ್ತಾರೆ. ಜೊತೆಗೆ

'ತನು ನಿನ್ನದು ಜೀವ ನಿನ್ನದು'
'ತಲ್ಲಣಿಸದಿರು ಕಂಡ್ಯ ತಾಳು ಮನವೆ'
'ಹರಿದಾಸರೊಳಿರತಿರು ಹೇ ಮನುಜ'
'ತೊರೆದು ಜೀವಿಸಬಹುದೆ ಹರಿ ನಿನ್ನ ಚರಣ'
'ಬಯಲು ಆಲಯದೊಳಗೊ ಆಲಯವು ಬಯಲೊಳಗೊ'
'ಎಲ್ಲರನು ಸಲಹುವನು ಇದಕೆ ಸಂಶಯ ಬೇಡ'
'ನೀನಲ್ಲದೆ ನರರು ಸ್ವತಂತ್ರರೇ'

ಎಂಬುದಾಗಿ ಆತನ ದಯೆಗಾಗಿ ದೇವರಲ್ಲಿ ಮೊರೆ ಹೋಗುತ್ತಾರೆ. ಹಾಗಾಗಿ ಸೂಫಿ ಮತ್ತು ಕನಕದಾಸರ ಇಂತಹ ನಿಲುವುಗಳು; ತಮ್ಮೊಳಗಿನ, ಪಾರಂಪರಿಕ ಕಸುಬುದಾರರಾದ ಶ್ರಮಿಕ ವರ್ಗದ ಬಗೆಗಿನ ಅನುಭವವನ್ನೇ ತೆರೆದಿಟ್ಟಿವೆ.

ದಾಸರಂತೆ ಸೂಫಿ ಸಂತರೂ ಅಲೆಮಾರಿಗಳಂತೆ ಊರೂರು ತಿರುಗಿ ಕಲ್ಲು ಮುಳ್ಳುಗಳನ್ನು ತುಳಿದು ಜನರ ನಡುವೆಯೇ ದೇವರನ್ನು ಕಾಣಲೆತ್ನಿಸಿದವರು.

'ಸಂದೇಹಗಳ ದೂರ ಮಾಡು,
ಯಾರಿಗೆ ಹೇಳಲಿ ಈ ದುಃಖವ ನಾನು
ನನ್ನ ದೇವರಿಗಲ್ಲದೆ?'
ಕಬ್ಬು, ಜೇನು, ಸಕ್ಕರೆ,
ಹಸುವಿನ ನೊರೆ ಹಾಲು,
ಎಲ್ಲವೂ ಸಿಹಿಯಾಗಿದೆ ನಿಜ
ಇದಕೆಲ್ಲ ಹೋಲಿಸಿದರೆ, ಇವೆಲ್ಲ ಏನಲ್ಲ.
ನೀನು ನನ್ನ ದೊರೆಯೇ.
ಒಣ ರೊಟ್ಟಿಯ ತಿಂದು
ತಣ್ಣೀರ ಕುಡಿ
--------------
ಭವ್ಯ ಬಂಗಲೆ ಮಹಡಿ ಮನೆಯ ಒಡೆಯರು
ಅರಮನೆಯವಾಸಿಗಳು ಎಲ್ಲರೂ
ಹೋಗೇ ಬಿಟ್ಟರು
ಬದುಕಲು ಸುಳ್ಳು ಮೋಸವಮಾಡಿ
ಈಗ ಮಲಗಿದ್ದಾರೆ ಮಣ್ಣು ಗೋರಿಯಲಿ.[೧೪]

ಹೀಗೆ ಜನಸಾಮಾನ್ಯರ ಭಾಷೆಯಲ್ಲಿಯೇ ಕವನಗಳನ್ನು ಬರೆದವರು. ಜನರ ನಡುವಿನ ಪ್ರತಿಮೆಗಳನ್ನೇ ಬಳಸಿ ಸರಳವಾಗಿ ದೈವ ಸಾಕ್ಷಾತ್ಕಾರವನ್ನು ಜನರಿಗೆ ಬೋಧಿಸಿದರು. ಈ ಮೂಲಕ ಸಾಮಾನ್ಯರನ್ನು ಎಚ್ಚರಿಸ ಪ್ರಯತ್ನಿಸಿದರು. ತನ್ನನ್ನು ದ್ವೇಷಿಸುವವರಿಗೂ ಸೇರಿದಂತೆ ಇತರ ಎಲ್ಲಾ ತರಹದ ಜನರಿಗೆ ಶಾಂತಿ ಸಮೃದ್ಧಿ ದೊರೆಯಲೆಂದು ಮನಸಾರೆ ಹಾರೈಸುವುದೇ ಬದುಕಿನ ದೊಡ್ಡ ಸಾಧನೆ ಎಂದು ನಂಬಿದರು. ಇದಕ್ಕೆಲ್ಲಾ ಪರಂಪರೆಯ ಪಶುಪಾಲಕತ್ವದ ಮೂಲ ದ್ರವ್ಯಗಳಾದ ಶಾಂತಿ, ದಯೆ, ಕರುಣೆ, ಭಕ್ತಿ ಮತ್ತು ಪಾಲನೆ ಸಮಾಜವನ್ನು ಅಂದು ಪ್ರಭಾವಿಸಿದ್ದರ ಪರಿಣಾಮವೆಂದೇ ಹೇಳಬಹುದು.

ಕನಕದಾಸರೂ ಸಹ ಜನಭಾಷೆಯಲ್ಲಿಯೇ ಕೀರ್ತನೆಗಳನ್ನು ರಚಿಸಿದರು. ಈ ಸಿರಿ, ಸ್ಥಿರವಲ್ಲ ಎಂಬುದನ್ನು ಹಲವು ದೃಷ್ಟಾಂತಗಳ ಮೂಲಕ ಮನಗಾಣಿಸಿದರು.

ನಂಬ ಬೇಡಿ ಸಿರಿಯು ತನ್ನದೇ?
ನಂಬ ಬೇಡಿ ಸಿರಿಯು ತನ್ನ
ದೆಂದು ನಿಮಿಷದೊಳಗೇನಹುದೊ
ಡಂಬತನವಿದೇಕೆ ಹರಿಯ ಪಾ

ದಾಂಬುಜವನು ಭಜಿಸಿ ನರರು[೧೫]

ಹಾಗೆಯೇ ಪ್ರತಿಯೊಬ್ಬರೂ 'ಅರಿತು ನಡೆಯಲಿ ಬೇಕು ನರಕಾಯ ಎತ್ತಿದ ಮೇಲೆ, ಅರಿಯದಿದ್ದರೆ ನರಕವೇ ಪ್ರಾಪ್ತಿ' ಎಂಬ ಎಚ್ಚರಿಕೆಯನ್ನೂ ನೀಡಿ; ಗೋಪಾಲಕನಾದ ಶ್ರೀಹರಿಯಲ್ಲಿ ನಾನು ನಿಮ್ಮ ಮನೆಯ ದಾಸರ ದಾಸ ನಾನು, ನಿನ್ನ ಪಾದ ನಂಬಿದ ದಾಸನಾದ ಮೇಲೆ ನಿನ್ನ ದಯೆ ನನ್ನ ಮೇಲಿರಲೆಂದು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಪ್ರಾರ್ಥಿಸುತ್ತಾರೆ. ಇಂತಹ ಚಿತ್ರಣಗಳಿಂದ, ಸೂಫಿ ಮತ್ತು ಕನಕದಾಸರು ತಮ್ಮ ಕಾಲದ ಬಹು ಸಂಖ್ಯಾತ ಸಾಮಾನ್ಯ ಹಾಗೂ ಆರ್ಥಿಕವಾದ ಬಡ ಸಮುದಾಯವನ್ನು ಎಚ್ಚರಿಸಲು ಮಾಡಿದ ಸಂದೇಶಗಳಂತೆ ಕಂಡುಬರುತ್ತವೆ. ಈ ಸಂದೇಶಗಳನ್ನು ಮತ್ತಷ್ಟು ಜನಮುಖಿಗೊಳಿಸಲು ಗೇಯತೆಯ ದಾಟಿಯ ಸರಳ ರಚನೆಗಳಲ್ಲಿ ತೊಡಗಿದುದು ಇವರ ಮತ್ತೊಂದು ವಿಶೇಷವೇ ಸರಿ.

ಸಂತ ಪರಂಪರೆಯಲ್ಲಿ ಪ್ರಮುಖರಾಗಿದ್ದ ಕನಕದಾಸರಿಗೆ ಸೂಫಿಗಳ ಬದುಕು ಮತ್ತು ಚಿಂತನೆಗಳ ಪರಿಯಚಯವಿದ್ದಿತು. ಜಿ.ರಾಜಶೇಖರ ಅವರು ಅಭಿಪ್ರಾಯ ಪಡುವ ಹಾಗೆ, ಕನಕ ಮತ್ತು ಪುರಂದರ ಕಾಲಕ್ಕೆ 'ಸೂಫಿಪಂಥ' ಉತ್ತರ ಕರ್ನಾಟಕದಲ್ಲಿ ಭದ್ರವಾಗಿ ತಳವೂರಿತ್ತು. ಮತ್ತೆ ವಿಜಯ ನಗರದ ಕೃಷ್ಣದೇವರಾಯನ ಕಾಲಕ್ಕೆ ವಿದೇಶಿ ಧಾಳಿಯಿಂದಾಗಿ ಮುಸ್ಲಿಂ ಮತ್ತು ಕ್ರೈಸ್ತ ಧರ್ಮಗಳು ಮಧ್ಯಕಾಲೀನ ಕರ್ನಾಟಕದಲ್ಲಿ ಗಟ್ಟಿಗೊಳ್ಳತೊಡಗಿದವು. ಮಾನವತೆಯ ತತ್ವಗಳಾದ ಪ್ರೇಮ, ಭಕ್ತಿ, ಪ್ರಾಮಾಣಿಕತೆ, ಸತ್ಯ, ದಯೆ, ಸಮಾನತೆ, ಸ್ನೇಹಗಳ ಮೂಲಕ ತನ್ನ ತಾನು ಅರಿಯುವಂತ ಸಿದ್ಧಾಂತವನ್ನು ಸಮಾಜಕ್ಕೆ ತಿಳಿಸಿಕೊಟ್ಟ ಕನಕದಾಸರು ಮತ್ತು ಸೂಫಿಗಳು; ತಮ್ಮನ್ನು ಎದುರುಗೊಂಡ ಸವಾಲುಗಳ ನಡುವೆಯೇ 'ಕಾಲುದಾರಿ' ಪಥಿಕರಂತೆ ಮುನ್ನಡೆದು ಸಮಾಜದ ಅರಿವಿನ ಪರಂಪರೆಯನ್ನು ಮುಂದೆಯೂ ಬೆಳಗುವಂತೆ ಪ್ರೇರಣೆ ನೀಡಿದ್ದು, ಒಂದು ಪವಾಡವೇ ಸರಿ.

**ತತ್ವಪದಕಾರರು :**

ಹದಿನೈದನೇ ಶತಮಾನದ ನಿಜಗುಣ ಶಿವಯೋಗಿಗಳಿಂದ ಇಲ್ಲಿಯವರೆಗೂ ಅನೇಕ ತತ್ವಪದಕಾರರು ಆಗಿಹೋಗಿದ್ದಾರೆ. ತತ್ವಪದಕಾರರಲ್ಲಿ ಕಂಡುಬರುವ ಸಮಾನ ಅಂಶಗಳೆಂದರೆ ಗುರುವಿನ ಮಹತ್ವ, ಮನಸ್ಸು, ದೇಹ ಮತ್ತು ತನ್ನ ತಾನರಿವುದಾಗಿದೆ. ಅಹಂಕಾರವನ್ನು ತತ್ವಪದಕಾರರು ಎಂದೂ ಮಾನ್ಯ ಮಾಡಿದವರಲ್ಲ. ಇಲ್ಲಿನ ಬದುಕು ಹಾಗೂ ಈ ದೇಹ ನಶ್ವರ ಎಂದು ತಿಳಿದಿದ್ದರೂ ಅದಕ್ಕೆ ಕೊರಗದೆ ದಿನನಿತ್ಯದ ದಂದುಗಳಿಗೆ ಮುಖಾಮುಖಿಯಾಗುತ್ತಲೇ ಜನಪದರ ಬದುಕನ್ನು ಹೊಕ್ಕವರು.

ಬದುಕಿನ ಎಲ್ಲಾ ನೆಲೆಗಳಲ್ಲೂ ಪ್ರತಿಮೆಗಳನ್ನು ಹೆಕ್ಕಿ ತೆಗೆದವರು. ಕೃಷಿ, ಸಂಸಾರ, ದೇಹ, ಮನಸ್ಸು, ಕುರಿ, ದನ ಕಾಯುವುದು, ಮುಂತಾದ ಕಾಯಕಗಳ ಶೋಧನೆಯ ಮೂಲಕ ದೇಸೀ ಪರಂಪರೆಯನ್ನು ಬೆಳಸಿದವರು. ಇವರು ಬಳಸುವ ಭಾಷೆ ಮತ್ತು ಗ್ರಹಿಕೆ ಕನ್ನಡ ಪರಂಪರೆಯಲ್ಲಿ ಭಿನ್ನವಾಗಿಯೇ ಇದೆ. ಮನುಷ್ಯನ ವ್ಯಕ್ತಿತ್ವವನ್ನು ಅಹಂನಿಂದ ಪಾರು ಮಾಡುವ ವಿಧಾನವನ್ನು ಅನೇಕ ತತ್ವಪದಗಳು ಅಭಿವ್ಯಕ್ತಿಗೊಳಿಸುತ್ತವೆ.

ತತ್ವಪದಗಳೆಂದರೆ ಅದೊಂದು ಸಾಂಸ್ಕೃತಿಕ ಆಚರಣೆ. ಸಂಗೀತ, ಹಾಡುಗಾರಿಕೆ, ತಾತ್ವಿಕತೆಗಳೊಂದಿಗೆ ಪವಿತ್ರವಾದ ಸಾಮೂಹಿಕ ಚಹರೆಯನ್ನು ಹೊಂದಿದಂತಹವು. ಪವಿತ್ರ ಗ್ರಂಥಗಳಂತೆ ಓದಿ ಹೇಳುವ ಸಂಸ್ಕೃತಿ ಇವುಗಳದ್ದಲ್ಲ. ಜನಪ್ರಿಯ ಹಾಡು ಕೀರ್ತನೆಗಳನ್ನು ಕೂಡಿ ಹಾಡುವ ಸಂಸ್ಕೃತಿ, ತತ್ವಪದಗಳದ್ದು. ಇವುಗಳಿಂದ ತತ್ವಪದಕಾರರ ಜೀವನದ ಲಯಗಳನ್ನು ತಿಳಿಯಬಹುದು.

ತತ್ವಪದಗಳು ಹುಟ್ಟಿಕೊಳ್ಳುವುದೇ ತಂಬೂರಿ ನಾದದೊಂದಿಗಿನ ಚಿಟಿಗೆ, ತಾಳ, ಲಯಗಳಲ್ಲಿ. ಸಂತರ ಸನ್ನಿಧಿಯಲ್ಲಿ. ಗದ್ದುಗೆಯಲ್ಲಿ. ದೇವಸ್ಥಾನದ ಹಜಾರದಲ್ಲಿ. ಇವುಗಳಲ್ಲಿ ಸಮಾಜವನ್ನು ಸೂಕ್ಷ್ಮದೃಷ್ಟಿಯ ನೆಲೆಯಲ್ಲಿ ನೋಡುವ ಜಾಡು ಇದೆ. ಜನಸಮಾನ್ಯರನ್ನು ಜಾಗೃತಗೊಳಿಸುವ ತಂತ್ರವೂ ಇದೆ.

ಈ ಹಿನ್ನೆಲೆಯ ಮಧ್ಯಕಾಲೀನ ಕಾಲಘಟ್ಟ, ಜನಸಾಮಾನ್ಯರನ್ನು ಪಾಂಡಿತ್ಯವಲಯದಿಂದ ದೂರವೇ ಇಟ್ಟಿತ್ತು. ಕನಕದಾಸರನ್ನಂತೂ ವ್ಯಾಸಕೂಟವೂ ಸಹಿಸಿಕೊಂಡಿರಲೇ ಇಲ್ಲ. ಈ ಕೂಟವು ತನ್ನ ಸುತ್ತಲೂ ಹಾಕಿಕೊಂಡಿದ್ದ ಜಾತಿ, ಮಡಿವಂತಿಕೆ, ಸೂತಕ ಎಂಬ ಬೇಲಿಯನ್ನು ದಾಟಿ ತತ್ವಪದಕಾರರಾದ ಕನಕದಾಸರು ಬೆಳೆದರು. ತಮ್ಮ ಕೀರ್ತನೆಯೊಂದರಲ್ಲಿ ಮಾನವನ ದೇಹ ರಚನೆಯನ್ನು ಕುರಿತು,

ಹೊಲೆಗೆಲಸವೀ ದೇಹದೊಳು ನೀ
ನೆಲೆಸಿರಲು ಹೊಲೆಯುಂಟೆ ರಕ್ಷಿಸುನಮ್ಮನನವರತ॥ [೧೬]

ಮನುಷ್ಯ ಭಾವಿಸುವ ಸೂತಕ ಹೊಲಸುತನಗಳು ಅವನಲ್ಲಿಯೇ ಇರುವಾಗ ಇನ್ನೆಲ್ಲಿಯ ಹೊಲೆತನ ಎಂದು ಪ್ರತಿರೋಧಿಸುತ್ತಾರೆ.

ಎಂಜಲೆಂಜಲು ಎಂಬರಾನುಡಿ
ಎಂಜಲಲ್ಲವೆ ವಾರಿಜಲಚರ
ದೆಂಜಲಲ್ಲವೆ ಹಾಲುಕರುವಿನ ಎಂಜಲೆನಿಸಿರದೆ॥ [೧೭]

ಮಾನಸಿಕ ಎಂಜಲನ್ನು ಚರ್ಮದ ಎಂಜಲನ್ನು ಕನಕದಾಸರು ನಿರಾಕರಿಸುವ ಬಗೆ ಇದು. ಮಾನಸಿಕ ಎಂಜಲೆಂದರೆ ಸಂಕುಚಿತ ಮನಸ್ಸುಗಳ ಅಸಮಾನತೆಯ ಸಂಕೇತ. ಈ ಲೋಕವೆ ಎಂಜಲಿನಿಂದ ಕೂಡಿದೆ, ಎಂಬುದು ಕನಕನ ನಂಬಿಕೆ. ಇಂತಹ ಚಿತ್ರಣಗಳು ಕನಕದಾಸರಿಂದ ರೂಪುಗೊಳ್ಳಲು; ಅವರ ಪರಿಸರದಲ್ಲಿ ಸಮಾನತೆಯ ಪರವಾಗಿ ಧ್ವನಿ ಎತ್ತುತ್ತಲೇ ಇದ್ದ ತತ್ವಪದಕಾರರ ಪ್ರಭಾವವೇ ಕಾರಣ ಎನ್ನಬಹುದು.

ಈ ಎಲ್ಲಾ ಸಮಾಜ ಸುಧಾರಕರ ಜೊತೆಗೆ 'ಅವಧೂತರ'ನ್ನು ಸಹ ದೇಶೀ ಪರಂಪರೆಯಲ್ಲಿ ಗುರುತಿಸಲಾಗಿದೆ. ಅವಧೂತರೆಂದರೆ ವರ್ಣಧರ್ಮವನ್ನು ಉಲ್ಲಂಘಿಸಿದವರು. ಇಲ್ಲಿ 'ಗುರುವೇ' ಪರ್ಯಾಯ ದೇವರು. ದೇಹ ಮತ್ತು ಮನಸ್ಸುಗಳ ಸಮನ್ವಯ ಸಾಧನೆ ಇವರ ಗುರಿಯಾಗಿದೆ.[೧೮] ಮಡಿವಂತಿಕೆಯನ್ನು ಅವಧೂತರು ನಿರಾಕರಿಸುತ್ತಾರೆ. ಶಾಕ್ತ ತಂತ್ರಗಳನ್ನು ಅರಿತವರು. ಒಟ್ಟು 'ಅವಧೂತ' ಎಂದರೆ ಎಲ್ಲವನ್ನೂ ತೊಳೆದುಕೊಂಡವರು, ತೊರೆದವರು. ಜಾತಿ, ವರ್ಣ, ನೀಚ, ಉಚ್ಚ, ನಾನು, ನೀನು, ಮೇಲು, ಕೀಳು ಎಂಬ ಭೇದ-ಭಾವ ಇಲ್ಲದವರು.[೧೯]

ಶ್ರೀರಮಣರು, ಮುಕುಂದೂರುಸ್ವಾಮಿಗಳು, ಸಿದ್ಧಾರೂಢರು, ಶರೀಫರು, ಶ್ರೀರಾಮಕೃಷ್ಣ ಪರಮಹಂಸರು, ಕಡಕೋಳಮಡಿವಾಳಪ್ಪನವರು, ಅಥಣಿಶಿವಯೋಗಿಗಳು, ಅವಧೂತರೆಂದು ಹೇಳುತ್ತಾರೆ. ಅವಧೂತರಲ್ಲಿದ್ದ ಈ ಎಲ್ಲಾ ಸಮಾಜಮುಖಿ ಚಿಂತನೆಗಳು ಕನಕದಾಸರ ಬದುಕು ಮತ್ತು ಬರಹಗಳಲ್ಲಿರುವುದನ್ನು ಗುರುತಿಸಬಹುದು.

ಹೀಗೆ ವಚನಕಾರರು, ಭಕ್ತಿಪಂಥ, ಸೂಫಿಪಂಥ, ಹರಿದಾಸರು, ತತ್ವಪದಕಾರರು, ಅವಧೂತರೆಲ್ಲರೂ ಅಂತರಂಗಕ್ಕೆ ಹೆಚ್ಚು ಮಾನ್ಯತೆಯನ್ನು ನೀಡಿದವರೇ ಆಗಿದ್ದಾರೆ. ದೇಹ, ಮನಸ್ಸು, ಅಂತರಂಗ ಶುದ್ಧತೆ, ಸಾವು, ಅಹಂಕಾರ, ಆಸೆ, ವಿರೋಧಗಳೆಂಬ ಅಂಶಗಳ ಮೂಲಕ ಸಮಾಜಮುಖಿ ಚಿಂತನೆ ಆಚರಣೆಗಳನ್ನು ಉಪದೇಶಿಸಿ ಸಮಾನತೆಯ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದರು. ಈ ಮೂಲಕ ಕನ್ನಡದ ಸಮುದಾಯಕ್ಕೆ ಒಂದು ಮಾದರಿ ಸ್ವರೂಪವನ್ನೇ ತಂದುಕೊಟ್ಟಿದ್ದಾರೆ.

ಈ ಎಲ್ಲಾ ಹಿನ್ನೆಲೆಯನ್ನು ಹೊಂದಿರುವ ಕನಕದಾಸರು ಐದುನೂರು ವರ್ಷಗಳ ಇತಿಹಾಸವಿರುವ ಹರಿದಾಸ ಪರಂಪರೆಯಲ್ಲಿ ಪ್ರಮುಖ ಹೆಸರಾಗಿ ಉಳಿದುಕೊಂಡಿದ್ದಾರೆ. ಢಣಾಯಕನೊಬ್ಬನ ಮಗನಾದ ತಿಮ್ಮಪ್ಪ; ಕನಕನಾಯಕನಾಗಿ, ಕನಕದಾಸನಾದದ್ದೇ ಬಹು ದೊಡ್ಡ ಜೀವನ ಚರಿತ್ರೆಯಾಗಿದೆ. ಮಧ್ಯಕಾಲೀನ ಸಂದರ್ಭದಲ್ಲಿ ಹುಟ್ಟಿ ಬೆಳೆದ ತಿಮ್ಮಪ್ಪ ಬಾಲ್ಯದ ಸಹಜ ಅನುಭವಗಳನ್ನು ಪಡೆಯುತ್ತಲೇ ಕ್ಷಾತ್ರ ಹಿನ್ನೆಲೆಯ ವಿದ್ಯೆಯನ್ನು ಕಲಿತನು. ನಂತರ ಪರಿಸ್ಥಿತಿಯ ಕಾರಣದಿಂದ

ಅಪಾರ ನೋವು, ಬಡತನ, ಜಾತಿ, ವರ್ಗಗಳ ತಾರತಮ್ಯವನ್ನು ಬಹುವಾಗಿಯೇ ಅನುಭವಿಸಬೇಕಾಯಿತು.

ಆದರೆ ಅನಿರೀಕ್ಷಿತವಾಗಿ ದೊರೆತ ಹೊನ್ನಿನಿಂದ ಕನಕನಾಯಕನಾದ ತಿಮ್ಮಪ್ಪ ಪ್ರಭುತ್ವದ ಚೌಕಟ್ಟಿನಲ್ಲಿ ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಯ ಅಧಿಕಾರವನ್ನು ನಡೆಸಿದನು. ಹೀಗಿರುವಾಗ ಯುದ್ಧವೊಂದರ ಸೋಲಿನಿಂದ ಪ್ರಭುತ್ವದೊಂದಿಗೆ ಎಲ್ಲವನ್ನೂ ತ್ಯಜಿಸಿ, ಮುಂದೆ ಕನಕನಾಯಕ, ಕನಕದಾಸನಾದದ್ದು ಒಂದು ವಿಸ್ಮಯ.

ಅಂದಿನ ಶೈವ, ವೈಷ್ಣವ ಹಾಗೂ ದ್ವೈತಸಿದ್ಧಾಂತದ ತತ್ವಗಳೊಂದಿಗೆ ಯಾವುದನ್ನೂ ಛೇಡಿಸದೆ ವಿಜಯನಗರದ ವ್ಯಾಸಕೂಟದಲ್ಲಿ ಪರಮಜ್ಞಾನಿಯಾಗಿ, ಗುರುವ್ಯಾಸರಾಯರಿಂದಲೂ ಮೆಚ್ಚುಗೆ ಪಡೆದ ಶಿಷ್ಯನಾಗಿ, ಸಂತ ಕನಕದಾಸರೆನಿಸಿಕೊಂಡರು.

ನಿಂತಲ್ಲಿ ನಿಲ್ಲದೆ, ಊರೂರು ತಿರುಗಿ ತಮ್ಮ ಅನುಭಾವವನ್ನು ಬಿತ್ತರಿಸುತ್ತಾ ಬಾಡದಾದಿಕೇಶವ, ಬೇಲೂರಚನ್ನಕೇಶವ, ಮೇಲುಕೋಟೆಯ ಚೆಲುವನಾರಾಯಣ, ಶ್ರೀರಂಗಪಟ್ಟಣದ ರಂಗನಾಥ, ತಿರುಪತಿಯತಿಮ್ಮಪ್ಪ, ಹಾಗೂ ಕಾಗಿನೆಲೆಯಾದಿ ಕೇಶವನ ಅಂಕಿತಗಳಲ್ಲಿ ಹಾಡು, ಕೀರ್ತನೆ, ಮುಂಡಿಗೆ, ಕಾವ್ಯಗಳನ್ನು ಬರೆಯುತ್ತಲೇ ಕಾಗಿನೆಲೆಗೆ ಬಂದು ನೆಲೆಸಿದರು.

ಸುಮಾರು ತೊಂಬತ್ತು ವರ್ಷಗಳಿಗೂ ಹೆಚ್ಚುಕಾಲ ಬಾಳಿ ಬದುಕಿದ ಕನಕದಾಸರು[೨೦] ಕ್ರಿ.ಶ.೧೫೯೦ ರ ಆಸುಪಾಸಿನಲ್ಲಿ ಅಸುನೀಗಿರಬಹುದೆಂದು ಹೇಳಬಹುದು.

ಹೀಗೆ ಕನಕದಾಸರು ತಮ್ಮ ಜೀವಿತದ ಕಾಲದುದ್ದಕ್ಕೂ ಲೌಖಿಕನೀತಿ, ಸಾಮಾಜಿಕ ಆಚಾರ ವ್ಯವಹಾರಗಳು, ಭಕ್ತಿ, ವೈರಾಗ್ಯದ ತತ್ವಗಳ ಮೂಲಕ ಇಹ ಜೀವನದ ತಾತ್ವಿಕ ನಿಲುವುಗಳನ್ನು ಪ್ರತಿಪಾದಿಸುತ್ತಲೇ ಬಾಳಿದವರು.[೨೧] ಸಾಮಾನ್ಯ ಜನರ ಪರ, ಸೈದ್ಧಾಂತಿಕ ಧ್ವನಿ ಎತ್ತುವುದರೊಂದಿಗೆ ಎಲ್ಲಾ ಕಾಲವನ್ನೂ ಪ್ರತಿನಿಧಿಸುತ್ತಲೇ ಇರುವ ಕನಕದಾಸರ ಜೀವನ ಮತ್ತು ರಚನೆಗಳು, ನಮ್ಮ ಪರಂಪರೆ ಮತ್ತು ಜನಸಾಮಾನ್ಯರನ್ನು ಕುರಿತು ಚಿಂತಿಸುವಾಗಲೆಲ್ಲಾ ಪ್ರಸ್ತುತವಾಗುತ್ತಲೇ ಇರುತ್ತದೆ.

### ಕೊನೆ ಟಿಪ್ಪಣಿಗಳು:

೧ ಡಾ.ಎಸ್.ಎಸ್. ಭಗವತಿ, ಕನಕದಾಸರ ಒಂದು ಅಧ್ಯಯನ ಪುಟ-೩೪೩

೨. ಡಾ. ಎನ್.ಸುರೇಶ್ ನಾಗಲಮಡಿಕೆ, ಮುತ್ತು ಬಂದಿದೆ ಕೇರಿಗೆ. ಪ್ರ-೨೦೧೧ ಪುಟ-೮೩

೩. ಚಂದ್ರಕಾಂತ ಬಿಜ್ಜರಗಿ, ದಾರ್ಶನಕ ಕವಿ ಕನಕದಾಸರು, ಪುಟ-೮೧

೪. ಡಾ. ಕೆ.ಸದಾಶಿವ, ಸಮಗ್ರ ಭಾರತದ ಇತಿಹಾಸ, ಪುಟ–೨೧೩
೫ (ಸಂ) ಡಾ. ಬಂಜಗೆರೆ ಜಯಪ್ರಕಾಶ, ಕನಕ ಮರುದರ್ಶನ, ಪುಟ–೧೧
೬. ಅದೇ ಪುಟ–೧೨
೭. ಅದೇ ಪುಟ– ೫೯
೮ ಡಾ. ಸುರೇಶ್ ನಾಗಲಮಡಿಕೆ, ಮುತ್ತು ಬಂದಿದೆ ಕೇರಿಗೆ, ಪುಟ– ೫೩
೯ ಡಾ. ಹಿ.ಶಿ. ರಾಮಚಂದ್ರೇಗೌಡ, ಅನಿಕೇತನ ಪತ್ರಿಕೆ ಪುಟ–೭೧
೧೦. ಡಾ. ಕೆ.ಸದಾಶಿವ, ಸಮಗ್ರ ಭಾರತದ ಇತಿಹಾಸ, ಪುಟ–೨೧೧
೧೧. ಡಾ.ಸುರೇಶ್‌ನಾಗಲಮಡಿಕೆ, ಜನಪದ ಲೋಕದೃಷ್ಟಿಯಮೂಲಕ ಕನಕಸಾಹಿತ್ಯ ಅಧ್ಯಯನ, ಪುಟ–೧೨೨
೧೨. (ಸಂ) ಪ್ರೊ. ಸುಧಾಕರ, ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಪುಟ–೧೨೧
೧೩. ಡಾ.ಸುರೇಶ್‌ನಾಗಲಮಡಿಕೆ, ಜನಪದಲೋಕದೃಷ್ಟಿಯ ಮೂಲಕ ಕನಕಸಾಹಿತ್ಯ ಅಧ್ಯಯನ, ಪುಟ–೧೨೩
೧೪ ಅದೇ ಪುಟ–೧೨೮
೧೫. ಹೆಚ್.ಎಸ್. ಶಿವಪ್ರಕಾಶ್, ಮೊದಲ ಕಟ್ಟಿನ ಗದ್ಯ, ಪುಟ–೧೪೨
೧೬ ವಿದ್ವಾನ್ ಎನ್. ರಂಗನಾಥಶರ್ಮ, ಹರಿಭಕ್ತಿಸಾರ, ಪುಟ–೨೪
೧೭. ಅದೇ ಪುಟ–೪೨
೧೮ ಡಾ. ನಟರಾಜ್ ಬೂದಾಳು, ಕನ್ನಡದ ಕವಲು ದಾರಿ ಪಂಥಗಳು(ಲೇಖನ)
೧೯. ಪ್ರೊ. ಮಲ್ಲೇಪುರಂ.ಜಿ.ವೆಂಕಟೇಶ, ಅರಿವಿನ ಕಥನ,ಪುಟ–೩–೪
೨೦ ಪೂರ್ವೋಕ್ತ ಶ್ರೀ ಕರ್ಣಾಟಕ ಭಕ್ತ ವಿಜಯ ಪುಟ–೩೧೨
೨೧. ಚಂದ್ರಕಾಂತ ಬಿಜ್ಜರಗಿ, ದಾರ್ಶನಿಕ ಕವಿ ಕನಕದಾಸರು, ಪುಟ–೮೬

# ಅಧ್ಯಾಯ– ಐದು

# ಪಶುಪಾಲನಾ ಪರಂಪರೆ ಕುರಿತ ಶಂ.ಬಾ. ಜೋಶಿ ಅವರ ಚಿಂತನೆಗಳು

**ಪ್ರೇರಣೆ:**

ಭಾರತದ ಚರಿತ್ರೆಯನ್ನು ಕುರಿತು ಚಿಂತಿಸುವ ಮತ್ತು ಮರು ರೂಪಿಸುವ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಇದೆ. ಈವರೆಗೆ ಕೇವಲ ಮೇಲ್ವರ್ಗದವರ ಮತ್ತು ಉಳ್ಳವರ ಪರವಾಗಿ ಈ ದೇಶದ ಚರಿತ್ರೆಯನ್ನು ಇತಿಹಾಸಕಾರರು ಬರೆದಿಟ್ಟಿದ್ದಾರೆ. ಇದರಿಂದಾಗಿ ದೇಶದ ಪಶುಪಾಲನೆ, ಕುರಿಸಾಕಣಿಕೆ ಹಾಗೂ ಕೃಷಿ ಮೂಲದ ಪಾರಂಪರಿಕ ಚರಿತ್ರೆಯನ್ನು ಹೊಂದಿದ ಅನೇಕ ಸಮುದಾಯಗಳು ಹಿನ್ನೆಲೆಗೆ ಸೇರಿಕೊಂಡಿವೆ. ಇಂತಹ ಸಮುದಾಯಗಳು ತಮ್ಮೊಳಗೆ ಪಾರಂಪರಿಕವಾಗಿ ಹೊಂದಿದ್ದ, ಉಪ ಪಂಗಡಗಳು ಮತ್ತು ಜಾತಿ ಕುಲಗಳ; ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿವರಗಳನ್ನು ತಿಳಿಯಲು, ಇತಿಹಾಸವನ್ನು ಮತ್ತೆ ನಾವು ಮರು ಶೋಧಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಮೂಲ ಪರಂಪರೆಯನ್ನು ಕುರಿತಂತೆ ಶೋಧ ನಡೆಸಿದವರಲ್ಲಿ ಕೇಳಿ ಬರುವ ಮೊದಲ ಹೆಸರೇ ಶಂ.ಬಾ. ಜೋಶಿ ಅವರದ್ದು. ಇವರು ತಮ್ಮ ಸಂಶೋಧನಾ ವೈಧಾನಿಕತೆಯಿಂದ ಕನ್ನಡದಲ್ಲಿ ಬಹು ಶಾಸ್ತ್ರೀಯ ಆಕರಗಳ ಮೂಲಕ ಸಂಶೋಧನೆಗೆ ಹೊಸ ರೂಪವನ್ನು ತಂದುಕೊಟ್ಟವರು. ಸಂಸ್ಕೃತಿಯ ಅಂತಃ ಸತ್ವದ ನೆಲೆಗಳಾದ ಭೌಗೋಳಿಕ, ಜನಾಂಗಿಕ, ಭಾಷಿಕ, ಆಚರಣೆ, ಸಂಪ್ರದಾಯ, ದೈವತ್ವ, ಸ್ಥಳನಾಮ, ಮುಂತಾದ ಆಕರಗಳ ಮೂಲಕ ಈ ನೆಲದ ನೂರಾರು ವರ್ಷಗಳ ಇತಿಹಾಸವನ್ನು ಪರಿಶೋಧಿಸಿದ್ದಾರೆ. ಶ್ರೀ ಗೋವಿಂದ ಪೈ ಅವರಿಂದ 'ಕನ್ನಡದ ಕೊಲಂಬಸ್' ಎಂದು ಪ್ರಶಂಸಿಕೊಂಡಿರುವ ಶಂ.ಬಾ. ಜೋಶಿ ಅವರು ಕನ್ನಡ ನಾಡು-ನುಡಿಯ ಚರಿತ್ರೆಯನ್ನು ವೇದ ಪೂರ್ವದಲ್ಲಿ ಗುರುತಿಸಿದ ಕನ್ನಡದ ಮೊದಲ ಚಿಂತಕರೆನಿಸಿದ್ದಾರೆ. ವಿಸ್ಮೃತಿಯ ಕತ್ತಲೆಯಲ್ಲಿ ಕಳೆದುಹೋಗಿದ್ದ ಕನ್ನಡ ಸಂಸ್ಕೃತಿಯ ಚಲನೆಗಳನ್ನು ತಮ್ಮ ಅಗಾಧ ಅಧ್ಯಯನ ಮತ್ತು ಪಾಂಡಿತ್ಯದ ಮೂಲಕ ಭಾರತೀಯ ಪರಂಪರೆಯ ಕನ್ನಡಿಯಲ್ಲಿಟ್ಟು ಶೋಧಿಸಿದ್ದಾರೆ.

ಆರ್ಯ ಪೂರ್ವ ಭಾರತದ ಪರಂಪರೆಯಲ್ಲಿನ ಇತಿಹಾಸದ ಕುರುಹುಗಳನ್ನು ಶಂ.ಬಾ. ಅವರು ಹುಡುಕುತ್ತಾ ಸೈದ್ಧಾಂತಿಕವಾಗಿ ವ್ಯಾಖ್ಯಾನಿಸಿದರು. ಇದರ ಪರಿಣಾಮದಿಂದ, ಬಹುಮುಖಿ ಆಕರಗಳ ಮೂಲಕ ಭಾರತೀಯ ಸಂಸ್ಕೃತಿಯ

ಮೂಲಗಾಮಿ ನೆಲೆಗಳನ್ನು ತಿಳಿಯುವ ಆಸಕ್ತಿ ಶಂ.ಬಾ. ಅವರಲ್ಲಿ ಬೆಳೆಯಲು ಕಾರಣವಾಯಿತು. ಬಹು ಹಿಂದಿನಿಂದಲೂ ಭಾರತದ ಸಾಂಸ್ಕೃತಿಕ ಚರಿತ್ರೆಯ ರಚನೆಯಲ್ಲಿರುವ 'ಆರ್ಯ ಕೇಂದ್ರಿತ ಮಾದರಿ'ಯನ್ನು ಶಂಬಾ ಪ್ರಶ್ನಿಸಿದರು. ಜೊತೆಗೆ ಭಾರತೀಯ ಸಂಸ್ಕೃತಿಯಲ್ಲಿ ಆಗಿರುವ ಪಲ್ಲಟಗಳನ್ನು ಗ್ರಹಿಸಿಕೊಳ್ಳಲು ಶಂಬಾ ಪ್ರಾರಂಭಿಸಿದರು. ಈ ಹಿನ್ನೆಲೆಯಲ್ಲಿ ಇಲ್ಲಿನ ಸ್ಥಾಪಿತ ಇತಿಹಾಸದ ಗ್ರಹಿಕೆಗಳನ್ನು ಮರು ಅಧ್ಯಯನಕ್ಕೆ ಒಳಪಡಿಸಿದರು. ಇದರಿಂದಾಗಿ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಚಲನೆಗಳನ್ನು ಕುರಿತು ಹೊಸ ವಾಗ್ವಾದಗಳನ್ನೇ ಹುಟ್ಟುಹಾಕಿದರು. ಅಲ್ಲದೆ ತಾವು ಪ್ರಮಾಣೀಕರಿಸಿಕೊಂಡು ನಂಬಿದ ಕಟು ಸತ್ಯಗಳನ್ನು ನಿಷ್ಠುರವಾಗಿ ಮಂಡಿಸಿದರು."History is Continuation oF Mythology" ಎನ್ನುವ 'ಲೆನಿಸ್ಟಾನ್' ಅವರ ಅಭಿಪ್ರಾಯದಂತೆ; ಚರಿತ್ರೆ ಮತ್ತು ಪುರಾಣಗಳ ಅಂತರ್ಗತ ಸಂಬಂಧದಲ್ಲಿದ್ದ ಗಾಢ ನಂಬಿಕೆಯನ್ನೇ ತಮ್ಮ ಸಂಶೋಧನೆಗಳ ಸ್ವರೂಪವನ್ನಾಗಿ ಶಂ.ಬಾ. ಬಳಸಿಕೊಂಡರು.

ಕಳೆದ ಶತಮಾನದ ಆರಂಭದಲ್ಲಿ ಕನ್ನಡ ನಾಡಿನ ಸಾಂಸ್ಕೃತಿಕ ಸಂದರ್ಭದಲ್ಲಿ ಹೆಪ್ಪುಗಟ್ಟಿದ ವೈರುಧ್ಯಗಳು ಶಂ.ಬಾ. ಅವರಿಗೆ ಕರ್ನಾಟಕ ಸಂಸ್ಕೃತಿಯ ಪರಂಪರೆಯನ್ನು ಅಧ್ಯಯನಕ್ಕೆ ಒಳಪಡಿಸಲು ಪ್ರೇರಣೆ ನೀಡಿತೆನ್ನಬಹುದು. ನೂರಾರು ವರ್ಷಗಳ ರಾಜಕೀಯ ದಾಸ್ಯದಲ್ಲಿ ವಿಸ್ಮೃತಿಗೆ ಸಂದಿದ್ದ ಕನ್ನಡ ನಾಡಿನ ಗತವೈಭವದ ಚರಿತ್ರೆಯ ಪುನರುಜ್ಜೀವನವು; ಶಂ.ಬಾ. ಅವರ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಇತಿಹಾಸವನ್ನು ಕುರಿತ ಅಧ್ಯಯನದ ಆಸಕ್ತಿಯಿಂದಾಗಿ ಮುನ್ನೆಲೆಗೆ ಬಂದಿತು. ಇದರಿಂದ ಇಲ್ಲಿನ ಶ್ರೀಮಂತ ಪರಂಪರೆ ಮತ್ತು ವರ್ತಮಾನದ ವಾಸ್ತವತೆಯನ್ನು ಕುರಿತು ಶಂ.ಬಾ. ಎತ್ತಿದ ಪ್ರಶ್ನೆಗಳು ಸುಮಾರು ೬ ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ವಿಭಿನ್ನ ಆಯಾಮಗಳನ್ನು ಒದಗಿಸಿಕೊಟ್ಟವು. ಇಲ್ಲಿನ ಸಂಸ್ಕೃತಿ ಚಿಂತಕರು ಕೂಡ ಹೊಸ ನೆಲೆಯಲ್ಲಿ ಯೋಚಿಸಲು ಇದು ದಾರಿ ಮಾಡಿಕೊಟ್ಟಿತು.

ಈ ಹಿನ್ನೆಲೆಯಲ್ಲಿ ಶಂ.ಬಾ. ಅವರು ಇಲ್ಲಿನ ಪರಂಪರೆಯನ್ನು ಕುರಿತಂತೆ ಕಂಡುಕೊಂಡ ಅನೇಕ ಸಂಗತಿಗಳು ಇಂದಿಗೂ ಕರ್ನಾಟಕದಲ್ಲಿ ಮಾತ್ರವಲ್ಲ; ದಕ್ಷಿಣ ಭಾರತದ ದೇಸೀ ಸಂಸ್ಕೃತಿಯ ಮಹತ್ವದ ಚರ್ಚೆಗಳಾಗಿ ಮಾರ್ಪಟ್ಟಿವೆ. ಹಲ್ಮಿಡಿ ಶಾಸನಕ್ಕಿಂತ ಪೂರ್ವದಲ್ಲಿ ಕನ್ನಡಿಗರ ಸಾಂಸ್ಕೃತಿಕ ಪರಂಪರೆಯನ್ನು ದೃಢಗೊಳಿಸುವ ಪ್ರಬಲ ಪುರಾವೆಗಳು ದೊರೆಯದಿರುವ ಸಂದರ್ಭದಲ್ಲಿ; ಶಂಬಾ ಕನ್ನಡಿಗರ ಅಸ್ತಿತ್ವವನ್ನು ವೇದ ಪೂರ್ವದಲ್ಲಿ ಗುರುತಿಸುವ ಪ್ರಯತ್ನ ಮಾಡಿದರು. ಈ ಮೂಲಕ ಕನ್ನಡ ಪರಂಪರೆ ಕುರಿತ ಸಂಶೋಧನೆಗೆ ಬಹು ಶಿಸ್ತೀಯ ಮಾದರಿಯೊಂದನ್ನು ಪರಿಚಯಿಸಿದರು.

**ಸ್ವರೂಪ:**

ಕನ್ನಡ ನಾಡಿನ ಮೂಲ ಪರಂಪರೆಯನ್ನು ಕುರಿತ ಅಧ್ಯಯನಕ್ಕೆ ಶಂಬಾ ಅವರು ಸ್ವತಂತ್ರ ಮಾದರಿಯೊಂದನ್ನು ನಿರೂಪಿಸಿದರು. ಪರಂಪರೆಯ ಕುರುಹುಗಳು ಜನರ ನಡೆವಳಿ–ನುಡಿವಳಿಗಳಲ್ಲಿ ಅವಿಚ್ಛಿನ್ನವಾಗಿ ಸಾಗಿ ಬರುತ್ತವೆ ಎಂಬುದನ್ನು ಶೋಧಿಸಿದರು. ಪರಂಪರೆಯಲ್ಲಿನ ಸ್ಮೃತಿಗಳು ಆಯಾ ಕಾಲಘಟ್ಟದ ಜನಾಂಗದಲ್ಲಿ ವ್ಯಕ್ತವಾಗಿಯೋ ಅವ್ಯಕ್ತವಾಗಿಯೋ ಘನೀಭೂತವಾಗಿರುತ್ತವೆ ಎಂಬುದನ್ನು ಅರಿವಿಗೆ ತಂದುಕೊಂಡರು. ಯಾವ ಕಾರಣಕ್ಕೂ ಜನಾಂಗದ ವಿಕಾಸದಲ್ಲಿ ಹಿಂದಿನ ಪರಂಪರೆಯ ರೂಪ, ರಚನೆ, ಆಚರಣೆ, ವಿಶೇಷತೆಗಳು ನಿಷ್ಕಾರಣವಾಗಿ ಮಾಯವಾಗುವುದಿಲ್ಲ. ಆದರೆ ಅವು ಒಂದಿಲ್ಲೊಂದು ರೂಪದಲ್ಲಿ ಆಯಾ ಜನಾಂಗದ ಅಂತರಂಗ ಮತ್ತು ಬಾಹ್ಯ ಸ್ವರೂಪದಲ್ಲಿ ಪ್ರತಿಫಲನಗೊಳ್ಳುತ್ತವೆ ಎಂದು ನಿರೂಪಿಸಿದರು. ಹಾಗಾಗಿಯೇ ಶಂಬಾ ಅವರ ಈ ನಿಲುವು, ಪ್ರಸ್ತುತ ಈ ಅಧ್ಯಯನದಲ್ಲಿ ಪಶುಪಾಲನಾ ಪರಂಪರೆಯನ್ನು; ಆಯಾ ಕಾಲಘಟ್ಟದಲ್ಲಿ ಪ್ರಭಾವಿಸಿರುವ ಹಿನ್ನೆಲೆಯೊಂದಿಗೆ ಅರ್ಥೈಸಿಕೊಳ್ಳಲು ಪ್ರಧಾನ ಆಕರವಾಗಿ ಸಹಕರಿಸುತ್ತಿದೆ.

ಮಾನವನ ಸಾಂಸ್ಕೃತಿಕ ಪರಂಪರೆಯನ್ನು ಒಂದು ಚಲನಶೀಲ ಪ್ರಕ್ರಿಯೆಯೆಂದು ಈ ಮೂಲಕ ಶಂ.ಬಾ. ವ್ಯಾಖ್ಯಾನಿಸಿದರು. ಇವರ ಪ್ರಕಾರ ನಮ್ಮ ನಡುವಿನ ದೃಶ್ಯ, ಅದೃಶ್ಯ ನೆಲೆಗಳೆರಡರ ಒಟ್ಟು ಗ್ರಹಿಕೆಯನ್ನು; ಒಂದು ಸಾಂಸ್ಕೃತಿಕ ಪರಂಪರೆಯ ಅಧ್ಯಯನಕ್ಕಿರುವ ಸಮಗ್ರತೆಯೆಂದು ಗುರುತಿಸುತ್ತಾರೆ. ಇದರಿಂದಾಗಿ ಸಂಸ್ಕೃತಿ ಕುರಿತ ತಮ್ಮೆಲ್ಲ ಶೋಧನೆಗೆ ಭೌತಿಕ ಮತ್ತು ಭಾಷಿಕ ಪರಿಕರಗಳನ್ನು ಬಳಸಿಕೊಳ್ಳುತ್ತಾರೆ. ಹಾಗಾಗಿ ಲಭ್ಯವಾಗುವ ಮೌಖಿಕ ಸಾಹಿತ್ಯ, ಲಿಖಿತ ಸಾಹಿತ್ಯ, ಪರಿಭಾಷೆ, ಶಬ್ದ, ನುಡಿಗಟ್ಟು, ನಾಣ್ಣುಡಿ, ಸ್ಥಳನಾಮ, ವ್ಯಕ್ತಿನಾಮ, ಇತ್ಯಾದಿ, ಪ್ರಮಾಣಗಳ ಮೂಲಕ ಕನ್ನಡ ಸಂಸ್ಕೃತಿ ಪರಂಪರೆಯ ಪ್ರಾಚೀನತೆಯನ್ನು ಚರ್ಚಿಸುತ್ತಾರೆ.

ಈ ಸಂದರ್ಭದ ತಮ್ಮ 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಎಂಬ ರಚನೆಯಲ್ಲಿ ಸತ್ಯ ಶೋಧನೆಯ ಸಮಗ್ರ ದೃಷ್ಟಿಯನ್ನು ಸಿದ್ಧ ಗ್ರಹಿಕೆಗಳೊಂದಿಗೆ ನಿಷ್ಠುರವಾಗಿ ಪರಿಶೀಲಿಸುತ್ತಾರೆ. ಇದಕ್ಕೆ ಆಧಾರವಾಗಿ ಇತಿಹಾಸ ಮತ್ತು ವರ್ತಮಾನವನ್ನು ಗ್ರಹಿಸಲು; ಪಾಶ್ಚಾತ್ಯ ಮತ್ತು ಪೌರಾತ್ಯ ಚಿಂತನೆಗಳನ್ನು ಮುಖಾಮುಖಿಯಾಗಿಸುತ್ತಾರೆ. ಅನುಮಾನಿತ ಸತ್ಯಗಳನ್ನು ವಾಸ್ತವ ಸತ್ಯಕ್ಕೆ ಎದುರಾಗಿಸಿ ಚರಿತ್ರೆಯ ಹೆಜ್ಜೆಗಳಿಗೆ ಜೀವ ತುಂಬಿದ್ದಾರೆ. ಇದಕ್ಕಾಗಿ ಮ್ಯಾಕ್ಸ್ ಮುಲ್ಲರ್, ಇ.ಬಿ.ಟೈಲರ್ ಮತ್ತು ಹೆಗಲ್ ರಂತಹ ವಿದೇಶಿ ವಿದ್ವಾಂಸರನ್ನೂ, ಡಾ.ರಾಧಾಕೃಷ್ಣನ್, ಡಾ. ಸುನೀತ್‌ಕುಮಾರ್‌ಚಟರ್ಜಿ, ಡಾ. ಆನಂದಕುಮಾರಸ್ವಾಮಿ ಮುಂತಾದ ದೇಶೀ ವಿದ್ವಾಂಸರ ಅಧ್ಯಯನಗಳನ್ನು ಬಳಸಿಕೊಳ್ಳುತ್ತಾರೆ. ಜೊತೆಗೆ ಸಾಹಿತ್ಯ, ಶಿಲ್ಪ, ಭಾಷೆ,

ಪುರಾತತ್ವ ಎಂಬ ಸಾಂಸ್ಕೃತಿಕ ಆಕರಗಳ ಮೂಲಕ ಇತಿಹಾಸ ಪೂರ್ವದ 'ಮಾನವ ಪರಂಪರೆ'ಯನ್ನು ಶೋಧನೆಗೆ ಒಳಪಡಿಸುತ್ತಾರೆ. ಈ ಕಾರಣಕ್ಕಾಗಿ ಪ್ರಸ್ತುತ ಅಧ್ಯಯನದಲ್ಲಿ ಮಾನವನ ಪಶುಪಾಲನಾ ಪರಂಪರೆಯ ವಿಕಾಸದ ಶೋಧನೆಯನ್ನು ಈಗಾಗಲೇ ಶಂ.ಬಾ. ಅವರು ನಿರೂಪಿಸಿರುವ ಅಧ್ಯಯನಗಳ ಚೌಕಟ್ಟಿನಲ್ಲಿ ನೋಡಲು ಅನುಕೂಲವಾಗಿದೆ. ಜೊತೆಗೆ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ, ಮಧ್ಯಕಾಲೀನ ಕಾಲಘಟ್ಟದ ಕನಕ ಪರಿಸರವನ್ನು ಪಶುಪಾಲನಾ ಪರಂಪರೆಯೊಂದಿಗೆ ಚರ್ಚಿಸಲೂ ಕೂಡ ಶಂ.ಬಾ. ಅವರ ಶೋಧನೆಯ ಆಕರಗಳನ್ನೇ ಬಳಸಿಕೊಳ್ಳಲಾಗಿದೆ.

ಇಂತಹ ಅಧ್ಯಯನಗಳಲ್ಲಿ ಶಂಬಾ ಅವರನ್ನು ಏಕೆ ಬಳಸಿಕೊಳ್ಳಲಾಗುತ್ತದೆ, ಎಂದರೆ ಕಳೆದುಹೋಗಿದ್ದ ಸಾಂಸ್ಕೃತಿಕವಾದ ದೇಶೀ ಇತಿಹಾಸವನ್ನು; ಅದರಲ್ಲೂ ಮುಖ್ಯವಾಗಿ ಕನ್ನಡಿಗರ ನೆಲೆಗಳನ್ನು, ಇಲ್ಲಿನ ಸಂಸ್ಕೃತಿ ಮತ್ತು ಸಾಹಿತ್ಯಕ ಸ್ವರೂಪದ ಆಕರಗಳ ಬೆಳಕಿನಲ್ಲಿಟ್ಟು ಪರಿಶೀಲಿಸುವ ಕಾರಣಕ್ಕೆ. ಇಲ್ಲಿನ ವಚನ ಯುಗ, ಭಕ್ತಿ ಪಂಥ, ದಾಸಯುಗವೂ ಸೇರಿದಂತೆ ಕನಕದಾಸರ ಕಾಲಘಟ್ಟವನ್ನು ಪಶುಪಾಲನಾ ಪರಂಪರೆಯ ಮೂಲಕ ಅರಿಯಲು ಹೊರಟಿರುವ ಈ ಅಧ್ಯಯನಕ್ಕೆ ಶಂ.ಬಾ. ಅವರ ಸಂಶೋಧನೆಯ ನಿಲುವುಗಳು ಒಂದು ಸೂತ್ರವನ್ನೇ ಒದಗಿಸಿಕೊಟ್ಟಿವೆ.

**ಶಂ. ಬಾ. ಜೋಶಿ ಮತ್ತು ಪಶುಪಾಲನಾ ಸಂಸ್ಕೃತಿ:**

ನಿನ್ನೆಗಳು ಇಂದು ಮಾತನಾಡುತ್ತವೆ. ಅದನ್ನು ಸತ್ವಯುತ ಮಾರ್ಗದಲ್ಲಿ ಇತಿಹಾಸ ವಿವರಿಸುತ್ತದೆ. ಈ ಇತಿಹಾಸವನ್ನು ಪರಂಪರೆಯ ಮೂಲವೊಂದು ಅರ್ಥಪೂರ್ಣವಾಗಿಸುತ್ತದೆ ಎಂಬುದು ಶಂ.ಬಾ. ಅವರ ದೋರಣೆ. ಹೀಗೆ ನಿನ್ನೆ ಮತ್ತು ಇಂದುಗಳ ಮಧ್ಯದ ಕಾರ್ಯಕಾರಣ ಸಂಬಂಧದಂತೆ ಹುಟ್ಟಿರುವ ಮಾನವನ ವಿಕಾಸದ ಸಾಂಸ್ಕೃತಿಕ ಪರಂಪರೆ ಚಲನಶೀಲ ಪ್ರಕ್ರಿಯೆಯಾಗಿ 'ಕನಕಯುಗ'ವನ್ನು ಹೇಗೆ ಪ್ರಭಾವಿಸಿದೆ ಎಂಬುದನ್ನು ಈ ಅಧ್ಯಯನ ಶೋಧಿಸಲು ಶಂ.ಬಾ. ದಾರಿ ತೋರಿಸುತ್ತಾರೆ.

ಶಂ.ಬಾ. ಅವರ ಕನ್ನಡ ಸಂಸ್ಕೃತಿ ಅಧ್ಯಯನದ ಪ್ರಮುಖ ಆಯಾಮವಾಗಿ ಜನಾಂಗಿಕ ಶೋಧವೂ ಸೇರಿಕೊಳ್ಳುತ್ತದೆ. ಜನಾಂಗವೆಂಬುದು ಜಾತಿ ಧರ್ಮಗಳಿಂದ ಭಿನ್ನವಾದುದು. "ಜನಾಂಗವೆಂದರೆ ಆರಂಭ ಕಾಲದಿಂದಲೂ ಒಟ್ಟಿಗೆ ಇದ್ದು ಬೆಳೆದು ಬಂದ ಮನುಷ್ಯ ಸಮಾಜ೧" ಎನ್ನತ್ತಾರೆ ಶಂ.ಬಾ.. ಕನ್ನಡ ಜನಾಂಗದ ಮೂಲ, ಅವರ ನೆಲೆ, ವೃತ್ತಿಗುಣ ಕುರಿತ ಕುತೂಹಲಕಾರಿ ಚರ್ಚೆಗಳನ್ನು ಮುಂದೆ ಬೆಳೆಸುತ್ತಾರೆ. ಕನ್ನಡಿಗರ ಮೂಲಿಗರೆಂದರೆ ಹಟ್ಟಿಕಾರರು. ಹಟ್ಟಿಯೆಂದರೆ ದನಕರುಗಳ ಬೀಡು. ಹಟ್ಟಿಕಾರರೆಂದರೆ ದನಕರುಗಳನ್ನು ಸಾಕಿ ಬದುಕುವವರು. ಪಶುಪಾಲನಾ ವೃತ್ತಿಯ ಈ ಹಟ್ಟಿಕಾರರು ಕಾವೇರಿಯಿಂದ ಗಂಗೆಯವರೆಗೆ, ನೀಲಗಿರಿಯಿಂದ

ರಾಜಮಹಲದವರೆಗೆ ನೆಲೆಸಿದ್ದವರನ್ನೇ, ಕನ್ನಡ ಜನಾಂಗವೆಂದು ಶಂ.ಬಾ. ನಿರೂಪಿಸುತ್ತಾರೆ.

ಇದರೊಂದಿಗೆ ಅಖಿಲ ಭಾರತೀಯ ಜನಾಂಗವೇ 'ಹಟ್ಟಿಕಾರ'ರೆಂಬ ನಿಲುವನ್ನು ಅನೇಕ ಮೂಲಗಳಿಂದ ಶೋಧಿಸಿ, ಹಟ್ಟಿಕಾರರ ಅನನ್ಯತೆಯ ಬಗ್ಗೆ ವಿದ್ವಾಂಸರ ಗಮನವನ್ನು ಶಂ.ಬಾ. ಕೇಂದ್ರೀಕರಿಸುವಂತೆ ಮಾಡುತ್ತಾರೆ. ಸಾಕುಪ್ರಾಣಿಗಳನ್ನು ಇಟ್ಟುಕೊಂಡು ನೆಲೆನಿಂತ ಸ್ಥಳಗಳೇ ಹಟ್ಟಿಗಳು. ಹಾಗಾಗಿ ಮಹಾರಾಷ್ಟ್ರ ಶಬ್ದದ ಮೂಲರೂಪ 'ಮರಹಟ್ಟಿ' ಅಥವಾ ಮರ್ಹಾಟ. ಇದು 'ಹಟ್ಟಿ' ಎಂಬ ಪ್ರದೇಶವಾಚಕ ಪದವನ್ನೇ ಹೊಂದಿ ಹುಟ್ಟಿಕೊಂಡಿದೆ. ಪ್ರಾದೇಶಿಕವಾಗಿ ಯೂರೋಪಿಯನ್ ಸಂಶೋಧಕರು ಹೇಳುವ ದ್ರಾವಿಡ ಜನಾಂಗವನ್ನೇ ಶಂ.ಬಾ. ಅವರು 'ಕಂದಮಿಳ ಜನಾಂಗ' 'ಹಟ್ಟಿಕಾರ ಜನ' ಎಂದು ಸಂಭೋದಿಸುತ್ತಾರೆ. ಹಾಗೆಯೇ ಜನಾಂಗಿಕ ನೆಲೆಯಲ್ಲಿ 'ಹಾಲುಮತ' ವನ್ನು ಶೋಧಿಸುವ ಶಂ.ಬಾ. ಅವರು ಮಧ್ಯ ಪ್ರಾಂತ್ಯದಲ್ಲಿ ವಾಸವಾಗಿರುವ 'ಕುಣುಬಿ' ಜನಾಂಗವನ್ನು ಕುರಿತ ಸಂಶೋಧನೆಯನ್ನು ಪ್ರಸ್ತಾಪಿಸಿದ್ದಾರೆ. ಈ 'ಕುಣುಬಿ' ಎಂಬ ಪದ ಕನ್ನಡದ ಕುರುಬರ 'ಮರಾಠಿ' ಅವತಾರ ಅಥವಾ 'ಪರ್ಯಾಯ' ಪದವಾಗಿದೆ. ಕುರಿಕಾಯುವುದನ್ನು ಬಿಟ್ಟು ಒಕ್ಕಲಿಗರಾಗಿ ಹೊಲಗದ್ದೆ ಮಾಡಿಕೊಂಡು ಕೃಷಿ ವೃತ್ತಿಯಲ್ಲಿ ತೊಡಗಿದ ಮಹಾರಾಷ್ಟ್ರದಲ್ಲಿಯ ಕುರುಬರೇ ಕುಣುಬಿಯರು. ಈ 'ಕುಣುಬಿ'ಯವರೇ 'ದನಗರ' ಪರಂಪರೆಯನ್ನು ಹೊಂದಿದವರಾಗಿದ್ದಾರೆ. ಎಂಬುದಾಗಿ ಶಂ.ಬಾ. ವಿಶ್ಲೇಷಿಸಿದ್ದಾರೆ.[೨] ಈಗಲೂ ಹಟ್ಟಿಕಾರರನ್ನು ನಾಸಿಕ್ ಪ್ರದೇಶದಲ್ಲಿ ಕುರುಬ–ಕುರುಕ–ದನಗರ ಎಂದೂ; ಮಹಾರಾಷ್ಟ್ರದಲ್ಲಿ ದನಗರ–ಹಟಗಾರ ಎಂದೂ; ತಮಿಳು ನಾಡಿನಲ್ಲಿ ಕುರುಂಬರ್ ಎಂದೂ; ನಾಗಪುರದಲ್ಲಿ ಗೌಳಿಗರು–ಕುರುಬರು ಎಂದೂ ಕರೆಯುತ್ತಾರೆ.

ಜೊತೆಗೆ ಗುಜರಾತಿನ ಯಾದವರು, ವಿದರ್ಭದ ಭೋಜಕರು, ಶಾತವಾಹನರು, ಪಲ್ಲವರು, ಗಂಗರು, ರಾಷ್ಟ್ರಕೂಟರೆಲ್ಲಾ ದ್ರಾವಿಡ ಮೂಲದ ಹಟ್ಟಿಕಾರ ಕುರುಬರೆಂದೇ ಶಂ.ಬಾ. ಹೇಳುತ್ತಾರೆ. ಹೀಗೆ ವಿಭಿನ್ನ ನೆಲೆಗಳಲ್ಲಿ ವಿಭಜಿತರಾಗಿದ್ದ ದ್ರಾವಿಡ (ಹಟ್ಟಿಕಾರ)ರ ಬಗೆಗಳನ್ನು ಅವರು ಗುರುತಿಸಿದ್ದಾರೆ. ಅಲ್ಲದೆ ಕಳವರು, ಅಂಡೆಯವರು, ಕುಡುವರು, ತುರ್ವಕರು ಹಾಗೂ ಒಂದೇ ಭಾಷಿಕ ಮೂಲದವರಾದ ಮಲೆಯರು, ಮರವರು, ಕುರುಬರು, ದನಗರು ಇವರೆಲ್ಲರೂ ಹಾಲು ಉತ್ಪಾದನೆ ಮತ್ತು ಹಾಲಿನ ವ್ಯಾಪಾರಿ ವೃತ್ತಿಯನ್ನು ಹೊಂದಿದ್ದರೆಂಬುದನ್ನು ಶಂ.ಬಾ. ತೋರಿಸಿದ್ದಾರೆ. ಮುಂದೆ ವಿಕಾಸ ಹೊಂದುತ್ತಾ ಸಾಗಿದ ಇವರು ಗೌಳಿಗರು, ನೇಕಾರರು, ಒಕ್ಕಲಿಗರು, ಕಣಿಯವರಾಗಿ ವೃತ್ತಿಗಳನ್ನು ಅವಲಂಬಿಸಿಕೊಂಡರು. ನಂತರ ಈ ವೃತ್ತಿಗಳೇ ಜಾತಿಗಳಾಗಿ ಪರಿವರ್ತನೆಗೊಂಡು, ಆಧುನಿಕ ಬದುಕಿನ ಇವತ್ತಿನ ಸಂದರ್ಭದಲ್ಲಿಯೂ

ಹಾಗೇ ಮುಂದುವರೆದಿರುವುದನ್ನು ನಾವು ಕಾಣುತ್ತಿದ್ದೇವೆ. ಅದರಲ್ಲೂ ಕನಕ ಪರಿಸರದಲ್ಲಿ ವೃತ್ತಿಯಾಧಾರಿತ ಜಾತಿ ವ್ಯವಸ್ಥೆ ಇದ್ದು ಕೆಳ ಜಾತಿಯವರ ಸಂಬಂಧ ಮತ್ತು ಪ್ರಭಾವ ಕನಕದಾಸರ ಮೇಲಾಗಿರುವುದನ್ನು ಅವರ ಸಾಹಿತ್ಯಕ ಬರವಣಿಗೆ ಮತ್ತು ಕೀರ್ತನೆಗಳಿಂದಲೇ ತಿಳಿಯಬಹುದು. ಈ ಅಂಶವನ್ನು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ನಿರೂಪಿಸಲಾಗುವುದು.

ಈ ಎಲ್ಲಾ ಆಧಾರಗಳನ್ನು ಹಿನ್ನಲೆಯಾಗಿಟ್ಟುಕೊಂಡೆ ಶಂ.ಬಾ. ಅವರು, ಕನ್ನಡದ ಮೂಲ ಜನಾಂಗವೆಂದರೆ ಗೌಳಿಗರು, ಕುರುಬರು ಮತ್ತು ಹೊಲೆಯರು ಎಂದು ಅಭಿಪ್ರಾಯಪಡುತ್ತಾರೆ. ಇವರೆಲ್ಲಾ ಈ ನಾಡಿನ ದನಗಾಹಿ ಮತ್ತು ಕುರಿಗಾಹಿ ಪಶುಪಾಲಕರಾಗಿದ್ದು, ಈ ಪಶುಪಾಲಕರನ್ನು ಹಾಲುಮತದವರೆಂದು ಕರೆಯುವ ರೂಢಿಯಿದೆ. ಶಂ.ಬಾ. ಅವರು, ಕ್ರಿ.ಶ. ೧೯೬೦ರಲ್ಲಿ 'ಹಾಲುಮತ ದರ್ಶನ'ವನ್ನು ಬರೆದರು. ಇಲ್ಲಿಂದ ಪ್ರಾರಂಭವಾದ ಅವರ ಸಂಶೋಧನಾ ಜಿಜ್ಞಾಸೆ 'ಬಿತ್ತಿದ್ದನ್ನು ಬೆಳಕೊ'(೧೯೮೪) ಎಂಬ ಕೃತಿಯವರೆಗೂ ಮುಂದುವರೆದಿದೆ.[೩]

ಇದೆಲ್ಲದರ ನಡುವೆಯೂ ಶಂ.ಬಾ. ಅವರಿಗೆ, ಕರ್ನಾಟಕದಲ್ಲಿ ಕಾವೇರಿಯಿಂದ ಉತ್ತರದ ಗೋದಾವರಿಯವರೆಗೆ ಹಬ್ಬಿ ಕಣ್ಮರೆಯಾಗಿರುವ ಭೌಗೋಳಿಕ ಪ್ರದೇಶದ ಶೋಧ ಮುಖ್ಯವಾಗಿತ್ತು. ಈ ಕಾರಣಕ್ಕಾಗಿ ಕರ್ನಾಟಕದ ಭೌಗೋಳಿಕ ಶೋಧದ ಹುಡುಕಾಟವನ್ನು ಹಾಲುಮತದ ಹಿನ್ನೆಲೆಯಲ್ಲಿ ಆರಂಭಿಸಿದ ಶಂ.ಬಾ. ಅವರು ಕನ್ನಡಿಗರ ಪಶುಪಾಲನಾ ಸಂಸ್ಕೃತಿಯನ್ನು ವಿಶ್ಲೇಷಿಸುತ್ತಾ ಹೋಗುತ್ತಾರೆ. ಈ ಪ್ರದೇಶದಲ್ಲಿ ವಾಸಿಸುವ ಕುರುಬರು, ಗೊಲ್ಲರು, ಹೊಲೆಯರು, ಕುಣುಬಿಯರು, ಬಿಲ್ಲವರು, ಹಾಗೂ ಇನ್ನೂ ಹತ್ತಿರವಾಗುವ ಜಾತಿ ಬಣಗಳನ್ನು ಶಂ.ಬಾ. ಶೋಧಿಸುತ್ತಾರೆ. ಅನೇಕ ಕನ್ನಡ ಜನಾಂಗದ ಸಮುದಾಯಗಳಲ್ಲಿ ಹಾಲುಮತ ಸಮುದಾಯ ಈಗಲೂ ಮಧ್ಯಪ್ರಾಂತ್ಯದಲ್ಲಿ ಇದ್ದು ಅವರ ಭಾಷೆ ಈಗಿನ ಬಿಜಾಪುರ ಕನ್ನಡವನ್ನು ಹೋಲುತ್ತದೆಂದು ಹೇಳುತ್ತಾರೆ. ನಾಗಪುರದ 'ಚಂದಾ ವಿಭಾಗದ' ಈಗಿನ ಕುರುಬರನ್ನು ಕುರಿತು ಶಂ.ಬಾ. ಹೀಗೆ ಹೇಳುತ್ತಾರೆ. ಕುರುಬರು ಪಟ್ಟಣಿಗರಲ್ಲ; ಹೊತ್ತು ಬಂದಂತೆ ಕೊಡೆ ಹಿಡಿಯುವವರೂ ಅಲ್ಲ; ಗೆದ್ದೆತ್ತಿನ ಬಾಲ ಹಿಡಿಯುವವರಂತೂ ಅಲ್ಲವೇ ಅಲ್ಲ. ಹಾಗಾಗಿ ಇಲ್ಲಿನ ಕನ್ನಡಿಗರು ತಮ್ಮ ಮನೆ ಮಾತಾದ ಕನ್ನಡವನ್ನು ಇಂದಿಗೂ ಬಿಟ್ಟಿಲ್ಲ. ಇದು ಶಂ.ಬಾ. ಅವರ ಹಾಲುಮತ ಸಂಸ್ಕೃತಿಯ ಭೌಗೋಳಿಕ ದರ್ಶನವಾಗಿದೆ.[೪]

ಹೀಗೆ ಪಾರಂಪರಿಕ ಸಮುದಾಯವೊಂದನ್ನು ಮಾನವಶಾಸ್ತ್ರೀಯ ನೆಲೆಯಲ್ಲಿ ನೋಡಿದಾಗ ಅಲ್ಲಿನ ಸಮಾಜ, ಜನಾಂಗ, ಸಂಸ್ಕೃತಿಯ ಹುಟ್ಟು, ಬೆಳವಣಿಗೆ ಅರಿವಿಗೆ ಬರುತ್ತದೆ. ಈಗಲೂ ಗೊಲ್ಲರ ಹಟ್ಟಿ, ಕುರಿಹಟ್ಟಿ ಎಂಬ ಸ್ಥಳವಾಚಕಗಳು

ಬಳಕೆಯಲ್ಲಿರುವುದನ್ನು ಗಮನಿಸಬಹುದು. ಜನಪದರ ಮೌಖಿಕ ಮಹಾಕಾವ್ಯವಾದ ಜುಂಜಪ್ಪನ ಕಾವ್ಯದಲ್ಲಿ ಹಟ್ಟಿಯ ಮೂಲ ಹಾಗೂ ಉಗಮದ ಬಗ್ಗೆ ಪುರಾವೆಗಳು ಸಿಗುತ್ತವೆ. ಈ ಹಟ್ಟಿಯ ಜನ ಆಚರಿಸುವ ಹಬ್ಬವೇ ಹಟ್ಟಿಯ ಹಬ್ಬ. ನಮ್ಮಲ್ಲಿ ಪ್ರಾಚೀನಕಾಲದಿಂದಲೂ ಕೃಷಿ ಮೂಲದವರು ಅಥವಾ ಪಶುಪಾಲಕರು ಆಚರಿಸಿಕೊಂಡು ಬರುವ ಈ ಹಬ್ಬದಲ್ಲಿ ಆಕಳು ಅಥವಾ ಎತ್ತಿನ ಸಗಣಿಯಿಂದ ಹಟ್ಟಿಯನ್ನು ಸಾರಿಸಿ ಬಗೆಬಗೆಯ ಹೂಗಳಿಂದ ಅಲಂಕರಿಸಿ ಸಂಭ್ರಮ ಸಡಗರದಿಂದ ಪೂಜೆ ಮಾಡುತ್ತಾರೆ. ದನಗಾರ, ಪಶುಪಾಲಕ ಹಾಗೂ ಕೃಷಿಕರು, ಆಚರಿಸುವ ಈ ಹಟ್ಟಿಯ ಹಬ್ಬ ಇಂದು ಹಣವಂತರ, ವರ್ತಕರ ಕೈಗೆ ಸಿಲುಕಿ ದೀಪಾವಳಿ ಎಂಬ ಹೆಸರಿನೊಂದಿಗೆ ಆಚರಣೆಗೊಳ್ಳುತ್ತಿದೆ.[೫]

ಇಂತಹ ಹಟ್ಟಿಕಾರ (ಪಶುಪಾಲಕರ) ಸಮುದಾಯದ ಅನನ್ಯತೆಯನ್ನು ತಜ್ಞ ವಿದ್ವಾಂಸರ ಗಮನಕ್ಕೆ ತಂದವರು ಶಂ.ಬಾ. ಅವರೇ. ಪಶುಪಾಲಕರಾದ ಹಟ್ಟಿಕಾರರೇ ಭಾರತದ ಮೂಲನಿವಾಸಿಗಳು ಎಂಬ ವಾದ, ಗಟ್ಟಿಯಾದ ಆಧಾರವನ್ನು ಪಡೆದುಕೊಂಡಿದೆ. ಈ ಹಟ್ಟಿಕಾರರನ್ನು ಕುರುಬರೆಂದೂ, ಹಾಲುಮತದವರೆಂದೂ ಕರೆಯಲಾಗಿದೆ. ಇವರು ಸಂಸ್ಕೃತಿಯ ಪುರಾತನ ಪದ್ಧತಿಗಳನ್ನು ಅನುಸರಿಸಿಕೊಂಡು, ಕಾಪಾಡಿಕೊಂಡು ಬಂದವರಾಗಿದ್ದಾರೆ.[೬]

ಈ ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ದೇವರ ನೆಲೆಯನ್ನು; ಶಂಬಾ ಅವರು ವೇದ ಪುರಾಣಗಳಲ್ಲಿ ಹುಡುಕಲೆತ್ನಿಸಿದ್ದಾರೆ. ಋಗ್ವೇದದಲ್ಲಿ ಪ್ರಸ್ತಾಪವಾಗಿರುವಂತೆ 'ವೃಷಭ' ಕನ್ನಡಿಗರ ಅಚ್ಚುಮೆಚ್ಚಿನ ಬಸವನಾಗಿದ್ದಾನೆ. ಈತ ವೀರರ ದೇವರು. ಮುಂದೆ ಈ ವೀರ ದೇವನೇ 'ಬೀರದೇವ'ನಾಗಿದ್ದಾನೆ. ಈತನೇ ಹಾಲುಮತ ಅಥವಾ ಹಟ್ಟಿಗಾರರ ದೇವರು. ಕನಕದಾಸರು ತಮ್ಮ ಕೀರ್ತನೆಯೊಂದರಲ್ಲಿ ಬೀರಪ್ಪನ್ನು ಕುರಿತು ಕೀರ್ತಿಸಿರುವುದು ಹಾಲುಮತ ಸಂಸ್ಕೃತಿಯ ಸಂಬಂಧ ಕನಕದಾಸರಿಗಿತ್ತೆಂಬುದನ್ನು ದೃಢಪಡಿಸುತ್ತದೆ.

ಈ ಬೀರದೇವರನ್ನು ಗೋದಾವರಿ ನದಿ ತೀರದ ನಾಸಿಕ ಪರಿಸರದಲ್ಲಿ 'ಹಾಟಕೇಶ್ವರ' ಎಂದು ಕರೆಯುತ್ತಾರೆ.[೭] ಹಾಗೆಯೇ ಈ ಭಾಗದಲ್ಲಿ ಕಾಲೇಶ್ವರ ಅಥವಾ ಕಲ್ಲೇಶ್ವರ ಎಂಬ ದೇವತೆಗಳಿವೆ. ಇಲ್ಲಿ ಬರುವ ಕಲ್ ಅಥವಾ 'ಕಳ್' ಪದ ಪ್ರಾಚೀನ 'ಕಂದಮಿಳ'ಪದ. ಇದರ ಅರ್ಥವೇ ರಸ (ಹಾಲು) ಎಂದು, ಕ್ಷೀರವಾಚಕ ಪದವಾಗಿದೆ. ಕಲ್ಲೇಶ್ವರ ಹಾಲಿನ ದೇವತೆ, ಆದ್ದರಿಂದ ಕಲ್ಲೇಶ್ವರನು ಕೂಡ ಹಟ್ಟಿಕಾರರ ದೈವ ಎಂದು ಶಂ.ಬಾ. ಹೇಳುತ್ತಾರೆ.

ಇದೇ ರೀತಿ ಬೆಟ್ಟಗುಡ್ಡದಲ್ಲಿ ವಾಸಿಸುತ್ತಿದ್ದ ಹಟ್ಟಿಕಾರರ ದೇವತೆಯಾದ ಮಲ್ಲಯ್ಯ.

(ಮಲೆ+ಅಯ್ಯ), ಗುಡ್ಡಪ್ಪ, ಗಿರಿಯಪ್ಪ, ಮಲ್ಲಾಸುರನನ್ನು ಹತಗೊಳಿಸಿದವನೇ ಮಲ್ಲಾರಿ. (ವ್ಯೈಲಾರಿ>ವ್ಯೈಲಾರಲಿಂಗ)*೧ ಇವರೆಲ್ಲರಿಗೂ ಕುರುಬರೇ ಹೆಚ್ಚಾಗಿ ನಡೆದುಕೊಳ್ಳುತ್ತಿದ್ದಾರೆ. ಹೀಗೆ ಪಶುಪಾಲಕರ ಸಮುದಾಯದವರಲ್ಲಿ ಬರುವ,

ಪಾಟೀಲ (ಪಟ್ಟಿಲ>ಪಟ್ಟಿ>ಹಟ್ಟಿ)
ಗೋಪಾಲ (ಗೋವು ಪಾಲಕ)
ತುರುಕರು (ದನಕರು ಸಮುದಾಯ)
ಗೌಂಡ (ಗೌಡ)
ಪಾಠಾರಾ(ವಠಾರ)
ಪಾಳಿ (ಪಳ್ಳಿ>ಹಳ್ಳಿ)
ಪಟ್ಟಿ ( ತೋಟ)*೨
ಕಳ್ (ಹಾಲು)
ಝೂಡಮಂಡಳ*೩ (ಮರದ ಹಟ್ಟಿ)

ಎಂಬಿತ್ಯಾದಿ ಪದಗಳ ಹಿನ್ನೆಲೆಯಲ್ಲಿ ಎಣೆದುಕೊಂಡಿರುವ ಅರ್ಥವ್ಯಾಪ್ತಿಯನ್ನು ಶಂ.ಬಾ. ಬಿಡಿಸಿ ಹೇಳುತ್ತಾರೆ.[೮]

ಹಾಗಾಗಿ ಇಲ್ಲಿನ ಹಾಲುಮತ ಸಂಸ್ಕೃತಿ ಕುರಿತ ಶಂಬಾ ಅವರ ಚಿಂತನೆ; ಈ ಜನಾಂಗದ ಸಾಂಪ್ರದಾಯಿಕ ಜೀವನದ ಇತಿಹಾಸವನ್ನು ತಿಳಿಯುವುದಷ್ಟೇ ಅಲ್ಲ; ಇವರ ಸಂಸ್ಕೃತಿಯ ವಿಕಸನವನ್ನೂ ಅರಿಯುವುದು ಕೂಡ ಆಗಿದೆ. ಒಟ್ಟಾರೆ ಶಂ.ಬಾ. ಅವರು ಜನಾಂಗದ ಬೆಳಕಿನಲ್ಲಿ ಭೌಗೋಳವನ್ನೂ; ಸ್ಥಳನಾಮದ ಬೆಳಕಿನಲ್ಲಿ ಜನಾಂಗವನ್ನೂ; ಶೋಧಿಸಿರುವುದು ಸ್ವಾರಸ್ಯವೂ, ಕುತೂಹಲವೂ ಆಗಿದ್ದು, ಈ ಮೂಲಕ ಹಾಲುಮತ ಸಂಸ್ಕೃತಿಯ ಜನಾಂಗಿಕ ದರ್ಶನವನ್ನು ಮಾಡಿಸಿದ್ದಾರೆ. ಹಾಗಾಗಿ ಇವರ ಹಾಲುಮತ ಸಂಸ್ಕೃತಿಯ ಶೋಧ ಕಳೆದು ಹೋದ ಕರ್ನಾಟಕದ ಪಶುಪಾಲಕ ಸಮುದಾಯವೊಂದರ ಹುಡುಕಾಟದ ಮೊದಲ ಪ್ರಯತ್ನವಾಗಿದೆ. ಆದ್ದರಿಂದ ಪ್ರಸ್ತುತ ಈ ಅಧ್ಯಯನವು 'ಪಶುಪಾಲನಾ ಪರಂಪರೆಯ' ವಿಕಾಸದ ನೆಲೆಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ಶಂ.ಬಾ. ಅವರ ಇಂತಹ ಚಿಂತನೆಗಳನ್ನು ಪ್ರಮುಖ ಆಕರವನ್ನಾಗಿ ಬಳಸಿಕೊಂಡಿದೆ. ಹಾಗೂ ಮುಖ್ಯವಾಗಿ ದಾಸಪರಂಪರೆಯ ಕನಕದಾಸರನ್ನು ಇಲ್ಲಿನ ಮೂಲ

---

* ೧ ಮಹಾರಾಷ್ಟ್ರದಲ್ಲಿ "ಖಂಡೋಬ"ನಾಗಿ ಪ್ರಸಿದ್ಧನಾಗಿದ್ದಾನೆ.

* ೨ ತೋಟ-ಪಟ್ಟಿ(ಜೋಡಿಪದ) * ೩ ಮರಾಠಿ ಪದ

'ಪರಂಪರೆ'ಯೊಂದು ಹೇಗೆ ರೂಪಿಸಿದೆ ಎಂಬುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲು ಶಂ.ಬಾ. ಅವರ ಇಂತಹ ಸಂಶೋಧನೆಗಳಿಂದ ಸಾಧ್ಯವಾಗಿದೆ.

**ಕೊನೆ ಟಿಪ್ಪಣಿಗಳು;**

೧. (ಸಂ) ಮಲ್ಲೇಪುರಂ ಜಿ. ವೆಂಕಟೇಶ್. ಶಂಬಾ ಕೃತಿ ಸಂಪುಟ–೨, ಕಂನಡ. ಕಂನುಡಿ, ಪುಟ–೧೮

೨ (ಸಂ) ಡಾ.ಪಿ. ಮಹದೇವಯ್ಯ, ಶಂಬಾಜೋಶಿ ಚಿಂತನೆಗಳು, ಲೇಖನ, ಡಾ. ಕೆ. ರವೀಂದ್ರನಾಥ, ಶಂಬಾ, ಹಾಲುಮತ ಸಂಸ್ಕೃತಿ, ಪುಟ–೯೩

೩. ಅದೇ ಪುಟ–೯೧

೪. ಅದೇ ಪುಟ–೯೨

೫. ಅದೇ ಪುಟ–೯೪

೬. (ಸಂ)ಡಾ. ಎಫ್. ಟಿ. ಹಳ್ಳಿಕೇರಿ, ಹಾಲುಮತ ಅಧ್ಯಯನ, ಲೇಖನ, ಡಾ. ಎಸ್.ಎಸ್.ಅಂಗಡಿ, ಹಾಲುಮತ ಸಂಸ್ಕೃತಿ ಶಂಬಾ ಜೋಶಿ ಚಿಂತನೆಗಳು, ಪುಟ–೧೩೩

೭. (ಸಂ) ಡಾ.ಪಿ. ಮಹದೇವಯ್ಯ, ಶಂಬಾಜೋಶಿ ಚಿಂತನೆಗಳು, ಪುಟ–೭೫

೮. ಅದೇ ಪುಟ–೭೫

# ಅಧ್ಯಾಯ–ಆರು

## ಕನಕದಾಸರು ಮತ್ತು ಪಶುಪಾಲನಾ ಪರಂಪರೆ

ಭಾರತದ ಉದ್ದಗಲಕ್ಕೂ ಹೆಸರು ಮಾಡಿದ ಕರ್ನಾಟಕದ ಅನೇಕ ಹರಿದಾಸ ಸಮೂಹದಲ್ಲಿ ಪ್ರಸಿದ್ಧರಾದವರು ಸಂತ ಕವಿ ಕನಕದಾಸರು. ತಮ್ಮ ವಿಭಿನ್ನ ನೆಲೆಯ, ಕಾವ್ಯಾಭಿವ್ಯಕ್ತಿ ಮತ್ತು ವಿಶಿಷ್ಟ ವ್ಯಕ್ತಿತ್ವದಿಂದಾಗಿ ದಾಸಸಾಹಿತ್ಯದ ಸುವರ್ಣಯುಗದ ಪ್ರವರ್ತಕರೆನಿಸಿಕೊಂಡವರು. ಯಾವುದೇ ಮತವನ್ನೂ ದ್ವೇಷಿಸದೆ, ಜಡ ನಂಬಿಕೆಗಳಿಗೆ ಅಂಟಿಕೊಳ್ಳದೇ ಸಕಲ ತತ್ವಗಳನ್ನು ಮೀರಿ ವಿಶ್ವಮಾನವ ಮಟ್ಟಕ್ಕೇರಿದ ಯುಗಪುರುಷ. ಇವರ ಜೀವನ, ರಚಿಸಿದ ಕಾವ್ಯಗಳು, ಕೀರ್ತನೆಗಳು, ಮುಂಡಿಗೆಗಳು ಮತ್ತು ಉಗಾಭೋಗಗಳು ಈಗಲೂ ನಿರಂತರವಾಗಿ ಜನಮಾನ್ಯತೆಯನ್ನು ಪಡೆಯುತ್ತಲೇ ಇವೆ.

ಮಹಾಕವಿ ಕನಕದಾಸರ ಬದುಕು ಬರಹ ಕುರಿತು ಕಳೆದ ಶತಮಾನದ ೬೦ ಮತ್ತು ೯೦ ರ ದಶಕ ಹಾಗೂ ಈ ಶತಮಾನದ ಮೊದಲ ದಶಕದಲ್ಲಿ ಪ್ರಕಟಗೊಂಡಿರುವ ಲೇಖನಗಳು ಹಾಗೂ ಸಂಶೋಧನೆಗಳು ನಮ್ಮ ರಾಷ್ಟ್ರ ಮತ್ತು ರಾಜ್ಯದ ಸಾಮಾಜಿಕ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಪ್ರತಿನಿಧೀಕರಣದ ಮರು ನಿರೂಪಣೆಯ ಮಾದರಿಗಳಾಗಿ ಕಂಡುಬರುತ್ತಿವೆ.[೧] ಜೊತೆಗೆ ಕಳೆದ ಶತಮಾನದ ಉತ್ತರಾರ್ಧದಿಂದ ಕನಕದಾಸರನ್ನು ಕೆಲವು ನಿರ್ದಿಷ್ಟ ಸಮುದಾಯಗಳು ತಮ್ಮ ಸಾಂಸ್ಕೃತಿಕ ನಾಯಕನನ್ನಾಗಿ ಗುರುತಿಸಿಕೊಳ್ಳುತ್ತಿವೆ. ಈ ಕಾರಣದಿಂದಾಗಿ ಕನಕದಾಸರ ಕಾಲ, ಜಾತಿ, ಧರ್ಮ ಕುರಿತ ಜಿಜ್ಞಾಸೆಗಳು, ಆಧುನಿಕ ದೃಷ್ಟಿಕೋನದಂತೆ ನಡೆಯುತ್ತಿರುವುದನ್ನು ನಾವು ಕಾಣುತ್ತಲೇ ಇದ್ದೇವೆ.

ಕನಕದಾಸರ ಜಾತಿ ಕುರಿತ ವಾಗ್ವಾದಗಳನ್ನು ಗಮನಿಸುವಾಗ ಬಹಳ ಮುಖ್ಯವಾಗಿ ಕನಕದಾಸರನ್ನು ಕುರುಬ, ನಾಯಕ, ಬೇಡ, ಕಬ್ಬಲಿಗ, ಆದಿಬಣಜಿಗ, ಜಾತಿಯಲ್ಲಿ ಗುರುತಿಸಿಕೊಳ್ಳುವ ಪ್ರಯತ್ನಗಳು ನಡೆದಿವೆ. ಆಧುನಿಕ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಪ್ರತಿನಿಧೀಕರಣದ ನೆಲೆಯಲ್ಲಿ ಜಾತಿ ಸಮಾಜಗಳು ಹರಳುಗಟ್ಟುತ್ತಲೇ ಧಾರ್ಮಿಕ ಸಮಾಜಗಳಾಗಿ ಧ್ರುವೀಕರಣಗೊಂಡು ಮತಾಂತರವಾಗುತ್ತಿರುವ ಈ ಹೊತ್ತಿನಲ್ಲಿ ಕನಕದಾಸರನ್ನು ಎಲ್ಲಿ? ಹೇಗೆ? ಗುರುತಿಸಿಕೊಳ್ಳಬೇಕು ಎನ್ನುವ ಪ್ರಶ್ನೆಗಳು ನಮ್ಮ ಎದುರಿಗಿವೆ.

ಹಾಗಾಗಿ ಕನಕದಾಸರು ಬಾಳಿ ಬದುಕಿದ ಮಧ್ಯಕಾಲೀನ ಯುಗದಲ್ಲಿ ಜಾತಿ ಸಮಾಜಗಳನ್ನು ಕಾಣಬಹುದೇ? ಅಂದಿನ ಬೇಟೆ, ಪಶುಪಾಲನೆ ಮತ್ತು ಹೈನುಗಾರಿಕೆ, ಉಣ್ಣೆ ಬಟ್ಟೆ ತಯಾರಿಕೆ ಇವೆಲ್ಲವೂ ಪ್ರತ್ಯೇಕ ಜಾತಿ ಕಸುಬುಗಳಾಗಿದ್ದವೆ? ಅಥವಾ

ಸಂದರ್ಭಗಳಿಗನುಸಾರವಾಗಿ ಒಂದೇ ಸಮುದಾಯದ ಒಳಗಡೆ ಅವುಗಳು ಪರಸ್ಪರ ಅದಲು ಬದಲುಗಳಾಗುತ್ತಿದ್ದವೇ? ಎಂಬ ಪ್ರಶ್ನೆಗಳು ನಮಗೆ ಎದುರಾಗಿವೆ. ವಿಕಾಸವಾದೀ ವೈದಾನಿಕತೆ ಹಾಗೂ ತಾತ್ವಿಕ ನೆಲೆಯಲ್ಲಿ ಮಾನವ ಚರಿತ್ರೆಯನ್ನು ವಿವರಿಸಿಕೊಂಡಾಗ ಈ ಕಸುಬುಗಳು ಒಂದರ ಅನಂತರ ಮತ್ತೊಂದು ಕಾಲಾನುಕ್ರಮದಲ್ಲಿ ಕಾಣಿಸಿಕೊಳ್ಳುತ್ತವೆ. ಅದರಲ್ಲೂ ಮುಖ್ಯವಾಗಿ ಮಾನವನ ವಿಕಾಸದೊಟ್ಟಿಗೆ ಅಂಟಿಕೊಂಡೇ ಬರುತ್ತಿರುವ ಪಶುಪಾಲನಾ ಪರಂಪರೆ, ಕರ್ನಾಟಕದ ಮಧ್ಯಕಾಲೀನ ಚರಿತ್ರೆಯ ಹರಿದಾಸರೊಲ್ಲೊಬ್ಬರಾದ ಕನಕದಾಸರ ಬದುಕು ಬರಹಗಳ ಮೇಲೆ ಬೀರಿರುವ ಪ್ರಭಾವವನ್ನು ಪ್ರಸ್ತುತ ಅಧ್ಯಯನವು ಶೋಧಿಸುತ್ತಿದೆ.

ಪ್ರಸ್ತುತ, ಈಗಾಗಲೇ ಅನೇಕ ಸಂಪುಟಗಳು, ಲೇಖನಗಳು, ಸಂಶೋಧನೆಗಳು ಕನಕದಾಸರನ್ನು ಭಿನ್ನ ಭಿನ್ನ ನೆಲೆಗಳಲ್ಲಿ ಮರುನಿರೂಪಿಸುವ ಮಾದರಿಗಳೊಂದಿಗೆ ಬರುತ್ತಿರುವುದನ್ನು ಕಾಣುತ್ತಿದ್ದೇವೆ. ಅಂದರೆ ಕನಕದಾಸರನ್ನು ಕರ್ನಾಟಕ ವೈಷ್ಣವ ಸಾಹಿತ್ಯ ಪರಂಪರೆ ಅಥವಾ ಹರಿದಾಸ ಪರಂಪರೆಯಲ್ಲಿ ನೋಡುವ ಒಂದು ಮಾದರಿ; ಹಾಗೂ ನಿರ್ದಿಷ್ಟ ಜಾತಿ ಧರ್ಮಗಳಲ್ಲಿ ಕನಕದಾಸರನ್ನು ಗುರುತಿಸುವ ವಾಗ್ವಾದ ಸ್ವರೂಪದ ಇನ್ನೊಂದು ಮಾದರಿ; ಅಲ್ಲದೆ ಜಾತ್ಯತೀತತೆ, ಧರ್ಮನಿರಪೇಕ್ಷತೆಯ ಆಧುನಿಕ ರಾಷ್ಟ್ರಪರಿಕಲ್ಪನೆಯ ನೆಲೆಯಲ್ಲಿ ನೋಡುವ ಮತ್ತೊಂದು ಆದರ್ಶವಾದಿ ಮಾದರಿಗಳು ಹುಟ್ಟಿಕೊಂಡಿವೆ.[೨] ಹಾಗಾಗಿ ೧೫–೧೬ನೇ ಶತಮಾನದ ಕನಕದಾಸರು ಆಧುನಿಕ ಭಾರತದ ಅದರಲ್ಲೂ ಆಧುನಿಕ ಕರ್ನಾಟಕದ ವರ್ತಮಾನದಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಪ್ರತಿನಿಧೀಕರಣದ ಬಿಂಬವಾಗಿ ಹೇಗೆ ಪ್ರಸ್ತುತಗೊಳ್ಳುತ್ತಿದ್ದಾರೆ, ಎಂಬುದನ್ನು ಇದುವರೆಗಿನ ಕನಕನನ್ನು ಕುರಿತ ಬರಹಗಳು, ಸಂಶೋಧನೆಗಳು ನಮಗೆ ಈಗಾಗಲೇ ಕಟ್ಟಿಕೊಟ್ಟಿವೆ.

ಈ ಹಿನ್ನೆಲೆಯನ್ನು ಗಮನದಲ್ಲಿ ಇಟ್ಟುಕೊಂಡೇ ಆಧುನಿಕ ಜ್ಞಾನಮಿಮಾಂಸೆಯ ಆಧಾರದ ಮೇಲೆ ವೈಜ್ಞಾನಿಕ ಹಾಗೂ ತರ್ಕಬದ್ಧ ಚರಿತ್ರೆಯನ್ನು ಪುನರ್ರಚಿಸುವುದು ಇವತ್ತಿನ ಜರೂರಾಗಿದೆ. ಆದ್ದರಿಂದ ಮಧ್ಯಯುಗದ ಇತಿಹಾಸ ಮತ್ತು ಸಂಸ್ಕೃತಿಯ ಮೂಲಕ ಇನ್ನಷ್ಟು ಕನಕದಾಸರನ್ನು ಗ್ರಹಿಸುವುದು ಈಗಿನ ಅಗತ್ಯವಾಗಿದೆ. ಇಂತಹ ಗ್ರಹಿಕೆಯ ಭಾಗವಾಗಿಯೇ ಪ್ರಸ್ತುತ ಅಧ್ಯಯನವು ಮಾನವನ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸಿದ ಪಶುಪಲನಾ ಪರಂಪರೆ; ಮಧ್ಯಯುಗದಲ್ಲಿ ಬಾಳಿ ಬದುಕಿದ ಕನಕದಾಸರ ಮೇಲೆ ಬೀರಿರುವ ಪ್ರಭಾವ, ಪ್ರೇರಣೆ ಮತ್ತು ಇದರ ಸಂಬಂಧಗಳು, ಅವರ ಬದುಕು ಬರೆಹ ಕುರಿತ ಚರಿತ್ರೆಯ ಸಾಂಸ್ಕೃತಿಕ ಅಸ್ಮಿತೆಗೆ ಒಂದು ದೃಷ್ಟಿಕೋನವನ್ನು ಹೇಗೆ ಒದಗಿಸಿವೆ ಎಂಬುದನ್ನು ಈ ಮುಂದಿನ ಶೀರ್ಷಿಕೆಗಳಡಿಯಲ್ಲಿ

ಚರ್ಚಿಸಲಾಗಿದೆ.

**ಕನಕನ ಪರಿಸರದಲ್ಲಿದ್ದ ಪಶುಪಾಲನಾ ಪರಂಪರೆಯ ವಿವರಗಳು:**

ಹದಿನಾಲ್ಕನೆಯ ಶತಮಾನದಲ್ಲಿ ವಿಜಯನಗರ ಅರಸರ ಅಧೀನಕ್ಕೊಳಗಾಗಿದ್ದ 'ಬಾಡ' ಪ್ರದೇಶಕ್ಕೆ ಕುರುಬರ ಬೀರೇಗೌಡನು ನಾಡಗೌಡನಾಗಿದ್ದನು. ಇಲ್ಲಿನ 'ಬಾಡ' ಎಂಬ ಸ್ಥಳನಾಮವು ಆಡಳಿತ ಗ್ರಾಮವಾಗಿತ್ತು ಎಂಬುದರ ಬಗ್ಗೆ ಕ್ರಿ.ಶ. ೧೦೬೨ ರ ಪ್ರಥಮ ಸೋಮೇಶ್ವರನ ಬಂಕಾಪುರ ಶಾಸನ, ಕ್ರಿ.ಶ. ೧೦೯೩ರ ಆರನೆಯ ವಿಕ್ರಮಾದಿತ್ಯನ ಬಂಕಾಪುರ ಶಾಸನ, ಬನವಾಸಿಯ ಕದಂಬರ ಚಟ್ಟಯ್ಯ ದೇವನ ಬಂಕಾಪುರ ಶಾಸನ (ಕ್ರಿ.ಶ. ೧೨೫೮), ಎರಡನೆಯ ಸೋಮೇಶ್ವರ ಶಾಸನ(ಕ್ರಿ.ಶ. ೧೦೪೩), ಲಕ್ಷ್ಮೇಶ್ವರ ಶಾಸನಗಳು(ಕ್ರಿ.ಶ.೧೧೦೨, ೧೧೫೨, ೧೧೫೩), ಮತ್ತು ರುದ್ರವಾಡಿ ಶಾಸನ(ಕ್ರಿ.ಶ. ೧೧೧೭)ಗಳಲ್ಲಿ 'ಬಾಡ' ಎಂಬ ಸ್ಥಳನಾಮದ ಬಗ್ಗೆ ಉಲ್ಲೇಖಗಳು ದೊರೆಯುವುದರಿಂದ ಬಾಡ(ಈಗ ಅರಮನೆಯ ಅವಶೇಷಗಳಿರುವ ಸ್ಥಳ) ಬೀರಪ್ಪನ ಆಡಳಿತ ಕೇಂದ್ರವಾಗಿತ್ತು. ಇದು ಮಧ್ಯಯುಗೀನ ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಭಟ್ಕಳ ಮತ್ತು ಹಂಪಿ ನಡುವಣ ಹೆದ್ದಾರಿಯಲ್ಲಿತ್ತು. ಭಟ್ಕಳದಿಂದ ಪೋರ್ಚುಗೀಸರು ವಿಜಯನಗರದ ಅರಸರಿಗೆ 'ಬಾಡ' ಮಾರ್ಗವಾಗಿಯೇ ಕುದುರೆಗಳನ್ನು ಪೂರೈಸುತ್ತಿದ್ದರು.

ಇಂತಹ ಬಾಡ, ಬಂಕಾಪುರ, ಕಾಗಿನೆಲೆ ಸಹಿತ ೭೮ ಗ್ರಾಮಗಳ ಸಂಸ್ಥಾನಕ್ಕೆ ಬೀರೇಗೌಡನು ನಾಯಕನಾಗಿದ್ದನು. ಏಕೆಂದರೆ ಕುರುಬ ಕುಲದ ವಿಜಯನಗರದ ಅರಸರು, ಬೀರೇಗೌಡನನ್ನು ಮಾಂಡಳಿಕನನ್ನಾಗಿ ಮಾಡಿಕೊಂಡುದುದರಲ್ಲಿ ಯಾವ ಅನುಮಾನವೂ ಇರಲಾರದು. ಅಲ್ಲದೆ 'ಬೀರೇಗೌಡ' ಎಂಬ ಹೆಸರನ್ನು ಅಂದು ಹೆಚ್ಚಾಗಿ ಕುರುಬರು ಮಾತ್ರ ಇಟ್ಟುಕೊಳ್ಳುತ್ತಿದ್ದು[೩] 'ಬೀರಪ್ಪ' ಈ ಕುಲದ ಆರಾಧ್ಯ ದೈವವಾಗಿದ್ದನು(ಈಗಲೂ). ಈರಪ್ಪ>ವೀರಪ್ಪ>ಬೀರಪ್ಪ ಎಂದು ಜನರ ಬಾಯಲ್ಲಿ ಕರೆಸಿಕೊಳ್ಳುತ್ತಾ ಬಂದಿರುವ ಈ ದೇವರು ದನಗಾಹಿಗಳ ಸಾಂಸ್ಕೃತಿಕ ನಾಯಕ. ಇದೇ ಬೀರಪ್ಪ, ಕಳೆದ ೭೫೦ ವರ್ಷಗಳಿಂದ ತಿರುಮಲೆ ಬೆಟ್ಟದಲ್ಲಿ ವೆಂಕಟೇಶ, ಶ್ರೀನಿವಾಸ, ತಿಮ್ಮಪ್ಪ ಎಂಬ ಹೆಸರಿಂದ ಆರಾಧನೆಗೊಳ್ಳುತ್ತಿದ್ದಾನೆ. ಈ ಬೀರಪ್ಪನೇ ವೀರಭದ್ರನಾಗಿದ್ದನೆಂದೂ, ರಾಮಾನುಜರು ವೀರಭದ್ರ ವಿಗ್ರಹವನ್ನು ವಿಷ್ಣು ವಿಗ್ರಹವನ್ನಾಗಿ ರೂಪಾಂತರಿಸಿದರೆಂದೂ 'ಕಾಶೀನಾಥ ಶಾಸ್ತ್ರಿಗಳು' ಹೇಳಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.[೪] ತಿರುಮಲದ ಮೂಲ ವಿಷ್ಣು ವಿಗ್ರಹಕ್ಕೆ ಬಾಹುವಿನಲ್ಲಿ ಸರ್ಪಾಭರಣವಿದ್ದು, ಪ್ರತ್ಯೇಕವಾಗಿ ಚಿನ್ನದ ಶಂಖ, ಚಕ್ರಗಳನ್ನು ಅಲಂಕರಿಸಲಾಗಿದೆ. ಪ್ರತಿ ವರ್ಷ ಧನುರ್ಮಾಸ ಮುಗಿಯುವವರೆಗೂ ಬಿಲ್ವಪತ್ರೆಯಿಂದ ವಿಗ್ರಹವನ್ನು ಪೂಜಿಸುತ್ತಾರೆ. ಹೀಗಾಗಿ ತಿರುಪತಿ ತಿಮ್ಮಪ್ಪನ ಸರ್ಪಾಭರಣ, ಶಿವಲಿಂಗ ಲಾಂಛನ,

ಬಿಲ್ವ ಪೂಜೆ ಇತ್ಯಾದಿ ಸಂಕೇತಗಳಿರುವುದರಿಂದಾಗಿ ವಿಗ್ರಹ ಶೈವಪರಂಪರೆಯದೆಂದೇ ಕಾಶಿನಾಥ ಶಾಸ್ತ್ರಿಗಳು ಹೇಳುತ್ತಾರೆ.[೫]

ಆದ್ದರಿಂದಲೇ ಕುರುಬರು ಈಗಲೂ ಹೆಚ್ಚು ಸಂಖ್ಯೆಯಲ್ಲಿ ತಿರುಪತಿಗೆ ನಡೆದುಕೊಳ್ಳುತ್ತಾರೆ. ಹಾಗಾಗಿಯೇ ಬೀರೇಗೌಡನಗೆ ತಿಮ್ಮಪ್ಪ ಮನೆದೇವರಾಗಿದ್ದನು. ಜೊತೆಗೆ ತನಗೆ ಇಳಿವಯಸ್ಸಾದರೂ ಸಂತಾನವಿಲ್ಲದ ಕಾರಣ ಹಿರಿಯರ ಸಲಹೆಯಂತೆ, ತಿಮ್ಮಪ್ಪನಲ್ಲಿ ಹರಕೆ ಹೊತ್ತು, ತಿರುಪತಿಗೆ ಹೋಗಿ ಧನಕನಕಗಳೊಂದಿಗೆ ೪೮ ದಿವಸ ತಿಮ್ಮಪ್ಪನ ಆರಾಧನೆ ಮಾಡಿರುವುದು ಸಹಜವೇ ಆಗಿದೆ. ಈ ಕಾರಣದಿಂದಾಗಿಯೇ ಮಗು ಹುಟ್ಟಿತು ಎಂದು ನಂಬಿದ ಬೀರಪ್ಪಗೌಡನು, ಮಗನಿಗೆ 'ತಿಮ್ಮಪ್ಪ' ಎಂದು ಹೆಸರಿಟ್ಟನು. ಈ ವಿಚಾರಕ್ಕೆ ಪೂರಕವಾಗಿ; ಅನೇಕ ವಿದ್ವಾಂಸರು ಕನಕದಾಸರ ಜನ್ಮ ವೃತ್ತಾಂತವನ್ನು ಕುರಿತು ಈ ಮುಂದಿನಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಕಟ್ಟಿಶೇಷಾಚಾರ್ಯರು "ಕನಕದಾಸರು ಬಂಕಾಪುರದ ಸಮೀಪದಲ್ಲಿರುವ ಬಾಡ ಗ್ರಾಮದವರು, ಇವರ ತಂದೆಯ ಹೆಸರು ಬೀರೇಗೌಡ, ತಾಯಿ ಬಚ್ಚಮ್ಮ. ಇವರು ಹಂಡೆ ಕುರುಬರು. ಇವರಿಗೆ ಕನಕ ಎಂಬ ಒಬ್ಬನೇ ಮಗನಿದ್ದನು. ಕನಕದಾಸರ ಪೂರ್ವದ ಹೆಸರು ತಿಮ್ಮ"[೬] ಎಂದು ಹೇಳಿದ್ದಾರೆ.

ರಂ.ಶ್ರೀ ಮುಗುಳಿಯವರು, ೧೯೫೭ ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಈ ರೀತಿ ಹೇಳಿದ್ದಾರೆ. " ಪುರಂದರದಾಸರಿಗೆ ಸಮತೂಕದವರು, ಸ್ವತಂತ್ರ ಕಾಂತಿಯುಳ್ಳವರೂ ಆದ ಕನಕದಾಸರು ಬಾಡ ಎಂಬ ಗ್ರಾಮದಲ್ಲಿ ಕುರುಬ ಕುಲದಲ್ಲಿ ಹುಟ್ಟಿ ಬೆಳೆದು ದಂಡನಾಯಕರಾದರು"[೭] ಎಂದು ದಾಖಲಿಸಿದ್ದಾರೆ.

ರಂಗನಾಥ ರಾಮಚಂದ್ರ ದಿವಾಕರ ಅವರು 'ಭಾಗವತ ಶ್ರೇಷ್ಠ ಕನಕದಾಸರು' ಎಂಬ ಲೇಖನದಲ್ಲಿ "ಕನಕದಾಸರ ಜೀವನವು ಅನೇಕ ಮಹತ್ವದ ಘಟನೆಗಳಿಂದ ತುಂಬಿದ್ದು ಬಾಡ ಎಂಬ ಕುಗ್ರಾಮದಲ್ಲಿ ಹಂಡೆ ಕುರುಬ ಜಾತಿಯಲ್ಲಿ ಜನಿಸಿದರು" [೮] ಎಂದಿದ್ದಾರೆ.

ಪ್ರೊ. ಓ.ಜಿ. ಸಿದ್ಧಪ್ಪಾರಾಧ್ಯ ಎಂಬುವವರು 'ಕನಕದಾಸರ ಆಧ್ಯಾತ್ಮ ಜೀವನ' ಎಂಬ ಲೇಖನದಲ್ಲಿ "ಕನಕದಾಸರು ಕ್ರಿ.ಶ. ೧೫ ನೇ ಶತಮಾನದಲ್ಲಿ ಧಾರವಾಡ ಜಿಲ್ಲೆ ಬಂಕಾಪುರದ ಬಳಿ ಇರುವ ಬಾಡವೆಂಬ ಗ್ರಾಮದಲ್ಲಿ ಕುರುಬ ಮನೆತನದಲ್ಲಿ ಹುಟ್ಟಿದರು. ಇವರ ತಂದೆ ತಾಯಿಗಳು ಮಗನನ್ನು 'ತಿಮ್ಮ' ಎಂಬ ಹೆಸರಿನಿಂದ ಕರೆಯುತ್ತಿದ್ದರು"[೯] ಎಂದಿದ್ದಾರೆ.

ಪಿ.ಬಿ.ದೇಸಾಯಿ ಅವರು 'ಮೊನೆಗಾರದಣಿ' ಎಂಬ ಲೇಖನದಲ್ಲಿ ಕನಕದಾಸರ

ಜಾತಿ,ಕುಲವನ್ನು ಹೀಗೆ ನಿರ್ದೇಶಿಸಿರುವರು. “ಕನಕದಾಸರದು ಕ್ಷಾತ್ರ ವೃತ್ತಿಯಿಂದ ಬಾಳಿದ ವೀರ ಜನಾಂಗ ಎಂಬ ವಿಷಯದಲ್ಲಿ ಅನೇಕ ಪ್ರಮಾಣಗಳಿವೆ. ಇವರ ದೇವರು ಬೀರಪ್ಪ, ಇವರಲ್ಲಿ ಪುರಾತನ ಸಿದ್ಧವೀರರ ಹಾಡುಗಳು ಪ್ರಚಲಿತದಲ್ಲಿವೆ. ವೀರ ಜನಾಂಗದವರಾದ ಕುರುಬರಲ್ಲಿ, ಹೆಚ್ಚಿಗೆ ವೀರ ಕುಲದವರೆಂದು ಗಣ್ಯರಾದವರು ಅಂಡೇ ರಾವುತರು. ಅಂಡೇ ಕುರುಬರು ಆಥವಾ ಅಂಡೇ ವಜೀರರು. ಅಂಡೆ ಎಂಬ ನುಡಿ ದ್ರಾವಿಡವಾಗಿದ್ದು, ಇದು ಒಡೆತನದ ದ್ಯೋತಕವಾಗಿದೆ. ಕುರುಬರ ಒಳ ಬಣಗಳಿಗೆ ರಾಜಕುಲ, ಗೌಡಕುಲ, ಅರಸುಕುಲ, ಸಂಗಮಕುಲ, ಒಡೆಯರಕುಲ, ಸಾಮಂತರಕುಲ ಎಂಬ ಅರ್ಥಪೂರ್ಣ ಹೆಸರುಗಳು ಇಂದಿಗೂ ಕೆಲವೆಡೆ ರೂಢಿಯಲ್ಲಿವೆ. ಹೀಗೆ ಆಳವಾಗಿ ಪರ್ಯಾಲೋಚಿಸಿದರೆ ಈ ಎಲ್ಲಾ ನಿಮ್ನ ವರ್ಗದವರು ಕನ್ನಡ ರಾಷ್ಟ್ರದ ಆಧಾರಪ್ರಾಯರು. ಕರ್ನಾಟಕದ ವೀರ ಕ್ಷತ್ರಿಯರಾಗಿದ್ದರು ಎಂಬ ಸಂಗತಿ ಸ್ಫುಟವಾಗುತ್ತದೆ. ಈ ಮೇರೆಗೆ ಕನಕದಾಸರು ದ್ರಾವಿಡ ಪರಿಭಾಷೆಯಲ್ಲಿ ಅಂಡೆ ಕುರುಬ ಜಾತಿಯವರು, ವೀರಸಾಮಂತ ಅರಸು ವಂಶದವರು ಆಗುತ್ತಾರೆ”[೧೦] ಎಂದಿದ್ದಾರೆ.

ಶ್ರೀ ಅಂದಾನಪ್ಪ ಕುಂದರಗಿಯವರು ‘ಶ್ರೀ ಕನಕದಾಸರ ಜಾತ್ಯತೀತ ದೃಷ್ಟಿ’ ಎಂಬ ಲೇಖನದಲ್ಲಿ “ಮಹಾತ್ಮ ಕನಕದಾಸರು ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಬಂಕಾಪುರದಿಂದ ೨ ಮೈಲು ದೂರದಲ್ಲಿರುವ ಬಾಡ ಗ್ರಾಮದಲ್ಲಿ ಬಚ್ಚಮ್ಮ, ಬೀರೇಗೌಡ ಎಂಬ ದಂಪತಿಗಳ ಉದರದಲ್ಲಿ ಹಂಡೆ ಕುರುಬರ ಜಾತಿಯಲ್ಲಿ ಜನಿಸಿದರು. ತಂದೆ ವಿಜಯನಗರದ ಅರಸರ ಕೆಳಗೆ ಮಾಂಡಲೀಕರಾಗಿ ಬಂಕಾಪುರ ಸೀಮೆಯನ್ನು ನೋಡಿಕೊಳ್ಳುತ್ತಿದ್ದರು. ತಾಯಿ ಬಚ್ಚಮ್ಮ ತಂದೆ ಬೀರೇಗೌಡರು ತಿರುಪತಿ ತಿಮ್ಮಪ್ಪನ ಭಕ್ತರಾದ್ದರಿಂದ ತಮ್ಮ ಮಗನಿಗೆ ತಿಮ್ಮಪ್ಪ ಎಂದು ಕರೆದರು” [೧೧] ಎಂದಿದ್ದಾರೆ.

ಶ್ರೀ. ಸುಬೋಧ ಎಂ.ರಾಮರಾವ್ ಅವರು ‘ಕನಕದಾಸರ ಪವಾಡಗಳು’ ಎಂಬ ಲೇಖನದಲ್ಲಿ “ಕನಕದಾಸರು ಹಾಲುಮತಸ್ತ ಕುರುಬರಾಗಿ ಜನಿಸಿ ಡಣ್ಣಾಯಕರಾಗಿ ಅಧಿಕಾರ ನಡೆಸಿ ಪುಣ್ಯವಶವಾಗಿ ದೊರೆತ ಕನಕ ಕೊಪ್ಪರಿಗೆಗಳ ಮಹದೈಶ್ವರ್ಯವನ್ನು ಸ್ವಾಮಿ ಸೇವೆಗಾಗಿ ವಿನಯೋಗಿಸಿ ಹರಿದಾಸರಾದರು.”[೧೨] ಎಂಬುದಾಗಿ ಹೇಳಿದ್ದಾರೆ.

ಶ್ರೀ ಬಿ.ಎಸ್. ಸಣ್ಣಯ್ಯ ಅವರು ‘ಕನಕದಾಸರ ಕೃತಿಗಳಲ್ಲಿ ಕಂಡುಬರುವ ಚಾರಿತ್ರಿಕ ಅಂಶಗಳು’ ಲೇಖನದಲ್ಲಿ “ಕನಕದಾಸರು ಧಾರವಾಡ ಜಿಲ್ಲೆಯ ಬಾಡ ಎಂಬ ಗ್ರಾಮದವರು ತಂದೆ ಬೀರಪ್ಪ, ತಾಯಿ ಬಚ್ಚಮ್ಮ. ಕನಕನ ಹುಟ್ಟು ಹೆಸರು ತಿಮ್ಮಪ್ಪ. ಕುರುಬ ಜಾತಿಯಲ್ಲಿ ಹುಟ್ಟಿದ ಕನಕದಾಸರು ವ್ಯಾಸರಾಯರ ಶಿಷ್ಯರಾಗಿ

ಪುರಂದರದಾಸರ ಹೊಯ್‌ಕೈಯಾಗಿ ಲೋಕ ಪೂಜ್ಯತ್ವವನ್ನು ಪಡೆದರು"[೧೩] ಎಂಬುದಾಗಿ ನಿರೂಪಿಸಿದ್ದಾರೆ.

ಶ್ರೀ ಎಚ್,ಯು,ನಾಗೇಗೌಡರು 'ಕನಕದಾಸರ ರಾಗಿ' ಎಂಬ ಲೇಖನದಲ್ಲಿ ಕನಕರು ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಕುರುಬರ ಕುಟುಂಬವೊಂದರಲ್ಲಿ ಜನ್ಮವೆತ್ತಿ, ವಿಜಯನಗರ ಅರಸರುಗಳ ಕಾಲದಲ್ಲಿ ಪಾಳೆಯಗಾರರೂ ಸೇನಾನಿಯೂ ಆಗಿದ್ದರು. ಅನಂತರ ಅವರು ವೈರಾಗ್ಯದ ಹಾದಿಯನ್ನು ಹಿಡಿದು ದಾಸಪಂಥವನ್ನು ಸ್ವೀಕರಿಸಿ, ಕನಕದಾಸರಾದರು.[೧೪] ಎಂದು ಹೇಳಿದ್ದಾರೆ.

ವೆಂಕಟರಾಯ್ ಆನಂದ ಶೆಣೈ ಅವರ ಪ್ರಕಾರ " ಕನಕದಾಸರು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಬಾಡ ಎಂಬ ಹಳ್ಳಿಯಲ್ಲಿ ಜನಿಸಿದ್ದರೆಂಬುದರಲ್ಲೂ, ಮುಂದೆ ಹಾವೇರಿ ತಾಲ್ಲೂಕಿನ ಕಾಗಿನೆಲೆ(ಕಾಗಿನೆಲ್ಲಿ)ಯಲ್ಲಿ ನೆಲೆಸಿದರೆಂಬುದರಲ್ಲಿ ಐಕ್ಯಮತವಿದೆ. ಇವರ ತಂದೆಯ ಹೆಸರು ಬೀರೇಗೌಡ, ತಾಯಿಯ ಹೆಸರು ಬಚ್ಚಮ್ಮ. ಅವರು ಹಂಡೆ ಕುರುಬ ಜಾತಿಯವರು. ಅವರಿಬ್ಬರಿಗೆ ಹುಟ್ಟಿದ ಮಗನೇ ಕನಕದಾಸರು. ತಿರುಪತಿಯ ಶ್ರೀನಿವಾಸನ ಕೃಪೆಯಿಂದ ಹುಟ್ಟಿದ್ದರಿಂದ ಅವರಿಗೆ ತಿಮ್ಮಪ್ಪನೆಂದು[೧೫] ಹೆಸರಿಟ್ಟರು" ಎಂಬುದಾಗಿ ಹೇಳಿದ್ದಾರೆ.

ಪ್ರೊ. ಸುಧಾಕರ ಅವರ ಪ್ರಕಾರ "ಕನಕದಾಸರು ಧಾರವಾಡ ಜಿಲ್ಲೆಯ ಬಾಡಾ, ಬಂಕಾಪುರ, ಕಾಗಿನೆಲೆಗಳ ಪರಿಸರದಲ್ಲಿ ಬಾಳಿ ಬದುಕಿದವರು ಎಂಬುದು ವಿಧಿತವಾಗುತ್ತದೆ. ಹಾಲುಮತದ ಹಂಡೆಕುರುಬ ಬೆಡಗಿಗೆ ಸೇರಿದ ಬೀರಪ್ಪ, ಬಾಡಾಕ್ಕೆ ಸೇರಿದ ಎಪ್ಪತ್ತೆಂಟು ಗ್ರಾಮಗಳಿಗೆ ನಾಡಗೌಡ ಅಥವಾ ಡಣ್ಣಾಯಕನಾಗಿದ್ದ. ಅವನ ಹೆಂಡತಿ ಬಚ್ಚಮ್ಮ. ಇವರ ಮಗನೇ ಕನಕದಾಸ"[೧೬] ಎಂದಿದ್ದಾರೆ.

ಈ ಎಲ್ಲಾ ಸಂಶೋಧಕರ ಜೊತೆಗೆ ಜ್ಯೋತಿ ಹೊಸೂರ್, ಜಿ.ಎಸ್.ಭಟ್ಟ, ಹ.ರಾ.ಪುರೋಹಿತ, ಸಿಂ.ಪಿ. ಲಿಂಗಣ್ಣ, ಟಿ.ಎನ್.ನಾಗರತ್ನ, ಬಸವರಾಜ ನಾಯ್ಕರ ಮತ್ತು ದೇ.ಜ.ಗೌ. ಅವರು ಕನಕದಾಸರ ಹುಟ್ಟು, ಜಾತಿ, ಕುಲಗಳ ಬಗ್ಗೆ ಶೋಧನೆಯನ್ನು ಮಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಹಾಗೆಯೇ ಅನೇಕ 'ಜನಪದ' ಕವಿಗಳು ಕೂಡ ಕನಕದಾಸರನ್ನು ಕುರಿತು ಹಾಡಿ ಹೊಗಳಿದ್ದಾರೆ. ಹಾಡಿನಲ್ಲಿ ಅವರ ಕುಲವನ್ನು ಕುರಿತು ಬಣ್ಣಿಸಿದ್ದಾರೆ. ಡೊಳ್ಳಿನ ಹಾಡುಗಾರರು ಡೊಳ್ಳಿನ ಹಾಡುಗಳಲ್ಲಿ ಕನಕದಾಸರನ್ನು ಕುರಿತು,

ಬೀರಪ್ಪ ಬಚ್ಚಮ್ಮಗ ದೇವ ಒಲಿದಾನೋ
ಬೀರಪ್ಪ ಬಚ್ಚಮ್ಮಗ ದೇವ ಒಲಿದಾನಯ್ಯ
ಬಕುತರಿಗೆ ತಿಮ್ಮಪ್ಪ ಫಲವನು ನೀಡ್ಯಾನೋ

ಬಕುತರಿಗೆ ತಿಮ್ಮಪ್ಪ ಫಲವನು ನೀಡ್ಯಾನಯ್ಯಾ
ನವಮಾಸತುಂಬಿ ಬಚ್ಚಮ್ಮ ಹಡೆದಾಳೋ॥ [೧೭]

ಅಲ್ಲದೆ, ಕನಕನ ಜೀವನದ ವಿವಿಧ ಹಂತಗಳನ್ನು ಕೊಂಡಾಡುತ್ತಾ ಆತನ ಕುಲವನ್ನು ಹೆಸರಿಸುತ್ತಾರೆ.

ಪಾವನ ಬದುಕ ತನಗರಿ ಎಂದಾನೋ
ಪಾವನ ಬದುಕ ತನಗರಿ ಎಂದಾನಯ್ಯಾ
ಕುರುಬನೆಂದು ತಾ ಕರೆಯಿಸಿ ಕೊಂಡಾನೋ
ಕುರುಬನೆಂದು ತಾ ಕರೆಯಿಸಿಕೊಂಡಾನಯ್ಯ॥
ಕುರುಬನೆಂದರೆ ಬರಿ ಕುರುಬನಲ್ಲೋ
ನರಕುರಿಗಳ ಕಾಯುವ ಕುರುಬನಯ್ಯಾ
ಕಂಬಳಿ ಮಹಿಮಾ ತಿಳಿದವನೋ
ಕಂಬಳಿ ಮಹಿಮಾ ತಿಳಿದವನಯ್ಯಾ॥
ಸಾವಿರ ಕವನಗಳ ಕಟ್ಟಿದ ಕುರುಬನೋ
ಕನಕಗಿರಿಯ ಹೆಸರ ಸ್ಥಿರ ಮಾಡಿದನಯ್ಯಾ॥ [೧೮]

ಹಾಗೆಯೆ ಏಕತಾರಿ ಹಾಡಿನಲ್ಲಿಯೂ ಸಹ ಕನಕದಾಸರನ್ನು ಕೊಂಡಾಡುವ ಪದಗಳಿವೆ. ಇಲ್ಲಿಯೂ ಸಹ ಕುಲವನ್ನು ಪ್ರಸ್ತಾಪಿಸಲಾಗಿದೆ.

ನೀವೇನು ಬಲ್ಲಿರಿ ನೀವೇನು ಬಲ್ಲಿರಿ
ಕನಕದಾಸರನು ನೀವೇನು ಬಲ್ಲಿರಿ
ಹಾಲುಮತದ ಕನಕದಾಸನೂ
ಸಾಲುಮತಗಳ ತಿಳಿದವನು
ಸಾಲುಮತಗಳ ತಿಳಿದ್ಹೇಳಿದನ
ಸಾಕುಮಾಡಬೇಕು ಜಾತಿಗಳನೂ॥ [೧೯]

ಗೀಗೀ ಪದಗಳಲ್ಲೂ ಸಹ ಕನಕದಾಸರ ಮಹಿಮೆಯನ್ನು ಕೊಂಡಾಡಿದ್ದಾರೆ.

ಪುಣ್ಯ ಭೂಮಿ ಭರತಖಂಡದಾಗ
ಕನ್ನಡ ನಾಡಿದು ಬಹುಮಿಗಿಲಾ ಗೀಯಗೀಯ ಗೀಯಗಾ॥
ಹುಟ್ಟುತಾರ ಮೇಲಿಂದ ಮೇಲೆ ಮಹಾತ್ಮರಾ
ಆಗಿಹೋಗಿದಾರ ದೇವದೂತರಾ
-------------------
-------------------
ಪುರಂದರದಾಸ ಕನಕದಾಸ ಮಹೀಮರಾ

ಕನಕದಾಸ ನಿಂತಿದಾರ ಕಠಿಣ ನೀಗಿಸಾರ
ಕುರುಬನೆಂದು ಕನಕದಾಸ ಮಹಬಹಾದ್ದೂರಾ
ತಿಳಿಸಿದಾನ ಸರವರಿಗೆಲ್ಲಾ ದೇವರಿರುವ ಕಳಾ॥[೨೦]

ಬಹಳ ಮುಖ್ಯವಾಗಿ ಕನಕದಾಸರೇ ರಚಿಸಿರುವ ಉಗಾಭೋಗವೊಂದರಲ್ಲಿ,

ನಾರದರ ಅಂಶವೇ ಪುರಂದರದಾಸರು ನಾಯಮನು ಮುಂದೆ
ಮಾಂಡವ್ಯ ಶಾಪದಿಂದ ಎರಡು ಜನ್ಮ ಶೂದ್ರ ಯೋನಿಯಲ್ಲಿ ಪೊಕ್ಕೆನು
ಒಂದು ಜನುಮ ವಿದುರನಾಗಿ ಕುರುಬರ ಕುಲದಲ್ಲೀಗ ಪುಟ್ಟಿದೆ
ಎನಗೆ ಈ ಜನ್ಮದಲ್ಲಿ ಮುಕುತಿ ಎಂತೆಂಬೆ॥

ಇಲ್ಲಿ ಮುಖ್ಯವಾಗಿ ಕನಕದಾಸರೇ ತಮ್ಮ ಜಾತಿಯನ್ನು ಕುರುಬ ಜಾತಿಯೆಂದು ಹೇಳಿದ್ದಾರೆ.

ಈ ಎಲ್ಲ ಸ್ಪಷ್ಟ ಆಧಾರಗಳ ಜೊತೆಗೆ ಈಗಿನ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕು ಕಛೇರಿಯಲ್ಲಿ ಶಿರಸ್ತೆದಾರರಾಗಿ ಕೆಲಸಮಾಡಿದ ಎಲ್.ಜಿ.ಹಾವನೂರರು, ಕನಕದಾಸರ ಜೀವನ ಚರಿತ್ರೆಯ ವಾಸ್ತವಾಂಶಗಳನ್ನು ಅರಿತುಕೊಳ್ಳಲು ಸ್ವಯಂ ಸ್ಫೂರ್ತಿಯಿಂದ ಪರಿಶ್ರಮ ವಹಿಸಿದ್ದಾರೆ.

ಇವರ ಪ್ರಕಾರ ಕುಮ್ಮೂರಿನಲ್ಲಿ ದಾಸರೆಂದು ಹೇಳಿಕೊಳ್ಳುವ ಮನೆತನಗಳು ಸುಮಾರು ಅರವತ್ತು ಇವೆ. ಇಲ್ಲಿನ ಹಿರಿಯ ಮನೆತನದವರಲ್ಲಿ ತಿಮ್ಮಕೇಶವನ ಉತ್ಸವ ಮೂರ್ತಿ ಇದೆ. ಅದು ಕನಕದಾಸರಿಗಿಂತಲೂ ಪೂರ್ವದ್ದು. ಇದು ಕಂಚಿನದಾದ್ದರಿಂದ ಸವೆದು ಹೋಗಿದೆ. ಕನಕದಾಸರ ತಾಮ್ರದ ಗೋಪಾಳ, ಶಂಖಗಳೂ ಉತ್ತಮ ಸ್ಥಿಯಲ್ಲಿವೆ. ಕುಮ್ಮೂರ ಗುಡ್ಡದ ಮೇಲೆ ಕೋಟೆಯನ್ನು ಕಟ್ಟಿ ನಾಲ್ಕು ಬುರುಜುಗಳನ್ನು ಮಾಡಿದ್ದಾರೆ. ನಡುವೆ ಕನಕನಾಯಕರು ಕಟ್ಟಿಸಿದ ಕುದುರೆ ಲಾಯವಿದೆ. ಜನರು ಈಗಲೂ ಅದನ್ನು ಪವಿತ್ರ ಸ್ಥಳವೆಂದು ಪೂಜಿಸುತ್ತಾರೆ. ಕನಕನಾಯಕನ ಕಾಲುವೆ ಎಂದು ಕರೆಯುವ ಒಂದು ಕಾಲುವೆಯಿದೆ. ಅದು ಕುಮ್ಮೂರಿನ ಕೆರೆಗೆ ಕೂಡುತ್ತದೆ. ಈ ಕೆರೆಯನ್ನು ಕೂಡ ಕನಕನಾಯಕನೇ ಕಟ್ಟಿಸಿದನೆಂದು ಹೇಳಲಾಗುತ್ತದೆ. ದಾಸರ ತೋಟವೆಂದು ಕರೆಯಲ್ಪಡುವ ಹೂವು, ತುಳಸಿ, ತೆಂಗಿನಕಾಯಿಗಳ ತೋಟವಿದ್ದು ಇದನ್ನು ಕನಕದಾಸರೇ ನಿರ್ಮಿಸಿದರೆಂದು ಜನ ಹೇಳುತ್ತಾರೆ. ಇಲ್ಲಿನ ದಾಸರ ಮನೆಯಲ್ಲಿ ಪೂರ್ವ ಕಾಲದಿಂದಲೂ ಕುರಿಗಳನ್ನು ಸಾಕುತ್ತಾರೆ. ಪ್ರತಿ ಮನೆಯಲ್ಲಿ ಡೊಳ್ಳುಗಳಿವೆ. ಈ ಮನೆಗಳಲ್ಲಿರುವ ಕೆಲವು ಹಳೆಯ ಡೊಳ್ಳುಗಳನ್ನು ಕನಕದಾಸರು ಬಾರಿಸಿದರೆಂದು ಜನ ತೋರಿಸುತ್ತಾರೆ.[೨೧]

ಈ ಎಲ್ಲಾ ಹಿನ್ನೆಲೆಯ ಸಮೀಕ್ಷೆಗಳನ್ನು ಗಮನಿಸಿದಾಗ ಕನಕದಾಸರು ಜೀವಿಸಿದ್ದ ಮಧ್ಯಯುಗದ ಸಂದರ್ಭದಲ್ಲಿ ಕೃಷಿ ಮತ್ತು ಪಶುಪಾಲನೆಗೆ ಪೂರಕವಾಗಿ ನೇಕಾರಿಕೆ, ಚಮ್ಮಾರಿಕೆ, ಕಂಬಳಿ ತಯಾರಿಕೆ ಮುಂತಾದ ವೃತ್ತಿಗಳನ್ನು ಹೊಂದಿದ ಕಸುಬುದಾರರು ಇದ್ದರೆಂದು ತಿಳಿದು ಬರುತ್ತದೆ. ಜೊತೆಗೆ ಕನಕದಾಸರಿಗೆ ಮಲ್ಲನಗೌಡನ ಉಪಟಳದಿಂದ ಒಂದಷ್ಟು ದಿನ ಅಧಿಕಾರ ಕೈತಪ್ಪಿದಾಗ ಕೆಳಸ್ಥರದ ತಮ್ಮ ಕುಲದ ಜನರ ನಡುವೆ ಹೋಗಿ ಜೀವಿಸಿದ್ದಿರಬಹುದು. ಇದರಿಂದಾಗಿ ತಳ ಸಮುದಾಯಗಳ ಜೀವನ ವಿಧಾನಗಳು ಕನಕದಾಸರಿಗೆ ಪರಿಚಯವಾಗಲಾಗಿ ಮುಂದಿನ ತಮ್ಮ ಕಾಲುದಾರಿಯ ತಿರುಗಾಟದಲ್ಲಿ ಹಾಗೂ ಬರಹಗಳಲ್ಲಿ ಇಲ್ಲಿನ ಅನುಭವಗಳನ್ನೇ ಕಟ್ಟಿಕೊಡಲು ಕಾರಣವಾಯಿತು.

ಕೆಳಜಾತಿಯವರು ತಮ್ಮ ಮಕ್ಕಳಿಗೆ ಹೆಸರನ್ನು ಇಡುವಾಗ ತಮ್ಮ ಜಾತಿಯ ದೇವರುಗಳ ಹೆಸರನ್ನು ಇಡುವುದು, ಹಾಗೂ ಭಾರತೀಯ ಸಂಪ್ರದಾಯದಲ್ಲಿ ಅವರ ಹೆಸರಿನ ಮೇಲೆಯೇ ಜಾತಿಯನ್ನು ಗುರುತಿಸುವುದೂ ಈಗಲೂ ಅಲ್ಪ ಸ್ವಲ್ಪ ವಾಡಿಕೆಯಲ್ಲಿದೆ. ಇದರಂತೆ ಕನಕದಾಸರ ತಂದೆಯ ಹೆಸರು ಬೀರಪ್ಪ ಎಂದು ಸ್ಪಷ್ಟಪಡಿಸುವಾಗ ಇವರು ಕುರುಬ ಕುಲದವರಿರಬಹುದೆಂದು ಎಂದು ಗೋಚರವಾಗುತ್ತದೆ. ಅಷ್ಟೇ ಅಲ್ಲದೆ ತಮ್ಮದೊಂದು ಉಗಾಭೋಗದಲ್ಲಿ "ಕುರುಬ ಕುಲದಲ್ಲಿ ಜನಿಸಿದೆನಾಗಿ ಜನುಮದಲ್ಲಿ ಮುಕ್ತಿ ಎಂತು ಎಂಬೆ" ಎಂಬ ಮಾತನ್ನು ತಾವೇ ಸ್ವತಃ ಹೇಳಿರುವುದರಿಂದಲೂ ಹಾಗೂ ಈ ಎಲ್ಲಾ ಲಭ್ಯ ಆಧಾರಗಳು ಕನಕದಾಸರು ಕುರುಬ ಮನೆತನದವರ ಕುಟುಂಬದಲ್ಲಿಯೇ ಜನಿಸಿರಬಹುದೆಂದು ಯೋಚಿಸಬಹುದಾಗಿದೆ.

ಮನೆಯಲ್ಲಿ ತಂದೆ ತಾಯಿಗಳು ತಿರುಪತಿ ತಿಮ್ಮಪ್ಪನ ಭಕ್ತರಾಗಿದ್ದರಿಂದ, ಆತನ ಪ್ರತಿರೂಪದಂತಿದ್ದ 'ಬಾಡ'ದಲ್ಲಿನ ಆದಿಕೇಶವನ ಗುಡಿಗೆ ತಿಮ್ಮಪ್ಪ ಹೋಗಿಬರುತ್ತಿದ್ದನು. ಇದರಿಂದಾಗಿ, ತಿಮ್ಮಪ್ಪ ಬಾಲ್ಯದಲ್ಲಿಯೇ ಆದಿಕೇಶವನ ಆರಾಧನೆ ಮಾಡತೊಡಗಿದನು. ತಿಮ್ಮಪ್ಪ ತಾನು ಬಾಲ್ಯದಲ್ಲಿ ಗೆಳೆಯರೊಂದಿಗೆ ಆಟವಾಡುವಾಗ ಕೇಶವನ ಮಣ್ಣಿನ ಮೂರ್ತಿ, ಕಲ್ಲಿನ ಮೂರ್ತಿಗಳನ್ನು ಮಾಡಿ ದೇವರೆಂದು ಪೂಜಿಸಿ ತಲ್ಲೀನರಾಗಿರುತ್ತಿದ್ದನು. ಮುಂದೆ ತಿಮ್ಮಪ್ಪ ದೊಡ್ಡವನಾದ ಮೇಲೆ, ಈ ಭಕ್ತಿ ಆದಿಕೇಶವನ ಮೇಲೆ ಮತ್ತಷ್ಟು ಗಾಢವಾಗಿ ಬೆಳೆಯತೊಡಗಲು ಕಾರಣವಾಗಿರಬಹುದು.

ಕನಕ ತನ್ನ ಹದಿಮೂರನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡನು. ಚಿಕ್ಕಪ್ಪನಾದ ಮಲ್ಲನಾಯಕನು ನಾಡಗೌಡಿಕೆಯನ್ನು ಇದೇ ಸಂದರ್ಭದಲ್ಲಿ ಕಿತ್ತುಗೊಳ್ಳಲಾಗಿ ಆತನ ಉಪಟಳವನ್ನು ತಾಳಲಾರದೆ ತಾಯಿ ತನ್ನ ತವರು ಮನೆಗೆ ಮಗನನ್ನು ಕರೆದುಕೊಂಡು ಹೋದಳು. ಅಲ್ಲಿ ಕನಕ ಹಲವು ದಿನಗಳ ಕಾಲ ಕುರಿ,

ದನಗಳನ್ನು ಕಾಯತೊಡಗಿದನು. ಇಲ್ಲಿಯೇ ಕುರಿ ಮತ್ತು ದನಗಾಹಿಯ ಅನುಭವ ಕನಕನಿಗೆ ಆಗುವುದರೊಂದಿಗೆ ಡೊಳ್ಳುಕುಣಿತ, ಹಾಗೂ ಡೊಳ್ಳಿನ ಪದಗಳನ್ನು ತನ್ನ ಗೆಳೆಯರೊಂದಿಗೆ ಕಲಿತನು.

ಇಲ್ಲಿ ಜನಸಾಮಾನ್ಯರ ಬದುಕನ್ನು ತೀರ ಹತ್ತಿರದಿಂದ ಕಂಡಿದ್ದ ತಿಮ್ಮಪ್ಪ, ಮುಂದೆ ತಾನು ನಾಡಗೌಡನಾಗಿ ಕನಕನಾಯಕನಾಯಕನಾದ ಮೇಲೆ ಈ ಜನಸಾಮಾನ್ಯರಿಗಾಗಿ ಜನೋಪಕಾರಿ ಕಾರ್ಯಗಳಲ್ಲಿ ತೊಡಗಿದನು. ಕುರಿ, ದನ ಮತ್ತು ಕೃಷಿಗಾಗಿ; ಕೆರೆಕಟ್ಟೆ, ಅಣೆಕಟ್ಟೆಗಳನ್ನು (ಧರ್ಮಾನದಿಗೆ) ನಿರ್ಮಿಸಿದನು, ಬರಗಾಲದ ಸಂದರ್ಭದಲ್ಲಿ ರೈತರಿಂದ ವಸೂಲಿ ಮಾಡುವ ತೆರಿಗೆಯನ್ನು ಕಡಿಮೆಮಾಡುವುದು, ದೇವಾಲಯಗಳನ್ನು ನಿರ್ಮಿಸುವುದರ ಮೂಲಕ ಅಪಾರ ಜನಮನ್ನಣೆಗಳಿಸಿ, ದಕ್ಷ ಆಡಳಿತಗಾರನೆನಿಸಿಕೊಂಡನು. ಇದೇ ಸಂದರ್ಭದಲ್ಲಿ ತನ್ನ ಹೆಂಡತಿ ವಧೂಟಿಗೆ ಕಥೆ ಹೇಳಿದಂತಹ ದಾಟಿಯಲ್ಲಿರುವ 'ಮೋಹನ ತರಂಗಿಣಿ' ಕೃತಿಯನ್ನು ಬರೆದಿರಬಹುದು.

ಮುಂದೆ ವಿಜಯನಗರದ ಅರಸರ ಹೋರಾಟಕ್ಕೆ ಸೈನಿಕ ಸಹಾಯ, ಹಾಗೂ ಬಾಡ ಪ್ರದೇಶದ ಮೇಲೆ ಪದೇಪದೇ ದಾಳಿಮಾಡುತ್ತಿದ್ದ ಮುಸಲ್ಮಾನರ ದಂಗೆಯನ್ನು ನಿಯಂತ್ರಿಸಿ ಸಮರ್ಥನೆನಿಸಿಕೊಂಡನು. ಆ ಕಾರಣಕ್ಕಾಗಿ ಸೈನ್ಯದಲ್ಲಿ ಅಶ್ವದಳ. ಗಜದಳಗಳ ನಿರ್ವಹಣೆಯನ್ನು ಮಾಡಲು; ದನಗಾಹಿಯಾಗಿ ಅನುಭವ ಪಡೆದಿದ್ದ ಕನಕನಾಯಕನಗೆ ಅಶ್ವ ಮತ್ತು ಗಜ ಪಡೆಗಳ ನಿರ್ವಹಣೆ ಅತಿ ಸುಲಭವಾಯಿತು. ತನ್ನ ಸೈನ್ಯಕ್ಕೆ ತಾನೇ ತರಬೇತಿಯನ್ನು ಕೊಡುತ್ತಿದ್ದನು. ಅಂದು ಆನೆ ಮತ್ತು ಕುದುರೆಗಳನ್ನು ಸಾಕುವುದು, ಅವುಗಳಿಗೆ ಯುದ್ಧ ತರಬೇತಿ ನೀಡುವುದು ಒಂದು ಸಾಹಸದ ಕಲೆಯೇ ಆಗಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಮುಂದೆ ಕನಕನಾಯಕ ಯುದ್ಧ ಒಂದರಲ್ಲಿ ಸೋಲುವುದು, ತನ್ನ ಹೆಂಡತಿ, ಇದ್ದ ಒಬ್ಬ ಮಗ ಹಾಗೂ ತಾಯಿಯನ್ನು ಕಳೆದುಕೊಂಡು ಜೀವನದಲ್ಲಿ ವಿರಕ್ತಿಯನ್ನು ಹೊಂದಿ, ತನ್ನ ಬಳಿಯಿದ್ದ ಧನ, ಕನಕರೂಪದ ಸಂಪತ್ತನ್ನೆಲ್ಲಾ ದಾನ ಮಾಡಿ ಕನಕದಾಸನಾದನು. ಹೀಗೆ ದಾಸನಾಗಿ ಗುರುವನ್ನು ಅರಸಿ ಊರೂರು ಸುತ್ತುತ್ತ ತಿರುಗಾಟದೊಂದಿಗೆ ವಿಜಯನಗರಕ್ಕೆ ಬಂದು ವ್ಯಾಸಕೂಟವನ್ನು ಸೇರಿಕೊಂಡರು. ಇಲ್ಲಿದ್ದ ಜಾತಿ, ಮತ ಕುರಿತ ತಾರತಮ್ಯವನ್ನು ತಾಳ್ಮೆಯಿಂದ ಸಹಿಸಿಕೊಳ್ಳುತ್ತಲೇ ತಮ್ಮೊಳಗಿದ್ದ ಮಹಾಗುರು ಭಕ್ತಿಯಿಂದಾಗಿ ಗುರು ವ್ಯಾಸರಾಯರ ಮೆಚ್ಚುಗೆ, ಆಶೀರ್ವಾದಗಳನ್ನೂ, ಅವರಿಂದ ದೀಕ್ಷೆಯನ್ನೂ ಪಡೆದು ತಮ್ಮೊಳಗಿನ ಅರಿವನ್ನು ಹೆಚ್ಚಿಸಿಕೊಂಡರು. ವ್ಯಾಸಕೂಟದ ಇತರ ಬ್ರಾಹ್ಮಣ ಶಿಷ್ಯರು ಇಲ್ಲಿ ಕನಕರನ್ನು ಜಾತಿಯ ಕಾರಣಕ್ಕೆ ನಿಂದಿಸಿದರೂ ಯಾವುದಕ್ಕೂ ಉದ್ವೇಗಗೊಳ್ಳದೆ

"ಕುಲಕುಲಕುಲವೆಂದು ಹೊಡೆದಾಡದಿರಿ; ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎಂಬ ಶಾಂತ ಸ್ಥಿತಿಯ ಪ್ರಶ್ನೆಯನ್ನು ಕೇಳುತ್ತಲೇ ಜಾತಿ ಭಾವನೆ ಕೂಡದೆಂಬ ಸಂದೇಶವನ್ನು ನೀಡತೊಡಗಿದರು.

ಏಕೆಂದರೆ ತಮ್ಮ ಬಾಲ್ಯಕಾಲದ ಕುರಿ ಮತ್ತು ದನಗಾಹಿ ಬದುಕಿನ ಅನುಭವ; ಕನಕನಲ್ಲಿ ಹೊಂದಾಣಿಕೆ, ಮಾನವೀಯತೆ, ಶಿಸ್ತು, ಸಮಾನತೆ ಮುಂತಾದ ಜವಾಬ್ದಾರಿಯ ಪರಿಕಲ್ಪನೆಗಳು ಬೆಳೆಯುವಂತೆ ಮಾಡಲು ಕಾರಣವಾಗಿರಬಹುದು. ಜೊತೆಗೆ ಪಶುಪಾಲಕರಲ್ಲಿನ ಬಹುಮುಖ್ಯ ಲಕ್ಷಣವಾದ ನಿಂತಲ್ಲಿ ನಿಲ್ಲದ, ತಮ್ಮ ದನಕುರಿಗಳಿಗಾಗಿ ಮೇವು, ನೀರು ಹುಡುಕುತ್ತಾ ಊರಿಂದೂರಿಗೆ ಅಲೆಯುತ್ತಿದ್ದರು. ಈ ಅಲೆದಾಟದ ಗುಣ ಕನಕದಾಸರಲ್ಲಿಯೂ ಕಂಡುಬರುತ್ತದೆ. ಹಾಗಾಗಿಯೇ ಕನಕದಾಸರು ವಿಜಯನಗರದ ಅವನತಿಯ ನಂತರ ಮತ್ತೆ ತಿರುಗಾಟ ಪ್ರಾರಂಭಿಸಿ ಸಮಾಜದ ನಿಂದನೆ, ತಾರತಮ್ಯ, ತಿರಸ್ಕಾರಗಳನ್ನು ಸ್ವೀಕರಿಸುತ್ತಾ, ಸಾಮಾನ್ಯ ಜನರ ನಡುವೆ ಇದ್ದುಕೊಂಡೇ ತಮಗಾದ ಅನುಭವ ಪ್ರೇರಣೆ ಪ್ರಭಾವಗಳಿಂದಾಗಿ ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಕೀರ್ತನೆಗಳು, ಮುಂಡಿಗೆಗಳು ಹಾಗೂ ಹರಿಭಕ್ತಿಸಾರದಂತಹ ಕೃತಿಗಳನ್ನು ಬರೆದರು.

ಈ ತಿರುಗಾಟದ ಕಾಲು ಹಾದಿಯಲ್ಲಿ ತಿರುಪತಿ, ಶ್ರೀರಂಗಪಟ್ಟಣ, ಮೇಲುಕೋಟೆ, ಬೇಲೂರು, ನಂಜನಗೂಡು, ಬಾಡ, ಬಂಕಾಪುರ, ಪ್ರದೇಶಗಳನ್ನು ಸುತ್ತುತ್ತಾ ಸಿಕ್ಕವರಿಗೆ ಉಪದೇಶವನ್ನು ಮಾಡುತ್ತ ಸಮಾಜವನ್ನು ತಿದ್ದುವ ಕಾಯಕದಲ್ಲಿ ತಲ್ಲೀನರಾದರು. ಕನಕದಾಸರ ಈ ಎಲ್ಲಾ ತಿರುಗಾಟದ ಅನುಭವಗಳು ಕೀರ್ತನೆ, ಮುಂಡಿಗೆ ಮತ್ತು ಕೃತಿಗಳಲ್ಲಿ ಅಭಿವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಆದ್ದರಿಂದ ಕನಕದಾಸರು ಶೈವ, ವೈಷ್ಣವ ಹಾಗೂ ದ್ವೈತ ಮತಗಳಲ್ಲಿ ಯಾವುದೊಂದನ್ನೂ ದ್ವೇಷಿಸದೆ ಅವುಗಳಲ್ಲಿಯ ಆದರ್ಶ, ಭಕ್ತಿಯ ತತ್ವಗಳನ್ನು ಒಪ್ಪಿಕೊಂಡು ಅವೆಲ್ಲವುಗಳನ್ನು ತಮ್ಮ ಜೀವನದಲ್ಲಿ ಆಚರಣೆಗೆ ತಂದರು. ಆದ್ದರಿಂದ ಕನಕದಾಸರು ಈ ತ್ರಿವಳಿ ಮತ ತತ್ವಗಳ ಉತ್ತಮಾಂಶಗಳಿಂದ ಸಂಸ್ಕಾರಗೊಂಡು ದಾಸಶ್ರೇಷ್ಠರಾದರು. ತಮ್ಮ ಜೀವನದುದ್ದಕ್ಕೂ ಬಂದ ಎಡರು ತೊಡರುಗಳಿಗೆ ಹೆದರದೆ ಬಂದುದೆಲ್ಲವನ್ನೂ ಅನುಭವಿಸಿ ಅವೆಲ್ಲವುಗಳನ್ನು ಮೆಟ್ಟಿನಿಂತು ಮಾನವೀಯತೆಯನ್ನು ಮೆರೆದು ಮಹಾತ್ಮನೆನಿಸಿಕೊಂಡರು. ಮಾನವ ಜನಾಂಗಕ್ಕೆ ಕನಕದಾಸರು ಕೊಟ್ಟ ಸಂದೇಶಗಳು ಇಂದಿಗೂ ಜೀವಂತವಾಗಿವೆ. ಇದಕ್ಕೆಲ್ಲಾ ಅವರು ಪಶುಪಾಲನೆ ಮೂಲಕ ಕಂಡುಕೊಂಡ 'ಪಾಲನಾ ಸಂಸ್ಕೃತಿಯ' ಅನುಭವವೇ ಕಾರಣವೆಂದು ಹೇಳಬಹುದಾಗಿದೆ.

ಕನಕದಾಸರು ತಮ್ಮ ಕಡೆಯ ದಿನಗಳನ್ನು ಕಾಗಿನೆಲೆಯಲ್ಲಿಯೇ ಕಳೆದಿರಬಹುದು. ಇದಕ್ಕೆ ಸಾಕ್ಷಿಯಾಗಿ ಕಾಗಿನೆಲೆಯ ಕೆರೆಯ ಪಕ್ಕದ ವಿಶಾಲವಾದ ಪ್ರಾಂಗಣದಲ್ಲಿ

ಕನಕದಾಸರ ಗದ್ದುಗೆಯಿದೆ. ಈ ಕಾಗಿನೆಲೆ ಇಂದು ಮಾನವ ಕುಲಕ್ಕೆ ಸಂದೇಶ ನೀಡುವ ಜಾಗೃತ ಐತಿಹಾಸಿಕ ಸ್ಥಳವಾಗಿ ರೂಪುಗೊಂಡಿರುವುದು, ವರ್ತಮಾನ ಈ ಮಾನವತಾವಾದಿಯನ್ನು ಹೇಗೆ ಪರಿಭಾವಿಸಿದೆ ಎಂಬುದನ್ನು ಸೂಚಿಸುತ್ತದೆ.

ಹೀಗೆ ಕನಕದಾಸರು ತಮ್ಮ ಅನುಭವ, ಜ್ಞಾನ, ಬುದ್ಧಿಶಕ್ತಿಯಿಂದ ನ್ಯಾಯಸಮ್ಮತವಾದ ಹೋರಾಟವನ್ನು ಮಾಡುತ್ತಲೇ, ಎಲ್ಲೂ ತಮ್ಮ ವ್ಯಕ್ತಿತ್ವಕ್ಕೆ ದಕ್ಕೆ ತಂದುಕೊಳ್ಳದೆ, ಗೊಂದಲವನ್ನು ಎಬ್ಬಿಸದೆ, ಶ್ರೇಷ್ಠ ಸಮಾಜ ಚಿಂತಕನಾಗಿ, ಮಹಾನ್ ಜ್ಞಾನಿಯಾಗಿ, ಭಕ್ತಿ ಪುರುಷನಾಗಿ, ದಾನವಂತನಾಗಿ, ವಿನಯವಂತಿಕೆಯ ಸಕಲಗುಣವನ್ನು ಪಡೆದಿದ್ದ ಅವನೊಳಗಿನ ಈ ವಿಶಿಷ್ಟತೆಗೆ; ಪಾರಂಪರಿಕ ಹಿನ್ನಲೆಯ ಪ್ರಭಾವವೇ ಕಾರಣವಾಗಿರಬಹುದೆಂದು ಹೇಳಬಹುದು.

**ಕನಕದಾಸರ ಕೃತಿಗಳಲ್ಲಿ ಪಶುಪಾಲನಾ ಪರಂಪರೆಯ ವಿವರಗಳು:**

ಕನ್ನಡ ಸಾಹಿತ್ಯ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅನೇಕ ಪ್ರತಿಭಾನ್ವಿತ ಕವಿಗಳು ಎದ್ದು ಕಾಣುತ್ತಾರೆ. ಅವರು ರಚಿಸಿರುವ ಕೃತಿಗಳು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವುದು ಸ್ಪಷ್ಟವಾಗುತ್ತದೆ. ಕನ್ನಡ ನಾಡು ನುಡಿ ಸಂಸ್ಕೃತಿಯನ್ನು ಕಟ್ಟಿ ಬೆಳೆಸುವಲ್ಲಿ ಈ ಕವಿಗಳು ಶ್ರಮವಹಿಸಿ ಅಪಾರ ಕೊಡುಗೆ ನೀಡಿದ್ದಾರೆ. ಜನಸಾಮಾನ್ಯರ ನೋವು-ನಲಿವುಗಳಿಗೆ ಸ್ಪಂದಿಸಿದ್ದಾರೆ. ಕೆಲವು ಕವಿಗಳಿಗೆ ತಾವು ಹುಟ್ಟಿ ಬೆಳೆದ ಜಾತಿ ಧರ್ಮಗಳು ತಮ್ಮ ಪ್ರತಿಭೆಯ ಅಭಿವ್ಯಕ್ತಿಗೆ ಪೋಷಕವಾಗಿದ್ದರೆ; ಇನ್ನೂ ಕೆಲವು ಕವಿಗಳಿಗೆ ಇವೇ ಮಾರಕವಾಗಿ ಅಡ್ಡಿ ಆತಂಕದ ತಡೆಗೋಡೆಗಳಾಗಿ ಸಹಜ ಪ್ರತಿಭೆಯನ್ನು ಹೊಸಕಿ ಹಾಕುವ ಅಮಾನವೀಯ ಪರಿಸ್ಥಿತಿ ಎದುರಾದುದನ್ನು ಕಾಣುತ್ತೇವೆ. ಈ ಜಾತಿ ಧರ್ಮಗಳ, ಅಡೆ-ತಡೆಗಳನ್ನು ಮೀರಿ ಜಾತ್ಯತೀತ, ಧರ್ಮಾತೀತ ಹಾಗೂ ಮಾನವೀಯ ನೆಲೆಗಟ್ಟಿನ ಮೇಲೆ ಹೋರಾಡಿ, ಚಿಂತಿಸಿ; ಸಮಾನತೆಯ ಆಶಯದೊಂದಿಗೆ ಜನಪರವಾದ ಕೃತಿಗಳನ್ನು, ಕನಕದಾಸರೂ ಸೇರಿದಂತೆ ನಮ್ಮ ನಾಡಿನ ಅನೇಕ ಕವಿಗಳು ರಚಿಸಿದ್ದಾರೆ ಹಾಗೂ ರಚಿಸುತ್ತಲೂ ಇದ್ದಾರೆ.

ಭಕ್ತಿಯ ನೆಲೆಗಟ್ಟಿನ ಮೇಲೆ ಸಮಾಜವನ್ನು ತಿದ್ದುವ, ಪರಿಷ್ಕರಿಸುವ, ಮಾನವೀಯಗೊಳಿಸುವ ಧೋರಣೆಯೊಂದಿಗೆ ಕನ್ನಡ ಸಾಹಿತ್ಯದಲ್ಲಿ ರಚಿತವಾದ ಸಾಹಿತ್ಯ ಪ್ರಕಾರಗಳೆಂದರೆ ವಚನ ಸಾಹಿತ್ಯ ಮತ್ತು ದಾಸಸಾಹಿತ್ಯ. ವಚನ ಸಾಹಿತ್ಯ ೧೨ನೇ ಶತಮಾನದದ್ದಾದರೆ, ದಾಸ ಸಾಹಿತ್ಯ ೧೫-೧೬ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಈ ಎರಡೂ ಕಾಲಘಟ್ಟಗಳು ಕನ್ನಡ ಸಾಹಿತ್ಯದಲ್ಲಿ ಏಕೆ ಮುಖ್ಯವಾಗುತ್ತವೆ ಎಂದರೆ, ಜಾತಿ ಮತ್ತು ಧರ್ಮದ ಕಾರಣಕ್ಕಾಗಿ ಸಾಹಿತ್ಯವಲಯದಿಂದ ಹೊರ ಅಂಚಿಗೆ ತಳ್ಳಲ್ಪಟ್ಟಿದ್ದ ಸಮುದಾಯಗಳ ಜನರು ಸಾಹಿತ್ಯವಲಯದ ಒಳಗೆ

ಪ್ರವೇಶ ಪಡೆಯುವಂತಾದದ್ದು ಹಾಗೂ ಕನ್ನಡ ಸಾಹಿತ್ಯಕ್ಕೆ ಸಿಕ್ಕ ಹೊಸ ತಿರುವು ದೊರೆತದ್ದು ಇಲ್ಲಿಯೇ ಎನ್ನಬಹುದಾಗಿದೆ.

ಹೀಗೆ ಜಾತಿಧರ್ಮದ ತಡೆಗೋಡೆಯಿಂದ ಹೊರಬಂದು ಮಾನವೀಯತೆಗಾಗಿ ಚಿಂತಿಸಿ; ಸಾಮಾಜಿಕ ನ್ಯಾಯ ಪ್ರತಿಪಾದನೆಯ ಆಶಯ, ಸಾಮಾಜಿಕ ಸಾಮರಸ್ಯದ ಕಾಳಜಿಯೊಂದಿಗೆ, ಕೃತಿ ರಚಿಸಿದ ಕನಕದಾಸರು, ದಾಸ ಪರಂಪರೆಯಲ್ಲಿ ಪ್ರಮುಖರಾಗಿದ್ದಾರೆ.

ಕನಕದಾಸರು ಹರಿದಾಸ ಪರಂಪರೆಯ ಇತರ ದಾಸರಂತೆ ಕೇವಲ ಕೀರ್ತನಕಾರರಾಗಿ ಮಾತ್ರ ಉಳಿಯದೆ, ಕವಿಯಾಗಿ ನಾಲ್ಕು ಕಾವ್ಯಗಳನ್ನೂ ರಚಿಸಿದರು. ಇವೆಲ್ಲವುಗಳಿಗೆ ಪುರಾಣದ ಚೌಕಟ್ಟಿರುವ ವಿಚಾರಗಳನ್ನೇ ಆಯ್ದುಕೊಂಡರೂ, ಅವುಗಳಲ್ಲಿ ಅವರು ಹೇಳಲು ಹೊರಟಿರುವುದು ಸಾಮಾಜಿಕ ವಿಚಾರಗಳನ್ನು. ಇಲ್ಲಿ ಶೋಷಿತರ ಮುಖವಾಣಿಯಾಗಿ ಕರ್ಮ ಸಿದ್ಧಾಂತವನ್ನು ಪ್ರತಿಪಾದಿಸುತ್ತಲೇ ವಿಶಿಷ್ಟ ಕವಿ ಎನಿಸಿಕೊಂಡಿದ್ದಾರೆ. ಇವರ ದೇಸೀ ರೂಪದ ಭಾಷೆ. ಬರವಣಿಗೆಯ ಶೈಲಿ, ಜೀವನ ದರ್ಶನ, ಆಲೋಚನೆಗಳು ಅಪೂರ್ವವಾದ ರೀತಿಯಲ್ಲಿ ಅಂದಿನ ಸಾಹಿತ್ಯದ ರೂಪವನ್ನೇ ಬದಲಿಸಿತು. ಕನಕದಾಸರ ಆತ್ಮನಿವೇದನೆ, ಹರಿಸರ್ವೋತ್ತಮನೆಂಬ ಭಕ್ತಿ ಪ್ರತಿಪಾದನೆಯ ನೆಪದಲ್ಲಿ ಸಮಕಾಲೀನ ಸಮಾಜದ ಶುದ್ಧೀಕರಣದ ಕಾಯಕದಲ್ಲಿ ಬದುಕು ಬರೆಹದ ಮೂಲಕ ಮುನ್ನೆಲೆಗೆ ಬಂದರು.

ಜೊತೆಗೆ ದಕ್ಷಿಣ ಭಾರತದ ಭಕ್ತಿ ಚಳುವಳಿಯ ವ್ಯಾಪ್ತಿಯಲ್ಲಿ ಅಗಾಧವಾಗಿ ಕಾಣುವ ಸಂವಾದ; ತೀವ್ರವಾದ ಹಾಗೂ ಜಡ ಸಾಮಾಜಿಕ ಚೌಕಟ್ಟನ್ನು ಒಡೆಯುವ ಅಭಿವ್ಯಕ್ತಿಗಳು; ಸರ್ವೋದಯ, ಸಮಾನತೆ ಮತ್ತು ಪೂರ್ಣದೃಷ್ಟಿಯನ್ನು ಕಟ್ಟುವ ರಚನೆಗಳನ್ನು ಒಳಗೊಂಡಂತೆ ದಾಸ ಚಳುವಳಿಯಲ್ಲಿ ಬಹು ದೊಡ್ಡ ಕ್ಷೇತ್ರವಾಗಿ ರೂಪುಗೊಂಡವನು ಕನಕದಾಸರೊಬ್ಬರೇ ಎಂದು ಹೇಳಬಹುದು. ಕಾರಣ ತಳಸಮುದಾಯದಿಂದ ದಾಸರು ತಮ್ಮ ಜೀವಿತದ ಎಲ್ಲಾ ಹಂತದಲ್ಲೂ 'ಮನುಷ್ಯ ಸಂಬಂಧಗಳ ಅನುಭವವನ್ನು' ಹೊಂದಿದವರಾಗಿದ್ದರು.

ಇದಕ್ಕೆಲ್ಲಾ ಮುಖ್ಯ ಕಾರಣ; ಕನಕದಾಸರು ಪಶುಪಾಲಕ ವೃತ್ತಿಯಿಂದಲೇ ಚಿಗುರೊಡೆದ ಜಾತಿಯವರಾಗಿದ್ದು(ಜಗತ್ತೂ ಕೂಡ) ಅವರಿಂದ ರಚಿತವಾಗಿರುವ ಸಾಹಿತ್ಯದ ವಸ್ತು, ಘಟನೆ, ಸಂದರ್ಭ ಸನ್ನಿವೇಶಗಳು ಇದರಿಂದ ಪ್ರಭಾವಿಸಲ್ಪಟ್ಟಿವೆ. ಹಾಗೂ ಈ ಜಗತ್ತಿನ ವಿಶಿಷ್ಟ ರಚನೆಗೂ ಕಾರಣವಾಗಿದೆ. ಕವಿ ಬದುಕಿದ ಪರಿಸರ, ಆತನಿಗೆದುರಾದ ಸಮಸ್ಯೆಗಳು ಆತನ ಸಾಹಿತ್ಯದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಕಾಣಿಸಿಕೊಂಡಿರುವ ಸಾಧ್ಯತೆಗಳನ್ನು ಸಾಹಿತ್ಯದ ಎಲ್ಲಾ ಕಾಲಘಟ್ಟದಲ್ಲೂ ನಾವು ನೋಡಿದ್ದೇವೆ. ಹಾಗಾಗಿ ಕನಕದಾಸರು ಸಮುದಾಯಗಳ ಸಹಭಾಗಿತ್ವದೊಂದಿಗೆ

ಹೊಂದಾಣಿಕೆ ಮತ್ತು ಪರಸ್ಪರ ಅರಿವನ್ನು ವಿಸ್ತರಿಸುತ್ತಾ ನಡೆಯಬಹುದಾದ ಸಾಮರಸ್ಯದ ನೆಲೆಯಲ್ಲಿ ಕನಕ ಮುನ್ನಡೆಯಲು ಮುಖ್ಯ ಕಾರಣ; ಆತ ಒಬ್ಬ ತಳಸಮುದಾಯದವನಾಗಿ ಬೇಟೆ, ಪಶುಪಾಲನೆ, ಕೃಷಿ ಬದಿಕಿನ ಅನುಭವದೊಂದಿಗೆ, ಆಡಳಿತ ನಿರ್ವಹಣೆ ಹಾಗೂ ತಿರುಗಾಟವನ್ನು ನಡೆಸಿದ್ದರಿಂದಲೇ ಎಂಬುದಾಗಿ ಹೇಳಬಹುದು. ಆದ್ದರಿಂದ ಜೀವ ವಿಕಾಸದ ಮೂಲವಾದ ಈ ಬೇಟೆ, ಪಶುಪಾಲನೆ ಮತ್ತು ಕೃಷಿಯ ಪ್ರೇರಣೆ ಮತ್ತು ಸಂಬಂಧಗಳು, ಕನಕನ ಕೃತಿ ಮತ್ತು ಕೀರ್ತನೆ, ಮುಂಡಿಗೆಗಳಲ್ಲಿ ಎಲ್ಲೆಲ್ಲಿ ಹೇಗೆ ಪ್ರಭಾವಿಸಲ್ಪಟ್ಟಿವೆ ಎಂಬುದನ್ನು ಮುಂದಿನ ಶೀರ್ಷಿಕೆಗಳಡಿಯಲ್ಲಿ ಚರ್ಚಿಸಲಾಗಿದೆ.

**ಮೋಹನ ತರಂಗಿಣಿ:**

ಕನಕದಾಸರ ಮೋಹನ ತರಂಗಿಣಿ ಶೃಂಗಾರ, ಭಕ್ತಿ ಮತ್ತು ಸಮಕಾಲೀನ ಸಾಮಾಜಿಕ ಚಿತ್ರಣದೊಡನೆ ಪ್ರಭುತ್ವವನ್ನು ಕುರಿತು ತಿಳಿಸುವ ಕೃತಿಯಾಗಿದೆ. ಭಾಷಿಕ ನೆಲೆಯಲ್ಲಿ 'ಸಾಂಗತ್ಯ' ಛಂದಸ್ಸನ್ನೂ, ವರ್ಣನೆಯನ್ನೂ ಪ್ರಧಾನವಾಗಿ ಬಳಸಿಕೊಂಡ ಕೃತಿ ಇದಾಗಿದೆ.

ಹರಿದಾಸರಾದ ಕನಕದಾಸರು ಕೃಷ್ಣನನ್ನು ತಮ್ಮ ಕಥಾನಕದ ತುಂಬಾ ಹರಿದಾಡಿಸಿದ್ದಾರೆ. ಮೊದಲ ಬಾರಿಗೆ ಶೃಂಗಾರದ ಭಾವದಲ್ಲಿ ಕೃಷ್ಣನ ಲೀಲೆಗಳನ್ನು ತೆರೆದಿರಿಸಿದ್ದಾರೆ. ಕೃಷ್ಣನಾದರು ಯಾರು? ಆತನೊಬ್ಬ ದನಗಾಹಿ ಗೋಪಾಲಕ. ತಳಸಮುದಾಯದವನೊಬ್ಬನನ್ನು ತನ್ನ ಕಾವ್ಯದ ಮುಖ್ಯ ಪಾತ್ರಧಾರಿಯನ್ನಾಗಿ ಮಾಡಿಕೊಂಡು ಪ್ರಭುತ್ವದ ಅಂದಿನ ಒಡೆಯನಾದ ಶ್ರೀ ಕೃಷ್ಣದೇವರಾಯನೊಂದಿಗೆ ದ್ವಾರಕೆಯ ಕೃಷ್ಣನನ್ನು ಸಮೀಕರಿಸಿ, ಸಾಮಾನ್ಯನೊಬ್ಬನನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡಿದ್ದಾರೆ.

ಕನಕದಾಸರು ಕೃಷ್ಣನ ಲೀಲೆಗಳನ್ನು ಹೇಳಲು ಪ್ರಧಾನವಾಗಿ ಮೂರು ತಲೆಮಾರಿನ ಕಥಾವಸ್ತುವನ್ನು ಬಳಸಿಕೊಳ್ಳುತ್ತಾರೆ. ಅಂದರೆ ಕ್ಷೀರಸಾಗರದೊಡೆಯನಾದ ವಿಷ್ಣು ಪುರಾಣದಿಂದ ಕೃಷ್ಣರುಕ್ಮಿಣಿಯರ ಪ್ರಸಂಗವನ್ನು; ಶೈವ ಪುರಾಣದಿಂದ ಕಾಮದಹನದ ಪ್ರಸಂಗವನ್ನು; ಭಾಗವತ ಪರಂಪರೆಯಿಂದ ಬಾಣಾಸುರ ಮತ್ತು ಶಂಬಾಸುರ ವಧೆಯ ಪ್ರಸಂಗವನ್ನೂ ಇಲ್ಲಿ ತಂದು ಜೋಡಿಸಿದ್ದಾರೆ.

**ಕಥಾಸಾರ:**

ಕೃತಿವೇಳ್ದ ಕನಕದಾಸೋತ್ತಮ ಕೇಳ್ದವ
ಳತಿ ಸುಜ್ಞಾನವಧೂಟಿ
ಕೃತಿಗೆ ಕರ್ತನು ಕಾಗಿನೆಲೆಯಾದಿ ಕೇಶವ
ಕೃತಿಯ ಕೇಳ್ದರೆ ಪುಣ್ಯವಹುದು.॥

ಎಂದು ಪ್ರಾರಂಭವಾಗುವ 'ಮೋಹನ ತರಂಗಿಣಿ' ಕೃತಿಯಲ್ಲಿ, ಕೃತಿಕಾರ ಕನಕದಾಸರು ತನ್ನ ಹೆಂಡತಿಯಾದ ಸುಜ್ಞಾನವಧೂಟಿಗೆ ಇಲ್ಲಿನ ಕಥೆ ಹೇಳಿದರೆಂದು ತೋರುತ್ತದೆ. ವಿಷ್ಣು ಕಥೆಯೊಂದಿಗೆ ತೆರೆದುಕೊಳ್ಳುವ ಈ ಕಾವ್ಯದಲ್ಲಿ ವಿಷ್ಣುಸುತ ಮನ್ಮಥ, ತಾರಕಾಸುರನ ವಧೆಗಾಗಿ ತಪಸ್ಸಿನಲ್ಲಿ ನಿರತನಾದ 'ಪರಶಿವ'ನನ್ನು ಪಾರ್ವತಿಯೊಂದಿಗೆ ಸೇರಿಸುವ ಲೋಕಕಲ್ಯಾಣದ ಉದಾತ್ತ ಉದ್ದೇಶದಿಂದಾಗಿ ಶಿವನ ತಪಸ್ಸನ್ನು ಭಂಗಗೊಳಿಸುತ್ತಾನೆ. ಇದರಿಂದ ಪರಶಿವನ ಕೆಂಗಣ್ಣಿಗೆ ಗುರಿಯಾಗಿ ದಹಿಸಲ್ಪಡುತ್ತಾನೆ. "ಪಾಪಕ್ಷಯಕ್ಕೆಂದು ಗಂಗೆಯೊಳ್ಮಿಂದರೆ ಪಾಪಿಯ ಮೊಸಳೆ ತಿಂದಂತೆ" ಎಂಬಂತಾಯಿತು ಇಲ್ಲಿನ ಮನ್ಮಥನ ಪಾಡು. ವೈಧವ್ಯದ ಕಳಂಕ ಹೊತ್ತ ರತಿಯನ್ನು ಪಾರ್ವತಿ ಪರಶಿವರು ಸಂತೈಸಿ ಮುಂದೆ ಪತಿಯನ್ನು ಸೇರಿಸುವ ಭರವಸೆ ನೀಡುತ್ತಾರೆ.

ಶಿವನಿಂದ ದಹಿಸಲ್ಪಟ್ಟ ಮನ್ಮಥ, ಮುಂದೆ ದ್ವಾರಕೆಯ ಕೃಷ್ಣ ರುಕ್ಮಿಣಿಯರಿಗೆ ಪ್ರದ್ಯುಮ್ನನಾಗಿ ಹುಟ್ಟುತ್ತಾನೆ. ಪ್ರದ್ಯುಮ್ನನಿಂದಲೇ ತನಗೆ ಮರಣವೆಂದು ನಾರದರಿಂದ ತಿಳಿದ ಅಸುರ ಶಂಬಾಸುರನು ರುಕ್ಮಿಣಿಯ ಹತ್ತು ದಿನದ ಮಗುವನ್ನು ಅಪಹರಿಸುತ್ತಾನೆ. ಮಗುವನ್ನು ಕೊಲ್ಲಲು ಮನಸ್ಸುಬಾರದೆ ನದಿಯಲ್ಲಿ ಎಸೆದು ಹೋಗುತ್ತಾನೆ. ಮೀನೊಂದು ಮಗುವನ್ನು ನುಂಗುತ್ತದೆ.

ಇತ್ತ ರತಿ, ಪತಿಯನ್ನು ಹುಡುಕುತ್ತಾ ಶಂಬರನ ಪಟ್ಟಣ ತಲುಪುತ್ತಾಳೆ. ಶಂಬರ ಅವಳ ರೂಪಕ್ಕೆ ಮೋಹಿತನಾಗಿ ಆಕೆಯನ್ನು ಒಲಿಸಿಕೊಳ್ಳಲು ಪತ್ನಿಯ ಮೂಲಕ ಪ್ರಯತ್ನಿಸಿ ವಿಫಲನಾಗುತ್ತಾನೆ. ಕೊನೆಗೆ ಅವಳನ್ನು ಅಡುಗೆ ಕೆಲಸಕ್ಕೆ ನಿಯೋಜಿಸುತ್ತಾನೆ. ಇತ್ತ ಪ್ರದ್ಯುಮ್ನನನ್ನು ನುಂಗಿದ ಮೀನು ಮಿಂಗುಲಿಗರ ಮೂಲಕ ಶಂಬಾಸುರನ ಅಡಿಗೆ ಮನೆ ತಲುಪುತ್ತದೆ. ಅಲ್ಲಿ ರತಿ, ಮೀನನ್ನು ಕತ್ತರಿಸುವಾಗ ಅದರಲ್ಲಿರುವ ಮಗು ಮನ್ಮಥನೇ ಎಂದು ತಿಳಿದು ಅದನ್ನು ಸಾಕುತ್ತಾಳೆ. ನಂತರ ಪ್ರದ್ಯುಮ್ನ ಶಂಬಾಸುರನನ್ನು ಕೊಂದು ರತಿಯನ್ನು ವಿವಾಹವಾಗುತ್ತಾನೆ. ಮುಂದೆ ರತಿ ಪ್ರದ್ಯುಮ್ನರ ದಾಂಪತ್ಯದಿಂದ ಜನಿಸಿದವನೇ ಅನಿರುದ್ಧ.

ಮಹಾ ಶಿವಭಕ್ತನಾದ ಅಸುರ ಬಾಣಾಸುರನ ಮಗಳು ಉಷೆ, ತನ್ನ ಸ್ವಪ್ನದಲ್ಲಿ ಅನಿರುದ್ಧನನ್ನು ಕಲ್ಪಿಸಿ, ಸುಖಿಸಿ ಪ್ರೀತಿಸಲಾರಂಬಿಸುತ್ತಾಳೆ. ತನ್ನ ಗೆಳತಿ ಚಿತ್ರಲೇಖೆಯ ಮೂಲಕ ನಿಜರೂಪದ ಅನಿರುದ್ಧನ ಭಾವಚಿತ್ರ ತರಿಸಿಕೊಂಡು ತಂದೆಗೆ ತಿಳಿಯದ ಹಾಗೆ ಅನಿರುದ್ಧನನ್ನು ತನ್ನ ಅಂತಃಪುರಕ್ಕೆ ಬರಮಾಡಿಕೊಂಡು ಪ್ರೇಮಸಲ್ಲಾಪದಲ್ಲಿ ತೊಡಗುತ್ತಾಳೆ. ಇದನ್ನರಿತ ಬಾಣನು ಅನಿರುದ್ಧನನ್ನು ಸೆರೆಹಿಡಿಯುತ್ತಾನೆ. ಮೊಮ್ಮಗನನ್ನು ಬಂಧಿಸಿದ ಬಾಣಾಸುರನೊಂದಿಗೆ ಕೃಷ್ಣ ಯುದ್ಧಕ್ಕೆ ಸಿದ್ಧನಾಗುತ್ತನೆ.

ಕೊನೆಗೆ ಎಲ್ಲವೂ ಸುಖಾಂತ್ಯವಾಗಿ ಉಷೆ ಅನಿರುದ್ಧರ ವಿವಾಹದಲ್ಲಿ ಕತೆ ಮುಕ್ತಾಯವಾಗುತ್ತದೆ.

**ಕೃತಿಯಲ್ಲಿನ ಪಶುಪಾಲನಾ ಪರಂಪರೆಯ ವಿವರಗಳು:**

ಕನಕ ಮತ್ತು ಪುರಂದರದಾಸರನ್ನು ಹರಿದಾಸ ಚಳುವಳಿಯ ಪ್ರಮುಖರೆಂದು ನಾವು ಗುರುತಿಸುತ್ತೇವೆ. ಇವರಿಬ್ಬರ ನಡುವೆ ಸಾಕಷ್ಟು ತಾತ್ವಿಕ ಸಾಮ್ಯತೆಗಳಿದ್ದಾಗ್ಯೂ ಕನಕರು ಜಾತಿಯ ನೆಲೆಯಲ್ಲಿ ಪುರಂದರರಿಗಿಂತ ಭಿನ್ನರಾಗುತ್ತಾರೆ. ಪುರಂದರದಾಸರು ಬ್ರಾಹ್ಮಣರಾದರೆ, ಕನಕದಾಸರು ಕೆಳ ಜಾತಿಯೊಂದಕ್ಕೆ ಸೇರಿದವರು. ಆಗಿನ ಸಾಮಾಜಿಕ ಪರಿಸ್ಥಿತಿಯಲ್ಲಿ, ವ್ಯಕ್ತಿ ಜನಿಸಿದ ಜಾತಿಯ ನೆಲೆಯೇ; ಆತನ ವ್ಯಕ್ತಿತ್ವ ಮತ್ತು ಪ್ರತಿಭೆಯನ್ನು ಸೂಚಿಸುವ ಪ್ರಮುಖ ಅಂಶವಾಗಿತ್ತು. ಈ ವಿಚಾರ ಕನಕದಾಸರ ಬರಹಗಳಲ್ಲಷ್ಟೇ ಅಲ್ಲ. ಪುರಂದರದಾಸರ ಕೀರ್ತನೆಗಳಲ್ಲೂ ಪ್ರತಿಪಲಿಸುತ್ತದೆ.

ಆದ್ದರಿಂದ ಕನಕದಾಸರನ್ನು, ಮೂಲ ಶೂದ್ರ ವರ್ಗದವರೆಂದೂ, ಕುರಿಗಾಹಿ ಸಂಪ್ರದಾಯದಿಂದ ಬಂದವರೆಂದೂ ಕಾಣಲಾಗುತ್ತಿತ್ತು. ಅಲ್ಲದೆ ತಮಗೆ ಮತ್ತು ತಮ್ಮ ಸಮುದಾಯಕ್ಕೆ ಸಮಾಜದಲ್ಲಿ ಪ್ರಮುಖ ಸ್ಥಾನ ಇದ್ದರೂ ಕೂಡ ರಾಜ್ಯಾಡಳಿತದ ಊಳಿಗಮಾನ್ಯ* ಪದ್ಧತಿಯ ಶ್ರೇಣೀಕೃತ ಸಮಾಜದಲ್ಲಿ; ಪಶುಪಾಲಕ ವೃತ್ತಿಯಿಂದ ಕವಲೊಡೆದ ಅಂದಿನ ತಳ ವರ್ಗಗಳು ಯಾವ ಸ್ಥಾನಮಾನವನ್ನು ಹೊಂದಿರಲಿಲ್ಲ ಎಂಬ ತಾರತಮ್ಯದ ನೋವು ಕನಕದಾಸರನ್ನು ಕಾಡುತ್ತಲೂ ಇದ್ದಿತು. ಇದಕ್ಕೆ ಕೃಷ್ಣದೇವರಾಯನ ಕಾಲದಲ್ಲಿ ಬೆಳೆಯತೊಡಗಿದ ವೈಷ್ಣವ ಧರ್ಮದ ಪ್ರಭಾವವೂ ಕಾರಣವಾಗಿರಬಹುದು.

ಈ ಕಾರಣಕ್ಕಾಗಿ ಮೋಹನ ತರಂಗಿಣಿಯಲ್ಲಿ ಬರುವ ಬಾಣಾಸುರ ಒಬ್ಬ ಅಸುರ. ಆತನ ಶಕ್ತಿ, ಶೌರ್ಯ ಎಷ್ಟೇ ಇದ್ದರೂ ಆತ ಮೂರು ಲೋಕವನ್ನು ಆಳುವ ಚಿತ್ರಣವನ್ನು ಕನಕದಾಸರೂ ಕಲ್ಪನೆಯಲ್ಲೂ ತರುವುದಿಲ್ಲ. ಆತ ತನ್ನ ಮರಣ ಮುಖೇನ ಕೈಲಾಸ ಸೇರುವ ಕನಸು ಕಾಣುವನಷ್ಟೇ ಹೊರತು ಕೈಲಾಸಾಧಿಪತಿಯಾಗುವ ಕನಸನ್ನಲ್ಲ. ಅಷ್ಟೇ ಅಲ್ಲ, ಬಾಣಾಸುರನ ಶೌರ್ಯಕ್ಕೆ ಸಮನಾದ ಇನ್ನೊಬ್ಬ ಅಸುರನನ್ನು ಸೃಷ್ಟಿ ಮಾಡಲು ಕೂಡ ಕನಕದಾಸರು ಅಸಮರ್ಥರು. ಅಸುರರನ್ನು ಮಣಿಸಲು ದೇವತೆಗಳೇ ಬೇಕು. ಅದು ದೈವತ್ವವನ್ನು ಹೊಂದಿದ ಸುರಲೋಕದವರಿಂದ ಮಾತ್ರ ಸಾಧ್ಯ. ಸುರರಿಂದ ಹತರಾಗುವುದು

---

* ಭೂ ಒಡೆತನವಿರದ ಕೇವಲ ಕುರಿಮಂದೆಯ ಕಸುಬು ನಿರ್ವಹಿಸುವ ಕುರುಬ ವರ್ಗಕ್ಕೆ ಊಳಿಗಮಾನ್ಯ ಪದ್ಧತಿ ತನ್ನ ಶೇಣೀಕೃತ ವ್ಯವಸ್ಥೆಯಲ್ಲಿ ಯಾವುದೇ ಪ್ರಮುಖ ಸ್ಥಾನ ನೀಡಿರಲಿಲ್ಲ.

ಕೂಡ ಇಲ್ಲಿ ಅಸುರರ ಭಾಗ್ಯವೇ ಆಗಿದೆ. ಈ ರೀತಿಯ ಮನಸ್ಥಿತಿಯನ್ನು ತಳ ಸಮುದಾಯದವರಲ್ಲಿ ಹುಟ್ಟುಹಾಕಲಾಗಿತ್ತು. ಹೀಗೆ ವರ್ಗ ವ್ಯವಸ್ಥೆಯ, ಶ್ರೇಣೀಕೃತ ಪ್ರಭಾವ ಶೂದ್ರವರ್ಗದ ಜನಸಾಮಾನ್ಯರನ್ನು ಹೇಗೆ ಪ್ರಭಾವಿಸಿತ್ತು ಎಂಬುದು ಕನಕದಾಸರ ಈ ರಚನೆಯಿಂದ ತಿಳಿದು ಬರುತ್ತದೆ.

ಪಶುಪಾಲನಾ ವ್ಯವಸ್ಥೆಯ ಬಹು ಮುಖ್ಯ ಲಕ್ಷಣವಾದ ಪ್ರತಿ ಗುಂಪು ಅಥವಾ ಸಮುದಾಯದಲ್ಲಿನ ನಾಯಕನ ಪರಿಕಲ್ಪನೆ ಹಾಗೂ ಕುಟುಂಬದ ಸಂಸ್ಕೃತಿಯನ್ನು ಕನಕದಾಸರ 'ಮೋಹನತರಂಗಿಣಿ'ಯಲ್ಲಿ ಗುರುತಿಸಬಹುದು. ಈ ಹಿನ್ನೆಲೆಯಿಂದಾಗಿ ಕಾವ್ಯದ ೪೨ ಸಂಧಿಗಳಲ್ಲಿಯೂ ಧೀರೋದಾತ್ತನೂ, ಸಮಸ್ತ ಆದರ್ಶ ಗುಣಗಳಿಂದ ಕೂಡಿದವನೂ, ಮಹಾನ್ವಿತನೂ ಆದ ಶ್ರೀ ಕೃಷ್ಣ ಇಲ್ಲಿನ ನಾಯಕನಾಗಿದ್ದಾನೆ. ಈ ನಾಯಕನು ತನ್ನ ಸಮುದಾಯಕ್ಕೆ ಎದುರಾಗುವ ಕಷ್ಟಗಳನ್ನು ಎದುರಿಸಲು ಪೂರ್ಣ ಜೀವನವನ್ನೇ ಮುಡುಪಾಗಿ ಇರಿಸುತ್ತಾನೆ. ಕಾವ್ಯದಲ್ಲಿ ಬರುವ ಕಾಮದಹನ, ಶಂಬಾಸುರನ ವಧೆ, ಬಾಣಾಸುರನ ಸಂಹಾರದಂತ ಘಟನೆಗಳನ್ನು, ನಾಯಕನಾದ ಶ್ರೀಕೃಷ್ಣನ ಪಾತ್ರದ ಮೂಲಕವೇ ಕನಕದಾಸರು ನಿರೂಪಿಸಿದ್ದಾರೆ.

ಹಾಗೆಯೇ ಕುಟುಂಬ ಪರಿಕಲ್ಪನೆಯು ಕೃಷ್ಣ–ರುಕ್ಮಿಣಿ, ರತಿ–ಪ್ರದ್ಯುಮ್ನ, ಉಷೆ–ಅನಿರುದ್ಧ ಈ ಮೂರು ಸಂಸಾರಗಳ ಚಿತ್ರಣ ಕಾವ್ಯದಲ್ಲಿ ಚಿತ್ರಿತವಾಗಿವೆ. ಇಲ್ಲಿನ ಕುಟುಂಬಗಳಲ್ಲಿ ಕಾಣುವ ಸಹಜ ಬಯಕೆಯಾದ ರುಕ್ಮಣಿಯ ಪುತ್ರವಾಂಛೆಯ ಪ್ರಸಂಗ ಪರಂಪರೆಯಿಂದ ಬಂದಿರುವ ಸಂಸ್ಕೃತಿಯನ್ನು ನೆನಪಿಸುತ್ತದೆ. ಒಂದು ದಿನ ತಾಯಿ ಪಕ್ಷಿಯೊಂದು ತನ್ನ ಮರಿಗಳಿಗೆ ಗುಟುಕನ್ನು ನೀಡುವ ದೃಶ್ಯವನ್ನು ರುಕ್ಮಿಣಿಯು ನೋಡಲಾಗಿ, ಆಗ ಅವಳಲ್ಲಿ ಮಕ್ಕಳ ಬಗೆಗಿನ ಆಸೆ ಮೂಡುತ್ತದೆ.

ಶಿಶು ವಾತ್ಸಲ್ಯಮಿನ್ನೇಂತುಂಟೊ ಬಹುಮುಗ್ಧ  
ಪಶುಪಕ್ಷಿಗಳಿಗಿನಿತಾಯ್ತು  
ವಸುದೇವ ವಂಶಾಬ್ಧಿಸಂತಾನ ಶೋ  
ಭಿಸುವುದು ಪುಣ್ಯಾಧಿಕರಿಗೆ [೨೬]

ಹೀಗೆಂದು ಭಾವಿಸಿದ ರುಕ್ಮಿಣಿ ಶ್ರೀ ಕೃಷ್ಣನ್ನು ಪರಿಪರಿಯಾಗಿ ಪ್ರಾರ್ಥಿಸುತ್ತಾಳೆ.

ನಾ ಪುತ್ರಸ್ಯ ಲೋಕೋಸ್ತಿಯೆಂದೆಂಬ ಶಾ  
ಸ್ತ್ರೋಪದೇಶವ ಕೇಳ್ದೆ ಜೀಯಾ  
ನೀ ಪಾಲಿಸಬೇಕು ನನಗೋರ್ವ ಕಂದರ್ಪ  
ರೂಪಾಂತ ವರಕುಮಾರನ॥

ಇದಕ್ಕೆ ಕೃಷ್ಣನ ಪ್ರತಿಕ್ರಿಯೆ ಇದು.

ನಕ್ಕನು ಕೃಷ್ಣ ನಲ್ಲೆಯ ಮಾತ ಕೇಳ್ದು ನೀ
ಮಕ್ಕಳ ಪಡೆದ ಮಾತ್ರದಲಿ
ಕಕ್ಕಸ ಮೊಲೆ ಜರೆದಪುದೆಂದು ಕಟಕಿಯ
ನೊಕ್ಕನುಣಿಸಿದನು ವಲ್ಲಭೆಯ॥

ಎಂಬ ಗಂಡಹೆಂಡಿರಿಬ್ಬರ ಕುಟುಂಬದಲ್ಲಿನ ಸಹಜ ಸರಸ ಸಲ್ಲಾಪದ ಪ್ರತಿಕ್ರಿಯೆಗಳು ಇಲ್ಲಿ ಮೂಡಿ ಬಂದಿವೆ. ಬಹುಮುಖ್ಯವಾಗಿ ಪಶುಪಾಲನಾ ಪರಂಪರೆಯ ಮೂಲ ಉದ್ದೇಶವಾದ ಪಾಲನಾ ಸಂಸ್ಕೃತಿ' ಕನಕನ ಮೇಲೆ ಪ್ರಭಾವ ಬೀರಿದೆ. ತಾಯಿ ಹಕ್ಕಿಯೊಂದು ತನ್ನ ಮರಿಗಳಿಗೆ, ಗುಟುಕನ್ನು ತಂದು ನೀಡುತ್ತಿರುವುದು, ಇದನ್ನು ಕಂಡ ರುಕ್ಮಣಿಯಲ್ಲಿ ತಾಯಿಯಾಗುವ ಬಯಕೆ ಮೂಡುವುದು, ಪಾಲನೆಯ ಬಹು ಮುಖ್ಯ ಕಾಳಜಿಯಂತೆ ಕಂಡುಬರುತ್ತದೆ. ಹಾಗೂ ಶ್ರೀಕೃಷ್ಣನ ಕುಟುಂಬ, ಬಾಣಾಸುರನ ಕುಟುಂಬ, ಶಂಬಾಸುರನ ಕುಟುಂಬ. ಶಿವನ ಕುಟುಂಬ, ಅನಿರುದ್ಧನ ಕುಟುಂಬದ ಚಿತ್ರಣವನ್ನು ಕೊಡುತ್ತಲೇ, ಉಷೆಗಾಗಿ ಅನಿರುದ್ಧನನ್ನು ಚಿತ್ರಲೇಖೆಯು ಕರೆತರುವಾಗ 'ಉನ್ನತ ಗಗನ ವೀದಿಯಲಿ ಮಾತೃಕೆ ಕೊಂಡು ಬೆನ್ನೊಳು ಶಿಶುವ ತರ್ಪಂತೆ' ಎಂದು ಹೇಳುವ ಮೂಲಕ ಕವಿ ಕನಕದಾಸರು ಪಾಲನೆಯ ತಮ್ಮ ಮನೋಧರ್ಮವನ್ನು ನಿರೂಪಿಸುತ್ತಾರೆ. ರತಿಯು ಶಂಬಾಸುರನ ಅರಮನೆಯಲ್ಲಿ ಅಡಿಗೆಯವಳಾಗಿದ್ದಾಗ ಮೀನುಗಾರರು ಶಂಬಾಸುರನಿಗೆ ಮೀನೊಂದನ್ನು ತಂದುಕೊಡುತ್ತಾರೆ. ಇದರಿಂದಾಗಿ ಅಂದಿನ ವಿಜಯನಗರದಲ್ಲಿ ಮೀನುಗಾರಿಕೆಯು ಪ್ರಮುಖ ಕಸುಬಾಗಿತ್ತೆಂದು ತಿಳಿಯುತ್ತದೆ. ಈ ಮೀನುಗಾರ ಕುಲದವರು ಪಶುಪಾಲಕ ವೃತ್ತಿಯಿಂದಲೇ ಕವಲೊಡೆದವರೆಂಬುದನ್ನು ನಾವು ಮರೆಯಬಾರದು. ಕನಕದಾಸರೂ ಸಹ ಮೀನುಗಾರರನ್ನು ಹತ್ತಿರದಿಂದ ಬಲ್ಲವರಾಗಿದ್ದರೆಂಬುದನ್ನು ಈ ಸನ್ನಿವೇಶ ತಿಳಿಸುತ್ತದೆ.

ಹೀಗೆ ತಂದುಕೊಟ್ಟ ಮೀನನ್ನು ಶಂಬಾಸುರನು ಅಡಿಗೆ ಮಾಡಲು ರತಿದೇವಿಯಲ್ಲಿಗೆ ಕಳುಹಿಸಿಕೊಡುತ್ತಾನೆ. ಆ ಹೆಣ್ಣು ಮೀನಿನ ಹೊಟ್ಟೆಯಲ್ಲಿ ಸಿಕ್ಕ ಮಗುವನ್ನು ರತಿದೇವಿ ಸಲಹಿದ್ದು, ಜನಿಸಿದ ಮಗು ಪ್ರದ್ಯುಮ್ನನನ್ನು ಶಂಬರನು ಕದ್ದೊಯ್ದಾಗ 'ಮುಮ್ಮನೆ ಬಾಣ ತಾಗಿದ ಹುಲ್ಲೆಯಂತೆ' ತಾಯಿ ರುಕ್ಮಣಿ, ಮಗನ ಅಗಲಿಕೆಯಿಂದ ಪಡುವ ದುಃಖ ಹೃದಯ ವಿದ್ರಾವಕವಾಗಿದೆ.

ಹಾಲಿಗೆ ಹಂಬಲಿಸುವವನಲ್ಲ ಬಿಡದಂಬೆ
ಗಾಲಿಕ್ಕೆ ತೊಳಲುವನಲ್ಲ

ಕಾಲು ಬಲಿದು ದಡ್ಡಡಿಯಿಡುವವನಲ್ಲ
ಬಾಲನೆಲ್ಲಿಗೆ ಹೋದನವ್ವ॥

ಎಂದು ಹಲುಬುವಲ್ಲಿ ತಾಯಿ ಮಮತೆ, ವಾತ್ಸಲ್ಯ, ಭಯ, ದುಃಖಗಳು ಸಹಜವಾಗಿ ಮೂಡಿಬಂದು ಸಾಂಗತ್ಯದ ಛಂದಸ್ಸಿನಲ್ಲೂ ಕರುಣಾರಸ ಉಕ್ಕಿಬರುವಂತೆ ಮಾಡಿರುವುದು, ಕನಕನಲ್ಲಿದ್ದ ಈ ನೆಲದ ಮೂಲ ಗುಣದ ಪ್ರಭಾವವೇ ಎಂದು ತಿಳಿಯಬಹುದು.

ಅಷ್ಟೇ ಏಕೆ, ಇಡೀ ಮೋಹನ ತರಂಗಿಣಿ ಕಾವ್ಯವನ್ನು ಕುಟುಂಬ ಪರಿಕಲ್ಪನೆಯ ಹಿನ್ನೆಲೆಯೊಂದಿಗೆ ಪ್ರತಿ ಸಂಧಿಯ ಆರಂಭದಲ್ಲಿ ಬರುವ ಸತಿ-ಪತಿಗಳ ಸರಸ ಸಂಭಾಷಣೆ, ಕೃತಿಗೆ ಹೊಸದೊಂದು ಸೊಗಸನ್ನು ತಂದುಕೊಟ್ಟಿದೆ. ಕನಕ, ವಧೂಟಿಗೆ ಕತೆಯನ್ನು ಅತಿ ಮೋಹಕವಾಗಿ ಹೇಳುತ್ತಾನೆ.

ಪತಿ: ಕೃತಿವೇಳ್ದವ ಕನಕದಾಸೋತ್ತಮ ಕೇಳ್ದವ
ಳ್ಸತಿ ಸುಜ್ಞಾನ ವಧೂಟಿ
ಕೃತಿಗೆ ಕರ್ತನು ಕಾಗಿನೆಲೆಯಾದಿ ಕೇಶವ
ಕೃತಿಯ ಕೇಳ್ದರೆ ಪುಣ್ಯವಹುದು॥[೨೭]

ಸತಿ: ವಾಣಿಯಧವನೆಂಬ ವ್ಯವಹಾರಿ ಪಟ್ಟಿಯ
ಗೋಣಿಯೊಳ್ತುಂಬಿದ ರತ್ನ
ಒಣಿಯೊಳ್ಚಲ್ಲಿದಂತಿದೆ ನಿನ್ನ ಕೃತಿಯೆಂಬ
ಮಾಣಿಕ ಮನ್ಮನೋನಾಥ॥

ಪತಿ: ಬಡನಡುವಿನ ಚೆನ್ನೆ ಭಾಮಿನಿಯರ ರನ್ನೆ
ಕೊಡಮೊಲೆವೆಣ್ಣೆ ಪೂಗಣ್ಣೆ
ಸಡಗರದಿಂದ ನಿನ್ನ ಕರ್ಣಕೆ ಕಡುರುಚಿ
ವಡಿಸುವೆ ಪೇಳೀ ಮೆಲ್ಲತೆಯ॥[೨೮]

ಹೀಗೆ ಕನಕನು ತನ್ನ ಸತಿಯನ್ನು ಕಡುಜಾಣ ವೆಣ್ಣುಗಳಧಿದೇವತೆ, ಕೆಳದಿ, ಚೆನ್ನೆ, ರನ್ನೆ, ಲಲಿತಾಂಗಿ, ಲತಾಂಗಿ, ಮದ್ವಲ್ಲಭೆ ಎಂದು ಮುಂತಾಗಿ ವರ್ಣಿಸುತ್ತಾ ಕಾವ್ಯವನ್ನು ರಚಿಸಿರುವುದು ಕುಟುಂಬದೊಳಗಿನ ಸರಸ ಸಲ್ಲಾಪದ ಪರಂಪರೆಯ ಸಂಬಂಧದಂತೆ ಕಾಣುತ್ತದೆ.

ಕಾವ್ಯದಲ್ಲಿ ಬರುವ ಮನ್ಮಥನ ದಂಡಯಾತ್ರೆ, ರತಿಯ ಪ್ರಲಾಪ, ಬಾಣಾಸುರನ ಶಿವಪೂಜೆ, ಉಷೆಯ ಸ್ವಪ್ನ, ಅನಿರುದ್ಧನ ಜನನ ಮತ್ತು ಬಾಣಾಸುರ ಅನಿರುದ್ಧರ ಜಗಳ, ಹರಿಹರರ ಕಾಳಗ, ಮಾರನ ಜನನ, ಮುಂತಾದ ಸಂಧಿಗಳಲ್ಲಿ ಕುಟುಂಬ ಕಲ್ಪನೆಯ ಯಜಮಾನಿಕೆ ಸಂಸ್ಕೃತಿಯನ್ನು ತಂದಿರುವುದು ಕೂಡ ಕನಕದಾಸರು ಪಶುಪಾಲನೆಯ ವಿವಿಧ ಸ್ತರದ ಅನುಭವವನ್ನು ಬಹು ಹತ್ತಿರದಿಂದ

ಪಡೆದಿದ್ದರೆಂಬುದಕ್ಕೆ ಸಾಕ್ಷಿಯಾಗಿ ಬರುತ್ತದೆ. ಕುಟುಂಬದೊಳಗಣ ಯಜಮಾನಿಕೆ ಪಶುಪಾಲನಾ ಪರಂಪರೆಯಿಂದಲೇ ಬಂದ ಈ ನೆಲದ ಮೂಲ ಗುಣ ಎಂಬುದನ್ನು ನಾವಿಲ್ಲಿ ಮರೆಯುವಂತಿಲ್ಲ.

ಮಾನವನ ವಿಕಾಸದಲ್ಲಿ ಬೇಟೆಗಾರಿಕೆ ಮೊದಲ ಉದ್ಯೋಗವಾಗಿದ್ದು, ಕನಕದಾಸರು ಸ್ವತಹ ಒಂದು ಪಾಳೆಪಟ್ಟಿನ ನಾಯಕನಾದ ಮೇಲೆ, ಬೇಟೆಯ ಕಾಯಕಕ್ಕೂ ಹೋಗಿಬರುತ್ತಿದ್ದನು. ಬೇಟೆಯಾಡುವುದನ್ನು ತನ್ನ ತಂದೆಯಿಂದಲೂ ಕಲಿತಿದ್ದ ಕನಕನು ಬೇಟೆಯ ವರ್ಣನೆಯನ್ನು ಬಹುಮಟ್ಟಿಗೆ ಸಹಜಾನುಭವದ ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ ತರುತ್ತಾನೆ. ಅನಿರುದ್ಧನ ಬೇಟೆಯ ವರ್ಣನೆಯನ್ನೊಳಗೊಂಡಿರುವ ಈ ಚಿತ್ರವನ್ನು ನೋಡಬಹುದು.

ತಡೆಯದೆ ಮಗಳೊರ್ವ ಶಾರ್ದೂಲವನೆಚ್ಚೊ
ಡೊಡೆ ಹಾಯುತುರ್ವಿ ಚಂದನವ
ತಡೆಗಡಿಯಲು ಸುತ್ತಿಕೊಂಡಿರ್ದ ನಾಗರ
ಹೆಡೆವಣಿ ಸುರಿದುವೇನೆಂಬೆ॥[೨೯]

ಬೇಡರೆಲ್ಲಾ ದಿಕ್ಕಾಪಾಲಾಗಿ ಓಡಿಹೋಗುವಂಥ ಸಂದರ್ಭದ ಚಿತ್ರಣವೊಂದು ಹೀಗಿದೆ.

ಸೊಂಡಿಲೊಳ್ ಕೊನೆವೆತ್ತ ಮದ ಹಸ್ತಿಗಳ ಕಚ್ಚಿ
ಕೊಂಡಿರ್ದ ಕೇಸರಿಗಳನು
ತುಂಡದೊಳೆರಡು ಕಾಲ್ಗೊಳೆರಡಾಂತ ಗಂಡು ಭೇ
ರುಂಡನ ಮುರಿಯಲಿಕ್ಕಿದನು॥

ಬಿದ್ದುದು ವೃಕ್ಷ ವೃಕ್ಷದ ಮೇಲೆ ಮದಹಸ್ತಿ
ಬಿದ್ದುದು ಕೇಸರಿಯೊಡನೆ
ಬಿದ್ದುದು ವಿಹಗೇಶ ಬೀಳುವ ನೆಲದೆ ನಿಂ
ದಿರ್ದ ಕಿರಾತರೋಡಿದರು॥[೩೦]

ಸೊಂಡಿಲಲ್ಲಿ ರೆಂಬೆಗಳನ್ನು ಹೊತ್ತುಕೊಂಡಿದ್ದ ಮದಗಜಗಳನ್ನು, ಕಚ್ಚಿಕೊಂಡಿದ್ದ ಕೇಸರಿಗಳನ್ನು, ತನ್ನ ಎರಡೂ ಬಾಯಿ ಮತ್ತು ಕಾಲುಗಳಲ್ಲಿ ಹಿಡಿದುಕೊಂಡಿದ್ದ ಗಂಡಭೇರುಂಡವನ್ನು ಅನಿರುದ್ಧನು ಕೊಂದಾಗ ರೆಂಬೆಗಳು ಆನೆಗಳ ಮೇಲೆ, ಆನೆಗಳು ಕೇಸರಿಗಳ ಮೇಲೆ, ಆ ಕೇಸರಿಗಳು ಗಂಡಭೇರುಂಡನ ಮೇಲೆ ಬಿದ್ದವಂತೆ. ಇದನ್ನು ನೋಡಿದ ಬೇಡರು ಮತ್ತು ಬೇಡತಿಯರೆಲ್ಲಾ ದಿಕ್ಕಾಪಾಲಾಗಿ ಓಡಿದರು ಎಂಬ ವರ್ಣನೆಯು ಕನಕದಾಸರು ಬೇಟೆಗಾರಿಕೆಯಲ್ಲಿ ಪಳಗಿದ್ದರೆಂಬುದನ್ನು

ತಿಳಿಸುತ್ತದೆ.

ಬೇಟೆಯ ಶ್ರಮದಿಂದ ಬಳಲಿದ್ದ ಬೇಡರು ನೀರಿನ ತಾಣವಾಗಿದ್ದ ಬನವನ್ನು ಕಂಡು ತಮ್ಮ ದಾಹವನ್ನು ತಣಿಸಿಕೊಂಡ ಬಗೆಯನ್ನು ತುಂಬಾ ಸಹಜವಾಗಿಯೇ ಕಂಡಿದ್ದಾರೆ.

ತೊಡೆಯೆರ್ದೆ ಕೊರಲುದ್ದ ಪೊಕ್ಕು ಸಲಿಲವ
ಉಡೆಯಲ್ಲಿ ಬೆದಕಿ ನೀರ್ಗುಡಿದು
ಪೊಡವಿಗೆ ಪೊರಮಟ್ಟು ಕಳಿವಣ್ಗಳ
ತಿನ್ನ ತೊಡಗಿದರೇನ ಹೇಳುವೆನು [೩೧]

ಎಂಬುದಾಗಿ ವರ್ಣಿಸಿರುವ ಕನಕದಾಸರಿಗೆ ಬೇಟೆಯ ಪೂರ್ಣವಾದ ಅನುಭವವಿದ್ದು, ಅವರು ತಮ್ಮ ತಂದೆಯ ಜೊತೆಯಲ್ಲಿ ಬೇಟೆಯಾಡಲು ಹೋಗುತ್ತಿದ್ದರು ಹಾಗೂ ತಾನೂ ಢಣಾಯಕನಾದ ಮೇಲೆ ಬೇಟೆಯಾಡುವುದನ್ನು ಮುಂದುವರೆಸಿಕೊಂಡು ಬಂದರು ಎಂಬುದನ್ನು ತಿಳಿಯಲು ಪೂರಕವಾಗಿದೆ. ಮೋಹನತರಂಗಿಣಿ ಕಾವ್ಯವು ಇಂತಹ ಬೇಟೆಗಾರಿಕೆಯ ಅನುಭವಗಳಿಂದ ಎಣೆದುಕೊಂಡಿದೆ. ಪಶುಪಾಲನೆಯ ಮೂಲ ಬೇಟೆಗಾರಿಕೆ ಎನ್ನವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು.

ಪಶುಪಾಲಕರೆಂದರೆ ಹಾಲುಮತಸ್ಥರು. ಹಾಲು ಶುದ್ಧವಾದುದು. ಹಾಲುಮತಸ್ಥರು ಕೂಡ ಹಾಗೆಯೇ ಪರಿಶುದ್ಧವಾದವರು. ಆದ್ದರಿಂದ ಕನಕದಾಸರು ತಮ್ಮ ಕೃತಿಯನ್ನು ಪಾಲ್ಗಡಲಿಗೆ ಹೋಲಿಸುತ್ತಾರೆ. ಹರಿ, ಕ್ಷೀರಸಾಗರದ ಒಡೆಯನಲ್ಲವೆ. ಇಂತಹ ವರ್ಣನೆಗಳು ಅಂದಿನ ಸಮಾಜದಲ್ಲಿದ್ದ ಹೈನುಗಾರಿಕೆಯ ಪ್ರಭಾವದಿಂದಲೂ ಮೂಡಿಬಂದಿರಬಹುದು. ಈ ಮೋಹನತರಂಗಿಣಿ ರಸಪೂರಿತವಾದ ಸುಪ್ರಬಂಧವೆಂದೂ ಹರಿಕೃಪೆಯಿಂದ ರಚಿಸಿರುವುದಾಗಿಯೂ ನಿವೇದಿಸಿಕೊಂಡಿದ್ದಾರೆ.

ಸಂಧಿ ಎರಡರ ಸೌರಾಷ್ಟ್ರದ ವರ್ಣನೆಯಲ್ಲಿ ಬರುವ ದೇಶಗಳಾದ ಮಾಳವ, ಮಗಧ, ಕಾಶ್ಮೀರ, ಗುಜ್ಜರ, ಗೌಳ, ಚೋಳ, ಕೋಸಲದೇಶ, ಕನ್ನಡ, ವಂಗಚೌಟ, ಹೊಯ್ಸಳ, ಮಲೆಯಾಳ ಇವು ಹಿಂದಿನ ಪಶುಪಾಲನೆಯ ಪ್ರಮುಖ ನೆಲೆಗಳಾಗಿದ್ದವು. ಕನಕದಾಸರ ಕಾಲಕ್ಕೆ ಈ ಪ್ರದೇಶಗಳು ರಾಜಕೀಯ ಮತ್ತು ಧರ್ಮದ ಕಾರಣದಿಂದ ಜನಸಾಮಾನ್ಯರ ಬಾಯಲ್ಲಿ ಪ್ರಸ್ತುತಗೊಳ್ಳುತ್ತಿದ್ದವು. ಹಾಗಾಗಿ ಪಶುಪಾಲಕ ವೃತ್ತಿಯೇ ಪ್ರಧಾನವಾಗಿ ಮುಂದುವರೆಯುತ್ತಿದ್ದ ಆ ಕಾಲದಲ್ಲಿ ಪಶುಪಾಲಕರ ಈ ಪ್ರದೇಶಗಳು, ಸೌರಾಷ್ಟ್ರದ ಸಂಧಿಯಲ್ಲಿ ದಿಗಂತಕ್ಕೆ ಪಸರಿಸಿ ಮೆರೆಯುತ್ತಿದ್ದಂತೆ ಕಾಣುತ್ತದೆ. ಹಾಗಾಗಿಯೇ ಈ ಸ್ಥಳಗಳನ್ನು ಕನಕದಾಸರು ಕೃತಿಯಲ್ಲಿ ತಂದಿದ್ದಾರೆ.

ಪಶುಪಾಲನೆ ಮತ್ತು ಕೃಷಿಯ ಚಟುವಟಿಕೆಗಳನ್ನು ಬಹು ಹತ್ತಿರದಿಂದ ಬಲ್ಲ ಕನಕದಾಸರು ಹರಿಯುವ ನದಿ, ತುಂಬಿದ ಕೆರೆ-ಕಟ್ಟೆಗಳು. ರಂಜನೀಯವಾಗಿ ಹರಿಯುವ ಕಾಲುವೆಗಳ ಚಿತ್ರಣವನ್ನು ಕೊಡುತ್ತಾರೆ.

ಭಾಗೀರಥಿ ದೇವಿಯರು ಸಾವಿರಾರು ಮೊಗ
ವಾಗಿ ಸಾಗರ ಸೇರ್ವಂತೆ
ರಾಗಿಪ ಪರಿಗಾಲುವೆ ಸಾವಿರಾರು ಮೊಗ
ವಾಗಿ ಸದ್ಭನವ ಸಾರಿದವು ॥೨

ತಮ್ಮ ಸುತ್ತಲ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ದಾಳಿಂಬೆ, ಖರ್ಜೂರ, ದ್ರಾಕ್ಷಿ, ಉತ್ತುತ್ತಿ, ಸುವಾಸನೆ ಬೀರುವ ಹೂದೋಟ, ತೆಂಗಿನ ತೋಟಗಳನ್ನು, ಬಾಳೆಯ ಗೊನೆಗಳು, ಹೂಗೊಂಚಲು, ಭತ್ತದ ತೆನೆ, ಗೋಧಿ, ಜೋಳ, ಕಡಲೆ ನಾನಾ ವಿಧದ ಧಾನ್ಯಗಳನ್ನು ಬೆಳೆಯುತ್ತಿದ್ದುದನ್ನು ಕನಕರು ಕಣ್ಣಾರೆ ಕಂಡಿದ್ದರು.

ಪಲಸು, ನೇರಿಲು ಚೂತ, ಪಿಚುಮಂದ ನ್ಯಗ್ರೋಧ
ಚಲಪತ್ರ ಬಿಲ್ವ ಮಲಕ
ಲಲಿತಾಶೋಕ ಪುನ್ನಾಗ ಪಾದರಿ ಸಲೆ ಕೋ
ಮಲ ಸಾಲು ಮರಗಳೊಪ್ಪಿದ್ದವು ॥೩

ಮುಂತಾದ ಸಾಲುಮರಗಳ ಚಿತ್ರಣವನ್ನು ಕನಕದಾಸರು ಕೊಡುವುದನ್ನು ಗಮನಿಸಿದರೆ, ಕನಕರಿಗಿದ್ದ ಕೃಷಿ ಹಿನ್ನೆಲೆಯನ್ನು ಇದರಿಂದ ಅರಿಯಬಹುದಾಗಿದೆ. ದ್ವಾರಾಪುರದ ಸವಿಯೂಟವನ್ನು ಕುರಿತು ಕನಕದಾಸರು,

ಮಲ್ಲಿಗೆಯರಳಂತೆ ಬಿಚ್ಚೋಗರ ಮೊಸ
ರಲ್ಲಿ ಕಲಸಿದುಪ್ಪುಗಾಯಿ
ಗಲ್ಲಿಸಿ ಉಂಡೆಗಟ್ಟಿ ನುಂಗಿದರ್ಪರಿಯರು
ಉಲ್ಲ ಸವಿ ಗಲ್ಲೆ ಸವರುತ।

ರಸರಸಾಯನವ ಚಪ್ಪರಿಸಿ, ನೀರ್ಮಜ್ಜಿಗೆ
ಹಸಗೆಯ್ದಿರಲೀಂಟಿದರು
ಪೊಸ ವಿಘ್ನರಾಜನ ಬಳಗದಂತೆರ್ದ್ದ
ವಶದಿಂದ ದಟ್ಟಡಿಯಿಟ್ಟು।

ಎಂದು ಊಟದ ವಿಚಾರವಾಗಿ ಬಣ್ಣಿಸುವ ಕನಕದಾಸರು, ಹಾಲು ಮೊಸರು ಮಜ್ಜಿಗೆಗಳನ್ನು ಎಚ್ಚರ ತಪ್ಪಿಯೂ, ಹೇಳುವುದನ್ನು ಬಿಡುವುದಿಲ್ಲ. ಕಾರಣ ಅಂದು

ಊಟದಲ್ಲಿ ಮೊಸರು ತುಪ್ಪಗಳದ್ದೇ ಪಾರುಪತ್ಯ. ಎಲ್ಲರ ಮನೆಗಳಲ್ಲಿ ದನ, ಹಸು, ಎಮ್ಮೆಗಳು ಇರುತ್ತಿದ್ದವು. ಪಶುಪಾಲನೆ ಅಂದಿನ ಬದುಕಿನಲ್ಲಿ ವಿಲೀನವಾಗಿತ್ತು. ಆದರೆ ಇತ್ತೀಚೆಗೆ ಯಾಂತ್ರೀಕರಣಗೊಂಡ ಮಾನವ, ಕೃಷಿಯಲ್ಲಿ ತಂತ್ರಜ್ಞಾನವನ್ನು ಹೆಚ್ಚಿಗೆ ಬಳಸಿಕೊಂಡಿರುವುದರಿಂದ ಹಾಗೂ ಕೃಷಿ ಅವಲಂಬಿತರ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಪಶುಪಾಲನಾ ವೃತ್ತಿ ಕಡಿಮೆಯಾಗಲು ಕಾರಣವಾಗಿದೆ.

ರತಿ ಕಾಂತನನ್ನು ಮನೆತುಂಬಿಸಿಕೊಳ್ಳುವಾಗಿನ ಸಂದರ್ಭದಲ್ಲಿ ಶ್ರೀಕೃಷ್ಣನು, ಶಂಬಾಸುರನನ್ನು ಸಂಹರಿಸಿ ಬಂದ  ಮಗನಿಗಾಗಿ ಸಂಭ್ರಮದಲಿ,

> ನೆಗಳ ಸೊಂಡಿಲ ಚಿನ್ನದಣಸಿನ ಪಲ್ಲಕ್ಕಿ
> ಸೊಗಯಿಪ ರತ್ನ ವಿಮಾನ
> ಮಿಗೆ ನವಿಲ್ಕುಂಚ ಕಾಳಾಂಜಿ ಮುಂತಾದ ವ
> ಸ್ತುಗಳನಿತ್ತ ಕೃಷ್ಣ ಮಗನಿಗೆ॥,

ಹಾಗೂ,

> ದಂತಿ, ಘೋಟಕ, ಧೇನು, ಮಹಿಷಿ, ಮತ್ಸಂಗಳ
> ತಿಂತಿಣಿಯನು ಸಾಲ್ಗೊಳಸಿ
> ಇಂತಿವು ಮೊದಲಾದ ಬಳುವಳಿಗಳ ಕೃಷ್ಣ
> ಕಂತುವಿನಿಗಿತ್ತನುತ್ಸವದಿ॥

ಆನೆ, ಕುದುರೆ, ಹಸು, ಎಮ್ಮೆ, ಕರುಗಳ ಸಮೂಹವನ್ನೇ ಬಳುವಳಿಯಾಗಿ ಕೃಷ್ಣ, ಮಗನಿಗೆ ನೀಡಿದನು. ಅಂದು ಕಾಣಿಕೆಗಳಾಗಿ ಅಥವಾ ಬಳುವಳಿಗಳಾಗಿ* ಹಸು ಕರು ಎಮ್ಮೆಗಳನ್ನು ಕೊಡುತ್ತಿದ್ದುದು ಅಂದು ಪಶುಪಾಲನಾ ವೃತ್ತಿ ಜನಜನಿತವಾಗಿದ್ದುದರ ಪ್ರತೀಕವಾಗಿದೆ. ಹಾಗಾಗಿಯೇ ಈ ವೃತ್ತಿ ಕನಕದಾಸರನ್ನು ಬಹುವಾಗಿ ಪ್ರಭಾವಿಸಿದೆ ಎಂಬುದನ್ನು ಇಂತಹ ಸಂದರ್ಭಗಳು ಪ್ರತಿಬಿಂಬಿಸುತ್ತವೆ.

ಅನಿರುದ್ಧನ ಬಾಲ ಭಾಷೆ, ಆತ ಆಟವಾಡುತ್ತಿದ್ದಾಗ ನಕ್ಕುನಲಿಯುವುದು, ರತ್ನಖಚಿತ ಹೊಂದುಡಿಗೆಗಳೊಂದಿಗೆ ಶೋಭಿಸುತ್ತಾ ಸುಪ್ರತಾಪದ ದಾವಾಗ್ನಿಯಂತೆ ಆಕರ್ಷಿತನಾಗಿ ಬೆಳೆಯತೊಡಗಿ ಗಜ ವೈಹಾಳಿಯನ್ನು ಮಾಡುತ್ತಾ ಅಖಿಲ ಭೂ ಭುಜರ ದೇವೇಂದ್ರನೆನ್ನಿಸಿ ಧನುರ್ವಿದ್ಯೆಯನ್ನು ಕಲಿತನು. ಹಾಗೆಯೇ ಚೌಷಷ್ಠಿ

---

* ಬಳುವಳಿ ಕೊಡುವ ವಾಡಿಕೆ ಈಗಲೂ ಬಳಕೆಯಲ್ಲಿದೆ.. ತುಮಕೂರು ಜಿಲ್ಲೆಯ ಕುರುಬ ಜನಾಂಗದವರು ಮಗಳಿಗೆ ಮದುವೆಯ ಬಳುವಳಿಯಾಗಿ ಎಮ್ಮೆ, ಹಸು, ಕರುಗಳಲ್ಲಿ ಯಾವುದಾದರೊಂದನ್ನು ಈಗಲೂ ನೀಡುತ್ತಿದ್ದಾರೆ. ಈ ಪದ್ಧತಿ ಕೆಲ ವರ್ಷಗಳು ಎಲ್ಲಾ ಜನಾಂಗದವರನ್ನೂ ಪ್ರಭಾವಿಸಿದ್ದಿದೆ.

ವಿದ್ಯೆಗಳನ್ನು ಕಲಿತದದ್ದನ್ನು; ಕನಕದಾಸರು 'ಅಧ್ಯಕ್ಷನಾಗಿ ಸಾಧಿಸಿದನು ಚೌಪಷ್ಠಿ ವಿದ್ಯೆಯಲಿ ಪರಿಣತನಾಗಿ ಚೋದ್ಯ ಚೋದ್ಯಂಗಳ ಮಾಳ್ಪ ದ್ವಾರಂಕಿಯ ಮಧ್ಯದೊಳನಿರುದ್ಧ' ಎಂದು ವರ್ಣಿಸುತ್ತಾರೆ.

ಪೆಕ್ಕಳ ದ್ವಿತಯ, ಲಾವುಗೆ ತೋರ ಗವುಜಲ
ಕುಕ್ಕುಟ ತಗರು ಕೋಣಗಳ
ಸೊಕ್ಕಾನೆಗಳ ಕಾದಿಸುತಿರ್ದ ದೊರೆಗಳ
ಮಕ್ಕಳ ಕೂಡೆ ಬೀದಿಯಲಿ" [೩೪]

ಹೀಗೆ ಅನಿರುದ್ಧನು ದೊರೆಮಕ್ಕಳ ಜೊತೆಯಲ್ಲಿ ನಡುಬೀದಿಯಲ್ಲಿ ಲಾವುಗೆ, ಕೋಳಿ, ಟಗರು, ಕೋಣ, ಆನೆ ಹೋರಿಗಳೊಂದಿಗೆ ಕಾದಾಡುತ್ತಿದ್ದನು ಎನ್ನುವಾಗ ಅನಿರುದ್ಧನ ಶಕ್ತಿ ಸಾಮರ್ಥ್ಯದ ಜೊತೆ, ಊರುಗಳ ಕೇರಿಕೇರಿಗಳಲ್ಲಿ, ದನ, ಕರು, ಎಮ್ಮೆ, ಕೋಣ, ಕೋಳಿ, ಟಗರುಗಳ ಸಾಕಾಣಿಕೆಯನ್ನು ಕಾವ್ಯದ ಸಂದರ್ಭದಲ್ಲಿ ಸೃಷ್ಟಿಸಲು ಕನಕದಾಸರಿಗಿದ್ದ, ಪಶುಪಾಲನೆಯ ಅನುಭವದಿಂದ ಮತ್ತು ಇಂತಹ ಸನ್ನಿವೇಶಗಳನ್ನು ಕಣ್ಣಾರೆ ಕಂಡಿದ್ದರಿಂದ ಸಾಧ್ಯವಾಯಿತು ಎನ್ನಬಹುದು.

ಕಾವ್ಯದಲ್ಲಿ ಬರುವಂತೆ, ಕೃಷ್ಣ, ಶಂಬಾಸುರ, ಬಾಣಾಸುರ, ಕುಂಬಾಂಡನ ಸೈನ್ಯದಲ್ಲಿ ಆನೆ, ಒಂಟೆ, ಕುದುರೆಗಳ ಸೈನ್ಯವೂ ಇದ್ದಿತು. ಅದಕ್ಕಾಗಿ ಆನೆಗಳನ್ನು ಪಳಗಿಸುವ ಮಾವುತರ ದಂಡೇ ಸೈನ್ಯದಲ್ಲಿ ಇದ್ದು, ಮದಗಜಗಳ ಹಿಂಡೂ ಸೈನ್ಯದಲ್ಲಿರುತ್ತಿತ್ತು ಎಂಬುದನ್ನು,

ಮದಗಜವಿಂಡು ಬಂದುದ ಕಂಡು ಸ್ಮರಸುತ
ಹದವಿಲ್ಲ ತೆಗೆದು ಜೇವೊಡೆದು
ಸುದತಿ ಶಿರೋಮಣಿ ನೋಡುತಿರೆಂದಲ್ಲಿ
ಗೊದಗಿದನಾರ್ಭಟಿಸುತಲಿ॥

ಬಾಗಿಲ ತಿವಿದು ನೂಂಕುವ ದಂತಿಗೊರಳ ವಿ
ಭಾಗಿಸಿ ಕೂರ್ಗಣೆಯಿಂದ
ತಾಗಿಸಿ ಜೋದರ ತಲೆಯ ನಾಗಸತ್ತ
ಸಾಗಿಸಿದನು ಕೇಳು ಕೆಳದಿ॥ [೩೫]

ಅನಿರುದ್ಧನು ತನ್ನ ಹರಿತವಾದ ಬಾಣಗಳಿಂದ ಆನೆಗಳ ಕೊರಳುಗಳನ್ನು ಸೀಳಿ, ಮಾವುತರ, ಯೋಧರ ತಲೆಗಳನ್ನು ಆಗಸಕ್ಕೆ ಸಾಗಿಸಿದನು ಎನ್ನುವುದರಲ್ಲಿ ಆನೆಗಳ ಸಾಕಾಣಿಕೆಗೆ ಮಾವುತರ ದಂಡೇ ಇರುತಿತ್ತು, ಎಂಬುದನ್ನು ಸೂಚಿಸುತ್ತದೆ. ಈಗಲೂ 'ಬಾಡ'ದಲ್ಲಿರುವ ಕನಕದಾಸರ ಕಾಲದ್ದೆಂದು ಹೇಳುವ ಪಾಳುಬಿದ್ದ

ಅರಮನೆಯ ಹಿಂಬದಿಯಲ್ಲಿ 'ಆನೆಗುಂಡಿ'(ಆನೆಗಳು ನೀರು ಕುಡಿಯಲಿಕ್ಕೆ) ಇರುವುದನ್ನು ಕಾಣಬಹುದು. ಬಾಣಾಸುರನೊಂದಿಗಿನ ಯುದ್ಧದಲ್ಲಿ, ಕೃಷ್ಣ ಗರುಡನನ್ನು ಏರಿದಾಗ ಉಳಿದ ಸೈನಿಕರು ಸಜ್ಜಾದ ಸಂದರ್ಭವನ್ನು ಕವಿ ಕಂಡು,

ರಾಜರು ರಾವುತ ಮಾವುತ ಕಾಲಾಳು ಬಿ
ಲ್ಲೋಜರು ಪೆಟಲಂಬಿನವರು
ತೇಜೋಮಯ ಬಾಣಗಾರರೇರಿದರು ಖಗ
ರಾಜನೆರಂಕೆ ಯಿಕ್ಕೆಲದಿ॥

ಕೊಟ್ಟಿಗೆ ಕಾಮಾಟಿ ಪ್ರಮುಖ ಬೆಳ್ಳೆಲೆಗರು
ಜಟ್ಟಿಗಳು ಗೀತಪಾಠಕರು
ಸೆಟ್ಟಿಗಳು ಬಲು ಚಿನ್ನವರದರುಗ್ಗಡಿಪ
ಕಟ್ಟಿಗೆಕಾರರೇರಿದರು॥ [೩೬]

ಬಲರಾಮ, ಸಾತ್ಯಕಿ ಸೇರಿದಂತೆ ಚಪ್ಪನ್ನ ಕೋಟಿ ಯಾದವರು, ಬಿಲ್ಲೋಜರು, ಪೆಟಲಂಬಿನವರು, (ಬಂದೂಕುಧಾರಿಗಳು) ಬಾಣಗಾರರು, ದನಗಾಹಿಗಳು, ಜಟ್ಟಿಗರು, ಸೆಟ್ಟರು, ಕಟ್ಟಿಗೆಗಾರರು ಮೊದಲಾದವರು ಸಹ ತಮ್ಮ ತಮ್ಮ ವಾಹನಗಳನ್ನೇರಿ ಖಗರಾಜನ ಇಕ್ಕೆಲಗಳಲ್ಲಿ ನಿಂತ ಪಡೆ, ನೋಡುಗರ ಕಣ್ಮನಕ್ಕೆ ಆಶ್ಚರ್ಯವನ್ನುಂಟುಮಾಡುತ್ತಿತ್ತು. ಅಂದು ದನಗಾಹಿಗಳು ಕೂಡ ಸೈನ್ಯದೊಂದಿಗೆ ಯುದ್ಧಕ್ಕೆ ಹೊರಡಬೇಕಿತ್ತು. ಹಾಗೂ ದನಗಾಹಿಗಳನ್ನೊಳಗೊಂಡ ಒಂದು ಯುದ್ಧ ಪಡೆಯು ಇತ್ತೆಂಬುದನ್ನು ಇಲ್ಲಿ ಗಮನಿಸಬಹುದು. ಯುದ್ಧದಲ್ಲಿ ಬರುವ ಧ್ವಜಗಳಿಗೆ ಗಜ, ಮೇಷ, ಮಹಿಷ, ವೃಷಭ, ಸರ್ಪ ಸಂಕೇತಗಳಿರುವುದು ಕೂಡ ಪಶುಪಾಲನೆಯ ಪ್ರಭಾವವನ್ನು ಸೂಚಿಸುತ್ತದೆ.

ಗಜ ಮೇಷ ಮಹಿಷ ಮಾನಸ ನೆಗಳೇರ
ನಿಜ ಧರ್ಮವಾರುವ ವೃಷಭ
ಭುಜಗಾರಿ ವಿಷಪುಚ್ಛ ಮೂಷಕ ಮೊದಲಾದ
ಧ್ವಜ ತತಿ ಮೆರೆದುದೊಗ್ಗಿನಲಿ [೩೭]

ಕಾವ್ಯದಲ್ಲಿನ, ಹರಿ-ಹರರ ಕಾಳಗದ ಸಂದರ್ಭದಲ್ಲಿ, ವಿಘ್ನೇಶ್ವರ ಮತ್ತು ಬಲರಾಮರ ನಡುವಿನ ಯುದ್ಧವನ್ನು ಕವಿ ವರ್ಣಿಸುತ್ತಾ, ವಿಘ್ನೇಶ್ವರನು ಬೀರಿದ ಹೇರಂಬುವನ್ನು ಬಲರಾಮನು ಇಕ್ಕಡಿ ಮಾಡಿದಾಗ ಅದಕ್ಕೆ ಪ್ರತಿಯಾಗಿ ಬಲರಾಮನು,

ಇಕ್ಕಡೆಯಾದ ಕಾರ್ಮುಕವ ನಿವಾರಿಸಿ

ತಕ್ಕೊಂಡು ಭಾರಿಯ ಹಲವ
ಒಕ್ಕಯ್ಯೊಳಾಂತ ಪೇರೊನಕೆಯಿಂದಿಕ್ಕಿದ
ಸೊಕ್ಕಾನೆದಲೆಗನ ಮೇಲೆ॥ [೩೮]

ಎರಡು ತುಂಡಾದ ಬಿಲ್ಲನ್ನು ಬಿಸಾಡಿ ದೊಡ್ಡ ನೇಗಿಲನ್ನು ತೆಗೆದುಕೊಂಡು ಒಂದು ಕೈಯಲ್ಲಿ ಹಿಡಿದ ದೊಡ್ಡ ಒನಕೆಯಿಂದ ಸೊಕ್ಕಾನೆದಲೆಗ(ಗಣಪತಿ)ನಿಗೆ ಇಕ್ಕಿದನು. ಆಗ ವಿಘ್ನೇಶ್ವರನು "ತಾಳಾಂಕನೆ ನೇಗಿಲನ್ನು ಹಿಡಿದು ಭೂಮಿಯನ್ನು ಸೀಳುವ ಕೀಳು ವ್ಯವಸಾಯದವನಾದ ನಿನಗೆ ಈ ಕಾಳಗ ತಕ್ಕುದಲ್ಲ" ಎಂದು ಬೊಬ್ಬಿರಿದನು. ಕೂಡಲೇ ಬಲರಾಮನು ಕೋಪಗೊಂಡು, "ಬಡವಾ ನಾನೊಂದು ನೇಗಿಲಿನಿಂದ ನಿನ್ನನ್ನು ನೆಲಕ್ಕೆ ಬೀಳುವಂತೆ ಹೊಡೆದು ಗದ್ದೆಯನ್ನು ಕಾರ್ಗಲಿಸಿ ಸತ್ಕೀರ್ತಿ ಗಂಧ-ಶಾಲಿ ಭತ್ತವನ್ನು ಬಿತ್ತಿ ಬೆಳೆಯುತ್ತೇನೆ. ನೀನು ಆ ಹೊಲವನ್ನು ನೋಡು." ಎಂದು ವಿಘ್ನೇಶ್ವರನ ಡೊಳ್ಳು ಹೊಟ್ಟೆಗೆ ಕೂರ್ಗೋಲನ್ನು ಗುರಿಯಿಟ್ಟನು.[೩೯]

ಇಲ್ಲಿ ಬರುವ ನೇಗಿಲು, ಒನಕೆ, ಕೂರ್ಗೋಲು, ಗದ್ದೆ, ಭತ್ತ, ಇವೆಲ್ಲಾ ಕೃಷಿ ಸಂಬಂಧದ ಭಾಷೆ ಬಳಕೆಯ ಪದಗಳಾಗಿದ್ದು, ಕನಕದಾಸರ ಕಾಲದಲ್ಲಿ ಪಶುಪಾಲನೆ ಜೊತೆಗೆ ಕೃಷಿಯು ಪ್ರಮುಖ ಉದ್ಯೋಗವಾಗಿತ್ತು. ಅದರ ಸಂಪೂರ್ಣ ಅನುಭವ ಕನಕದಾಸರಿಗಿದ್ದಿತೆಂಬುದನ್ನು ಸಾದರ ಪಡಿಸುತ್ತದೆ.

ಬಾಣಾಸುರ ಮತ್ತು ಕೃಷ್ಣನು, ಕಾಳಗದಲ್ಲಿ ಎದುರಾದಾಗ, ಬಾಣಾಸುರನು, ಪನ್ನಗಧರ ಭೃತ್ಯನಿದಿರ್ಗೊಂಡ ಕ್ಷೀರಾಬ್ಧಿಕನ್ನೆಯ ವರನಾದ ಕೃಷ್ಣನನ್ನು ಕುರಿತು "ಗದ್ದೆಯ ಗೊರವನೊಳು ಕಡಿದಾಡಿ ಮೊಗರುತ್ತಿದ್ದೆಯೊ, ರಣರಂಗದೊಳಗೆ ಬಿದ್ದೆಯ ನನ್ನ ಬಾದೆಗೆ ಏ ಕೃಷ್ಣ," ಕರೆ ನಿನ್ನ ಯಾದವ ಸೈನ್ಯ(ಗೊಲ್ಲರು)ವನ್ನು ಎಂದು ಸವಾಲು ಹಾಕುವುದರ ಮೂಲಕ ಕೃಷ್ಣನನ್ನು ಜರಿಯುತ್ತಾನೆ. ಇಲ್ಲಿ ಗೊರವ ಶಿವನಾಗಿದ್ದಾನೆ. ಶಿವನನ್ನು ಗೆದ್ದ ಮಾತ್ರಕ್ಕೆ ನನ್ನನ್ನು ನೀ ಮಣಿಸಲಾರೆ, ನೀನೊಬ್ಬ ಅಂಜುಬುರುಕ, ಯುದ್ಧಕ್ಕೆ ಅಂಜಿ ರಕ್ಕಸನನ್ನು ನೀರಿನಲ್ಲಿ ಮೀನಾಗಿ ಕೊಂದವನು ಎಂದು ಹೀಯಾಳಿಸುತ್ತಾನೆ.

ಮೂಲದಲ್ಲಿ ಕೃಷ್ಣ(ಪರಿಚಯಿಸಿದವರು ಪಶುಪಾಲಕರೆ) ದನಗಾಹಿಯಾಗಿದ್ದು, ಅವನ ಸೈನ್ಯವೇ ದನ, ಕುರಿಗಳ ಸೈನ್ಯ. ಇನ್ನು ಶಿವನಾದರೋ ಪಶುಪತಿ. ಹೀಗೆ ಹರಿ-ಹರ ಇಬ್ಬರೂ ಪಶುಪಾಲಕರ ಸೃಷ್ಟಿಯ ದೈವಗಳಂತೆ ಕಂಡುಬರುವುದರಿಂದ ಹಾಗೂ ಕನಕನು ಹುಟ್ಟು ಶೈವಕುಲದವನಾಗಿದ್ದು, ಬರುಬರುತ್ತಾ ವಿಷ್ಣು (ಕೃಷ್ಣ) ಆರಾಧಕನಾದದ್ದನ್ನು ಇಲ್ಲಿ ಗುರುತಿಸಬಹುದು. ಇಂತಹ ಪರಂಪರೆಯ ಪ್ರಭಾವದಿಂದ ಕನಕದಾಸರು ಹರಿ-ಹರರ ಐಕ್ಯತೆಯನ್ನು ಕಾವ್ಯದ ಮೂಲಕ ಸಾರಿದ್ದಾರೆ.[೪೦]

ಹೀಗೆ ಮೋಹನತರಂಗಿಣಿ ಕಾವ್ಯದ ಶಿವ-ಕೇಶವರಲ್ಲಿ ಅಭೇದವನ್ನು ಕಲ್ಪಿಸುವುದರ ಮೂಲಕ ಶೈವ-ವೈಷ್ಣವರಲ್ಲಿ ಭೇದವಿಲ್ಲವೆಂಬ ಸಂದೇಶವನ್ನು ಕನಕದಾಸರು ಸಾರಲು ಹೊರಟಂತಿದೆ. ಮಾನವನ ವಿಕಾಸದ ಹಿನ್ನೆಲೆಯ ಅರಿವಿದ್ದ ಕನಕದಾಸರು ಸಮಾನತೆ ಮತ್ತು ಐಕ್ಯತೆಗಾಗಿ ಶಿವ-ಕೇಶವರ ಭೇದವನ್ನು ಮಾಡಿದವನಿಗೆ ದೋಷ ತಪ್ಪದು ಎಂದು ಕವಿ ಶಿವನ ಬಾಯಿಂದಲೇ ನುಡಿಸಿಬಿಟ್ಟಿದ್ದಾನೆ. ಇದು ಕನಕದಾಸರಲ್ಲಿದ್ದ ಪರಂಪರೆಯಿಂದ ಬಂದ ಹೊಂದಾಣಿಕೆಯ ಗುಣವನ್ನು ಈ ಸನ್ನಿವೇಷ ಕಟ್ಟಿಕೊಡುತ್ತದೆ.

ಕೃಷ್ಣ*-ಬಾಣಾಸುರರ ಕಾಳಗದಲ್ಲಿ ಬಾಣಾಸುರ ಕೃಷ್ಣನ ಬಾಣಗಳಿಂದ ತನ್ನ ತೋಳುಗಳನ್ನು ಕಳೆದುಕೊಂಡು ರಕ್ತದ ಮಡುವಿನಲ್ಲಿ ಜರ್ಝರಿತನಾಗಿ ಬಿದ್ದುದನ್ನು ಕಂಡು ಅಲ್ಲಿಗೆ ಬಂದ ಶಿವನು, ಭಕ್ತನನ್ನು ಉಪಚರಿಸುತ್ತಾ,

ಕೇಶವನೆಡೆಗೆನ್ನಡೆ ಗಾವನೊರ್ವನು
ದ್ವೇಷ ಬುದ್ಧಿಯ ಮಾಡಿದರೆ
ದೋಷ ಸಂಭವಿಸುವುದೆಂದು ದೂರ್ಜಟಿ ದೈ
ತ್ಯೇಶಗೆ ತಿಳಿಯ ಹೇಳಿದನು। [೪೧]

ಎಂದು ಮುಕ್ಕಣ್ಣ ಬಾಣಾಸುರನಿಗೆ ಹೇಳುವ ಮೂಲಕ ಜನರಲ್ಲಿದ್ದ ದೈವ ಮತ್ತು ಮತ ವೈಶಮ್ಯಗಳನ್ನು ಕಿತ್ತೆಸೆಯಲು ಪ್ರಯತ್ನಸಿದ್ದಾರೆ. ಈ ಮೂಲಕ ಕಾವ್ಯದಲ್ಲಿ ಕೃಷ್ಣಪಾರಮ್ಯ ಬೆಳೆಸುವ ನೆಪದಲ್ಲಿ ಕನಕದಾಸರು ವೈಷ್ಣವ ಮತದ ಸಂಪ್ರದಾಯಕ್ಕೆ ಮಾರುಹೋದವರಂತೆ ಕಂಡುಬಂದರೂ, ಮೋಹನ ತರಂಗಿಣಿ ಮತೀಯ ಕಾವ್ಯವಲ್ಲ ಎಂಬುದು ಗಮನಾರ್ಹವಾದ ಹಾಗೂ ಸಮಾಧಾನದ ಸಂಗತಿಯಾಗಿದೆ ಇಂತಹ ಸಮಾನತಾವಾದದ ಪರಿಕಲ್ಪನೆ ಕನಕದಾಸರಿಗೆ ಜನಸಾಮಾನ್ಯರ ಬದುಕನ್ನು ಬಹು ಹತ್ತಿರದಿಂದ ಕಂಡಿದ್ದರ ಪರಿಣಾಮದಿಂದ ಬಂದಿದೆ ಎನ್ನಬಹುದು.

ಕಡೆಯದಾಗಿ, ಶ್ರೀಕೃಷ್ಣ-ಕೃಷ್ಣದೇವರಾಯ ಹಾಗೂ ದ್ವಾರಕೆ-ವಿಜಯನಗರಗಳ

---

* ಭಾಗವತ ಪಂಥದಲ್ಲಿ ವೃಷ್ಣಿ(ಕುರುಬ) ವಂಶದ ಪಂಚವೀರರೆಂದು ಪ್ರಸಿದ್ಧರಾದ ಬಲರಾಮ(ಸಂಕರ್ಷಣ), ಕೃಷ್ಣವಾಸುದೇವ, ಪ್ರದ್ಯುಮ್ನ(ಕೃಷ್ಣನಪುತ್ರ), ಅನಿರುದ್ಧ(ಪ್ರದ್ಯುಮ್ನನಮಗ) ಹಾಗೂ ಸಾಂಬ(ಕೃಷ್ಣ-ಜಾಂಬುವತಿಯರ ಮಗ) ಇವರ ಪೂಜೆಯ ಸೂಚನೆಗಳಿದ್ದು ಕ್ರಮೇಣ ಇವರಲ್ಲಿ ಬಲರಾಮ ಮತ್ತು ಕೃಷ್ಣರ ಪೂಜೆ ಪ್ರಾಧಾನ್ಯತೆ ಪಡೆಯಿತೆಂದು ಶಾಸನಗಳಿಂದ ತಿಳಿದುಬರುತ್ತದೆ. ಹಾಗಾಗಿ ಭಾಗವತ ಇತಿಹಾಸದಲ್ಲಿ ಕೃಷ್ಣನನ್ನು ಉಚ್ಛ್ರಾಯಕ್ಕೇರಿಸಿದ ಸೂಚನೆಗಳಿವೆ.(ಆಧಾರ: ಭಾರತೀಯ ಇತಿಹಾಸದ ಶಾಸನ ಆಕರಗಳು ಲೇ.ಡಾ.ಶ್ರೀನಿವಾಸ ಪಾಡಿಗಾರ ಪ್ರ.೨೦೦೪ ಪುಟ.ಸಂ. ೩೬-೩೭)

ಹೋಲಿಕೆಯನ್ನು ಸ್ಥಾಪಿಸುವ ಹವಣಿಕೆ ಮೋಹನತರಂಗಿಣಿ ಕೃತಿಯಲ್ಲಿ ನಡೆದಿದೆ,

ದ್ವಾರಕೆ, ಶ್ರೀಕೃಷ್ಣನ ವಾಸಸ್ಥಾನವಾದರೆ, ವಿಜಯನಗರ ಶ್ರೀಕೃಷ್ಣದೇವರಾಯನ ನೆಲೆ. ಇಲ್ಲಿನ ಸದೃಶೀಕರಣ ವಿಶಿಷ್ಟವಾಗಿದೆ. ಪೌರಾಣಿಕ ವಿಷಯಗಳನ್ನು ಸಮಕಾಲೀನಗೊಳಿಸಿ ಇತಿಹಾಸವನ್ನು ಕಾವ್ಯದಲ್ಲಿ ಅಳವಡಿಸಿದ್ದಾರೆ. ಅಂದರೆ ವಿಜಯನಗರದ ದೊರೆ ಕೃಷ್ಣದೇವರಾಯನನ್ನು ಕಾವ್ಯದ ನಾಯಕನಾದ ಶ್ರೀಕೃಷ್ಣನಿಗೆ ಅಭೇದ್ಯವಾಗಿ ಹೋಲಿಸಿ ಕೃತಿ ರಚಿಸಿದಂತಿದೆ. ಕಾವ್ಯದ ಬಹುಭಾಗದಲ್ಲಿ ಶ್ರೀಕೃಷ್ಣ ಎಂದು ಸಂಬೋಧಿಸಬೇಕಾದಲ್ಲಿ ಕೃಷ್ಣದೇವರಾಯ ಎಂದೇ ಕರೆದಿದ್ದಾರೆ. ಹಾಗೆಯೇ ದ್ವಾರಕಾಪುರದ ವರ್ಣನೆ ವಿಜಯನಗರದ ವರ್ಣನೆಯಂತೆ ಬಂದು, ಎರಡೂ ಒಂದೇ ಎಂಬ ಭಾವನೆ ಸಹಜವಾಗಿ ಕಾವ್ಯದಲ್ಲಿ ಮೂಡಿದೆ.

ಇದರ ಜೊತೆಗೆ ಕೃಷ್ಣನ್ನು ಕುರಿತಂತೆ ಕನ್ನಡದಲ್ಲಿ ಅತಿ ದೊಡ್ಡ ಕಾವ್ಯವನ್ನು ನಿರ್ಮಾಣ ಮಾಡಿ ಹರಿದಾಸ ಪರಂಪರೆಯಲ್ಲಿನ ಕೃಷ್ಣನಿಗಿಂತ; ವಿಭಿನ್ನ ವ್ಯಕ್ತಿತ್ವದ ಲೀಲಾವಿಲಾಸದಿಂದ ಕೂಡಿದ ಮಾನವನ ಘನತೆಯ ಸಂಕೇತದಂತೆ ಕೃಷ್ಣನನ್ನು ಕಾವ್ಯದಲ್ಲಿ ತರುತ್ತಾರೆ.

ಅರುಣಾಬ್ಜ ನಿಳಯಕವಾಟಕೌಸ್ತುಭರತ್ನ
ಕಿರಣದಿಂತೆಗೆದೊಳಪೊಕ್ಕು
ತರುಣಿ ಲಕ್ಷ್ಮಿಯ ಕುಚವಿಡಿದ ಕೈಯಿಂದ ಸ
ತ್ಕರುಣವೀವುದು ಕೃಷ್ಣ ನಮಗೆ॥

ಹೀಗೆ ಕೃಷ್ಣನನ್ನು ವಿವರಿಸುವ ಕನಕದಾಸರು, ಪ್ರೇಮ ಸಂಬಂಧಗಳಿಗೆ ಒತ್ತು ಕೊಡುವ ಕೃಷ್ಣನ ವ್ಯಕ್ತಿತ್ವವನ್ನು 'ಮೋಹನ ತರಂಗಿಣಿ'ಯಲ್ಲಿ ಅತಿ ವೈಭವದಿಂದಲೇ ತರುತ್ತಾರೆ. ಕುಮಾರವ್ಯಾಸನ ಕೃಷ್ಣನಿಗಿಂತ ಭಿನ್ನವಾದ ಚಿತ್ರಣವನ್ನು ಕನಕದಾಸರು ರೂಪಿಸುತ್ತಾರೆ. ಹಾಗೂ ಇದುವರೆಗೆ ಯಾರ ಕಾವ್ಯದಲ್ಲಿಯೂ ಸುಳಿಯದ ಧರ್ಮ ನಂಬಿಕೆಯ ಮಿತಿಯನ್ನು ಮೀರಿದ ಮನುಷ್ಯ ಮನುಷ್ಯ ಸಂಬಂಧದ ಕತೆಯನ್ನು ಇಲ್ಲಿ ತರುತ್ತಾರೆ. ಇಂತಹ ರಚನೆ ಕನಕದಾಸರಿಂದ ಅಭಿವ್ಯಕ್ತಗೊಳ್ಳಲು ಅವರೊಳಗಿದ್ದ ಮನುಷ್ಯ ಪರಂಪರೆಯ ಅನುಭವವೇ ಕಾರಣ ಎನ್ನಬಹುದು.

ಹೀಗೆ ಕನಕದಾಸರು ಇತಿಹಾಸದ ಕಾವ್ಯ ರಚನೆ ಮಾಡಿ, ತಮ್ಮ ಕಾವ್ಯದಲ್ಲಿ ಸಮಕಾಲೀನವಾಗಿದ್ದ ಪಾರಂಪರಿಕ ಜನಜೀವನದ ಯತವತ್ತಾದ ಸಹಜ ವರ್ಣನೆಗಳನ್ನು ಕೊಡುವುದರ ಮೂಲಕ ಜನತೆಯ ಅಭಿರುಚಿಗೆ ತಕ್ಕಂತೆ ಈ 'ಮೋಹನತರಂಗಿಣಿ'ಯಲ್ಲಿ ಪಶುಪಾಲನಾ ನೆಲೆಯ 'ಸಾಮರಸ್ಯದ ಬೇರು'ಗಳನ್ನೇ ಮೂಡಿಸಿದ್ದಾರೆ.

ನಂತರ ಕನಕದಾಸರು ತನ್ನ ರಾಜ್ಯಾಡಳಿತದ ಸಂದರ್ಭದಲ್ಲಿ ವಿಜಯನಗರವೂ

ಸೇರಿದಂತೆ ಅಂದಿನ ಊರು ಕೇರಿಗಳನ್ನು ತಿರುಗುತ್ತಲೇ, ಅಲ್ಲಲ್ಲಿ ಕಂಡು ಕೇಳಿದ ಅನುಭವಿಸಿದ ವಿಫುಲ ಹಾಗೂ ವೈವಿಧ್ಯಮಯ ಘಟನೆ, ಸಂದರ್ಭಗಳನ್ನು ತಾವು ಬರೆದ ಸಾಹಿತ್ಯದಲ್ಲಿ ಸೃಷ್ಟಿಸಿ ಸತ್ಕವಿಯೆನಿಸಿಕೊಂಡಿದ್ದಾರೆ. ಅವರ ಈ ಮೋಹನತರಂಗಿಣಿಯು ತನ್ನ ಹದವಾದ ಭಾಷೆ, ವರ್ಣನೆಯಲ್ಲಿನ ಸ್ವಭಾವೋಕ್ತಿ, ಕಲ್ಪಕತೆಗಳು, ಮಾಗಿದ ಭಾವ, ನಿರೂಪಣೆ, ಕಥೆಗಾರಿಕೆಯತಂತ್ರ, ಪಾತ್ರಚಿತ್ರಣ, ಸಂಭಾಷಣೆ, ನಾಟಕೀಯತೆ, ಜನಜೀವನದ ಚಿತ್ರಣ ಹಾಗೂ ದೇಶೀ ಮಿಶ್ರಿತ ಭಾಷಾ ಶೈಲಿಯಿಂದಾಗಿ ಈ ಕಾವ್ಯ, "ಹರಿಶರಣರಿಗೆ ಪೆಚ್ಚು, ಬುಧಜನರಿಗೆ ಮೆಚ್ಚು. ದುರಿತಾಟವಿಗೆ ಕಾಳ್ಗಿಚ್ಚು, ವಿರಹಿಗಳಿಗೆ ಮೆಚ್ಚು, ವೀರರ್ಗೆ ಪುಚ್ಚು, ಕೇಳ್ವರಿಗೆ ತನಿಬೆಲ್ಲದಚ್ಚಾಗಿ," ಸರ್ವರನ್ನೂ ರಂಜಿಸುವ, ಆಕರ್ಷಿಸುವ, ಸಮ್ಮೋಹಕ ಶಕ್ತಿ ಹೊಂದಿರುವ ಕಾವ್ಯವಾಗಿದೆ.

ಹಾಗಾಗಿ ಈ ಮೋಹನತರಂಗಿಣಿ ಕನಕದಾಸರಿಂದ ರಚಿತವಾಗಲು, ಅವರಲ್ಲಿ ಹಾಸುಹೊಕ್ಕಾಗಿದ್ದ ಮೂಲ ಪಶುಪಾಲನಾ ಪರಂಪರೆಯಿಂದ ರೂಪುಗೊಂಡಂತಿರುವ, 'ಕನ್ನಡ ಸಂಸ್ಕೃತಿಯೇ' ಕಾರಣವೆಂದು ತಿಳಿಯಬಹುದಾಗಿದೆ.

**ನಳಚರಿತ್ರೆ :**

ಕನಕದಾಸರ ಜನಪ್ರಿಯ ಕಾವ್ಯಗಳಲ್ಲಿ 'ನಳಚರಿತ್ರೆ'ಯೂ ಒಂದು. 'ಮೋಹನ ತರಂಗಿಣಿ'ಯಂತೆ ನಳಚರಿತ್ರೆ ಒಂದು ಪ್ರೇಮ ಕಥೆಯನ್ನೇ ವಸ್ತುವನ್ನಾಗಿ ಹೊಂದಿರುವ ಪೌರಾಣಿಕ ಕೃತಿ. ಇದೊಂದು ದೇಸೀ ಖಂಡ ಕಾವ್ಯವಾಗಿದ್ದು ೯ ಸಂಧಿಗಳುಳ್ಳ, ೪೮೧ ಭಾಮಿನಿ ಷಟ್ಪದಿಯ ಛಂದಸ್ಸಿನ ಪದ್ಯಗಳನ್ನು ಒಳಗೊಂಡಿದೆ.

ನಳ ಕಥೆಯನ್ನಾಧರಿಸಿದ ಮೊದಲ ಕೃತಿ ಚೌಡರಸನ (ಕ್ರಿ.ಶ.೧೩೦೦) 'ನಳಚಂಪು'. ಆದರೆ ಇದು ಜನಪ್ರಿಯತೆ ಪಡೆಯದ ಕಾರಣ, ಕನಕದಾಸರ ನಳಚರಿತ್ರೆ 'ನಳಚಂಪುವಿನ' ಸ್ಥಾನ ತುಂಬಲು ಹುಟ್ಟಿಕೊಂಡಂತೆ ತೋರುತ್ತದೆ. 'ನಳಚರಿತ್ರೆ'ಯು ವೇದಪೂರ್ವ ಪ್ರಾಚೀನ ಕಥೆ. ಶತಪಥ ಬ್ರಾಹ್ಮಣದ ಹದಿಮೂರನೆಯ ಖಂಡದಲ್ಲಿ 'ನಳ'ನ ಉಲ್ಲೇಖವಿದೆ.[೮೨]

ಮೌಖಿಕ ಪರಂಪರೆಯಲ್ಲಿ (oral tradition) ಅತ್ಯಂತ ಪ್ರಸಿದ್ಧಿಯಾಗಿದ್ದ ನಳನ ಕಥೆಯು ಕುರು ಪಾಂಡವರ ಕಥೆ 'ಜಯ' ವೆಂಬ ನಾಮಧೇಯದಿಂದ ಅಂಕುರಿಸಿ ಅದು ನಳೋಪಾಖ್ಯಾನದ ತಳಹದಿಯ ಮೇಲೆ ಮುಗಿಲುದ್ದ ಬೆಳೆಯಿತೆಂದು ದೇ.ಜವರೇಗೌಡರು ಅಭಿಪ್ರಾಯಪಡುತ್ತಾರೆ.[೮೩] ಹಾಗೂ ಈ ನಳೋಪಾಖ್ಯಾನ ಮಹಾಭಾರತಕ್ಕಿಂತ ಪ್ರಾಚೀನವಾದ ಜನಪದ ಕಥೆಯೆಂದೂ, ಇದು ಸೋಮದೇವನ ಕಥಾಸರಿತ್ಸಾಗರ, ಗುಣಾಢ್ಯನ ಬೃಹತ್ಕತೆ, ಶತಪಥ ಬ್ರಾಹ್ಮಣ, ಋಗ್ವೇದ, ಇವುಗಳಿಂದ ಪ್ರಭಾವಿತವಾದ ಆರ್ಯೇತರ ಬುಡಕಟ್ಟಿನ ರಾಜ–ರಾಣಿಯರ

ಪ್ರೇಮ ಕಥೆಯ ಒಂದು ಪ್ರಕಟಿತ ರೂಪವೆಂದು ದೇ.ಜವರೇಗೌಡರು ಪ್ರತಿಪಾದಿಸಿದ್ದಾರೆ.೪೪

ಕನಕದಾಸರು ತಾವು ಬರೆದ ನಳಚರಿತ್ರೆಯಲ್ಲಿ ಮೂಲದ ಕೆಲವು ಸಂಗತಿಗಳನ್ನು ಕೈಬಿಟ್ಟು ಸಣ್ಣಪುಟ್ಟ ವ್ಯತ್ಯಾಸಗಳೊಂದಿಗೆ ನೂತನ ಸನ್ನಿವೇಶಗಳನ್ನು ಸೇರ್ಪಡೆ ಮಾಡಿದ್ದಾರೆ. ಮಾನವ ತನ್ನ ಮೌಲ್ಯ ನಿಷ್ಠೆಯಿಂದ ದೇವತೆಗಳನ್ನು ಹಿಂದಿಕ್ಕಬಲ್ಲ. ಪ್ರೇಮ ಶುದ್ಧವಾಗಿದ್ದರೆ ಅದು ಅಮರವಾಗುತ್ತದೆ. ಅರಸನಾದವನು ಆಳಾಗಲೂ ಬಲ್ಲನು, ಎಂಬ ಮೌಲ್ಯಗಳನ್ನು ಪ್ರತಿಪಾದಿಸುವ ಇಲ್ಲಿನ ಕಥಾವಸ್ತು, ಘಟನೆಗಳ ಬಾಹುಳ್ಯ ಮತ್ತು ವೈವಿಧ್ಯತೆಯಿಂದಾಗಿ ರೋಚಕತೆಯಿಂದ ಕಥೆ ಸಾಗುತ್ತದೆ.

ರಾಜರುಗಳ ಸಪ್ತ ವ್ಯಸನಗಳಲ್ಲಿ ಒಂದಾದ ದ್ಯೂತವ್ಯಸನ ರಾಜ ಮತ್ತು ಅವರನ್ನು ನಂಬಿದವರುಗಳ ಕಷ್ಟ-ನಷ್ಟ ಪರಂಪರೆಗಳಿಗೆ ಹೇಗೆ ಕಾರಣವಾಗುತ್ತದೆ, ಎಂಬುದನ್ನು ಇಲ್ಲಿನ ವಸ್ತು ಹೊಂದಿದೆ. ವ್ಯಾಸ ಭಾರತದ ವನಪರ್ವದ ಇಪ್ಪತ್ತೆರಡು ಅಧ್ಯಾಯಗಳಲ್ಲಿ ಹರಡಿರುವ ಈ ಕಥೆ, ಕುಮಾರವ್ಯಾಸ ಭಾರತದಲ್ಲಿ ಕೇವಲ ಮೂರು ಪದ್ಯಗಳಲ್ಲಿ ಮುಗಿದುಹೋಗಿದೆ. ಕಾಳಿದಾಸನು ಶಂಕುತಲೋಪಾಖ್ಯಾನವನ್ನು ಆಧರಿಸಿ ವಿಶ್ವವಿಖ್ಯಾತ 'ಶಾಕುಂತಲ' ನಾಟಕವನ್ನೇ ರಚಿಸಿದಂತೆ; ಕನಕದಾಸರು ನಳೋಪಾಖ್ಯಾನವನ್ನು ಆಧರಿಸಿ 'ನಳಚರಿತ್ರೆ'ಯನ್ನು ರಚಿಸಿದರು. ಕನಕದಾಸರು ತುಂಬಾ ಋಣಿಯಾಗಿರುವುದು ಕುಮಾರವ್ಯಾಸನಿಗೆ. ಮಹಾಭಾರತದಲ್ಲಿ ಬರುವ ಉಪದೇಶಾತ್ಮಕ ವಿವರಗಳನ್ನು ಬಿಟ್ಟು ಕಥೆಯ ಹಂದರವನ್ನು ಮಾತ್ರ ಕನಕದಾಸರು ಸ್ವೀಕರಿಸಿದ್ದಾರೆ. ಕುಮಾರವ್ಯಾಸನ ಭಾವ, ಭಾಷೆಯ ಗಡಸುತನ, ಕನಕದಾಸರ ನಳಚರಿತ್ರೆಯಲ್ಲಿ ಕಂಡುಬರುತ್ತಿದ್ದು, ವಿಷ್ಣು ಸ್ತುತಿಯ ಮಂಗಳ ಪದ್ಯದೊಂದಿಗೆ ಕಥೆಯನ್ನು ಆರಂಭಿಸುತ್ತಾರೆ. ನಂತರ ಗಣೇಶ, ಸರಸ್ವತಿಯರನ್ನು ಸ್ತುತಿಸಿ ಕಾವ್ಯಕ್ಕೆ ಪ್ರವೇಶ ಮಾಡುತ್ತಾರೆ. ಕನಕದಾಸರು ರಚಿಸಿದ 'ನಳಚರಿತ್ರೆ'ಯ ಕಥಾಸಾರ ಈ ಮುಂದಿನಂತಿದೆ.

**ಕಥಾಸಾರ:**

ಪಂಚ ಪಾಂಡವರು ತಮ್ಮ ರಾಜ್ಯವನ್ನು ಕಳೆದುಕೊಂಡು ಅರಣ್ಯದಲ್ಲಿ ಅಲೆದಾಡುತ್ತಿರುತ್ತಾರೆ. ಈ ಸಮಯದಲ್ಲಿ ಶಸ್ತ್ರಾಸ್ತ್ರ ಸಂಪಾದನೆಗಾಗಿ ಇಂದ್ರಲೋಕಕ್ಕೆ ಹೋದ ಅರ್ಜುನನು ಮರಳಿ ಬರುವುದು ವಿಳಂಬವಾದಾಗ, ಧರ್ಮರಾಜನು ಕಳವಳಗೊಂಡು ಕಾಮ್ಯಕ ವನದ 'ರೋಮೇಶ' ಮುನಿಗಳಿದ್ದಲ್ಲಿಗೆ ಬಂದು ತನ್ನ ಆತಂಕವನ್ನು ವ್ಯಕ್ತಪಡಿಸುತ್ತಾನೆ. ಆಗ ರೋಮೇಶ ಮುನಿಯು ಪಾಂಡವರಿಗಿಂತ ದೊಡ್ಡ ದುರಂತಕ್ಕೊಳಗಾದ ಹರಿಶ್ಚಂದ್ರ, ರಾಮಾದಿಗಳು ಅನುಭವಿಸಿದ ಕಷ್ಟಗಳನ್ನು ಹೇಳುವುದರ ಜೊತೆಗೆ 'ನಳದಮಯಂತಿ'ಯ ದುರಂತಮಯ ಅಗಲಿಕೆ ಮತ್ತು

ಈ ಇಬ್ಬರು ಮಿಲನಗೊಂಡ ಸುಖಾಂತ್ಯದ ಕಥೆಯನ್ನು ಹೇಳಿ; ಧರ್ಮರಾಜನನ್ನೂ, ಪಾಂಡವರನ್ನು ಸಮಾಧಾನ ಪಡಿಸಿದರು.

ನಳನು 'ನಿಷಧ' ನಗರದ ಅರಸ. ವಿದರ್ಭರಾಜ್ಯದ ಅರಸ ಭೀಮನೃಪನ ಮಗಳು ದಮಯಂತಿ. ಈಕೆ ಗುಣವಂತೆ, ಸೌಂದರ್ಯವತಿ. ಈ ಇಬ್ಬರಲ್ಲೂ ಪರಸ್ಪರ ಪ್ರೇಮಾಂಕುರವಾಗುತ್ತದೆ. ಭೀಮನೃಪನು ತನ್ನ ಮಗಳ ಮದುವೆಗಾಗಿ ಅನೇಕ ರಾಜಕುಮಾರರನ್ನು ಕರೆಯಿಸಿ, ಇಷ್ಟರಾದ ಯಾರಾದವರೊಬ್ಬರನ್ನು ಆರಿಸಿಕೊಂಡು ಮದುವೆಯಾಗಲು ಮಗಳಿಗೆ ಹೇಳುತ್ತಾನೆ. ದಮಯಂತಿ ಈಗಾಗಲೇ ನಳನ ರೂಪವನ್ನು ಕಂಡಿದ್ದರಿಂದ ನಳನನ್ನೇ ಮದುವೆಯಾಗಲು ನಿಶ್ಚಯಿಸುತ್ತಾಳೆ. ಆಗ ಎಲ್ಲಾ ದೇವತೆಗಳೂ ಸಮ್ಮತಿಸಿ ಆಶೀರ್ವದಿಸಿ ಮದುವೆ ಮಾಡುತ್ತಾರೆ. ಕೆಲಕಾಲ ಸುಖವಾಗಿ ಬಾಳಿ ಎರಡು ಮಕ್ಕಳನ್ನು ಪಡೆಯುತ್ತಾರೆ. ಕಲಿಪುರುಷನ ಆಗಮನವಾದ ನಂತರ ನಳನ ಸಂಕಟದ ದಿನಗಳು ಪ್ರಾರಂಭವಾಗುತ್ತವೆ. ಈ ಕಾರಣದಿಂದ ಮಂತ್ರಿ ಪುಷ್ಕರನೊಂದಿಗೆ ನಳ ದ್ಯೂತವಾಡಿ ಎಲ್ಲವನ್ನೂ ಸೋಲುತ್ತಾನೆ. ಸೋತ ನಳ ರಾಜ್ಯವನ್ನು ತೊರೆದು ಮಕ್ಕಳನ್ನು ಮಾವನ ಮನೆಗೆ ಕಳುಹಿಸಿ, ದಮಯಂತಿಯೊಡನೆ ಕಾಡಿಗೆ ಹೋಗುತ್ತಾನೆ.

ಕಾಡಿನಲ್ಲಿ ಅನೇಕ ಕಷ್ಟಗಳನ್ನು ಅನುಭವಿಸುತ್ತಲೇ ಸುತ್ತಾಡಿ ದಣಿದು ಒಂದು ದಿನ ದೀರ್ಘವಾಗಿ ಮಲಗಿದ್ದ ಹೆಂಡತಿ ದಮಯಂತಿಯನ್ನು ಬಿಟ್ಟು ನಳ ಕಾಡಿನಲ್ಲಿ ಮರೆಯಾಗುತ್ತಾನೆ. ನಿದ್ದೆಯಿಂದ ಎದ್ದ ದಮಯಂತಿ ಅತಿಯಾಗಿ ದುಃಖಿಸುತ್ತಾ ನಳನನ್ನು ಅರಸುತ್ತಿರುವಾಗ ಸರ್ಪವೊಂದು ಅವಳನ್ನು ನುಂಗಲು ಪ್ರಯತ್ನಿಸುತ್ತದೆ. ಇದನ್ನು ಕಂಡ ವ್ಯಾಧನೊಬ್ಬ ದಮಯಂತಿಯನ್ನು ಕಾಪಾಡುತ್ತಾನೆ. ಆತ ದಮಯಂತಿಯ ರೂಪವನ್ನು ಕಂಡು ಮದುವೆಯಾಗುವಂತೆ ಒತ್ತಾಯಿಸುತ್ತಾನೆ. ಆದರೆ ನನ್ನ ಜೀವ ಕಾಪಾಡಿದ ನೀನು, ತಂದೆಗೆ ಸಮಾನನೆಂದು, ವ್ಯಾಧನ ಬೇಡಿಕೆಯನ್ನು ತಿರಸ್ಕರಿಸುತ್ತಾಳೆ. ನಂತರ ದಮಯಂತಿ ಕಾಡಿನಲ್ಲಿ ಅಲೆಯುತ್ತಲೇ ವ್ಯಾಪಾರಿಗಳ ನೆರವಿನಿಂದ ಚೇದಿನಗರಕ್ಕೆ ಬಂದು ಅಲ್ಲಿನ ಚೇದೀರಾಣಿಯ ಮಗಳು ಸುನೀತೆಯ ಸೇವಕಿಯಾಗಿ ಅರಮನೆ ಸೇರಿಕೊಳ್ಳುತ್ತಾಳೆ.

ಚೇದಿ ಭೂಪನ ಮಡದಿಯಾದರೊ ದಮಯಂತಿ ನಿಜವಾಗಿ ಯಾರೆಂದು ತಿಳಿಯದೆ,

> ಚೇದಿ ಭೂಪನ ಮಡದಿ ತನ್ನ ಸ
> ಹೋದರಿಯ ಸುತೆಯೆಂದು ಬಲ್ಲಳೆ
> ಮೇದಿನಿಯೊಳಿವಳಾರ ಸತಿಯೆಂದರಿಯದಾಕೆಯನು

ಆದರಿಸಿ ಸಲಹಿದಳು ಮಗಳೋ
ಪಾದಿಯಲಿ ದಮಯಂತಿಯನು ಮನ
ಭೇದವಿಲ್ಲದೆ ಕರುಣದಿಂದಂಗನೆಯ ನೃಪನರಸಿ॥ ೬೫

ಅತ್ತ ನಳ ಮಹಾರಾಜ, ಕಾಡಿನಲ್ಲಿ ಕಾರ್ಕೋಟಕ ಸರ್ಪಕ್ಕೆ ಸಿಕ್ಕಿ ವಿಕಾರ ರೂಪವನ್ನು ತಾಳುತ್ತಾನೆ.

ದೊಡ್ಡ ಹೊಟ್ಟೆಯ ಗೂನು ಬೆನ್ನಿನ
ಅಡ್ಡ ಮೋರೆಯ ಗಂಟು ಮೂಗಿನ
ದೊಡ್ಡ ಕೈಕಾಲುಗಳ ಉದುರಿದ ರೋಮ ಮೀಸೆಗಳ
ಜಡ್ಡು ದೇಹದ ಗುಜ್ಜು ಗೊರಲನ
ಗಿಡ್ಡರೂಪಿನ ಹರಕು ಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ॥ ೬೬

ಇತ್ತ ದಮಯಂತಿಯಾದರೋ ತನ್ನ ಪತಿ, ನಳನಿಗಾಗಿ ಪ್ರತಿ ನಿಮಿಷವೂ ಪರಿತಪಿಸುತ್ತಿರುತ್ತಾಳೆ. ಮುಂದೆ ನಳನು ಕಲಿಪುರುಷನ ನಿರ್ದೇಶನದಂತೆ ಅಯೋಧ್ಯಾಪುರಕ್ಕೆ ಬಂದು ಅಲ್ಲಿನ ಅರಸ ಋತುಪರ್ಣನ ಆಸ್ಥಾನದಲ್ಲಿ ಆತನ ಕೈಕೆಳಗೆ ಬಾಹುಕನಾಗಿ ಕೆಲಸಕ್ಕೆ ಸೇರಿಕೊಳ್ಳುತ್ತಾನೆ.

ರಾಜ ಭೀಮನೃಪನು ದಮಯಂತಿಯ ಇರುವಿಕೆಯನ್ನು ಒಬ್ಬ ಬ್ರಾಹ್ಮಣನಿಂದ ತಿಳಿದು ಗೂಢಾಚಾರನಾದ ಸುದೇವನನ್ನು ಚೇದಿನಗರಕ್ಕೆ ಕಳುಹಿಸಿ ದಮಯಂತಿಯನ್ನು ವಿದರ್ಭ ರಾಜ್ಯಕ್ಕೆ ಕರೆಸಿಕೊಳ್ಳುತ್ತಾನೆ. ಇಲ್ಲಿಗೆ ಬಂದ ದಮಯಂತಿ ನಳನ್ನು ಹುಡುಕಲು ಗೂಢಾಚಾರರನ್ನು ನೇಮಿಸಲಾಗಿ, ಅಯೋಧ್ಯಾ ನಗರಕ್ಕೆ ಬಂದ ಈ ಚಾರರು ಋತುಪರ್ಣನ ಆಸ್ಥಾನದಲ್ಲಿದ್ದ ಬಾಹುಕನನ್ನು ನಳನೆಂದು ಸಂದೇಹಪಟ್ಟು ದಮಯಂತಿಗೆ ವಿಚಾರ ತಿಳಿಸುತ್ತಾರೆ. ಈ ವಿಚಾರವನ್ನು ಖಚಿತಪಡಿಸಿಕೊಂಡ ದಮಯಂತಿ ತನ್ನ ತಂದೆಗೆ ಹೇಳಿ ಮತ್ತೊಮ್ಮೆ ತನಗೆ ಸ್ವಯಂವರ ಏರ್ಪಡಿಸುವಂತೆ ಸೂಚಿಸಿ, ಋತುಪರ್ಣ ರಾಜನಿಗೂ ಈ ವಿಚಾರವನ್ನು ತಲುಪಿಸುವಂತೆ ಮಾಡುತ್ತಾಳೆ.

ದಮಯಂತಿಯ ರೂಪಲಾವಣ್ಯವನ್ನು ಕೇಳಿ ತಿಳಿದಿದ್ದ ಋತುಪರ್ಣ ಮಹಾರಾಜನು ಸ್ವಯಂವರದಲ್ಲಿ ಭಾಗಿಯಾಗಲು ಬಾಹುಕನಾದ ನಳನೊಂದಿಗೆ ರಥವೇರಿ ವಿದರ್ಭ ನಗರಕ್ಕೆ ಬಂದು ತಲುಪುತ್ತಾರೆ. ವಿದರ್ಭ ನಗರವು ಹಬ್ಬದ ಸಡಗರದರಿಂದ ಶೋಭಿಸುತ್ತಿರುತ್ತದೆ. ಅಲ್ಲಿ ದಮಯಂತಿ ಮತ್ತು ಬಾಹುಕ (ನಳ) ಒಬ್ಬರಿಗೊಬ್ಬರು ನೋಡಿ ತನ್ನ ಮಕ್ಕಳ ಸಂಗಡದಿಂದಾಗಿ ದಮಯಂತಿ; ಬಾಹುಕನೇ(ನಳ) ತನ್ನ ಗಂಡನೆಂದು ತೀರ್ಮಾನಿಸಿ ತನ್ನ ತಂದೆ ತಾಯಿಗಳಿಗೆ

ಹೀಗೆನ್ನುತ್ತಾಳೆ.

ತಾಯೆ ಸಂಶಯವಿಲ್ಲ ನೈಷಧ
ರಾಯನೀತನು ಸೂತನಲ್ಲ ವಿ
ದಾಯದಲಿ ಬಂದಿಹನು ನೋಡು ಕುರೂಪಿ ವೇಷದಲಿ॥
ರಾಯರೊಳಗಗ್ಗಳೆಯ ನಳನೃಪ
ಮಾಯವನು ತೋರಿಹನು ಇವನ ನಿ
ಬಾಯತವ ತಾಬಲ್ಲೆ ಕರೆಸೆಂದಳು ಸರೋಜಮುಖಿ॥[೪೭]

ನಂತರ ನಳ ದಮಯಂತಿಯರ ಭೇಟಿಯಾಗುತ್ತದೆ. ನಳ ಇದೇ ಸಂದರ್ಭದಲ್ಲಿ ಹಂಸ ಪಕ್ಷಿಗಳನ್ನು ನೆನೆದು ತನ್ನ ಮೊದಲ ರೂಪವನ್ನು ಪಡೆದುಕೊಳ್ಳುತ್ತಾನೆ. ಆಗ ಸ್ವಯಂವರದಲ್ಲಿ ಸೇರಿದ್ದ ಎಲ್ಲರಿಗೂ ಸಂತೋಷವಾಗುತ್ತದೆ. ನಳದಮಯಂತಿಯರು ಒಂದುಗೂಡುತ್ತಾರೆ. ಮತ್ತೆ ನಳನು ಪತ್ನಿಯೊಂದಿಗೆ 'ನಿಷಧ' ನಗರಕ್ಕೆ ಬಂದು "ಕದನದಲಿ ಪುಷ್ಕರನ ಬಲವನು ಸದೆದು ಪಡೆದು ಮತ್ತೆ ಜೂಜಿಂಗೆಲಿದು ರಾಜ್ಯವನ್ನು ರಾಜ್ಯವ ಮುಂದಂ ಪಾಲಿಸುತ್ತಿರ್ದನಾ ಸತಿ ಸಹಿತ ನಳ ನೃಪತಿ." ಹೀಗೆ ನಿಷಧ ರಾಜ್ಯವನ್ನು ಪಡೆದ ನಳ ಮುಂದೆ ಸತಿ ಸುತರೊಡನೆ ಸುಖವಾಗಿ ಬಾಳುತ್ತಾನೆ. ಇದು ಕನಕದಾಸರ 'ನಳಚರಿತ್ರೆ'ಯ ಸಂಕ್ಷಿಪ್ತ ಕತೆ.

**ಕೃತಿಯಲ್ಲಿನ ಪಶುಪಾಲನಾ ಪರಂಪರೆಯ ವಿವರಗಳು:**

ನಳಚರಿತ್ರೆ ಒಂದು ಸುಂದರ ಪ್ರೇಮಕಥೆ. ಇಲ್ಲಿ ಬದುಕಿನ ಮೌಲ್ಯಗಳಾದ ಆದರ್ಶ, ತ್ಯಾಗ, ಹೊಂದಾಣಿಕೆ, ಪ್ರೀತಿ, ಸಹನೆ, ತಾಳ್ಮೆ, ಪಾತಿವ್ರತ್ಯಗಳು ತುಂಬಿಕೊಂಡಿವೆ. ಇಂತಹ ಸುಂದರ ಕಥೆ ಭಾರತೀಯ ಭಾಷೆಗಳೂ ಸೇರಿದಂತೆ ಅನ್ಯ ದೇಶೀಯ ಭಾಷೆಗಳಲ್ಲೂ ತುಂಬಾ ರಚನೆಯಾಗಿವೆ. ಇದಕ್ಕೆ ಈ ಕಥೆಯ ಶ್ರೇಷ್ಠತೆ ಹಾಗೂ ಸೊಗಸುತನ ಕಾರಣವಾಗಿದೆ.

ಕನಕದಾಸರ ಕಾಲಕ್ಕಾಗಲೇ ನಳಚರಿತ್ರೆಯನ್ನು ಹಲವರು ಬರೆದಿದ್ದರೂ ಕನಕದಾಸರಾದರೂ ಇದೇ ಕಥೆಯನ್ನು ಮತ್ತೆ ಕೈಗೆತ್ತಿಕೊಂಡು ತಮ್ಮ ಅನುಭವ, ಸ್ವತಂತ್ರ ಪ್ರತಿಭೆ, ಕಥನಕಲೆ ಹಾಗೂ ಕಲ್ಪನಾ ಚಮತ್ಕಾರಗಳಿಂದಾಗಿ ಕಾವ್ಯದಲ್ಲಿ ಹೊಸ ಮತ್ತು ಕುತೂಹಲಕಾರಿಯಾದ ಅಂಶಗಳು ಪ್ರಕಾಶಿಸುವಂತೆ ಮಾಡಿದ್ದಾರೆ. ಕೆಳಸಮುದಾಯದಿಂದ ಬಂದು, ಆಳ್ವಿಕೆ ನಡೆಸಿ ನಂತರ ಎಲ್ಲವನ್ನು ತ್ಯಜಿಸಿ ನಿಷ್ಕಾಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬಾಳಿದವರು ಕನಕದಾಸರು. ಹಾಗಾಗಿ ಅಂದಿನ ಕೆಳಸಮುದಾಯದ ವೃತ್ತಿ–ಬದುಕು, ಜೀವನವನ್ನು ಬಹು ಹತ್ತಿರದಿಂದ ಕಂಡವರಾಗಿದ್ದರು. ಮುಖ್ಯವಾಗಿ ಅಂದಿನ ಕೆಳಸಮುದಾಯದ ವೃತ್ತಿಯಾದ

ಪಶುಪಾಲನೆಯೊಂದಿಗೆ ಕನಕದಾಸರು ತೊಡಗಿಕೊಂಡಿಲ್ಲವಾದರೂ ತನ್ನ ಸುತ್ತಲ ಪಶುಪಾಲನೆಯ ಬದುಕಿನ ನಡುವೆ ಬದುಕಿ ಬಂದವರಾಗಿದ್ದರು. ಅಲ್ಲದೆ ಅಂದು ಕೆಳವರ್ಗದವರಿಗೆ ನಿಷಿದ್ಧವಾಗಿದ್ದ ಅಕ್ಷರಜ್ಞಾನ ಕನಕನಿಗೆ ದೊರೆಯುವಂತಾಗಲು ಆತನ ಕುಟುಂಬಕ್ಕಿದ್ದ ಪ್ರಭುತ್ವವೇ ಕಾರಣವೆಂಬುದನ್ನು ಖಚಿತಪಡಿಸಿಕೊಳ್ಳಬಹುದು. ಜೊತೆಗೆ ತನ್ನ ಬದುಕಿನಲ್ಲಾದ ನಿರಂತರ ನೋವುಗಳು(ಸಾವು ಮತ್ತು ಯುದ್ಧಗಳು) ಕನಕನನ್ನು ನಿಷ್ಕಾಮ ಸ್ಥಿತಿಗೆ ತಂದು ನಿಲ್ಲಿಸಲು ಕಾರಣವಾಗಿರಬಹುದು. ಈ ಎಲ್ಲಾ ಅನುಭವಗಳನ್ನು ಜೀವನದಲ್ಲಿ ಕಂಡುಂಡ ಕನಕದಾಸರು ಮೂಲ ನಳಚರಿತ್ರೆಯ ಕಥನವನ್ನು ಕೈಗೆತ್ತಿಕೊಂಡು ತಾವು ಗಳಿಸಿಕೊಂಡಿದ್ದ ಆನುಭಾವಿಕ ಸಾಮರ್ಥ್ಯದ ಮೂಲಕ ಪ್ರತಿಭಾ ಪೂರ್ಣವಾಗಿ ಕಾವ್ಯವನ್ನು ರಚಿಸಿದರು.

ಇಂತಹ ಹಿನ್ನೆಲೆಯೊಳಗೆ ರಚಿತವಾದ ಕನಕದಾಸರ ನಳಚರಿತ್ರೆಯ ಕಥನದ ಮೇಲೆ ಈ ನೆಲದ ಮೂಲ ವೃತ್ತಿಯಾದ ಪಶುಪಾಲನಾ ಪರಂಪರೆಯು ಬೀರಿರುವ ಪ್ರಭಾವ, ಪ್ರೇರಣೆ, ಸಂಬಂಧ ಮತ್ತು ಪರಿಣಾಮಗಳನ್ನು ಈ ಮುಂದೆ ಶೋಧಿಸಲಾಗಿದೆ.

ಕನಕದಾಸರು ನಳಚರಿತ್ರೆಯಲ್ಲಿ ಪಶುಪಾಲನೆಯ ನೆಲೆಯಾದ 'ನಿಸರ್ಗ'ವನ್ನು ಬದುಕಿನ ಭಾಗವೆಂದು ಭಾವಿಸಿ ಸ್ವೀಕರಿಸಿದ್ದಾರೆ. ಪಂಚ ಭೂತಗಳ ಕಲ್ಪನೆಯನ್ನು ವಿಭಿನ್ನ ನೆಲೆಗಳಲ್ಲಿ ಪ್ರತ್ಯೇಕವಾಗಿ ರೂಪಿಸಲು ಪ್ರಯತ್ನಿಸಿದ್ದಾರೆ.[೪೯] ಇಲ್ಲಿ ನಿಸರ್ಗವೆಂದರೆ ಮರ, ಗಿಡ, ಬಳ್ಳಿ, ಭೂಮಿ, ಮಣ್ಣು, ಕೃಷಿ, ಪ್ರಾಣಿ, ಪಕ್ಷಿ, ಜಲ ಜೊತೆಗೆ ಮನುಷ್ಯನೂ ಸೇರಿದಂತೆ ಸಕಲ ಜೀವಕೋಟಿಗಳೂ ಸೇರುತ್ತವೆ. ನಮ್ಮ ಪೂರ್ವಿಕರು ಪರಂಪರೆ ಮತ್ತು ನಿಸರ್ಗವನ್ನು ಕಂಡಿದ್ದು ಈ ನೆಲೆಯಲ್ಲಿಯೆ. ಇಂತಹ ನಿಸರ್ಗ ಸಂಬಂಧವು ಮನುಷ್ಯನಗೆ ತನ್ನ ಬದುಕನ್ನು ಕಟ್ಟಿಕೊಳ್ಳಲು ಅನುವು ಮಾಡಿದೆ. ಹಾಗಾಗಿ ಕನಕದಾಸರು ತಮ್ಮ ದೀರ್ಘ ಕಾವ್ಯಗಳಲ್ಲಿ ನಿಸರ್ಗವನ್ನು ಜೀವಪರ ನಿಲುವಾಗಿ ಗ್ರಹಿಸಿರುವುದನ್ನು ಕಾಣಬಹುದು.

ಏಕೆಂದರೆ ಮಧ್ಯಕಾಲೀನ ಯುಗದಲ್ಲಿ ಜನಸಾಮಾನ್ಯರ ಪ್ರಮುಖ ಉದ್ಯೋಗ ಪಶುಪಾಲನೆಯಾಗಿದ್ದು ಇದರ ಪ್ರಮುಖ ಲಕ್ಷಣಗಳಾದ ಪ್ರೀತಿ, ಪ್ರೇಮ, ಹೊಂದಾಣಿಕೆ, ಸಹಕಾರದ ನೆಲೆಗಳು ಕನಕದಾಸರ ಕಾವ್ಯಗಳಲ್ಲಿ ಹೆಚ್ಚು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ 'ನಳಚರಿತ್ರೆ'ಯನ್ನು ಗಮನಿಸಿದವರಿಗೆ ಇಲ್ಲಿ ಪ್ರೇಮದ ಆಖ್ಯಾನಗಳು ಬೇಕಾದಷ್ಟಿವೆ. ಕಥೆ ಹೇಳುವ ಪರಂಪರೆಯಂತೆ ಕಥೆ ಪ್ರಾರಂಭವಾಗಿ, ಇಲ್ಲಿ 'ಕಾಡು' ಕೇಂದ್ರಬಿಂದುವಾಗಿ ಕಾವ್ಯದಲ್ಲಿ ಪಶುಪಾಲನೆಯ ಚಹರೆಗಳು ತೆರೆದುಕೊಳ್ಳುತ್ತವೆ. ಕನಕದಾಸರು ಬೇಟೆಗೆ ಹೋದಾಗಿನ ನಿಸರ್ಗದ ಒಡನಾಟ, ಕಂಡ ಕಾಡಿನ ನಿಗೂಢತೆಗಳು, ಕ್ರೂರ ಮೃಗಗಳು, ದುಷ್ಟ ಜಂತುಗಳು ಮತ್ತು ಕಾಡ್ಗಿಚ್ಚಿನ ಸನ್ನಿವೇಷಗಳನ್ನು ಕಾವ್ಯದಲ್ಲಿ ತರುತ್ತಾರೆ. ಕಾಡ್ಗಿಚ್ಚಿನ ಸಂದರ್ಭಗಳಂತೂ ಪಂಪನಿಂದಲೇ

ಕನ್ನಡ ಕಾವ್ಯ ಸಂದರ್ಭದಲ್ಲಿ ಲಭ್ಯವಾಗಿವೆ. ಖಾಂಡವವನ ದಹನ ಪ್ರಸಂಗದಲ್ಲಿ ಪಂಪನ ಒಲವು ಬೆಂಕಿಯ ಕಡೆಗಿಂತಲೂ, ಬೆಂಕಿಯಿಂದ ನಾಶವಾಗುತ್ತಿರುವ ಕಾಡನ್ನು ಕುರಿತಾಗಿಯೇ ಬರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಆದ್ದರಿಂದ ಈ ಬಗೆಯ ಎಚ್ಚರಗಳನ್ನು ನಾವು ಪ್ರಸ್ತುತ ವರ್ತಮಾನಕ್ಕೂ ಅನ್ವಯಿಸಿಕೊಳ್ಳುವಂತೆ ನಿಸರ್ಗದ ಚಿತ್ರಣವನ್ನು 'ನಳಚರಿತ್ರೆ'ಯಲ್ಲಿ ಕನಕದಾಸರು ತರುತ್ತಾರೆ. ಇಲ್ಲಿನ ಸನ್ನಿವೇಷಗಳೊಂದಿಗೆ, ನಿಸರ್ಗವು ಮನುಷ್ಯನ ಅಂತರಂಗದ ನೋವುಗಳಿಗೆ ಹೇಗೆ ಸ್ಪಂದಿಸುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ನಳನು ಪಗಡೆಯಾಟದಲ್ಲಿ ಸೋತು ಮಂತ್ರಿ ಪುಷ್ಕರನಿಗೆ ತನ್ನ ರಾಜ್ಯವನ್ನೆಲ್ಲಾ ಬಿಟ್ಟುಕೊಟ್ಟು ತನ್ನ ಹೆಂಡತಿಯೊಂದಿಗೆ ಮೊದಲು ಪ್ರವೇಶ ಮಾಡುವುದೇ ಕಾಡನ್ನು.

ಘೋರಾರಣ್ಯವೆಸೆದುದು ಘನ
ಭಯಂಕರದಿ ಸಂದಖಿಗ ಮೃಗವಲ್ಲಿ ನೆರೆದಿರೆ
ಬಂದು ಹೊಕ್ಕರು ಕಾನನವನರ
ವಿಂದ ಸಖ ಹೊದ್ದಿದನು ಮೆಲ್ಲನೆ ಪಶ್ಚಿಮಾಂಬುಧಿಯ॥ [೫೦]

ಇಂತಹ ಕಾಡಿನ ಪ್ರವೇಶದಿಂದ ದಮಯಂತಿಗೆ,

ಲೋಕಕಧಿಪತಿ ನಳನ ರಾಣಿಗೆ
ಶೋಕ ಪರ್ಬಿದ ತೆರದಿ ಕತ್ತಲೆ ಲೋಕವನು
ಮುಸುಕಿದುದು ಭರಣಿಯ ಮುಚ್ಚುವಂದದಲಿ
ಭೀಕರ ಧ್ವನಿಗಳಿಗೆ ಹೆದರಿದ
ಳಾ ಕಮಲಲೋಚನೆಯ ಕಂಡು ವಿ
ವೇಕನಿಧಿ ಸಂತಯಿಸಿ ಬಿಗಿದಪ್ಪಿದನು ತೂಪಿರಿದು॥ [೫೧]

ಅಂದ ಹಾಗೆ ಕಾಡಿನ ಪ್ರವೇಶ ದಮಯಂತಿಗಂತೂ ಗಾಢವಾದ ಭಯವನ್ನುಂಟು ಮಾಡಿದಾಗ ನಳನು ಪ್ರೇಮದಿಂದ ಆಕೆಯನ್ನು ಬಿಗಿದಪ್ಪಿ ತೊಡೆಯ ಮೇಲೆ ಕೂರಿಸಿಕೊಂಡು ಕಾಡಿನ ಆ ನಡು ಇರುಳಲ್ಲಿ ಪ್ರೇಮದಿಂದ ಚುಂಬಿಸಿ, ಧೈರ್ಯ ತುಂಬುತ್ತಾನೆ. ಅಲ್ಲದೆ ತನ್ನಿಂದಾಗಿ ಹೆಂಡತಿ ದಮಯಂತಿಗೊದಗಿದ ಕಷ್ಟವನ್ನು ಕಂಡು ಮರುಗಿ "ಕೇಳ್ ತರುಣಿ ಎನ್ನವೊಲಾರು  ಪಾಪಿಗಳಿರದೆ ನೀ ಹೋಗಿನ್ನು ತಂದೆಯ ಮನೆಗೆ ನಡೆಯೆಂದು" ಸಂತೈಸುತ್ತಾನೆ ಆದರೆ ಪತಿಯ ಕಷ್ಟದಲ್ಲಿ ನನ್ನದೂ ಪಾಲಿದೆ ಎಂದು ನಂಬಿದ್ದ ದಮಯಂತಿಯು,

ಇನಿಯನಾಡಿದ ನುಡಿಗೆ ಅಂಗನೆ

ಕನಲಿ ನುಡಿದಳು ಶೋಕದಲಿ ನೀ
ನಿನಿತು ಮುನಿದಾಡುವರೆ ಸಾಕಿನ್ನಾರು ಗತಿಯೆನಗೆ
ಅನುದಿನವು ನಾನಿಮ್ಮ, ಪದಯುಗ
ವನಜವನು ಭಜಿಸುವುದ ತೊರೆದೀ
ತನುವ ಸೈರಿಸಲಾಪೆನೇ ಹೇಳೆಂದಳಿಂದುಮುಖಿ॥೨೮

ಕಡೆಗೂ ನಳನು ನಟ್ಟಿರುಳ ರಾತ್ರಿಯಲಿ ಕಾಡಿನ ಮಧ್ಯೆ ದಮಯಂತಿಯನ್ನು ಬಿಟ್ಟು ಹೋಗುವಾಗ ಹತ್ತೆಂಟು ಹೆಜ್ಜೆ ಮುಂದಿಟ್ಟು ನಂತರ ಹಿಂದಿರುಗಿ ಚಂದ್ರ ಬಿಂಬನೆಯನೀಕ್ಷಿಸುತ,

ಅಡಸಿ ಬರೆ ದುಃಖದಲಿ ಮೆಲ್ಲಡಿ
(ಯ)ಡುತ ಸತಿಯನು ನೋಡಿ ಮನದು
ಗ್ಗಡದ ಶೋಕದಿ ನಡೆದ ನಳ ನೃಪನೊಂದುಯೋಜನವ॥

ಇಲ್ಲಿ ನಳ ಮತ್ತು ದಮಯಂತಿಯರ ನಡುವಿನ ಗಾಢವಾದ ದಾಂಪತ್ಯ ಪ್ರೀತಿ ಕಾಡಿನ ನಟ್ಟಿರುಳಲ್ಲಿ ಇಬ್ಬರನ್ನೂ ಅಗಲುವಂತೆ ಮಾಡುತ್ತದೆ. ಆ ಘೋರ ಕಾಡನ್ನು 'ನಳ' ಮತ್ತು 'ದಮಯಂತಿ' ಒಂಟಿಯಾಗಿಯೇ ನಿರ್ಭಯದಿಂದ ಎದುರಿಸುತ್ತಾರೆ. ಇಂತಹ ಚಿತ್ರಣಗಳನ್ನು ಕಾವ್ಯವು ಒಳಗೊಂಡಿರಲು ಬಹು ಮುಖ್ಯ ಕಾರಣ; ಪಶುಪಾಲಕರಲ್ಲಿದ್ದ ನಿರಂತರ ಹೊಂದಾಣಿಕೆ ಮತ್ತು ನಂಬಿಕೆಗಳ ಅನುಭವದ ಪರಿಣಾಮ ಕನಕದಾಸರ ಮೇಲಾಗಿರುವುದರಿಂದ ಎಂದು ಹೇಳಬಹುದು.

ಸದಾ ಅಲೆಮಾರಿ ಬದುಕನ್ನು ಕಟ್ಟಿಕೊಂಡಿದ್ದ ಪಶುಪಾಲಕರು ನಿಂತಲ್ಲಿ ನಿಲ್ಲದೆ, ತಮ್ಮ ಕುರಿ, ದನ, ಮೇಕೆ, ಕತ್ತೆಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಮೇವಿಗಾಗಿ ಸಾಗಿಸುತ್ತಲೇ ಕುಟುಂಬವನ್ನು ಜೊತೆಯಲ್ಲಿಟ್ಟುಕೊಂಡೇ ಜೀವನ ಸಾಗಿಸುತ್ತಾರೆ. ಇಲ್ಲಿನ ನಂಬಿಕೆ, ನಿರ್ಭಯತೆ, ಹೊಂದಾಣಿಕೆಯನ್ನು ಕನಕದಾಸರು ಅಂದಿನ ಪಶುಪಾಲಕರ ಜೀವನ ವಿಧಾನದಿಂದಲೇ ತಿಳಿದುಕೊಂಡಂತೆ ಅಥವಾ ಚಿಕ್ಕವರಿದ್ದಾಗಿನ ನಂಟರ ಮನೆಯಲ್ಲಿ ಕುರಿ ದನಗಳನ್ನು ಕಾಯ್ದಿರಬಹುದಾದ ಅನುಭವವೂ ಇಲ್ಲಿ ಸೇರಿಕೊಂಡಿರಬಹುದು. ಹಾಗಾಗಿ ಕಾವ್ಯದಲ್ಲಿ ಕನಕದಾಸರು ಆಯ್ಕೆ ಮಾಡಿಕೊಂಡಿರುವ ವಸ್ತು ಮತ್ತು ಆಶಯ ಅಂದಿನ ಸಮಕಾಲೀನ ಜೀವನವನ್ನು ಪ್ರತಿನಿಧಿಸುತ್ತದೆ. ಜೊತೆಗೆ ತಾವು ಎದುರಿಸಿದ ಬಿಕ್ಕಟ್ಟುಗಳನ್ನೇ ಅನಾವರಣಗೊಳಿಸುತ್ತದೆ.

ಕನಕದಾಸರ ನಿಸರ್ಗದ ಬಗೆಗಿನ ದೃಷ್ಟಿಕೋನ ಮತ್ತಷ್ಟು ಗಟ್ಟಿಗೊಳ್ಳುವುದು 'ನಳಚರಿತ್ರೆ'ಯ ಕಾಡ್ಗಿಚ್ಚಿನ ಸಂದರ್ಭದಲ್ಲಿ. ಈ ಬಗೆಯ ಎಚ್ಚರಿಕೆಗಳನ್ನು ನಾವು ವರ್ತಮಾನಕ್ಕೂ ಅನ್ವಯಿಸಿಕೊಳ್ಳಬೇಕು. ಆ ಕಾಡ್ಗಿಚ್ಚಿನಿಂದ "ಬನದೊಳಗೆ

ಭಾನುಮಂಡಲವಡರೆ ಮುಸುಕಿದ ಹೊಗೆಯ ಹೋಳು ಕಾನನವನೆಡೆಗೊಂಡು ದಳ್ಳುರಿಯಾಗಲು"

ಬಿದಿರ ಮಳೆ ಧಗಧಗಿಸೆ ಘನಹೆ
ಬ್ಬಿದಿರು ಛಟಛಟಿರೆನಲು ಉರಿಯೊಳು
ಕದಳಿಗಳು ಸಿಮಿಸಿಮಿಸೆ ತರುಗಳನುರುಹಿ ಮೆಳೆಗಳನು
ಗದಗದಿಸೆ ಗುಹೆಗಳಲಿ ಮೃಗತತಿ
ಬೆದರಿ ಹಾಯ್ದವು ಪಕ್ಷಿ ಸಂಕುಲ
ಉದುರಿ ಗರಿಸಹಿತ ಬೆಂದಾ ವನದ ಮಧ್ಯದಲಿ॥,

ತೆಗೆದು ಹಾಯ್ದವು ಸಿಂಹ ಶಾರ್ದೂ
ಲಗಳು ಕರಿಗಳ ಹಿಂಡು ನಾನಾ
ಮೃಗಗಳಿಗಣಿತ ಬೆಂದು ಬಿದ್ದವು ನಿಮಿಷಮಾತ್ರದಲಿ
ಬಿಗಿದು ಹಾಯ್ದವು ಗಂಡ ಭೇರುಂ
ಡಗಳು ಮೊದಲಾದಖಿಳ ಮೃಗಪ
ಕ್ಷಿಗಳು ಕೆಡೆದವು ಕಿಚ್ಚಿನೊಳಗವನೀಶ ಕೇಳೆಂದ॥ [೫೩]

ಪ್ರಕೃತಿಯನ್ನು ತನ್ನ ಬದುಕಿನೊಂದಿಗೆ ಕಂಡುಕೊಂಡಿದ್ದರೆ ಮಾತ್ರ ಕವಿಯೊಬ್ಬನಿಂದ ಇಂತಹ ರಚನೆ ಸಾಧ್ಯವಾಗುತ್ತದೆ. ಪಕ್ಷಿ, ಲತೆ, ಹೂವು, ಆನೆ, ಸಿಂಹ, ಶಾರ್ದೂಲ ಎಂಬಿವುಗಳನ್ನು ನಿಸರ್ಗದ ಕಿರು ಘಟಕಗಳನ್ನಾಗಿ ಕವಿ ತಂದಿರುವುದು ಸಹ ಕವಿಗಿರುವ ಲೋಕ ದೃಷ್ಟಿಯನ್ನು ಸೂಚಿಸುತ್ತದೆ. ಕನಕದಾಸರು ತಾವು ನಾಯಕ(ಮಂಡಲಾಧಿಕಾರಿ) ಆಗಿದ್ದ ಸಂದರ್ಭದಲ್ಲಿ ಬೇಟೆಗಾಗಿ ಕಾಡಿಗೆ ಹೋಗಿ ಬರುತ್ತಿದ್ದುದು, ಜೊತೆಗೆ ಕಾಡಿನ ಅನುಭವಗಳನ್ನು ಗೆಳೆಯರಿಂದಲೂ ಕೇಳಿ ತಿಳಿದುಕೊಳ್ಳುತ್ತಿದ್ದರು. ಬಾಲ್ಯದಲ್ಲಿ ದನಗಾಹಿಯಾಗಿ ಕಾಡಿನ ಸಂಪರ್ಕವನ್ನೂ ಅನುಭವವನ್ನೂ ಪಡೆದಿದ್ದರು. ಹಾಗಾಗಿ ಅಂತರಂಗದ ನೋವುಗಳಿಗೆ ನಿಸರ್ಗ ಸ್ಪಂದಿಸುವ ರೀತಿಯನ್ನು ಬಹು ಸೂಕ್ಷ್ಮವಾಗಿ ಕನಕದಾಸರು ಕಾವ್ಯದ ಮೂಲಕ ತಂದಿದ್ದಾರೆ. ಆದ್ದರಿಂದಲೇ ನಳ ಚರಿತ್ರೆಯನ್ನು ನಿಸರ್ಗದೊಳಗಣ ಸಮುದಾಯದ ಕಥನವನ್ನಾಗಿಯೂ ನೋಡಬೇಕಾಗುತ್ತದೆ.

ನಾಯಕ ಕಾಡಿನಲ್ಲಿರುವಾಗ ಅನೇಕ ವಿಘ್ನಗಳನ್ನು ಎದುರಿಸುತ್ತಲೇ ಪ್ರಾಣಾಪಾಯದಿಂದ ಪಾರಾಗುವುದು, ತಾನು ಮೆಚ್ಚಿದ ನಾಯಕಿಯನ್ನು ನಿಸರ್ಗದ ಮಧ್ಯಸ್ತಿಕೆಯೊಂದಿಗೆ (ಹಂಸ) ಮದುವೆಯಾಗುವುದು, ಒಗಟುಗಳ ಮೂಲಕ ಭಾಗ್ಯ ನಿರ್ಣಯ ಹಾಗೂ ದಂಪತಿಗಳ ಮಿಲನ ಹೀಗೆ ಅಲೌಕಿಕ ಶಕ್ತಿ, ತತ್ವಗಳ ನಂಬಿಕೆಯೊಂದಿಗೆ 'ನಳಚರಿತ್ರೆ'ಯು ರೂಪುಗೊಂಡಿದೆ.

ಹಾಗಾಗಿ ನಳನು ಕಾಡಿನಲ್ಲಿರುವಾಗ ಕಲಿಪುರುಷನ ಉಪಟಳಕ್ಕೆ ಬಲಿಯಾಗಿ ಕಾರ್ಕೋಟಕ ಎಂಬ ವಿಷಸರ್ಪ ಕಚ್ಚುತ್ತದೆ. ಇದರಿಂದಾಗಿ ನಳ,

ದೊಡ್ಡ ಹೊಟ್ಟೆಯ ಗೂನು ಬೆನ್ನಿನ
ಅಡ್ಡ ಮೋರೆಯ ಗಂಟು ಮೂಗಿನ
ದೊಡ್ಡ ಕೈಕಾಲುಗಳ ಉದುರಿದ ರೋಮ ಮೀಸೆಗಳ
ಜಡ್ಡು ದೇಹದ ಗುಜ್ಜು ಗೊರಲಿನ
ಗಿಡ್ಡ ರೂಪಿನ ಹರಕು ಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ॥ ೫೪

ಈ ವರ್ಣನೆ ಬೇಡರು ಹಾಗೂ ಕಾಡುವಾಸಿಗಳ ದೈಹಿಕ ಚಿತ್ರಣವನ್ನು ತಂದುಕೊಡುತ್ತದೆ. ಏಕೆಂದರೆ ಕಾಡಿನಲ್ಲಿ ವಾಸಿಸುವ ಕಾಡುಜನರು ಮನೆಯಿಲ್ಲದೆ, ಮರದ ಪೊದೆ, ಗವಿಗಳಲ್ಲಿ ವಾಸಮಾಡುತ್ತಾ ಕಾಡ್ಗಿಚ್ಚುಗಳಲ್ಲಿ ಒಮ್ಮೊಮ್ಮೆ ಅರೆಬೆಂದವರೂ ಇವರಾಗಿರುತ್ತಾರೆ. ಮಳೆಬಿಸಿಲುಗಳಲ್ಲಿ ತೊಯ್ದು ಒಣಗಿರುತ್ತಾರೆ. ನೋಡಲು ಇವರು ವಕ್ರರೂಪುವುಳ್ಳವರೇ. ಇವರನ್ನು ಬೇಟೆಯ ಸಂದರ್ಭದಲ್ಲಿ ಕನಕದಾಸರು ಕಂಡಿರುತ್ತಾರೆ. ಕಾಡಿನ ಕ್ರಿಮಿ ಕೀಟ ವಿಷಜಂತುಗಳು ಕಚ್ಚುವುದರ ಪರಿಣಾಮವನ್ನೂ ಎದುರಿಸಿರುತ್ತಾರೆ. ಈ ಎಲ್ಲಾ ಚಿತ್ರಣಗಳಿಂದ ಕನಕದಾಸರಿಗೆ ಬೇಟೆಯ ಅನುಭವವಿತ್ತು ಎಂಬುದು ತಿಳಿಯುತ್ತದೆ. ಪಶುಪಾಲಕರು ಮೊದಲು ಬೇಟೆಗಾರರಾಗಿದ್ದರು ಎಂಬುದನ್ನು ಇಲ್ಲಿ ಮರೆಯುವಂತಿಲ್ಲ.

ಇದೆಲ್ಲವನ್ನು ನಳನು "ಮುನ್ನ ಮಾಡಿದ ಕರ್ಮಫಲವೆಂದು ಕೇಳಿನ್ನು ನೋಯಲದೇಕೆ ತಾನೇ ಪಾಪಿಯಾದೆನೆಲ" ಎಂದೂ, ಬಂದದ್ದನ್ನು ಅನುಭವಿಸವುದು ತನ್ನ ಪೂರ್ವಕರ್ಮವೆಂದೂ, ತೀರ್ಮಾನಿಸುತ್ತಾನೆ. ಹೀಗೆ ಭಾವಿಸುವುದು ಕೂಡ ಪರಂಪರೆಯಿಂದ ಬಂದ ಮನುಷ್ಯ ಸಹಜ ಗುಣ ಪ್ರತಿಫಲಿಸಿದಂತಿದೆ. ನಳರಾಜ ಕ್ರೂರ ರೂಪದವನಾದರೂ ಆ ರೂಪವೇ ಆತನನ್ನು ವಜ್ರಾಂಗಿಯನ್ನಾಗಿಸಿ ನಿಗೂಢವಾಗಿಸುತ್ತದೆ. ಕಾಡಿನ ಸಹವಾಸ ಮಾಡಿದವರಿಗೆ ಈ ಸಹಜ ನಿಗೂಢತೆ ಸಾಮಾನ್ಯ ಎಂಬ ಪರಂಪರೆಯ ಅರಿವನ್ನು ಕಾವ್ಯ ನಮ್ಮ ಮುಂದಿಡುತ್ತದೆ.

ಕಾರ್ಕೋಟಕನ ರೂಪದಲ್ಲಿದ್ದ ಕಲಿಪುರುಷನ ಸಲಹೆಯಂತೆ ನಳನು ಋತುಪರ್ಣ ರಾಜನ ರಾಜ್ಯಕ್ಕೆ ದಾರಿ ಹುಡುಕುತ್ತಿರುವಾಗ "ನಳನೃಪತಿ ಕಾನನದಿ ಬರುತಿರೆ ಮಲೆತು ತೊಲಗದ ದುಷ್ಟ ಮೃಗಗಳ ಕಂಡು ನಸುನಗುತ ಹಲವು, ಗಿರಿ, ಗುಹೆ ಗಹ್ವರಂಗಳ ಕಳೆದು ಮುಂದಣ ಜನಪದಂಗಳ ಬಳಿವಿಡಿದು ನಡೆದು ಹೊರಟನು ಹಲವು ಯೋಜನವ" ಎಂದು ಕನಕದಾಸರು ಕಾಡಿನ ಕ್ರೂರ ಮೃಗಗಳು, ಗಿರಿ,

ಗುಹೆ, ಹರಿವ ತೊರೆಗಳನ್ನು ಬಣ್ಣಿಸುತ್ತಲೇ ನಳನನ್ನು ಬಹು ಐಶ್ವರ್ಯದ ಋತುಪರ್ಣನ ಮನೆಗೆ ಕರೆತರುತ್ತಾರೆ.

ಇತ್ತ ಘೋರ ಕಾನನದ ಮಧ್ಯದಲ್ಲಿ, ದಮಯಂತಿ ಗಾಢವಾದ ನಿದ್ದೆಯಲ್ಲಿದ್ದಾಗ ಬೆಳಗಾಗಿ ಸೂರ್ಯ ಪ್ರಭೆ ಮುಖದ ಮೇಲೆ ಬೀಳಲು ನಳಿನಮುಖಿ ದಮಯಂತಿ ಮೈಮುರಿದೆದ್ದು ಪತಿಯ ಕಾಣದೆ ಹಾ ರಮಣಾ, ಎಂದು ಹಂಬಲಿಸುತ್ತಾ, "ಘೋರ ಕಾನನದೊಳಗೆ ನಂಬಿದ ನಾರಿಯನು ಬಿಸುಡುವುದೆ, ನನಗಿನ್ನಾರು ಗತಿ" ಎಂದು ಹಲುಬುತ್ತ ಬಾಯ್ಬಿಡಿದು ಕೂಗುತ್ತಾ ಗಿರಿ, ತರು, ನಿಕರಗಳ ಮಧ್ಯದಲ್ಲಿ ಶೋಕದಲಿ ತಿರುಗುತ್ತಾ,

ಕಾಣಿರೇ ಅರಸಂಚೆಗಳೆ ನೀವ್
ಕಾಣಿರೇ ನಿಜಪತಿಯ ಶುಕ ಪಿಕ
ಕಾಣಿರೆ ಮೃಗ ಪಕ್ಷಿಗಳೇ ನಳ ಚಕ್ರವರ್ತಿಯನು
ಕಾಣಿರೇ ತರುಲತೆಗಳಿನಿಯನ
ಕಾಣಿರೇ ನೀವೆಂದು ಶೋಕ ದೊ
ಳೇಣ ಲೋಚನೆ ಹಲುಬಿದಳು ಹಲವಂಗದಲಿ ಪತಿಯ॥ [೫೫]

ಎಂಬುದಾಗಿ ಹಂಬಲಿಸುತ್ತಾ ಕಾಡಿನ ತರಗೆಲೆಯ ಮೇಲೆ ನಡೆದು ಬರುತ್ತಿದ್ದಾಗ ನಿಗೂಢ ಕಾಡಿನಲ್ಲಿ ಆಕೆ ಮತ್ತೊಂದು ಕಂಟಕವನ್ನು ಎದುರಿಸುತ್ತಾಳೆ.

ತರಳೆ ಕಾಣದೆ ಬರುತ ಮೆಟ್ಟಿದ
ಉರಗಪತಿಯನು ಕೋಪದಲಿ ಮಿಗೆ
ಸುರಿವ ಗರಳದಿ ರೌದ್ರಮಯ ರೂಪಿನಲಿ ಬಾಲಕಿಯ
ತುರುಬಿ ಹಿಡಿದುದು ತವಕದಲಿ ಹಿಮ
ಕರನ ನುಂಗುವ ರಾಹುವಿನ ವೋಲ್
ಅರಸ ಕೇಳಂಗನೆಯ ವಿಧಿಯನು ಹೇಳಲೇನೆಂದ॥[೫೬]

ಹೀಗೆ ದಮಯಂತಿ ಕ್ರೂರ ಸರ್ಪದ ಬಾಯಿಗೆ ಸಿಗುತ್ತಾಳೆ. ಘೋರ ಕಾನನದ ಮಧ್ಯೆ ನನ್ನ ಪ್ರಾಣವನ್ನು ಕಾಪಾಡಿ ಎಂದು ಕೂಗಿ ಕೊಳ್ಳಲಾಗಿ ಕಾಡಿನ ಶಬರನೊಬ್ಬ ಅಲ್ಲಿಗೆ ಬಂದು, ಆ ಲತಾಂಗಿಯನ್ನು ನುಂಗುತ್ತಿರುವ ಹಾವಿನಿಂದ ಬಿಡಿಸಿ, ಆಕೆಯ ರೂಪು ಲಾವಣ್ಯಕ್ಕೆ ಮನಸೋತು ಆ ವ್ಯಾಧ ತನ್ನ ಮದುವೆಯಾಗೆಂದು ಒತ್ತಾಯಿಸುತ್ತಾನೆ. ದಮಯಂತಿಯ ಸೌಂದರ್ಯ ಸಹಜವಾಗಿಯೇ ವ್ಯಾಧನನ್ನು ಕಾಡಿರಬೇಕು. ಇಂತಹ ಚಿತ್ರಣಗಳನ್ನು ಕನಕದಾಸರು ಕೊಡುವುದರ ಮೂಲಕ ಕಾಡಿನ ನಿಗೂಢ ಅನುಭವಗಳನ್ನು ಬೇಟೆಗಾರನಾಗಿ ಪಡೆದಿದ್ದರೆಂದು ತಿಳಿಯುತ್ತದೆ.

ಇದರಿಂದ ಕಾಡಿನ ಪರಿಸರ, ಕನಕದಾಸರ ಮೇಲೆ ಗಾಢವಾದ ಪ್ರಭಾವವನ್ನು ಬೀರಿತ್ತು ಎಂಬುದು ನಮ್ಮ ಅರಿವಿಗೆ ಬರುತ್ತದೆ. ಅಲ್ಲದೆ ಕಾಡಿನೊಳಗಿನ ಕಾಡುವ ಭಾವವನ್ನು ಕಾರ್ಕೋಟಕ, ವ್ಯಾಧ, ಉರಗೇಂದ್ರನ ಮೂಲಕ ಕನಕದಾಸರು ತೋರಿಸಿ ಕೊಡುವುದರೊಂದಿಗೆ ಕಾಡು ಜೀವನದ ದನಗಾಹಿಗಳ ಬದುಕಿನ ಸವಾಲುಗಳನ್ನು ತೆರೆದಿಡುತ್ತಾರೆ.

ನಾವು ಪರಂಪರೆಯಿಂದಲೂ ನಂಬಿಕೊಂಡು ಬಂದಿರುವ ಮನುಷ್ಯನ ಪಾತಿವ್ರತ್ಯವನ್ನು ಕುರಿತು ಕನಕದಾಸರು ಮಾತನಾಡಿದ್ದಾರೆ. ಕಾಡಿನಲ್ಲಿ ನಳಮಹಾರಾಜನನ್ನು ಕಾಣದೆ ಹಂಬಲಿಸುತ್ತಾ ಅಲೆಯುವ ದಮಯಂತಿಯನ್ನು ಕಂಡು ಕಾಡಿನ ಭೂತ ಬೇತಾಳಗಳು, ಕಾಡು ಮೃಗಗಳಾದ ಶರಭ, ಕಾಡಾನೆ, ಸಿಂಹಗಳು ದೂರ ಸರಿಯುತ್ತವೆ. ಈ ಮೂಲಕ ಜನಪದರು ಅತ್ಯಂತ ಹೆಚ್ಚು ಬೆಲೆ ಕೊಡುತ್ತಿದ್ದ ಮನುಷ್ಯನ ಶೀಲವಂತಿಕೆ ಕನಕದಾಸರ ಕಾವ್ಯದಲ್ಲಿಯೂ ಶ್ರೇಷ್ಠತೆಯ ನೆಲೆ ಪಡೆದಿದೆ. ಇದು ಕನಕದಾಸರಿಗಿದ್ದ ಸಂಪ್ರದಾಯದ ಅರಿವನ್ನು ಪ್ರತಿನಿಧಿಸುತ್ತದೆ. ಕಾಡು ಎಂದಾಕ್ಷಣ ಅದು ರಣ, ರುದ್ರ, ಭೂತ, ಬೇತಾಳ, ಹುಲಿ, ಸಿಂಹ, ಕಾರ್ಕೋಟಗಳಷ್ಟೇ ಅಲ್ಲ, ಅಲ್ಲಿಯೂ ಶಾಂತಿ, ಕರುಣೆ, ದಯೆ ಮೂಲದ ಋಷಿಮುನಿಗಳಿರುತ್ತಾರೆ. ಪತಿಯಿಂದ ದೂರವಾಗಿ ಘೋರ ಕಾನನದಿ ಬಿಸುಸುಯ್ದು, ಅಲೆ ಅಲೆಯುತ್ತಲೆ ದಮಯಂತಿ, ಮುನಿಗಳ ತಪೋವನಕ್ಕೆ ಬರುತ್ತಾಳೆ. ಮರುಭೂಮಿಯಲ್ಲಿನ ಓಯಸಿಸ್‌ನಂತೆ ಕನಕದಾಸರ ಅತಃಕರಣ. ಹಾಗಾಗಿ ಕಡು ನೋವಿನಿಂದ ಬೆಂದ ಹೃದಯಕ್ಕೆ ಸಾಂತ್ವನ ಹೇಳುವಂತೆ ಮುನಿವರ್ಯರನ್ನು ದಮಯಂತಿಯಿಂದ ಭೇಟಿ ಮಾಡಿಸುತ್ತಾರೆ. ಹೀಗೆ ಆಶ್ರಮಕ್ಕೆ ಬಂದ ದಮಯಂತಿಯನ್ನು ಕಂಡ ಮುನಿಗಳು,

> ತಾಯೆ ಶೋಕದಿ
> ಕನಲಿ ಕಂಗೆಡಬೇಡ ನಿಜಪತಿ ರಾಜ್ಯ ಸಿರಿ ಸುತರು
> ನಿನಗೆ ಬಂದಪರಿನ್ನು ಯೋಗದ
> ಮನದಲರಿದೆವು ನಾವು ಅಂಜದಿ
> ರೆನುತ ಪೇಳಿಯ ದೃಶ್ಯವದನು ಮುನಿಗಳೊಗ್ಗಿನಲಿ॥

ಎಂದು ಹೇಳುವುದರ ಮೂಲಕ ಇಡೀ ಕತೆಯ ನಿರ್ಣಾಯಕ ಘಟ್ಟವನ್ನು ಕಾಡಿನಲ್ಲಿಯೇ ಓದುಗರಿಗೆ ಕನಕದಾಸರು ನೀಡಿದ್ದಾರೆ. ಅಂದರೆ ಕುರಿಗಾಹಿ ಸಂಪ್ರದಾಯದವರು ತಮ್ಮ ಅಲೆಮಾರಿತನದ ವೃತ್ತಿಯ ಜೀವನವನ್ನು ಈ ತರಹದ ಆಶಾಭಾವನೆಯಿಂದಲೇ ಕಟ್ಟಿಕೊಂಡಿರುತ್ತಾರೆ ಎಂಬ ಅನುಭವ ಕನಕದಾಸರಿಗಿತ್ತೆಂಬುದು ಇದರಿಂದ ತಿಳಿಯುತ್ತದೆ. ಮುಂದೆ ದಮಯಂತಿಯು

ಕಾಡಿನ ಋಷಿಮುನಿಗಳ ಆಶೀರ್ವಾದವನ್ನು ಪಡೆದು ಕಾತರದಿ ಪತಿಯನುಡುಕುತ ಬರುತ್ತಿರಲು ಆ ಕಾಡುದಾರಿಯಲ್ಲಿ ವೈಶ್ಯರನ್ನು(ವ್ಯಾಪಾರಿಗಳು) ಕಂಡು ತನ್ನ ಪರಿಚಯ ಮಾಡಿಕೊಳ್ಳುತ್ತ ಊರ ದಾರಿಯನ್ನು ತೋರಬೇಕೆಂದು ಅವರಲ್ಲಿ ಬೇಡಿಕೊಳ್ಳುತ್ತಾಳೆ. ಆದರೆ ಆ ವ್ಯಾಪಾರಿಗಳಾದರೋ ಆ ಮಾತನ್ನು ನಂಬದೆ ತಮ್ಮ ಸಹಜ ಹೆದರಿಕೆಯ ಗುಣದಿಂದ ಈಕೆಯನ್ನು ಕಂಡು,

ಆರಿವಳು ವನಲಕ್ಷ್ಮಿಯೋ ಶುಕ
ನಾರಿಯೋ ಮಾಯಾಂಗನೆಯೋ ಮದ
ನಾರಿ ಸತಿಯೋ ಸರಸತಿಯೋ ಮೇಣು ಸುರಮಾನಿನಿಯೋ
ಆರ ವನಿತೆಯೊ ಮಾಯಾರೂಪಿನ
ಭೂರಿ ಭೂತವೊ ತಿಳಿಯಲರಿದಿವ
ಳಾರೆನುತ ಭಯಗೊಂಡು ಓಡಿದರಲ್ಲಿ ಬಣಜಿಗರು॥ [೫೭]

ಹೀಗೆ ಕಾಡು ಜೀವನ ಅಡಿಗಡಿಗೂ ಕಷ್ಟವನ್ನೇ ತಂದು ಕೊಡುತ್ತದೆ ಎಂಬುದನ್ನು ನಳ–ದಮಯಂತಿಯರ ಪಾತ್ರದ ಮೂಲಕ ಪರಿಚಯಿಸುತ್ತಾರೆ. ಅಷ್ಟೇ ಅಲ್ಲ, ಈ ವ್ಯಾಪಾರಿಗಳು ತನ್ನ ನಂಬುವಂತೆ ಪರಿಚಯಿಸಿಕೊಂಡು ಅವರ ಜೊತೆಯಲ್ಲಿ ರಾತ್ರಿ ಹಗಲೆನ್ನದೆ ಊರ ದಾರಿ ಕಾಣುತ್ತಾ ಕಾಡಿನ ಮಧ್ಯೆ ನಡೆದು ಬರುತ್ತಿರಲು ಈ ಗುಂಪಿನ ಮೇಲೆ ಮತ್ತೆ ನಿಗೂಢ ಕಾಡಿನ ಪರಿಣಾಮ ಎದುರಾಗುತ್ತದೆ.

ದಮಯಂತಿ ಇದ್ದ ವ್ಯಾಪಾರಿ ಗುಂಪಿನ ಮೇಲೆ ಕಾಡಾನೆಗಳು ಆಕ್ರಮಣ ಮಾಡಿದುದರ ಚಿತ್ರಣವನ್ನು; ಕನಕದಾಸರು ತಮ್ಮ ಸೈನ್ಯಕ್ಕೆ ಆನೆಗಳನ್ನು ಹಿಡಿದು ತರುವುದಕ್ಕಾಗಿ ಕಾಡಿಗೆ ಹೋಗುತ್ತಿದ್ದ ಸಂದರ್ಭದಲ್ಲಿ, ಅಲ್ಲಿ ಆನೆಗಳ ಹಿಂಡನ್ನು ಕಂಡು, ಅವುಗಳನ್ನು ಬೆಂಬತ್ತಿ ಹಿಡಿದು ಪಳಗಿಸುವಾಗ ತಮಗಾಗುತ್ತಿದ್ದ ಅನುಭವವನ್ನು ಕಾವ್ಯದ ಈ ಸಂದರ್ಭದಲ್ಲಿ ಬಳಸಿಕೊಂಡಿದ್ದಾರೆ. ಕಾಡಾನೆಗಳು ಮಡುವಿಗೆ ತವಕದಿಂದ ನೀರಡಿಸಿ ಬರುತ್ತಾ,

ಮುರಿದು ತರುಗಳನಿಡುತ ಮೆಳೆಗಳ
ನೊರಸಿ ಮುಟ್ಟುತ ಕೋಡಿನಲಿ ಬಲು
ಮೊರಡಿಗಳ ಕಿತ್ತಿಡುತ ಸೊಂಡಿಲ ತೂಗಿ ಮದವೇರಿ
ಕರಿಗಳೈತರ ಕಂಡು ಭೀತಿಯೊ
ಳಿರದೆ ಹಾಯ್ದರು ಕೆಲವು ಧೈರ್ಯದೊ
ಳುರುಬಿ ನಿಂದರು ಸಬಳದಲಿ ಹೊಕ್ಕೆಂದು ಕಾದಿದರು॥ [೫೮]

ಹಾಗೂ ಈ ಕಾದಾಟದಲ್ಲಿ ಮದಕರಿಗಳು ತಮ್ಮನ್ನು ಸೀಳುವುದನ್ನು ತಾಳಲಾರದೆ

ಓಡತೊಡಗಿದವು. ಇಲ್ಲೆಲ್ಲಾ ಕಾಡಿನ ಸಹವಾಸದಿಂದ ಒದಗಬಹುದಾದ ಕ್ಷಣಕ್ಷಣದ ವರದಿಯೊಟ್ಟಿಗೆ, ಕಾಡು ಜೀವನದ ಅನಿಶ್ಚಯ ಸ್ಥಿತಿಯನ್ನು ಕಾವ್ಯ ಕಟ್ಟಿ ಕೊಡುತ್ತದೆ. ಕಾಡು ಅದರ ಗುಣವೇ ಕಾಡುವುದು ಎಂಬ ಅನುಭವ ಕನಕದಾಸರಿಗೆ ತಮ್ಮ ಜೀವಿತದ ಸಂದರ್ಭದಲ್ಲಿ ಪದೇ ಪದೇ ಆಗಿರಲೇಬೇಕು ಎಂಬುದನ್ನು ಈ ಸಂದರ್ಭ ಪ್ರತಿಬಿಂಬಿಸುತ್ತದೆ. ಹಾಗೆಯೇ ನಳಚರಿತ್ರೆಯಲ್ಲಿ ಬರುವ ಪಕ್ಷಿ ಪಾತ್ರಗಳು ಕಾವ್ಯದ ಹೊಸದೊಂದು ತಿರುವಿಗೆ ಕಾರಣವಾಗುತ್ತದೆ. ಪಾಲನಾ ಸಂಸ್ಕೃತಿಯ ನೆರಳು, ಕನಕದಾಸರಲ್ಲಿ ಇರುವುದರಿಂದಲೇ ಕಾವ್ಯದಲ್ಲಿನ ಬೇಟೆಯ ಸಂದರ್ಭದಲ್ಲಿ ಎದುರಾಗುವ ಪಕ್ಷಿಗಳನ್ನು ಕೊಲ್ಲುವುದೇ ಇಲ್ಲ. ಒಮ್ಮೆ ನಳ ಮಹರಾಜನು ಬೇಟೆಯಾಡಲು ಸೈನ್ಯದೊಂದಿಗೆ ಕಾಡಿಗೆ ಬಂದು ವನವೆಲ್ಲಾ ಬೆರಗಾಗುವಂತೆ ಬೇಟೆಯಲ್ಲಿ ತೊಡಗಿ ಆಯಾಸಗೊಂಡು ವಿರಮಿಸಿಕೊಳ್ಳಲು ಹತ್ತಿರದ ಉದ್ಯಾನವನದ ಕೊಳವೊಂದರ ಬಳಿ ಬಂದಾಗ, ಅಲ್ಲಿ ಶುಭ್ರತೇಜದ ರಾಜಹಂಸವನ್ನು ಕಾಣುತ್ತಾನೆ. ಮೆಲ್ಲನೆ ರಾಜ ಕರವ ನೀಡುತ ರಾಜ ಹಂಸವನ್ನು ಹಿಡಿದುಕೊಳ್ಳುತ್ತಾನೆ. ಆಗ ರಾಜಹಂಸವು,

ಒದರಿ ಕುಣಿಯಲು ಹಸ್ತದೊಳಗದ
ಕಡಲಹಸಿರೆ ಪಿಡಿಯಲರಸನ
ವದನ ಕಮಲವ ನೋಡಿ ಹೆದರಿತು ಬಹಳ ಭೀತಿಯಲಿ
ಹೃದಯ ಕರಗುತ ಮಾತನೆಂದುದು
ಮದಕರಿಗೆ ಮೊರಜಂತರವೆ ಕೈ
ಸದರದವನು ಕೊಲ್ಲುವುದೇನರಿದೆಂದುದಾ ಪಕ್ಷಿ॥ [೫೯]

ಕರಿಗಳನ್ನು ಮುರಿದಿಡುವ ಸಿಂಹಕ್ಕೆ ನರಿಗಳಿದಿರೇ, ಅರಿ ಭಯಂಕರರಾದ ನಿಮಗೆ ಇದು ತರವಲ್ಲ ಪರಹಿಂಸೆ ದೋಷವೆಂದುದಾ ಪಕ್ಷಿ'

ಮರನ ಹುತ್ತವ ನೇರಿದವರ ಸಂ
ಗರದಿ ಧೈನ್ಯಂ ಬಡುವರಾಯುಧ
ಮುರಿದ ಬರಿಗೈಯವರ ನೀರೊಳು ಹೊಕ್ಕು ನಿಂದವರ
ತರುಣಿಯರ ಮರೆಗೊಂಡವರ ನಿ
ಬ್ಬರದಿ ಮುರಿದೋಡುವವರ ನಿದ್ರಾ
ಭರದೊಳೆರ್ದರ ಕೊಲುವುದುಚಿತವೆ ಎಂದುದಾ ಪಕ್ಷಿ॥ [೬೦]

ಹಂಸದ ನುಡಿಗೆ ರಾಜನು ಮೆಚ್ಚಿ ರಾಜಹಂಸವನ್ನು ಕೊಲ್ಲದೆ ಬಿಡುತ್ತಾನೆ. ಹಂಸ ತನ್ನ ಪ್ರಾಣ ಉಳಿಸಿದ್ದಕ್ಕಾಗಿ ದಮಯಂತಿಯನ್ನು ನಳ ಮಹಾರಾಜನೊಂದಿಗೆ ವಿವಾಹ ಮಾಡಲು ದ್ಯೂತನಾಗಿ ಪ್ರತ್ಯುಪಕಾರವೆಸಗುತ್ತದೆ.

ಈ ಸನ್ನಿವೇಶದಲ್ಲಿ ಹಂಸಪಕ್ಷಿ ಸದ್ದಿಲ್ಲದೇ ನಳನನ್ನು, ಆತನ ಅಧಿಕಾರವನ್ನು ಪ್ರಶ್ನಿಸಿದೆ. ಕನಕನ ಲೋಕ ಗ್ರಹಿಕೆಯನ್ನು ಮೆಚ್ಚುವುದೇ ಇಂತಹ ಕಡೆಗಳಲ್ಲಿ. ಪರಿಸರದ ಮೇಲೆ, ಅಸಹಾಯಕರ ಮೇಲೆ, ಬಡವರ ಮೇಲಾಗುವ ಯಜಮಾನ್ಯ ಮತ್ತು ಪ್ರಭುತ್ವದ ಸವಾರಿಯನ್ನು ಹಂಸ ಪಕ್ಷಿ ವಿರೋಧಿಸುತ್ತದೆ. ಕೊಲ್ಲುವುದಾಗಲಿ, ಪರಹಿಂಸೆ ಮಾಡುವುದಾಗಲಿ ಇದು ದೋಷ. ಪಕ್ಷಿಯ ಈ ಮಾತುಗಳೆಲ್ಲ ನೃಪನಿಗೆ ಏಟು ಕೊಡುವ ಮಾತುಗಳಂತಿವೆ. ಜನಸಾಮಾನ್ಯರ ಬದುಕನ್ನು ಕನಕದಾಸರು ಅರ್ಥಮಾಡಿಕೊಂಡಿದ್ದರಿಂದ ಈ ಬಗೆಯ ದಯೆ ಮತ್ತು ಅನುಕಂಪ ಕಟ್ಟಲು ಸಾಧ್ಯವಾಗಿದೆ. ಹಂಸ ಪಕ್ಷಿಯು 'ನಿಮಗೆ ಮಾತ್ರ ಕುಟುಂಬವಲ್ಲದೆ ನಮಗೂ ಇದೆ' ಎನ್ನುವ ಮಾತು ಲೋಕದೃಷ್ಟಿಯ ಅಭಿವ್ಯಕ್ತಿಯಾಗಿದೆ. ದುರ್ಬಲರ ಮೇಲೆ, ಸಾಮಾನ್ಯರ ಮೇಲೆ, ಕೆಳವರ್ಗದವರ ಮೇಲೆ; ಪೊಡವಿ ಪತಿ ಹಾಗೂ ಉಳ್ಳವರು, ಮೇಲ್ಜಾತಿಯವರು ಮೊದಲಿನಿಂದಲೂ ಮಾಡಿಕೊಂಡು ಬರುತ್ತಿದ್ದ ಆಕ್ರಮಣದ ಅನುಭವವನ್ನು ಸ್ವತಹ ಕನಕದಾಸರೂ ಅನುಭವಿಸಿದ್ದರು.[೬೧] ಆದ್ದರಿಂದಲೇ ಪ್ರಸ್ತುತ ಸನ್ನಿವೇಶದಲ್ಲಿ ಕನಕದಾಸರ ದೃಷ್ಟಿ, ಸಾಮಾನ್ಯರ ಕಡೆಗೆ ಒಲಿಯಲು ಅವರಿಗಿದ್ದ ಪರಂಪರೆಯ ಜ್ಞಾನವೇ ಕಾರಣವೆನ್ನಬಹುದು. ಅಲ್ಲದೆ ಪಶು, ಪಕ್ಷಿ, ದನ, ಕರು. ಇತರ ಪ್ರಾಣಿಗಳನ್ನು ಸಾಕುವ ಪಶುಪಾಲಕರು ತಮ್ಮ ಈ ಪ್ರಾಣಿಗಳ ಮೇಲಿನ ಅಧಮ್ಯ ಪ್ರೀತಿಯ ಪಾಲನೆಯೊಂದಿಗೆ ಪ್ರಾಣಿ ಪಕ್ಷಿಗಳು ಮಾತನಾಡುತ್ತವೆ ಎಂದೇ ಭ್ರಮಿಸಿರುತ್ತಾರೆ. ಇಂತಹ ಅನುಭವ ತಮ್ಮ ಸುತ್ತಲ ಪರಿಸರದಲ್ಲಿ ಬಹು ಹತ್ತಿರದಿಂದ ಕನಕದಾಸರ ಮೇಲಾಗಿರುತ್ತದೆ. ಆದುದರಿಂದಲೇ ಕನಕದಾಸರು ಹಂಸ ಪಕ್ಷಿಯನ್ನು ಮಾತನಾಡಿಸುತ್ತಾರೆ.

ಕಲಿಪುರುಷನು ಪುಷ್ಕರನ ನೆರವು ಪಡೆದು, ನಳರಾಜನೊಂದಿಗೆ ಜೂಜನ್ನಾಡಿಸಿ ರಾಜ್ಯ ಕೋಶಗಳನ್ನೆಲ್ಲವನ್ನೂ ಕಸಿದುಕೊಳ್ಳುತ್ತಾನೆ. ಆಗ ನಳನು ತನ್ನ ಮಕ್ಕಳನ್ನು ಮಾವನ ಮನೆಗೆ ಕಳುಹಿಸಿ, ದಮಯಂತಿಯೊಡನೆ ಕಾಡಿಗೆ ಬರುತ್ತಾನೆ. ಇಲ್ಲಿಂದ ಮುಂದೆ ನಳ ಮತ್ತು ದಮಯಂತಿಯರಿಗೆ ಬರುವ ಕಷ್ಟಗಳು ಇವರನ್ನು ಪರೀಕ್ಷಿಸಲೆಂದೇ ಬಂದತಹುಗಳಾಗಿವೆ. ಕಾಡಿನಲ್ಲಿ ಬರುತ್ತಿರುವಾಗ ಜಗನ್ಮೋಹನ ಪಕ್ಷಿಗಳು ಧರೆಗಿಳಿಯುತ್ತಿರುವುದನ್ನು ಕಂಡ ನಳ ಅವುಗಳನ್ನು ಹಿಡಿಯಲು (ಇದು ರಾಜ ಬೇಟೆಗಾರನಾಗಿದ್ದು, ಆತನ ಚಂಚಲ ಮನಸ್ಸನ್ನು ಸೂಚಿಸುತ್ತದೆ.) ತನ್ನ ಹಚ್ಚಡವನ್ನು ಬೀಸುವನು. ಆ ಪಕ್ಷಿಗಳು ಅದನ್ನು ಆಕಾಶಕ್ಕೇ ಕೊಂಡೊಯ್ದು "ನಿರಂತರ ರಾಜ್ಯ ಭೋಗವನು ಬೇಗದಿಂದ ಪರಹರಿಸಿಕೊಂಡವರೀಗ ವಾವಿದನರಿದಿರೆಂದು ಸರಾಗದಿಂದಲಿ" ಎಂದು ಕೂಗಿ ಹೇಳಿ ಮಾಯವಾದವು. ಇಲ್ಲಿಯೂ ಕೂಡ ಕನಕದಾಸರು ಮೂಕ ಪಕ್ಷಿಗಳನ್ನು ಮಾತನಾಡಿಸಿದ್ದಾರೆ.

ಇಂತಹ ಕಥೆಗಳಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ,

ದನಗಾಹಿಗಳು, ಬೇಟೆಗಾರರು, ಕೃಷಿಕರು ತಾವಿರುವ ಸುತ್ತಲ ಪರಿಸರದಲ್ಲಿನ ಪ್ರಾಣಿಪಕ್ಷಿಗಳ ಕೂಗನ್ನು ತಮ್ಮ ವೃತ್ತಿ ಮತ್ತು ಜೀವನಕ್ಕೆ ಸಂದೇಶವಾಗಿ ತೆಗೆದುಕೊಳ್ಳುತ್ತಾರೆ. ಇಂತಹ ಅನುಭವಗಳು ಕನಕದಾಸರ ಮೇಲೂ ಪ್ರಭಾವಬೀರಿ ಮೂಕ ಪಕ್ಷಿಗಳನ್ನು ಮಾತನಾಡಿಸುವಂತೆ ಮಾಡಿ ಮುಂದೆ ನಳಮಹಾರಾಜನಿಗೆ ಒದಗಬಹುದಾದ ಕಷ್ಟವನ್ನು ನಿವೇದಿಸುವಂತೆ ಈ ಜಗನ್ಮೋಹನ ಪಕ್ಷಿಗಳು ಕಂಡುಬರುತ್ತವೆ.*೧

ಕನಕದಾಸರು ನಿಸರ್ಗದ ಭಾಗವಾದ 'ಜಲ'ವನ್ನು ಕಾವ್ಯದ ಚಲನೆಯಲ್ಲಿ ಬಳಸಿಕೊಳ್ಳುತ್ತಾರೆ. ಪಶುಪಾಲಕರಿಗಂತೂ ನೀರು ಅಮೂಲ್ಯ ಹಾಗೂ ಪವಿತ್ರ. ಇಂತಹ ಅನುಭವದ ಸಂಬಂಧ ಕನಕದಾಸರಿಗೆ ಇದ್ದುದರಿಂದಲೇ ಕಾವ್ಯದಲ್ಲಿ ನದಿ, ತೊರೆ, ಹಳ್ಳ, ಕೊಳ್ಳಗಳನ್ನು ಕಥಾವಸ್ತುವಿನೊಂದಿಗೇ ತರುತ್ತಾರೆ. ಕಾವ್ಯದಲ್ಲಿ ನಳನು ಮೂತ್ರವಿಸರ್ಜನೆ ಮಾಡಿ ಶುದ್ಧಾಚಮನ*೨ ಮಾಡದೇ ನೀರು ಕುಡಿಯಲಾಗಿ ಆತನ ಬಾಳಿನಲ್ಲಿ ಕಲಿಪುರುಷನ ಪ್ರವೇಶವಾಗುವುದರೊಂದಿಗೆ ನಳನ ಕಷ್ಟಪರಂಪರೆಯು ಪ್ರಾರಂಭವಾಗುತ್ತವೆ. ನೀರನ್ನು ಪವಿತ್ರ, ಶುದ್ಧ, ಪೂಜನೀಯ ಎಂದು ಪಶುಪಾಲಕರು ಪರಿಭಾವಿಸುವ ತಿಳಿವನ್ನು ಪ್ರಸ್ತುತ ಕಾವ್ಯದಲ್ಲಿ ಕನಕದಾಸರು ಸೃಷ್ಟಿಸಿದ್ದಾರೆ.

ಪಶುಪಾಲನೆಗೆ ನಿಸರ್ಗವೇ ಮೂಲ. ಇಲ್ಲಿನ ಗಿಡ, ವನ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ನದಿ, ತೊರೆ, ಪಕ್ಷಿ ಸಂಕುಲದೊಟ್ಟಿಗೆ ಇವರ ಬದುಕು ಪ್ರತಿಸ್ಪಂದಿಸುತ್ತಲೇ ರೂಪುಗೊಳ್ಳುತ್ತದೆ. ಇದನ್ನು ಬಿಟ್ಟು ಪಶುಪಾಲನೆ ಇಲ್ಲವೇ ಇಲ್ಲ. ಹಾಗಾಗಿ ಮಧ್ಯಕಾಲೀನ ಯುಗದ ಕನಕದಾಸರಿಗೆ, ಸಮಕಾಲೀನ ಸಮಾಜದ ಪಶುಪಾಲನೆಯ ಅನುಭವ ಇದ್ದುದರಿಂದಲೇ ನಳ ಚರಿತ್ರೆ ಕಾವ್ಯದ ಮೇಲೆ ಇದರ ಪ್ರೇರಣೆ ಮತ್ತು ಪ್ರಭಾವ ಉಂಟಾಗಿರುವುದು ತಿಳಿದುಬರುತ್ತದೆ.

ನಳಚರಿತ್ರೆ ಯಲ್ಲಿ ಬರುವ 'ಪ್ರಭುತ್ವ' ಬಹುಸಂಖ್ಯಾತರ ಒಪ್ಪಿಗೆ, ಭಾಗವಹಿಸುವಿಕೆ, ಹಾಗೂ ಸಾರ್ವಜನಿಕ ಜವಾಬ್ದಾರಿಯಿಂದ ಕೂಡಿದ ವ್ಯವಸ್ಥೆ.*೩ ಅದು ಮಾನವಾತೀತವಾದ ಕಲ್ಪಿತ ಅಧಿಕಾರವಂತು ಅಲ್ಲವೇ ಅಲ್ಲ. ಈ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಕನಕದಾಸರ ನಳಚರಿತ್ರೆಯನ್ನು ಗಮನಿಸಿದಾಗ ಇಲ್ಲಿನ

---

*೧ ಕೃಷಿ, ದನ,ಕರು, ಕುರಿಪಾಲಕರು ಈಗಲೂ ಕೋಳಿಕೂಗುವುದು, ಜಾವದ ಹಕ್ಕಿ ಕೂಗುವುದು, ನಾಯಿ ಕೂಗುವುದು, ಹಲ್ಲಿ ಲೊಚಗುಟ್ಟುವುದು, ಹಾಗೂ ಗೂಬೆ, ಕಾಗೆ, ಹಸು ಕೂಗುವುದನ್ನು ಒಂದೊಂದು ಅರ್ಥದ ಸಂದೇಶವಾಗಿ ಗ್ರಹಿಸುವುದನ್ನು ಕಾಣುತ್ತೇವೆ.

*೨ ಸಂಧ್ಯಾವಂದನೆ ಮುಂತಾದ ವೈದಿಕ ಕರ್ಮಗಳನ್ನು ಮಾಡುವ ಸಮಯದಲ್ಲಿ ಶುದ್ಧಿಗಾಗಿ ಅಂಗೈ ಗುಳಿಯಲ್ಲಿ ಶುದ್ಧೋಧಕವನ್ನು ಮಂತ್ರ ಪೂರ್ವಕವಾಗಿ ಕುಡಿಯುವುದು.

ಪೂರ್ಣ ಕಥೆಯ ಸಂದರ್ಭದಲ್ಲಿ ಬರುವ 'ಪ್ರಭುತ್ವ' ಒಂದು ಗಳಿಗೆಯಲ್ಲಿ ಸಾಮಾನ್ಯತ್ವಕ್ಕೆ ಜಿಗಿದು, ಮತ್ತೆ ಸಾಮಾನ್ಯತೆಯ ಕಡೆಯಿಂದ ರಾಜತ್ವಕ್ಕೆ ಪಲ್ಲಟವಾಗುವಂತೆ ಕಂಡು ಬರುತ್ತದೆ. ಅಂದರೆ ನಳಚಕ್ರವರ್ತಿಯನ್ನು ಕಾರ್ಕೋಟಕ ಸರ್ಪ ಕಚ್ಚಿದಾಗ ಆತ ಅನುಭವಿಸಿದ ಪಾಡು ಸಾಮಾನ್ಯ ಮನುಷ್ಯನದೇ. ಆದರೆ ಸರ್ಪ ಕಚ್ಚಿದ ನಂತರ ನಳನ ವಿರೂಪಗೊಂಡ ಶರೀರವೇ ಆತನ ಪ್ರಭುತ್ವವನ್ನು ಕಾಯ್ದು ಮತ್ತೆ ನಳನಿಗೆ ಪ್ರಭುತ್ವ ದೊರೆಯುವಂತೆ ಮಾಡುತ್ತದೆ. ಜೊತೆಗೆ ನಳ ದಮಯಂತಿಯರು ಕಾಡಿನಲ್ಲಿ ಇರುವವರೆಗೂ ಬುಡಕಟ್ಟು ಜನರ ಲಕ್ಷಣಗಳನ್ನು ಅನುಭವಿಸುತ್ತಾರೆ. ಹಾಗಾಗಿ ಸಾಮಾನ್ಯತೆ ಮತ್ತು ರಾಜತ್ವ ಇದರಿಂದ ಮತ್ತಷ್ಟು ಗಟ್ಟಿಯಾಗಿ ಮೂಡಿ ಬಂದಿದೆ. ನಳಚರಿತ್ರೆಯ ಕಾವ್ಯದಲ್ಲಿರುವ ಇಂತಹ ಸಂದರ್ಭಗಳ ಮೂಲಕವೇ ಪಶುಪಾಲನಾ ಸಂಸ್ಕೃತಿಯ ಎಳೆಗಳನ್ನು ಗುರುತಿಸಬಹುದಾಗಿದೆ. ಅಂದರೆ ಪಶುಪಾಲಕರಲ್ಲಿ ನಾಯಕನಿದ್ದರೂ ಆತ ಸಾಮಾನ್ಯರಲ್ಲಿ ಸಾಮಾನ್ಯನಾಗಿರುತ್ತಾನೆ. ಕುರಿ, ದನ, ಕರು ಹಸುಗಳನ್ನು ಎಲ್ಲರಂತೆಯೇ ಕಾಯುತ್ತಾನೆ. ಸಮೂಹದೊಂದಿಗೆ ನಿಂತಲ್ಲಿ ನಿಲ್ಲದೆ ಪ್ರಕೃತಿಯ ಸವಾಲುಗಳನ್ನು ಎದುರಿಸುತ್ತಾನೆ.(ನೋಡಿ ಅಧ್ಯಾಯ-೩ರ ಜುಂಜಪ್ಪನ ಮಹಾಕಾವ್ಯ) ಈತ ಯಾವಾಗಲೂ ಸಮುದಾಯ ಮತ್ತು ತನ್ನೊಡನಿರುವ ಸಮುದಾಯ ಮತ್ತು ಪ್ರಾಣಿ ಸಮೂಹದ ಏಳಿಗೆಗಾಗಿಯೇ ಶ್ರಮಿಸುತ್ತಿರುತ್ತಾನೆ. ಇಂತಹ ಸಂಸ್ಕೃತಿಯ ಅರಿವು ಹೊಂದಿದ್ದ ಕನಕದಾಸರು ಸಹಜವಾಗಿಯೇ ಕಾವ್ಯದೊಳಗೆ ಪ್ರಭುತ್ವವನ್ನು ಪ್ರಭಾವಯುತವಾಗಿ ತರುತ್ತಾರೆ.

ಪ್ರಭುವಾದ ನಳ ಬೇಟೆಗೆ ಹೋದ ಸಂದರ್ಭದಲ್ಲಿನ ವಿಶ್ರಾಂತಿಯ ಸಮಯದಲ್ಲಿ, ಉದ್ಯಾನವನದಲ್ಲಿ ಕಂಡ ರಾಜಹಂಸವನ್ನು ಹಿಡಿದುಕೊಂಡಾಗ, ಹಂಸ ಪಕ್ಷಿ 'ನಮ್ಮಂತಹ ಸಾಮಾನ್ಯರನ್ನು ಕೊಲ್ಲಲು ನಿಮ್ಮಂತಹ ವೀರರಿಗೆ ನಾಚಿಕೆಯಾಗುವುದಿಲ್ಲವೆ? ನಿಮಗೆ ಮಾತ್ರ ಕುಟುಂಬವಲ್ಲದೆ ನಮಗೂ ಇದೆ" ಎಂಬ ಹಂಸ ಪಕ್ಷಿಯ ಮಾತುಗಳಲ್ಲಿ ಪ್ರಭುತ್ವದ ಸವಾರಿಯನ್ನು ಪ್ರಶ್ನಿಸುವ, ವಿರೋಧಿಸುವ ಧ್ವನಿ ಇದೆ.[೬೩] ಏಕೆಂದರೆ ಸಾಮಾನ್ಯರ ಬದುಕನ್ನು ಅನುಭವಿಸಿ, ಅರ್ಥ ಮಾಡಿಕೊಂಡ ಕನಕದಾಸರಂಥವರಿಗೆ ಮಾತ್ರ ಈ ರೂಪದ ಕಥನ ಕಟ್ಟಲು ಸಾಧ್ಯವಾಯಿತೆನ್ನಬಹುದು. ದಮಯಂತಿ ರಾಣಿಯಾದರೂ ಮನುಷ್ಯನ ನೆಲೆಯಲ್ಲಿ ಸಾಮಾನ್ಯತೆಯ ಚೌಕಟ್ಟಿನಲ್ಲಿ ಬರುತ್ತಾಳೆ. ಆಕೆಯ ಸೌಂದರ್ಯ ಪ್ರಭುತ್ವದ ಸಂಕೇತವಾದ ಇಂದ್ರನ ತಲೆಕೆಡಿಸುತ್ತದೆ. ದಮಯಂತಿಯನ್ನು ಹೇಗಾದರೂ ಮಾಡಿ ಪಡೆಯಬೇಕೆಂಬ ಬಯಕೆ ಅವನನ್ನು ಕಾಡುತ್ತದೆ. ಈ ಹಿನ್ನೆಲೆಯಲ್ಲಿ ಕನಕದಾಸರು ಪ್ರಭುತ್ವ ಮತ್ತು ಸಾಮಾನ್ಯತೆಯ ಎರಡರ ಅನುಭಾವವನ್ನು ತಾವು ಅನುಭವಿಸಿ ಮುಖಾಮುಖಿಯಾಗಿರಿಸಿಕೊಂಡಿದ್ದರ ಫಲವೇ ಎಂಬಂತೆ ಚಿತ್ರಿಸಿದ್ದಾರೆ.

ಪ್ರಭುತ್ವದ ಅಳಿವು ಉಳಿವು ಯುದ್ಧದ ಪರಿಣಾಮವನ್ನು ಅವಲಂಬಿಸಿರುತ್ತದೆ. ಪಶುಪಾಲಕರು ಮತ್ತು ಕೃಷಿಕರು; ಇತಿಹಾಸ ಕಂಡಂತೆ ಮೊದಲಿನಿಂದಲೂ ದಾಳಿ, ಪ್ರತಿದಾಳಿ, ಯುದ್ಧ ಹೋರಾಟಗಳಲ್ಲಿ ತೊಡಗಿಸಿಕೊಂಡವರೇ. ಈಗಲೂ ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಯಾವಾಗಲೂ ಮಾದಿಗರು, ಗೊಲ್ಲರು, ಹಾಗೂ ಬೇಡರಿಗೂ ಜಗಳಗಳಾಗುತ್ತಿರುತ್ತವೆ. ಕಾರಣ, ಮಾದಿಗರು ಭಾರತದ ಮೂಲನಿವಾಸಿಗಳೆನಿಸಿಕೊಂಡು (ದ್ರಾವಿಡರು) ಕೃಷಿಕರಾಗಿದ್ದರು. ಬೇಡ, ಅಥವಾ ಗೊಲ್ಲರು, ಪಶುಪಾಲಕರು, ಕುರಿಗಾಹಿಗಳು. ಇವರ ಕೆಲಸ ಹಸು, ಕುರಿ, ದನ ಮೇಯಿಸುವುದು. ಅದಕ್ಕಾಗಿ ಮಾದಿಗರು ಬೆಳೆ ಬೆಳೆದರೆ ಇವರು ಪಶುಗಳನ್ನು ಬಿಟ್ಟು ಮೇಯಿಸುತ್ತಿದ್ದರು. ಇದಕ್ಕಾಗಿಯೇ ಜಗಳಗಳುಂಟಾಗುತ್ತಿದ್ದವು.

ಹಾಗಾಗಿ ಅಲೆಮಾರಿ ಪಶುಪಾಲಕರು ಮತ್ತು ಕುರಿಗಾಹಿಗಳು ತಮ್ಮ ತಮ್ಮಲ್ಲಿನ ಬಾಂಧವ್ಯದ ಜೊತೆಗೆ; ಹುಲ್ಲುಗಾವಲು, ದನ, ಕುರಿಗಳ ವಿಚಾರದಲ್ಲಿ ಜೂಜು, ಹೋರಾಟ, ದಾಳಿ, ಪ್ರತಿದಾಳಿಯನ್ನು ಮಾಡಿಕೊಳ್ಳುತ್ತಿದ್ದರ ಅನುಭವದ ಫಲ ಕನಕದಾಸರಿಗಿದ್ದುದರಿಂದಲೇ, ನಳಚರಿತ್ರೆಯು ಪುಷ್ಕರ ಮತ್ತು ನಳನ ನಡುವಿನ ಯುದ್ಧಕ್ಕೆ ಸಂಕೇತವಾಗುತ್ತದೆ. ಜೊತೆಗೆ ಬಾಹುಕ(ನಳ) ಮತ್ತು ಋತುಪರ್ಣ ಮಹಾರಾಜನ ಬಾಂಧವ್ಯದ ಪ್ರತೀಕವಾಗಿಯೂ ಕಾವ್ಯ ಬೆಳೆಯಲು ಕಾರಣವಾಗುತ್ತದೆ.

ಸ್ವತಃ ಢಣಾಯಕರಾಗಿದ್ದ ಕನಕದಾಸರು, ಯುದ್ಧ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದರು. ಸೈನ್ಯದಲ್ಲಿ ಆನೆಗಳು, ರಥಗಳು, ಪದಾತಿ ಕುದುರೆಗಳು ಇವುಗಳನ್ನು ನೋಡಿಕೊಳ್ಳಲು ಸೈನ್ಯದಲ್ಲಿ ಅಶ್ವಸೇನರು, ಮಾವುತರ ಪಡೆಯೇ ಇರುತ್ತಿತ್ತು. ಕನಕದಾಸರು ಸಹ ತಾವು ರಾಜನಾಗಿದ್ದಾಗ ಆನೆ ಕುದುರೆಗಳನ್ನು ಪಳಗಿಸುವುದರಲ್ಲಿ ನಿಷ್ಣಾತರಾಗಿದ್ದರು. ಇದು ಅವರ ಕುಟುಂಬಕ್ಕಿದ್ದ ಪಾಲನಾ ಸಂಸ್ಕೃತಿಯ ಅನುಭವದಿಂದ ಎನ್ನಬಹುದು. ಈಗಲೂ 'ಬಾಡಾ'ದಲ್ಲಿನ ಕನಕದಾಸರ ಕಾಲದ ಹಳೆಯ ಅರಮನೆಯ ಸ್ಮಾರಕವಾಗಿರುವ ಸ್ಥಳದಲ್ಲಿ 'ಆನೆಗುಂಡಿ'ಯನ್ನು ಕಾಣಬಹುದು. ಇದನ್ನು ಕನಕದಾಸರು ಆನೆ ಕುದುರೆಗಳು ನೀರು ಕುಡಿಯುವುದಕ್ಕಾಗಿ ನಿರ್ಮಾಣ ಮಾಡಿದ್ದರೆಂಬ ಪ್ರತೀತಿಯಿದೆ. ನಳಚರಿತ್ರೆಯಲ್ಲಿಯೂ ಕೂಡ ನಳನನ್ನು ಮಹಾನ್ ಕುದುರೆಗಳನ್ನು ಪಳಗಿಸುವ 'ಅಶ್ವಸೇನ' ಎಂದೇ ಕರೆಯಲಾಗಿದೆ. ರಾಜ ಋತುಪರ್ಣನಿಗೆ 'ವೃಕ್ಷವಿದ್ಯೆ' ತಿಳಿದಿದ್ದು, ಮರಗಳ ಬಣ್ಣ, ಹಣ್ಣು, ಹೂಗಳನ್ನು ಕ್ಷಣಾರ್ಧದಲ್ಲಿ ಎಣಿಸುವ ವಿದ್ಯೆಯೂ ತಿಳಿದಿತ್ತೆಂಬ ಈ ಸಂದರ್ಭದಿಂದ; ಕನಕದಾಸರಿಗೆ ಪಶುಪಾಲಕರ ಕೌಶಲ್ಯಗಳ ಅರಿವಿದ್ದುದನ್ನು ತಿಳಿಯಬಹುದಾಗಿದೆ. ಪಶುಪಾಲಕರಿಗೆ ಸಹಜವಾಗಿ ಮಳೆ ಬರುವ, ಗಾಳಿಬೀಸುವ ಸಂದರ್ಭಗಳ ತಿಳಿವು ಇದ್ದುದರ ಜೊತೆಗೆ ಯಾವ ಮರ ಯಾವಾಗ ಚಿಗುರಿ ಹೂ ಬಿಡುತ್ತದೆ, ಹಣ್ಣು ಕೊಡುತ್ತದೆ

ಎಂಬುದು ತಿಳಿದಿತ್ತು. ಈಗಲೂ ಪಶುಪಾಲಕರ ಸಂಪ್ರದಾಯದಿಂದ ಬಂದಂತಿರುವ ಕುರುಬರನ್ನು; ಜನ ಯಾವಾಗ ಮಳೆ ಬರುತ್ತದೆ, ಯಾವ ಬೆಳೆಗೆ ಬಲಾಚಾರವಿದೆ, ಈ ಬಾರಿ ಮಾವಿನ ಫಸಲು ಹೇಗಾಗುತ್ತದೆ ಎಂದು ಗ್ರಾಮೀಣ ಭಾಗಗಳಲ್ಲಿ ಕೇಳುವುದು ರೂಢಿಯಲ್ಲಿದೆ. ಅದಕ್ಕಾಗಿಯೇ "ಕುರುಬರು ಕಂಬಳಿ ಬೀಸಿದರೆ ಮಳೆ ಬರುತ್ತದೆ" (ನೋಡಿ, ಅಧ್ಯಾಯ-೩ರ ರಟ್ಟಮತಶಾಸ್ತ್ರ) ಎಂದು ಹೇಳುವುದು, ಬೇವಿನಮರ ಹೆಚ್ಚು ಹೂಬಿಟ್ಟರೆ ಮಾವಿನ ಫಸಲು ಕಡಿಮೆ ಎನ್ನುವುದು, ಈ ಎಲ್ಲಾ ಅನುಭವಗಳು ನಮ್ಮ ಪಶುಪಾಲಕರಿಗೆ ಹಾಗೂ ಕೃಷಿಕರಿಗೆ ತಲತಲಾಂತರದಿಂದಲೂ ತಿಳಿದು ಬಂದಿವೆ. ಇದು ಕನಕದಾಸರ ಮೇಲೂ ಪರಿಣಾಮ ಬೀರಿರುವುದನ್ನು ನಳ ಚರಿತ್ರೆಯ ಈ ಪಾತ್ರ  ಮತ್ತು ಸನ್ನಿವೇಶಗಳ ಮೂಲಕ ತಿಳಿಯಬಹುದಾಗಿದೆ.

ಈ ಕಾಲದ ಯುದ್ಧಗಳಲ್ಲಿ ಬಳಸುತ್ತಿದ್ದ ಆಯುಧಗಳಾದ,

ಹರಿಗೆ ಖಡ್ಗ  ಕಠಾರಿ ತೋಮರ
ಪರಶು ಮುದ್ಗರ ಕುಂತ ಬಲ್ಲೆಹ
ಪರಿಘ ಚಕ್ರ ಶೂಲ ಕಕ್ಕಡ ಭಿಂಡಿವಾಳಚಯ
ಸುರಗಿ ಸಬಳ ಮುಸುಂಡಿ ಮೊದಲಾ
ದುರತರ ಕೈದುಗಳ ಪಟುಭಟ
ರುವಣಿಸಿ ತಾಗಿದರು ರಿಪುಮೋಹರವನಮಗೊಳಿಸಿ॥ [೬೪]

ಇಲ್ಲಿನ ಹರಿಗೆ, ಖಡ್ಗ, ಪರಿಘ, ತ್ರಿಶೂಲ, ಕಠಾರಿ, ಪರಶು(ಕೊಡಲಿ), ತೋಮರ, ಮುದ್ಗರ, ಮುಂತಾದ ಆಯುಧಗಳು ಪಶುಪಾಲಕರು, ಬೇಟೆಗಾರರು ಬಳಸುತ್ತಿದ್ದ ಆಯುಧಗಳಾಗಿವೆ. ಅವುಗಳನ್ನೇ ನಾವೀನ್ಯತೆಯೊಂದಿಗೆ ಮುಂದೆ ಅನೇಕ ವರ್ಷಗಳ ಕಾಲ (ಪರಂಗಿಯುವರು ಬರುವವರೆಗೂ) ರಾಜರು ಯುದ್ಧಗಳಲ್ಲಿ ಬಳಸಿಕೊಳ್ಳುತ್ತಿದ್ದರು.  ಇಂತಹ ಚಿತ್ರಣಗಳು ಕನಕದಾಸರ ಕಾಲದ ಸಮಕಾಲೀನ ಯುದ್ಧದ ತಂತ್ರಗಾರಿಕೆಯನ್ನು, ಇದಕ್ಕೆ ಪೂರಕವಾಗಿ ನಿಂತ ಪಶುಪಾಲನಾ ಪರಂಪರೆಯ ಸಂಬಂಧವನ್ನು ಪ್ರತಿನಿಧಿಸುತ್ತದೆ.

ಕಾವ್ಯದಲ್ಲಿ ಬರುವ 'ಬೇಟೆ' ಮತ್ತು 'ಕಾಡುಜನರ' ಸಮುದಾಯದ ಚಿತ್ರಣದಲ್ಲಿಯೂ ಪಶುಪಾಲನೆಯ ವಿವರಗಳು ಕಂಡುಬರುತ್ತವೆ. ಹಳ್ಳಿಗಳಲ್ಲಿ ಈಗಲೂ ಸಹಜವಾಗಿ ಹಬ್ಬ ಜಾತ್ರೆಯಂತಹ ಸಂಭ್ರಮದ ದಿನಗಳಲ್ಲಿ ಗ್ರಾಮೀಣ ಭಾಗದ ಕೆಲ ಕೃಷಿಕ ಕುಟುಂಬದವರು, ಮೊಲ, ಉಡ, ಬೆಳವ, ಕಾಡುಕೋಳಿ, ಇಲಿ ಇನ್ನಿತರ ಪ್ರಾಣಿ ಪಕ್ಷಿಗಳ ಬೇಟೆಗಾಗಿ ಹೊರಡುವುದನ್ನು ಅಲ್ಲಲ್ಲಿ ಕಾಣುತ್ತಿದ್ದೇವೆ. ಹಾಗೆಯೇ ನಳಚರಿತ್ರೆಯ ಬೇಟೆಯ ಸಂದರ್ಭದಲ್ಲಿ, ಬೇಡತಿಯರು ಮತ್ತು ಬೇಡರು ಕಾಣಿಸಿಕೊಳ್ಳುತ್ತಾರೆ. ನಳ ವಿರಹ ತಾಪದಲ್ಲಿದ್ದಾಗ ಅದನ್ನು ಮರೆಯಲು

ಬೇಟೆಯಾಡುವುದಕ್ಕೆ ಹೊರಡುತ್ತಾನೆ. ದಮಯಂತಿ ಸರ್ಪದ ಬಾಯಿಗೆ ಸಿಕ್ಕಾಗ ಅದನ್ನು ಬಿಡಿಸಿದವನು ಬೇಡನೇ. ನಳಚರಿತ್ರೆಯಲ್ಲಿ ಬೇಟೆಯ ವರ್ಣನೆ ಸಂದರ್ಭಕ್ಕೆ ಅನುಗುಣವಾಗಿ ಬರುತ್ತದೆ. ಅರಸನು ಬೇಟೆಗಾಗಿ ಕಾಡಿಗೆ ಹೋಗುವಾಗ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಳ್ಳುತ್ತಿದ್ದನು. ಇಲ್ಲಿ ಬೇಟೆಗಾರನಾಗಿ ಕಾಡಿಗೆ ಬರುತ್ತಿದ್ದ ರಾಜನನ್ನು ಕಂಡು ಬೇಡತಿಯರು ಬೆರಗಾಗುತ್ತಿದ್ದರು. ಬೇಟೆಯಲ್ಲಿ ಬೇಡರು, ಕಾಡುಕುರುಬರು, ರಾಜರ ಬೇಟೆಗೆ ಕೆಲವೊಮ್ಮೆ ಸಹಕರಿಸುತ್ತಲೂ ಇದ್ದರು. ಕಾರ್ಕೋಟಕ (ಬುಡಕಟ್ಟಿನ ಸಂಕೇತ) ನಳರಾಜನನ್ನು ವಜ್ರಾಂಗಿಯನ್ನಾಗಿ ಮಾಡಿ, ಆತನಿಗೆ ದಾರಿತೋರಿಸುತ್ತದೆ. ಹಾಗೂ ಋತುಪರ್ಣನ ಅರಮನೆಗೆ ಹೋಗಿ ನಿನಗೆ ತಿಳಿದಿರುವ 'ಅಶ್ವವಿದ್ಯೆ'ಯನ್ನು ರಾಜನಗೆ ಪರಿಚಯಿಸಿ ಅಲ್ಲಿ ಬಾಹುಕನಾಗಿ ಕಾರ್ಯ ನಿರ್ವಹಿಸಬೇಕೆಂದು ಸಲಹೆ ನೀಡುತ್ತದೆ.

ಪೊಡವಿ ಪನನೊಲ್ಯೆಸು ವಾಘೆಯ
ಪಿಡಿದು ಬಾಹುಕನೆಂಬ ನಾಮದಿ
ನಡೆಸು ರಥವನು ಹೀನವೃತ್ತಿಯಿದಲ್ಲ ನಿನಗಿನ್ನು
ಬಿಡದೆ ಮುನ್ನಿನ ರೂಪು ಬೇಕಾ
ದಡೆ ನೆನೆವುದಾ ಪಕ್ಷಿಗಳ ಹ
ಚ್ಚಡವ ನೀವು ಧರಿಸಲಡಗುವುದೀ ಕುರೂಪಿತನ॥ [೬೫]

ಹೀಗೆ ಋತುಪರ್ಣನ ಆಸ್ಥಾನಕ್ಕೆ ಬಂದ ನಳನು, ಬಾಹುಕನಾಗಿ ಮುಂದೆ ಭೀಮನೃಪನು ಏರ್ಪಡಿಸಿದ ದಮಯಂತಿಯ ಸ್ವಯಂವರಕ್ಕೆ ಹೋಗುವ ಸಂದರ್ಭ ಒದಗಿ ಬರುತ್ತದೆ. ಋತುಪರ್ಣನನ್ನು ರಥದ ಮೇಲೆ ಕೂರಿಸಿಕೊಂಡು ವಿದರ್ಭ ನಗರಕ್ಕೆ ತಾನು ಸಾರಥ್ಯವಹಿಸಿ ಹೊರಟು ಬರುವಾಗ ದಾರಿ ಮಧ್ಯದ ಅಡವಿಯಲ್ಲಿ ಮರವೊಂದರ ಹಣ್ಣುಗಳನ್ನು ಎಣಿಸುವ ಸಂದರ್ಭ ಬಂದು, ಆ ಕೆಲಸವನ್ನು ವೃಕ್ಷವಿದ್ಯೆಯಲ್ಲಿ ನಿಷ್ಣಾತನಾದ ಋತುಪರ್ಣನು ಎಣಿಸಿ ಮುಗಿಸಿದನು. ಇದನ್ನು ಕಂಡ ನಳನು ಆಶ್ಚರ್ಯಗೊಂಡು ತಾನು ಕಲಿತ 'ಅಶ್ವವಿದ್ಯೆ'ಯನ್ನು ರಾಜನಿಗೂ, ರಾಜ ಕಲಿತ 'ವೃಕ್ಷವಿದ್ಯೆ'ಯನ್ನು ತಾನು ಕಲಿಯುವುದರೊಂದಿಗೆ ಮುನ್ನಡೆದರು.

ಅಂದರೆ ಅಂದಿನ ಪಶುಪಾಲಕರು ಕಾಡಿನಲ್ಲಿ ದನ, ಕುರಿ, ಹಸುಗಳನ್ನು ಸಾಕಲು ಅನುಕೂಲವಾಗುವಂತೆ ಮುನ್ನೆಚ್ಚರಿಕೆ ಕ್ರಮವಾಗಿ, ಜಲವಿದ್ಯೆ, ವೃಕ್ಷವಿದ್ಯೆ, ಅಶ್ವವಿದ್ಯೆ, ಗಜವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದರು. ಆ ಕಾರಣಕ್ಕಾಗಿ ಪಶುಪಾಲನೆಯ ಸಂಬಂಧವನ್ನು ಹೊಂದಿದ್ದ ಹಾಗೂ ಕಣ್ಣಾರೆ ಕಂಡಿದ್ದ ಕನಕದಾಸರು ನಳ ಚರಿತ್ರೆಯ ಸಂದರ್ಭದಲ್ಲಿ ವಿವಿಧ ಬಗೆಯ ವಿದ್ಯೆಗಳ ಪರಿಚಯವನ್ನು ಕಾವ್ಯದೊಳಗೆ ತಂದಿದ್ದಾರೆ.

ಪಶುಪಾಲನೆಯ ಗುಣಲಕ್ಷಣಗಳಾದ ನಾಯಕತ್ವ, ನಿಸರ್ಗದ ಬಗೆಗಿನ ಅಪಾರ ಪ್ರೇಮ, ತ್ಯಾಗ, ನಿಸ್ವಾರ್ಥಪರತೆ, ಹೊಂದಾಣಿಕೆ ದಯೆ, ಕರುಣೆ ಎಂಬ 'ಮಾನವೀಯತೆ'ಯ ಅಂಶಗಳೇ ನಳಚರಿತ್ರೆ ಕೃತಿಯ ಜೀವಾಳವಾಗಿದೆ. ತ್ಯಾಗಮೂಲವೂ ನಿಸ್ವಾರ್ಥ ಪರವೂ ಆದ ಪ್ರೇಮಕ್ಕೆ ನಳ ದಮಯಂತಿಯರು ಸಂಕೇತವಾಗಿದ್ದಾರೆ. ನಳಚರಿತ್ರೆ ಪುಟ್ಟ ಕಾವ್ಯವಾಗಿದ್ದರೂ ಇಲ್ಲಿ ಚಿತ್ರಿತವಾಗಿರುವ ನಳ ದಮಯಂತಿಯರ ಪ್ರೇಮ, ಈ ಲೋಕಕ್ಕೇ ಆದರ್ಶವಾಗಿದೆ. ಪರಸ್ಪರ ಅಗಲಿಕೆಯಲ್ಲಿ, ಕಷ್ಟದ ಸಂದರ್ಭದಲ್ಲಿ ಅಪಾರ ಕಾಳಜಿಯಿರುವ ಪ್ರೇಮ ಹುಟ್ಟಿಕೊಳ್ಳುತ್ತದೆ. ಪ್ರೇಮವು ಪರಿಶುದ್ಧಗೊಂಡು ಬೆಳಗಬೇಕಾದರೆ ಪ್ರೇಮಿಗಳ ಬದುಕಿನಲ್ಲಿ ವಿರಹ, ಕಷ್ಟಸಹಿಷ್ಣುತೆ, ಸಹನಶೀಲತೆ, ತ್ಯಾಗ, ವಿಶ್ವಾಸ, ನಿಷ್ಠೆ, ಮಿಲನಕಾತುರತೆ ಇತ್ಯಾದಿ ಮನುಷ್ಯ ಸಹಜ ಗುಣಗಳು ಅಗತ್ಯವೆಂಬುದರ ವ್ಯಕ್ತರೂಪ, ನಳಚರಿತ್ರೆಯ ನಳದಮಯಂತಿ ಪಾತ್ರಗಳೊಂದಿಗೆ ಕವಿ ಕನಕದಾಸರಿಂದ ಚಿತ್ರಣಗೊಂಡಿವೆ. ಇಲ್ಲಿ ಬರುವ ಪ್ರೇಮ ಪರರಿಂದ ಪ್ರಯೋಜನವನ್ನು ಅಪೇಕ್ಷಿಸುವಂತಹುದಲ್ಲ. ಪ್ರಪಂಚದಲ್ಲಿ ಹಣ, ಆಸ್ತಿ, ರಾಜ್ಯ, ಬಿರುದು, ಸಂಪತ್ತುಗಳನ್ನೆಲ್ಲಾ ತ್ಯಾಗ ಮಾಡಿದವರಿದ್ದಾರೆ. ಆದರೆ ಪ್ರೇಮತ್ಯಾಗಕ್ಕೂ ಸಿದ್ಧರಾದವರು ತುಂಬಾ ಕಡಿಮೆ. ಹಾಗಾಗಿ ನಳ ದಮಯಂತಿಯರ ಗಾಢವಾದ ದಾಂಪತ್ಯ ಪ್ರೇಮವು; ವಿಧಿಯು ನೀಡಿದ ಎಲ್ಲಾ ಪರೀಕ್ಷೆಗಳನ್ನು ಸಹಜವಾಗಿಯೇ ಸ್ವೀಕರಿಸಿತು. ಇದರಿಂದಾಗಿ, ಮತ್ತೆ ಏರ್ಪಡಿಸಲಾದ ಸ್ವಯಂವರದ ಸಂದರ್ಭದಲ್ಲಿ ಅವರಿಬ್ಬರೂ ನಡೆದುಕೊಂಡ ರೀತಿ, ಪಾಲಿಸಿದ ಪ್ರಾಮಾಣಿಕತೆ, ತೋರಿದ ಧೈರ್ಯವನ್ನು ಕಾವ್ಯದಲ್ಲಿ ನೈಜವೆಂಬಂತೆ ಸೃಷ್ಟಿಸುವುದು ಪರಂಪರೆಯ ಹಿನ್ನಲೆಯಿರುವ ಕವಿಯೊಬ್ಬನಿಗೆ ಮಾತ್ರ ಸಾಧ್ಯ. ಇಲ್ಲಿ ವಿಧಿ ನೀಡಿದ ಪರೀಕ್ಷೆಯು; ಮಾನವೀಯ ನೆಲೆಯ ಸತ್ಯ, ತ್ಯಾಗ, ಪ್ರಾಮಾಣಿಕತೆಗಳ ಎದುರು ಸೋಲುವುದು ಈ ನೆಲದ ಪಾರಂಪರಿಕ ಹಿರಿಮೆಯನ್ನೇ ಸಾರುವಂತಿದೆ.[೬೬]

ರಾಜಮೋಹನ ಪಕ್ಷಿಗಳು ಕಾಡಿನಲ್ಲಿ ನಳನ ಹಚ್ಚಡವನ್ನು ಎತ್ತಿಕೊಂಡು ಹೋದ ಸಂದರ್ಭವಂತೂ ಆತನ ಚಿತ್ತ ಚಾಂಚಲ್ಯದ ಜೊತೆಗೆ ಮುಗ್ಧತೆಯನ್ನು ತೋರಿಸುತ್ತದೆ. ಈ ಮುಗ್ಧತೆ ಪಶುಪಾಲಕರ ಮೂಲಗುಣ. ಇದು ಅವರಲ್ಲಿನ ಸಂಯಮ ಗುಣದಿಂದಲೇ ಬಂದಿದ್ದೆನ್ನಬಹುದು. ಪಶುಪಾಲಕರು ಪಾಕ ವಿದ್ಯಾ ಪ್ರವೀಣರೂ ಹೌದು. ಏಕೆಂದರೆ ತಾವು ಅಲೆಮಾರಿಗಳಾಗಿ ದನಕುರಿಗಳೊಂದಿಗೆ ಹೋದಲ್ಲೆ ಅಡಿಗೆ ಮಾಡಿಕೊಳ್ಳುತ್ತಿದ್ದರು. ಈಗಲೂ ಈ ಪದ್ಧತಿ ಇದ್ದೇ ಇದೆ. ಅಲ್ಲದೆ ಪಶುಪಾಲಕರಲ್ಲಿ ತಮ್ಮ ಸಮುದಾಯದೊಳಗೆ ಅಪಾರ ಹೊಂದಾಣಿಕೆ ಇರುತ್ತದೆ. ಅವರು ಮಳೆ, ಚಳಿ, ಎನ್ನದೆ ಎಂತಹ ತ್ಯಾಗಕ್ಕೂ ಸಿದ್ಧರಿರುತ್ತಾರೆ. ತಮ್ಮ ರಾಸುಗಳಿಗೆ ಏನೇ ತೊಂದರೆ ಬಂದರೂ ಅವುಗಳ ಚಲನೆ, ನೋಟ, ಮೇವು, ನೀರು, ಎಲ್ಲವನ್ನು ಸರಿಯಾಗಿ ಬಲ್ಲರು. ಪಶುಪಾಲಕರೆಂದರೆ ಸದ್ಗುಣ ಉಳ್ಳವರು. ಈ ಎಲ್ಲಾ

ಪಶುಪಾಲನೆಯ ಅನುಭವದಿಂದಾಗಿ ಹಾಗೂ ಹತ್ತಿರದಿಂದ ಬಲ್ಲವರಾಗಿದ್ದರಿಂದಾಗಿ ಕನಕದಾಸರು ತಮ್ಮ ಕೃತಿಗಳ ರಚನಾ ಸಂದರ್ಭದಲ್ಲಿ ಮಾನವೀಯತೆಯ ಈ ಭಾವನೆಗಳನ್ನೇ ಕಾವ್ಯದ ಪಾತ್ರಗಳಲ್ಲೂ ಎಣೆಯಲು ಪ್ರಯತ್ನಿಸಿದ್ದಾರೆ. ಇದಕ್ಕೇ ಸಾಹಿತ್ಯವೆಂದರೆ; ಆ ಕಾಲದ ಜನಜೀವನದ ಕೈಗನ್ನಡಿ ಎಂದು ಸಂಬೋಧಿಸಿರುವುದು.

ಹಾಗೆಯೇ ದಮಯಂತಿಯ ಸೌಂದರ್ಯಕ್ಕೆ ಮಾರುಹೋಗದ ದೇವ ದಾನವರಿಲ್ಲ. ದೇವೇಂದ್ರ ಅವಳನ್ನು ಒಲಿಸಿಕೊಳ್ಳಲು ಹೂಡುವ ಉಪಾಯಗಳು ಒಂದೆರಡಲ್ಲ. ಹೀಗಿದ್ದರೂ ನಳನನ್ನು ಮಾನಸಿಕವಾಗಿ ಒಮ್ಮೆ ವರಿಸಿದ ದಮಯಂತಿಯ ಪ್ರೇಮ, ಯಾವ ಪ್ರಲೋಭನೆಳಿಗೂ ಜಗ್ಗದೆ ಅಚಲವಾಗಿ ನಿಲ್ಲುತ್ತದೆ. ನಳನು ರಾಜ್ಯ ಕೋಶಗಳನ್ನೆಲ್ಲಾ ಕಳೆದುಕೊಂಡಾಗ ಅವನನ್ನು ಸಂತೈಸಿ, ನೆರಳಾಗಿ ವನವಾಸಕ್ಕೆ ಬಂದಿದ್ದ ಸಾಧ್ವಿ ಈ ದಮಯಂತಿ. ಅರಣ್ಯದಲ್ಲಿ ತನ್ನೊಬ್ಬಳನ್ನೇ ಬಿಟ್ಟು ಪತಿ ಹೋದಾಗಲೂ ಅವನ ಬಗೆಗೆ ಒಂದೂ ಕೆಟ್ಟ ಮಾತನಾಡಿದವಳಲ್ಲ. ಪ್ರತಿಯಾಗಿ ತನ್ನ ದುರ್ದೈವಕ್ಕೆ ತಾನೇ ಮರುಗಿದವಳು. ಅರಣ್ಯದಲ್ಲಿ ಎದುರಾದ ಪ್ರಸಂಗಗಳನ್ನೆಲ್ಲಾ, ತನ್ನ ಪತಿನಿಷ್ಠಾ ಮನಸ್ಸಿನ ದೃಢತೆಯಿಂದ ಮತ್ತು ಪಾತಿವ್ರತ್ಯದ ಬಲದಿಂದ ಎದುರಿಸಿದ ಧೀರೆ. ಎಂತಹ ಭಯಂಕರ ವಿಪತ್ತು ಬಂದರೂ ಪತಿಗೆರಡು ಎಣಿಸದ ಸಂಯಮಿ. ಅವಳದ್ದು ಪರಿಶುದ್ಧ ಪ್ರೇಮ. ಪತಿಯೊಂದಿಗೆ ಕೂಡುವುದೊಂದೇ ಅವಳ ಕಾತುರತೆ ಹಾಗೂ ಪ್ರಯತ್ನ. ಈ ಪ್ರಯತ್ನದಲ್ಲಿ ಅಳವಡಿಸಿಕೊಂಡ ಉಪಾಯಗಳು ದಮಯಂತಿಯ ಪಾತಿವ್ರತ್ಯದ ಹಿರಿಮೆಯನ್ನು ಸಾರಿಸಾರಿ ಹೇಳುತ್ತವೆ. ತನ್ನ ಮರು ಸ್ವಯಂವರದಿಂದ ಅನುಮಾನಗೊಂಡ ಪತಿ ನಳನ ಮನಸ್ಸಿಗೆ ಸಮಾಧಾನ ನೀಡಲು "ಆದಿಯಲಿ ಯೌವ್ವನವ ನಿನಗೊಪ್ಪಿಸಿದೆನಲ್ಲದೆ ತನುಮನೋವಾಕ್ಕಾಯ ಕರ್ಮಂಗಳಲಿ ತಾನೆರಡ ನಿನಗೆ ನೆನೆದವಳಲ್ಲ, ನೀನೆ ನನಗೆ ಗತಿ" ಎಂದು ನಿಷ್ಠೆ ವ್ಯಕ್ತ ಪಡಿಸಿದ ಪರಿಶುದ್ಧ ದಿವ್ಯಮಣಿ ದಮಯಂತಿ.[೬] ಈ ಪಾತ್ರದ ಮೂಲಕ, ಕನ್ನಡ ಸಂಸ್ಕೃತಿಯ ಪರಂಪರೆಯನ್ನು ಕವಿ ಕನಕದಾಸರು ಮತ್ತೆ ಇಲ್ಲಿ ಎತ್ತಿಹಿಡಿದಿದ್ದಾರೆ.

ಕನಕದಾಸರು 'ನಳಚರಿತ್ರೆ'ಯಲ್ಲಿ ಅಲೌಕಿಕ ಪಾತ್ರಗಳ ಮೂಲಕ ವಾಸ್ತವತೆಯನ್ನು ಧ್ವನಿಸಲು ಪ್ರಯತ್ನಸಿರುವುದರಿಂದ ಕಾವ್ಯ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಬಹಳ ಮುಖ್ಯವಾಗಿ ಕಾಡು, ತಿರುಗುವ ಅಲೆಮಾರಿ ಪಶುಪಾಲಕರ ಕುಟುಂಬಗಳಲ್ಲಿ ಇರಬೇಕಾದ ಪರಸ್ಪರ ನಂಬಿಕೆ ಮತ್ತು ಪಾತಿವ್ರತ್ಯ ಕುರಿತ ಸಾರ್ವಕಾಲಿಕವಾದ ಈ ಮೌಲ್ಯವನ್ನು ದಮಯಂತಿ ಪಾತ್ರ ಕಾಯ್ದುಕೊಂಡಿದೆ. ಸದಾ ಬದುಕಿಗಾಗಿ ತಿರುಗುವ ಈ ಪಶುಪಾಲಕರಿಗೆ ಕೋಪ, ಅಸಹನೆ, ಸ್ವಾರ್ಥಗಳು ಯಾವ ಕೇಡನ್ನಾದರೂ ತಂದೊಡ್ಡಬಹುದು. ಆದ್ದರಿಂದ ಪಶುಪಾಲಕರಲ್ಲಿ (ಈಗಲೂ) ಅಪಾರ ತಾಳ್ಮೆ. ಸಹನೆ, ಎಲ್ಲವನ್ನು ಸಹಿಸಿಕೊಳ್ಳುವ ಗುಣ ರಕ್ತಗತವಾಗಿದೆ. ಇದನ್ನು ಕನಕದಾಸರು

ನಳ ಮತ್ತು ದಮಯಂತಿ ಪಾತ್ರದ ಮೂಲಕ ಕಟ್ಟಿಕೊಟ್ಟಿದ್ದಾರೆ. ಪಶುಪಾಲಕರು ತಮ್ಮ ಸುತ್ತಲ ಸಮುದಾಯದವರೆಲ್ಲರಿಗೂ ಯಾವ ತಾರತಮ್ಯ ಎಣಿಸದೆ ಪಾಲನೆಯ ಕಾಯಕದಲ್ಲಿ ತೊಡಗಿಕೊಂಡಂತೆಯೇ, ನಳಚರಿತ್ರೆಯ ಎಲ್ಲಾ ಪಾತ್ರಗಳು ಮುಖ್ಯ ಪಾತ್ರಗಳ ಪೋಷಣೆಗೆ ಸಮರ್ಪಕ ನೆರವು ನೀಡುವಲ್ಲಿ ಯಶಸ್ವಿಯಾಗಿವೆ. ಹೀಗೆ ಕನಕದಾಸರ ಜೀವಿತಾವಧಿಯಲ್ಲಿ ಪಶುಪಾಲನಾ ಸಂಸ್ಕೃತಿಯ ಸತ್ವಗಳು ಕನಕದಾಸರ ಮೇಲೆ ಬೀರಿರುವ ಪ್ರಭಾವ, ಪರಿಣಾಮ ನಳಚರಿತ್ರೆಯ ಪಾತ್ರ ಮತ್ತು ಸನ್ನಿವೇಶಗಳ ಮೂಲಕ ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿವೆ.

ನಳಚರಿತ್ರೆಯಲ್ಲಿ ಬರುವ 'ದೈವದ' ಆಚರಣೆಗಳಿಗೂ ಕೆಳಜಾತಿಗಳ ವೃತ್ತಿಗಳಿಗೂ ಸಂಬಂಧವಿದೆ. ವೃತ್ತಿಗೆ ತಕ್ಕಂತೆ ದೈವವನ್ನು ಪೂಜೆ ಮಾಡುವುದು, ನಮ್ಮ ಪರಂಪರೆಯ ಲಕ್ಷಣವೂ ಆಗಿದೆ. ಮೂಲದಲ್ಲಿ ಬೇಟೆಗಾರರೆನಿಸಿಕೊಂಡ ಪಶುಪಾಲಕರ ದೇವತೆ ತಿಮ್ಮಪ್ಪ; ಇಂದು ವಾಣಿಜ್ಯೀಕರಣಗೊಂಡು ತಲುಪಿರುವ ರೀತಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಪಶುಪಾಲಕರ ದೈವವಾದ ತಿಮ್ಮಪ್ಪನ ಹೆಸರಿನಲ್ಲಿ ರಂಗನಾಥ, ಚೆನ್ನಿಗರಾಯ, ಶ್ರೀನಿವಾಸ, ಕೇಶವ, ವಿಠಲ, ವಿಠೋಬ ಮುಂತಾದ ದೈವಗಳು ಮುನ್ನೆಲೆಗೆ ಬಂದಿವೆ. ಹಾಗಾಗಿ ದಾಸ ಪರಂಪರೆಯಲ್ಲೂ ಕನಕದಾಸರು ಚನ್ನಿಗರಾಯ, ಕೇಶವ, ವಿಠಲ ದೈವಗಳ ಅಂಕಿತದಲ್ಲಿ ಕಾವ್ಯ, ಕೀರ್ತನೆಗಳನ್ನು ರಚಿಸಿರುವುದನ್ನು ಇಲ್ಲಿ ಗಮನಿಸಬಹುದು.[೬೮]

ನಳಚರಿತ್ರೆಯೂ ಸಹ ವರಪುರದ ಚನ್ನಿಗರಾಯನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ, ಪ್ರತಿ ಸಂಧಿಯ ಕೊನೆಯೂ ವರಪುರದ ಚನ್ನಿಗರಾಯನನ್ನು ಸ್ಮರಿಸಿಕೊಳ್ಳುತ್ತಲೇ ಮುಗಿಯುತ್ತದೆ. ಹಾಗೆಯೇ ಕಾವ್ಯದ ಕೊನೆಯ ಪದ್ಯದಲ್ಲಿ,

> ಮೇದಿನಿಯೊಳೀ ಪುಣ್ಯಚರಿತೆಯ
> ನಾದರಿಸಿ ಬರೆದೋದಿ ಕೇಳುವ
> ಸಾಧುಸಜ್ಜನರಾದವರಿಗಹುದಖಿಳ ಕೈವಲ್ಯ
> ವೇದಗೋಚರ ಕೃಷ್ಣ ವರಪುರ
> ದಾದಿಕೇಶವನಮರ ವಂದಿತ
> ನಾದಿನಾರಾಯಣನು ಸಲಹುವನಖಿಳ ಸಜ್ಜನರ। [೬೯]

ಎಂದು ಕೃಷ್ಣ, ಆದಿಕೇಶವ, ಆದಿನಾರಾಯಣನನ್ನು ಪ್ರಾರ್ಥಿಸಿಕೊಂಡಿದ್ದಾರೆ. ಇವರೆಲ್ಲಾ ಪಶುಪಾಲಕರ ದೈವಗಳೇ. (ನೋಡಿ ಅಧ್ಯಾಯ –೨)

'ನಳಚರಿತ್ರೆ'ಯಲ್ಲಿ ಬರುವ ನಳ, ದಮಯಂತಿ, ಸೈನ್ಯ, ಬೇಟೆಗಾರರು, ದೇವತೆಗಳ 'ಉಡಿಗೆ ತೊಡಿಗೆಗಳು' ಅಂದಿನ ರಾಜರಾಣಿಯರು ಹಾಗೂ ಸಾಮಾನ್ಯರ

ಉಡಿಗೆತೊಡಿಗೆಗಳನ್ನು ಪ್ರತಿನಿಧಿಸುತ್ತವೆ. ನಳ ಮಹಾರಾಜನು ತನ್ನ ವಿರಹ ತಾಪದ ಸಂದರ್ಭದಲ್ಲಿ ಬೇಟೆಗೆ ಹೊರಟು ನಿಂತಾಗ ರಾಜ್ಯದ ಬಲು ಭಟರು, ಸಕಲ ದಳದವರು ಹೊಳೆವ ಖಡ್ಗ ಕಠಾರಿ, ಕೋಲು ಕಣ್ಣಿಗಳನ್ನು, ಕೈದುಗಳನ್ನು ತೆಗೆದುಕೊಂಡು ಟೊಂಕ ಕಟ್ಟಿ ಸಿದ್ಧರಾಗುತ್ತಾರೆ. ರಾಜನು 'ಶಶಿಕುಲ ಶಿರೋಮಣಿ'ಯನ್ನು ಧರಿಸಿ ಆಭರಣಗಳ ದಿವ್ಯಾಂಬರವನ್ನು ಸುಗಂಧದ್ರವ್ಯಗಳನ್ನು ಧರಿಸಿಕೊಂಡು ಸಿದ್ಧನಾಗುತ್ತಿದ್ದನು. ದಮಯಂತಿಯ ಮದುವೆ ಸಂದರ್ಭದಲ್ಲಿ "ದಮಯಂತಿ ಗೆಣ್ಣೆಯನೊತ್ತಿದರು, ಶೋಭಾನಗಳ ಪಾಡುತ್ತಾ ಗೆಲಿದರು, ತಿಗುರಮಿಗೆ ವಿವಿಧೋಪಚಾರದಲಿ ಗಂಧ ಚಂದನವ ತರುಣಿಯರು ಲೇಪಿಸಿದರು. ಆಭರಣಗಳಿಂದ ಶೃಂಗರಿಸಿದರು" ಎಂಬುದನ್ನೆಲ್ಲಾ ಗಮನಿಸಿದಾಗ ಪರಂಪರೆಯಿಂದ ಬಂದ ಉಡಿಗೆ ತೊಡಿಗೆಗಳ ಪರಿಚಯವಾಗುತ್ತದೆ. ಆದರೂ ಕನಕದಾಸರು ರಾಜರಾಣಿಯರು, ಭಟರು ಹಾಗೂ ಸಾಮಾನ್ಯ ಜನರ ಉಡುಗೆ ತೊಡುಗೆಗಳ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟಂತೆ ಕಾಣುವುದಿಲ್ಲ.

'ಆಹಾರ ಪದಾರ್ಥಗಳ' ವಿಚಾರವಾಗಿ ನಳಚರಿತ್ರೆ ವಿಶಿಷ್ಟವಾದ್ದೇನನ್ನೂ ಪ್ರಸ್ತಾಪಿಸುವುದಿಲ್ಲ. ನಳನು ಋತುಪರ್ಣನ ಆಸ್ಥಾನದಲ್ಲಿ ಅಡುಗೆ ಭಟ್ಟನಾಗಿ ಸೇರಿಕೊಂಡದ್ದನ್ನು ಬಿಟ್ಟರೆ ಆತ ಮಾಡಿದ ಯಾವ ಅಡಿಗೆ ವಿಚಾರವಾಗಿಯೂ ಕಾವ್ಯದಲ್ಲಿ ವ್ಯಕ್ತವಾಗಿಲ್ಲ. ಕಾರಣ ನಳಚರಿತ್ರೆಯಲ್ಲಿ ಕನಕದಾಸರು, ಕೇಂದ್ರ ವಸ್ತುವಾದ ಪ್ರೇಮವನ್ನು ಪ್ರಧಾನವಾಗಿ ತರುತ್ತಲೇ; ಇಲ್ಲಿನ ಪಾರಂಪರಿಕ ಲಕ್ಷಣಗಳಾದ ನಂಬಿಕೆ, ತಾಳ್ಮೆ, ಸಹನೆ, ಕರುಣೆ, ದಯೆ, ತ್ಯಾಗ, ಸಹಕಾರ, ಮತ್ತು ಹೊಂದಾಣಿಕೆಯ ಮೂಲಕ ಮಾನವೀಯತೆಯನ್ನು ಬೆಳೆಸಿರುವುದು ಕಾವ್ಯದಲ್ಲಿ ಮುಖ್ಯವಾಗಿ ತೋರುತ್ತದೆ.

**ರಾಮಧಾನ್ಯ ಚರಿತೆ:**

ಕನಕದಾಸರ 'ರಾಮಧಾನ್ಯಚರಿತೆ'ಯು ೧೬ನೇ ಶತಮಾನದ ಕೃತಿಯಾಗಿದ್ದುಕೊಂಡೇ, ವರ್ತಮಾನದ ಕೈಗನ್ನಡಿಯಾಗಿ, ವಾಲ್ಮೀಕಿ ರಾಮಾಯಣದ ಕಾಲದೊಂದಿಗೆ ಸಂಬಂಧವನ್ನು ನೇಯುತ್ತದೆ. ಕೃತಿಯ ಈ ಗುಣ ಇವತ್ತಿನ ಸಾಮಾಜಿಕ ಅಸ್ತಿತ್ವದಲ್ಲಿನ ಅಸಮಾನತೆಯ ಶೋಧಕ್ಕೆ ಅನುಕೂಲಮಾಡಿಕೊಡುತ್ತಿದೆ.

'ಸರ್ವರಿಗೂ ಸಮಪಾಲು: ಸರ್ವರಿಗೂ ಸಮಬಾಳು' ಎಂಬ ಆಧುನಿಕ ತತ್ವದ ಸಮಾಜವಾದಿ ಧೋರಣೆ ಈ ಕಾವ್ಯದ್ದಾಗಿದೆ. ಇದು ಕನಕದಾಸರ ಆಲೋಚನಾ ಕ್ರಮ ಮತ್ತು ಪ್ರಗತಿಶೀಲ ಚಿಂತನಾ ಪರತೆಯನ್ನು ಸಾರುತ್ತದೆ. ತಾರತಮ್ಯ ಮತ್ತು ಭೇದ-ಭಾವ, ಮಾನವತೆಗೆ ಮಾರಕವೆಂಬುದು ಇವರ ಬಾಳಿನ ಮೂಲ ಮಂತ್ರ. ವೈಚಾರಿಕತೆಯಿಂದ ಕೂಡಿರುವ ಈ ಕೃತಿ ಕನ್ನಡ ಸಾಹಿತ್ಯದಲ್ಲಷ್ಟೇ ಅಲ್ಲ, ಇಡೀ

ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟವಾದದ್ದೆಂದು ಹೇಳಬಹುದು. ಧಾನ್ಯಗಳ ಮೂಲಕ ಸಮಾಜದ ಅನಿಷ್ಟ ಪದ್ಧತಿಗಳನ್ನು ವಿಡಂಬಿಸುವ 'ಅಣುಕು ಕಾವ್ಯ'ದಂತೆ ರಾಮಧಾನ್ಯಚರಿತೆ ಕಂಡು ಬರುತ್ತದೆ. ಕೃತಿ ಚಿಕ್ಕದಾದರೂ ಸಂಪನ್ನತೆಯಿಂದ ಕೂಡಿದೆ. ಸ್ಪೃಶ್ಯ-ಅಸ್ಪೃಶ್ಯ, ಮೇಲು-ಕೀಳು, ಬಡವ-ಬಲ್ಲಿದ, ವರ್ಗ-ವರ್ಣ, ಇವು ಸಮಾಜಕ್ಕಂಟಿದ ಅರ್ಬುದ ರೋಗಗಳು. ಇಂತಹ ರೋಗಗಳನ್ನು ಉಚ್ಚಾಟಿಸಿ, 'ಕೂಡಿಬಾಳಿದರೆ ಸ್ವರ್ಗ ಸುಖ' ಎಂಬ ಸಾಮಾಜಿಕ ಕಳಕಳಿಯನ್ನು ಈ ಕೃತಿಯ ಮೂಲಕ ಕನಕದಾಸರು ವ್ಯಕ್ತಪಡಿಸಿದ್ದಾರೆ.

ದೇವರಿಗೆ ಪರಮಾನ್ನ ನೀ ಮನು
ಜಾವಳಿಗೆ ಪಕ್ವಾನ್ನ ಮೀತನು
ನೀವು ಧರೆಯೊಳಗಿಬ್ಬರತಿ ಹಿತದಲ್ಲಿ ನೀವಿಹುದು॥[೨೦]

ಎಂದು ವರ್ಗ, ವರ್ಣದಿಂದ ಬೀಗುತ್ತಿರುವ ಜನಗಳಿಗೆ; ಶ್ರೀರಾಮ 'ರಾಗಿ' ಮತ್ತು 'ಭತ್ತ'ಕ್ಕೆ ಹೇಳಿದಂತೆ ಕಾಣುವ ಇಲ್ಲಿನ ಬುದ್ಧಿವಾದ, ಲೋಕವೇ ಮೆಚ್ಚುವಂತದ್ದು.

ಕೃತಿ ಮೇಲ್ನೋಟಕ್ಕೆ ರಾಮಾಯಣದ ಶ್ರೀರಾಮನ ಕಥೆಯಂತೆ ಕಂಡುಬಂದರೂ, ಒಳಗೆ ಪರಮಧಾನ್ಯವಾದ ಬಡವರ ಪಾಲಿನ 'ರಾಗಿ'ಯ ಶ್ರೇಷ್ಠತೆಯನ್ನು ಬಿಡಿಸಿ ಹೇಳುತ್ತದೆ. ಇಲ್ಲಿ ವರ್ಗ, ವರ್ಣಗಳ ಅಸಮಾನತೆ, ಅಸ್ಪೃಶ್ಯತೆಗಳ ಭೂತವಿದೆ. ಇವೆಲ್ಲಾ ತೊಲಗಿ ಪ್ರತಿಯೊಬ್ಬ ಶ್ರೀಸಾಮಾನ್ಯನಿಗೂ ಸಮಾನತೆ ಸಿಗಬೇಕು ಎಂಬುದು ಕನಕದಾಸರ ಧ್ವನಿ. ಕಾವ್ಯದಲ್ಲಿ ಲೌಕಿಕತೆಯನ್ನು ಚೊಕ್ಕವಾಗಿ ಸಂಘಟಿಸಿ ನಿರೂಪಿಸಿರುವುದು ಕೂಡ ಕನಕದಾಸರ ಹೆಗ್ಗಳಿಕೆಯೆಂದು ಹೇಳಬಹುದು.[೨೧]

ಕನಕದಾಸರ ಒಟ್ಟು ಸಾಹಿತ್ಯ ಕೃತಿಯಲ್ಲಿ ಹೆಚ್ಚು ಚರ್ಚೆಗೆ ಒಳಪಟ್ಟ ಕೃತಿ ರಾಮಧಾನ್ಯಚರಿತೆ. ಪಂಚಲಿಂಗೇಗೌಡರಿಂದ ಮೊದಲುಗೊಂಡು ದೇಜಗೌ, ಎಚ್.ಎಲ್.ನಾಗೇಗೌಡ, ಪ್ರೊ.ಸುಧಾಕರ, ಹ.ಕ.ರಾಜೇಗೌಡ, ಆರ್ಯ, ಜಿ.ಎಸ್.ಶಿವರುದ್ರಪ್ಪ ಅವರೂ ಸೇರಿದಂತೆ ಇತ್ತೀಚಿನ ಚಂದ್ರಶೇಖರ ನಂಗಲಿಯವರ ತನಕ ಈ ಕೃತಿ ಚರ್ಚೆಗೆ ಒಳಪಟ್ಟಿದೆ. ಆದ್ದರಿಂದ ಇವರುಗಳು ಮಂಡಿಸಿದ ಮಂಡನೆಯ ವಿಚಾರಗಳ ಹಿನ್ನೆಲೆಯಲ್ಲಿ ರಾಮಧಾನ್ಯ ಚರಿತೆಯನ್ನು ಮತ್ತಷ್ಟು ಓದಿ ತಿಳಿದುಕೊಳ್ಳಬೇಕಾದ ಅನಿವಾರ್ಯತೆ ಈಗ ನಮ್ಮ ಮುಂದೆ ಇದೆ.

ಕೃತಿಯನ್ನು ಓದಲು ಕೈಗೆತ್ತಿಕೊಂಡಾಗ ಕಥೆ 'ರಾಮ' ಕೇಂದ್ರಿತವಾಗಿದೆಯೋ ಅಥವಾ 'ಧಾನ್ಯ' ಕೇಂದ್ರಿತವಾಗಿದೆಯೋ? ಕನಕದಾಸರು 'ರಾಗಿ ಭತ್ತ'ವನ್ನೇ ಏಕೆ ಈ ಕಾವ್ಯದಲ್ಲಿ ಬಳಸಿಕೊಂಡರು? ರಾಗಿಗೂ ಕನಕದಾಸರಿಗೂ ಇರುವ ಸಂಬಂಧವಾದರೂ ಏನು? ರಾಗಿ ಹೇಗೆ ಅಂದಿನ ಅಲಕ್ಷಿತ ಸಮುದಾಯವನ್ನು

ಪ್ರತಿನಿಧಿಸುತ್ತದೆ? ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿಯೇ ಮೂಡುತ್ತವೆ. ಈ ಎಲ್ಲಾ ಪ್ರಶ್ನೆಗಳನ್ನು ಗಮನದಲ್ಲಿಟ್ಟುಕೊಂಡೇ ವಿದ್ವಾಂಸರು ಕೃತಿಯ ಮಹತ್ವವನ್ನು ಮೂರು ಬಗೆಗಳಲ್ಲಿ ಗುರುತಿಸಿದ್ದಾರೆ.

೧) ಕನಕದಾಸರ ಆತ್ಮ ಚರಿತ್ರಾತ್ಮಕ ಕೃತಿಯಾಗಿ,

೨) ಅನ್ಯೋಕ್ತಿ (ಪರೋಕ್ಷ) ಕತೆಯಾಗಿ,

೩) ವರ್ಗ ಹೋರಾಟವನ್ನು (class struggle)ಚಿತ್ರಿಸುವ ಕೃತಿಯಾಗಿ,

ದುರ್ಗಸಿಂಹ, ಪ್ರಾಣಿಗಳನ್ನು ಬಳಸಿಕೊಂಡು ಪಂಚತಂತ್ರ ಬರೆದರೆ, ರಾಮಧಾನ್ಯ ಚರಿತೆಯಲ್ಲಿ ಕನಕದಾಸರು ದಿನನಿತ್ಯದ ಆಹಾರ ಧಾನ್ಯಗಳನ್ನೇ ರೂಪಕಗಳಾಗಿ ಮಾಡಿಕೊಂಡು ವಸ್ತು ನಿಷ್ಠವಾಗಿ ಕಾವ್ಯ ರಚಿಸಿರುವುದು ಮಹತ್ವಪೂರ್ಣವಾದ ಕೊಡುಗೆಯಾಗಿದೆ.

ಕನಕದಾಸರು ತಮ್ಮ ಜೀವಿತದ ಅವಧಿಯಲ್ಲಿ ಮೇಲ್ವರ್ಗದವರಿಂದ ತಿರಸ್ಕಾರ ಅವಹೇಳನಗಳನ್ನು ಅನುಭವಿಸಲು ಅವರ ಜಾತಿ ಪೆಡಂಭೂತದಂತೆ ಕಾಡಿದೆ. ಆದ್ದರಿಂದ ರಾಮಧಾನ್ಯ ಚರಿತೆಯ ವಸ್ತು ಅರ್ಥಪೂರ್ಣವಾಗಿದೆ ಎಂದು ಎಂ.ಚಿದಾನಂದಮೂರ್ತಿಯವರು ಹೇಳಿದ್ದಾರೆ. [೨]

ಹಾಗಾಗಿ ಕನಕದಾಸರು, ಜನಸಾಮಾನ್ಯರ ಆಶಯ ಹಾಗೂ ಸಮಕಾಲೀನ ಸಮಾಜದ ಘೋರ ಪರಿಸ್ಥಿತಿಯನ್ನು ಈ ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ. ಜೊತೆಗೆ ಸೂಕ್ಷ್ಮವಾಗಿ ಕನಕದಾಸರ ಆತ್ಮಕಥೆಯೂ ಸೇರಿಕೊಂಡಿದೆ.[೨೩] ಈ ಎಲ್ಲಕ್ಕಿಂತ ಮಿಗಿಲಾಗಿ ಶೋಷಿತ ವರ್ಗಕ್ಕೆ ಸೇರಿದ ಮಹಾಚೇತನವೊಂದು ತನ್ನ ವಿಕಸನದ ಹಾದಿಯಲ್ಲಿ ಅನುಭವಿಸಿದ ನೋವಿನ ಕಥೆಯೂ ಇಲ್ಲಿದೆ. ಈ ದೃಷ್ಟಿಯಿಂದ ಕನಕದಾಸರ ರಾಮಧಾನ್ಯಚರಿತೆ ಹದಿನೈದನೆಯ ಶತಮಾನದ ಒಂದು ಸಾಮಾಜಿಕ ಆಂದೋಲನದ ಜೀವಂತ ಪ್ರತಿನಿಧಿ ಎಂಬುದರಲ್ಲಿ ಸಂದೇಹವಿಲ್ಲ.[೨೪] ಈ ಎಲ್ಲಾ ಅಂಶಗಳನ್ನು ಒಳಗೊಂಡ ಕನಕದಾಸರ ರಾಮಧಾನ್ಯಚರಿತೆ ೧೫೬ ಭಾಮಿನಿ ಷಟ್ಪದಿಯ ಪದ್ಯಗಳನ್ನು ಹೊಂದಿರುವ ಚಿಕ್ಕ ಕೃತಿ. ಇಲ್ಲೆಲ್ಲೂ ಕೃತಿಕಾರರ ಹೆಸರಿನ ಸುಳಿವಿಲ್ಲ. ಆದರೆ ವರಪುರದರಸ, ವರಪೌರಚನ್ನಿಗರಾಯ, ವರಪುರದಾದಿಕೇಶವ ಎಂಬ ಅಂಕಿತಗಳು ಕೃತಿಯಲ್ಲಿರುವುದರಿಂದ 'ಮೋಹನತರಂಗಿಣಿ' ಮತ್ತು 'ನಳಚರಿತ್ರೆ'ಯನ್ನು ಬರೆದಾತನೇ ರಾಮಧಾನ್ಯಚರಿತೆಯನ್ನು ಬರೆದಿರಬಹುದೆಂದು ವಿದ್ವಾಂಸರ ಊಹೆಯಾಗಿದೆ. ಮೋಹನ ತರಂಗಿಣಿ ಕೃಷ್ಣನ ಕಥೆಯಾದರೆ, ರಾಮಧಾನ್ಯಚರಿತೆ ರಾಮ ಕಥೆಯಾಗಿದೆ. ಈ ಕಥೆಯನ್ನು,

ಧರೆಯನೆಲ್ಲವ ಸೋತು ಜೂಜಲಿ
ಕುರುಪತಿಗೆ ಕೈದಳಸಿ ತಮ್ಮಂ
ದಿರು ಸಹಿತ ಧರ್ಮಜನು ಕಾಮ್ಯಕವನದೊಳಿರುತಿರಲು।

ಅರಣ್ಯವಾಸದ ಸಂಕಷ್ಟಗಳ ಪರಿಹಾರಾರ್ಥವಾಗಿ ಧರ್ಮರಾಯನಗೆ ಶಾಂಡಿಲ್ಯಮುನಿ ಶ್ರೀರಾಮ ಚಂದ್ರನ ಚರಿತ್ರೆಯನ್ನು ವಿವರಿಸುವ ಧಾಟಿಯಲ್ಲಿ ಇಲ್ಲಿನ ಕತೆಯನ್ನು ರಚಿಸಲಾಗಿದೆ.(ಇದೇ ರೀತಿ ರೋಮೇಶ ಮುನಿಯು ನಳಚರಿತ್ರೆಯನ್ನು ಧರ್ಮಜನಿಗೆ ಹೇಳಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.)

**ಕಥಾಸಾರ:**

'ರಾಮಧಾನ್ಯಚರಿತೆ'ಯು ಸಂಕ್ಷಿಪ್ತವಾದ ರಾಮಾಯಣದ ಕಥೆಯಾಗಿದ್ದು, ಸಿಂಹಾವಲೋಕನ ಕ್ರಮದಿಂದ ಇಡೀ ರಾಮಾಯಣದ ಸಾರವನ್ನು ಹೇಳಲಾಗಿದೆ. ಶ್ರೀರಾಮಚಂದ್ರ ಪಿತೃವಾಕ್ಯ ಪರಿಪಾಲನಾರ್ಥವಾಗಿ ಸೀತಾಲಕ್ಷ್ಮಣ ಸಹಿತ ಅರಣ್ಯಕ್ಕೆ ಹೋಗುವುದು, ಅಲ್ಲಿನ ಸೀತಾಪಹರಣ ಪ್ರಸಂಗ, ರಾಮ, ಸುಗ್ರೀವರ ಸಖ್ಯ, ಲಂಕೆಯ ಮುತ್ತಿಗೆ, ರಾವಣ ಕುಂಭಕರ್ಣಾದಿಗಳ ಸಂಹಾರ, ಹಾಗೂ ವಿಭೀಷಣನಿಗೆ ಪಟ್ಟ ಕಟ್ಟುವವರೆಗಿನ ಕತೆಯನ್ನು ಕವಿ ೯ ರಿಂದ ೧೫ ಪದ್ಯಗಳಲ್ಲಿ ಹೇಳಿ ಮುಗಿಸಿದ್ದಾರೆ.

ನಂತರ ಕುಬೇರನ ರಥದಲ್ಲಿ ಪರಿವಾರ ಸಮೇತ ಅಯೋಧ್ಯೆಗೆ ಹೊರಟ ರಾಮ, ಕಂಡ ಕಂಡ ಸ್ಥಳಗಳ ಪರಿಚಯವನ್ನು ಸೀತೆಗೆ ಮಾಡಿಕೊಡುತ್ತಾ 'ಮುಚುಕುಂದ' ಋಷಿಯ ಆಶ್ರಮಕ್ಕೆ ಬರುತ್ತಾರೆ. ಆಶ್ರಮಕ್ಕೆ ರಾಮ ಬಂದುದ ಕೇಳಿ "ಬಂದು ಕಂಡರು ಸಕಲ ಮುನಿವರು." ಇಲ್ಲಿ ಮುನಿಗಳೊಂದಿಗೆ ರಾಮ ಮಾತನಾಡಿದ ಹಾಗೂ ಅಲ್ಲಿನ ಆತಿಥ್ಯದ ವಿವರ ಕೆಲವು ಪದ್ಯಗಳಲ್ಲಿ ಮೂಡಿ ಬರುತ್ತದೆ,

ಅಲ್ಲಿ ನೆರೆದ ಮಹಾಮುನೀಶ್ವರ
ರೆಲ್ಲಾತರಿಸಿದರಖಿಳ ವಸ್ತುವ
ಬೆಲ್ಲ ಸಕ್ಕರೆ ಜೇನುತುಪ್ಪ ರಸಾಯನಂಗಳಲಿ
ಭುಲ್ಲವಿಸಿ ರಚಿಸಿದ ಸುಭಕ್ಷಗ
ಳೆಲ್ಲವನು ತುಂಬಿದರು ಹೆಡಗೆಗ
ಳಲ್ಲಿ ಜೋಡಿಸಿ ಹೊರಿಸಿ ತಂದರು ರಾಮನೋಲಗಕೆ॥ ೭೫

ಋಷಿಗಳು ತಂದ ವಿವಿಧ ಭಕ್ಷ ಭೋಜ್ಯಗಳನ್ನು ಎಲ್ಲ ಸೈನಿಕರಿಗೆ, ವೀರರಿಗೆ ಹಂಚಲಾಯಿತು. ಎಲ್ಲರೂ ತಿಂದು ತೇಗಿದರು. ಆಗ ರಾಮ ಅವರೆಲ್ಲರ ಪರವಾಗಿ ಆಂಜನೇಯನನ್ನು ಕುರಿತು,

ಅನಿಲಸುತ ಬಾರೆಂದು ರಘುನಂ
ದನನು ಕರುಣದೊಳಿವರ ರುಚಿಯೆಂತೆನಲು। ೬

ಅದಕ್ಕೆ ಆಂಜನೇಯನು ಕರಗಳ ಮುಗಿದು ರಘುಪತಿಗೆ ಬಿನ್ನವಿಸಿಕೊಳ್ಳುತ್ತಾ, "ಎನಗೆ ಸವಿಯಹುದಿನ್ನು ಧಾನ್ಯದ ತನುವನೀಕ್ಷಿಸಬೇಕು ದೇವರು ತರಿಸಿ" ಎಂದು ಕೇಳಿಕೊಳ್ಳುತ್ತಾನೆ. ಆಗ ರಾಮನು ಗೌತಮ ಮುನಿಗೆ ಎಲ್ಲಾ ಧಾನ್ಯಗಳನ್ನು ತರೆಸೆನಲು, ಕೂಡಲೇ ಗೌತಮನ ಶಿಷ್ಯರು ನರೆದಲೆಗ(ರಾಗಿ), ಹಾರಕ, ಬರಗು, ಜೋಳ, ಕಂಬು, ಸಾಮೆ, ನವಣೆ, ಗೋಧಿ, ವ್ರಿಹಿ(ನಲ್ಲು/ಭತ್ತ) ಮೊದಲಾದ ನವಧಾನ್ಯಗಳನ್ನು ತಂದು ಸಭೆಯ ಮುಂದಿಟ್ಟರು. ಅವುಗಳನ್ನೆಲ್ಲಾ ವೀಕ್ಷಿಸಿ, ಹನುಮಂತನೂ ಸೇರಿದಂತೆ ಮುನಿವರ್ಯರು ತಮತಮಗೆ ಬೇಕಾದ ಪ್ರಿಯವಾದ ಧಾನ್ಯವನ್ನು ಉತ್ತಮವಾದುದೆಂದು ಹೇಳಿದರು. ಆಗ ರಾಮ, ಗೌತಮ ಮುನಿಯನ್ನು ಅವುಗಳಲ್ಲಿ ಸತ್ವಯುತವಾದ ಒಂದು ಧಾನ್ಯವನ್ನು ತಿಳಿಸುವಂತೆ ಕೇಳಿಕೊಂಡನು. ಗೌತಮಮುನಿ, "ನಮ್ಮ ದೇಶಕ ನರೆದಲಗನೇ ಅತ್ಯುತ್ತಮವಾದ, ಸತ್ವಯುತವಾದ ಧಾನ್ಯವೆಂದು" ತೀರ್ಪುನೀಡಿದರು. ಇದರಿಂದ ವ್ರಿಹಿ(ಭತ್ತ)ಗೆ ಬಹಳ ಕೋಪ ಬಂದಿತು. ತನ್ನೆದುರಿಗೆ ಋಷಿಯೊಬ್ಬ, ಕೆಳವರ್ಗದವರು ತಿನ್ನುವ (ಅಂದು) ರಾಗಿಯನ್ನು ಮುಖ್ಯ ಧಾನ್ಯವೆಂದರೆ ಅದು ಹೇಗೆ ಸಹಿಸಲು ಸಾಧ್ಯ, ಎಂದುಕೊಂಡು ಕೂಡಲೇ ಭತ್ತ; 'ಲೇಸನಾಡಿದೆ ಮುನಿಪ ಗೌತಮ ದೋಷರಹಿತನು ಪಕ್ಷಪಾತವನೀಸುಪರಿಯಲಿ ಮಾಡುವರೆ ಶಿವಯೆಂದನಾ ವ್ರಿಹಿಗ' ಎಂದು ಕೆರಳಿ ನುಡಿಯಿತು, ಹಾಗೂ,

ಎಲ್ಲ ಧರ್ಮದ ಸಾರವನು ನೀವ್
ಬಲ್ಲಿರರಿಯಿರೆ ಎಲ್ಲರನು ನೀ
ವಿಲ್ಲಿ ನುಡಿವ ಉಪೇಕ್ಷೆಯುಂಟೇ ಸಾಕದಂತಿರಲಿ
ನೆಲ್ಲು ನಾನಿರೆ ಗೋಧಿ ಮೊದಲಾ
ದೆಲ್ಲ ಧಾನ್ಯಗಳಿರಲು ಇದರಲಿ
ಬಲ್ಲಿದನು ನರೆದಲಗನೆಂಬುದಿದಾವ ಮತವೆಂದ॥೭

ತನ್ನೆದುರಿಗೇ ತನ್ನ ಬಗ್ಗೆ ಆದ ಹೀಯಾಳಿಕೆಯನ್ನು ಎಂತಹ ಸಂಯಮಿಯೂ ಸಹಿಸಲಾರ. ರಾಗಿ ಅಲ್ಲಿ ನೆರೆದಿದ್ದ ಋಷಿಗಳ ಸಮೂಹ, ಸಾಕ್ಷಾತ್ ಶ್ರೀರಾಮ ಇವರೆಲ್ಲರ ಸಮ್ಮುಖದಲಿ ಅನುಚಿತವಾಗಿ ವರ್ತಿಸಬಾರದೆಂದು ಸುಮ್ಮನಿದ್ದಾಗ, ಭತ್ತ ಮತ್ತೆ ಮತ್ತೆ ಕಾಲು ಕೆರೆದು,

ಏನೆಲವೋ ನರೆದಲೆಗ ನೀನು ಸ
ಮಾನವೇ ಎನಗಿಲ್ಲಿ ನಮ್ಮನು
ದಾನವಾಂತಕೆ ಬಲ್ಲನಿಬ್ಬರ ಹೆಚ್ಚು ಕುಂದುಗಳ
ಜಾನಕೀ ಪತಿ ಸನಿಹದಲಿ ಕುಲ
ಹೀನ ನೀನು ಪ್ರತಿಷ್ಠ ಸುಡುಮತಿ
ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ॥ ೨೮

ಹೀಗೆ ರಾಗಿಯನ್ನು ಹೀಯಾಳಿಸುತ್ತಾ ತನ್ನನ್ನು ಮಾತ್ರ ಹೊಗಳಿಕೊಳ್ಳುತ್ತಲೇ ಇದ್ದ ಭತ್ತದ ನುಡಿಗಳನ್ನು ಕೇಳಿ ರಾಗಿಗೆ ತನ್ನ ಸಹನೆಯ ಕಟ್ಟೆ ಒಡೆಯಿತು.

ನುಡಿಯ ಕೇಳುತ ಕನಲಿ ಕಂಗಳು
ಕಿಡಿಮಸಗಿ ಖತಿಗೊಂಡು ನುಡಿದನು
ಸಿಡಿಲ ಘರ್ಜನೆಯಂತೆ ಸಭೆಯಲಿ ಜರೆದನಾ ವ್ರಿಹಿಯ
ನುಡಿಗೆ ಹೇಸದ ಭಂಡ ನಿನ್ನೊಳು
ಕೊಡುವರೇ ಮಾರುತ್ತರವ ಕಡು
ಜಡನಲಾ ನಿನ್ನೊಡನೆ ಮಾತೇಕೆಂದ ನರೆದಲೆಗ॥ ೨೯

ಹೀಗೆ ಮುಂದೆ ನರೆದಲಗ ವ್ರಿಹಿಯರ ಮಧ್ಯೆ ವಾಗ್ಯುದ್ಧ ನಡೆಯುತ್ತದೆ. ವ್ರಿಹಿ ನರೆದಲಗನನ್ನು ಶೂದ್ರಾನ್ನವೆಂದರೆ, ನರೆದಲಗ ವ್ರಿಹಿಯನ್ನು ನೀನು ಹೆಣದ ಬಾಯಿನ ತುತ್ತು ಎಂದು ಹೀಯಾಳಿಸುತ್ತದೆ. ಇಲ್ಲಿ ಮುಂದುವರಿದ ನರೆದಲಗ ಮತ್ತು ವ್ರಿಹಿಯ ವಾದವನ್ನು ಕೇಳಿ ಮುನಿಗಳು ಸ್ತಬ್ಧರಾಗುತ್ತಾರೆ, ಮಾತಿಲ್ಲದವರಾಗುತ್ತಾರೆ. ಮುಂದೆ ಹೋಗಿ ಇಬ್ಬರಿಗೂ ಬುದ್ಧಿಯನ್ನು ಹೇಳುತ್ತಾರೆ. ಆದರೆ ನರೆದಲಗ ಸಭೆಯನ್ನು ಕುರಿತು "ನಮಗೇನು ಬುದ್ಧಿಯನರುಹುವಿರಿ" ಎಂದು ಸಭೆಗೆ ಸವಾಲೆಸೆಯುತ್ತದೆ. ಇಂತಹ ಕೋಪದ, ಮತ್ಸರದ, ದಳ್ಳುರಿಯನ್ನು ಕಂಡು ರಾಮನು ಸಂಘರ್ಷವನ್ನು ಇತ್ಯರ್ಥಪಡಿಸಲಾಗದೆ ಸಭೆಗೆ, ಎರಡೂ ಧಾನ್ಯಗಳನ್ನು ಆರು ತಿಂಗಳು ಸೆರೆಯಲ್ಲಿರಿಸಲು ತೀರ್ಮಾನಿಸಿರುವುದಾಗಿ ಹೇಳಿದನು.

ಪರಮಧಾನ್ಯದೊಳಿಬ್ಬರೇ ಇವರಿರಲಿ
ಸೆರೆಯೊಳಗಾರು ತಿಂಗಳು
ಹಿರಿದು ಕಿರಿದೆಂಬುದರ ಪೌರುಷವರಿಯಬಹುದಿನ್ನು
ಪುರಕೆ ಗಮನಿಸಿ ನಾವು ನಿಮ್ಮನು
ಕರೆಸುವೆವು ಕೇಳೆನುತಯೋಧ್ಯಾ
ಪುರಿಗೆ ಪಯಣವ ಮಾಡಹೇಳಿದನಾ ವಿಭೀಷಣಗೆ॥ ೩೦

ಶ್ರೀರಾಮನ ಈ ತೀರ್ಮಾನದಂತೆ ವ್ರಿಹಿಗ ಮತ್ತು ನರೆದಲಗವನ್ನು ಸೆರೆಯಲ್ಲಿಡಲಾಯಿತು. ನಂತರ ರಾಮ ಅಯೋಧ್ಯೆಗೆ ಪಯಣವನ್ನು ಮುಂದುವರೆಸಿ ಅಲ್ಲಿ ಪಟ್ಟಾಭಿಷೇಕವಾಗಿ ಆರೇಳು ತಿಂಗಳ ನಂತರ ಒಂದು ದಿನ ಇಂದ್ರಾದಿ ಪ್ರಮುಖರ ಸಭೆ ಕರೆದು, ಹನುಮನ ಮೂಲಕ ಗೌತಮನ ಆಶ್ರಮದಲ್ಲಿದ್ದ ನರೆದಲಗ ಮತ್ತು ವ್ರಿಹಿಯನ್ನು ತರಿಸುತ್ತಾನೆ. ರಾಮ ಸಭೆಯಲ್ಲಿ ನೆರೆದಿದ್ದ ಘನ ತಪೋಮಹಿಮರನ್ನು ಕುರಿತು ನ್ಯಾಯ ಕೇಳುತ್ತಾನೆ. ಆರೇಳು ತಿಂಗಳ ಸೆರೆಮನೆ ವಾಸದಿಂದ ವ್ರಿಹಿ(ನೆಲ್ಲು) ರೂಪಗೆಟ್ಟಿರುತ್ತಾನೆ. ಆದರೆ ನರೆದಲಗ(ರಾಗಿ) ಧೃಢಕಾಯನಾಗಿರುತ್ತಾನೆ.

ಎಲ್ಲ ನವಧಾನ್ಯದಲಿ ಈತನೆ
ಬಲ್ಲಿದನು ಹಸಿಯಲ್ಲ ಬಡವರ
ಬಲ್ಲಿದನಾರೈದು ಸಲಹುವನಿವಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯದಿ
ಬಲ್ಲಿದರ ಪತಿಕರಿಸುವನು ಅವ
ನಲ್ಲಿ ಸಾರವ ಕಾಣೆಯೆಂದನು ಕಪಿಲ ಮುನಿ ನಗುತ॥ [೮೧]

ಸುರರು, ಮುನಿಗಳೆಲ್ಲರೂ ನರೆದಲಗನನ್ನೇ ಶಕ್ತನೆಂದು ಮೆಚ್ಚಿದುದರಿಂದ ರಾಮನಿಗೆ ಸಂತೋಷವಾಗಿ ನರೆದಲಗನಿಗೆ 'ರಾಘವ' ಎಂದು ತನ್ನ ಹೆಸರಿನ ಅಭಿದಾನವನ್ನೇ ದಯಪಾಲಿಸಿದನು. ಈ ಅಪಮಾನದಿಂದ ತಲೆತಗ್ಗಿಸಿನಿಂತ ವ್ರಿಹಿಯನ್ನು ಶ್ರೀರಾಮಚಂದ್ರ ಹಾಗೂ ಸಭೆ ಸಮಾಧಾನ ಪಡಿಸಿತು.

ಶ್ರೀರಾಮಚಂದ್ರನ ಒಡ್ಡೋಲಗದಲ್ಲಿ ನಡೆದ ಈ ವ್ಯವಹಾರದ ಕಥೆ ಮತ್ತೆ ದೇವೇಂದ್ರನ ಸಭೆಯಲ್ಲೂ ಪುನರ್ ಅಭಿವರ್ಣಗೊಳ್ಳುತ್ತದೆ. ಅದನ್ನು ಕೇಳಿದ ಶಾಂಡಿಲ್ಯಮುನಿ, ಧರ್ಮರಾಯನಿಗೆ ವಿವರಿಸಿ ಹೇಳುವ ಮೂಲಕ ಧರ್ಮಜನ ಚಿತ್ತಗ್ಲಾನಿಯನ್ನು ಪರಿಹರಿಸುತ್ತಾನೆ.

**ಕೃತಿಯಲ್ಲಿನ ಪಶುಪಾಲನಾ ಪರಂಪರೆಯ ವಿವರಗಳು :**

'ರಾಮಧಾನ್ಯಚರಿತೆ'ಯು ಕನಕದಾಸರ ಸ್ವಂತ ಅನುಭವದ ರೂಪಕವಾಗಿ ಕಾಣುತ್ತದೆ. ಕೃತಿಯ ತುಂಬಾ ಹೊಸ ಹೊಸ ಹೊಳಹುಗಳನ್ನು ನೀಡುವ ಕವಿ ಮತ್ತು ವ್ಯಕ್ತಿಯಾಗಿ ಕಂಡುಬರುವ ಕನಕದಾಸರು ಸಮಕಾಲೀನ ಸಮಾಜದ ಸಂದರ್ಭವನ್ನು ಮುಖಾಮುಖಿಯಾಗಿಸುತ್ತಾರೆ.[೮೨] ಆದ್ದರಿಂದ ಸಮಾಜದೊಳಗಣ ಪ್ರಭುತ್ವ, ಧರ್ಮ, ಸಂಸ್ಕೃತಿ, ಆಹಾರಪದ್ಧತಿ, ಕಸುಬು, ಹಾಗೂ ಮೌಲ್ಯಯುತ ಬದುಕಿನ ಆಂತರ್ಯದ ಎಳೆಗಳು ರಾಮಧಾನ್ಯ ಚರಿತ್ರೆಯ ಮೇಲೆ ಯಾವ ಸಂಬಂಧ,

ಪ್ರಭಾವ, ಮತ್ತು ಪರಿಣಾಮವನ್ನು ಬೀರಿವೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಕರ್ನಾಟಕದ ಮಧ್ಯಕಾಲೀನ ಸಂದರ್ಭದಲ್ಲಿ ರಚನೆಯಾಗಿರುವ ಕನಕದಾಸರ ರಾಮಧಾನ್ಯಚರಿತೆಯ ಪ್ರಧಾನ ವಸ್ತುವೆನಿಸಿದ 'ಪ್ರಭುತ್ವದ' ನೆಲೆಯಲ್ಲಿ ಪಶುಪಾಲನಾ ಪರಂಪರೆಯ ಎಳೆಗಳನ್ನು ಗುರುತಿಸಬಹುದು. ಭಾರತಕ್ಕೆ ಆರ್ಯರ ಆಗಮನದ ನಂತರ ಇಲ್ಲಿನ ಮೂಲನಿವಾಸಿಗಳೂ ಹಾಗೂ ಕುರಿಗಾಹಿಗಳಾದ 'ದ್ರಾವಿಡ'ರಲ್ಲಿ ವರ್ಗ ಮತ್ತು ಜಾತಿ ವ್ಯವಸ್ಥೆ ಬೆಳೆದದ್ದು ಇತಿಹಾಸ. ಕರ್ನಾಟಕದ ಮಟ್ಟಿಗೆ ವಚನ ಚಳುವಳಿಯ ನಂತರವೂ ವರ್ಗ ಮತ್ತು ಜಾತಿಗಳು ಇನ್ನೂ ಗಾಢವಾಗಿ ಸಮಾಜವನ್ನು ಆವರಿಸಿಕೊಂಡಿದ್ದನ್ನು ದಾಖಲೆಗಳು ಹೇಳುತ್ತವೆ. ಇದು ಮಧ್ಯಕಾಲೀನ ಸಂದರ್ಭದ ಕನಕದಾಸರ ಕಾಲಘಟ್ಟದಲ್ಲಿಯೂ ಸಮಾಜವನ್ನು ಇನ್ನಿಲ್ಲದಂತೆ ಕಾಡತೊಡಗಿತು. ಅದರಲ್ಲೂ ಶೂದ್ರರೆಂದು ಪರಿಗಣಿಸಲ್ಪಟ್ಟ ಜನಸಾಮಾನ್ಯರು ಅನುಭವಿಸುತ್ತಿದ್ದ ತಾರತಮ್ಯದ ಯಾತನೆಯನ್ನು ಕನಕದಾಸರು ತಾವು ಢಣಾಯಕರಾಗಿದ್ದಾಗಲೂ ಕಂಡಿದ್ದರು. "ತಾವು ರಾಜ್ಯವನ್ನೆಲ್ಲಾ ತ್ಯಜಿಸಿ ದಾಸರಾದ ಮೇಲಂತೂ ತಾವೇ ಸ್ವತಹ ಅನುಭವಿಸಿದ್ದರು. ವಿಜಯನಗರ ಸಾಮ್ರಾಜ್ಯದ ವ್ಯಾಸಕೂಟದಲ್ಲಿದ್ದಾಗ ಕನಕದಾಸರು ಅನುಭವಿಸಿದ ಸಂಕಟವೇ ರಾಮಧಾನ್ಯಚರಿತೆಯ ರಚನೆಗೆ ಮೂಲ ಪ್ರೇರಣೆಯಾಗಿ 'ವ್ಯಾಸಕೂಟ' ಮತ್ತು 'ದಾಸಕೂಟದ' ಭಿನ್ನಮತ ಹಾಗೂ ಕುಹಕಗಳಿಗೂ ಕಾರಣವಾಯಿತು." ಎಂದು ವಿ.ಚಂದ್ರಶೇಖರ ನಂಗಲಿಯವರು ಅಭಿಪ್ರಾಯ ಪಡುತ್ತಾರೆ.[೩]

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಶೂದ್ರರೆನಿಸಿಕೊಂಡಿದ್ದ ಸಾಮಾನ್ಯರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಪಶುಪಾಲಕರಾಗಿಯೂ ಜೀವನವನ್ನು ಸಾಗಿಸುತ್ತಿದ್ದರು. ಇವರು ಮೂಲತಃ ಶ್ರಮಜೀವಿಗಳು. ಸೈನ್ಯದಲ್ಲಿಯೂ ಕೂಡ ಕುರುಬ ಮತ್ತು ಬೇಡರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಈ ಶೂದ್ರ ಜನಾಂಗ, ಪ್ರಭುತ್ವದ ಸೇವಕರಂತೆ ಕಾರ್ಯ ನಿರ್ವಹಿಸುವುದು ಒಂದು ಕಡೆಯಾದರೆ, ಮೇಲ್ವರ್ಗದ ಜಾತಿಯ ಜನರು ತೋರಿಸುವ ಅಸಮಾನತೆಯನ್ನು ಸಹಿಸಿಕೊಳ್ಳುವುದು ಮತ್ತೊಂದು ಕಡೆಯಾಗಿತ್ತು. ಸಾಮ್ರಾಜ್ಯದಲ್ಲಿ ಅಧಿಕಾರಲಾಲಸೆ, ಸಂಚುಗಾರರ ಉಪಟಳ, ಶಿಶುಹತ್ಯೆ, ರಾಜಹತ್ಯೆ, ಸ್ವಜನಪಕ್ಷಪಾತ, ದುರಾಕ್ರಮಣಗಳು ನಡೆಯುತ್ತಲೇ ಇದ್ದವು. ಸಾಮ್ರಾಜ್ಯ ವಿಸ್ತಾರವಾದಂತೆ ಸ್ವಾಮಿನಿಷ್ಠರಲ್ಲದವರು, ಸ್ವಾರ್ಥಪರರು ಹಳ್ಳಿ ಮತ್ತು ನಗರಗಳಲ್ಲಿ ಹುಟ್ಟಿಕೊಳ್ಳತೊಡಗಿದರು.

ಮಂಡಲೇಶ್ವರರೆನಿಸಿಕೊಂಡವರು ತಾವೇ ರಾಜರಂತೆ ಮೆರೆಯತೊಡಗಿದರು. ರಾಜರು ನಡೆಸಿದ ನಿರಂತರವಾದ ಯುದ್ಧಗಳಿಂದ, ಸೋತ ರಾಜರ ಬೊಕ್ಕಸಗಳನ್ನು ಇವರು ಲೂಟಿಮಾಡತೊಡಗಿದರು. ವೈಯುಕ್ತಿಕ ಲಾಲಸೆಗಳು ಬೆಳೆಯತೊಡಗಿದವು.

ಇದರಿಂದ ನೆರೆಯ ರಾಜರ ದ್ವೇಷವನ್ನು ಕಟ್ಟಿಕೊಳ್ಳಬೇಕಾಯಿತು. ರಾಜ್ಯದಲ್ಲಿ ಸಂಪತ್ತು ಕೆಲವೇ ವರ್ಗದವರ ಸ್ವತ್ತಾಗತೊಡಗಿತು. ರಾಜ ಯುದ್ಧ ಮತ್ತು ರಾಜ್ಯ ವಿಸ್ತರಣೆಗಳಲ್ಲಿ ತೊಡಗಿದ್ದರಿಂದ ರಾಜ್ಯದ ಆಂತರಿಕ ಭದ್ರತೆ ಕುಸಿಯತೊಡಗಿತು. ಇದರಿಂದ ಮೇಲ್ವರ್ಗದವರು ಭೂ ಸ್ವತ್ತಿನ ಒಡೆತನ, ಸೈನಿಕ, ವರ್ತಕ ವೃತ್ತಿಗಳಲ್ಲಿ ಉನ್ನತ ಸ್ಥಾನಗಳನ್ನು ಗಳಿಸಿಕೊಂಡರು ಎಂಬುದು ದೊರೆತಿರುವ ಶಾಸನಗಳಿಂದ ತಿಳಿದು ಬರುತ್ತದೆ.[೮೪] ಹಾಗಾಗಿ ಜನಸಾಮಾನ್ಯರ ಬದುಕು, ಜಾತಿ ತಾರತಮ್ಯ, ಮೇಲುಕೀಳುಗಳ ಶೋಷಣೆಯಿಂದಾಗಿ ಅತಂತ್ರವಾಗತೊಡಗಿತು. ಇಂತಹ ದೋಷ ದೌರ್ಬಲ್ಯಗಳನ್ನು ಬಹು ಹತ್ತಿರದಿಂದ ಕಂಡ ಕನಕದಾಸರು ತಮ್ಮ ರಾಮಧಾನ್ಯ ಚರಿತೆಯಲ್ಲಿ ಮೇಲ್ವರ್ಗ ಮತ್ತು ಕೆಳಜಾತಿಯವರ ತಿಕ್ಕಾಟಗಳನ್ನು ಭತ್ತ(ಮೇಲ್ವರ್ಗ) ಮತ್ತು ರಾಗಿ(ಕೆಳವರ್ಗ) ವಾಗ್ವಾದಗಳ ಮೂಲಕ ಸಂಕೇತಿಸಿದ್ದಾರೆ.

ಅರಣ್ಯದಲ್ಲಿ ಗೌತಮ ಮುನಿಯ ಆಶ್ರಮದಲ್ಲಿ ಉಳಿದುಕೊಂಡಿದ್ದ, ಶ್ರೀರಾಮಚಂದ್ರನ ಸಭೆಯಲ್ಲಿ, ಧಾನ್ಯಗಳಲ್ಲಿ ಯಾರು ಶ್ರೇಷ್ಠ ಎಂಬ ಪ್ರಶ್ನೆ ಬಂದಾಗ ಭತ್ತ, ರಾಗಿಯನ್ನು ಕುರಿತು,

ಏನೆಲವೊ ನರೆದಲಗ ನೀ ಸ  
ಮಾನನೇ ಎನಗಿಲ್ಲಿ ನಮ್ಮನು  
ದಾನವಾಂತಕೆ ಬಲ್ಲನಿಬ್ಬರ ಹೆಚ್ಚು ಕುಂದುಗಳ  
ಜಾನಕೀ ಪತಿ ಸನಿಹದಲಿ ಕುಲ  
ಹೀನ ನೀನು ಪ್ರತಿಷ್ಠ ಸುಡು ಮತಿ  
ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ॥ [೮೫]

ಭತ್ತದ ಈ ನುಡಿಯನ್ನು ಕೇಳಿ ಕನಲಿ ಕಂಗಳಲ್ಲಿ ಕಿಡಿಮಸಗಿ ಕೋಪಗೊಂಡ ರಾಗಿ ಸಿಡಿಲ ಘರ್ಜನೆಯಿಂದ,

ನುಡಿಗೆ ಹೇಸದ ಭಂಡ ನಿನ್ನೊಳು  
ಕೊಡುವರೇ ಮಾರುತ್ತರವ ಕಡು  
ಜಡವಲಾ ನಿನ್ನೊಡನೇ ಮಾತೇಕೆಂದ ನರೆದಲಗ॥

ಎಂದು ಭತ್ತವನ್ನು ಅಂಗಿಸುತ್ತಾ,

ಸತ್ಯ ಹೀನನು ಬಡವರನು ಕ  
ಣ್ಣೆತ್ತಿ ನೋಡೆ ಧನಾಢ್ಯರನು ಬೆಂ  
ಬತ್ತಿ ನಡೆವ ಅಪೇಕ್ಷೆ ನಿನ್ನದು ಹೇಳಲೇನದನು॥

ಬಲ್ಲಿದರು ಬರೆ ಬಡವರಲಿ ನಿ
ನ್ನಲ್ಲಿಯುಂಟು ಉಪೇಕ್ಷೆ ನಮ್ಮಲಿ
ಸಲ್ಲದೀ ಪರಿ ಪಕ್ಷಪಾತವದಿಲ್ಲ ಭಾವಿಸಲು
ಬಲ್ಲಿದರು ಬಡವರುಗಳೆನ್ನದೆ
ಎಲ್ಲರನು ರಕ್ಷಿಸುವೆ ನಿರ್ದಯ
ನಲ್ಲ ತಾ ನಿನ್ನಂತೆ ಎಲೆ ಕುಟಿಲಾತ್ಮ ಹೋಗೆಂದ॥ [೮೬]

ಹೀಗೆ ಶ್ರೇಷ್ಠತೆಯ ದೃಷ್ಟಿಯಿಂದ ರಾಗಿ ಮತ್ತು ಭತ್ತಗಳ ವಾಗ್ವಾದ ನಡೆದಾಗ, ಪ್ರಭುತ್ವ ಹೊಂದಿದ್ದ ರಾಮನೇ ಮಧ್ಯಸ್ತಿಕೆ ವಹಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ರಾಮನ ಮೇಲೆ ದೊಡ್ಡ ಜವಾಬ್ದಾರಿಯೇ ಇದೆ. ಶ್ರಮಿಕ ವರ್ಗ ಮತ್ತು ಕೆಳವರ್ಗದ ದನಿಯಾಗಿ ಪ್ರಭಾವಿತನಾಗಿರುವ ರಾಗಿಗೂ; ಬಂಡವಾಳಶಾಹಿ ಹಾಗೂ ಮೇಲ್ವರ್ಗದ ಪರವಾಗಿರುವ ಭತ್ತಕ್ಕೂ ನಡೆದ ಬಹು ದೊಡ್ಡ ಕಾಳಗದಲ್ಲಿ ರಾಮನ ತೀರ್ಮಾನವು ನಮ್ಮ ಸಂಸ್ಕೃತಿ, ಜನಜೀವನ ಮತ್ತು ಸಮಾಜದ ಮೇಲೆ ಗಾಢವಾದ ಪ್ರಭಾವ ಬೀರಿರುವುದನ್ನು ಕನಕದಾಸರು ತಮ್ಮ ಸ್ವ ಅನುಭವದಿಂದಲೇ ನಿರೂಪಿಸಿದ್ದಾರೆ.

ರಾಮನ ತೀರ್ಪು ಧರ್ಮಕ್ಕೆ ಕಟ್ಟುಬಿದ್ದಂತೆ ಕಂಡು ಬರುತ್ತಿದ್ದು, ಪ್ರಭುತ್ವದ ರಾಜಕಾರಣದ ಕಡೆಗೂ ಯೋಚಿಸಿರುವಂತೆ ಕಾಣುತ್ತದೆ. ಏಕೆಂದರೆ ಪ್ರಭುತ್ವ ಮತ್ತು ಪುರೋಹಿತಶಾಹಿತ್ವಗಳೆರಡೂ ಸೇರಿಯೇ ಅಧಿಕಾರದ ಸಾಂಸ್ಥಿಕ ನೆಲೆಗಳನ್ನು 'ಜಂಟಿ ಯಜಮಾನ್ಯ' ನೆಲೆಯಲ್ಲಿ ಸ್ವಾಧೀನ ಪಡಿಸಿಕೊಂಡಿದ್ದವು.[೮೭] "ಇದರಿಂದಾಗಿ ಸಾಮಾನ್ಯ ಮನುಷ್ಯರ (ಕೆಳವರ್ಗ) ಬದುಕಿನ ಮೇಲೆ ಒತ್ತಾಯಪೂರ್ವಕವಾಗಿ ಹೇರಲಾದಂತಹ ಅವಮಾನೀಯ ಹಾಗೂ ಅತ್ಯಂತ ಕಠೋರವಾದ ಧಾರ್ಮಿಕ ನೀತಿ ನಿಯಮಗಳು ಆಚರಣೆಗೆ ಬಂದಿರುವುದು; ಭಾರತದ ಮಧ್ಯಕಾಲೀನ ಇತಿಹಾಸದಿಂದ ತಿಳಿಯುತ್ತದೆಂದು" ಬಸವರಾಜ ಕಲ್ಗುಡಿಯವರು ಅಭಿಪ್ರಾಯ ಪಡುತ್ತಾರೆ.[೮೮]

"ವಿಜಯನಗರ ಕಾಲದ ಅರಸೊತ್ತಿಗೆಯಂತೂ ಏಕಕೇಂದ್ರಿತವಾಗಿದ್ದು ತನಗೆ ಬೇಕಾದ ಸಂಗತಿಗಳನ್ನು ಪುನರ್ ವ್ಯಾಖ್ಯೆ ಮಾಡಿಕೊಳ್ಳುವ ಅನೇಕ ಸವಲತ್ತುಗಳನ್ನು ಹೊಂದಿತ್ತು. ಇಲ್ಲಿನ ಸಾಮಾನ್ಯ ಜನ (ಕೃಷಿಕರು, ಪಶುಪಾಲಕರು, ಬೇಡರು, ಇತರೆ ಕೆಳವರ್ಗದವರು)ರು ಪ್ರಭುತ್ವದ ಬಗ್ಗೆ ನಿರ್ಲಿಪ್ತ ಸ್ಥಿತಿಯನ್ನು ಹೊಂದಿದ್ದರು. ಇದರಿಂದ ಸಮಾಜ ತನ್ನ ಸ್ವಾಸ್ಥ್ಯವನ್ನು ಕಳೆದುಕೊಂಡಿತ್ತು. ಮೇಲು-ಕೀಳಿನ ತಾರತಮ್ಯದ ತೀವ್ರತೆಯಿಂದಾಗಿ ಸಾಮಾಜಿಕ ಸಹಮತವೂ ಇರಲಿಲ್ಲ," ಎಂದು ಕೇಶವಶರ್ಮರು ಅಭಿಪ್ರಾಯಪಡುತ್ತಾರೆ.[೮೯]

ಹಾಗಾಗಿ ಜಾತಿ-ಮತಗಳೇ ಪ್ರಭುವಾಗಿದ್ದ ಆ ಕಾಲದಲ್ಲಿ ವ್ಯಕ್ತಿಯ ಹಿರಿಮೆಯನ್ನು ಜಾತಿ ಮೂಲದಿಂದಲೇ ನಿರ್ಧರಿಸಲಾಗುತ್ತಿತ್ತು. ಇದರಿಂದಾಗಿಯೇ ಬಹಳ ನೋವುಂಡ

ಕನಕದಾಸರು, ಕೃತಿಯಲ್ಲಿನ ಈ ಸನ್ನಿವೇಶದ ಅಭಿವ್ಯಕ್ತಿಯಲ್ಲಿ ಸಾತ್ವಿಕ ಕೋಪವನ್ನೇ ರಾಗಿಯ ಮೂಲಕ ತೋರಿಸಿರುವುದು ಸ್ಪಷ್ಟ. ಜೊತೆಗೆ ಸಾಮಾನ್ಯರ ನೋವುಂಡು ಬೆಳೆದಿದ್ದ ಹಾಗೂ ಪ್ರಭುತ್ವದ ಮೂಲಕ ಅದರ ಮಿತಿಯನ್ನು ಅರಿತಿದ್ದ ಕನಕದಾಸರು ದಾಸಪಂಥವೊಂದನ್ನು ಸೇರಿದ್ದು ಈ ಹಿನ್ನಲೆಯಿಂದಲೇ ಎನ್ನಬೇಕು. ಅಂದು 'ವ್ಯಾಸಕೂಟ' ಮತ್ತು 'ದಾಸಕೂಟ'ಗಳ ನಡುವೆ ಮಡಿಮೈಲಿಗೆಯ ಕುರಿತಾದ ಜಿಜ್ಞಾಸೆಗಳು ಮುಂದುವರೆಯುತ್ತಲೇ ಇದ್ದವು. ತಾನು ಕೆಳವರ್ಗದವನಾಗಿದ್ದು ಹಾಗೂ ಈ ವರ್ಗದ ಜನರ ಬದುಕಿನ ಪರಿಣಾಮವನ್ನು ಹಾಗೆಯೇ ಅನುಭವಿಸಿದ್ದ ಕನಕದಾಸರಿಗೆ ಭತ್ತದ ಮೂಲಕ ಮೆಲ್ವರ್ಗದವರ ದುರಹಂಕಾರವನ್ನು ಸದೆ ಬಡಿದು ಪ್ರಭುತ್ವಕ್ಕೆ ಎಚ್ಚರವನ್ನು ನೀಡುವುದು ಕೃತಿಯಲ್ಲಿನ ಮುಖ್ಯ ಉದ್ದೇಶವಾಗಿತ್ತೆಂಬುದನ್ನು ಇಲ್ಲಿ ಮನಗಾಣಬಹುದು. ಅದಕ್ಕಾಗಿಯೇ ರಾಗಿಯ ಮೂಲಕ,

ಏನಿಹಿರಿ ಹಿರಿಕಿರಿದ ನುಡಿಯದೆ
ಮೌನದೀಕ್ಷಿತರಾದಿರಲ ಕಂ
ಡೆನು ಮುರಿದಾಡುವಿರ ಸಾಧ್ಯವೊ ಸಾಧ್ಯವೋ ನಿಮಗೆ
ಈ ನಪುಂಸಕನಲಿ ನಿರಂತರ
ವೇನು ಕಾರಣ ವಾದವಿದು ನಮ
ಗೇನು ಬುದ್ಧಿಯ ನರುಹುವಿರಿ ಪೇಳೆಂದ ನರೆದಲಗ॥ ೯೦

ಎಂದು ವಿನಯದಿಂದಲೇ ನಿವೇದಿಸುತ್ತಾರೆ.

ಇಲ್ಲಿ ರಾಗಿ ಶ್ರೀಸಾಮಾನ್ಯರ ಪರ ಮಾತನಾಡಿ ಪ್ರಭುತ್ವವನ್ನು ಮತ್ತು ಅಧಿಕಾರವನ್ನು ಸದ್ದಿಲ್ಲದೆ ಟೀಕಿಸಿದೆ. 'ಸಿರಿಯ ಮದವೆಂಬ ಸಂಪತ್ತಿನಲ್ಲಿ ನಮ್ಮನ್ನು ಮರೆಯುವುದು ಎಂದರೆ ಪ್ರಜೆಗಳನ್ನು ಶ್ರೀ ಸಾಮಾನ್ಯರನ್ನು ನಿರಾಕರಿಸುವುದೇ ಆಗಿದೆ. ಪ್ರಭುತ್ವದ ಕರುಣೆ ಅದರ ನ್ಯಾಯಸಮ್ಮತ ರಕ್ಷಣೆ ಇಲ್ಲದಿದ್ದರೆ ಸಾಮಾನ್ಯರ ಪಾಡೇನು?' ಎಂಬುದು ರಾಗಿಯು ಕಳಕಳಿಯಾಗಿದೆ. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ ಕೆಳವರ್ಗದವರು ಸಮಾಜದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಪ್ರಭುತ್ವದ ಹಾಗೂ ಮೇಲ್ವರ್ಗದವರ ಎದುರಿಗೆ ನಿಂತು 'ನಮಗೇನು ಬುದ್ಧಿಯನರುಹಿವಿರಿ' ಎಂದು ಹೇಳಿರುವ ಸವಾಲಿನ ಮಾತು ಕೂಡ ವಿನಯಂತಿಕೆಯಿಂದಲೇ ಹೇಳಿದಂತಿರಲು ಕಾರಣ; ಈ ವರ್ಗದವರ ಮಿತಿಯನ್ನು ಬಹು ಹತ್ತಿರದಿಂದ ಕನಕದಾಸರು ಬಲ್ಲವರಾಗಿದ್ದರು. ಆದರೂ ಕೆಳವರ್ಗದವರೆನಿಸಿಕೊಂಡ ಅಂದಿನ ಇವರ ಸ್ಥಿತಿ, ಸಾರ್ವಕಾಲಿಕವಾಗಿ ಈಗಲೂ ಹಾಗೆಯೇ ಮುಂದುವರೆಯುತ್ತಿರುವುದು ವಿಪರ್ಯಾಸವೇ ಸರಿ.

ಆದರೆ ಯಜಮಾನ್ಯವನ್ನು ಪ್ರತಿನಿಧಿಸುವ ಭತ್ತಕ್ಕೆ ಇದು ಬೇಕಾಗಿಲ್ಲ. ಇದಕ್ಕೆ

ಪ್ರಭುತ್ವದ ಬೆಂಬಲವೂ ಇದೆ. ಇಲ್ಲಿ ರಾಗಿ ಮತ್ತು ಭತ್ತಗಳ ನಡುವಿನ ವಾಕ್ ಸಮರದಲ್ಲಿ ಬರುವ 'ಮಸೆದುದಿತ್ತಂಡಕ್ಕೆ ಮತ್ಸರ' ಎಂಬ ಮಾತು ಆ ಕಾಲದ ಕೆಳ ಜಾತಿ ಮತ್ತು ವರ್ಣ ಸಂಘರ್ಷದ ಪ್ರಭಾವ ಕನಕದಾಸರನ್ನು ಹೇಗೆ ತಟ್ಟಿತ್ತು ಎಂಬುದನ್ನು ಪ್ರತಿನಿಧಿಸುತ್ತದೆ.

ಜಾತಿ ಮತ್ತು ಧರ್ಮದ ವಿಚಾರದಲ್ಲಿ ಜನತೆಯನ್ನು ಎದುರು ಹಾಕಿಕೊಳ್ಳದ ರಾಮ, ಪರಿಹಾರವೊಂದನ್ನು ಸೂಚಿಸುತ್ತಾನೆ. ಈ ಘಟನೆ ನಡೆಯುತ್ತಿರುವುದಾದರೂ ಎಲ್ಲಿ? ವಾನರಸೈನ್ಯ, ರಾಮಸೈನ್ಯ, ಕಾಡಿನ ಜನರೇ ಹೆಚ್ಚಿಗೆ ಇದ್ದ ಮುಚುಕುಂದ ಮುನಿಗಳ ಆಶ್ರಮದಲ್ಲಿ. ಬಹುಸಂಖ್ಯಾತರೂ ಹಾಗೂ ಮೇಲ್ವರ್ಗದವರೂ ಎನ್ನುವ ಪ್ರಶ್ನೆ ಕೂಡ ಇಲ್ಲಿ ಎದುರಾಗಿದೆ. ಈಗಿನಂತೆ ಕನಕದಾಸರ ಕಾಲದಲ್ಲೂ ಹೆಚ್ಚಿನ ಸಂಖ್ಯೆಯವರೆಂದರೆ ಕೆಳವರ್ಗದವರೇ ಅಲ್ಲವೇ. ಈ ವರ್ಗದ ನೋವು, ಸಂಕಟ, ಆತಂಕ, ಕನವರಿಕೆ ಮತ್ತು ಆಸೆಗಳನ್ನು ಬಹು ಹತ್ತಿರದಿಂದ ಬಲ್ಲವರಾಗಿದ್ದ ಕನಕದಾಸರು ಅಂದು ಮೇಲ್ವರ್ಗದವರು ಈ ಜನಾಂಗದ ಮೇಲೆ ಬಲಾತ್ಕಾರವಾಗಿಯೇ ಹೇರುತ್ತಿದ್ದ ಶೋಷಿತ ನಿಲುವುಗಳನ್ನು ಸ್ವತಃ ಅನುಭವಿಸಿದ್ದರು. ಹಾಗಾಗಿ ಇಲ್ಲಿ ನೀಡುವ ತೀರ್ಪಿನಿಂದ ಉಂಟಾಗಬಹುದಾದ ಪರಿಣಾಮವನ್ನು ಎದುರಿಸಲಾರದೆ, ರಾಮನ ಮಾತಿನ ಮೂಲಕ ಬುದ್ಧಿವಂತಿಕೆಯ ಪರಿಹಾರವನ್ನು ಕಂಡುಕೊಂಡರು.

ಅರಸುಗಳು ನಾವೆಲ್ಲ ಭೂಮೀ
ಸುರರು ನೆರದಿಹ ದಾನವರು ವಾ
ನರರು ನಮಗೀ ನ್ಯಾಯವನು ಪರಿಹರಿಸಲಳವಲ್ಲ
ಕರೆಸುವೆವು ಹರಿಹರ ವಿರಂಚಾ
ಧ್ಯರನಯೋಧ್ಯೆಗೆ ಅವರ ಗುಣವಾ
ಧರಸಿ ಪೇಳ್ವರು ನಯದೊಳೆಂದನು ರಾಮ ನಸುನಗುತ। [೯೧]

ಎಂದು ರಾಮನು ನಸುನಗುತ್ತಲೇ(ಈ ನಗು ಕೂಡ ರಾಜಕಾರಣದ್ದೇ) ತುಂಬಾ ನಯವಾಗಿ ಸಭೆಯಲ್ಲಿ ಪರಮಧಾನ್ಯಗಳೆರಡನ್ನೂ ಕುರಿತು,

ಪರಮ ಧಾನ್ಯದೊಳಿಬ್ಬರೇ ಇವರಿರಲಿ
ಸೆರೆಯೊಳಗಾರು ತಿಂಗಳು
ಹಿರಿದು ಕಿರಿದೆಂಬಿವರ ಪೌರುಷವರಿಯಬಹುದಿನ್ನು
ಪುರಕೆ ಗಮನಿಸಿ ನಾವು ನಿಮ್ಮನು
ಕರೆಸುವೆವು ಕೇಳೆನುತಯೋಧ್ಯಾ
ಪುರಿಗೆ ಪಯಣವ ಮಾಡಹೇಳಿದನಾ ವಿಭೀಷಣನಿಗೆ। [೯೨]

ಶ್ರೀರಾಮನ ತೀರ್ಮಾನದಂತೆ ಭತ್ತ ಮತ್ತು ರಾಗಿಯನ್ನು ಆರು ತಿಂಗಳು ಸೆರೆಯಲ್ಲಿರಿಸಲಾಯಿತು. ರಾಮ ಅಯೋಧ್ಯೆಗೆ ತನ್ನ ಪಯಣ ಬೆಳೆಸಿ, ಪಟ್ಟಾಭಿಷೇಕದ ಕಾರ್ಯಗಳೆಲ್ಲಾ ಮುಗಿದು ಆರೇಳು ತಿಂಗಳ ನಂತರ ಆತನಿಗೆ ಭತ್ತ ಮತ್ತು ರಾಗಿಯ ನೆನಪಾಗಿ, ಕಾಡಿನಲ್ಲಿ ಸೆರೆಯಲ್ಲಿದ್ದ ಅವುಗಳನ್ನು ಹನುಮಂತನ ಮೂಲಕ ಅರಮನೆಗೆ ತರಿಸಿದನು.

ಈಗ ನ್ಯಾಯ ನಡೆಯುತ್ತಿರುವುದಾದರೂ ಎಲ್ಲಿ? ಪ್ರಭುತ್ವ ಮತ್ತು ಅದರ ಸುತ್ತಲೂ ಮೇಲ್ವರ್ಗದವರೇ ಇದ್ದಂತಹ ಆಡಳಿತ ಕೇಂದ್ರವಾದ ಅಯೋಧ್ಯೆಯಲ್ಲಿ. ಇಲ್ಲಿನ ಸಭೆಗೆ ಹರಿಹರವಿರಿಂಚಾದಿಗಳೆಲ್ಲಾ ಬಂದಿದ್ದಾರೆ. ಇದೇ ವಿಚಾರದಲ್ಲಿ ಏಳು ತಿಂಗಳ ಹಿಂದೆ ಕಾಡಿನಲ್ಲಿ ಇದ್ದ ಸಭೆಗೂ ಅಯೋಧ್ಯೆಯ ಅರಮನೆಯಲ್ಲಿ ಈಗಿರುವ ಸಭೆಗೂ ತುಂಬಾ ವ್ಯತ್ಯಾಸವಿದೆ. ಅಂದಿನ ಸಭೆಯಲ್ಲಿ ಕೆಳವರ್ಗದವರು, ಯುದ್ಧದಂತಹ ಕಷ್ಟದ ಕೆಲಸ ಮಾಡುವವರು, ತುಳಿತಕ್ಕೊಳಗಾದವರು ಹಾಗೂ ನೊಂದವರೇ ಹೆಚ್ಚಾಗಿದ್ದು; ಮೇಲ್ವರ್ಗದವರೆನಿಸಿ ಕೊಂಡವರು ಬೆರಳೆಣಿಕೆಯಷ್ಟಿದ್ದರಿಂದ ರಾಮ ತೀರ್ಪನ್ನು ನೀಡಲೇ ಇಲ್ಲ. ಏಕೆಂದರೆ ಮೇಲ್ವರ್ಗದವರ ಮುಲಾಜಿಗೆ ಒಳಗಾಗಿಯೇ ಸಾಮ್ರಾಜ್ಯವನ್ನು ಮುನ್ನಡೆಸುತ್ತಿದ್ದ ಅಂದಿನ(ಇಂದಿನ) ಪ್ರಭುತ್ವ ಮತ್ತು ಅದರ ರೂವಾರಿ ರಾಮ, ಸಭೆಯಲ್ಲಿನ ಸಂಖ್ಯಾಬಲವನ್ನು ಬಹು ಸೂಕ್ಷ್ಮವಾಗಿ ಗಮನಿಸಿದ್ದಾನೆ. ಆದ್ದರಿಂದಲೇ ಬಹುಸಂಖ್ಯೆಯ ಕೆಳವರ್ಗದವರ ಪರವಾಗಿ, 'ರಾಗಿ'ಯೇ ಶ್ರೇಷ್ಠ ಎಂಬ ನ್ಯಾಯದ ತೀರ್ಪು ನೀಡಲು ಹಿಂದೇಟು ಹಾಕುತ್ತಾನೆ. ಎಲ್ಲಿ ಮೇಲ್ವರ್ಗದವರ ಕೆಂಗಣ್ಣಿಗೆ ಗುರಿಯಾಗುವೆನೆಂಬ ಭಯ ಪ್ರಭು ರಾಮನನ್ನು ಅಂದು ಕಾಡಿರುವುದಂತೂ ಸತ್ಯ. ಆದರೆ ಅರಮನೆಯ ಆಸ್ಥಾನದಲ್ಲಿ ನಡೆಯುತ್ತಿರುವ ಈಗಿನ ಸಭೆಯಲ್ಲಿ; ಪ್ರಭುತ್ವದ ಪರವಾಗಿ ಇರುವವರೇ ಹೆಚ್ಚಾಗಿದ್ದಾರೆ. ಜನಸಾಮಾನ್ಯರೆನಿಸಿಕೊಂಡವರು ಕೆಲವೇ ಮಂದಿ. ಇಲ್ಲಿನ ಸಭೆಯಲ್ಲಿ ಸಂಖ್ಯಾಬಲ ನಗಣ್ಯ. ಅದೂ ರಾಜನ ಆಸ್ಥಾನದಲ್ಲಿನ ಈ ಸಭೆಗೆ ಮಂತ್ರಿಗಳು, ಮಾಂಡಲೀಕರು, ದೇವಾನುದೇವತೆಗಳು ಆಹ್ವಾನಿತರಾಗಿದ್ದಾರೆ. ಇಲ್ಲಂತೂ ಶ್ರೀಸಾಮಾನ್ಯನಿಗೆ ಸಹಜವಾಗಿ ಮಾತನಾಡುವುದಕ್ಕಿರಲಿ, ಸಮಾನವಾಗಿ ಕುಳಿತುಕೊಳ್ಳುವುದಕ್ಕೂ ಅವಕಾಶವಿರುವುದಿಲ್ಲ.

ಇಂತಹ ಅನೇಕ ಸಂದಿಗ್ಧ ಸಂದರ್ಭಗಳನ್ನು ಕನಕದಾಸರು ಮತ್ತು ಅವರ ಸುತ್ತಲೂ ಇದ್ದ ಸಾಮಾನ್ಯ ಜನರು ಅನುಭವಿಸಿರಲೇಬೇಕು. ಕೆಳವರ್ಗದವರು ರಾಜನೆದುರಿಗೆ ಅದೂ ಅರಮನೆಯಲ್ಲಿ ರಾಜನ ಆಸ್ಥಾನದಲ್ಲಿ ಮೌನವಾಗಿದ್ದುದ್ದೇ ಹೆಚ್ಚು. ಈ ಪರಿಣಾಮ ಕನಕದಾಸರನ್ನು ತಟ್ಟಿರುವುದಂತೂ ಸತ್ಯ. ಅದಕ್ಕಾಗಿಯೇ ಈ ಸನ್ನಿವೇಶವನ್ನು ಕೃತಿಯಲ್ಲಿ ಬೇಕೆಂತಲೇ ತಂದಿದ್ದಾರೆ. ಅವರೊಳಗಿದ್ದ ಪ್ರಭುತ್ವದ ಅನುಭವ ಮತ್ತು ಶ್ರೀಮಾನ್ಯನ ನೋವು ಸಂಕಟಗಳು ಇಂತಹ ಸನ್ನಿವೇಶ ಸೃಷ್ಟಿಸಲು

ಸಾಧ್ಯವಾಗಿಸಿರಬೇಕು. ಇದೆಲ್ಲವೂ ಮಧ್ಯಕಾಲೀನ ಸಂದರ್ಭದಲ್ಲಿ ನಡೆದಿರುವಂತಹುದೇ. ಈ ನಡೆ ವರ್ತಮಾನದಲ್ಲಿಯೂ ಮುಂದುವರೆಯುತ್ತಿರುವುದಕ್ಕೆ ಕಾರಣ ಕಂಡು ಕೊಳ್ಳುವಂತಹ ಸಂಶೋಧನೆಗಳು ನಡೆಯಬೇಕಿದೆ.

ತುಂಬಿದ ಸಭೆಯಲ್ಲಿ ಸುತ್ತಲೂ ಕಣ್ಣಾಡಿಸಿ, “ಆರು ನುಡಿಯದೆ ನೀವು ಹಿರಿಯರು ಮೀರಿಸುವವರಾರಿವರೊಳಗೆ ಗುಣಸಾರವನು?” ಎಂದು ರಾಮನು ತುಂಬಿದ ಸಭೆಯನ್ನು ಪ್ರಶ್ನಿಸುತ್ತಾನೆ. ಆಗ ಜಂಭಾರಿ ಎರಡೂ ಧಾನ್ಯಗಳನ್ನು ಗಮನಿಸಿ ಸಾರ ಹೃದಯನು ನರೆದಲಗ(ರಾಗಿ), ನಿಸ್ಸಾರನೀ ವ್ರಿಹಿ(ಭತ್ತ) ಎಂದು ತೀರ್ಮಾನ ಹೇಳಿದ. “ಸುರಪನ ಮಾತು ನಿಶ್ಚಯಹುದು ನರೆದಲಗನೇ ಸಮರ್ಥನು. ಈತ ಬಹಳ ಬಲಯುತ ಸೆರೆಗೆ ತಳ್ಳಲು ಕಾಂತಿಗೆಡಲಿಲ್ಲ” ಎಂಬ ನಾರದರ ಮಾತನ್ನು ಸಭೆಯಲ್ಲಿನ ಎಲ್ಲರೂ ಅನುಮೋದಿಸಿದರು.

ಇಲ್ಲಿ ರಾಗಿ ಪ್ರತಿನಿಧಿಸಿರುವುದೇ ಸಾಮಾನ್ಯರು ಎನಿಸಿಕೊಂಡಿದ್ದ ಪಶುಪಾಲಕರು, ಬೇಡರು, ಕೃಷಿಕರನ್ನು. ಇವರೆಲ್ಲಾ ಶ್ರಮ ಜೀವಿಗಳು. ಬಿಸಿಲು, ಮಳೆ, ಚಳಿಯೆನ್ನದೇ ದುಡಿಯುತ್ತಿದ್ದವರು. ನೋಡಲು ಒರಟಾಗಿ ದುಂಡಾಗಿ ಕಪ್ಪಗಿದ್ದವರು. ಯಾವುದಕ್ಕೂ ಜಗ್ಗುವವರಲ್ಲ. ಇವರ ಆಹಾರವೂ ಹೆಚ್ಚಾಗಿ ರಾಗಿಯೇ. ಇಂತಹ ಜನರೊಂದಿಗಿನ ಒಡನಾಟದ ಪ್ರಭಾವ ಕನಕದಾಸರ ಮೇಲಾಗಿರುವುದೇ ಪ್ರಸ್ತುತ ಸನ್ನಿವೇಶಕ್ಕೆ, ಕಪ್ಪಗಿನ ರಾಗಿಯನ್ನು ರೂಪಕವಾಗಿ ತರಲು ಕಾರಣವಾಗಿದೆ. ಮತ್ತೆ ಸಭೆಯಲ್ಲಿದ್ದ ಕಪಿಲ ಮುನಿಗಳು ಕೂಡ ಎರಡೂ ಧಾನ್ಯಗಳನ್ನು ನೋಡಿ,

ಎಲ್ಲ ನವ ಧಾನ್ಯದಲಿ ಈತನೆಲ್ಲ
ಬಲ್ಲಿದನು ಹುಸಿಯಲ್ಲ ಬಡವರ
ಬಲ್ಲಿದನಾರೈದು ಸಲಹುವ ನಿವಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯದಿ
ಬಲ್ಲಿದರ ಪತಿಕರಿಸುವನು ಅವ
ನಲ್ಲಿ ಸಾರವ ಕಾಣೆಯೆಂದನು ಕಪಿಲಮುನಿನಗುತ॥[೯೩]

ಹೀಗೆ ಸುರರು ಮುನಿಗಳೆಲ್ಲರೂ ನರೆದಲಗನನ್ನೇ ಶಕ್ತನೆಂದು ಮೆಚ್ಚಿದುದರಿಂದ ರಾಮನಿಗೆ ಸಂತೋಷವಾಗಿ,

ಕರೆದು ಕೊಟ್ಟನು ತನ್ನ ನಾಮವ
ಧರೆಗೆ ರಾಘವನೆಂಬ ಪೆಸರಾ
ಯ್ತಿರದೆ ವ್ರೀಹಿ ನಾಚಿದನು ಸಭೆಯಲಿ ಶಿರವ ಬಾಗಿಸಿದ॥[೯೪]

ನರೆದಲಗನಿಗೆ 'ರಾಘವ' ಎಂಬ ಹೆಸರು ಶಾಶ್ವತವಾಗಿಯೇ ನಿಲ್ಲುತ್ತದೆ. ದೇವಾನುದೇವತೆಗಳು ಕೂಡ ತಮ್ಮ ತಮ್ಮ ಶಕ್ತಿಯನ್ನು ರಾಗಿಗೆ ಧಾರೆಯೆರೆಯುತ್ತಾರೆ. ಇದರಿಂದ ರಾಗಿಗೆ ದಕ್ಕಿದ ಲಾಭವಾದರೂ ಏನು? ಎಲ್ಲ ಶ್ರೀಸಾಮಾನ್ಯನಂತೆ ಎಲ್ಲರ ಕಾಲಿಗೆ ಬೀಳುವುದು ತಾನೇ. ಇದು ಕಡ್ಡಾಯವೂ ಹೌದು. ಇಂತಹ ದೃಶ್ಯಗಳು ಕನಕದಾಸರ ಬದುಕು ಮತ್ತು ಸುತ್ತಲ ಸಮಾಜದಲ್ಲಿ ನಿತ್ಯ ನಡೆಯುತ್ತಲೇ ಇತ್ತು.

ಹರುಷದೋರಿದ ಮನದಿ ನಲಿವುತ
ನರೆದಲೆಗನ್ಯೆತಂದು ರಾಮನ
ಸಿರಿಚರಣಕಭಿನಮಿಸೆ ದೇವಾಸುರರು ಕೊಂಡಾಡೆ
ಹರಸಿ ಮುತ್ತಿನ ಸೇಸೆಯನು ಭೂ
ಸುರರು ಮಂತ್ರಾಕ್ಷತೆಯನಿತ್ತುಪ
ಚರಿಸಿದರು ರಾಗಿಯನು ಪೊಗಳಿದರಲ್ಲಿ ಮುನಿವರರು॥[೯೫]

ಯಾವ ವ್ರಿಹಿಗನನ್ನು ನರೆದಲಗ ಇದುವರೆಗೆ ಅಲ್ಲಗಳೆದು ರಾಮನ ಸಭೆಯಲ್ಲಿ ಜಯಗಳಿಸಿತೋ ಅದೇ ರಾಗಿ, ಸಭೆಯಲ್ಲಿನ ಎಲ್ಲರ ಕಾಲಿಗೆ ಬಿದ್ದು ನಮಸ್ಕರಿಸಿತು. ಆಗ ರಾಮನಾದಿಯಾಗಿ ಎಲ್ಲ ಭೂಸುರರು ಹರಸಿ ಹಾಕಿದ ಮಂತ್ರಾಕ್ಷತೆಗಳು ರಾಗಿಯ ತಲೆಯ ಮೇಲೆ ಕುಳಿತದ್ದು, "ಗೋವದು ಕರೆದ ಹಾಲಿಗೆ ಕುರಿಯಲಾಂತರವೆ ಭಾವಿಸಲು; ಸುರನದಿಗೆ ತಾ ಸರಿಯೆ ಕಾಡೊಳು ಹರಿವ ಹಳ್ಳದ ನೀರು; ಗರುಡದ ಮರಿಗೆ ಹದ್ದಂತರವೆ; ಸರಸ ಮರಿಕೋಗಿಲೆಗೆ ವಾಯಸನನಣಕಿಸುವ ತೆರನಾಯ್ತು," ಎಂದು ವ್ರಿಹಿಗನು ಜರಿದ ನುಡಿಗಳಿಗೇ ಆಂತರ್ಯದಲ್ಲಿ ಜಯ ದೊರೆತಂತಾಯಿತು ಎಂಬುದು ವಿಪರ್ಯಾಸ.

ಅಂದರೆ ಕನಕದಾಸರು ಜೀವಿಸಿದ ಮಧ್ಯಕಾಲೀನ ಕಾಲಘಟ್ಟದಲ್ಲಿ ಪ್ರಭುತ್ವದ ಎದುರಿಗೆ ಶ್ರೀ ಸಾಮಾನ್ಯನಿಸಿಕೊಂಡವನು ತನ್ನ ನ್ಯಾಯವನ್ನೇನಾದರೂ ಕೇಳಲು ಬಂದಾಗ ಆತನ ಮೂಗಿಗೆ ತುಪ್ಪ ಸವರಿ ಕಳುಹಿಸುತ್ತಿದ್ದಂತೂ ನಿಜ. ರಾಗಿಗೆ 'ರಾಘವ' ಎಂಬ ಅಭಿದಾನ ಬಂದಿದ್ದರಿಂದಾಗಿ ಮಂತ್ರಾಕ್ಷತೆ ಸ್ವರೂಪದಲ್ಲಿ 'ಭತ್ತ' ತನ್ನ ತಲೆ ಮೇಲೆಯೇ ಕಾಲಿಟ್ಟು ಮತ್ತೂ ತುಳಿಯಲು ಪ್ರಾರಂಭಿಸುತ್ತದೆ. ಗೆದ್ದ 'ರಾಗಿ'ಗೆ ಇಲ್ಲಿಯೂ ಆಗುತ್ತಿರುವ ಈ ಶೋಷಣೆಯನ್ನು ತಪ್ಪಿಸಲು ರಾಮನಿಂದಲೂ ಸಾಧ್ಯವಾಗಲಿಲ್ಲ. ಕೆಳವರ್ಗದವರ ಬಗ್ಗೆ ಇದ್ದ ಪ್ರಭುತ್ವದ ಇಂತಹ ಶೋಷಿತ ನಿಲುವನ್ನು ಕನಕದಾಸರು ಕಂಡಿದ್ದಿರಬಹುದು ಹಾಗೂ ಅನುಭವಿಸಿರಬಹುದು ಅಥವಾ ಪ್ರಭುವಾಗಿದ್ದಾಗ ತಾವೇ ನೀಡಿರಲೂಬಹುದು. ಹಾಗಾಗಿ ಆ ಕಾಲಘಟ್ಟದ ಶ್ರಮಿಕವರ್ಗ

ಅನುಭವಿಸುತ್ತಿದ್ದ ಇಂತಹ ಪರಿಣಾಮಗಳನ್ನು ಯಥಾವತ್ತಾಗಿ ಕೃತಿಯಲ್ಲಿ ತರಲು ಕನಕದಾಸರಿಗೆ ಸಾಧ್ಯವಾಗಿದೆ.

ಈ ಸಂದರ್ಭದ ಇನ್ನೊಂದು ಚಿತ್ರಣವನ್ನೂ ಇಲ್ಲಿ ಗಮನಿಸಬೇಕು. ಸಭೆಯಲ್ಲಿ ತನಗೆ ಆದ ಅವಮಾನದಿಂದ ತಲೆತಗ್ಗಿಸಿಕೊಂಡು ಕುಳಿತಿದ್ದ ವ್ರಿಹಿಗನನ್ನು ರಾಮ ತನ್ನ ಸನಿಹಕ್ಕೆ ಕರೆದು,

ಮರುಳೆ ಬಾರೈ ವ್ರಿಹಿಯೆ ಮನದಲಿ
ಕೊರಗಿ ಚಿಂತಿಸಲೇಕೆ ನಾವೀ
ನರೆದಲಗನತಿಶಯವ ಮಾಡಿದನೆಂದು ಕನಲಿದೆಯ
ಧರೆಗೆ ಹೊದ್ದಿದ ಕ್ಷಾಮಗಾಲದಿ
ಕರುಣದಿಂ ನಡೆ ತಂದು ಲೋಕವ
ಹೊರೆವನದು ಕಾರಣವೆ ಪತಿಕರಿಸಿದೆವು ಕೇಳೆಂದ॥ [೯೬]

"ನರೆದಲಗನತಿಶಯವ ಮಾಡಿದವೆಂದು ಕನಲಿದೆಯ ಧರೆಗೆ ಹೊಂದಿದ ಕ್ಷಾಮಗಾಲದಿ ಆತ ಲೋಕ ಕಾಪಾಡುವನೆಂದು ಪತಿಕರಿಸಿದೆವು ನೀನಾದರೊ ದೀನರಲಿ, ದಾರಿದ್ರ ಜನರಲಿ ನಿರ್ದಯನೆಂದೆವಲ್ಲದೆ, ಹೀನಗಳೆಯಲಿಲ್ಲ. ನೀ ಸುರಧೇನುವಿಗೆ ಸಮ, ನೀವೇ ಪಾವನರು ಪರಮ ಸುಖಿಗಳು" ಎಂದು ಭತ್ತವನು ಪುಸಲಾಯಿಸುವುದು, ಸಮಾಧಾನಿಸುವುದು; ಕನಕ ತನ್ನ ಯುಗದ ಪ್ರಭುತ್ವದ ಅಂತರಂಗದ ಇಬ್ಬಂದಿತನವನ್ನು ರಾಮನ ಈ ಮಾತಿನ ಮೂಲಕ ಆಳುವವರ ರಾಜಕೀಯ ಪ್ರಜ್ಞೆಯನ್ನು ಬಯಲಿಗೆಳೆದಿದ್ದಾನೆ.

ಶ್ರಮಿಕ ವರ್ಗದ ಜನಾಂಗವೊಂದು ಕಟ್ಟಿದ ವಿಜಯನಗರದ ಸಾಮ್ರಾಜ್ಯದಲ್ಲಿ (ಇಲ್ಲಿ ವಿದ್ಯಾರಣ್ಯ ಗುರುಗಳ ಪ್ರವೇಶದ ಬಗ್ಗೆ ಸಂಶೋಧನೆಯಾಗಬೇಕಿದೆ) ಶ್ರಮಿಕ ಜನರನ್ನು ಪ್ರಭುತ್ವ ಹೇಗೆ ನಡೆಸಿಕೊಳ್ಳುತ್ತಿತ್ತು ಎಂಬುದು ಕನಕದಾಸರನ್ನು ಕಾಡಿದೆ. ಹಾಗೆಯೇ ಅದೇ ಜನ ಸಮುದಾಯದಿಂದ ಬಂದ ಕನಕದಾಸರು ಢಣಾಯಕನಾಗಿ ಪ್ರಭುತ್ವವನ್ನು ಅನುಭವಿಸಿಯೂ ಶೂದ್ರ ಎನಿಸಿಕೊಂಡದ್ದು ಹಾಗೂ ಮೇಲ್ವರ್ಗವೆಂದೆನಿಸಿ ಕೊಂಡವರ(ಪುರೋಹಿತಶಾಹಿ) ಹಿಡಿತದಲ್ಲಿಯೇ ತಾನು ಆಡಳಿತ ನಿರ್ವಹಿದ್ದು, ಅಂದಿನ ಕಾಲಧರ್ಮದ ಪರಿಣಾಮವೇ ಎಂಬುದಂತೂ ಸತ್ಯ.

ಆದರೂ ತಮ್ಮತ್ತ ನುಗ್ಗಿಬರುವ ಅಂದಿನ ಮೇಲ್ವರ್ಗದವರ ಪ್ರತಿರೋಧವನ್ನು ಎದುರಿಸುವುದು ಕನಕದಾಸರಿಗೆ ಕಷ್ಟವಾಗಿದ್ದರಿಂದ ಅದಕ್ಕೆ ಪರಿಹಾರ ಕಂಡು ಕೊಳ್ಳುವಂತೆ, ಆ ಸಭೆಯಲ್ಲಿಯೇ ರಾಮನ ಕಡೆಯಿಂದ "ನಲವು ಹಿಂಗಿದ ವ್ರಿಹಿಯ,

ರಾಗಿಯು ಜಲವ ಹಸ್ತದೊಳೊರಸಿ" ಪ್ರಭುತ್ವವನ್ನೇ ಅಲುಗಾಡಿಸುವಂತೆ ಉಂಟಾಗಿದ್ದ ಮೇಲು–ಕೀಳೆಂಬ ಸಂಕರಣಕ್ಕೆ ಕನಕದಾಸರು ಕೃತಿಯಲ್ಲಿ 'ಸಾಮರಸ್ಯದ ಸಮನ್ವಯತೆಯೊಂದಿಗೆ' ಘಟನೆಯನ್ನು ಪರಿಸಮಾಪ್ತಿಗೊಳಿಸುತ್ತಾರೆ. ಏಕೆಂದರೆ ಕೆಳವರ್ಗದವರು ಬದುಕಲು ಕಂಡುಕೊಂಡಿದ್ದ ಈ ಸಾಮರಸ್ಯದ ನಿಲುವು ಕನಕದಾಸರನ್ನು ಗಾಢವಾಗಿ ಪ್ರಭಾವಿಸಿದ್ದು; ಇದನ್ನು ತಮ್ಮ ಆಡಳಿತದ ಭಾಗವಾಗಿಯೂ ಮುಂದುವರೆಸಿಕೊಂಡೇ ಬಂದರು.

ತಮ್ಮ ಜೀವನದುದ್ದಕ್ಕೂ ಎಲ್ಲಾ ರೀತಿಯ ಜೀವನಾನುಭವವನ್ನು ಪಡೆದಿದ್ದ ಕನಕದಾಸರು ಆ ಕಾಲದ ಸಮಾಜದಲ್ಲಿನ ಒತ್ತಡವೇನು? ಎಂಬುದನ್ನು ಬಲ್ಲವರಾಗಿದ್ದರು. ಅಷ್ಟಕ್ಕೂ ಕನಕದಾಸರು ಶ್ರಮಿಕ ಮೂಲದವರಾಗಿದ್ದು, ಅವರ ಬದುಕೇ ಸಾಮರಸ್ಯದ ಹೊಂದಾಣಿಕೆಯ ಸ್ವಭಾವದ್ದು. ಹಾಗಾಗಿ ಯಾವುದನ್ನೂ ಎದುರುಹಾಕಿಕೊಳ್ಳದೇ ವಾಸ್ತವತೆಯನ್ನು ಪ್ರತಿಬಿಂಬಿಸುವುದೇ ಈ ಕೃತಿಯಲ್ಲಿನ ಮುಖ್ಯ ಆಶಯ ಕೂಡ. ಇಲ್ಲಿ 'ರಾಗಿ'ಗೆ ಮರು ಪ್ರಶ್ನೆಗಳನ್ನು ಮುಂದುವರೆಸುವ ಸಾಧ್ಯತೆಗಳು ಹಾಗೂ ಪ್ರಭುತ್ವವನ್ನು ಪ್ರಶ್ನಿಸುವ ಮತ್ತಷ್ಟು ಅವಕಾಶಗಳೂ ಇರಲಿಲ್ಲವೆಂದಲ್ಲ. ಆದರೆ ಮತ್ತೆ ಮೂಗಿಗೆ ತುಪ್ಪವನ್ನು ಸವರಿಸಿಕೊಳ್ಳುವುದೇ ರಾಗಿಯ ಸರದಿ ತಾನೆ? ಎಲ್ಲಾ ಕಾಲಕ್ಕೂ ಇದು ಶ್ರಮಿಕರ ಬದುಕಿನ ಸತ್ಯವೂ ಕೂಡ ಹೌದು. ಹಾಗಾಗಿ ಮೂಲ ಪರಂಪರೆಯಿಂದ ಬಂದ ಈ ಸಾಮರಸ್ಯವೇ ಸರ್ವಜನರ ಸುಖಕ್ಕೆ ಕಾರಣವೆಂಬ ಪೂರ್ಣದೃಷ್ಟಿ ಮತ್ತು ವಿಶ್ವವ್ಯಾಪಿ ಮೌಲ್ಯ ಕನಕದಾಸರದಾಗಿತ್ತು. ಆದ್ದರಿಂದಲೇ ಮೂಲ ಶ್ರಮಿಕ ವರ್ಗದ ಸಂಕೇತದಂತಿದ್ದ ಕನಕದಾಸರು ತಳ ಸಮುದಾಯವೊಂದರ ಇಂತಹ ಧ್ವನಿಯನ್ನು ಒಂದು ಮಾದರಿಯಂತೆ 'ರಾಮಧಾನ್ಯಚರಿತೆ'ಯಲ್ಲಿ ತರಲೆತ್ನಿಸಿದ್ದಾರೆ.

ಮುಂದುವರೆದಂತೆ ಕನಕದಾಸರು ಕೃತಿಯ ಮೂಲಕ ಅಂದು ಕೃಷಿಯಲ್ಲಿ ಪ್ರಧಾನವಾಗಿ ಬೆಳೆಯಲಾಗುತ್ತಿದ್ದ ಆಹಾರ ಧಾನ್ಯಗಳ ಪಟ್ಟಿಯನ್ನೇ ನೀಡುತ್ತಾರೆ. ಜೊತೆಗೆ ತಾವು ಢಣಾಯಕರಾಗಿ, ಭೂಪ್ರದೇಶ ಮತ್ತು ಬೆಳೆಗಳನ್ನಾದರಿಸಿ ತೆರಿಗೆ ವಿಧಿಸುತ್ತಿದ್ದಾಗ, ತಮ್ಮ ವ್ಯಾಪ್ತಿಯ ಭೂಪ್ರದೇಶದಲ್ಲಿ ಬೆಳೆಯುತ್ತಿದ್ದ ಬೆಳೆಗಳ ಪರಿಚಯ ಕನಕದಾಸರಿಗಿತ್ತು. ಹಾಗೆಯೇ ವಿಜಯನಗರಕ್ಕೆ ರಾಜ ಕಾರ್ಯನಿಮಿತ್ತ ಹೋಗಿ ಬರುವಾಗ ಮತ್ತು ದಾಸರಾಗಿ ತಿರುಗಾಟದಲ್ಲಿದ್ದಾಗ ಅಂದು ವಿಶಾಲ ಕನ್ನಡ ನಾಡಿನಲ್ಲಿ ಬೆಳೆಯುತ್ತಿದ್ದ ಬೆಳೆಗಳ ಪರಿಚಯ ಕನಕದಾಸರಿಗೆ ಮನವರಿಕೆಯಾಗಿತ್ತು. ಹಾಗಾಗಿ ಕನಕದಾಸರಿಗೆ ಕೃಷಿ ಮತ್ತು ಪಶುಪಾಲನಾ ಪರಂಪರೆಯೊಳಗಿನ ಶ್ರಮಿಕ ವರ್ಗದ ಬದುಕಿನ ಗಹನತೆ ತಿಳಿದಿತ್ತು. ಈ ಸಂಬಂಧವಾಗಿ ಕನಕದಾಸರು ತಮ್ಮ ರಾಮಧಾನ್ಯ ಚರಿತೆಯಲ್ಲಿನ ಕಥಾಸಾರದಲ್ಲಿ ಬರುವಂತೆ, ಶ್ರೀರಾಮಚಂದ್ರನು, ಸೀತಾ

ಮತ್ತು ಪರಿವಾರದೊಂದಿಗೆ ಮರಳಿ ಅಯೋಧ್ಯೆಗೆ ಹೊರಟು ದಾರಿ ಮಧ್ಯೆ 'ಮುಚುಕುಂದ' ಋಷಿಗಳ ಆಶ್ರಮದಲ್ಲಿ ಉಳಿದುಕೊಳ್ಳಬೇಕಾಗುತ್ತದೆ. ಅಂದು ಜಾಬಾಲಿ, ಗೌತಮಾದಿ ಋಷಿ ಮುನಿಗಳು; ಸೀತಾರಾಮ ಮತ್ತು ಅವನ ಪರಿವಾರದವರನ್ನು ವಿವಿಧ ಭಕ್ಷ್ಯ ಭೋಜ್ಯಗಳಿಂದ ಸತ್ಕರಿಸುತ್ತಾರೆ. ಆ ಭಕ್ಷ್ಯಗಳ ದೊಡ್ಡ ಪಟ್ಟಿಯನ್ನೇ ಕನಕದಾಸರು ನೀಡುತ್ತಾರೆ.

---ತರಿಸಿದರಖಿಳ ವಸ್ತುವ
ಬೆಲ್ಲ ಸಕ್ಕರೆ ಜೇನುತುಪ್ಪ ರಸಾಯನಂಗಳಲಿ
ಭುಲ್ಲವಿಸಿ ರಚಿಸಿದ ಸುಭಕ್ಷಗ
ಳೆಲ್ಲವನು ತುಂಬಿದರು ಹೆಡಿಗೆಗಳಲ್ಲಿ॥

ಈ ಎಲ್ಲಾ ಭಕ್ಷ್ಯ ಬೋಜ್ಯಗಳನ್ನು ಸವಿದ ವಾನರ ಸೈನ್ಯ, ಮುನಿವರ್ಯರನ್ನು ಕೊಂಡಾಡಿತು. ಆಗ ರಾಮನು ಎಲ್ಲಾ ಧಾನ್ಯಗಳ ಭಕ್ಷ್ಯದಲ್ಲಿ ಯಾವ ಧಾನ್ಯ ಶ್ರೇಷ್ಠವೆಂದು ಅನಿಲ ಸುತನನ್ನು ಕೇಳಲು, ಈ ಎಲ್ಲಾ ನವ ಧಾನ್ಯಗಳನ್ನು ಸಭೆಗೆ ಕರೆ ತರುವಂತೆ ಹನುಮಂತ ಕೇಳಿಕೊಳ್ಳುತ್ತಾನೆ. ಕೂಡಲೇ ಮುನಿವರ್ಯರು ತಂತಮ್ಮ ಶಿಷ್ಯರನ್ನು ಕರೆಯಿಸಿ ಧಾನ್ಯಗಳನ್ನು ತರಿಸುತ್ತಾರೆ.

ನರೆದಲೆಗನಿದು, ನೆಲ್ಲು ಹಾರಕ
ಬರಗು ಜೋಳವು ಕಂಬು ಸಾಮೆಯು
ಉರುತರದ ನವಣೆಯಿದು ನವಧಾನ್ಯವೆಂದೆನಲು।

ಒಬ್ಬೊಬ್ಬರು ಒಂದೊಂದು ಧಾನ್ಯವನ್ನು ಶ್ರೇಷ್ಠವೆನ್ನುತ್ತಾರೆ. ಕೆಲವರು ಗೋಧಿ(ನಮ್ಮ ನೆಲದ ಬೆಳೆಯಲ್ಲ) ಯನ್ನು ಶ್ರೇಷ್ಠವೆಂದರೆ ನರೆದಲಗನು 'ಸಾರಸಂಪನ್ನ' ಎಂದು ಅದರ ರುಚಿಯ ಬಗ್ಗೆ ದ್ರಾವಿಡ ಮೂಲದವನಾದ 'ಹನುಮಂತ'ನಿಂದಲೇ ಕವಿ ಹೇಳಿಸುತ್ತಾರೆ. ಮೂಲ ಕೃಷಿಕರಾದ ದ್ರಾವಿಡರು ತಾವು ನಂಬಿ ಬೆಳೆಯುತ್ತಿದ್ದ ಬೆಳೆಯ ಬಗ್ಗೆ ಅಪಾರ ಅಭಿಮಾನವನ್ನು ಹೊಂದಿದ್ದು; ಈ ಮೂಲಕ ಅಂದು ಬೆಳೆಯುತ್ತಿದ್ದ ಕೃಷಿ ಬೆಳೆಗಳ ದೊಡ್ಡ ಪಟ್ಟಿಯನ್ನೇ ಕನಕದಾಸರು ಇಲ್ಲಿ ನೀಡುತ್ತಾರೆ. ಅಂದು ಶ್ರಮಿಕ ಪಂಗಡದವರ ಪ್ರಧಾನ ಆಹಾರವಾಗಿದ್ದ ರಾಗಿಯ ಪೌಷ್ಟಿಕಾಂಶದ ಬಗ್ಗೆಯಂತೂ ಕನಕದಾಸರಿಗೆ ಪೂರ್ಣ ಪರಿಚಯವಿತ್ತು. ಹಾಗೆಯೇ ಭತ್ತವನ್ನು ಬೆಳೆಯುವ ವಿಧಾನ, ಮತ್ತು ಸಾಮರ್ಥ್ಯದ ಬಗ್ಗೆಯೂ ತಿಳಿದುಕೊಂಡಿದ್ದರು. ಈ ಹಿನ್ನೆಲೆಯಿಂದಾಗಿಯೇ ಕನಕದಾಸರು ರಾಗಿಯ ಮೂಲಕ ಆಗಿನ ಪ್ರಭುತ್ವವನ್ನೇ ಪ್ರಶ್ನಿಸುತ್ತಾರೆ. ಜೊತೆಗೆ ನಿಯಮಿತವಾಗಿ ಬಾರದೆ, ಅಕಾಲಿಕವಾಗಿ, ಅತೀವೃಷ್ಟಿ,

ಅನಾವೃಷ್ಟಿ ಉಂಟುಮಾಡುವ ಭಾರತದ ಮಳೆಗೆ ರಾಗಿಯನ್ನು ಬೆಳೆಯುವುದೇ ಹೆಚ್ಚು ಸೂಕ್ತ ಎಂದು ಹೇಳುವ ಒಬ್ಬ 'ಕೃಷಿವಿಜ್ಞಾನಿ'ಯಂತೆ ಕನಕದಾಸರು ಕಂಡುಬರುತ್ತಾರೆ. ಏಕೆಂದರೆ ರಾಗಿ ಬೆಳೆಯು ಪ್ರಕೃತಿಯ ಎಲ್ಲಾ ರೀತಿಯ ಒತ್ತಡಗಳನ್ನು ತಡೆದುಕೊಳ್ಳುತ್ತದೆ. ರಾಗಿ ಬೆಳೆಯುವ ಇವತ್ತಿನ ಕೃಷಿಕರು ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಪುರಂದರದಾಸರು ತಮ್ಮ ಕೀರ್ತನೆಯೊಂದರಲ್ಲಿ 'ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ, ಯೋಗ್ಯರಾಗಿ, ಭೋಗ್ಯರಾಗಿ, ಭಾಗ್ಯವಂತರಾಗಿ' ಎಂದು ಸತ್ವಯುತ ರಾಗಿಯ ಗುಣಗಾನ ಮಾಡಿದ್ದಾರೆ. ಪ್ರೊ.ಸುಧಾಕರ್ ಅವರ ಪ್ರಕಾರ 'ರಾಘವ–ರಾಗಿ' ಎಂದು ಜನಪದರ ಬಾಯಲ್ಲಿ ಸಹಜವಾಗಿಯೇ ನಿಷ್ಪನ್ನವಾಗಿದೆ.[೭] ಈಗಲೂ ಜನಮನದಲ್ಲಿನ ಗಾದೆಯಾದ 'ರಾಗಿ ತಿಂದವ ನಿರೋಗಿ' ಎಂಬುದು ರಾಗಿಯ ಸತ್ವ ಶಕ್ತಿಗಳನ್ನು ಪ್ರತಿನಿಧಿಸುತ್ತದೆ. ಈ ಎಲ್ಲಾ ಹೇಳಿಕೆಗಳು ರಾಗಿಯ ನೆಪದಲ್ಲಿ ಈ ಧಾನ್ಯವನ್ನು ಯಥೇಚ್ಚವಾಗಿ ಬಳಸುತ್ತಿದ್ದ ಶ್ರೀಸಾಮಾನ್ಯನ ಕಡೆಗೇ ಎಂಬುದನ್ನು ನಾವು ಮರೆಯಬಾರದು.

ಹೀಗೆ ಕನಕದಾಸರು ತಮ್ಮ ಕೃಷಿ ಬದುಕಿನ ಅನುಭವದ ಮೂಲಕ, ಆಹಾರ ಧಾನ್ಯದ ಪಾತ್ರಗಳೊಂದಿಗೆ ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ದಾಖಲಿಸಿದ್ದಾರೆ. ಹಾಗೂ ಬಹಳ ಮುಖ್ಯವಾಗಿ ಧಾನ್ಯಗಳಲ್ಲೆಲ್ಲಾ ರಾಗಿಯೇ ಶ್ರೇಷ್ಠ. ದೀನ, ಬಡವ, ಸಾಮಾನ್ಯರಾದಿಯಾಗಿ ಸಕಲರಿಗೂ ಪ್ರಿಯವಾದ ಆಹಾರ ರಾಗಿಯೇ. ಜೊತೆಗೆ ವರ್ಷದ ಎಲ್ಲಾ ಕಾಲದಲ್ಲೂ ಬೆಳೆಯುವ ಧಾನ್ಯವಿದೆಂದು ಕನಕದಾಸರು ನಿರೂಪಿಸಲು; ಅವರ ಮೇಲಾಗಿದ್ದ ಕೃಷಿ ಮತ್ತು ಪಶುಪಾಲಕರೆನಿಸಿಕೊಂಡ ಶ್ರಮಿಕ ವರ್ಗದವರನ್ನು ಹತ್ತಿರದಿಂದ ಕಂಡ ಹಾಗೂ ಅವರ ಒಡನಾಟದ ಪ್ರಭಾವದಿಂದಲೇ ಸಾಧ್ಯವಾಗಿರಬಹುದೆಂದು ಹೇಳಬಹುದು.

ಕನಕದಾಸರು ಕೃತಿಯಲ್ಲಿ ತರುವ ವಿಭಿನ್ನ 'ಸಮುದಾಯಗಳಲ್ಲೂ ನಮ್ಮ ಪರಂಪರೆಯ ನೆಲೆಗಳನ್ನು ಕಾಣಬಹುದು. ಮಾನವ ತನ್ನ ವಿಕಾಸ ಕ್ರಮದಲ್ಲಿ ಮೊದಲು ಬೇಟೆಗಾರನಾಗಿ, ನಂತರ ಪಶುಪಾಲಕನಾಗಿ, ಕೃಷಿಕ, ನೇಕಾರ, ನಾಯಕ, ಪುರೋಹಿತ, ಕುಂಬಾರ, ಚಮ್ಮಾರ ಹೀಗೆ ವೃತ್ತಿ ಅವಲಂಬಿತ ಸಮುದಾಯಗಳೊಂದಿಗೆ ಬೆಳೆದು ಬಂದಿರುವುದು ನಾವು ಕಂಡು ಕೊಂಡಿರುವ ಇತಿಹಾಸ.(ನೋಡಿ ಅಧ್ಯಾಯ–೨) ಈ ಹಿನ್ನೆಲೆಯಲ್ಲಿ ಪ್ರಸ್ತುತ ಕನಕದಾಸರು ಬರೆದಿರುವ 'ರಾಮಧಾನ್ಯಚರಿತೆ'ಯು ಕೂಡ ವಾಲ್ಮೀಕಿ ರಾಮಾಯಣದ ಕಥಾರೂಪವೇ ಆಗಿದ್ದು, ಕಥೆಯಲ್ಲಿ ಕ್ಷತ್ರಿಯ ಸಮುದಾಯ, ರಾಕ್ಷಸರ ಸಮುದಾಯ, ವಾನರ ಸಮುದಾಯ, ಮುನಿಗಳ(ಬ್ರಾಹ್ಮಣರ)ಸಮುದಾಯ, ಬೇಡರ ಸಮುದಾಯಗಳು ಕಂಡುಬರುತ್ತವೆ. ಕಥೆಯಲ್ಲಿ 'ವಾರಿಧಿಯ ಬಂಧಿಸಿದ ಸೇನಾಭಾರದಲಿ ನಡೆತಂದು' ಸಮುದ್ರಕ್ಕೆ ಸೇತುವೆ

ನಿರ್ಮಿಸುವುದು ವಾನರ ಸಮುದಾಯವೇ. ರಾಮ ರಾವಣರ ನಡುವಿನ ಯುದ್ಧದಲ್ಲಿ ಬಹುಪಾಲು ಇದ್ದವರು; ಕ್ಷತ್ರಿಯರು, ವಾನರು, ಬೇಡರುಗಳನ್ನು ಒಳಗೊಂಡ ಶ್ರಮಿಕ ಸಮುದಾಯದವರೇ. ಜಯದ ನಂತರ, ಸೀತೆಯೊಂದಿಗೆ ಶ್ರೀರಾಮ, ಅಯೋಧ್ಯೆಗೆ ಮರಳುವಾಗ ಮಾರ್ಗ ಮಧ್ಯೆ ಕಾಡಿನ ಮುಚುಕುಂದ ಆಶ್ರಮದಲ್ಲಿ ತಂಗಲಾಗಿ, ಇಲ್ಲಿ ಋಷಿಮುನಿಗಳ ಸಮುದಾಯವೂ, ಈ ಸಂತೋಷದಲ್ಲಿ ಭಾಗಿಯಾಗುತ್ತದೆ.

ಕೌಶಿಕನು, ಜಮದಗ್ನಿ ಜನ್ಹು ಪ
ರಾಶರನು, ಜಾಂಬಾಲಿ ಭೃಗು ದೂ
ರ್ವಾಸ ಗೌತಮನಾದಿಯಾದ ಸಮಸ್ತ ಮುನಿವರರು॥

ಋಷಿಮುನಿಗಳ ಸಮುದಾಯ ಸಮಸ್ತ ರಾಮನ ಪರಿವಾರವನ್ನು ಸಂತೈಸುತ್ತದೆ. ಈ ಸಂದರ್ಭದಲ್ಲಿ ಉಂಟಾದ ರಾಗಿ ಮತ್ತು ಭತ್ತದ ನಡುವಿನ ತಾರತಮ್ಯದ ವಿಚಾರ ತಾರಕಕ್ಕೇರುವುದು, ಶ್ರಮಿಕರಲ್ಲದ ಮೇಲ್ವರ್ಗದ ಸಮುದಾಯವನ್ನು ಪ್ರಶ್ನಿಸುವಂತಿದೆ. ಈ ಸಂದರ್ಭದಲ್ಲಿ ಪ್ರಭುತ್ವ ಯಾರ ಬೆಂಬಲವನ್ನೂ ಕಳೆದುಕೊಳ್ಳಲಿಚ್ಚಿಸುವುದಿಲ್ಲ. ಹನುಮಂತನು ಸಾರಸರ್ವಸ ರಾಗಿಯೇ ಶ್ರೇಷ್ಠವೆಂದರೂ, ಗೌತಮ ಮುನಿಯು ಇದನ್ನು ಅನುಮೋದಿಸಿದರೂ, ರಾಮ ತನ್ನ ತೀರ್ಮಾನವನ್ನು ಬೆರಳೆಣಿಕೆಯಲ್ಲಿದ್ದ ಮೇಲ್ವರ್ಗದವರ ಸಮ್ಮುಖದಲ್ಲಿ ನೀಡಲು ಸಮ್ಮತಿಸದೆ ಜಾರಿಕೊಳ್ಳುವ ಉಪಾಯ ಮಾಡಿ, 'ಪರಮ ಧಾನ್ಯದೊಳಿಬ್ಬರೇ ಇವರಿರಲಿ ಸೆರೆಯೊಳಗೆ' ಎಂದು ಆರು ತಿಂಗಳು ಈ ಎರಡು ಧಾನ್ಯಗಳನ್ನು ಸೆರೆಯಲ್ಲಿರಿಸುತ್ತಾನೆ. ಈ ಮೂಲಕ ಯಾವ ಸಮುದಾಯವನ್ನೂ ಎದುರುಹಾಕಿಕೊಳ್ಳದ ಪ್ರಭುತ್ವದ ರಾಜಕಾರಣ ಇದಾಗಿರಬಹುದು. ಇಂತಹ ಸಂದರ್ಭದಲ್ಲಿ ಸಮುದಾಯಗಳಿಂದಾಗುವ ಪರಿಣಾಮದ ಎಚ್ಚರ ಕನಕದಾಸರರಿಗಿದ್ದರಲೂಬಹುದು. ಶ್ರಮಿಕರ ಪರವಾಗಿ ರಾಗಿಯೇ ಶ್ರೇಷ್ಠವೆಂದು ರಾಮನ ಬಾಯಿಂದ ಕನಕದಾಸರು ಹೇಳಿಸಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಮುಂದೆ ಆರು ತಿಂಗಳ ನಂತರ ಅಯೋಧ್ಯೆಯ ಅರಮನೆಗೆ ಹನುಮಂತನ ಕಡೆಯಿಂದ ತರಿಸಿದ, ರಾಗಿ ಮತ್ತು ಭತ್ತವನ್ನು ಗಮನಿಸಿದ ಅಂದಿನ ಸಭೆಯಲ್ಲಿದ್ದ,

ವಸುಗಳಮರರು ಭುಜಂಗಾಮರ
ರಸುರ ಕಿನ್ನರ ಯಕ್ಷ ರಾಕ್ಷಸ
ಶಶಿ ರವಿಗಳಾದಿತ್ಯ ವಿದ್ಯಾಧರರು ಗುಹ್ಯಕರು
ವಸುಧೆಯ ಮರರು ಕ್ಷತ್ರಿಯರು ಜೋ

ಯಿಸರು ವೈಶ್ಯ ಚತುರ್ಥರುನ್ನತ
ಕುಶಲ ವಿದ್ಯಾಧಿಕರು ನೆರೆದುದು ನೃಪನ ಸಭೆಯೊಳಗೆ॥[೧೦೦]

ಈ ಎಲ್ಲಾ ಸಮುದಾಯದವರು ರಾಗಿಯನ್ನು ಶ್ರೇಷ್ಠವೆಂದು ಒಪ್ಪಿಕೊಂಡು, ರಾಗಿಯ ತಲೆಯ ಮೇಲೆ ಮಂತ್ರಾಕ್ಷತೆಯನ್ನು ಹಾಕಿ ರಾಮ ರಾಗಿಗೆ 'ರಾಘವತ್ವ' ನೀಡಿಯೂ; ಭತ್ತವನ್ನು, 'ನೀ ಸುರಧೇನುವಿಗೆ ಸಮ' ಎಂದು ಸಂತೈಸಿ ಮೇಲ್ವರ್ಗದವರ ಸಮುದಾಯವನ್ನು ಸುಮ್ಮನಿರಿಸಿದ್ದು, ಸಮುದಾಯಗಳ ನಡುವಿನ ಇವತ್ತಿನ ಓಟಿನ ರಾಜಕಾರಣದಂತೆಯೇ ಕಾಣುತ್ತದೆ. ಈ ತಾರತಮ್ಯ ಹಾಗೂ ತೋರಿಕೆಯ ಸಾಮರಸ್ಯವನ್ನು ಇತಿಹಾಸದ ಪೂರ್ವ ಕಾಲದಿಂದಲೂ ಪ್ರಭುತ್ವ ಮತ್ತು ಮೇಲ್ವರ್ಗಗಳು ಮಾಡಿಕೊಂಡೇ ಬಂದಿವೆ. ಈ ಸಿದ್ಧಾಂತ ಮಧ್ಯಕಾಲೀನ ಕಾಲಘಟ್ಟದಲ್ಲಿಯೂ ಕನಕದಾಸರನ್ನೂ ಸೇರಿದಂತೆ ಶ್ರಮಿಕ ಸಮುದಾಯವನ್ನು ತಟ್ಟಿ, ನಿರಂತರವಾಗಿ ಕಾಡಿರುವುದಂತೂ ಸತ್ಯ.

ಹಾಗಾಗಿ ಕನಕದಾಸರು ರಾಮಧಾನ್ಯಚರಿತೆಯ ಮೂಲಕ ಬಡವರ ಮತ್ತು ತಳ ಸಮುದಾಯದವರ ಆಹಾರವನ್ನು ಪ್ರತಿನಿಧಿಸುವ ಒಂದು ಧಾನ್ಯವನ್ನು ಹೋಲಿಕೆಯಾಗಿ ಇಟ್ಟುಕೊಂಡು ಸಮಾಜದಲ್ಲಿರುವ ಮೇಲು-ಕೀಳಿನ ವ್ಯತ್ಯಾಸವನ್ನು ಈ ಕಾವ್ಯದಲ್ಲಿ ಸಮರ್ಥವಾಗಿಯೂ, ನಾಟಕೀಯವಾಗಿಯೂ ಬಿಂಬಿಸಿದ್ದಾರೆ. ಜೊತೆಗೆ ದೇಶದಲ್ಲಿ ವ್ಯಾಪಕವಾಗಿರುವ ತಳಸಮುದಾಯದ ಶಕ್ತಿಯನ್ನು, ರಾಜ ಪರಿವಾರ ಹಾಗೂ ಪುರೋಹಿತ ಸಮುದಾಯ ತನ್ನ ಸ್ವಾರ್ಥಕ್ಕೆ ಎಷ್ಟರ ಮಟ್ಟಿಗೆ ಬಳಸಿಕೊಳ್ಳುತ್ತಿದೆ ಎಂಬುದನ್ನು ರಾಮಧಾನ್ಯ ಚರಿತೆ ಸಾಂಕೇತಿಕವಾಗಿ ಅರ್ಥೈಸಿದೆ.[೧೦೧]

ಕೃತಿಯಲ್ಲಿ ಪಶುಪಾಲನೆಯ ಪ್ರಮುಖ 'ಮೌಲ್ಯ'ಗಳಾದ ಜಾತ್ಯತೀತ ಮನೋಭಾವನೆ, ಸಮಾನತೆ, ಸಾಮರಸ್ಯತೆ, ಪ್ರಾಮಾಣಿಕತೆ, ಸತ್ಯ, ನ್ಯಾಯಪರತೆ ಮತ್ತು ನಿಷ್ಪಕ್ಷಪಾತ ಗುಣಗಳು (ನೋಡಿ ಅಧ್ಯಾಯ-೨) ಹೆಚ್ಚಾಗಿ ಗುರುತಿಸಲ್ಪಟ್ಟಿವೆ. ಸದಾ ತಮ್ಮ ಕುರಿ, ದನ, ಹಸುಗಳೊಂದಿಗೆ ಅಲೆಮಾರಿಗಳಾಗಿ ಕಾಡು-ಮೇಡು, ಊರೂರು ತಿರುಗುವ ಇವರು ಈಗಲೂ ಅನೇಕ ಕಡೆ ಕಾಣಸಿಗುತ್ತಿದ್ದು ಇದೇ ಮೌಲ್ಯಗಳನ್ನು ರೂಢಿಸಿಕೊಂಡವರು ಹಲವರಿದ್ದಾರೆ. ತಮಗೆ ಸಿಕ್ಕವರನ್ನೇ, ಕಂಡವರನ್ನೇ ಅಕ್ಕ, ಅಣ್ಣ ಎಂದುಕೊಂಡು ಅವರ ತೋಟ, ಹೊಲ, ಗದ್ದೆಗಳಲ್ಲಿ ದನ, ಕುರಿ, ಕತ್ತೆಗಳ ಮಂದೆಯನ್ನು ನಿಲ್ಲಿಸಿ; ತಮ್ಮ ರಾಸುಗಳಿಗೆ ಹುಲ್ಲು ಮೇವನ್ನು ಅರಸುತ್ತಾ ಬದುಕು ಕಟ್ಟಿಕೊಳ್ಳುವ ಈ ದನ ಮತ್ತು ಕುರಿಗಾಹಿಗಳದ್ದು ಮೌಲ್ಯಯುತವಾದ ಬದುಕು. ಆದರೆ ಇತ್ತೀಚೆಗೆ ಆಧುನಿಕತೆಯ ಹೊಡೆತದಿಂದ ಈ ಕಸುಬು ಕ್ಷೀಣಿಸಲೂ ತೊಡಗಿದೆ.

ಜಾತಿ ಸಂಘರ್ಷವೇ ರಾಮಧಾನ್ಯ ಚರಿತೆಯ ವಸ್ತುವಾಗಿದ್ದರೂ ಸಮನ್ವಯ ಮತ್ತು ಸಾಮರಸ್ಯದ ಚೌಕಟ್ಟಿನಲ್ಲಿ ಜಾತಿ ನಿರ್ಮೂಲನೆಯ ಅಗತ್ಯವನ್ನು ಇಲ್ಲಿನ 'ಭತ್ತ' ಮತ್ತು 'ರಾಗಿ'ಯ ಜಗಳದ ಮೂಲಕ ಪ್ರತಿಪಾದಿಸಿದ್ದಾರೆ. ರಾಮನ ಸಭೆಯಲ್ಲಿ ರಾಗಿ ಶ್ರೇಷ್ಠ, ಸತ್ವಶಾಲಿ ಎಂದು ತೀರ್ಪಿತ್ತರೂ ಅವಮಾನಿತನಾಗಿ ತಲೆ ತಗ್ಗಿಸಿ ನಿಂತ ಭತ್ತವನ್ನು ರಾಮ ಸಮಾಧಾನಪಡಿಸಿ ಇಬ್ಬರಲ್ಲೂ ಸ್ನೇಹ ಬೆಳೆಸಿ 'ಸಾಮರಸ್ಯ' ಬರುವಂತೆ ಸೂಚಿಸಿದುದು ಕನಕದಾಸರ 'ಜಾತ್ಯತೀತ' ಮನೋಭಾವನೆಗೆ ಹಿಡಿದ ಕನ್ನಡಿಯಂತಿದೆ.

ಜಾತಿ, ಧರ್ಮ ಮೂಲದಿಂದ ಹೊರಡುವ ಸಂಘರ್ಷ; ಸಮಾಜದ ಸಹಬಾಳ್ವೆ, ಸಾಮರಸ್ಯ, ಶಾಂತಿ, ನೆಮ್ಮದಿಗೆ ಬೆಂಕಿ ಹಚ್ಚುತ್ತದೆ.[೧೦೨] ಆದ್ದರಿಂದ ಇದು ತುಂಬಾ ಅಪಾಯಕಾರಿ. ಪರಸ್ಪರ ಅನುಮಾನ, ಅಪನಂಬಿಕೆ, ದ್ವೇಷ, ಪ್ರತಿಷ್ಠೆ, ಅಹಂಕಾರ ಇವುಗಳಿಂದ ಉಂಟಾಗುವ ಕೋಮು ಸಂಘರ್ಷವನ್ನು, ನಂಬಿಕೆ, ವಿಶ್ವಾಸ, ಸ್ನೇಹ ಮತ್ತು ಸಮಾನತೆಯ ಗುಣಗಳಿಂದ ಮಾತ್ರ ತಡೆಗಟ್ಟಲು ಸಾಧ್ಯ, ಎಂಬ ಎಚ್ಚರದ ಜಾತ್ಯತೀತ ಮೌಲ್ಯವನ್ನು ಕನಕದಾಸರು ಕೃತಿಯಲ್ಲಿ ತರಲು; ಶ್ರಮಿಕ ಸಮುದಾಯದ ಸಂಬಂಧ ಹಾಗೂ ಅವರ ಮೇಲಾಗಿದ್ದ ಮೇಲ್ಜಾತಿಯವರ ಪ್ರಭಾವವೇ ಕಾರಣವಾಗಿರಬಹುದು.

ಮುಂದೆ ರಾಮನ ನ್ಯಾಯ ನಿರ್ಣಯದ ಸಭೆಯಲ್ಲಿ 'ರಾಘವ'ನೆಂದು ಕರೆಸಿಕೊಂಡ ರಾಗಿ, ಅವಮಾನಿತನಾದ ಭತ್ತವನ್ನು ತಾನೇ ಸಮಾಧಾನಪಡಿಸುತ್ತದೆ. ತನ್ನನ್ನು ಕೀಳೆಂದು ಹೀಯಾಳಿಸಿದ ಭತ್ತವನ್ನು ದ್ವೇಷಿಸದೆ ಆತ್ಮೀಯವಾಗಿ ಸಂತೈಸುವುದು ಕುತೂಹಲಕರವೂ, ವಿಶೇಷವೂ ಆಗಿದೆ. ರಾಗಿ ತನ್ನ ಕೀಳರಿಮೆಯಿಂದ ಮುಕ್ತವಾಗಿ ಭತ್ತದೊಂದಿಗೆ ಸಮಾನವಾಗಿ ನಿಂತು ಸಂವಾದ ನಡೆಸುವ ಸಾಮರ್ಥ್ಯ ಹೊಂದಿದೆ. ಸಮಾನತೆಯ ತಳಹದಿಯ ಮೇಲೆ ಆರೋಗ್ಯವಂತ ಸಮಾಜದ ನಿರ್ಮಿತಿಗೆ ಎಲ್ಲ ಜಾತಿ, ಧರ್ಮಗಳ ಜನರು ಭೇದ-ಭಾವವನ್ನು ತ್ಯಜಿಸಿ; ಪ್ರೀತಿ ವಿಶ್ವಾಸದಿಂದ ಬದುಕಬೇಕೆಂಬ ನಿಲುವನ್ನು ಕನಕದಾಸರು ಈ ಕೃತಿಯಲ್ಲಿ ಬಿಂಬಿಸಿರುವುದು, ಅವರೊಳಗೆ ಪರಂಪರೆಯ ಅನುಭವದಿಂದ ಬಂದ 'ಸಮಾನತೆಯ' ಆಶಯವೇ ಕಾರಣವಾಗಿದೆ.

ಮಾನವೀಯತೆ ಇಲ್ಲದ ಮನುಷ್ಯ ನಿಜವಾದ ಮನುಷ್ಯನಲ್ಲ. ಅವನೊಬ್ಬ ಕ್ರೂರ ಪ್ರಾಣಿಗೆ ಸಮಾನ. ಭಗವಂತ ಮನುಷ್ಯನ ಮಾನವೀಯತೆಗೆ ಒಲಿಯುತ್ತಾನೆ. ರಾಮಧಾನ್ಯ ಚರಿತೆಯಲ್ಲೂ ಮಾನವೀಯತೆಯ ಕಾಳಜಿ ಪ್ರಧಾನವಾಗಿದೆ. ರಾಮನ ವರ್ತನೆಯಲ್ಲಿ, 'ಎಲ್ಲಾ ನವಧಾನ್ಯದಲಿ ಈತನೆ ಬಲ್ಲಿದನು' ಎಂದ ಗೌತಮ, ಇಂದ್ರ, ನಾರದ ಮೊದಲಾದವರು ನಿಷ್ಪಕ್ಷಪಾತವಾಗಿ, ಪ್ರಾಮಾಣಿಕವಾಗಿ, ಸತ್ಯಸಂಧತೆಯಿಂದ

ರಾಗಿಯ ಸತ್ವವನ್ನು ಪುರಸ್ಕರಿಸಿದರು. ಭತ್ತ, ರಾಗಿಯನ್ನು ಕುರಿತು ಎಷ್ಟೇ ಅವಮಾನಕರ ನುಡಿಗಳನ್ನಾಡಿದರೂ ಕೊನೆಗೆ ಅವೆಲ್ಲವನ್ನು ಮರೆತು ರಾಗಿ ಭತ್ತದೊಂದಿಗೆ ಸ್ನೇಹ ಬೆಳೆಸಿದ್ದು, ಮಾನವೀಯತೆಯ ಸ್ಪರ್ಶವಾಗಿ ಕಾಣುತ್ತದೆ.[೧೦೩] ಇಂತಹ ಮೂಲ ಗುಣ ಪಶುಪಾಲಕರೆನಿಸಿಕೊಂಡ ಸಮಾಜದೊಳಗಿನ ಶ್ರಮಿಕವರ್ಗದವರದ್ದೇ. ಇವರಿಗೆ 'ಬಡವನ ಕೋಪ ದವಡೆಗೆ ಮೂಲ' ಎಂದು ಚೆನ್ನಾಗಿ ತಿಳಿದಿದೆ. ಅದಕ್ಕಾಗಿ ಎಲ್ಲರೊಂದಿಗೂ ಹೊಂದಿಕೊಳ್ಳುತ್ತಾರೆ. ಇದನ್ನು ಬಹು ಹತ್ತಿರದಿಂದ ಬಲ್ಲವರಾಗಿಯೂ, ಸ್ವತಃ ಅನುಭವಿಸಿಯೂ ಇದ್ದ ಕನಕದಾಸರು ಈ ಚಿತ್ರಣವನ್ನು ಕೃತಿಯಲ್ಲಿ ಸಹಜವಾಗಿಯೇ ತಂದಿದ್ದಾರೆ.

ರಾಮಧಾನ್ಯ ಚರಿತೆಯು, ಪಶುಪಾಲನಾ ಪರಂಪರೆಯ 'ಸಂಸ್ಕೃತಿ'ಯ ಚೌಕಟ್ಟಿನೊಳಗೆ ನಿರೂಪಿಸಲ್ಪಟ್ಟಿದೆ. ಅಂದರೆ ಸಮಾಜದ ವ್ಯಕ್ತಿ ತಾನು ಗಳಿಸಿಕೊಂಡ ಜ್ಞಾನ, ಕಲೆ, ನಂಬಿಕೆ, ನೀತಿ, ನಿಯಮ, ಆಚರಣೆ, ಸ್ವಭಾವಗಳನ್ನು ಒಳಗೊಂಡ ಸ್ಥಿತಿಯೇ ಈ ಸಂಸ್ಕೃತಿ. ಇಂತಹದ್ದೊಂದು ಪರಂಪರೆ ನಮ್ಮ ನೆಲದಲ್ಲಿ ಪ್ರಾರಂಭವಾದದ್ದೇ ಪಶುಪಾಲಕರೆನಿಸಿಕೊಂಡ ತಳ ಸಮುದಾಯದ ಜನಾಂಗದ ಬದುಕಿನ ಮೂಲಕ. ಈ ಜನಾಂಗ ಅನುಸರಿಸಿದ ಆಚಾರ-ವಿಚಾರಗಳು, ನಂಬಿಕೊಂಡು ಬಂದ ದೈವಗಳು, ಉಡುಗೆ-ತೊಡುಗೆಗಳು, ಆಹಾರ-ವಿಹಾರ, ರೂಢಿ ಪದ್ಧತಿಗಳನ್ನು ಹಾಗೆಯೇ ಮುಂದುವರಿಸಿಕೊಂಡು ಈಗಲೂ ಬರಲಾಗುತ್ತಿದೆ.

ಇಂತಹ ಸಂಸ್ಕೃತಿಯು ಆಚರಣೆಗಳು ಕನಕದಾಸರ ಕಾಲದಲ್ಲೂ ಪ್ರಬಲವಾಗಿತ್ತೆಂಬುದನ್ನು ಅವರ ಬದುಕು ಬರಹಗಳ ಮೂಲಕ ತಿಳಿದುಕೊಳ್ಳಬಹುದು. ಅದರಲ್ಲೂ ಮುಖ್ಯವಾಗಿ ಕನಕದಾಸರ ರಾಮಧಾನ್ಯ ಚರಿತೆ ಪಶುಪಾಲನಾ ಚೌಕಟ್ಟಿನಲ್ಲಿಯೇ ರಚಿಸಲ್ಪಟ್ಟಿದೆ. ರಾವಣ, ಕುಂಭಕರ್ಣರನ್ನು ಸಂಹರಿಸಿದ ಮೇಲೆ 'ರಘುನೃಪನು ಪಟ್ಟವನ್ನು ಕಟ್ಟಿದನಾ ವಿಭೀಷಣಗೆ' ಎಂಬುದು ನಮ್ಮ ಸಂಸ್ಕೃತಿಯಿಂದ ಬಂದ ವಂಶಪಾರಂಪರ್ಯವನ್ನು ಗೌರವಿಸುವುದರ ಸಂಕೇತವಾಗಿದೆ. ಮುಚುಕುಂದ ಮುನಿ ಆಶ್ರಮದ ಅತಿಥಿ ಸತ್ಕಾರ, ಅಲ್ಲಿನ ಭಕ್ಷ್ಯ ಭೋಜ್ಯಗಳಾದ ಬೆಲ್ಲ, ಸಕ್ಕರೆ, ಜೇನು, ತುಪ್ಪ, ರಸಾಯನಂಗಳು, ಧಾನ್ಯಗಳಾದ ನರೆದಲಗ, ನಲ್ಲು, ಹಾರಕ, ಬರಗು ಇತ್ಯಾದಿಗಳು, ರುಚಿಕಟ್ಟಾದ ಅಡುಗೆ ಸಂಸ್ಕೃತಿಯ ಸಂಕೇತವಾಗಿದೆ. ರಾಮನು ತನ್ನ ಸಭೆಯಲ್ಲಿ,

ಆರು ನುಡಿಯರೆ, ನೀವು ಹಿರಿಯರು
ಮೀರಿಸುವರಾರಿವರೊಳಗೆ ಗುಣ
ಸಾರನಾವನು ಪೇಳೆನಲು

ಎನ್ನುವುದು ಹಿರಿಯರ, ಪೂಜ್ಯರ, ಮುನಿಗಳ ಮಾತಿಗೆ, ಅಂದು ಪ್ರಭುತ್ವ ಕೊಡುತ್ತಿದ್ದ ಗೌರವವಾಗಿದೆ. ತೀರ್ಪುನೀಡುವ ಸಭೆಗೆ ರಾಮನು ತಾನು ನಂಬಿದ ಎಲ್ಲಾ ದೈವಗಳನ್ನು ಕರೆಸಿಕೊಳ್ಳುವುದು; ತೀರ್ಪಿನ ನಂತರ ರಾಗಿ ಮತ್ತು ಭತ್ತಗಳೆರಡೂ ಸಾಮರಸ್ಯದಿಂದ ಸ್ನೇಹ ಬೆಳಸಿ 'ಕಲಿತನವ ಕೈಕೊಂಡು ಸತ್ಯವ ಹೊಲಬು ದಪ್ಪದೆ' ಎಂದು ಧೈರ್ಯ ತುಂಬುವ ಸಂಸ್ಕಾರಯುತ ಮಾತುಗಳು ಸಭಾ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಕೃತಿಯಲ್ಲಿ ಕನಕದಾಸರು ಬಳಸುವ ನರೆದಲಗ(ದೇಶಿಪದ), ವ್ರೀಹಿ (ಸಂಸ್ಕೃತಪದ), ಭೂಸುರರು, ಹಸ್ತಾಂಭುಜದಿ, ಕರಕಮಲದಿ, ಎಂದು ಬಳಸುವ ಗೌರವಯುತ ಪದಗಳು ಮೇಲ್ವರ್ಗದವರಿಗಾಗಿಯೂ; ಹಾಗೂ 'ಕುಲಹೀನ ನೀನು, ಅಯೋಗ್ಯನು, ಭ್ರಷ್ಟ ತೊಲಗೆಂದನು' ಎಂದು ನಿಂದಿಸುವಂತಿರುವ ಪದಗಳು ಶ್ರಮಿಕ ವರ್ಗದವರನ್ನು ಕುರಿತು ಸವರ್ಣೀಯರು ಬಯ್ಯಲು ಪ್ರಯೋಗಿಸುತ್ತಿದ್ದ ಮಾತುಗಳಾಗಿವೆ. ಇದನ್ನೆಲ್ಲಾ ಕೇಳಿಯೂ ಮತ್ತು ಅನುಭವಿಸಿಯೂ ಇದ್ದ ಕನಕದಾಸರು, ಕೃತಿಯಲ್ಲಿ ಅಚ್ಚು ಇಳಿಸಿದಂತೆ ಇಂತಹ ಚಿತ್ರಣವನ್ನು ಸಹಜವಾಗಿಯೇ ಕಟ್ಟಿಕೊಟ್ಟಿದ್ದಾರೆ. ಹಾಗಾಗಿ ಅಂದು ಪಶುಪಾಲನಾ ಪರಂಪರೆಯವರು ರೂಪಿಸಿಕೊಂಡಿದ್ದ ಸಂಸ್ಕೃತಿ, ಅವರು ಅನುಭವಿಸಿದ ಯಾತನೆಗಳು ಕೃತಿಯಲ್ಲಿ ಯಥಾವತ್ತಾಗಿ ಬಿಂಬಿಸಲ್ಪಟ್ಟಿವೆ.

ಏಕೆಂದರೆ ಮೂಲ ಪಶುಪಾಲನಾ ವೃತ್ತಿಯಿಂದ ವಿಕಾಸ ಹೊಂದಿದ ಬಹುಸಂಖ್ಯಾತ ಶ್ರಮಿಕ ಜನಾಂಗ; ಇಂದಿನ ಸಂವಿಧಾನಬದ್ಧ ಕಾನೂನುಗಳಿದ್ದಾಗ್ಯೂ ಭೇದ, ತಾರತಮ್ಯ ಶೋಷಣೆಯನ್ನು ಅನುಭವಿಸುತ್ತಿರುವುದನ್ನು ಕಾಣುತ್ತಲೇ ಇದ್ದೇವೆ. ಹಾಗಾಗಿ ಮಧ್ಯಕಾಲೀನ ಯುಗದಲ್ಲಿಯೂ, ಕನಕದಾಸರ ಮೇಲೆ ಈ ತರಹದ ಶೋಷಿತ ಸಂಸ್ಕೃತಿಯ ಪ್ರಭಾವ ಗಾಢವಾದ ಪರಿಣಾಮವನ್ನು ಬೀರಿರಲೇಬೇಕು.

ಹೀಗೆ 'ರಾಮಧಾನ್ಯಚರಿತೆ' ಧಾನ್ಯಗಳ ಕಥೆಯಾದರೂ ಕೇವಲ ಧಾನ್ಯಗಳ ಕಥೆಯಾಗದಂತೆ ಕನಕದಾಸರು ಎಚ್ಚರವಹಿಸಿ, ಪರಂಪರೆ, ತಾತ್ವಿಕತೆ ಮತ್ತು ವೈಚಾರಿಕತೆಯ ವೈಶಿಷ್ಟ್ಯಗಳನ್ನು, ಕನಕಯುಗದ ಕನ್ನಡಿಯಲ್ಲಿಟ್ಟು, ಭವಿಷ್ಯತ್ತನ್ನು ರೂಪಿಸಲೆತ್ನಿಸಿದ್ದಾರೆ. ಸಮಾಜದಲ್ಲಿನ ಮೇಲು-ಕೀಳು ಭಾವನೆಗಳ ಸಂಘರ್ಷದಿಂದ ಯಾರಿಗೂ ಪ್ರಯೋಜನವಿಲ್ಲ. ಪಶುಪಾಲನಾ ಸಂಸ್ಕೃತಿಯ ನೆಲೆಗಳಾದ ಶಾಂತಿ, ಸ್ನೇಹ, ಸತ್ಯ, ಪ್ರಾಮಾಣಿಕತೆ, ಸಮಾನತೆ, ಸೌಹಾರ್ದದಿಂದ ಬಾಳಿದಾಗ ಮಾತ್ರ ಸಮಾಜದಲ್ಲಿ ನೆಮ್ಮದಿ ನೆಲೆಸಲು ಸಾಧ್ಯ,[೧೦೪] ಎಂಬ ಸಂದೇಶವನ್ನು, ಕನಕದಾಸರು ಸಮಕಾಲೀನವಾಗಿ ಕಂಡುಕೊಂಡು; ಅಂದಿನ ತಮ್ಮ ಮತ್ತು ಸಮಾಜದ ಬದುಕಿನ ಪರಂಪರೆಯ ನೆಲೆಗಳನ್ನು ಒಳಗೊಂಡ ಸಾರ್ವಕಾಲಿಕವಾದ ಈ ಎಲ್ಲಾ ಸತ್ಯವನ್ನು ಕೃತಿಯಲ್ಲಿ ಸಾದರ ಪಡಿಸಿದ್ದಾರೆ.

**ಹರಿಭಕ್ತಿಸಾರ :**

'ಹರಿಭಕ್ತಿಸಾರ' ಕೃತಿಯು ಕನಕದಾಸರ ತುಂಬಾ ಜನಪ್ರಿಯವಾದ ಸರಳ ಶೈಲಿಯ ಹರಿನಾಮ ಸಂಕೀರ್ತನೆಯ ಗುಚ್ಚ. ಭಾವಗೀತೆಯ ದಾಟಿ ಎನಿಸಿಕೊಳ್ಳುವ ವಿಷ್ಣು ಪಾರಮ್ಯದ ಕೃತಿ. ಭಾಮಿನಿ ಷಟ್ಪದಿಯ ರೂಪದಲ್ಲಿದ್ದು ಮಂಗಳ ಚರಣಗಳೂ ಸೇರಿದಂತೆ ಕಾವ್ಯದಲ್ಲಿ ೧೧೧ ಚರಣಗಳಿವೆ. ಈ ಎಲ್ಲಾ ಚರಣಗಳಲ್ಲಿ 'ಭಕ್ತಿರಸ' ತುಂಬಿ ತುಳುಕಿದೆ. ಪ್ರತಿಯೊಂದು ಪದ್ಯವೂ 'ರಕ್ಷಿಸುನಮ್ಮನನವರತ' ಎಂದು ಕೊನೆಗೊಳ್ಳುತ್ತದೆ. ಇದರಲ್ಲಿ ಸಮೃದ್ಧ ಬದುಕಿನ ದೃಷ್ಟಿಯೂ ಕಂಡುಬರುತ್ತದೆ. ಈ ಕಾವ್ಯವೂ ಭರ್ತೃಹರಿಯ ನೀತಿ ವೈರಾಗ್ಯಗಳ ಶತಕಗಳ ಗುಂಪಿಗೆ ಸೇರುತ್ತದೆ. ಕೃತಿಯ ಪ್ರಾರಂಭದಲ್ಲಿ 'ಸುರುಪುರ ನಿಲಯ' ಚನ್ನಿಗರಾಯನ ಸ್ತುತಿಯಿದೆ. ಮೊದಲಿನ ೧೬ ಪದ್ಯಗಳಲ್ಲಿ ಶ್ರೀ ಹರಿಯನ್ನು ಸಂಸ್ಕೃತ ಶ್ಲೋಕದೊಂದಿಗೆ ಸ್ತುತಿಸಲಾಗಿದೆ. ಕೃತಿ ಬೆಳೆದಂತೆ ಕನ್ನಡ ಹೆಚ್ಚು ಬಳಕೆಯಾಗತೊಡಗಿದೆ. ಸಾಮಾನ್ಯನಿಗೂ ಅರ್ಥವಾಗುವಂತಹ ಆಧ್ಯಾತ್ಮಿಕ ವಿಚಾರಗಳಿವೆ. ೧೭ ನೆಯ ಪದ್ಯದಲ್ಲಿ ಶ್ರೀಹರಿಯ ಸಂಪತ್ತು, ಶಕ್ತಿ, ಚೆಲುವು, ಮತ್ತು ಆತನ ಕಾರ್ಯಗಳನ್ನು ಸ್ಮರಿಸಲಾಗಿದೆ.

೧೮ ರಿಂದ ೨೩ ವರೆಗಿನ ಪದ್ಯಗಳು ಕೃತಿರಚನೆಯ ಉದ್ದೇಶ, ದೇವರನ್ನು ಕುರಿತು ನಿವೇದಿಸುವ ಪ್ರಾರ್ಥನೆಯ ರೂಪದ ಪದ್ಯಗಳಾಗಿವೆ. ೨೪ ರಿಂದ ೪೬ ರವರೆಗಿನ ಪದ್ಯಗಳು ಪುರಾಣಗಳೂ ಸೇರಿದಂತೆ ಹರಿಯ ಮಹಿಮೆಯನ್ನು ಬಣ್ಣಿಸುತ್ತವೆ. ೪೭ ರಿಂದ ೧೦೧ನೆಯ ಪದ್ಯದವರೆಗೂ ಮನುಷ್ಯನ ನಿಸ್ಸಹಾಯಕತೆ, ತಾಯಿಯ ಗರ್ಭದಲ್ಲಿದ್ದಾಗಿನ ಸ್ಥಿತಿ, ದೇಹದ ನಶ್ವರತೆ, ಭಗವಂತನ ಕರುಣೆ, ಆತನ ಶಕ್ತಿಯಲ್ಲಿ ಮನಸ್ಸನ್ನು ಕೇದ್ರೀಕರಿಸುವ ವಿಧಾನವನ್ನು ತಿಳಿಸಲಾಗಿದೆ. ೧೦೨ ರಿಂದ ೧೦೮ ರವರೆಗಿನ ಪದ್ಯದಲ್ಲಿ ಹರಿಭಕ್ತಿಸಾರ ಕೇಳಿದವರಿಗೆ ಆಗುವ ಶುಭ, ಲಾಭವನ್ನು ವಿವರಿಸಲಾಗಿದೆ. ಕೊನೆಯ ೩ ಪದ್ಯಗಳು ಮಂಗಳಕ್ಕೆ ಮೀಸಲಾಗಿವೆ.

'ಭಕ್ತಿ' ಎಂಬುದು ಭಾರತೀಯರ ಜೀವನದಲ್ಲಿ ಅನಂತಕಾಲದಿಂದಲೂ ಹರಿಯುತ್ತಿರುವ ಗಂಗೆ, ಯಮುನೆಯರ ರಸಸಲೀಲ. ವೇದ, ಉಪನಿಷತ್ತು ಮತ್ತು ಪುರಾಣಕ್ಕೆ ಸಂಬಂಧಿಸಿದ ಎಲ್ಲಾ ಕಾಲಗಳಲ್ಲಿಯೂ ಭಕ್ತಿಯ ಅಸ್ತಿತ್ವ ಕಂಡು ಬರುತ್ತದೆ. ಅಂತೂ ಭಕ್ತಿಯ ಸಾಧನೆಗೆ ಹರಿಭಕ್ತಿಸಾರ ಭಕ್ತನಿಗೆ ಒಂದು ಕೈದೀವಿಗೆಯೇ ಆಗಿದೆ.

**ಕೃತಿಯ ಸಾರ:**

ಕನಕದಾಸರ ಹರಿಭಕ್ತಿಸಾರವನ್ನು 'ಹರಿಭಕ್ತರ ಸಾರ' ಎಂದೇ ಕರೆಯಬಹುದು. ಏಕೆಂದರೆ ಕಾವ್ಯದ ಉದ್ದಕ್ಕೂ ಹರಿಯ ಗುಣಗಾನ ಹರಿಯ ಅವತಾರಗಳ ಅನಾವರಣ ಹಾಗೂ ಕನಕದಾಸರ ದೃಷ್ಟಿಯಲ್ಲಿ ಹರಿ ಮಾಡಿರುವ ಸಾಧನೆ ಮಹಿಮೆಗಳು

ಸಾದರಗೊಂಡಿವೆ. ಮನುಷ್ಯನ ದೇಹ, ಸಂಸಾರ, ಚಿಂತನೆ, ಜಾತಿ, ವರ್ಗಗಳನ್ನು ಕುರಿತ ಮಾತುಗಳು ಕೃತಿಯಲ್ಲಿ ಕಂಡು ಬರುತ್ತವೆ. ಇದನ್ನು ಟಿ.ವಿ. ವೆಂಕಟಾಚಲಶಾಸ್ತ್ರಿ, ಹಾಗೂ ಸೀತಾರಾಂ ಜಾಗೀರ್ದಾರ್ ಅವರು ಶತಕ ಸಾಹಿತ್ಯಕ್ಕೆ ಸೇರಿಸುತ್ತಾರೆ.[೧೦೫] ಕಾವ್ಯದ ಎಂಭತ್ತರಷ್ಟು ಭಾಗ ಹರಿಯ ಗುಣಗಾನವೇ ಆವರಿಸಿಕೊಂಡಿದೆ. ಕನಕದಾಸರು ಪ್ರಾರಂಭದಲ್ಲಿ ಹೇಳುವಂತೆ,

ಭಕ್ತಿ ಸಾರದ ಚರಿತೆಯನು ಹರಿ
ಭಕ್ತರಾಲಿಸುವಂತೆ ರಚಿಸುವೆ
ಯುಕ್ತಿಯಲಿ ಬರೆದೋದಿದವರಿಷ್ಟಾರ್ಥ ಸಿದ್ಧಿಪುದು
ಮುಕ್ತಿಗಿದು ನೆಲೆದೋರುವುದು ಹರಿ
ಭಕ್ತರಿದು ಲಾಲಿಪುದು ನಿಜಮತಿ
ಭಕ್ತಗೊಲಿವಂದದಲಿ ರಕ್ಷಿಸುನಮ್ಮನನವರತ। [೧೦೬]

ಹರಿಭಕ್ತರು ಹರಿಯಭಕ್ತಿಯನ್ನು ಕೇಳಲೆಂದು, ಅವರ ಭಕ್ತಿಗೆ ಇದು ಮುಕ್ತಿಯನೆಲೆಯಾಗಲೆಂದು, ಆಸಕ್ತಿಯಿಂದ ಈ ಕಾವ್ಯವನ್ನು ರಚಿಸುವೆ. ಇದನ್ನು ಯಾರು ಪ್ರತಿ ಮಾಡುತ್ತಾರೋ ಇಷ್ಟದಿಂದ ಓದುತ್ತಾರೋ ಅವರಿಗೆ ಇಷ್ಟಾರ್ಥಗಳು ಸಿದ್ಧಿಸುತ್ತವೆ. ಈ ಕಾವ್ಯ 'ಮುಕ್ತಿಗೆ ನೆಲೆತೋರುವುದು. ಆದ್ದರಿಂದ ಇದನ್ನು ಪ್ರೀತಿಯಿಂದ ಲಾಲಿಸಬೇಕು (ಕವಿಃ ಕರೋತಿ ಕಾವ್ಯಾನಿ ಲಾಲಯತ್ಯುತ್ತಮೋ ಜನಃ)[೧೦೭] ನಮ್ಮ ಬುದ್ಧಿ ಶಕ್ತಿಗೆ ಒಲಿಯುವಂತೆ ಸದಾ ನಮ್ಮನ್ನು ರಕ್ಷಿಸು ದೇವಾ ಎಂದು ಕನಕದಾಸರು ಪ್ರಾರ್ಥಿಸಿದ್ದಾರೆ. ಇದೇ ಹರಿಭಕ್ತಿಸಾರದ ಮುಖ್ಯ ಆಶಯವಾಗಿದೆ.

ತರಳ ತನದಲಿ ಕೆಲವು ದಿನದುರು
ಭರದ ಗರ್ವದಿ ಕೆಲವು ದಿನ ಮೈ
ಮರೆದು ನಿಮ್ಮಡಿಗೆರಗದಾದೆನು ವಿಷಯ ಕೇಳಿಯಲಿ
ನರಕ ಭಾಜನನಾಗಿ ಕಾಮಾ
ತುರದಿ ಪರಧನ ಪರಸತಿಗೆ ಮನ
ಹರಿದ ಪಾಪವ ಕಳೆದು ರಕ್ಷಿಸುನಮ್ಮನನವರತ॥[೧೦೮]

ಯೌವ್ವನದ ದಿನಗಳಲ್ಲಿ ಕಾಮವನ್ನು ನಂಬಿ ಕೆಟ್ಟೆನು ಎಂಬ ಪಶ್ಚಾತ್ತಾಪದ ಭಾವವಿರುವುದನ್ನು ಕಾಣುತ್ತೇವೆ.

ಒಡೆಯ ನೀನೆಂದರಿತು ನಾ ನಿ
ನ್ನಡಿಯ ಭಜಿಸದೆ ದುರುಳನಾದೆನು

ಮಡದಿ ಮಕ್ಕಳ ಮೋಹದಲಿ ಮನ ಸಿಲುಕುತಡಿಗಡಿಗೆ
ಮಡದಿ ಯಾರೀ ಮಕ್ಕಳ್ಯಾರೀ
ಒಡಲಿಗೊಡೆಯನು ನೀನು ನೀ ಕೈ
ಮಿಡಿದು ಮುದದಲಿ ಬಿಡದೆ ರಕ್ಷಿಸು ನಮ್ಮನನವರತ।[೧೦೯]

ಇಡೀ ಜೀವನ, ಸಂಸಾರ ಬಂಧನದಲಿ ಸಿಲುಕಿಕೊಂಡಿರುವುದನ್ನು ಮನಗಂಡು ಸಂಸಾರದ ಪ್ರಕ್ರಿಯೆಯನ್ನು ಅಸಹಜ ರೀತಿಯಲ್ಲಿ ಕನಕದಾಸರು ಕಾಣಲೆತ್ನಿಸಿದ್ದಾರೆ. ಇಲ್ಲಿ ನೀನು-ನಾನು ಎಂಬುದು ಹರಿ ಮತ್ತು ಕನಕದಾಸರನ್ನೇ ಸೂಚಿಸುತ್ತದೆ. ಇಲ್ಲಿನ ಸಂಸಾರ, ಆಸೆ, ವ್ಯಾಮೋಹ, ಹಾಗೂ ಈ ದೇಹದಿಂದಾಗುವ ಎಲ್ಲಾ ಸಾಧ್ಯತೆಗಳನ್ನು ಕನಕದಾಸರು ನಿರಾಕರಿಸಿದ್ದಾರೆ.

ಶಂಕರ ಮೊಕಾಶಿ ಪುಣೇಕರರು ಅಭಿಪ್ರಾಯಿಸುವಂತೆ, "ಹರಿಭಕ್ತಿಸಾರದಲ್ಲಿ ತನ್ನ ಜೀವನದ ಹಿನ್ನೋಟವನ್ನು ಒಳಗೊಂಡ ವಿಷಯವನ್ನು ರಚಿಸಿದ ಕನಕನು, ಐವತ್ತನೆಯ ವರ್ಷಕ್ಕೆ ಜಿಗಿಯುವ ಮೊದಲು ಅವನನ್ನು ಬದ್ಧನನ್ನಾಗಿಸಿದ ಅಸ್ತಿತ್ವವಾದದ ಸಂಧಿ ಕಾಲವನ್ನು ಕುರಿತು ನಾವು ಇಲ್ಲಿ ವಿವೇಚಿಸಬೇಕು."[೧೧೦] ಎಂದಿರುವುದನ್ನು ಗಮನಿಸಿದರೆ ಕನಕದಾಸರು ಈ ಕೃತಿಯನ್ನು ತಮ್ಮ ಅಂತಿಮ ದಿನಗಳಲ್ಲಿ 'ಹರಿನಾಮ' ಸ್ಮರಣೆಯೊಂದಿಗೆ ಬರೆದಿರಬೇಕು ಎಂದು ತಿಳಿಯುತ್ತದೆ.

ಹರಿಭಕ್ತಿಸಾರವು ಕನಕದಾಸರ ಕೊನೆಯ ಕೃತಿಯಾಗಿದ್ದು, ಭಕ್ತಿಸಾಹಿತ್ಯದ ಪರಂಪರೆಗೆ ಈ ಕೃತಿ ತನ್ನದೇ ಆದ ಕೊಡುಗೆ ನೀಡಿದೆ. ಬಸವರಾಜ್‌ನಾಯ್ಕ ಅವರ ಅಭಿಪ್ರಾಯದಂತೆ "ಹರಿಭಕ್ತಿಸಾರದಲ್ಲಿ ಅಧ್ಯಾತ್ಮಿಕ ಸಂಕಥನ ಮತ್ತು ಕಾವ್ಯ ಸಂಕಥನಗಳು ಮೇಳವಿಸಿರುವುದನ್ನು ನೋಡಬಹುದು. ಹರಿಪಾರಮ್ಯ ಮತ್ತು ಹರಿಭಕ್ತಿಯಿಂದಾಗುವ ಅಧ್ಯಾತ್ಮಿಕ ಲಾಭವನ್ನು ಎತ್ತಿ ತೋರಿಸುವುದಕ್ಕಾಗಿಯೇ ಕನಕದಾಸರು ಈ ಕಾವ್ಯವದಲ್ಲಿ ಅಧ್ಯಾತ್ಮಿಕ ಧನ್ಯತೆಯಿಂದ ಕೂಡಿದ ಆತ್ಮ ಚರಿತ್ರಾತ್ಮಕ ಧಾಟಿಯನ್ನು ಉಪಯೋಗಿಸಿದ್ದಾರೆ."[೧೧೧]ಎಂಬ ಈ ಮಾತಗಳು; ಕೃತಿ ಕುರಿತಂತೆ ಅರ್ಥಪೂರ್ಣವಾಗಿವೆ.

**ಕೃತಿಯಲ್ಲಿನ ಪಶುಪಾಲನಾ ಪರಂಪರೆಯ ವಿವರಗಳು:**

'ಶ್ರೀಹರಿಭಕ್ತಿಸಾರ'ವು ಕನಕನಾಯಕರು ಕನಕದಾಸರಾದ ಮೇಲೆ ಅಂದರೆ, ಅವರ ಬದುಕಿನ ಉತ್ತರಾರ್ಧದಲ್ಲಿ ಭಕ್ತಿರಸ ಪ್ರಧಾನವಾಗಿ ರಚಿಸಲ್ಪಟ್ಟ ಕಾವ್ಯ. ಪ್ರತಿಯೊಂದು ಪದ್ಯವೂ ಒಂದು ಮತ್ತೊಂದಕ್ಕೆ ಸಂಬಂಧ ಕಲ್ಪಿಸುವಂತಿರದೆ, ಸ್ವತಂತ್ರ ಮುಕ್ತಕ ಎಂಬಂತೆ ಪ್ರಕಾಶಿಸುತ್ತವೆ. ಹಾಗೆಂದು ಎಲ್ಲಾ ಪದ್ಯಗಳನ್ನು ಎಲ್ಲೆಲ್ಲಿಗೋ ಸೇರಿಸಿ ಓದಲಿಕ್ಕೆ ಆಗುವುದಿಲ್ಲ. ಆದ್ದರಿಂದ ಈ ಕೃತಿಗೂ ಒಂದು ಶಿಲ್ಪ, ಒಂದು

ಬಂಧ ಇದೆ. ಸಾಮಾನ್ಯವಾಗಿ ಪರಿಶೀಲಿಸಿದರೆ ಕೃತಿಯ ಮೊದಲ ಭಾಗದಲ್ಲಿ ಶ್ರೀಹರಿಯ ನಾಮಾವಳಿಯ ರತ್ನಗಳನ್ನು ಪೋಣಿಸಿ ಕನಕರು ಮಾಲೆ ಕಟ್ಟಿದ್ದಾರೆ. ಆಮೇಲೆ ಭಗವಂತನ ಲೀಲೆಗಳನ್ನು, ಮಹಿಮೆಗಳನ್ನು, ಶ್ರೀಮದ್ಭಾಗವತ, ಮಹಾಭಾರತ ಇತ್ಯಾದಿ ಆಕರಗಳಿಂದ ಆಯ್ದು ತಂದು ಬೇರೊಂದು ವಾತಾವರಣಕ್ಕೆ ನಮ್ಮನ್ನು ಒಯ್ಯುತ್ತಾರೆ. ಕೃತಿಯ ಕೊನೆಯ ಭಾಗದಲ್ಲಿ ತತ್ವದರ್ಶನವನ್ನು ಕಾವ್ಯದ ಪ್ರಯೋಜನವನ್ನು ಕುರಿತು ಹೇಳುತ್ತಾರೆ.

ಕೃತಿಯ ಪ್ರತಿ ಹಂತದಲ್ಲೂ ಭಕ್ತಿಯೇ ಪ್ರಧಾನವಾಗಿದ್ದು, ವಿಷ್ಣುವನ್ನು ಕನಕದಾಸರು ಆರಾಧ್ಯ ದೇವತೆಯೆಂದು ಸಾರಿದ್ದಾರೆ. 'ಹರಿಭಕ್ತಿಸಾರ'ದ ೧೦೮ ಪದ್ಯಗಳಲ್ಲೂ 'ರಕ್ಷಿಸುನಮ್ಮನನವರತ' ಎಂದು ಪ್ರಾರ್ಥಿಸಿದ್ದಾರೆ. ಕ್ರಿ.ಪೂ. ೩೧೦೧ ನೇ ವರ್ಷಕ್ಕೆ ಸರಿಹೊಂದುವ ಕಲಿ ವರ್ಷದಲ್ಲಿ ವಿಷ್ಣುವಿನ ಅವತಾರವೆಂದೇ ನಂಬುವ ಶ್ರೀಕೃಷ್ಣ ಬದುಕಿದ್ದನೆಂದು ಕೆಲ ಆಧಾರಗಳು ಹೇಳುತ್ತವೆ. ಏಕೆಂದರೆ ಆಗ ಮಹಾಭಾರತ ಯುದ್ಧ ಜರುಗಿತ್ತೆಂದು ಐಹೊಳೆಯ ಶಾಸನವು ತಿಳಿಸುತ್ತದೆ.[೧೧೨] ಈ ಕೃಷ್ಣನನ್ನು ಜನತೆ ದೈವದ ಪಟ್ಟಕ್ಕೇರಿಸಿದ್ದು ಸುಮಾರು ಕ್ರಿ.ಪೂ, ಮೂರನೆಯ ಶತಮಾನಕ್ಕಿಂತ ಮುಂಚೆ.[೧೧೩] 'ಪಾಣಿನಿ'ಯ, 'ಅಷ್ಟಾಧ್ಯಾಯಿ'ಯಲ್ಲಿ ವಾಸುದೇವನನ್ನು ವಿಷ್ಣುವಿನೊಂದಿಗೆ ಸಮೀಕರಿಸಲಾಗಿದೆ.[೧೧೪] ಕೃಷ್ಣ, ಸಂಕರ್ಷಣ, ರಾಮ, ಕೇಶವ ಹಾಗೂ ಜನಾರ್ಧನ ದೇವತೆಗಳ ಮತ್ತು ದೇವಾಲಯಗಳ ಉಲ್ಲೇಖಗಳು ಪತಂಜಲಿ ಋಷಿಗಳ ಭಾಷ್ಯದಲ್ಲಿ ಕಂಡುಬರುತ್ತವೆ. ಭಾಗವತದ ಉಲ್ಲೇಖವೂ ಇಲ್ಲಿ ಬಂದಿದ್ದು; ಅದೂ ಸಾಕಷ್ಟು ಪುರಾತನವೆಂಬುದು ಸ್ಪಷ್ಟ.[೧೧೫] ಕ್ರಿ.ಪೂ ಎರಡನೆಯ ಶತಮಾನದ ಹೊತ್ತಿಗೆ ವಿಷ್ಣು, ವಾಸುದೇವ, ರಾಮ, ಸಂಕರ್ಷಣ ಹಾಗೂ ಕೇಶವ, ಈ ಎಲ್ಲರೂ ಒಂದೇ ದೇವತೆಯ (ವಿಷ್ಣು) ಸ್ವರೂಪವೆಂಬುದು ಗೋಚರವಾಗುತ್ತದೆ.[೧೧೬]

ಹೀಗೆ ದೈವಗಳ ಸೃಷ್ಟಿಯಲ್ಲಿ, ಕಲ್ಪನೆಯಲ್ಲಿ, ಭಾರತೀಯರು ಮಿತಿಮೀರಿದ ಧಾರ್ಮಿಕ ನಂಬಿಕೆ ಉಳ್ಳವರಾಗಿದ್ದಾರೆ. ಭಾರತೀಯ ನೆಲ, ಜಲ, ಪರಿಸರ ಕೂಡ ಭಕ್ತಿ ಭಾವಕ್ಕೆ ಪೂರಕವಾಗಿದೆ. ಇದಕ್ಕೆಲ್ಲಾ ಕಾರಣ ಭಾರತೀಯ ಮೂಲಜನಾಂಗದವರೆಂದು ಕರೆಸಿಕೊಳ್ಳುವ ಪಶುಪಾಲಕರು. ಪಶುಪಾಲಕರೆಂದರೆ ಅತಿ ಮುಗ್ಧರು. ನಂಬಿಕೆಗೆ ಇಂಬಿಟ್ಟವರು. ಭಾವುಕರು, ಆಸ್ತಿಕರು. ದೇವರೆಂದರೆ ಇವರಿಗೆ ಎಲ್ಲಿಲ್ಲದ ಭಕ್ತಿ. ಈ ಅಪಾರ ಭಕ್ತಿಯ ಕಾರಣದಿಂದಲೇ ಎಲ್ಲಾ ಕಡೆ ಗ್ರಾಮದೇವತೆ, ಕ್ಷುದ್ರದೇವತೆ, ರುದ್ರದೇವತೆ, ಸೌಮ್ಯದೇವತೆಗಳನ್ನು ಸೃಷ್ಟಿಸಿದ್ದಾರೆ.

ಜೊತೆಗೆ ಕುರಿ, ದನ, ಹಸುಗಳನ್ನು ಕಾಯುವ ಈ ಪಶುಪಾಲಕರು ಯಾವಾಗಲೂ ಅಧ್ಯಾತ್ಮಿಕ ಭಾಷೆಯಲ್ಲಿಯೇ ಮಾತನಾಡುತ್ತಿದ್ದರು. ದೇವರುಗಳ ಕಲ್ಪನೆಯ ಸೃಷ್ಟಿಕರ್ತರಾದ ಇವರು ಕಾಡು ಮೇಡುಗಳಲ್ಲಿ ದೈವತ್ವವನ್ನು ಕಂಡುಕೊಂಡರು.

ಮೊದಲು ತಮ್ಮಲ್ಲಿರುವ ಆತ್ಮಬಲವನ್ನು ಅಪಾರ ನಂಬಿಕೆಯಿಂದ ಕಲ್ಲಿಗೆ ಧಾರೆಯೆರೆದು; ಭಕ್ತಿಯಿಂದ ಅದಕ್ಕೆ ವಿಶೇಷ ಶಕ್ತಿಯನ್ನು ತುಂಬಿದರು. ಇಂತಹ ಎಲ್ಲಾ ಶಕ್ತಿಯಿಂದ ರೂಪುಗೊಂಡದ್ದು ಈ ದೇವರೆಂದು ಮುದ್ರೆ ಒತ್ತಿದರು. ಅಲ್ಲದೆ ತಮ್ಮ ಹೊರಗಿನ ಶಕ್ತಿಯನ್ನು ಪ್ರಕೃತಿಯೆಂದೂ, ಒಳಗಿನ ಶಕ್ತಿಯನ್ನು ಆತ್ಮ ಎಂದು ಕರೆದುಕೊಂಡು ಪೂಜಿಸಿದರು.

ಈ ಎಲ್ಲಾ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಕನಕದಾಸರನ್ನು ಅವರ ಬದುಕನ್ನು ಗಮನಿಸಿದಾಗ ಅವರೊಬ್ಬ ಪಶುಪಾಲಕ ಸಂಸ್ಕೃತಿಯವರೆನ್ನುವುದು ವೇದ್ಯವಾಗುತ್ತದೆ. ಏಕೆಂದರೆ ತಮ್ಮ ಬರಹಗಳಲ್ಲಿ ಶ್ರೀಕೃಷ್ಣನನ್ನು ಆರಾಧ್ಯದೈವವನ್ನಾಗಿ ಸ್ವೀಕರಿಸಿದ್ದಾರೆ. ಕಾಗಿನೆಲೆಯ ಮೂರ್ತರೂಪದ ಆದಿಕೇಶವನಿಗೆ ತನ್ನೊಳಗಿನ ಆಧ್ಯಾತ್ಮಿಕ ಶಕ್ತಿಯನ್ನೇ ಧಾರೆಯೆರೆದಿದ್ದಾರೆ. ಹಾಗೆಯೇ ತಾವು ಹೋದಲ್ಲೆಲ್ಲಾ ಪೂಜಿಸಿದ ತಿರುಪತಿಯ ತಿಮ್ಮಪ್ಪ, ಕುಮ್ಮೂರಿನ ತಿಮ್ಮಕೇಶವ, ಬೇಲೂರಿನ ಚನ್ನಕೇಶವ, ಮೇಲುಕೋಟೆಯ ಚೆಲುವನಾರಾಯಣ, ಶ್ರೀರಂಗಪಟ್ಟಣದ ಶ್ರೀರಂಗನಾಥ, ಉಡುಪಿಯ ಶ್ರೀಕೃಷ್ಣನಂತಹ ದೈವಗಳು ಕೂಡ ದಾಸರು ಕಂಡ ಮೂರ್ತರೂಪದ ದೇವತೆಗಳೇ. ಈ ಸನ್ನಿವೇಶಗಳು ಕನಕದಾಸರು ಪಶುಪಾಲಕ ಪರಂಪರೆಯ ಪ್ರೇರಣೆ ಸಂಬಂಧವನ್ನು ಹೊಂದಿದ್ದರೆಂಬುದನ್ನು ಸೂಚಿಸುತ್ತವೆ. ಹರಿಭಕ್ತಿಸಾರ ಕನಕದಾಸರ ಭಕ್ತಿಸಾರ. ಭಗವಂತನ ಭಕ್ತಿಗೆ ಯಾರಾದರೇನು? ಯಾವ ಕುಲ, ಯಾವ ಜಾತಿಯವರಾದರೇನು?

ನ ಶೂದ್ರ ಭಗವದ್ಭಕ್ತಾಸ್ತೇತು ಭಾಗವತಾಃ ಸ್ಮೃತಾಃ
ಸರ್ವವರ್ಣೇಷು ತೇ ಶೂದ್ರಾಯೇನ ಭಕ್ತಾ ಜನಾರ್ಧನೇ॥

ಅಂದರೆ ಭಗವದ್ ಭಕ್ತಿಯುಳ್ಳ ಶೂದ್ರ, ಭಾಗವತ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಅಥವಾ ಯಾವ ಜಾತಿಯವನೇ ಆಗಿರಲಿ ಅವನು ಭಗವದ್ ಭಕ್ತನೇ ಎಂಬುದು ಈ ಶ್ಲೋಕದ ಅರ್ಥ.

'ಹರಿಭಕ್ತಿಸಾರ'ಕ್ಕೆ ಕನಕದಾಸರು ಸನಾತನ ಧರ್ಮದ ಪವಿತ್ರ ಗ್ರಂಥಗಳ ಸಾರಾತಿಸಾರವನ್ನು ಸೇರಿಸಿದ್ದಾರೆ. ಪರಮ ಪವಿತ್ರವಾದ ಮಂಗಳಕರವಾದ ವಿಷ್ಣುವಿನ (ಕೃಷ್ಣನ) ಮಹಿಮೆಗಳನ್ನು ಸ್ವಾರಸ್ಯಕರವಾದ ಕಥೆಗಳೊಂದಿಗೆ ಪೋಣಿಸಿದ್ದಾರೆ.

ಬಲಿಯ ಬಂಧಿಸಿ ಮೊರೆಯಿಡುವ ಸತೀ
ಗೊಲಿದು ಅಕ್ಷಯವಿತ್ತು ಕರುಣದಿ
ಮೊಲೆಯನುಣಿಸಿದ ಬಾಲಿಕೆಯ ಪಿಡಿದಸುವನಪಹರಿಸಿ

ಶಿಲೆಯ ಸತಿಯಳ ಮಾಡಿ ತ್ರಿಪುರದ
ಲಲನೆಯರ ವ್ರತಗೆಡಿಸಿ ಕೂಡಿದ
ಕೆಲಸವುತ್ತಮವಾಯ್ತು ರಕ್ಷಿಸು ನಮ್ಮನನವರತ।

ಕರಿಯ ಕಾಯ್ದಾ ಜಲದಿ ಮಕರಿಯ
ತರಿದು, ಹಿರಣ್ಯಾಕ್ಷನ ಸೀಳ್ದಾ
ತರಳನ ತಲೆಗಾಯ್ದು ಶಕಟಾಸುರನ ಹತಮಾಡಿ
ದುರುಳ ಕಂಸನ ಕೊಂದು, ಮಗಧನ
ಮುರಿದು  ವತ್ಸನ ಹಮ್ಮಳಿಸಿ ಖರ
ಹರಣವನು ಹಿಂಗಿಸಿದೆ ರಕ್ಷಿಸುನಮ್ಮನನವರತ।

ನರಗೆ ಸಾರಥಿಯಾಗಿ ರಣದೊಳು
ತುರಗ ನೀರಡಿಸಿದರೆ ವಾರಿಯ
ಸರಸಿಯನು ನಿರ್ಮಿಸಿ ಕಿರೀಟಿಯ ಕೈಲಿ ಸೈಂಧವನ
ಶಿರವ ಕೆಡಹಿಸಿ ಅವನ ತಂದೆಯ
ಕರತಳಕೆ ನೀಡಿಸಿದೆ ಹರಹರ
ಪರಮ ಸಾಹಸಿ ನೀನು ರಕ್ಷಿಸು ನಮ್ಮನನವರತ।

ಬವರದಲಿ ಖತಿಗೊಂಡು ಗದೆಯೊಳು
ಕವಿದು ನಿನ್ನ ಶ್ರುತಾಯುಧನು ಹೊ
ಕ್ಕವಘಡಿಸಿ ಹೊಯ್ದಾಡಿ ತನ್ನಾಯುಧದಿ ತಾ ಮಡಿದ
ವಿವರವೇನೋ ತಿಳಿಯೆ ನೀ ಮಾ
ಯವನು ನೀನೆ ಬಲ್ಲೆ ನಿನ್ನಾ
ಯವನು ಬಲ್ಲವರುಂಟೆ ರಕ್ಷಿಸುನಮ್ಮನನವರತ॥[೧೧೭]

ಹೀಗೆ ಕನಕದಾಸರು ಶ್ರೀವಿಷ್ಣು(ಹರಿ)ವಿನ ಮೇಲಿನ ತಮ್ಮ ದೃಢವಾದ ಭಕ್ತಿಯನ್ನು, ಭಗವಂತನ ವಿಧವಿಧವಾದ ದಿವ್ಯಲೀಲೆಗಳನ್ನೂ, ಹರಿಭಕ್ತಿಸಾರದಲ್ಲಿ ಸಾದರಪಡಿಸಿದ್ದಾರೆ. ದೈವಾಂಶಸಂಭೂತ, ಧರ್ಮದೀಪಕ, ದೇವಮಾನವ, ಸಂಚುಗಾರ, ಪಾಂಡವರಕ್ಷಕ, ದುಷ್ಟ ಸಂಹಾರಕ, ಜ್ಞಾನಿ, ವೀರ, ಶೂರ, ಯುದ್ಧ ಚತುರ. ಯಾದವ, ಯದುನಂದನ, ಯಧುನಾಥ, ಯಾದವಕುಲ ತಿಲಕ, ಅಂಧಕ, ಕುಲಭೂಷಣ, ವೃಷ್ಣಿ, ವೃಷ್ಣೀ ವಂಶಜ, ವೃಷ್ಣೀಗರ್ಭ, ಮುಂತಾದ ಹೆಸರುಗಳಿಂದ ಶ್ರೀಕೃಷ್ಣ(ವಿಷ್ಣು)*ನನ್ನು ಕರೆಯುತ್ತಾರೆ.

ಶ್ರೀಕೃಷ್ಣ, ಅಂಧಕ–ವೃಷ್ಣಿ. ವೃಷ್ಣಿ ಎಂದರೆ ಮೇಷ, ಟಗರು, ಕುರಿ, ಆಡು, ಯಾದವ ಎಂಬರ್ಥವಿದೆ. ಟಗರು ಕುಲದ ಕೃಷ್ಣ ಎಂದರೆ ಕುರಿ ಅಥವಾ ಆಡು ಪಾಲಕ. ಅಲ್ಲದೆ ಕೃಷ್ಣನಿಗೆ ವೃಷ್ಣಿಗರ್ಭ ಎಂದು (ಕುರಿಯಕುಲದವ) ಕರೆಯುತ್ತಾರೆ. ಪಾಂಡವರು, ಕೌರವರು, ಯಾದವರೆಲ್ಲರೂ ಕುರುಬ, ದನಗಾರ ಕುಲದವರೇ.[೧೧೮]

'ಯದು' ಎಂಬ ಪದವು ದನಗಾರ ಎಂಬರ್ಥವನ್ನು ಕೊಡುತ್ತಿದ್ದು, ಅಂಧಕ–ವೃಷ್ಣಿ, ಯಾದವ, ಗೋಪಾಲಕ (ಗೊಲ್ಲ)ರು ಹತ್ತಿರದ ಸಂಬಂಧಿಗಳು.[೧೯೯] 'ಅಯ್ಯಂಗಾರ'ರು ಶ್ರೀಕೃಷ್ಣನನ್ನು 'ದ್ರಾವಿಡ ದೇವತೆ' ಎಂದು ಕರೆದಿದ್ದಾರೆ. ಈತನ ಭಕ್ತರಿಗೆ ದಾಸರೆಂದು ಬಹು ಪೂರ್ವದಿಂದಲೂ ಕರೆಯುತ್ತಿದ್ದರು.

ಈ ಎಲ್ಲದರ ಅರಿವಿನಿಂದಾಗಿ ಪಶುಪಾಲಕ ಕುಟುಂಬದಿಂದ ಬಂದ ಕನಕದಾಸರು ಭಕ್ತಿಯ ಹಿರಿಮೆಯನ್ನು ಬಲ್ಲವರಾಗಿದ್ದು, ಪಶುಪಾಲಕ ದೈವವಾದ ಕೃಷ್ಣನನ್ನೇ ಪೂಜಿಸಲು ಸಾಧ್ಯವಾಯಿತು. ಕೃಷ್ಣ ಭಕ್ತಿಯ ಮೂಲಕವೇ ಮುಕ್ತಿಗಾಗಿ ದಾರಿ ಕಂಡುಕೊಂಡರು. ಶ್ರೀಕೃಷ್ಣನಿಗೆ ದಾಸನಾಗಿ, ಆತನ ಚರಣಗಳಡಿಯಲ್ಲಿ ಊಳಿಗ ಸೇವೆಯನ್ನು ಮಾಡುತ್ತಾ ಹರಿಭಕ್ತಿಯನ್ನು ಮನದಲ್ಲಿ ತಾಳುತ್ತಾರೆ. ಕೃಷ್ಣಾವತಾರ, ರಾಮಾವತಾರ, ನೃಸಿಂಹಾವತಾರ ಮುಂತಾಗಿ ಹಲವು ಅವತಾರಗಳಲ್ಲಿ ಪರಮಾತ್ಮನು ತನ್ನ ಭಕ್ತರನ್ನು ರಕ್ಷಿಸಿದ ಸಂಗತಿಗಳನ್ನು ಕನಕದಾಸರು ವಿವರಿಸುತ್ತಾರೆ. ಅವರನ್ನು ರಕ್ಷಿಸಿದ ಹಾಗೆ ನಮ್ಮನ್ನು ಅನವರತವೂ ರಕ್ಷಿಸು ಎಂದು ಪ್ರಾರ್ಥಿಸುತ್ತಾರೆ. ಮನುಷ್ಯ ಯಾವುದೇ ಕಾರ್ಯದಲ್ಲಿ ನಿರತನಾದರೂ ಆತ ಎಲ್ಲವನ್ನೂ ಭಗವಂತನಿಗೆ ಅರ್ಪಿಸಬೇಕು. ಅವನ ನಾಮಸ್ಮರಣೆಯಲ್ಲಿ ನಿರತನಾಗಿರಬೇಕು ಎಂದು ಕನಕದಾಸರು ಭಕ್ತಿ ಪಾರಮ್ಯವನ್ನು ಮೆರೆಯುತ್ತಾರೆ. ಪಶುಪಾಲಕರೂ ಕೂಡ ತಮ್ಮ ಅಲೆಮಾರಿ ಬದುಕಿನಲ್ಲಿ ಕಾಣುವ ಮೂರ್ತರೂಪದ ಕಲ್ಲುಗಳಿಗೆ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ತಮ್ಮ ರಾಸುಗಳಿಗೆ ಆ ಮೂರ್ತರೂಪದ ದೈವವೇ ರಕ್ಷಕನಾಗಿರುತ್ತಾನೆ ಎಂಬ ನಂಬಿಕೆ ಅವರದು.

---------------------------------------*

* ವಿಷ್ಣು–ಸೃಷ್ಟಿ, ಪಾಲನೆ, ಲಯ ಎಂಬ ಮೂರು ಹಂತದ ಅವಸ್ಥೆಗೆ, ಬ್ರಹ್ಮ, ವಿಷ್ಣು, ಮಹೇಶ್ವರ ಎಂಬ ಮೂರು ದೇವತೆಗಳನ್ನು ಅನಾದಿಕಾಲದಿಂದಲೂ ಪಶುಪಾಲಕರು ಪೂಜಿಸಿಕೊಂಡು ಬಂದಿದ್ದಾರೆ. ಶಿವನ ಸ್ಥಾನ ಪರ್ವತ, ವಿಷ್ಣುವಿನ ವಾಸ ಕ್ಷೀರಸಾಗರ, ಬ್ರಹ್ಮನದು ನಾರುಯುಕ್ತ ಕಮಲ. ಕುರಿ, ದನಗಳನ್ನು ಕಾಯುವ ಪಶುಪಾಲಕರಲ್ಲಿ ಹೈನುಗಾರಿಕೆ ಕವಲೊಡೆದು ಪಶುಪತಿ ಶಿವನನ್ನು ಪೂಜಿಸಿದರು. ನಂತರ ಹುಟ್ಟಿಕೊಂಡಿದ್ದು ವೃಷ್ಣಿ. ವೃಷ್ಣಿ ಎಂದರೆ ಟಗರು(ಕುರಿ). ಇಲ್ಲಿ ವಿಷ್ಣುವನ್ನು ಕಲ್ಪಿಸಿಕೊಂಡಿದ್ದು ಕ್ಷೀರಸಾಗರ ಮಧ್ಯ ಶೇಷಶಯನನಾಗಿ. ವಿಷ್ಣು ಪದದ ಉತ್ಪತ್ತಿ ಹಿಂದೆ ಕುರಿ(ಅಜಃ) ಕಾರಣ. ವಿಷ್ಣು ಆರಾಧನೆ ಸೂರ್ಯನ ಆರಾಧನೆಯಲ್ಲಿ ಬೆರೆತುಕೊಂಡಿದೆ. ಬ್ರಹ್ಮನಿಗೆ 'ಅಜ' ಎಂಬ ನಾಮವೂ ಇದೆ. ಬ್ರಹ್ಮ, ವಿಷ್ಣುವಿನ ನಾಭಿಯಲ್ಲಿ ಬೆಳೆದವನು. ಇಬ್ಬರಿಗೂ ಟಗರೇ ವಾಹನ. ಕಾಲಾನಂತರದಲ್ಲಿ ವಿಷ್ಣುವಿಗೆ ಗರುಡನನ್ನು ತರಲಾಯಿತು. ಇದೇರೀತಿ ಶಿವನ ವಾಹನವು ಕುರಿಯೆ ಆಗಿದ್ದು, ನಂತರ 'ನಂದಿ'ಯನ್ನು ತರಲಾಯಿತು. ಇದು ಕುರಿ ಮತ್ತು ದನಗಳನ್ನು ಪ್ರತ್ಯೇಕವಾಗಿ ಮೇಯಿಸುವ ವ್ಯವಸ್ಥೆಯ ನಂತರದ ಘಟ್ಟದಲ್ಲಿ ಆದ ಬದಲಾವಣೆ. ಈ ಕುರಿತು ವೇದ, ಮಹಾಕಾವ್ಯ, ಪುರಾಣಗಳಲ್ಲಿ ಸಾಕಷ್ಟು ಆಧಾರಗಳಿವೆ. ಹಾಗಾಗಿ ಬ್ರಹ್ಮ, ವಿಷ್ಣು, ಮಹೇಶ್ವರರೆಲ್ಲಾ ಅಜ (ಕುರಿ)ದ ಪ್ರತಿರೂಪಗಳೆಂದು 'ಕಿಟೆಲ್ ಶಬ್ದಕೋಶ ' ಕೂಡ ಸ್ಪಷ್ಟಪಡಿಸುತ್ತದೆ.

ಅಳಿವ ಒಡಲನು ನೆಚ್ಚಿ ವಿಷಯಂ
ಗಳಿಗೆ ಕಾತುರನಾಗಿ ಮಿಗೆ ಕಳ
ವಳಸಿ ಕಾಲನ ಬಳಿಗೆ ಹಂಗಿಗನಾಗಿ ಬಾಳುವರೆ
ತಿಳಿದು ಮನದೊಳು ನಿನ್ನ ನಾಮಾ
ವಳಿಯ ಜಿಹ್ವೆಗೆ ತಂದು ಪಾಪವ
ಕಳೆದ ಬದುಕೇ ಲೇಸು ರಕ್ಷಿಸು ನಮ್ಮನನವರತ॥[೧೨೦]

ಎಂದು ಕನಕದಾಸರು ಹೇಳುವ ಮೂಲಕ "ಲೋಕೇಪಿ ಭಗವದ್ಗುಣ ಶ್ರವಣಾ ಕೀರ್ತನಾತ್" ಎಂಬ ಶ್ಲೋಕದ ಮಾತಿನಂತೆ ಭಗವಂತನ ಮೇಲಿನ ಭಕ್ತಿಯ ಮಹತ್ವವನ್ನು ಸ್ಫುಟಪಡಿಸಿದ್ದಾರೆ. ಇಂತಹ ಹರಿಭಕ್ತಿ ಪ್ರಧಾನ ಸನ್ನಿವೇಶಗಳು, ಕನಕದಾಸರಿಂದ ತಲ್ಲೀನವಾಗಿ ಬರಲು ಅವರ ಮೇಲಾದ ಮಧ್ಯಕಾಲೀನ ಕಾಲಘಟ್ಟದ ಭಕ್ತಿ ಕೇಂದ್ರಿತ ಪಶುಪಾಲನಾ ಬದುಕಿನ ಪ್ರಭಾವವೇ ಕಾರಣವೆಂದು ಹೇಳಬಹುದು.

ಕ್ಷೀರವಾರಿಧಿಶಯನ ಶಾಂತಾ
ಕಾರ ವಿವಿಧವಿಚಾರ ಗೋಪೀ
ಚಾರ ನವನೀತಚೋರ ಚಕ್ರಾಧಾರ ಭವದೂರ
ಮಾರಪಿತ ಗುಣಾಹಾರ ಸರಸಾ
ಕಾರ ರಿಪುಸಂಹಾರ ತುಂಬುರು
ನಾರದಪ್ರಿಯ ವರದ ರಕ್ಷಿಸು ನಮ್ಮನನವರತ॥[೧೨೧]

ಇಲ್ಲಿ ಶ್ರೀಕೃಷ್ಣನನ್ನು ಸಂಬೋಧಿಸುವ ಕನಕದಾಸರು; ಕ್ಷೀರವಾರಿಧಿ ಶಯನ, ಶಾಂತಾಕಾರ, ಗೋಪೀಚಾರ, ನವನೀತಚೋರ ಎಂದೆಲ್ಲಾ ವರ್ಣಿಸಲು ಅವರ ಮೇಲಾಗಿದ್ದ ಪಶುಪಾಲನಾ ಸಂಸ್ಕೃತಿಯ ಪ್ರಭಾವ, ಪ್ರೇರಣೆ ಕಾರಣವೆನ್ನಬಹುದು. ಏಕೆಂದರೆ 'ಕ್ಷೀರ' ಎಂದರೆ ಹಾಲು, ವಾರಿಧಿ-ಸಮುದ್ರ, ಶಯನ-ಮಲಗಿದವ. ಯಾರು ಹಾಲಿನ ಸಮುದ್ರದಲ್ಲಿ ಆದಿಶೇಷನನ್ನು ಹಾಸಿಗೆಯನ್ನಾಗಿ ಮಾಡಿಕೊಂಡು ಮಲಗಿರುವನೋ ಅವನೇ ವಿಷ್ಣು. ಈ ವಿಷ್ಣು ಪಶುಪಾಲಕರ ದೈವ. ಹಾಗಾಗಿ ವಿಷ್ಣುವನ್ನು(ಕೃಷ್ಣ) ಅನಾದಿಕಾಲದಿಂದಲೂ ಪೂಜಿಸಿಕೊಂಡು ಬರುತ್ತಿದ್ದ, ಪಶುಪಾಲನಾ ಸಂಸ್ಕೃತಿಯ ಪರಿಣಾಮ ಕನಕದಾಸರ ಮೇಲಾಗಿದ್ದು, ಶ್ರೀಕೃಷ್ಣ ಆರಾಧ್ಯ ದೈವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಪಶುಪಾಲಕರೆಂದರೆ ಶಾಂತಿಪ್ರಿಯರು, ಅದರಲ್ಲೂ ಶಾಂತತೆಯ ಮೂರ್ತಿಯೆಂದೇ ಶ್ರೀ ಮಹಾವಿಷ್ಣುವನ್ನು ಮಹಾತ್ಮರು ವರ್ಣಿಸಿದ್ದಾರೆ. ಶ್ರೀಕೃಷ್ಣ ಪಶುಪಾಲಕರ ಮನಸ್ಸಿನ ಮೂರ್ತಿಯೇ ಆಗಿದ್ದಾನೆ. 'ಶಾಂತಾಕಾರ' ಎಂದರೆ ಶಾಂತತೆಯ ಸ್ವರೂಪ. ಆತನೇ

ನಾಮಧಾರಿ ಹಾಗೂ ಶಾಂತಿಪ್ರಿಯ ವಿಷ್ಣು. ಆತನೇ ಪಶುಪಾಲಕರ ಆರಾಧ್ಯ ದೈವ.(ಈಗಲೂ ಗೊಲ್ಲರು ಕೆಲ ಕುರುಬರು, ಬೇಡರು ನಾಮಧಾರಿಗಳಾಗಿಯೇ ಕಂಡುಬರುತ್ತಾರೆ.) 'ನವನೀತಚೋರ' ಅಂದರೆ ಬೆಣ್ಣೆಕಳ್ಳ. ಕೃಷ್ಣನು ಬಾಲಕನಾಗಿದ್ದಾಗ ನಂದಗೋಕುಲದ ಮನೆಮನೆಗಳಲ್ಲಿ ನುಗ್ಗಿ ಹಾಲು, ಮೊಸರು, ಬೆಣ್ಣೆಗಳನ್ನು ಕೊಳ್ಳೆ ಹೊಡೆಯುತ್ತಿದ್ದ. ದನಗಳ ಕೊಟ್ಟಿಗೆಗಳಿಗೆ ನುಗ್ಗಿ ಕಟ್ಟಿ ಹಾಕಿದ ಸಣ್ಣ ಕರುಗಳ ಹಗ್ಗ ಬಿಚ್ಚಿ ತಾಯಿ ಹಸುಗಳ ಮೊಲೆ ಹಾಲು ಕುಡಿಯುವಂತೆ ಮಾಡುತ್ತಿದ್ದ, ಇದನ್ನು ನೋಡಿ ಸಂಭ್ರಮದಿಂದ ಕುಣಿಯುತ್ತಲೂ ಇದ್ದ. ಕನಕದಾಸರು ಕೃಷ್ಣನ ಈ ಬಾಲಲೀಲೆಗಳ ವರ್ಣನೆ, ಹಾಲು, ಮೊಸರು, ಬೆಣ್ಣೆ ಹಸು ಕರುಗಳೊಂದಿಗೆ ತರುತ್ತಾರೆ. ಮಂದರಗಿರಿಯ ಮಂಥನದ ಕಲ್ಪನೆಯೂ ಕೂಡ ಮೊಸರು ಕಡೆಯುವ ಕಲ್ಪನೆಯಿಂದಲೇ ಹುಟ್ಟಿಕೊಂಡಿದೆ. 'ಗೋವಿಂದ' ಎಂದರೆ ಗೋವುಗಳನ್ನು ಪಡೆದವನೆಂದು ಸಂಬೋಧಿಸಲ್ಪಟ್ಟಿದೆ. ಈ ಎಲ್ಲಾ ಸನ್ನಿವೇಶಗಳನ್ನು ಕನಕದಾಸರು ಪಶುಪಾಲಕರಾಗಿದ್ದುಕೊಂಡು ಅನುಭವಿಸಿದಂತೆ ಪ್ರಸ್ತುತ ಪಡಿಸಿದ್ದಾರೆ. ಗೋಪೀಚಾರ, ಕೊಳಲಧಾರಿ, ವೇಣುನಾದ, ನಾದವಿನೋದ ಈ ಶ್ರೀಕೃಷ್ಣ; ಗೋಪಿಕೆಯರನ್ನು, ದನಕರುಗಳನ್ನು ತನ್ನ ಕೊಳಲ ದನಿಯಿಂದಲೇ ಕೂಗಿ ಕರೆಯುತ್ತಿದ್ದ. ದನಗಾಹಿಗಳು ಕೊಳಲು ವಾದಕರಾಗಿದ್ದರು. ಆದ್ದರಿಂದ ಕೃಷ್ಣನಿಗೆ ಕೊಳಲಿನ ಧಾರಣೆ ಮಾಡಲಾಗಿದೆ. ಹಾಗಾಗಿಯೇ ಇಲ್ಲಿ ಪಶುಪಾಲನೆಯ ವಿವರಗಳು ಇವೆ ಎಂಬುದನ್ನು ಗುರುತಿಸಬಹುದಾಗಿದೆ. ಏಕೆಂದರೆ ಯಾವುದೇ ಕಾವ್ಯ ಅಥವಾ ಸಾಹಿತ್ಯ ತನ್ನ ಕಾಲವನ್ನು ಪ್ರತಿನಿಧಿಸುತ್ತಲೇ ಇರುತ್ತದೆ ಎಂಬ ಮಾತನ್ನು ನಾವು ಒಪ್ಪಿಕೊಂಡಿದ್ದೇವಲ್ಲವೆ.

> ಗಿಳಿಯಮರಿಯನು ತಂದು ಪಂಜರ
> ದೊಳಗೆ ಪೋಷಿಸಿ ಕಲಿಸಿ ಮೃದು ನುಡಿ
> ಗಳನು ಲಾಲಿಸಿ ಕೇಳ್ವ ಪರಿಣತರಂತೆ ನೀನೆನಗೆ
> ತಿಳುಹು ಮತಿಯನು ಎನ್ನ ಜಿಹ್ವೆಗೆ
> ಮೊಳಗುವಂದದಿ ನಿನ್ನ ನಾಮಾ
> ವಳಿಯ ಪೊಗಳಿಕೆಯನಿತ್ತು ರಕ್ಷಿಸು ನಮ್ಮನನವರತ॥೨೨

ಈ ಪದ್ಯದಲ್ಲಿ ಒಂದು ಸುಂದರವಾದ ಪಾಲನೆ ಮತ್ತು ಪೋಷಣೆ ಇದೆ. ಕವಿ ಇಲ್ಲಿ ಗಿಳಿ ಮರಿ ಇದ್ದ ಹಾಗೆ. ಪರಮಾತ್ಮ ಎಲ್ಲವನು ಬಲ್ಲ ಪರಿಣತರ ಹಾಗೆ. ಪರಮಾತ್ಮನ ನಾಮಾವಳಿಯೇ ಗಿಳಿಯ ಮರಿಗೆ ಪರಿಣತರು ಕಲಿಸುವ ಮೃದು ನುಡಿಗಳು. ಪರಿಣತರಾದವರು ಗಿಳಿಯು ಮರಿಯಿದ್ದಾಗಲೇ ತಂದು ಆ ಮರಿಯನ್ನು ಜೋಪಾನಮಾಡಿ ಪಾಲನೆ ಪೋಷಣೆಯೊಂದಿಗೆ ಮೃದು ಮಾತುಗಳನ್ನು ಅಕ್ಕರೆಯಿಂದ ಮುದ್ದಿನಿಂದ, ಕಲಿಸುತ್ತಾರೆ. ಈ ಭಾವವೊಂದು ಕವಿಯೊಬ್ಬನಿಗೆ ಬರುವುದೇ ತನ್ನ

ಸುತ್ತಲ ಪರಿಸರದ ಅನುಭವದಿಂದ. ಪಾಲನೆಯ ಅರಿವು ಆತನಿಗೆ ಇರಲೇಬೇಕು. ಕನಕದಾಸರಂತೂ ಕುರಿಗಾಹಿ ವಂಶದಿಂದ ಬಂದವರಾಗಿದ್ದು; ತನ್ನ ಸುತ್ತಲ ಸಮಾಜದ ಬದುಕು ಪಶುಪಾಲನೆಯೇ(ಕೃಷಿ ಕೂಡ) ಆಗಿದ್ದಿತು. ಅಲ್ಲದೆ ಕನಕದಾಸರು ಢಣಾಯಕರಾಗಿದ್ದ ಸಂದರ್ಭದಲ್ಲಿ ಸೈನ್ಯದಲ್ಲಿ ಆನೆ ಮತ್ತು ಕುದುರೆ ಮರಿಗಳನ್ನು ತಂದು ಅವುಗಳಿಗೆ ಯುದ್ಧ ತರಬೇತಿಯನ್ನು ಕೊಡುತ್ತಾ ಪಳಗಿಸುತ್ತಿದ್ದರು. ಈ ಸನ್ನಿವೇಶದ ಚಿತ್ರಣವನ್ನೇ ದಾಸರು, ಗಿಳಿಯ ಮರಿಗೆ ಸಾದೃಶವಾಗಿ ತಂದಿದ್ದಾರೆ. ಇಲ್ಲಿ ತರಲಾಗಿರುವ 'ಪರಿಣತ' ಪದ ಪ್ರಾಣಿ ಪಕ್ಷಿಗಳನ್ನು ಪಳಗಿಸುವವ ಎನ್ನುವ ಅಭಿದಾನದ ಹಿನ್ನೆಲೆಯಲ್ಲಿಯೇ ಬಳಕೆಯಾಗಿದೆ, ಈಗಲೂ ಗಿಳಿ, ಪಾರಿವಾಳಗಳನ್ನು ಸಾಕುವ ಹವ್ಯಾಸ ಮನುಷ್ಯನಲ್ಲಿರುವುದನ್ನು ನಾವು ಕಾಣುತ್ತಿದ್ದೇವೆ.

ಮೆರೆದನಭ್ಯದಯದಲಿ ನಿಮ್ಮನು
ಮರೆಯನಾಪತ್ತಿನಲಿ ಹರಿಯೆಂ
ದರಲುವೆನು ಮನವೇಕ ಭಾವದೊಳಿಲ್ಲ ನಿಮ್ಮಡಿಯ
ಮರೆದು ಬಾಹಿರನಾದವನ ನೀ
ಮರೆವರೇ ಹಸು ತನ್ನ ಕಂದನ
ಮರೆವುದೇ ಮಮತೆಯಲಿ ರಕ್ಷಿಸು ನಮ್ಮನನವರತ॥[೭೩]

ಈ ಪದ್ಯ ಮನುಷ್ಯನ ಸ್ವಭಾವಕ್ಕೆ ಹಿಡಿದ ಕನ್ನಡಿಯಂತಿದೆ. ಮಾನವನಿಗೆ ಸುಖ ಬಂದಾಗ, ಏಳಿಗೆಯ ಅಲೆಗಳು ತೇಲಿ ಬರುವಾಗ, ಪರಮಾತ್ಮನ ಸ್ಮರಣೆ ಮಾಡುವುದೇ ಇಲ್ಲ ಎನ್ನುತ್ತಾರೆ ಕನಕದಾಸರು. ಪ್ರಾಜ್ಞರ ಪ್ರಕಾರ ಇದು ಲೋಕ ನಿಯಮವೂ ಹೌದು. ಆದರೆ ಕನಕದಾಸರು ಇಲ್ಲಿ ಹಸು ಮತ್ತು ಕರುವಿನ ಚಿತ್ರಣವನ್ನು ತರುವುದರ ಮೂಲಕ ಮಾನವ ತಾನು ಆಭ್ಯುದಯದಲ್ಲಿದ್ದಾಗ ಭಗವಂತನನ್ನು ಮರೆತು, ಆಪತ್ತು ಬಂದಾಗ ಸ್ಮರಿಸಿಕೊಳ್ಳುವ ಅವನ ಗುಣಕ್ಕೆ ವಿವೇಕದ ಚಾಟಿ ಬೀಸಿದ್ದಾರೆ. ಹಸು, ಕರು, ಕುರಿ, ದನ, ಆನೆ, ಕುದುರೆಗಳ ಒಡನಾಟದಲ್ಲಿದ್ದ ಕನಕದಾಸರಿಗೆ ಇಂತಹ ಸಾದೃಶ್ಯಗಳು ತಟ್ಟನೆ ಹೊಳೆಯುತ್ತಿದ್ದವು. ತಾವು ಕಾಣುತ್ತಿದ್ದ ಈ ಮೂಕ ಪ್ರಾಣಿಗಳಲ್ಲಿ (ಮನುಷ್ಯ ಮಾತು, ವಿವೇಕ ಕಲಿತಿರುವುದು ಈ ಪ್ರಾಣಿ ಪಕ್ಷಿಗಳಿಂದಲೇ) ಒಂದಾದ ಹಸು, ತನ್ನ ಕರುವನ್ನು ಮರೆಯುವುದೇ ಇಲ್ಲ. ಕರುವಾದರೊ, ತಾಯಿ ಹಸುವಿನ ಮೊಲೆಯಲ್ಲಿ ಹಾಲು ಕುಡಿದು ಓಡಿ ಹೋಗುತ್ತದೆ. ಆಗ ಕರುವನ್ನು ಹಿಡಿಯುವುದೇ ಹರಸಾಹಸ. ತನಗೆ ಹಸಿವು ಆಗುವವರೆಗೂ ಈ ಕರುವಿಗೆ ತಾಯಿ ಹಸುವಿನ ನೆನಪಿಲ್ಲ. ಆದರೆ ಹಸಿವಾದ ತಕ್ಷಣ ಮತ್ತೆ ಹಸುವನ್ನು ಹುಡುಕಿಕೊಂಡು ಬರುತ್ತದೆ. ತಾಯಿ ಹಸು ಯಾವಾಗಲೂ ತನ್ನ ಕರುವನ್ನು ಮರೆಯುವುದಿಲ್ಲ. ಬಳಿಗೆ ಬಂದ ತನ್ನ ಕರುವಿನ ಮೈನೆಕ್ಕಿ ಕರುವಿನ ಬಾಯೊಳಗೆ ಹಾಲಿನ ಅಮೃತವನ್ನೇ ಸುರಿಸುತ್ತದೆ.

ಹೀಗೆಯೇ ತಾಯಿಯ ಮಮತೆ ಕೂಡ. ಇಂತಹ ಸನ್ನಿವೇಶವು ಮನುಷ್ಯನ ಸ್ವಭಾವಕ್ಕೆ ತಕ್ಕ ರೂಪಕವಾಗುವಂತೆ ಕನಕದಾಸರು ಕೊಡಲು ಅವರೊಳಗಿನ 'ಪಾಲನಾ ಸಂಸ್ಕೃತಿಯ' ಅನುಭವದ ಪರಿಣಾಮವೇ ಕಾರಣ ಎನ್ನಬಹುದು.

ದೀನನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯ ಪತಿ ನೀನು
ಏನ ಬಲ್ಲೆನು ನಾನು ನೆಲೆ ಸು
ಜ್ಞಾನ ಮೂರುತಿ ನೀನು ನಿನ್ನ ಸ
ಮಾನರುಂಟೇ ದೇವ ರಕ್ಷಿಸು ನಮ್ಮನನವರತ॥ ೨೪

ಈ ಸಮಸ್ತ ಸೃಷ್ಟಿಯ ನಿಯಂತ್ರಕ ಸುಜ್ಞಾನ ಮೂರ್ತಿಯಾದ ಆ ಭಗವಂತ, ಮಹಾದಾನಿ ಹಾಗೂ ಮಹಾಜ್ಞಾನಿ. ಇಂತಹ ಕೈವಲ್ಯ ಪತಿಗೆ, ಸರಿಸಮಾನರು ಯಾರೂ ಇಲ್ಲ. ದೀನನೂ, ಬಡವನೂ ಆದ ನಾನು ಮತಿಹೀನ. ಸಾಕರ ಮೂರ್ತಿಯಾದ ಭಗವಂತನಿಗೆ ಸರಿಸಾಟಿ ಯಾರೂ ಇಲ್ಲ. ಆದ್ದರಿಂದ ಆತನಲ್ಲಿ ಶರಣಾಗತಿಯಾಗುವುದೇ ಲೇಸು ಎನ್ನುವಲ್ಲಿ ಕನಕದಾಸರು 'ಕರ್ಮಸಿದ್ಧಾಂತ'ವನ್ನು ಪ್ರತಿಪಾದಿಸಲು ಪ್ರಯತ್ನಿಸಿದ್ದಾರೆ. ಕನಕದಾಸರು ತನ್ನನ್ನು ತಾನು ಅಜ್ಞಾನಿ ಎಂದು ಕರೆದುಕೊಂಡು ಸುಜ್ಞಾನದ ಸಾಕಾರಮೂರ್ತಿ ಭಗವಂತನ ಹಿರಿಮೆಯನ್ನು ಲೋಕಕ್ಕೆ ಸಾರಿದ್ದಾರೆ.

ಏಕೆಂದರೆ ಕಾಯಕ ಪ್ರಿಯರಾದ ಪಶುಪಾಲಕರು ಕೂಡ ಇದೇ ಗುಣದವರು. ತಮ್ಮ ವೃತ್ತಿ ಬದುಕಿನ ಯಾತನೆಗಳನ್ನು ಎದುರಿಸುವ ಚೈತನ್ಯವನ್ನು ನೀಡುವಂತೆ ಭಗವಂತನಲ್ಲಿ ಮೊರೆಯಿಡುವುದು ರೂಢಿ. ಹೋದಲೆಲ್ಲಾ ಕಂಡ ಕಂಡ ಕಲ್ಲನ್ನಿಟ್ಟು, ಪೂಜಿಸಿ ನಂಬಿ 'ದೀನ' ರಾದ ನಮ್ಮನ್ನು ಕಾಪಾಡು ಎಂದು ಬೇಡಿಕೊಳ್ಳುತ್ತಾರೆ. ಇಂತಹ ಅನುಭವವನ್ನು ಕಂಡು ಕೇಳಿದ್ದರಿಂದ ಕನಕದಾಸರು ಈ ದೈನ್ಯತೆಯ ಕವಿತೆಯನ್ನು ರಚಿಸಿದ್ದಾರೆ.

ಒಟ್ಟಾರೆ 'ಹರಿಸ್ತುತಿ'ಯಿಂದ ಕೂಡಿದ 'ಹರಿಭಕ್ತಿಸಾರ' ಭಕ್ತಿ, ನೀತಿ, ವೈರಾಗ್ಯಗಳ ಸಂಗಮ. ಕನಕದಾಸರ ನಿರ್ಮಲ ಭಕ್ತಿಗೆ ಕೈಗನ್ನಡಿ. ಕನಕದಾಸರ ಇಡೀ ಜೀವಿತಾವಧಿಯ ಅನುಭಾವ, ಅಭಿಪ್ರಾಯಗಳು ಇಲ್ಲಿವೆ. ಹಾಗಾಗಿಯೇ ಕವಿಯ ನರನಾಡಿಯಲ್ಲೆಲ್ಲಾ ಭಕ್ತಿ ಹೊನಲಾಗಿ ಹರಿದಿದೆ. ನಿರ್ಮಲತೆ, ಸಮರ್ಪಣಾಭಾವ, ಶರಣಾಗತಿ, ನೀತಿ ಕುರಿತಂತೆ ಮನುಷ್ಯನ ಬಾಳಿನ ಸಿದ್ಧಾಂತವನ್ನು ದಾಸರು ತೀಳಿಸಿದ್ದಾರೆ.(ಟಿ.ಎನ್.ನಾಗರತ್ನ) ನೀತಿ, ಸಮರ್ಪಣೆ, ಶರಣಾಗತಿ, ಹಾಗೂ

ನಿರ್ಮಲತೆ ಪಶುಪಾಲನಾ ಪರಂಪರೆಯ ಲಕ್ಷಣಗಳೂ ಹೌದು. ಈ ಕಾರಣಕ್ಕಾಗಿಯೇ ಕನಕದಾಸರು ತಮ್ಮ ಕಾಲದ ಪಾರಂಪರಿಕ ವೃತ್ತಿಯ ಕೈಂಕರ್ಯದಿಂದ ಪ್ರಭಾವಿತರಾಗಿ ಪ್ರಸನ್ನವಾದ, ಸರಳ, ಸುಂದರ, ಜನಪ್ರಿಯ ಭಕ್ತಿ ಕೇಂದ್ರಿತ ಇಂತಹ ಕೃತಿ ಬರೆಯಲು ಸಾಧ್ಯವಾಯಿತು ಎಂದು ಹೇಳಬಹುದು.

**ನೃಸಿಂಹಹಸ್ತವ:**

ಕನಕದಾಸರು ರಚಿಸಿರುವ ಕಾವ್ಯ ಕೃತಿಗಳಲ್ಲಿ 'ನೃಸಿಂಹಹಸ್ತವ' ಕೂಡ ಒಂದು. ಆದರೆ ಈ ಕೃತಿ ಇದುವರೆವಿಗೂ ಅಚ್ಚಾಗಿಲ್ಲ. ಅದರ ಹಸ್ತ ಪ್ರತಿಗಳೂ ಹೆಚ್ಚು ದೊರೆತಿಲ್ಲ. ಇದು ಕನಕದಾಸರ ಮೊದಲ ಕೃತಿಯಾಗಿರುವ ಸಾಧ್ಯತೆ ಇದೆ. ಆರ್. ನರಸಿಂಹಾಚಾರ್ಯರು ಕೃತಿಯ ಹಸ್ತ ಪ್ರತಿಗಳನ್ನು ನೋಡಿರುವುದಾಗಿ ಹೇಳಿಕೊಂಡಿದ್ದಾರೆ.[೧೨೫] ಇದು ಸಾಂಗತ್ಯ ಪದ್ಯಗಳಿಂದ ಕೂಡಿದ ಚಿಕ್ಕ ಕೃತಿ. ನರಸಿಂಹನ(ವಿಷ್ಣುವಿನ ಅವತಾರ) ಸ್ತುತಿಯೇ ಈ ಕಾವ್ಯ ಕೃತಿಯ ವಸ್ತು. ಸಿಕ್ಕಿರುವ ಪ್ರತಿಯ ಆರಂಭದಲ್ಲಿ ರಾಮಾನುಜರನ್ನು ನೆನೆದು ನಂತರ ಕಾಗಿನೆಲೆಯ ರಂಗನ ಮುದ್ರೆಯನ್ನು ಕಾಣಬಹುದಾಗಿದೆ. ಮಧ್ಯಕಾಲೀನ ಕಾಲಧರ್ಮದ ಪ್ರಭಾವ ಕನಕದಾಸರ ಇತರ ಕೃತಿಗಳ ಮೇಲಾಗಿರುವಂತೆ ಈ ಕೃತಿಯ ಮೇಲೂ ಆಗಿದ್ದಿರಬಹುದು. ಈ ಕೃತಿ ಕುರಿತ ಹೆಚ್ಚಿನ ಸಂಶೋಧನೆಗಳನ್ನು ಮುಂದಿನ ದಿನಗಳಲ್ಲಿ ಹೆಚ್ಚು ನಿರೀಕ್ಷಿಸಬಹುದಾಗಿದೆ.

**ಕನಕದಾಸರ ಕೀರ್ತನೆಗಳು**

ಸರ್ವಶಕ್ತನಾದ ದೇವರ ಪರಿಕಲ್ಪನೆ, ಆರಾಧನೆ ಮತ್ತು ಸ್ತುತಿಗಳು ಎಲ್ಲ ಮಾನವನ ಸಂಸ್ಕೃತಿಗಳಲ್ಲಿ ಕಂಡುಬರುವ ಒಂದು ಪ್ರಮುಖ ಅಂಶ. ತಾನು ಅರ್ಥಮಾಡಿಕೊಳ್ಳಲಾಗದ ಅಧಮ್ಯ ಪ್ರಾಕೃತಿಕ ಶಕ್ತಿಗಳು ಅಥವಾ ಮಾನಸಿಕ ಚಿತ್ತ ವೃತ್ತಿಗಳಿಗೆ ದೈವತ್ವವನ್ನು ಕಂಡುಕೊಳ್ಳಲು, ಹಾಗೂ ಒಲಿಸಿಕೊಳ್ಳಲು ಸ್ತುತಿ ಪಾಠವನ್ನು ಮಾನವ ಪ್ರಾರಂಭಿಸಿದನು. ಹಾಗೂ ಅದನ್ನು ಕೀರ್ತಿಸತೊಡಗಿದನು. ಇದೇ 'ಕೀರ್ತನೆಗಳ' ಹುಟ್ಟಿಗೆ ಕಾರಣವಾಗಿರಬಹುದು.[೧೨೬] ಮುಂದೆ ಮಾನವ ಸಂಸ್ಕೃತಿ ಬೆಳೆದಂತೆ, ದೈವೀಶಕ್ತಿ, ತತ್ವಚಿಂತನೆ, ಅಧ್ಯಾತ್ಮಿಕ ವಿಚಾರಗಳ ಅನುಭಾವ, ಕೀರ್ತನೆಗಳ ರೂಪವನ್ನು ಪಡೆದುಕೊಂಡಿರಲೂಬಹುದು.

ಭರತ ಖಂಡದಲ್ಲಿ ಭಗವಂತನ ಸ್ತೋತ್ರಗಳು, ನಾಮಸ್ಮರಣೆ, ಸುಪ್ರಭಾತ ಹಾಗೂ ಪೂಜಾಮಂತ್ರದ ರೂಪದಲ್ಲಿ ಕೀರ್ತನೆಗಳು, ಸಂಸ್ಕೃತದಲ್ಲಿ ರಚನೆಯಾದವು. ಇವು ಸ್ತೋತ್ರಗಳಂತೆ ಸಾಮಾನ್ಯ ಜನತೆಯಲ್ಲಿ ನಿಗೂಢ ಅರ್ಥವನ್ನು ಮೌಢ್ಯತೆಯನ್ನು ಹೇರಲ್ಪಟ್ಟವು. ಸಂಸ್ಕೃತ ಬಲ್ಲ ಮಧ್ಯವರ್ತಿಗಳು ಸಾಮಾನ್ಯರನ್ನು ಈ ಸ್ತೋತ್ರಗಳ ಮೂಲಕ ಶೋಷಿಸತೊಡಗಿದರು. ಇಂತಹ ಸಂದರ್ಭದಲ್ಲಿ ಜನತೆಯನ್ನು ಸರಿದಾರಿಗೆ

ತರಲು ಮುಂದೆ ಕರ್ನಾಟಕದಲ್ಲಿ ವಿಭಿನ್ನ ವಾಙ್ಮಯಗಳು, ವಚನ ಹಾಗೂ ಕೀರ್ತನೆಗಳು ಹುಟ್ಟಿಕೊಂಡಂತೆ ಕಾಣುತ್ತವೆ.

'ಮೋಗ್ಲಿಂಗ್' ಅವರು ೧೮೫೦ ರಲ್ಲಿ ಪ್ರಥಮ ಬಾರಿಗೆ ಶಾಸ್ತ್ರೀಯವಾಗಿ ದಾಸರ ನೂರು ಪದಗಳನ್ನು ಆಯ್ಕೆ ಮಾಡಿದರು. ಇವುಗಳಲ್ಲಿ ಕನಕದಾಸರ ಹದಿನಾರು ಕೀರ್ತನೆಗಳಿದ್ದವು. ಕಿಟೆಲ್ ೧೮೬೩ ರಲ್ಲಿ ಕನಕದಾಸರ ನಲವತ್ಮೂರು ಕೀರ್ತನೆಗಳನ್ನು ಪ್ರಕಟಿಸಿದರು. ಇದುವರೆಗೆ ಕನಕದಾಸರ ಮುನ್ನೂರು ಕೀರ್ತನೆಗಳು ದೊರೆತಿವೆ.

**ಕೀರ್ತನೆಗಳ ಆಶಯ:**

ಕೀರ್ತನೆಗಳು ಭಗವಂತನನ್ನು ಹಾಡಿ ಹೊಗಳುವ ಸ್ತುತಿ ರೂಪದ ಭಕ್ತಿ ಪ್ರಧಾನ ಪದ್ಯಗಳು. ಗಾಯನ ಮುಖೇನ ಭಗವಂತನನ್ನು ಸಂಕೀರ್ತಿಸುವ ಭಕ್ತಿ ಪ್ರಧಾನ ಹಾಡುಗಬ್ಬ. ಇವುಗಳಿಗೆ 'ದೇವರನಾಮ'ಗಳೆಂದೂ ಕರೆಯುತ್ತಾರೆ. ಕೀರ್ತನೆಯು ಪಲ್ಲವಿ ಅನುಪಲ್ಲವಿಗಳಿಂದ ಸಂಯೋಜನೆಗೊಂಡಿದ್ದು, ಪಲ್ಲವಿಯಲ್ಲಿಯೇ ದಾಸರು ಸತ್ಯದರ್ಶನದ ಕೊಡುಗೆ, ಕಾಣ್ಕೆಗಳ ಪ್ರಸ್ತಾಪವನ್ನು ತರುತ್ತಾರೆ.

ಕುಲಕುಲ ಕುಲವೆಂದು ಹೊಡೆದಾಡದಿರಿ
ಕುಲದ ನೆಲೆಯನೇನಾದರೂ ಬಲ್ಲಿರಾ॥

ಎಂಬ ಕೀರ್ತನೆಯಲ್ಲಿನ ಪಲ್ಲವಿಯ ಈ ವಾಕ್ಯ ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ. ನಂತರ ಕೀರ್ತನೆಯ ಭಾವ ಪುಷ್ಟಿಗೊಳ್ಳುವುದು ಅನುಪಲ್ಲವಿಯಲ್ಲಿ. ಸಾಮಾನ್ಯವಾಗಿ ಕೀರ್ತನೆಯ ನುಡಿಗಳು ೩, ೫, ೭ ಹೀಗೆ ಬೆಸ ಸಂಖ್ಯೆಯಲ್ಲಿರುತ್ತವೆ. ಕೆಲವೊಮ್ಮೆ ಕೀರ್ತನೆಯ ವ್ಯಾಪ್ತಿ ೩ ರಿಂದ ೧೦೦ ನುಡಿಗಳವರೆಗೂ ಇರಬಹುದು ಎನ್ನುತ್ತಾರೆ ವಿದ್ವಾಂಸರಾದ ಟಿ.ಎನ್.ನಾಗರತ್ನರವರು. ಕೆಲವು ಕೀರ್ತನೆಗಳು ಶಾಸ್ತ್ರೀಯ ಸಂಗೀತದ ಹಿನ್ನೆಲೆಯುಳ್ಳ ರಚನೆಗಳಾಗಿದ್ದು ದೀರ್ಘವಾದ ಖಂಡ ಕಾವ್ಯಗಳಿರುತ್ತವೆ. ಕೀರ್ತನೆಗಳು ವೈಯುಕ್ತಿಕ ಹಾಗೂ ಸಾಮೂಹಿಕವಾಗಿ ಹಾಡಬಲ್ಲ ಪರಿಣಾಮಕಾರಿ ಧಾರ್ಮಿಕ ಮಾಧ್ಯಮಗಳಾಗಿವೆ. ಕನಕದಾಸರು ಹಾಕಿರುವ ರಾಗಗಳು, ಬಳಸಿರುವ ಪದಗಳು ರಾಗರಸ ರಂಜಿತವಾಗಿ ಹೃದಯಂಗಮವಾಗಿವೆ. ಕನಕದಾಸರಿಗಿದ್ದ ಅಪಾರವಾದ ಲೋಕಾನುಭವ; ಕೀರ್ತನೆಗಳ ಮೂಲಕ ಸತ್ವಯುತವಾಗಿ ಹೊರಬಂದಿವೆ.

ಕೀರ್ತನೆಗಳು ಭಗವಂತನಿಗೂ, ಹಾಡುವ ನಮಗೂ, ಒಂದು ಆತ್ಮೀಯ ಅನುಭಾವವನ್ನು ಕಲ್ಪಿಸಿ ಬಿಡುತ್ತವೆ. ಹಾಗಾಗಿ ಕೀರ್ತನೆಗಳು ಮುಕ್ತಿ ಸಾಧನೆ

ಮಾಡುವವರಿಗೆ ಭಗವಂತನೊಂದಿಗಿನ ಭಾವನಾತ್ಮಕ ಭಕ್ತಿ ಸಂಭಾಷಣೆಗಳಿಗೆ ಸೂತ್ರವನ್ನು ಒದಗಿಸುತ್ತವೆ. ಜನಪದ ದಾಟಿಯ ಮಟ್ಟುಗಳೇ ಕಂಡುಬರುವ ಕನಕದಾಸರ ಕೀರ್ತನೆಗಳಲ್ಲಿ ಜನಸಾಮಾನ್ಯರ ಸಾಂಸ್ಕೃತಿಕ ಮೌಲ್ಯಗಳನ್ನು ಜಾನಪದಗೀತೆಯ ಧಾಟಿಯಲ್ಲಿ ಬೋಧಿಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ 'ದಾನಧರ್ಮವ ಮಾಡಿ ಸುಖಿಯಾಗಿರು ಮನವೆ', 'ಕಣಿಯ ಹೇಳಲು ಬಂದೆ', 'ನಾವು ಕುರುಬರು', 'ದೇವಿ ನಮ್ಮ ದ್ಯಾವರು ಬಂದರು', ಮುಂತಾದ ಕೀರ್ತನೆಗಳೇ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

**ಕೀರ್ತನೆಗಳ ಸ್ವರೂಪ:**

ಕನಕದಾಸರು ರಚಿಸಿರುವ ಕೀರ್ತನೆಗಳ ದಾಟಿಯನ್ನು ಗಮನಿಸುವಾಗ ಅವು ಭಾವ ಮತ್ತು ಅರ್ಥದ ದೃಷ್ಟಿಯಿಂದ ಈ ಕೆಳಕಂಡ ನಾಲ್ಕು ರೀತಿಯ ವಿಧಾನಗಳಲ್ಲಿ, ರೂಪುಗೊಂಡಿರುವುದು ಕಂಡು ಬರುತ್ತದೆ.

೧. ಸ್ವಗತದ ದಾಟಿಯಲ್ಲಿ ತನ್ನ ಮನಸ್ಸನ್ನು ಕುರಿತು ಹೇಳಿಕೊಂಡಂತಹ ಕೀರ್ತನೆಗಳು.

೨. ಆರಾಧ್ಯ ದೈವವಾದ ಕಾಗಿನೆಲೆಯ ಆದಿಕೇಶವನನ್ನು ಉದ್ದೇಶಿಸಿ ಹೇಳಿರುವ ಮಾತುಗಳು.

೩. ತನ್ನ ಸುತ್ತಲಿನ ದಾಸರು ಭಕ್ತರು, ಸಾಧಕರುಗಳನ್ನು ಸಂಭೋದಿಸಿ ಹೇಳಿರುವ ಸಾಂದರ್ಭಿಕ ಹೇಳಿಕೆಗಳು.

೪. ಘೋಷಣಾ ರೂಪದಲ್ಲಿ ಎಲ್ಲರಿಗೂ ಕೇಳುವಂತೆ ಹೇಳಿದ ಮಾತುಗಳು.

ಕನಕದಾಸರ ಇಂತಹ ಕೀರ್ತನೆಗಳು ವೈವಿಧ್ಯತೆಯಿಂದ ಕೂಡಿದ್ದು ಸಾಹಿತ್ಯದಲ್ಲಿ ಭಕ್ತಿ, ಕೃಷ್ಣಲೀಲೆಗಳು, ವಿಡಂಬನೆ, ಅನುಭಾವ ಹಾಗೂ ಜೀವನ ಚಿತ್ರಣದಂತಹ ವಸ್ತುಗಳನ್ನು ಹೊಂದಿ ರಚಿಸಲ್ಪಟ್ಟಿವೆ. ಜೊತೆಗೆ ಕೀರ್ತನೆಗಳಲ್ಲಿ ಸಾಮಾನ್ಯರ ಆಹಾರಗಳಾದ ರಾಗಿ, ಮೆಣಸಿನಕಾಯಿಗಳನ್ನು ಸಹಜ ಕಾವ್ಯತ್ವದ ವಸ್ತುಗಳನ್ನಾಗಿಯೂ ತರುತ್ತಾರೆ.[೨೨] ಹಾಗೆಯೇ ಹರಿಸರ್ವೋತ್ತಮತ್ವದ ಪ್ರತಿಪಾದನೆ, ಹನುಮ, ಭೀಮ, ಮಧ್ವರ ಸ್ತೋತ್ರಗಳೂ ಇವೆ. ಭಾಗವತ, ಮಹಾಭಾರತ, ರಾಮಾಯಣ, ಪುರಾಣ, ಹಾಗೂ ವರ್ತಮಾನದ ಜನರ ಬದುಕನ್ನು ಬಿಂಬಿಸುವ ಲೋಕಾನುಭವದ ಕೀರ್ತನೆಗಳನ್ನೂ ಕನಕದಾಸರು ರಚಿಸಿದ್ದಾರೆ. ಒಟ್ಟು ಕೀರ್ತನೆಗಳಲ್ಲಿನ ಕನಕರ ಕಳಕಳಿ ಎಂದರೆ; ಭಕ್ತಿಯ ಮೂಲಕ ಸಾಮಾಜಿಕ ಸುಧಾರಣೆ ಮಾಡುವುದೇ ಮುಖ್ಯವಾದಂತೆ ತೋರುತ್ತದೆ.

ಎಲ್ಲಾ ಕೀರ್ತನೆಗಳಲ್ಲಿ ಗೇಯತೆ ಪ್ರಮುಖ ಅಂಶವಾಗಿರುತ್ತದೆ. ಪಲ್ಲವಿ ಅನುಪಲ್ಲವಿಯನ್ನು ಎಲ್ಲಾ ಕೀರ್ತನೆಗಳು ಹೊಂದಿರುತ್ತವೆ. ಪ್ರತಿ ನುಡಿಯ ನಂತರ,

ಪಲ್ಲವಿ ಪುನರಾವರ್ತನೆಗೊಳ್ಳುತ್ತದೆ. ಕೊನೆಯ ನುಡಿಯಲ್ಲಿ ದೈವಸ್ತುತಿಯಾಗಿ ಅಂಕಿತ ಒಳಗೊಂಡಿರುತ್ತದೆ. ನುಡಿಗಳು ಒಂದು ಅಥವಾ ಎರಡು ಅಥವಾ ಮೂರು ಸಾಲಿನವಾಗಿರಬಹುದು. ಹೀಗೆ ಒಂಬತ್ತು ಸಾಲಿನವರೆಗೂ ಇರುವ ನುಡಿಗಳುಳ್ಳ ಕೀರ್ತನೆಗಳಿವೆ.

> 'ನಾ ಡೊಂಕಾದರೇನೋ' ಎಂಬ ಕೀರ್ತನೆಯಲ್ಲಿ ನುಡಿ ಒಂದೊಂದು ಸಾಲಿನಲ್ಲೂ,
> 'ನೀನ್ಯಾಕೋ ನಿನ್ನ ಹಂಗ್ಯಾಕೋ' ಕೀರ್ತನೆಯಲ್ಲಿ ನುಡಿ ಎರಡೆರಡು ಸಾಲಿನಲ್ಲೂ,
> 'ಕೃಷ್ಣನ ನೋಡಿದೆ ಸರ್ವೋತ್ಕೃಷ್ಟನ ಪಾಡಿದೆ' ಎಂಬಲ್ಲಿ ಮೂರು ಮೂರು ಸಾಲಿನಲ್ಲಿದೆ.

ಈ ಎಲ್ಲಾ ಕೀರ್ತನೆಗಳು ವಸ್ತು ಮತ್ತು ಭಾವದ ದೃಷ್ಟಿಯಿಂದ ಈ ಮೊದಲು ಹೇಳಿದಂತೆ ಅನೇಕ ರೂಪದ ವಿಭಜನೆಗಳಿಗೆ ಕಾರಣವಾಗಿವೆ. [೧೨೮]

**'ಕೀರ್ತನೆ'ಗಳಲ್ಲಿರುವ ಪಶುಪಾಲನಾ ಪರಂಪರೆಯ ವಿವರಗಳು:**

ಕನಕದಾಸರ ಕೀರ್ತನೆಗಳನ್ನು ಇಡಿಯಾಗಿ ಗ್ರಹಿಸಿಕೊಂಡಾಗ ಅವರ ಸಮಗ್ರ ಬದುಕಿನ ಅರಿವಾಗುತ್ತದೆ. ಇವರು ತಮ್ಮ ಅನುಭವಕ್ಕೆ ಬಂದ ಬಡವ, ಬಲ್ಲಿದ, ಕಂದಾಚಾರ. ಮೌಢ್ಯಗಳು ಹಾಗೂ ಜಾತಿಯ ವಿಚಾರಗಳನ್ನು ಅಂದಿನ ತಳ ಸಮುದಾಯಗಳೇ ಹೆಚ್ಚು ಅನುಭವಿಸುತ್ತಿದ್ದುದನ್ನು ಕಂಡಿದ್ದರು. ಅನುಭವಿಸಿಯೂ ಇದ್ದರು. ಇದನ್ನೆಲ್ಲಾ ಕೀರ್ತನೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಮೂಲಕ ಮಾನವನ ಸಾಮಾಜಿಕ ಜೀವನವನ್ನು ಬದುಕಿನ ಮೂಲ ನೆಲೆಯಲ್ಲಿಟ್ಟು ನೋಡುವ ಕನಕದಾಸರ ಸಾಮಾಜಿಕ ಪ್ರಜ್ಞೆ ಮೆಚ್ಚುವಂತಹುದು. ವಿಚಾರಗಳನ್ನು ಶೋಧಿಸುತ್ತಾ ಜೀವನದ ಅರ್ಥ ಹುಡುಕತೊಡಗಿದ್ದ ಕನಕದಾಸರ ಮನಸ್ಸು; ವಿಚಾರ ಮಂಥನದಿಂದ ಕೂಡಿರುವುದೇ ಆಗಿತ್ತು. ಕೀರ್ತನೆಗಳ ಅಧ್ಯಯನವು ಮಾನವನ ವಿಕಾಸದ ಶೋಧದಂತೆಯೇ ಕಂಡುಬರುತ್ತದೆ. ಹಾಗಾಗಿ ಸಾಮಾನ್ಯನೊಬ್ಬನಿಂದ ಪ್ರಾರಂಭವಾದ ಈ ನೆಲದ ಇತಿಹಾಸ, ಪ್ರತಿಯೊಬ್ಬರಿಗೂ ಜೀವನದ ಅನನ್ಯತೆಯನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದೆ. ಆದರೆ ಮೂಲದಿಂದಲೂ ಶ್ರಮಿಕ ಮತ್ತು ಸಾಮಾನ್ಯನೆಸಿಕೊಂಡವನಿಗೆ ಸಮಾಜ ಆರೋಗ್ಯಕರ ವಾತಾವರಣವನ್ನು ನಿರ್ಮಾಣ ಮಾಡಿಕೊಡಲೇ ಇಲ್ಲ. ಹಾಗಾಗಿ ಆತನ ಅಸಹಾಯಕತೆ, ಬದುಕಿನ ತೊಳಲಾಟಗಳು ಅನಾದಿಕಾಲದಿಂದಲೂ ಮುಂದುವರೆಯುತ್ತಾ ಬಂದು ಮಧ್ಯಕಾಲೀನ ಸಂದರ್ಭದಲ್ಲಿದ್ದ ಕನಕದಾಸರನ್ನು ಬಹಳವಾಗಿ ತಟ್ಟಿದ್ದಂತೂ ನಿಜ. ಈ ಎಲ್ಲವನ್ನು ಕಂಡು ಕೇಳಿ ಅನುಭವಿಸಿದ ಕನಕದಾಸರು ಒಬ್ಬ ಕೆಳವರ್ಗದವನಾಗಿ, ದೊರೆಯಾಗಿ, ಕವಿಯಾಗಿ, ದಾಸನಾಗಿ, ಕೀರ್ತನಕಾರನಾಗಿ, ಸಂತನಾಗಿ, ಪ್ರಶ್ನಿಸಿ ಪ್ರತಿಕ್ರಿಯಿಸಿದ್ದಾರೆ. ಇದೆಲ್ಲವನ್ನು ಕನಕದಾಸರ ಬದುಕು ಮತ್ತು ಬರಹ ಹಾಗೂ ನೇರವಾಗಿ ಕೀರ್ತನೆಗಳಲ್ಲಿಯೂ

ಕಾಣಬಹುದು.

ಆದ್ದರಿಂದಲೇ ದಾಸರ ಬೇರೆ ಬೇರೆ ಸ್ವರೂಪದ ಕೀರ್ತನೆಗಳಲ್ಲಿ (ಅಧ್ಯಯನದ ದೃಷ್ಟಿಯಿಂದ ಆಯ್ಕೆ ಮಾಡಿಕೊಳ್ಳಲಾಗಿರುವ) ಶ್ರಮಿಕ ವರ್ಗದವರ ಬದುಕಿನ ಗುಣ, ಲಕ್ಷಣ, ಸ್ವಭಾವಗಳು, ಕನಕದಾಸರ ಬದುಕಿನ ಮೇಲೆ ಬೀರಿರುವ ಪ್ರಭಾವ, ಸಂಬಂಧ ಹಾಗೂ ಪರಿಣಾಮಗಳೇನು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

'ದೈವತ್ವ'ವನ್ನು ಬಿಂಬಿಸುವ ಕೀರ್ತನೆಗಳಲ್ಲಿ ದೇವತಾಸ್ತುತಿ, ಗುರುಸ್ತುತಿ, ದಶಾವತಾರಗಳು, ಕೃಷ್ಣನ ಲೀಲೆಗಳು, ಹರಿಸರ್ವೋತ್ತಮ ಎಂಬ ವಿವಿಧ ಪ್ರಕಾರಗಳಿದ್ದು; ಭಗವಂತನನ್ನು ವಿವಿಧ ಸ್ವರೂಪಗಳಲ್ಲಿ ಪ್ರಾರ್ಥಿಸುವ ಕನಕದಾಸರ ಅನನ್ಯ ಭಕ್ತಿಯನ್ನು ಇಲ್ಲಿ ಕಾಣಬಹುದು. ದೈವ ಕೇಂದ್ರಿತ ಭಕ್ತಿಯ ಮೂಲಕ ಈ ನೆಲದ ಪರಂಪರೆ ಕನಕದಾಸರನ್ನು ಪ್ರಭಾವಿಸಿರುವುದಂತೂ ಸತ್ಯ. ಆದ್ದರಿಂದಲೇ ಕನಕದಾಸರು ಮೂಲದ ಜನಪದ ಒಡೆಯನಾದ ಶಿವನನ್ನು ಕುರಿತು,

ಶಿವ ಶಿವ ಎನ್ನಿರೋ ಮೂಜಗದವರೆಲ್ಲ
ಶಿವ ಶಿವ ಎನ್ನಿರೋ॥

ಎನ್ನುವ ಕೀರ್ತನೆಯು ದೇವತಾ ಸ್ತುತಿಯಲ್ಲಿದ್ದು, ಶ್ರಮಿಕ ಮೂಲದ ಪಶುಪಾಲಕರೆನಿಸಿಕೊಂಡ ಕುರುಬರ ಆರಾಧ್ಯ ದೈವ 'ಕಮ್ಮಗೋಲನ ವೈರಿ'ಯಾದ ಶಿವನನ್ನು ಸ್ತುತಿಸಿ ತವ್ಮೊಳಗಿನ ಶಿವ ಭಕ್ತಿಯನ್ನು ಕನಕದಾಸರು ಅನಾವರಣಗೊಳಿಸಿದಂತಿದೆ. 'ದಾಸನಾಗಬೇಕು ಸದಾಶಿವನ ದಾಸನಾಗಬೇಕು, ಆರು ಚಕ್ರದಿ ಮೆರೆವ ಅಖಂಡನ ಮೂರು ಗುಣವ ತಿಳಿಯಬೇಕು' ಎಂಬ ಕೀರ್ತನೆಯು ಶಿವ ದಾಸರು ಹೇಗಿರಬೇಕು ಎಂಬುದನ್ನು ಹೇಳುವ ಮೂಲಕ 'ಶಿವ' ಮತ್ತು ಕ್ಷೀರ ಸಾಗರದೊಡೆಯ 'ವಿಷ್ಣು' ಬೇರೆ ಬೇರೆಯಲ್ಲ ಎನ್ನುವ ಜ್ಞಾನವನ್ನು ಜಗತ್ತಿಗೆ ಬಿತ್ತರಿಸಿದ್ದಾರೆ. ಹಾಗೆಯೇ,

ಭಜರೇ ಹನುಮಂತಂ ಮಾನಸ
ಭಜರೇ ಹನುಮಂತಂ
ಕೋಮಲ ಕಾಯಂ ನಾಮಸುದೇವಂ
-----------------
ಮೂರ್ಖ ನಿಶಾಚಾರ ವನ ಸಂಹಾರಂ(ದೇವಸ್ತುತಿ)

ಎಂದು 'ಹನುಮ' ನನ್ನು ಹಲವು ಕೀರ್ತನೆಗಳಲ್ಲಿ ಸ್ತುತಿಸಿರುವ ಕನಕದಾಸರಿಗೆ

ದ್ರಾವಿಡ ಪರಂಪರೆಯ ಪ್ರಭಾವವಿತ್ತೆಂಬುದನ್ನು ಸಾಬೀತುಪಡಿಸುತ್ತದೆ. 'ಎನ್ನಕಂದ ಹಳ್ಳಿಯ ಹನುಮ' ಎಂಬ ಕೀರ್ತನೆಯು ಶ್ರೀ ಸಾಮಾನ್ಯನೆಂಬಂತೆ (ಸೇವಕ) ಹನುಮನನ್ನು ಸಂಭೋದಿಸಲಾಗಿದೆ. ಅಂದಿನ ಸಮಾಜದಲ್ಲಿದ್ದ, ದೊಡ್ಡವರು, ಚಿಕ್ಕವರು, ಧನಿಕರು, ನಿರ್ಗತಿಕರು ಎಂಬ ಶ್ರೇಣೀಕೃತ ವ್ಯವಸ್ಥೆಯನ್ನು ಬಹು ಹತ್ತಿರದಿಂದ ಕಂಡಿದ್ದ ಕನಕದಾಸರು, ಸಮಾಜವನ್ನು ಸಮಾನ ನೆಲೆಗಟ್ಟಿಗೆ ತರಲು ಪ್ರಯತ್ನಿಸುತ್ತಲೇ ಇದ್ದುದನ್ನು ಇಂತಹ ಕೀರ್ತನೆಗಳು ಸಾಕ್ಷೀಕರಿಸುತ್ತವೆ.

'ಗುರುಸ್ತುತಿ'ಯನ್ನು ನಿವೇದಿಸುವ ಕೀರ್ತನೆಯೊಂದರಲ್ಲಿ ಕನಕದಾಸರು ತಮ್ಮ ಗುರುವಾದ ವ್ಯಾಸರಾಯರನ್ನು ಪ್ರಹ್ಲಾದನೊಂದಿಗೆ ಸಾಮ್ಯಗೊಳಿಸಿದ್ದಾರೆ.

ಕೂಸನು ಕಂಡಿರ್ರ್ಯಾ ಸುಪ್ರ
ಹ್ಲಾದನ ಕಂಡೀರ್ರ್ಯಾ ನಮ್ಮ
ಕೂಸನು ಕಂಡೀರ್ರ್ಯಾ॥

ರಾಕ್ಷಸ ಕುಲದಲಿ ಜನಿಸಿತು ಕೂಸು
ರಾಧಾಕೃಷ್ಣನ ಭಜಿಸಿತು ಕೂಸು
ರಾಗ ದ್ವೇಷಗಳ ಬಿಟ್ಟಿತು ಕೂಸು
ರಾಮ ಪಾದದ ನೆನೆಯುವ ಕೂಸು

ಪ್ರಸಿದ್ಧ ವ್ಯಾಸರಾಯರೆಂಬ ಕೂಸು
ಪ್ರವೀಣ ವಿದ್ಯೆಯೊಳೆನಿಸಿದ ಕೂಸು
ಪ್ರಹ್ಲಾದನೆಂಬುವ ಆಹ್ಲಾದ ಕೂಸು
ಪ್ರಸನ್ನ ಕಾಗಿನೆಲೆಯಾದಿ  ಕೇಶವನ ಕೂಸು॥

ವ್ಯಾಸರಾಯರು ಪ್ರಹ್ಲಾದನ ಅಂಶ ಸಂಭೂತರು. ಪ್ರಹ್ಲಾದನಾದರು ಯಾರು? ರಾಕ್ಷಸನಾದ ಹಿರಣ್ಯಕಶ್ಯಪನ ಮಗ. ರಾಮಾಯಣದಲ್ಲಿ ರಾಮನನ್ನು ಆರ್ಯ (ಮೇಲ್ವರ್ಗ)ಎಂತಲೂ, ಹನುಮ, ವಾನರ ಸೇನೆ, ಲಂಕೆಯ ಸೈನ್ಯವನ್ನು ದ್ರಾವಿಡರಂತೆಯೂ ಗುರುತಿಸಲಾಗಿದ್ದು,[೧೩೦] ಕೆಳವರ್ಗ(ದ್ರಾವಿಡ)ದವರ ಸಂಕೇತವೇ ಪ್ರಹ್ಲಾದ, ಆತನ ಒಂದು ಅಂಶ ವ್ಯಾಸರಾಯರು, ಎನ್ನುವ ಮೂಲಕ, ಸಮಾಜದಲ್ಲಿನ ಮೇಲು-ಕೀಳು ತಾರತಮ್ಯವನ್ನು ನೋವಾಗಿ ಅನುಭವಿಸಿದ್ದ ಕನಕದಾಸರು; ಒಂದು ಶ್ರೇಣೀಕೃತ ವ್ಯವಸ್ಥೆಯನ್ನೇ ಸದ್ದಿಲ್ಲದೆ ಸರ್ವ ಸಮಾನ ನೆಲೆಗಟ್ಟಿಗೆ ತರುವ ಪ್ರಯತ್ನಮಾಡಿದ್ದಾರೆ. ಯಾರು ಯಾವ ಕುಲದವರಾದರೇನು? ಭಗವಂತ ಸದಾ ಭಕ್ತಿ ಪ್ರಿಯ. ಗುರು (ವ್ಯಾಸರಾಯರು) ಸರ್ವಜನಪ್ರಿಯ, ಎನ್ನುವ ಸಂದೇಶವನ್ನು ಗುರುಸ್ತುತಿಯ ಕೀರ್ತನೆಯಲ್ಲಿ ಸಾರಿಸಾರಿ ಹೇಳಿದ್ದಾರೆ.

'ದಶಾವತಾರ'ಕ್ಕೆ ಸಂಬಂಧಿಸಿದ ಕೀರ್ತನೆಗಳು ಸಹ ಕನಕದಾಸರೊಳಗಿದ್ದ ಪಶುಪಾಲನೆಯ ಎಳೆಗಳನ್ನು ಪ್ರತಿಫಲಿಸುವಂತೆಯೂ ಮೂಡಿ ಬಂದಿವೆ.

ಗೋವಿಂದ ಹರಿ ಗೋವಿಂದ
ಗೋವಿಂದ ಪರಮಾನಂದ ಮುಕುಂದ
ಮತ್ಸ್ಯಾವತಾರದೊಳಾಳಿದನೆ ಮಂದ
ರಾಚಲ ಬೆನ್ನೊಳು ತಾಳಿದನೆ
-----------------
ಅಂಬುಧಿಗೆ ಶರ ಹೂಡಿದನೆ ಕಮ
ಲಾಂಬಕ ಗೊಲ್ಲರೊಳಾಡಿದನೆ
------------------
ಎಸೆವ ಕಾಳಿಂಗನ ಮೆಟ್ಟಿದನೆ ಬಾ
ಧಿಸುವವರ ಯಮಪುರಕಟ್ಟಿದನೆ॥
------------------
ಘಾತಕಿಯನತ್ತ ನೂಕಿದನೆ, ಗೋಪ
ವ್ರಾತ ಗೋಗಳನೆಲ್ಲಾ ಸಾಕಿದನೆ
------------------
ಸಾಧಿಸಿ ತ್ರಿಪುರರ ಗೆಲಿದವನೆ ಮ್ಲೇಚ್ಛರ
ಭೇದಿಸೆ ಹಯವೇರಿ ಕಲೆದವನೆ॥ [೧೩೧]

ಪ್ರಸ್ತುತ ಕೀರ್ತನೆಯಲ್ಲಿ ನೀಡಲಾಗಿರುವ ರೂಪಕಗಳಿಂದ ಗೋವಿಂದನೆಂದರೆ ಯಾದವರ ಒಡೆಯ, ಗೊಲ್ಲರೊಳಗಾಡಿದವನು. ಕಾಳಿಂಗವೆಂಬ ಮತ್ಸ್ಯ ಕುಲವನ್ನು ಸಂಹರಿಸಿದವನು. ಗೋವುಗಳನೆಲ್ಲಾ ಸಲಹುವವನು. ಆತನೇ ಶ್ರೀ ಕೃಷ್ಣವತಾರಿ. ಈತ ದಶಾವತಾರಗಳಲ್ಲಿ ವಿಷ್ಣುವಿನ ಪ್ರತಿರೂಪ. ಕೃಷ್ಣ, ವಿಷ್ಣು, ಗೋವಿಂದ, ಗೋಕುಲ, ಗೋಪವ್ರಾತ, ಇವೆಲ್ಲಾ ಪಶುಪಾಲನೆಯ ಪ್ರಭಾವ, ಸಂಬಂಧದ ಅನುಭವದಿಂದ ಹುಟ್ಟಿಕೊಂಡ  ಹೆಸರಿನ ಚಿತ್ರಣಗಳೇ ಆಗಿವೆ.

ಇನ್ನು ಕೃಷ್ಣನ ಬಾಲಲೀಲೆಗಳು ನಡೆಯುವುದೇ ನಂದಗೋಕುಲದಲ್ಲಿ. ಅಲ್ಲಿ ಇರುವವರಾದರೂ ಯಾರು? ಎಲ್ಲಾ ಯಾದವರು, ಗೋಪಾಲಕರು, ಗೋಪಿಕೆಯರೇ. ಅವರ ಕಾಯಕವೇ ಪಶುಪಾಲನೆ. ಹಸು, ಕರು ದನಗಳನ್ನು ಕಾಯುವುದು. ಅವುಗಳ ಹಾಲನ್ನು ಕರೆದು ಮೊಸರು, ಬೆಣ್ಣೆ, ತುಪ್ಪ ತಯಾರಿಸಿ ಮಾರಾಟ ಮಾಡುವುದು. ಇಲ್ಲಿನ ಬಾಲಕೃಷ್ಣನ ಲೀಲೆಗಳನ್ನು ಕನಕದಾಸರು ಬಣ್ಣಿಸುವಾಗ ಅವರಿಗಿದ್ದ ಪಶುಪಾಲನಾ ಅನುಭವ ಅನಾವರಣಗೊಳ್ಳುತ್ತದೆ. ಬಾಲಕೃಷ್ಣನು,

ಗೊಲ್ಲರಾ ಮನೆಯ ಹೊಕ್ಕು
ಗುಲ್ಲು ಮಾಡುವುದೇನು– ಬಲು
ಲಲ್ಲೆ ಮಾಡುವುದೇನಲ॥

ಹಾಲು ಮೊಸರು ಘೃತವು ನೆಲುವಿನ
ಮೇಲೆ ಇಟ್ಟ ಬೆಣ್ಣೆಯ
ಬಾಲಕರಿಗಿಲ್ಲದಲೆ ಸುರಿದು
ಹಾಲು ಗಡಿಗೆಯನೊಡೆದೆಲ॥

ಜೊತೆಗೆ ತಮ್ಮ ತಮ್ಮ ಮನೆಗಳಲ್ಲಿ ಯಾರಿಗೂ ತಿಳಿಯದಂತೆ ಹಾಲು ಮೊಸರನ್ನು ಕದ್ದು ತಿನ್ನುತ್ತಿದ್ದ ತುಂಟ ಕೃಷ್ಣನನ್ನು ಗೋಪಿಕೆಯರು ಹಿಡಿದು ತಂದು ತಾಯಿ ಯಶೋಧೆಯ ಮುಂದೆ ನಿಲ್ಲಿಸಿ,

ಬಲು ಕಳ್ಳ ನಿನ್ನ ಮಗ–ಯಶೋಧೆ ಕೇಳೆ
ಹಾಲು ಕರೆಯುತಿರಲು
ತೊಲೆಗೆ ನಿಚ್ಚಣಿಕೆಯನೆ ಹಾಕದೆ ಸುರಿದನು
ನೆಲುವಿನ ಪಾಲ್ಮೊಸರ॥

ಹಿಂದೆ ಹಾಲು, ಮೊಸರನ್ನು ನೆಲುವಿನಲ್ಲಿ ಇಡುತ್ತಿದ್ದುದು ವಾಡಿಕೆ. ಏಕೆಂದರೆ ಮನೆಯಲ್ಲಿನ ಸಾಕು ಬೆಕ್ಕಿನಿಂದ ಹಾಲು, ಮೊಸರನ್ನು ಕಾಪಾಡಬೇಕಿತ್ತು. ಈ ಕ್ರಿಯೆ ಎಲ್ಲಾ ಪಶುಪಾಲಕರ ಮನೆಯಲ್ಲಿನ ಸಾಮಾನ್ಯ ದೃಶ್ಯವಾಗಿತ್ತು. ಹೀಗಿದ್ದ ಮನೆಯೊಳಗಿನ ನೆಲುವಿಗೆ, ಪುಟ್ಟ ಪೋರನಾದ ಕೃಷ್ಣ ನಿಚ್ಚಣಿಕೆ(ಏಣಿ) ಹಾಕಿಕೊಳ್ಳದೆ ಏರಿ ಹಾಲು, ಮೊಸರು, ಬೆಣ್ಣೆ ತಿಂದು ಕೆಳಗೆ ಸುರಿಯುತ್ತಿದ್ದ ಸನ್ನಿವೇಶಗಳನ್ನು ದಾಸರು ತರುತ್ತಾರೆ. ಇಂತಹ ವರ್ಣನೆಗಳನ್ನು ಪಶುಪಾಲನಾ ಕುಟುಂಬದ ಸಂಬಂಧ ಇದ್ದಂತಹವರಿಗೆ ಮಾತ್ರ, ತರಲುಸಾಧ್ಯ ಎನ್ನುವುದು ಇದರಿಂದ ವೇಧ್ಯವಾಗುತ್ತದೆ. ಬಾಲಕೃಷ್ಣನ ಕೀಟಲೆ ಯಾವ ಮಟ್ಟಕ್ಕಿತ್ತೆಂದರೆ,

ಬಿಟ್ಟ ಮಂಡೆಯಲಿ ಗಂಡ ಮೈಮರೆತು ಮಲಗಿಹನು
ಜುಟ್ಟನ್ನ ಬಿಚ್ಚಿ ಮಂಚದ ನುಲಿಗೆ ಬಿಗಿದು ಕಟ್ಟಿದ
ಕೊಟ್ಟಿಗೆ ಸುಡುತಿದೆ ಏಳೆಂದು ಬೊಬ್ಬೆಯಿಟ್ಟುದ ಕೇಳಿ
ಥಟ್ಟನೇಳಲು ಗಂಡ, ಜುಟ್ಟು ಕಿತ್ತು ಹೋಯಿತಮ್ಮ॥[೧೨]

ಘಟಿಂಗ, ಪುಂಡ, ತಂಟೆಕೋರ ಹಾಗೂ ರಸಿಕ ಎಂದು ಬಾಲಕೃಷ್ಣನ ಲೀಲೆಗಳ ಬಗೆಗೆ ಗೊಲ್ಲತಿಯರು ಯಶೋಧೆಗೆ ದೂರು ಹೇಳುವ ಮಾದರಿಯ

ಕೀರ್ತನೆಯಿದು. ಇಂತಹ ಅನೇಕ ಕೀರ್ತನೆಗಳಲ್ಲಿ ಕೊಟ್ಟಿಗೆ, ದನ, ಕರು, ಹಸು, ಹಾಲು, ಮೊಸರು ಎಂಬ ರೂಪಕಗಳನ್ನೇ ಕನಕದಾಸರು ಕೃಷ್ಣನ ಲೀಲೆಗಳೊಂದಿಗೆ ವರ್ಣಿಸಲು ತರುತ್ತಾರೆ. ಇದರಿಂದ ಕನಕಯುಗದಲ್ಲಿ ಪಶುಪಾಲನಾ ವೃತ್ತಿಯೇ ಪ್ರಧಾನವಾಗಿತ್ತೆಂದು ನಮಗೆ ಇಂತಹ ಚಿತ್ರಣಗಳ ಮೂಲಕ ತಿಳಿಯುತ್ತದೆ. ಹಾಗಾಗಿ ಯಾವುದೇ ಸಾಹಿತ್ಯವು ಆಯಾಕಾಲದ ಜನರ ಜೀವನದ ಬದುಕನ್ನು ಬಿಂಬಿಸುತ್ತಲೇ ಇರುತ್ತದೆ, ಎಂಬುದು ಕನಕನ ಬರಹಗಳ ಮೂಲಕವೂ ಪ್ರತಿಧ್ವನಿಸುತ್ತದೆ.

ಹಾಗೆಯೇ ವಿಷ್ಣುವನ್ನು, ಹರಿಸರ್ವೋತ್ತಮ ಎಂಬುದಾಗಿ ಕನಕದಾಸರು ಬಿಂಬಿಸುವಾಗ ಅದರೊಳಗಿನ,

ಯಾದವರಾಯ ಬೃಂದಾವನದೊಳು ವೇಣು
ನಾದವ ಮಾಡುತಿರೆ
ರಾಧೆ ಮುಂತಾದ ಗೋಪಿಯರೆಲ್ಲಾ
ಮಧುಸೂಧನ ನಿಮ್ಮನು ಸೇವಿಸುತ್ತಿರೆ
-------------------
ಕರದಲಿಕೊಳಲನೂದುತ ಪಾಡುತ
ಸರಿಗಮ ಪದನ ಸ್ವರಗಳ ನುಡಿಸುತ
-------------------
ತರು ಹಿಂಡುಗಳ ತರತರದಲಿ ತನ್ನ
ಕರದಿಂ ಬೊಬ್ಬೈಸಿ ಸಂತೈಸುತ
ಅರವಿಂದ ನಯನ ಆದಿಕೇಶವರಾಯ
ಕರಗಳ ಸಹಿತ ಗೋವ್ಗಳ ತಿರುಹುತ॥ [೧೩೩]

ಈ ಕೀರ್ತನೆಯಲ್ಲಿ ಬರುವ ಯಾದವರು, ಗೋಪಿಯರು, ಕೊಳಲು, ತುರುಹಿಂಡು, ಕರುಗಳ ಸಹಿತ, ಗೋವ್ಗಳ ತಿರುಹುತ ಎನ್ನುವ ಚಿತ್ರಣಗಳು ಪಶುಪಾಲನಾ ಸಂಸ್ಕೃತಿಯ ರೂಪಕಗಳೇ ಆಗಿವೆ. ಹೀಗೆ ಕನಕದಾಸರ, 'ದೈವತ್ವ'ವನ್ನು ಬಿಂಬಿಸುವ ಅನೇಕ ಕೀರ್ತನೆಗಳು ಪಶುಪಾಲನಾ ಸಂಸ್ಕೃತಿಯ ನೆಲೆಯಲ್ಲಿ ರೂಪುಗೊಳ್ಳುವುದನ್ನು ಈ ಕೆಲವು ಕೀರ್ತನೆಗಳ ಮೂಲಕ ಗಮನಿಸಲಾಗಿದೆ.

'ನಿಸರ್ಗ'ವನ್ನು ಕುರಿತ ಕೀರ್ತನೆಗಳಲ್ಲಿಯೂ ಕನಕದಾಸರು, ನಮ್ಮ ಮೂಲ ಪರಂಪರೆಯ ಎಳೆಗಳನ್ನು ಗುರುತಿಸಿದ್ದಾರೆ. ಇಲ್ಲಿ ನಿಸರ್ಗವನ್ನು ಬದುಕಿನ ಭಾಗವಾಗಿ ಸ್ವೀಕರಿಸಲಾಗಿದೆ. ನಿಸರ್ಗದಲ್ಲಿನ ಮರ, ಗಿಡ, ಬಳ್ಳಿ, ಪ್ರಾಣಿ, ಪಕ್ಷಿ, ಭೂಮಿ, ಮಣ್ಣು, ನೀರು, ಇವೆಲ್ಲವನ್ನು ಕೀರ್ತನೆಗಳಲ್ಲಿ ಸಂಕೇತಗಳಾಗಿ ಬಳಸಿಕೊಳ್ಳುತ್ತಾರೆ. ನಮ್ಮ ಜನಪದರು ನಿಸರ್ಗದ ಆರಾಧಕರೆ ಅಲ್ಲವೆ. ನಿಸರ್ಗದೊಂದಿಗಿನ ಮನುಷ್ಯನ ಸಂಬಂಧಗಳು ಆತನ ಬದುಕನ್ನು ಸೃಷ್ಟಿಸಿವೆ.

ನಿಸರ್ಗದ ಒಡಲಿನಲ್ಲಿ ಉದ್ಭವಿಸುವ ಭೂಕಂಪ, ಕಾಡ್ಗಿಚ್ಚು, ಬಿರುಗಾಳಿ, ಅತಿವೃಷ್ಟಿ, ಅನಾವೃಷ್ಟಿಗಳು ಜನಸಾಮಾನ್ಯರ ಮೇಲೆ ಬೀರುತ್ತಿದ್ದ ದುಷ್ಪರಿಣಾಮಗಳಿಂದಾಗಿ ಅವರು ಭಯಪಟ್ಟುಕೊಳ್ಳುತ್ತಿದ್ದರು. ಇಂತಹ ತಲ್ಲಣಗಳಿಗೆ, ಅಪಾರ ಭಗವದ್ಭಕ್ತಿಯ ಮೂಲಕ ಅಭಯವನ್ನು ಕನಕದಾಸರು ನೀಡುತ್ತಾರೆ.

ತಲ್ಲಣಿಸಿದರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ
ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ
ಪುಟ್ಟಿಸಿದ ಸ್ವಾಮಿ ಹೊಣೆಗಾರನಾಗಿರಲು
ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ

ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೋ
-----------------------
ಪಡೆದ ಜನನಿಯ ತೆರದಿ ಸ್ವಾನು ಹೊಣೆಗೀಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ॥[೧೩೪]

ಮನದ ಆತಂಕ, ಬುದ್ಧಿಯ ಪರಿಹಾರ ಇವೆರಡೂ ಪ್ರಸ್ತುತ ಕೀರ್ತನೆಯಲ್ಲಿ ಮೂಡಿ ಬಂದಿವೆ. ಬೆಟ್ಟ, ಕಾಡು, ನದಿಗಳಂತಹ ಏಕಾಂಗ ಸ್ಥಿತಿಯ ಪ್ರಾಕೃತಿಕ ವಸ್ತುಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ. ವೃಕ್ಷಕ್ಕೆ ನೀರೆರೆದವರು ಯಾರು? ಪಕ್ಷಿಗಳಿಗೆ ಅನ್ನವಿತ್ತವರು ಯಾರು? ಕಪ್ಪೆಗಳಿಗೆ ಆಹಾರ ತಂದಿಟ್ಟವರು ಯಾರು? ಎಂಬುದು ಇಲ್ಲಿನ ಪ್ರಶ್ನೆ. ಇದಕ್ಕೆಲ್ಲಾ ದಾಸರ ಅರಿವಿಗೆ ಕಂಡ ಉತ್ತರವೆಂದರೆ 'ಹುಟ್ಟಿಸಿದ ದೇವ ತಾ ಹೊಣೆಗಾರನಾಗಿರುವುದರಿಂದ ಎಲ್ಲರ ಪಾಲನೆ ಪೋಷಣೆಯ ಕಾರ್ಯವನ್ನು ಅವನೇ ಮಾಡುತ್ತಾನೆ.' ಇದು ಕನಕದಾಸರ ನಂಬಿಕೆ.

ಪ್ರತಿಯೊಂದು ಚರಾಚರ ವಸ್ತುವನ್ನು ಸೃಷ್ಟಿಸಿದವನೇ ಎಲ್ಲವನ್ನು ಸಲಹುವನೆಂಬ ಧೈರ್ಯ ದಾಸರಿಗಿದೆ. ಸಮಸ್ತ ಪ್ರಕೃತಿಯನ್ನು ಹೆತ್ತ ತಾಯಿಯಂತೆ ಹಾಗೂ ರಕ್ಷಿಸುವ ತಂದೆಯಂತೆ ಆ ಸ್ವಾಮಿ. ನಾನು ಒಂಟಿ, ಅಸಹಾಯಕ ಎಂಬ ಅಳುಕು ಯಾರಿಗೂ ಬೇಡ. ದೈವದ ತಾಯ್ತನವನ್ನು ಬೋಧಿಸುತ್ತಾ ಮಾನವನಗೆ ಭರವಸೆ ನೀಡುವ ಕೀರ್ತನೆಯಿದು. ಇದು ಕನಕದಾಸರ ಹೃದಯಾಂತರಾಳದಿಂದ ಹೊರ ಹೊಮ್ಮಿದ ದರ್ಶನದ ಆಣಿಮುತ್ತು. ಏಕೆಂದರೆ ಕನಕದಾಸರಿಗೆ ಸೃಷ್ಟಿಯ ನಿಯಮಗಳ ಅರಿವಿತ್ತು. ತನ್ನ ಬಾಲ್ಯದಲ್ಲಿ ಕೆಲದಿನಗಳು ಕನಕದಾಸರು ಕುರಿಗಾಹಿಯಾಗಿದ್ದರು. ಪ್ರಭುತ್ವದ

ಸಂದರ್ಭದಲ್ಲಿ ಬೇಟೆ, ನಿರಂತರ ರಾಜಕಾರ್ಯಗಳ ತಿರುಗಾಟದಿಂದಾಗಿ ಹಾಗೂ ಅಂದಿನ ಸಮಾಜದಲ್ಲಿದ್ದ ಜನಸಾಮಾನ್ಯರ ಹೆಚ್ಚು ಒಡನಾಟದಿಂದಾಗಿ ನಿಸರ್ಗದಲ್ಲಿನ ಪ್ರಾಣಿ, ಪಕ್ಷಿ, ಮರ, ಗಿಡ, ಬಳ್ಳಿಗಳ ಜೀವಂತಿಕೆಯನ್ನು ಅವುಗಳ ಅಸ್ತಿತ್ವವನ್ನು ಕುರಿತ ಲೋಕಗ್ರಹಿಕೆ ಕನಕದಾಸರಲ್ಲಿ ಗಾಢವಾಗಿ ಇತ್ತೆಂಬುದು ಈ ಕೀರ್ತನೆಯ ಮೂಲಕ ತಿಳಿಯುತ್ತದೆ. ಅಂದಿನ ಜನಸಾಮಾನ್ಯರ ನಿಲುವೇ ಪಾಲನೆ ಮತ್ತು ಪೋಷಣೆ. ಈ ಸಿದ್ಧಾಂತ ಕನಕದಾಸರಲ್ಲಿ ಯತಾವತ್ತಾಗಿ ಪ್ರತಿಬಿಂಬಿಸಲ್ಪಟ್ಟಿದೆ.

ದೈವತ್ವದ ಸಂಕೇತದಂತೆ ಈ ಕೀರ್ತನೆ ಮೂಡಿಬಂದರೂ ನಿಸರ್ಗದ ಜೀವರಾಶಿಗಳನ್ನು ಕುರಿತಂತೆ ಸೃಷ್ಟಿ ಹೊಂದಿರುವ ಆಶ್ಚರ್ಯಗಳೇನೆಂಬುದನ್ನು ಕನಕದಾಸರು ತಮ್ಮ ನಿಸರ್ಗದ ಒಡನಾಟದ ಅನುಭವದ ಮೂಲಕ ಅಭಿವ್ಯಕ್ತಿಪಡಿಸಿದ್ದಾರೆ. ಇದೇರೀತಿ ಭೂಮಿಯನ್ನು ಕುರಿತ ಕೀರ್ತನೆಯೊಂದರಲ್ಲಿ,

ಏಕೆ ನಡುಗಿದೆ ತಾಯೆ ಭೂಮಿ ನಡುರಾತ್ರಿಯೊಳು ಜಗ
ದೇಕ ಪೊಡವಿಗೊಡೆಯನ ರಾಣಿ ಪರಮಕಲ್ಯಾಣಿ॥

ಹಾಗೂ,

ಮಣ್ಣಿನ ಮಹಿಮೆ ಮನುಜ ನೀನರಿಯೆ
ಷಣ್ಮಹಿಷಿಯುತ ಸರ್ವೋತ್ತಮನ ಲೀಲೆ
ಮಣ್ಣಲಿ ದೊರಕಿದಳು ಮಾತಾಯಿ ಸೀತಾ
ಮಣ್ಣಳೆದ ವಾಮನ ಮಹಾಬಲಿಯ ಬೇಡಿ
ಮಣ್ಣು ಪಾವನವಾಯ್ತು ರಾಮ ಪದ ಸ್ಪರ್ಶದಿ
ಮಣ್ಣುಂಡ ಬಾಯಲಿ ಬ್ರಹ್ಮಾಂಡ ತೋರಿದ ಕೃಷ್ಣ॥[೧೩]

ಎನ್ನುವ ಕೀರ್ತನೆಗಳು ಸಹ ನಿಸರ್ಗದ ಜೀವಪರ ನಿಲುವನ್ನು ಸಾಕ್ಷೀಕರಿಸುತ್ತವೆ. ಇಡೀ ಜೀವಕೋಟಿ ಆಶ್ರಯಸಿರುವುದೇ ಭೂಮಿತಾಯಿಯನ್ನು. ಆಡಳಿತ, ತಿರುಗಾಟ, ಕೃಷಿ ಚಟುವಟಿಕೆಯ ಅನುಭವದ ಮೂಲಕ ಪ್ರಕೃತಿಯ ಸ್ವಾಭಾವಿಕ ಘಟನೆಗಳನ್ನು ಬಹು ಹತ್ತಿರದಿಂದ ಬಲ್ಲವರಾಗಿದ್ದ ಕನಕದಾಸರಿಗೆ ಇಂತಹ ಕೀರ್ತನೆಗಳನ್ನು ರಚಿಸಲು ಸಾಧ್ಯವಾಯಿತು ಎಂದು ಹೇಳಬಹುದು.

ನಮ್ಮ ಮೂಲ ಪಶುಪಾಲಕರು ಒಂದು ಕಡೆ ನೆಲೆನಿಂತ ಮೇಲೆ ಕಂಡುಕೊಂಡ ನಂತರದ ವೃತ್ತಿಯೇ 'ವ್ಯವಸಾಯ'. ತಾವು ಬೇಟೆಯಾಡಿ ತಂದ ಪ್ರಾಣಿಗಳನ್ನೇ ಪಳಗಿಸಿ ಪಶುಸಂಗೋಪನೆ ಮಾಡುತ್ತಲೇ ಅವುಗಳನ್ನು ವ್ಯವಸಾಯಕ್ಕೂ ಬಳಸಿಕೊಳ್ಳತೊಡಗಿದರು. (ನೋಡಿ, ಅಧ್ಯಾಯ-೨) ಹೀಗೆ ಮುನ್ನೆಲೆಗೆ ಬಂದ ಕೃಷಿ; ಕನಕದಾಸರು ಬದುಕಿದ್ದ ಮಧ್ಯಕಾಲೀನ ಸಂದರ್ಭದಲ್ಲಿ ಪ್ರಧಾನ ಉದ್ಯೋಗವಾಗಿಯೇ ಕಂಡುಬರುತ್ತದೆ. ಹಾಗಾಗಿಯೇ ಕನಕದಾಸರು ಕೂಡ

ಮೂಲತಃ ಕೃಷಿ ಸಮಾಜದಿಂದಲೇ ಬಂದವರಾಗಿದ್ದು, ಗ್ರಾಮೀಣ ಭಾಗದಲ್ಲಿನ ಕೃಷಿ ಪರಿಕರಗಳನ್ನು ಅಲ್ಲಿನ ವ್ಯವಸಾಯವನ್ನು ಸೂಕ್ಷ್ಮವಾಗಿ ಗಮನಿಸಿದವರು.[೧೩೬] ವಚನಕಾರರನ್ನು ಹೊರತು ಪಡಿಸಿದರೆ, ದಾಸ ಸಾಹಿತ್ಯದಲ್ಲಿ ಕೃಷಿ ಪರಿಭಾಷೆಯನ್ನು ಬಳಸಿಕೊಂಡವರು ಕನಕದಾಸರೊಬ್ಬರೆ.

ಕುಂಟೆ ತುದಿಗೆ ಕೊರಡು ಹಾಕಿ, ಹೆಂಟೆ ಮಣ್ಣನು ಸಮನು ಮಾಡಿ
ರೆಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ[೧೩೭]

ಎಂಬ ಕೀರ್ತನೆಯ ಸಾಲುಗಳು ಕನಕದಾಸರಿಗಿದ್ದ ವ್ಯವಸಾಯದ ಸಂಬಂಧವನ್ನು ತಿಳಿಸುತ್ತವೆ. ಹಾಗೆಯೇ

ನಾರಾಯಣ ಎಂಬ ನಾಮದ ಬೀಜವನು ನಾಲಿಗೆಯಾ
ಕೂರಿಗೆಯಾ ಮಾಡಿ ಬಿತ್ತಿರಯ್ಯಾ॥
ಹೃದಯ ಹೊಲವನು ಮಾಡಿ ತನುವ ನೇಗಿಲ ಮಾಡಿ
ತನ್ವಿರಾ ಎಂಬ ಎರಡೆತ್ತ ಹೂಡಿ
ಜ್ಞಾನವೆಂಬೊ ಮಿಣಿಯ ಕಣ್ಣಿಹಗ್ಗವ ಮಾಡಿ
ಮನವೆಂಬ ಧ್ಯಾನವ ನೋಡಿ ಬಿತ್ತಿರಯ್ಯಾ॥[೧೩೮]

ಈ ಕೀರ್ತನೆಯಲ್ಲಿ ನೇಗಿಲು, ಹಗ್ಗ, ಕಣ್ಣಿ, ಎತ್ತು, ಗಿಡ, ಪೊದೆ, ಬೀಜ, ಹಕ್ಕಿ, ರಾಶಿ, ಮುಂತಾದ ಕೃಷಿ ಪರಿಭಾಷೆಯನ್ನು ಬಳಸಿರುವುದರಿಂದ; ಅಂದಿನ ಕೃಷಿ ಚಟುವಟಿಕೆಯು ಕನಕದಾಸರನ್ನು ಹೇಗೆ ಪ್ರಭಾವಿಸಿತ್ತು ಎಂಬುದನ್ನು ಅರ್ಥೈಸಿಕೊಳ್ಳಬಹುದು. 'ದೇವರನಾಮು'ವೆಂಬುದು ಅಂತರಂಗದಲ್ಲಿ ಬಿತ್ತಿಬೆಳೆಯಬೇಕಾದ ಬೆಳೆ ಎಂಬ ಕನಕದಾಸರ ಅನುಭವ, ಭಗವಂತನ ನಾಮಸ್ಮರಣೆಯೊಂದಿಗೆ ಅನುಭಾವದ ಹಂತಕ್ಕೆ ತಲುಪಿರುವುದನ್ನು ಈ ಕೀರ್ತನೆ ಸಾದರಪಡಿಸುತ್ತದೆ.

'ಸಂಸಾರ'ವನ್ನು ಕುರಿತು ರಚಿಸಲ್ಪಟ್ಟಿರುವ ಕೀರ್ತನೆಗಳಾದ,

ಏನೂ ಇಲ್ಲದ ಎರಡು ದಿನ ಸಂಸಾರ
ಜ್ಞಾನದಲ್ಲಿ ದಾನ ಧರ್ಮವ ಮಾಡಿರಯ್ಯಾ॥
ಹಸಿದು ಬಂದವರಿಗೆ ಆಸನವೀಯಲು ಬೇಕು
ಶಿಶುವಿಗೆ ಹಾಲ್ಬೆಣ್ಣೆಯುಣಿಸಬೇಕು.
ಹಸನಾದ ಭೂಮಿಯನು ಧಾರೆಯೆರೆಯಲು ಬೇಕು
ಪುಸಿಯಾಡದೇ ಭಾಷೆ ನಡೆಸಲೇ ಬೇಕು॥

ಕಳ್ಳತನಗಳ ಮಾಡಿ ಹೊಟ್ಟೆ ಹೊರೆಯಲು ಬೇಡ
ಕುಳ್ಳಿರ್ದ ಸ್ಥಳದಿ ಕುಟಿಲ ಕೃತ್ಯವ ಬೇಡ
ಒಳ್ಳೆಯವ ನಾನೆಂದು ಬಲು ಹೆಮ್ಮೆಯಲಿರಬೇಡ
ಬಾಳುವೆ ಸ್ಥಿರವೆಂದು ನೀನಂಬಿ ಕೆಡಬೇಡ॥[೧೩೯]

ಹಾಗೂ

ಎಷ್ಟು ಪ್ರೀತಿಯೋ ಮನಕೆ ಎಷ್ಟು ಪ್ರೀತಿಯೋ
ಇಷ್ಟವೆಂದು ತಿಳಿದು ಈ ಕಷ್ಟ ಸಂಸಾರ ಹೊರುವುದು॥ [೧೪೦]

ಇಲ್ಲೆಲ್ಲಾ ಕನಕದಾಸರು 'ಸಂಸಾರ' ಶಾಶ್ವತವಲ್ಲ ಎಂಬುದಾಗಿ ಹೇಳುತ್ತಾರೆ. ವಿಕಾಸದ ಹಂತದಲ್ಲಿದ್ದ ಮಾನವ ತಾನು ರೂಢಿಸಿಕೊಂಡಿದ್ದ ವೃತ್ತಿಗಳಾದ ಪಶುಪಾಲನೆ ಮತ್ತು ವ್ಯವಸಾಯದ ಸಂದರ್ಭದಲ್ಲಿ ಒಂದು ಕಡೆ ನೆಲೆ ನಿಂತು ಬದುಕಲು ಪ್ರಾರಂಭಿಸಿದ. ಇದರಿಂದಾಗಿ ಹುಟ್ಟಿಕೊಂಡ ಮನುಷ್ಯನ ಸಮೂಹ ಜೀವನವು ಮುಂದೆ ಕುಟುಂಬಗಳ ರೂಪ ಪಡೆದು ಆತನ ಬೇಕು ಬೇಡಗಳು, ಕೊಡುಕೊಳ್ಳುವಿಕೆಗಳು ಈ ಕುಟುಂಬಗಳ ಒಳಗೇ ನಡೆಯಲಾರಂಬಿಸಿದವು. ಇದೇ ವೇಳೆಯಲ್ಲಿ ಜಾತಿ, ಕುಲ, ಅಂತಸ್ತು, ಹಣ, ಐಶ್ವರ್ಯ ಹಾಗೂ ಬಡತನದ ಅನುಭವಗಳು ಕುಟುಂಬದ ಮೇಲಾಗತೊಡಗಿದವು. ತಾಯಿ-ತಂದೆ, ಹೆಂಡತಿ, ಮಕ್ಕಳ ಒಡನಾಟ, ಹಾಗೂ ಇಲ್ಲಿನ ಕಷ್ಟ ಸುಖ, ನೋವು, ನಲಿವು, ರೋಗ, ಸಾವುಗಳು ಜನಸಾಮಾನ್ಯರನ್ನಂತೂ ಗಾಢವಾಗಿ ತಟ್ಟತೊಡಗಿದವು.

ಈ ಎಲ್ಲಾ ಅನುಭವವನ್ನು ತಾನೊಬ್ಬ ಸಂಸಾರಿಯಾಗಿದ್ದುಕೊಂಡು ಕುಟುಂಬದ ಎಲ್ಲಾ ಹಂತದ ಸುಖ-ದುಃಖ, ನೋವು, ನಲಿವುಗಳ ಅನುಭವವನ್ನು ಕನಕದಾಸರು ಪಡೆದಿದ್ದರು. ಜನಸಾಮಾನ್ಯರನ್ನು ಬಹು ಹತ್ತಿರದಿಂದ ಬಲ್ಲವರಾಗಿದ್ದು ಢಣಾಯಕನಾಗಿಯೂ ಐಸಿರಿಯನ್ನು ಅನುಭವಿಸಿದ್ದರು. ಜೊತೆಗೆ ತನ್ನ ಕುಟುಂಬದಲ್ಲೇ ಉಂಟಾದ ತಂದೆ, ತಾಯಿ, ಸತಿ, ಸುತನ ಸಾವು ಕನಕದಾಸರನ್ನು ಬಹಳವಾಗಿ ಕಾಡಿದೆ. ಅಲ್ಲದೆ ಸುತ್ತಲ ಸಮಾಜದಲ್ಲಿಯೂ ನಿರಂತರವಾಗಿ ಘಟಿಸುತ್ತಿದ್ದ ಇಂತಹ ಸನ್ನಿವೇಶಗಳನ್ನು ಕಂಡ ಕನಕದಾಸರು,

ಸತಿಯು ಸುತರು ಪುತ್ರಿ ಮಿತ್ರರತಿಶಯದೊಳು ತಂದೆ ತಾಯಿ
ಅತಿ ವಿನೋದ ಗೈದ ಭಾವ ಜತನವೆಂಬೊ ಅತ್ತೆ ಮಾವ
ಜೊತೆಗೆ ಹುಟ್ಟಿದಣ್ಣ ತಮ್ಮ, ಈ ದೇಹ ತಾನು
ಸತ್ತಗಳಿಗೆ ಮುಟ್ಟಲಮ್ಮರು------॥ [೧೪೧]

ಇಂತಹ ಸ್ವಾರ್ಥಪರರೊಟ್ಟಿಗಿನ ನಾಲ್ಕು ದಿನದ ಸಂಸಾರದಲ್ಲಿ ಯಾರೂ

ಸಂಗಡ ಬಾಹೋರಿಲ್ಲ ಎಂಬುದನ್ನು ಕಂಡುಕೊಂಡಿದ್ದರು. ಅದಕ್ಕಾಗಿ,

ಸಾಕು ಸಾಕಿನ್ನು ಸಂಸಾರ ಸುಖವು
ಶ್ರೀಕಾಂತ ನೀನೊಲಿದು ಕರುಣಿಸೈ ಹರಿಯೆ॥,

ಎಂದು ಸೃಷ್ಟಿಕರ್ತನಾದ ದೇವರಿಗೆ ಮೊರೆಹೋಗುತ್ತಾರೆ. ಭಗವನ್ನಾಮ ಸ್ಮರಣೆಯೊಂದೆ ಪರಗತಿಗೆ ಸಾಧನ ಎಂದು ಎಲ್ಲದಕ್ಕೂ ದೈವವನ್ನೇ ಬೇಡುತ್ತಾರೆ. ಸಾಮಾನ್ಯ ಶ್ರಮಿಕರಂತೆಯೇ ಕನಕದಾಸರೂ ಕೂಡ ಕಷ್ಟ ಕಾಲಕ್ಕಾಗುವ ಇಷ್ಟ ದೈವದ ಮೊರೆ ಹೋಗುತ್ತಾರೆ. ಸಂಸಾರದಲಿ

ಆರು ಹಿತವರು ಎಂದು ನಂಬಬೇಡ
ಆರಿಗಾರಿಲ್ಲ ಆಪತ್ತು ಬಂದೊದಗಿದಡೆ॥ [೧೪೨]

ಎಂಬ ತೀರ್ಮಾನಕ್ಕೂ ಕನಕದಾಸರು ಬರುತ್ತಾರೆ. ಕನಕದಾಸರ ಜಾತಿ, ಕುಲವನ್ನು ಕುರಿತಂತೆ ಕಂಡುಬರುವ ಕೀರ್ತನೆಗಳಾದ,

ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿ ಹಿಂಡುಗಳ
ಅಷ್ಟಮದ ಮತ್ಸರಗಳೆಂಬ ಟಗರುಗಳು
ದೃಷ್ಟಿ ಜೀವಾತ್ಮನೆಂಬೋ ಆಡು
ಸೃಷ್ಟಿ ಪ್ರಸಿದ್ಧಿಯಂತೆಂಬುವಾ ಹೋತಗಳು
ಕಟ್ಟಿ ಕೋಲಿನಲಿ ಇರಿಯುತಿಹ ನಮ್ಮಜ್ಜ
ವೇದಶಾಸ್ತ್ರ ಪುರಾಣವೆಂತೆಂಬ ಶ್ವಾನಗಳು
ಕಾದಿದ್ದು ನಮ್ಮಜ್ಜ ಹಿಂಡಿನೊಳಗೆ
ಹಾದಿ ಕಾಣದೆ ಕೂಗಿ ಬಾಯಾರಿ ಕಾಲ್ಗೆರೆಗೆ
ಆದರಿಸಿ ಅಂಬಲಿ ನೆರವ ನಮ್ಮಜ್ಜ
---------------------
ಜಲಜಾಕ್ಷ ಕಾಗಿನೆಲೆಯಾದಿ ಕೇಶವನ ಮನ
ವೊಲಿಸಿ ಭಜಿಸಿದವನು ಹುಚ್ಚು ಕುರುಬಾ॥ [೧೪೩]

ಎನ್ನುವಲ್ಲಿ ಕನಕದಾಸರು ತಮ್ಮ ವೈಯಕ್ತಿಕ ಜೀವನದ ಎಳೆಯನ್ನು ತೆರೆದಿಡುತ್ತಾರೆ. ಅಂದಿನ ಸಮಾಜದಲ್ಲಿನ ಶ್ರೇಷ್ಠತೆಯ ಗರ ಬಡಿದ ಮಡಿವಂತರು ಕನಕದಾಸರನ್ನು ನೀನು ಯಾತರವನು?(ಯಾವ ಜಾತಿಯವನು) ಎಂದು ಪೀಡಿಸಿದಾಗ, ಅವರು ಗಂಭೀರವಾಗಿಯೇ 'ಯಾತರವನೆಂದುಸರಲಿ ಜಗನ್ನಾಥ ಮಾಡಿದ ನರರೂಪವಯ್ಯಾ'

ಎಂದು ಜಾತಿಯನ್ನು ಹೆಸರಿಸದೆ; ನಿಮ್ಮ ಹಾಗೆಯೇ ನಾನು ಒಬ್ಬ ನರಮನುಷ್ಯ ಎಂದು ಉತ್ತರಿಸುತ್ತಿದ್ದರು. ಇದಕ್ಕೆ ತೃಪ್ತಿಪಟ್ಟುಕೊಳ್ಳದ ಮೇಲು ಕೀಳಿನ ಗೀಳುಳ್ಳವರು ಮತ್ತೆ ಮತ್ತೆ ನೀನು ಯಾತರವನು? ನೀನು ಯಾತರವನು? ಎಂದು ಊಳಿಡತೊಡಗಿದಾಗ ರೋಸಿಹೋದ ಕನಕದಾಸರ ಹೃದಯದಿಂದ ಹೊರಹೊಮ್ಮಿದ ಕೀರ್ತನೆ ಇದು. ದಾಸರ ಅನುಭಾವಿಕ ಪರಿಭಾಷೆಯಲ್ಲಿರುವ ಇಲ್ಲಿನ ಸಾಲುಗಳು; ಕುರುಬ ಸಮುದಾಯದ ಪ್ರಧಾನ ವೃತ್ತಿಯೊಂದಿಗೆ ಮಾನವನ ಬದುಕನ್ನೇ ಗರ್ಭೀಕರಿಸಿ ಕೊಂಡಿವೆ. ಕುರಿ ಕಾಯುವ ಸಮಾಜದ ಅನುಭವವುಳ್ಳ ಕನಕದಾಸರಿಗೆ ಈ ಕಾಯಕದ ಮಹತ್ವ ಕುರಿತು ಕೀರ್ತನೆ ಕಟ್ಟುವುದು ಕಷ್ಟವಾಗಿರಲಿಕ್ಕಿಲ್ಲ. ಆಡು, ಕುರಿ, ಟಗರುಗಳ ಹಿಂಡನ್ನು ಕಾಯುವ ಬೀರಪ್ಪ ಕುರುಬರ ಆರಾಧ್ಯ ದೈವ(ಈಗಲೂ). ಕುರುಬರೇ ಬೀರಪ್ಪನಿಗೆ ನಡೆದುಕೊಳ್ಳುವವರು. ಹಾಗಾಗಿ ಈ 'ಕುರುಬ'ನೆಂಬುವವನು ಪಶುಪಾಲಕ ಜಾತಿಯವನೆಂಬುದು ಸ್ಪಷ್ಟ.

ಆದ್ದರಿಂದಲೇ ಕನಕದಾಸರು ಕೆಳವರ್ಗದವರ ಆಗುಹೋಗುಗಳನ್ನು;ತಮ್ಮ ಬಾಲ್ಯಾವಸ್ಥೆ, ಢಣಾಯಕ ಪದವಿಯಿದ್ದ ಸಂದರ್ಭ ಹಾಗೂ ದಾಸತ್ವವನ್ನು ಸ್ವೀಕರಿಸಿದಾಗಲೂ, ಸೂಕ್ಷ್ಮವಾಗಿ ಗಮನಿಸುತ್ತ ಅನುಭವಿಸುತ್ತಲೂ ಇದ್ದರು. ಈ ಅನುಭವ ಕನಕದಾಸರನ್ನು ನಿರಂತರವಾಗಿ ಕಾಡುತ್ತಲೇ ಇದ್ದು, ಇಂತಹ ಕೀರ್ತನೆಗಳ ಮೂಲಕ ಪ್ರತಿಧ್ವನಿಸುತ್ತಿತ್ತು.

ಜೊತೆಗೆ ಕನಕದಾಸರ ಜೀವಿತಾವಧಿಯ ಮಧ್ಯಕಾಲೀನ ಕಾಲಘಟ್ಟದಲ್ಲಿ ವ್ಯಕ್ತಿಯೊಬ್ಬ ಸಮಾಜದಲ್ಲಿ ಸ್ಥಾನಮಾನ ಪಡೆಯುವುದು ಆತನ ಜಾತಿ ಕುಲಗಳ ಬೆಂಬಲದಿಂದಲೇ ಎನ್ನವುದು ಅಂದಿನ ಕಾಲಧರ್ಮದ್ದಾಗಿತ್ತು. ವಿದ್ಯಾಭ್ಯಾಸವೆಂಬುದು ಕೆಲವೇ ಕೆಲವು ಜಾತಿಗಳ ಗುತ್ತಿಗೆಯಾಗಿತ್ತು. ಅಧ್ಯಾತ್ಮಿಕ ಚರ್ಚೆ ಮತ್ತು ಸಾಧನೆ ಹಾಗೂ ಕಾವ್ಯ ರಚನೆ ಇತ್ಯಾದಿಗಳೆಲ್ಲಾ ಮೇಲ್ಜಾತಿಯವರಿಗೆ ಸೀಮಿತವಾಗಿದ್ದವು. ಹಾಗಾಗಿ ಪ್ರತಿಷ್ಠಿತ ಜಾತಿಯ ದುರಭಿಮಾನಿಗಳು ಕನಕದಾಸರನ್ನು ದ್ವೇಷಿಸುತ್ತಿದ್ದುದು ತೀರಾ ಸಹಜ. ಜಾತಿ ಕಾರಣದಿಂದ ಆಗಾಗ ಅಪಮಾನಗೊಳ್ಳುತ್ತಿದ್ದ ಪ್ರಸಂಗಗಳನ್ನು ದಾಸರು ಎದುರಿಸಿರಲೇಬೇಕಾಯಿತು.

ಇಂತಹ ಕೀಟಲೆಗಳಿಗೆ ಪ್ರತಿಕ್ರಿಯೆಯಾಗಿ ಕನಕದಾಸರು ಮಾರ್ಮಿಕವಾದ ಉತ್ತರಗಳನ್ನು ಕೀರ್ತನೆಗಳ ಮೂಲಕ ಕೊಟ್ಟಿದ್ದಾರೆ.[೧೪೩]

ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ
ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ

ಅಟ್ಟು ಉಣ್ಣದ ವಸ್ತುಗಳಿಲ್ಲ
------------------
ಜಲವೇ ಸಕಲ ಕುಲಕ್ಕೆ ತಾಯಲ್ಲವೆ
ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ॥

ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ॥

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯಾ
ಆತ ಮಹಾತ್ಮನು ನೆಲೆಯಾದಿ ಕೇಶವ
ಯಾತರ ಕುಲವಯ್ಯಾ ಆತನೊಲಿದ ಮೇಲೆ॥ ೧೮೪

ಹೀಗೆ ಕನಕನ್ನು ಬಹಳವಾಗಿ ಕಾಡುತಿದ್ದ ಸಮಸ್ಯೆ ಎಂದರೆ, ಅಂದಿನ ಸಮಾಜದಲ್ಲಿ ಕೆಳಜಾತಿ ಯವರನ್ನು ಕಂಡು ಮೇಲು ಜಾತಿಯೆನಿಸಿಕೊಂಡವರು ಬಿಂಬಿಸುತ್ತಿದ್ದ ಮೇಲು-ಕೀಳು ಎಂಬ ಕುಲದ ವಿಚಾರ. ಒಂದೇ ಗಗನವನ್ನು ಕಾಣುವ, ಒಂದೇ ನೆಲವನ್ನು ತುಳಿಯುವ, ಒಂದೇ ಧಾನ್ಯವನ್ನು ಉಣ್ಣುವ, ಒಂದೇ ನೀರನ್ನು ಕುಡಿಯುವ, ಒಂದೇ ಗಾಳಿಯುನ್ನು ಉಸಿರಾಡುವ ನರಜಾತಿಯಲ್ಲಿ ಕುಲದ ವೈಷಮ್ಯ ಬಂದುದಾದರೂ ಹೇಗೆ? ಎಂದು ಈ ಕೀರ್ತನೆಯ ಉದ್ದಕ್ಕೂ ಕನಕದಾಸರು ಪ್ರಶ್ನಾರ್ಥಕವಾಗಿಯೇ ಮಾತನಾಡುತ್ತಾರೆ. ಸತ್ಯವಂತರಿಗೆ ಕುಲವೆಂಬುದಿಲ್ಲ ಎನ್ನುತ್ತಾರೆ. ಆದರೆ ಮನುಷ್ಯನಾದರೂ ತನಗೆ ನೆಮ್ಮದಿಯ ಸುಖ ನೀಡುವ ಸತ್ಯವನ್ನು ಕಾಪಾಡಿಕೊಳ್ಳುವಲ್ಲಿ ವಿಫಲನಾಗಿದ್ದಾನೆ. ಭಾರತೀಯ ಪರಂಪರೆಯಲ್ಲಿ ಆತ್ಮ, ಜೀವ, ಇಂದ್ರಿಯಗಳಿಗೆ ಕುಲವೆಂಬುದಿಲ್ಲ. ಆದ್ದರಿಂದ 'ಕುಲ ಕುಲ ಕುಲವೆಂದು ಹೊಡದಾಡದಿರಿ ಇದರ ಮೂಲವನ್ನು ತಿಳಿದವರಾದರೂ ಯಾರು?' ಎಂಬ ವೈಚಾರಿಕತೆಯ ಚಿಂತನಾಕ್ರಮದ ಪ್ರಶ್ನೆಗಳ ಮೂಲಕ ಎಲ್ಲರೂ ಯೋನಿಯಲ್ಲಿ ಬಂದವರೇ ಎಂದು ಕುಲದ ವಿಚಾರವಾಗಿ ಹೀಯಾಳಿಸುವವರನ್ನು ಎಚ್ಚರಿಸಲು ಪ್ರಯತ್ನಿಸುತ್ತಾರೆ. ಹಾಗಾಗಿ ಅಂದಿನ ಶ್ರಮಿಕ ವರ್ಗ, ಜಾತಿಯ ಕಾರಣಕ್ಕೆ ಅನುಭವಿಸುತ್ತಿದ್ದ ಯಾತನೆಗಳನ್ನು ಬಹು ಹತ್ತಿರದಿಂದ ಬಲ್ಲವರಾಗಿದ್ದು ಹಾಗೂ ಅನುಭವಿಸಿಯೂ ಇದ್ದ ಕನಕದಾಸರಿಂದ; ಪ್ರತಿಭಟನೆಯ ರೂಪದಲ್ಲಿ ಇಂತಹ ಕೀರ್ತನೆಗಳು ರಚನೆಗೊಳ್ಳಲು ಕಾರಣವಾಗಿದೆ. ಹೀಗಿರುವಾಗ ಮನುಷ್ಯನಿಗೆ ಕುಲವಾದರೂ ಉಂಟೆ ಎಂದು ಜಾತಿ ಕುಲ ಕುರಿತು ತಮ್ಮನ್ನು ಕೆಣಕುವವರಿಗೆ

ಹರಳು ಸಿಡಿದಂತೆ ಪಟಪಟನೆ ಉಸುರುತ್ತಾರೆ. ಜೊತೆಗೆ ಸದಾ ತಮ್ಮ 'ಕುಲ'ಕುರಿತ ಧ್ವನಿಯನ್ನು ಜನಸಾಮಾನ್ಯರ ಪರವಾಗಿಯೇ ತಂದಿರುವುದನ್ನು ಈ ಕೀರ್ತನೆಯ ಮೂಲಕ ಗಮನಿಸಬಹುದಾಗಿದೆ. ಅಲ್ಲದೆ,

ತೀರ್ಥವನು ಪಿಡಿದವರೆಲ್ಲಾ ತಿರುನಾಮಧಾರಿಗಳೇ?
ನೀತಿ ತಪ್ಪಿದವರೆಲ್ಲಾ ದೇವ ಬ್ರಾಹಣರೇ ಕೃಷ್ಣಾ?
ಭಂಗಿ ಮುಕ್ಕುಗಳೆಲ್ಲಾ ಲಿಂಗವಂತರೆ ಕೃಷ್ಣಾ?
ವೇಷಧಾರಿಗಳೆಲ್ಲಾ ಸಂನ್ಯಾಸಿಗಳಾಗುವರೆ ಕೃಷ್ಣಾ?
ಹೊಟ್ಟೆಗುಡ ಮೃಗಗಳೆಲ್ಲಾ ಶ್ರೀ ವೈಷ್ಣವರೆ ಕೃಷ್ಣಾ?[೧೪೫]

ಎಂದು ಶೀಲ ಕೆಟ್ಟು ಬಾಳುವ ದೈವದ್ರೋಹಿಗಳನ್ನು ಬಹಳವಾಗಿ ಟೀಕಿಸಿ, ತ್ರಿಕರಣ ಶುದ್ಧ ಸಾಮಾನ್ಯನ ಭಕ್ತಿಯೇ ಶ್ರೇಷ್ಠ ಎಂಬ ತೀರ್ಮಾನಕ್ಕೆ ದಾಸರು ಬರುತ್ತಾರೆ. ಇಂತಹ ಮಾತುಗಳು ಕನಕದಾಸರಿಂದ ಬರಲು ಆತ ತಳಸಮುದಾಯದವನಾಗಿರಲೇ ಬೇಕು. ಅಲ್ಲಿನ ನೋವು. ಯಾತನೆ, ಮೇಲಿನವರ ಶೋಷಣೆಯನ್ನು ಅನುಭವಿಸಿರಲೇಬೇಕು. ಅಂದಿನ ಸಮಾಜದಲ್ಲಿ ತಳಸಮುದಾಯದವರೆನಿಸಿಕೊಂಡಿದ್ದ ಪಶುಪಾಲಕರು, ಕೃಷಿಕರು, ಇತರ ಶ್ರಮಿಕರೆಲ್ಲಾ ಶೂದ್ರರೇ. ಕಡೆಗೂ ಕನಕದಾಸರು ಜಾತಿ ಕುಲದಿಂದ ಹೊರಬರಲು 'ವರರುಹ ಹೊತ್ತು ತಿರುಗುವಂಥ ತಿರುಕನಿಗೆ ಇನ್ನ್ಯಾತರ ಕುಲವಯ್ಯಾ, ಕೇಶವನಿಗೆ ಪ್ರೀತನಾದ ಮೇಲೆ ನನಗೆ ಕುಲವೆಲ್ಲಿಯದಯ್ಯಾ' ಎನ್ನುತ್ತಲೇ ಶ್ರಮಿಕ ಮೂಲದ ಸಹಜ ಮಾನವತ್ವವನ್ನೇ ಮೆರೆಯುತ್ತಾರೆ.

'ಪ್ರಭುತ್ವ'ವನ್ನು ಕುರಿತಂತೆ ಹಾಗೂ ಪ್ರಶ್ನಿಸುವಂತೆ ಕಂಡುಬರುವ ಕೀರ್ತನೆಗಳೂ ಸಹ ಈ ನೆಲದ ಪರಂಪರೆಯನ್ನೇ ಪ್ರತಿಬಿಂಬಿಸುತ್ತವೆ. ಕುರುಬರಾದ ಹಕ್ಕಬುಕ್ಕರಿಂದ ಸ್ಥಾಪಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯದಲ್ಲಿ ಕನಕದಾಸರಿಗೆ ರಾಜಧಾನಿಯಲ್ಲಿಯೇ ಯಾವ ರಾಜತ್ವದ ಅಧಿಕಾರಗಳೇನು ದೊರೆಯಲಿಲ್ಲ. ಆದರೆ ತಂದೆಯಿಂದ ಬಂದ ಬಾಡ ಪ್ರದೇಶದ 'ಮಾಂಡಲಿಕತ್ವ' ಮಾತ್ರ ಇವರದಾಗಿತ್ತು. ಹಾಗಾಗಿ ವಿಜಯನಗರದ ಅರಸರ ಆಜ್ಞೆಯಂತೆಯೇ ಕನಕದಾಸರು ಬಾಡ ಪ್ರಾಂತ್ಯದ ಆಡಳಿತ ನಿರ್ವಹಿಸಬೇಕಾಗಿತ್ತು. ಹಾಗಾಗಿ 'ಅಲ್ಪ ದೊರೆಗಳ ಜೀತ ಎಷ್ಟು ಮಾಡಿದರೇನು?' ಎಂಬ ಕೀರ್ತನೆಯು; ಸರ್ವ ಸಮಾನತೆಯ ಮನಸ್ಥಿತಿಯುಳ್ಳ ಕನಕದಾಸರಂತಹವರಿಗೆ ಮಾಂಡಲಿಕತ್ವ ಉಂಟುಮಾಡುವ ವೈರುಧ್ಯಗಳೇನು? ಎಂಬುದನ್ನು ಪ್ರತಿನಿಧಿಸುತ್ತದೆ.

ಶ್ರಮಿಕ ವರ್ಗವನ್ನು 'ಪ್ರಭುತ್ವ' ತನ್ನ ಸೇವೆಗಾಗಿಯೇ ಬಳಸಿಕೊಳ್ಳುತ್ತಿದ್ದು

ಮಾಂಡಲಿಕರಾದ ಕನಕದಾಸರಿಗೆ ಇದು ನೋವುಂಟುಮಾಡಿರಬಹುದು. ಹಾಗಾಗಿಯೇ ತಾವು ಅಧಿಕಾರದಲ್ಲಿ ಇದ್ದೊಷ್ಟೂ ದಿನ ಜನಪರವಾಗಿಯೇ ಆಡಳಿತ ನೆಡೆಸಿದುದನ್ನು ಕಾಣುತ್ತೇವೆ. ದೇವಾಲಯ ನಿರ್ಮಾಣ, ಕೆರೆಕಟ್ಟೆಗಳನ್ನು ನಿರ್ಮಿಸುವುದು, ದಾನ ಧರ್ಮ ಮಾಡುವುದು, ಕಂದಾಯದಲ್ಲಿ ವಿನಾಯಿತಿ, ಜನಸಾಮಾನ್ಯರ ರಕ್ಷಣೆಗೆ ಆದ್ಯತೆ ಹಾಗೂ ನ್ಯಾಯಸಮ್ಮತ ಆಡಳಿತವನ್ನು ನಡೆಸುತ್ತಲೇ ಅಪಾರ ಜನಮನ್ನಣೆಯನ್ನೂ ಪಡೆದರು. ಇದು ವಿಜಯನಗರದ ಅರಸರಿಗೆ ನುಂಗಲಾರದ ತುತ್ತಾಗಿರಬಹುದು. ಈ ಕಾರಣದಿಂದ ಅರಸರು ಕನಕದಾಸರಿಗೆ ರಕ್ಷಣೆ ಮತ್ತು ಜನಪರ ಕಾರ್ಯಗಳಲ್ಲಿ ಸಹಕಾರವನ್ನು ಕೊಡದಿರಲೂಬಹುದು. ಹಾಗಾಗಿಯೇ ಕನಕದಾಸರು ಗಡಿ ಭಾಗದ ರಾಜರ ನಿರಂತರ ಆಕ್ರಮಣದಿಂದ ತನ್ನ ಪ್ರದೇಶವನ್ನು ರಕ್ಷಿಸಿಕೊಳ್ಳಲು ಒಬ್ಬರೇ ತನ್ನ ಸೈನ್ಯದೊಂದಿಗೆ ಹೋರಾಡಿರಬಹುದು. ಸೈನ್ಯದಲ್ಲಿ ಕುರುಬರು, ಬೇಡರೇ ಹೆಚ್ಚಾಗಿದ್ದು, ಸಾಮ್ರಾಜ್ಯದ ಕೀರ್ತಿಗೆ ಕಳಂಕ ತರದಂತೆ ಸಾಹಸಾಭರಣನಾಗಿ ಯುದ್ಧದಲ್ಲಿ ಸೈನಿಕರನ್ನು ಹುರಿದುಂಬಿಸಿ ತಾವೂ ಪಾಲ್ಗೊಳ್ಳುತ್ತಿದ್ದರು.

> ಕನಕದಳದಲಿ ಬಂದು ಕಲೆತೆನೆಂದರೆ ಪೌಜು
> ಕನಕು ಮನಕಾಗುವುದು ಹರಿಯೆ॥

ಒಮ್ಮೆ ಯುದ್ಧವೊಂದರಲ್ಲಿ ತಾನು ಸಂಪೂರ್ಣವಾಗಿ ಸೋತು ಸಾಮಾನ್ಯ ಸೈನಿಕನು ಹತರಾಗುವುದನ್ನು ಕಂಡು,

> ಗಳಿಸದಿರು ಸೀಮೆಯನು, ಗಳಿಸದಿರು ದ್ರವ್ಯವನು
> ಗಳಿಸದಿರು ನೀದುರಿತ ರಾಶಿಗಳನು,

ಎಂದು ಮರುಗುತ್ತಾರೆ. ಇಂತಹ ರಾಜತ್ವವನ್ನು ದಿಕ್ಕರಿಸಿ ಎಲ್ಲವನ್ನೂ ಜನಸಾಮಾನ್ಯರಿಗೆ ದಾನ ಮಾಡಿ, ದಾಸತ್ವವನ್ನು ಪಡೆದುಕೊಳ್ಳಲು ಕಡೆಗೆ ನಿರ್ಧರಿಸುತ್ತಾರೆ.

> ದೊರೆತನವ ಬಿಡಿಸಿ ಸುಸ್ಥಿರ ಮಾರ್ಗ ತೋರಿಸಿದೆ,
> ನರಮಾತ್ರದವನೆನದೆ ಹರಿಯೆ।
> ಗುರುವದಲ್ಲಿಹನೆಂಬುದರಿತೆನ್ನ ನಿನ್ನ ದಾ
> ಸರಿಗೆ ಮಾರಿದೆಯೊ ಹರಿಯೆ।
> ಧುರದಲ್ಲಿ ನಾಲ್ಕು ಸಾವಿರ ನಿಲ್ಲದೆನಸಗೆ

ಪರಿಹರಿಸಿದೆಯೆಲೊ ಹರಿಯೆ।
ಪರಬಲವ ನೋಡಿದರೆ ಉರಿದುರಿದು ಬೀಳ್ವ ಮನ
ಸೆರೆಹಾಕಿ ನಿಲ್ಲಿಸಿದೆಯೊ ಹರಿಯೆ॥

ಎಂಬ ಈ ಕೀರ್ತನೆಯ ಮೂಲಕ ಸಮಾಧಾನದ ನಿಲುವಿಗೆ ಕನಕದಾಸರು ಬಂದಿರುವುದನ್ನು ನೋಡಿದರೆ, ಪ್ರಭುತ್ವದ ಆಡಳಿತ ಇವರಿಗೆ ಕಡೆಯವರೆಗೂ ಸರಿ ಕಾಣಲೇ ಇಲ್ಲ ಎಂದು ತೋರುತ್ತದೆ.

ಮಧ್ಯಕಾಲೀನ ಯುಗದಲ್ಲಿ, ಕೆಳಜಾತಿಯವನೊಬ್ಬ ಅಧಿಕಾರದ ಪುಟ್ಟ ಗದ್ದುಗೆ ಏರಿ, ಆತನೇನಾದರೂ ಜನಸಾಮಾನ್ಯರು ಅದರಲ್ಲೂ ಕೆಳ ಜಾತಿಯವರ ಪರ ಆಡಳಿತ ನೆಡೆಸಿದರೆ ಮೇಲಿನ ಪ್ರಭುತ್ವ ಅವನನ್ನು ಹೇಗೆ ನೆಡೆಸಿಕೊಳ್ಳುತ್ತಿತ್ತು ಎಂಬುದು ಇದರಿಂದ ನಮಗೆ ತಿಳಿಯುತ್ತದೆ. ಆದರೆ ಕನಕದಾಸರು ಅಂದಿನ ಪ್ರಭುತ್ವದ ಎಲ್ಲಾ ಸಾಂವಿಧಾನಿಕ ಚೌಕಟ್ಟನ್ನು ಮೀರಿ ನಿಲ್ಲಲು ಅವರೊಳಗಿದ್ದ ಜನಸಾಮಾನ್ಯರ ಬದುಕಿನ ಪರವಾದ ಕಾಳಜಿಯೇ ಕಾರಣ ಎಂಬುದನ್ನು ಈ ಮೇಲಿನ ಕೀರ್ತನೆಯು ತಿಳಿಸುತ್ತದೆ.

ವಿಶಾಲವಾಗಿದ್ದ ವಿಜಯನಗರ ಸಾಮ್ರಾಜ್ಯದಲ್ಲಿ ಕಾಲಕ್ರಮೇಣ ರಾಜಕೀಯ, ಸಾಮಾಜಿಕ, ಧಾರ್ಮಿಕ ಜೀವನ ಹಾಗೂ ಆರ್ಥಿಕ ಚಟುವಟಿಕೆಗಳು ಸಂಚುಕೋರ ಅಧಿಕಾರಿಗಳ ನಿಯಂತ್ರಣಕ್ಕೆ ಬರತೊಡಗುತ್ತವೆ. ರಾಜ, ಧರ್ಮವನ್ನು ಕೈಬಿಟ್ಟು ವರ್ತಿಸಿದ ನಿದರ್ಶನಗಳು ಶಾಸನಗಳಲ್ಲಿ ಲಭ್ಯವಿದೆ. ಸಾಮಂತರಂತೂ ಜನತೆಯ ಹಿತವನ್ನು ಕಡೆಗಣಿಸಿ, ರಾಜನ ಮೆಚ್ಚುಗೆಗೆ ಮಾತ್ರ ಪಾತ್ರರಾದಂತೆ ವರ್ತಿಸತೊಡಗಿದರು. ವಿಧಿಸಲಾದ ತೆರಿಗೆಯ ಹೊರೆಯನ್ನು ಹೊರಲಾರದ ಸಾಮಾನ್ಯ ಜನರು ಊರುಗಳನ್ನು, ನಗರಗಳನ್ನು ತೊರೆಯಲಾರಂಭಿಸಿದರು. ಇದನ್ನು ತಡೆಯಲು ರಾಜ ಸೈನ್ಯವನ್ನು ಬಳಸಿಕೊಂಡಿರಬೇಕು. 'ನೀತಿಯರಿತು ನಡೆಯದಿರುವ ಭಂಟನ್ಯಾತಕೆ' ಎಂಬ ಸಾಲು; ಸೈನ್ಯ(ಸೈನಿಕ)ವು, ಜನಸಾಮಾನ್ಯರ ಮೇಲೆ ಆಕ್ರಮಣ, ಲೂಟಿ, ದರೋಡೆ, ಅತ್ಯಾಚಾರ, ಅನಾಚಾರಗಳಲ್ಲೇ ತೊಡಗಿ ಜನರ ರಕ್ಷಣೆಯನ್ನೇ ಮರೆಯ ತೊಡಗಿದ್ದನ್ನು ಹೇಳುತ್ತಿದೆ. ರಾಜನ ಉನ್ನತಿ ಮತ್ತು ಅವನತಿ, ಆತನ ಶಕ್ತಿ, ಸಾಮರ್ಥ್ಯ, ಯುದ್ಧದಲ್ಲಿನ ಚಾಣಾಕ್ಷತನಗಳನ್ನು ಅವಲಂಬಿಸಿತ್ತು. ಕೆಲ ಅರಸರುಗಳ ಅಸಹಾಯಕತೆಯನ್ನು ರಾಜ್ಯದ ಪ್ರಭಾವಿ ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳತೊಡಗಿದರು. ಆಳುತ್ತಿದ್ದ ಒಡೆಯನಿಗೆ ಎರಡು ಬಗೆಯತೊಡಗಿದರು.

'ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸಿನಂತಾದನು' ವ್ಯಸನಿಯಾದ ನೃಪ ಸುಖವನ್ನು ಕಳೆದುಕೊಳ್ಳತೊಡಗಿದನು. ಭೂಪ ಮಧ್ಯಪಾನಿಯಾಗಿ ಚಾಡಿ

ಮಾತಿಗೆ ತಲೆದೂಗಿದನು. ಜನಸಾಮಾನ್ಯರನ್ನು, ಶ್ರಮಿಕರನ್ನು ಕೇಳುವವರೇ ಇಲ್ಲವಾದರು.

ಕಳುವಿನ ಒಡವೆಯ ಒಡೆಯಗೆ ಪಾಲೀವ
ಕಳು ಭಂಟ ಕನ್ನವ ಕೊರೆಯುತ್ತಿರೆ
ಕಳವು ಮಾಡಿದನೆಂದು ಹಿಡಿದೆಳೆತಂದರೆ
ತಳವಾರನೇನು ಮಾಡುವನೊ ಕೇಳಲೊ ಹರಿ॥[೧೪೬]

ಎಂಬ ಕೀರ್ತನೆಗಳು ಸಾಮ್ರಾಜ್ಯದ ಅವನತಿಗೆ ಕಾರಣಗಳೇನೆಂಬುದನ್ನು ತಿಳಿಸುತ್ತವೆ.

'ರಾಯ ಮುನಿದಲ್ಲಿ ರಾಜ್ಯವನು ಬಿಡಬಹುದು ಆದರೆ ಕಾಯುವ ಪಿತನು ಮುನಿದರೆ ಅವನಡಿಯ ಬಿಡಲಾಗದು' ಎಂಬ ಶ್ರೀಸಾಮಾನ್ಯನ ನಿಲುವನ್ನೇ ಕನಕದಾಸರೂ ಹೊಂದಿದ್ದು ತಮ್ಮ ಜೀವನದ ಕಡೆಗಳಿಗೆಯವರೆಗೂ ಅದರಂತೆಯೇ ನೆಡೆದುಕೊಡರು. ಅಂದರೆ ಕೆಳ ಸಮುದಾಯದವನಾಗಿ ಮಾಂಡಲೀಕತ್ವವನ್ನು ಪಡೆದಿದ್ದರೂ ಅಧಿಕಾರದ ನಿಷೆಯನ್ನು ಎಲ್ಲೂ ತಂದುಕೊಳ್ಳದೆ; ಸಾಮಾನ್ಯ ಜನ ಸಮೂಹಕ್ಕಾಗಿಯೇ ಸಂಪೂರ್ಣವಾಗಿ ತನ್ನನ್ನು ಅರ್ಪಿಸಿಕೊಂಡರು. ಮಹಾನ್ ಮಾನವತಾವಾದಿಯಾಗಿ ಬೆಳೆದುನಿಂತರು. ಹೀಗೆ ದಾಸರು ವಿಕಾಸಗೊಳ್ಳಲು ಕಾರಣ; ಅವರು ನಿರಂತರವಾಗಿ ಹೊಂದಿದ್ದ ಶ್ರೀಸಾಮಾನ್ಯನ ಸಂಪರ್ಕ, ಒಡನಾಟದ ಅನುಭವ ಎಂಬುದನ್ನು ಮರೆಯುವಂತಿಲ್ಲ.

ಪರಂಪರೆಯಿಂದ ಬಂದ ಇಲ್ಲಿನ 'ಸಂಸ್ಕೃತಿ'ಯ ನೆಲೆಗಳನ್ನು, ಕನಕದಾಸರ ಕೀರ್ತನೆಗಳಲ್ಲಿರುವ ಮಾನವೀಯತೆ, ಆಚರಣೆ, ನಂಬಿಕೆ, ಸಂಪ್ರದಾಯ, ಪ್ರಾಮಾಣಿಕತೆ, ಸತ್ಯ, ಹೊಂದಾಣಿಕೆ ಎಂಬ ಮೌಲ್ಯಗಳ ಮೂಲಕವೂ ಹಾಗೂ ಡೊಳ್ಳು ಕುಣಿತ ಎಂಬ ಮನರಂಜನಾ ಸಂಗೀತ ವಾದ್ಯದ ಹಿನ್ನೆಲೆಯಲ್ಲಿಯೂ ಇಲ್ಲಿ ಗ್ರಹಿಸಲಾಗಿದೆ. ದಾಸರ ಮೇಲೆ ಇಂತಹ ಮೌಲ್ಯಗಳು ಈ ನೆಲದ ಪರಂಪರೆಯ ಮೂಲಕವೇ ಪ್ರಭಾವಿಸಲ್ಪಟ್ಟಿದ್ದು; ಅವುಗಳ ಸಂಬಂಧ, ಪ್ರೇರಣೆ, ಹಾಗೂ ಪರಿಣಾಮಗಳು ಅವರ ಕೀರ್ತನೆಗಳ ಮೂಲಕ ಹೇಗೆ ದಾಖಲಿಸಲ್ಪಟ್ಟಿವೆ ಎಂಬುದನ್ನು ಈ ಮುಂದಿನ ಶೀರ್ಷಿಕೆಗಳಡಿಯಲ್ಲಿ ಗಮನಿಸಲಾಗಿದೆ.

**ಮಾನವತೆ:**

ಮಾನವತೆಯು ರೂಪುಗೊಳ್ಳುವುದೇ ಸತ್ಯ, ಧರ್ಮ, ಉಪಕಾರ, ದಾನ, ತ್ಯಾಗ, ಪ್ರಾಮಾಣಿಕತೆ, ಪ್ರೀತಿ, ಸಮಾನತೆ, ಸಹನೆ, ಹೊಂದಾಣಿಕೆ ಎಂಬ ಮೌಲ್ಯಗಳೊಂದಿಗೆ. ಭಾರತೀಯ ಸಂಸ್ಕೃತಿ ಸನಾತನ ಕಾಲದಿಂದಲೂ ಇದನ್ನು

ಕಾಯ್ದುಕೊಂಡು ಬಂದಿದೆ. ಶ್ರೇಣೀಕರಣದ ಭಾರತೀಯ ವರ್ಗ ವ್ಯವಸ್ಥೆಯಲ್ಲಿ ಮಾನವತೆ ಕಂಡುಬರುವುದೇ ಶ್ರಮಿಕರಲ್ಲಿ. ಈ ಹಿನ್ನೆಲೆಯಿಂದಾಗಿಯೇ ಕನಕದಾಸರಲ್ಲಿ ಪ್ರೀತಿ, ಸತ್ಯ, ಪ್ರಾಮಾಣಿಕತೆ, ಆಚರಣೆ ನಂಬಿಕೆಗಳು ಅವರ ಬದುಕಿನೊಟ್ಟಿಗೇ ಸೇರಿಕೊಂಡಿದ್ದವು. ಹಾಗಾಗಿ ದಾಸರಿಂದ ರಚಿಸಲ್ಪಟ್ಟ ಬಹಳಷ್ಟು ಕೀರ್ತನೆಗಳು ಮಾನವತೆಯನ್ನು ತಮ್ಮ ಒಡಲಲ್ಲಿ ತುಂಬಿಕೊಂಡು ರಚಿಸಲ್ಪಟ್ಟಿವೆ. ಭಾರತೀಯ ಸನಾತನ ಮೌಲ್ಯಗಳಲ್ಲಿ ಸತ್ಯ ಧರ್ಮಗಳು ಶಾಶ್ವತವಾಗಿ ನೆಲೆಯೂರಿವೆ. 'ಸತ್ಯಮೇವಜಯತೆ' ನಮ್ಮ ಉಸಿರಾಗಿದೆ. ಈ ಕುರಿತು ಕನಕದಾಸರು,

ಸತ್ಯ ಧರ್ಮಗಳ ನಿತ್ಯವೂ ಬೋಧಿಸಿ (ಕನಕ.ಕೀ.೧೯೨)

ಸತ್ಯವ್ರತವುಳ್ಳವಗೆ ಮೃತ್ಯು ಭಯವುಂಟೆ(ಕನಕ.ಕೀ ೧೯೦)

ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ(ಕನಕ.ಕೀ.೧೮೩)

ಸತ್ಯವಂತರ ಸಂಗ ತೀರ್ಥಕ್ಕೆ ಸಮಾನ, ನಿತ್ಯಜ್ಞಾನಿಗೆ ಚಿಂತೆಯಿಲ್ಲ. ಸತ್ಯವೇ ಭಕ್ತಿ, ಮುಕ್ತಿ, ಎಲ್ಲವೂ. ಸತ್ಯಸಂಧತೆ ಮಾನವನನ್ನು ಅಮೃತತ್ವಕ್ಕೆ ಏರಿಸುತ್ತದೆ. ಅಂದೂ ಕೂಡ ಸುಳ್ಳು ಆಡುವ, ಮೋಸ, ಕಳ್ಳತನ ಮಾಡುವ, ಅನಾಚಾರಿಗಳ ಸಂಖ್ಯೆ ಅತಿಯಾಗಿಯೇ ಇದ್ದಿತು. ಅಂತಹ ದುಷ್ಟರಿಗೆ ಭೂತಾಯಿ ಭೂಕಂಪದ ಅವತಾರವೆತ್ತಿ ನಾಶಗೊಳಿಸುತ್ತಾಳೆ ಎಂದು ದಾಸರು ತಿಳಿದುಕೊಂಡಿದ್ದರು. ಬಡಜನರ ಬದುಕು ನಿಂತಿರುವುದೇ ಉಪಕಾರ, ಸಹನೆ, ಪ್ರೀತಿ, ಹೊಂದಾಣಿಕೆಗಳ ಮೇಲೆ. ಪ್ರತಿಯೊಬ್ಬರೂ ಇಂತಹ ಜೀವನಕ್ಕೆ ಒತ್ತು ಕೊಡಬೇಕಾಗುತ್ತದೆ. ಪರೋಪಕಾರವು ಸತ್‌ಚಾರಿತ್ರ್ಯದ ವ್ಯಕ್ತಿತ್ವದ ನಿರ್ಮಾಣಕ್ಕೆ ಬೇಕಾಗುವ ಸನ್ಮಾರ್ಗದ ದಾರಿಯನ್ನು ಹುಡುಕಿಕೊಡುತ್ತದೆ.

ಎನ್ನದೆಂದು ತನ್ನದೆಂದು ಹೊನ್ನು ಹೆಣ್ಣು ಮಣ್ಣಿಗಾಗಿ
ಬನ್ನ ಪಟ್ಟು ಬಾಯಿ ಬಿಡುವೆ ಬರಿದೆ ಮೋಹದಿ
ಬೆನ್ನ ಮನದಿ ಪರಹಿತಾರ್ತ ಮಾಡಿ ಪುಣ್ಯ ಪಡೆಯೊ ನೀನು॥

ಶುದ್ಧ ಮನಸ್ಸಿನಿಂದ ಪರಹಿತಾರ್ಥದಲ್ಲಿ ತೊಡಗಿದರೆ ಪುಣ್ಯ ಸಿಗುವುದು. ಸಂಪತ್ತಿನ ಕೇಂದ್ರೀಕರಣ, ಅತಿಯಾದ ಮಮಕಾರದ ಲಕ್ಷಣ. ಉಳ್ಳವರು ಇಲ್ಲದವರಿಗೆ ಹಂಚಿದಾಗ ಸಿಗುವ ಸುಖಕ್ಕೆ ಸಮನಾದ ಆನಂದ, ಸಿರಿಯ ಶೇಖರಣೆಯಿಂದ ಬರುವುದೇ ಇಲ್ಲ, ಎಂಬುದು ಕನಕದಾಸರ ನಿಲುವಾಗಿತ್ತು.[೧೪೭]

ಈ ಸಿರಿಯ ನಂಬಿ ಹಿಗ್ಗಲು ಬೇಡ ಮನವೆ
------------------------------
ಇಷ್ಟು ಸಂಪತ್ತನ್ನು ಬಡವರಾ ಕರೆತಂದು
ಕೊಟ್ಟು ಮಾಡಿದ ಪುಣ್ಯ ಫಲ ತನ್ನದೊ

ಸ್ವತಃ ಶ್ರೀಮಂತರೆ ಬಡವರನ್ನು ಹುಡುಕಿ ಕರೆತಂದು ಉಪಕರಿಸಿದರೆ ಅದರಿಂದ ಸಿಗುವ ಪುಣ್ಯಫಲ ಅಷ್ಟಿಷ್ಟಲ್ಲ. ಶರಣರ ದಾಸೋಹ, ಮಾರ್ಕ್ಸ್‌ವಾದದ ಸಂಪತ್ತಿನ ಹಂಚಿಕೆಯಂತೆ. ಕನಕದಾಸರೊಳಗಿನ ಬಡವರ ಪರ ಚಿಂತನೆಗಳು(ಪರಹಿತಾರ್ಥ) ಸಮಾಜದಲ್ಲಿನ ಅಸಮಾನತೆಯ ನಿವಾರಣೆಗೆ ದಾರಿ ಮಾಡಿಕೊಟ್ಟಿವೆ. ಪರಹಿತದಲ್ಲಿಯೇ ಧರ್ಮ ಅಡಗಿದೆ. ಬಿಟ್ಟು ಹೋಗುವಾಗ ಗೇಣು ಬಟ್ಟೆ ಕಾಣದು. ಸಾಯುತೇನು ಒಯ್ಯಲಿಲ್ಲ. ಆದ್ದರಿಂದ ಕೂಡಿಟ್ಟ ಸಂಪತ್ತನ್ನು ಉಪಭೋಗಿಸು. ಪರರಿಗೂ ನೀಡು. ಪರಿಶುದ್ಧ ಜೀವನಕ್ಕೆ ಪರೋಪಕಾರವೇ ಸ್ನಾನ. ಪರಹಿತವೇ ಸ್ವಹಿತ ಎನ್ನುವ ಕಡೆಗಳಲ್ಲಿ; ಕನಕದಾಸರು ಜನಸಾಮಾನ್ಯರ ಪರವಾಗಿ ಹೊದಿದ್ದ ನಿಲುವುಗಳು ಏನೆಂಬುದು ನಮ್ಮ ಗಮನಕ್ಕೆ ಬರುತ್ತದೆ. ಹಾಗೆಯೇ 'ದಾನ' ಮತ್ತು 'ತ್ಯಾಗ'ಗಳು ಸಾಮಾಜಿಕ ಮೌಲ್ಯಗಳೇ. ಇವು ಸರ್ವ ಸಮಾನತೆಯ ಆದರ್ಶ ಸಮಾಜವೊಂದರ ನಿರ್ಮಾಣಕ್ಕೆ ಅಗತ್ಯವಾಗಿ ಬೇಕು.

ದಾನದ ಫಲದಿಂದ ವ್ಯಕ್ತಿ ಭೂನಾಥನಾಗುವನು – ಸರ್ವಜ್ಞ
ದಾನದಿಂದ ಸಂಪತ್ತು ವೃದ್ಧಿಯಾಗುತ್ತದೆ – ನೇಮಿಚಂದ್ರ
ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ
ಸುಳಿದು ಬೀಸುವ ಗಾಳಿ ನಿಮ್ಮ ದಾನ – ಜೇಡರ ದಾಸಿಮಯ್ಯ.[೧೪೮]

ಈ ಹೇಳಿಕೆಗಳು ದಾನದ ಮಹತ್ವವನ್ನು ಹೇಳುತ್ತವೆ. ದಯೆ, ಪ್ರೀತಿ, ಸಮರ್ಪಣಾ ಭಾವಗಳು ದಾನದ ಬೆನ್ನೆಲುಬುಗಳು. ಮಿತಿಮೀರಿದ ಸಂಪಾದನೆ ಅಸಮಾನತೆ, ಸಂಘರ್ಷಗಳಿಗೆ ಕಾರಣವಾಗುತ್ತದೆ. ಅದಕ್ಕೆ ಕನಕದಾಸರು 'ಗಳಿಸದಿರು ಸೀಮೆಯನು, ಗಳಿಸದಿರು ದ್ರವ್ಯವನು' ಎಂದು ತಾಕೀತು ಮಾಡಿರುವುದು.

ನುಡಿನಡೆವ ಕಾಲದಲ್ಲಿ ದಾನ ಮಾಡದೆ ಇರಲು
ಅಡವಿಯೊಳು ಕೆರೆತುಂಬಿ ಬತ್ತಿದಂತೆ
ಮಡದಿ ಮಕ್ಕಳಿಗೆಂದು ಒಡವೆ ವಸ್ತ್ರವ ಗಳಿಸೆ
ಹಿಡಿಯಲಾ ಯಮನವರ ಕಟ್ಟಿಗೊಳಗಾಗಿ

ಹೀಗಿರುವಾಗ ಉಳ್ಳವರು ದಾನ ಮಾಡದಿದ್ದರೆ ಅಡವಿಯಲ್ಲಿ ಕೆರೆ ತುಂಬಿ ಬತ್ತಿದಂತೆ. ಅತಿಯಾದ ಗಳಿಕೆ ಜೀವಕ್ಕೆ ಕುತ್ತು. ಕಳ್ಳಕಾಕರು ಬಂದು ಜೀವ ತೆಗೆಯುತ್ತಾರೆ. ಹಾಗಾಗಿ ಕನಕದಾಸರು ಸರ್ವ ಸಮಾನತೆಯ ಸಂಪತ್ತಿನ ವಿಕೇಂದ್ರೀಕೃತ ಸಿದ್ಧಾಂತವನ್ನು ಪ್ರಸ್ತುತ ಪಡಿಸುತ್ತಾರೆ.

ಇಷ್ಟು ಸಂಪತ್ತನ್ನು ಬಡವರಾ ಕರೆತಂದು
ಕೊಟ್ಟು ಮಾಡಿದ ಪುಣ್ಯ ಫಲ ತನ್ನದೊ॥

ಎನ್ನುವ ದಾಸರು ಸಂಪತ್ತಿನ ಹಂಚಿಕೆ ಮೂಲಕ, ಸಮಾಜದೊಳಗಣ ಬಡವರ ಜೀವನದಲ್ಲಿ ಸಮಾನತೆಯ ಸಾರ್ಥಕ್ಯವನ್ನು ಕಾಣಲೆತ್ನಿಸಿರುವುದು ಕನಕದಾಸರ ಮೇಲಾಗಿದ್ದ ಪರಂಪರೆಯ ಪರಿಣಾಮವೇ ಎಂದು ಹೇಳಬಹುದು.

**ಆಚರಣೆ, ನಂಬಿಕೆ, ಸಂಪ್ರದಾಯಗಳು:**

ಭಾರತೀಯ ಸಂಸ್ಕೃತಿಯ ಮಾನವತ್ವದ ಸಂಕೇತಗಳಾಗಿ ಆಚರಣೆ, ನಂಬಿಕೆ ಸಂಪ್ರದಾಯಗಳು ನಮ್ಮ ಜನಪದರಿಂದ ಬಳುವಳಿಯಾಗಿ ಬಂದಂತಹವು. ಇವು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿದ್ದು ಜನಪದ ಸಂಸ್ಕೃತಿಯ ಬೆನ್ನೆಲುಬುಗಳಾಗಿವೆ. ಇವುಗಳನ್ನು ಇಂದು ತಡೆಯಲು ಸರಕಾರದ ಕಾನೂನುಗಳಿಂದಲೂ ಸಾಧ್ಯವಾಗುತ್ತಿಲ್ಲ. ಏಕೆಂದರೆ ನಮ್ಮವರು ಏನನ್ನು ಬೇಕಾದರೂ ಕಳೆದುಕೊಳ್ಳುತ್ತಾರೆ. ಆದರೆ ತಮ್ಮ ತಮ್ಮ ನಂಬಿಕೆ, ಆಚರಣೆ, ಸಂಪ್ರದಾಯಗಳ ಸಂಸ್ಕೃತಿಯನ್ನು ಮಾತ್ರ ಕಳೆದುಕೊಳ್ಳಲಾರರು. ಇವುಗಳನ್ನು ಹಳ್ಳಿಗರು (ಈಗೀಗ ನಗರಗಳಲ್ಲಿಯೂ) ಅರಿತೋ ಅರಿಯದೆಯೋ ಆಚರಿಸಿಕೊಂಡು ಬರುತ್ತಲೇ ಇದ್ದಾರೆ. ಇಂತಹ ಸಂಸ್ಕೃತಿ, ಜನಸಾಮಾನ್ಯರ ನಡುವೆ ದಶದಿಕ್ಕುಗಳಲ್ಲೂ ವಿಭಿನ್ನ ನೆಲೆಗಳಲ್ಲಿ ಆವರಿಸಿದೆ.[೧೪]

ಜನತೆಯ ಮನೋಭಾವ, ಅಭಿಪ್ರಾಯ, ರೂಢಿ, ಪದ್ಧತಿ ಇವುಗಳ ಒಟ್ಟು ಮೊತ್ತವೇ ಆಚರಣೆ, ಸಂಪ್ರದಾಯ, ನಂಬಿಕೆಗಳಾಗಿವೆ. ಈ ಎಲ್ಲವೂ ಇಂದೂ ಮುಂದುವರೆಯುತ್ತಿರುವುದು, 'ಹಿರೇರು ಮಾಡಿದ್ದು' ಎಂಬ ಘೋಷ ವಾಕ್ಯದೊಂದಿಗೆ. ಇಲ್ಲಿ ಒಂದು ಮತ್ತೊಂದಕ್ಕೆ ಪೂರಕ, ಪ್ರೇರಕ.

ಜನರ ಆಚರಣೆ ಸಂಪ್ರದಾಯ ನಂಬಿಕೆಗಳಾದ, ದೇವರು, ಭಕ್ತ, ಪೂಜೆ, ಉಪವಾಸ, ಹಬ್ಬ ಜಾತ್ರೆಗಳನ್ನು ಕುರಿತು ಕನಕದಾಸರು ವೈಚಾರಿಕವಾಗಿ ಯೋಚಿಸುತ್ತಾರೆ. ಈ ಮೂಲಕ ಮೌಢ್ಯ, ಕಂದಾಚಾರಗಳಲ್ಲಿ ಮುಳುಗಿ, ಜನಸಾಮಾನ್ಯರು ನರಳುವುದನ್ನು ಕಂಡು ತಿದ್ದಲೆತ್ನಿಸಿದ್ದಾರೆ.

ಎಕ್ಕನಾತಿ ಎಲ್ಲಮ್ಮ ಮಾರಿ ದುರ್ಗಿ ಚೌಡಿಯ
ಅಕ್ಕರಿಂದಲಿ ಪೂಜೆ ಮಾಡಲೇಕೆ
ಸಂಭ್ರಮದಲಿ ಒಂದ್ಹೊತ್ತು ನೇಮದೊಳಗಿದ್ದು
ತಂಬಿಟ್ಟಿನಾ ದೀಪ ಹೊರಲೇತಕೆ

ಕೊಂಬು ಹೋತ ಕುರಿಕೋಣಗಳನ್ನು ಬಲಿಗೊಂಬ
ದೊಂಬಿ ದೈವಗಳ ಭಜಿಸದಿರು ಮನವೆ
-------------------------
ಜ್ಞಾನವಿಲ್ಲದೆ ಹೀನ ದೈವವ ಭಜಿಸಿದರೆ
ಏನುಂಟು ನಿನಗಿನ್ನು ಎಲೆ ಹುಚ್ಚು ಮನವೆ॥

ಮೌಢ್ಯಾಚರಣೆಗಳ ವಿರೋಧಿ ನಿಲುವು ಇಲ್ಲಿದೆ. ಸಮಾಜದ ಜನಸಾಮನ್ಯರ ಅಜ್ಞಾನ ಭಯಗಳನ್ನು ಮೇಲ್ವರ್ಗದವರು ಕುತಂತ್ರದಿಂದ ಬಳಸಿಕೊಳ್ಳುತ್ತಿದ್ದುದನ್ನು ಗಮನಿಸಿದ್ದ ಕನಕದಾಸರು; 'ದೊಂಬಿ ದೈವಗಳ ಭಜಿಸದಿರು ಹುಚ್ಚು ಮನವೆ' ಎಂದು ಟೀಕಿಸುತ್ತಾರೆ. ಯಾವ ದೇವರೂ ಬಲಿ ಕೇಳುವುದಿಲ್ಲ. ಬಲಿ ಕೇಳುವ ದೇವರು ದೇವರೇ ಅಲ್ಲ. ಹಾಗಾಗಿ ಬಲಿ ಕೊಡಲು ಹೇಳುವವನು ಅವಿವೇಕಿ. ಕೇಳುವವನು ಅಜ್ಞಾನಿ. ಇದೆಲ್ಲವೂ ನೀವು ಅನುಭವಿಸುತ್ತಿರುವ ಶೋಷಣೆಯೇ. ಅದಕ್ಕಾಗಿ ಶ್ರಮಿಕರಾಗಿ ಬಡತನದಲ್ಲಿಯೇ ಇರುವ ನೀವು ಹಣ ವೆಚ್ಚ ಮಾಡದೆ ಜ್ಞಾನಿಗಳಾಗಿ ಸಾತ್ವಿಕ ಮಾರ್ಗದಲ್ಲಿ ಬದುಕಬೇಕೆಂದು ಜನರಿಗೆ ಹೇಳುತ್ತಾರೆ. ತಿದ್ದುತ್ತಾರೆ.

ಗುಂಡು ಮುಳುಗಣ ಹಕ್ಕಿಯಂತೆ ಕಂಡಕಂಡ ನೀರು ಮುಳುಗುವುದರಿಂದಾಗಲಿ, ಗಾಣದೆತ್ತಿನಂತೆ ಕಣ್ಣ ಮುಚ್ಚಿ ಪ್ರದಕ್ಷಿಣೆ ಮಾಡುವುದರಿಂದಲಾಗಲಿ, ನೂರೆಂಟು ತಿರುಪತಿಯ ಯಾತ್ರೆಯನ್ನು ಕೈಗೊಳ್ಳುವುದರಿಂದಾಗಲಿ, ಹೋಮ, ಮಂತ್ರಗಳಿಂದಾಗಲೀ, ಯಾವ ಫಲವೂ ಇಲ್ಲ. ಈ ತರಹದ ಆಚರಣೆ ನಂಬಿಕೆಗಳೆಲ್ಲಾ ಜರಡಿಯಲ್ಲಿ ನೀರು ತುಂಬಿದಂತೆ ನಿಷ್ಫಲವೆನ್ನುತ್ತಾರೆ ಕನಕದಾಸರು. ಅಲ್ಲದೆ ಧರಣಿಯ ಕಲ್ಲಿಗೆ ಶರಣೆಂದು, ಪೂಜೆಯ ಮಾಡುವವರನ್ನು ಕಂಡು, ಕಲ್ಲು ಮೂರ್ತಿ ದೇವರಲ್ಲ. (ದನಕುರಿಗಾಹಿಗಳು ಕಂಡ ಕಂಡ ಕಲ್ಲನ್ನು ದೇವರೆಂದು ಪೂಜಿಸುತ್ತಿದ್ದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು) ರಂಗ ಎಲ್ಲಿರುವನೋ ಯಾರೂ ತಿಳಿಯರು. ಆದರೆ ಅವನು ಸರ್ವವ್ಯಾಪಿ. ಜಗಮಯ. ಭಕ್ತರು ನಂಬಿಕೆಯಿಟ್ಟು ಭಜಿಸಿದರೆ ಬೇರೆ ಬೇರೆ ರೂಪಗಳಲ್ಲಿ ಪ್ರತ್ಯಕ್ಷನಾಗುವುದನ್ನು, ನಮ್ಮಲ್ಲಿ ಕಂಡುಕೊಳ್ಳುವ ಸಾಮರ್ಥ್ಯವಿದ್ದರೆ ಕಾಣಬಹುದು. ಹೀಗೆ ಜನಮಾನಸದಲ್ಲಿರುವ ಮೌಢ್ಯಾಚರಣೆಗಳನ್ನು ಕಳೆಯಲೆತ್ನಿಸುತ್ತಾರೆ. ಈ ಮೂಲಕ ತಳಸಮುದಾಯವನ್ನು ಸಮಾಜದ ಮುನ್ನಲೆಗೆ ತರಲು ದಾರಿಯನ್ನೂ ತೋರಿಸಿದ್ದಾರೆ.

ಹೀಗೆ ಕನಕದಾಸರು, ಖಂಡಿತವಾದಿಗಳಾಗಿ, ನ್ಯಾಯನಿಷ್ಠುರರಾಗಿ ಬಹುದೊಡ್ಡ ಸಮಾಜ ಸುಧಾರಕರಾಗಿದ್ದಾರೆ. ಈ ಎಲ್ಲಾ ಮೌಢ್ಯಾಚರಣೆ, ಸಂಪ್ರದಾಯ ನಂಬಿಕೆಗಳು ಕೆಳವರ್ಗದ ಜನರಲ್ಲೇ ಹೆಚ್ಚು ಕಂಡುಬರುತ್ತಿದ್ದು, ಈ ಎಲ್ಲದರ ಅನುಭವವಿದ್ದ ಕನಕದಾಸರಿಗೆ ಸಹಜವಾಗಿಯೇ ಇವರ ಪರ ಚಿಂತಿಸಲು ಸಾಧ್ಯವಾಯಿತು ಎನ್ನಬಹುದು.

**ಸತ್ಯ ಮತ್ತು ಪ್ರಾಮಾಣಿಕತೆಗಳು :**

ಭಾರತೀಯ ಸಂಸ್ಕೃತಿಯು ತೆರೆದುಕೊಳ್ಳುವುದೇ ಪಶುಪಾಲನಾ ಪರಂಪರೆಯ ಮೂಲದಿಂದ. ಮೂಲತಃ ಶ್ರಮಿಕವರ್ಗದವರಾದ ಇವರಿಗೆ ಸುಳ್ಳು ಮತ್ತು ಮೋಸದ ಗುಣ ತಿಳಿದೇ ಇರುವುದಿಲ್ಲ. ನೇರ ನುಡಿಗೆ ಹೆಸರಾದವರು. ಇದು ಪಶುಪಾಲಕರಿಗೆ ಪ್ರಕೃತಿಯಿಂದ ಲಭ್ಯವಾದ ಪಾಠ. ಅಲೆಮಾರಿಗಳಂತೆ ಊರಿಂದೂರು ತಿರುಗುವ ಇವರಿಗೆ ತಮ್ಮ ದನ, ಕರು, ಹಸು, ಕುರಿಗಳ ನಿರ್ವಹಣೆ ಪ್ರಧಾನ ಅಗತ್ಯ. ಸುಳ್ಳು ಹೇಳಿದರೆ ಮೋಸ ಮಾಡಿದರೆ ರಾಸುಗಳಿಗೆ ತೊಂದರೆಯಾಗಬಹುದೆಂಬ ಭಯ. ಈ ಕಾರಣದಿಂದ ಪಶುಪಾಲಕರು ಸತ್ಯ, ಪ್ರಾಮಾಣಿಕತೆ, ತ್ಯಾಗ, ದಯೆ, ಕರುಣೆಗಳನ್ನು ಮರೆಯುವುದಿಲ್ಲ. ಇಂತಹ ಮೌಲ್ಯಗಳು ಮಧ್ಯಕಾಲೀನ ಕರ್ನಾಟಕದಲ್ಲಿಯೂ ಕಂಡುಬರುತ್ತಿದ್ದು, (ಪಶುಪಾಲಕರೆನಿಸಿಕೊಂಡವರಲ್ಲಿ ಈಗಲೂ ಈ ಗುಣಗಳು ಮುಂದುವರಿದಿವೆ.) ಇದನ್ನು ಕನಕದಾಸರು ಕಂಡು ಅನುಭವಿಸಿದ್ದಾರೆ. ಹಾಗೆಯೇ ವಿಜಯನಗರ ಸಾಮ್ರಾಜ್ಯದ ಪ್ರಭುತ್ವದ ಸಾಮರ್ಥ್ಯ ಮತ್ತು ಮೌಲ್ಯಗಳು ಕ್ಷೀಣಿಸತೊಡಗಿದಾಗ ಅದಕ್ಕೆ ಕನಕದಾಸರು ನೇರವಾಗಿಯೇ ಪ್ರತಿಕ್ರಿಯಿಸಿದ್ದಾರೆ.

ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ
ನಿತ್ಯ ಜ್ಞಾನಿಯಾದ ಮೇಲೆ ಚಿಂತೆಯಾತಕೆ
ತಾನು ಉಣ್ಣದ ಪರರಿಗಿಕ್ಕದ ಧನವಿದ್ಯಾತಕೆ
ಮಾನಹೀನನಾಗಿ ಬಾಳ್ವ ಮನುಜನ್ಯಾತಕೆ
ಜ್ಞಾನವಿರದೆ ನೂರುಕಾಲ ಬದುಕಲ್ಯಾತಕೆ
-----------------------
ಮಾತು ಕೇಳದೆ ಮಲೆತು ಮಡೆವ ಮಕ್ಕಳ್ಯಾತಕೆ
-----------------------
ಸನ್ನೆಯರಿತು ನಡೆಯದಿರುವ ಸತಿಯುಯ್ಯಾತಕೆ
-----------------------
ಚನ್ನ ಆದಿಕೇಶವನಲ್ಲದ ದೈವವ್ಯಾತಕೆ॥

ಸುಸಂಸ್ಕೃತ ಮಾನವನ ಮೌಲ್ಯಗಳನ್ನು ಬಯಸುವ ಕೀರ್ತನೆ ಇದು. ಈ

ಮೌಲ್ಯಗಳು ಕನಕದಾಸರು ಕಂಡಂತೆ ಒಂದು ಕಾಲದಲ್ಲಿ ಮೇಳವಿಸಿ, ಮತ್ತೆ ಕನಕದಾಸರೇ ಕಾಣುವಂತೆ ಅಂದಿನ ಸಮಾಜ ತನ್ನ ಎಲ್ಲಾ ಮೌಲ್ಯಗಳನ್ನು ಕಳೆದುಕೊಳ್ಳತೊಡಗುತ್ತದೆ. ತಾವು ಕಂಡಂತಹ ಸಂಸ್ಕೃತಿ ಮೌಲ್ಯಗಳು ಅಪಹಾಸ್ಯಕ್ಕೆ ಒಳಗಾದಂತೆ ಕಂಡಾಗ ಸ್ವ ಅನುಭಾವದ ಇಂತಹ ಕೀರ್ತನೆಗಳು ಹುಟ್ಟಿಕೊಂಡವು. 'ಕಳ್ಳತನವ ಮಾಡಿ ಒಡಲ ಹೊರೆಯಲು ಬೇಡ, ದಾನಧರ್ಮವ ಮಾಡಿ ಸುಖಿಯಾಗು ಮನವೆ, ದಾನಧರ್ಮ ಪರೋಪಕಾರವ ಮಾಡು, ಎಂದು ಮೇಲ್ವರ್ಗದವರನ್ನು, ಸತ್ಯವ್ರತವುಳ್ಳವಗೆ ಮೃತ್ಯುಭಯವುಂಟೆ, ಪರಮ ಸಾತ್ವಿಕ ಗುಣಕೆ ಪಿರಿದುಂಟೆ' ಎಂಬ ಮೌಲ್ಯ ತುಂಬಿದ ಕೀರ್ತನೆಗಳಿಂದ ಸಾಮಾನ್ಯ ಜನರನ್ನೂ ಎಚ್ಚರಿಸುತ್ತಾರೆ.

ಮೋಸದಿ ಜೀವರ ಘಾಸಿ ಮಾಡಿದ ಪಾಪ
ಕಾಶಿಗೆ ಹೋದರೆ ಹೋದೀತೆ॥

ಎಂಬ ಬುದ್ಧಿ ಮಾತನ್ನು ಕನಕದಾಸರು ಸಮಾಜದ ಜನರನ್ನು ಕುರಿತು ಹೇಳುವುದು ಕೂಡ, ತಮ್ಮ ಪರಂಪರೆಯ ಜ್ಞಾನದಿಂದಲೇ ಎನ್ನುವುದನ್ನು ಇಲ್ಲಿ ಮರೆಯುವಂತಿಲ್ಲ.

**ಡೊಳ್ಳು ಕುಣಿತದ ಕೀರ್ತನೆಗಳು:**

ಕುರುಬರಾದ ಕನಕದಾಸರ ಕುಲದೇವರು ಬೀರಪ್ಪ. ಈ ಮಾತನ್ನು ಅವರೇ ಹೇಳಿಕೊಂಡಿದ್ದಾರೆ. ಡೊಳ್ಳು ಕನಕದಾಸರ ಕಾಲದಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಅದರಲ್ಲೂ ಬೀರದೇವರ ಜಾತ್ರೆ ಉತ್ಸವಗಳಲ್ಲಿ ಡೊಳ್ಳು ಹೇಳಿ ಮಾಡಿಸಿದ ವಾದ್ಯ. ಡೊಳ್ಳಿನ ಕುಣಿತವು ತುಂಬಾ ಪ್ರಾಚೀನ ಕಾಲದ್ದಾಗಿದ್ದು ಇದರೊಂದಿಗೆ ಹಾಡಿಕೆಯೂ ಸೇರಿಕೊಂಡಿದೆ.

'ಬಾಡ' ಕನಕದಾಸರ ಹುಟ್ಟೂರಾಗಿದ್ದು ಅಲ್ಲಿಗೆ ಸಮೀಪದ ಬಂಕಾಪುರ ಮೊದಲಿನಿಂದಲೂ ಡೊಳ್ಳಿನ ಹಾಡಿಗೆ ಪ್ರಸಿದ್ಧಿಯಾಗಿರುವ ಊರು. ಈಗಲೂ ಸಹ ಇಲ್ಲಿ ಡೊಳ್ಳಿನ ಸ್ಪರ್ಧೆಯನ್ನು ಏರ್ಪಡಿಸಿ ಹಾಡುವ ಪರಂಪರೆ ಇದೆ. ಬಂಕಾಪುರದ ಜನರು ಬೇರೆ ಊರುಗಳಿಗೆ ಹೋಗಿ ಡೊಳ್ಳು ಬಾರಿಸುವ ಹಾಡಿನೊಂದಿಗಿನ ಸ್ಪರ್ಧೆಯಲ್ಲಿ ಗೆದ್ದು ಬಂದಿರುವ ಉದಾಹರಣೆಗಳಿವೆ. ಈ ಊರಿನ ಹಿರಿಯರು ಈಗಲೂ ಹೇಳುತ್ತಾರೆ.

ಹೀಗಿರುವಾಗ ಕನಕದಾಸರೂ ಕೂಡ ಡೊಳ್ಳು ವಾದ್ಯ ಪ್ರಿಯರಾಗಿದ್ದು,(ಪರಿಸರದ ಪ್ರಭಾವದಿಂದಲೂ) ಕೆಲ ಡೊಳ್ಳಿನ ಹಾಡುಗಳನ್ನು ರಚಿಸಿರಲೇಬೇಕು.

ದೇವಿ ನಮ್ಮ ದ್ಯಾವರು ಬಂದರು ಬನ್ನೀರೆ
ಕೆಂಗಣ್ಣ ಮೀನನಾಗಿ। ನಮ್ಮ ರಂಗ
ಗುಂಗಾಡಿ ಸೋಮನ। ಕೊಂದಾನ್ಯಾ
ಗುಂಗಾಡಿ ಸೋಮನ ಕೊಂದು ವೇದವ
ಬಂಗಾರದೊಡಲನಿಗಿತ್ತಾನ್ಯಾ॥[೧೫೦]

ಎಂಬ ಸ್ವಾರಸ್ಯಕರ ಹಾಡನ್ನು ಡೊಳ್ಳಿನ ಕುಣಿತಕ್ಕೆ ಅಳವಡಿಸಿದ್ದಾರೆ. ದಶಾವತಾರದ ವೈಭವವನ್ನು ಹಾಡುವ ಈ ಕೀರ್ತನೆಯಲ್ಲಿ ಗ್ರಾಮೀಣ ಜನರ ಹಾಡಿನ ಭಂಗಿಯ ಕೊಂದಾನ್ಯಾ, ಮಾಡ್ಯಾನ್ಯಾ, ಕೊಟ್ಟಾನ್ಯಾ, ಎಂಬ ಪದಗಳು ಸಂಗೀತದ ಹಾಡಿಕೆಯೊಂದಿಗೆ ವಾದ್ಯ, ಕುಣಿತಗಳು ಕೂಡಿಕೊಂಡಿರುವುದನ್ನು ಕಾಣುತ್ತೇವೆ.

ಡೊಳ್ಳಿನ ಮೇಲ್ ಕೈಯ ಬರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ತಟ್ಟಾನ್ಯಾ
ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನ್ಯಾ
ಚೆಲುವ ಕನಕಪ್ಪ ಕುಣಿದಾನ್ಯಾ॥

ಇಲ್ಲಿನ ಹಾಡಿಗೆ ಗ್ರಾಮೀಣ ಜನರೆಲ್ಲಾ ಸೇರಿ ಹಾಡಿ ಕುಣಿಯುವ ವಾದ್ಯ ಇದಾಗಿದ್ದು, 'ಚೆಲುವ ಹೆಂಡತಿ ಕುದುರೆ ಮಾಡಿ ಒಳ್ಳೆ ರಾವುತನಾದಾನ್ಯಾ' ಎಂಬುದಂತೂ ಹಳ್ಳಿಗರ ಚೆಲುವನ್ನು ಬಣ್ಣಿಸುವ ಕಲ್ಪನೆಯಂತೆಯೇ ಮೂಡಿಬಂದಿದೆ. ಹಾಗೆಯೇ,

ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ
ತುತ್ತು ಹಿಟ್ಟಿಗಾಗಿ-------------॥

ಎಂಬ ಕೀರ್ತನೆಯು ಅಪ್ಪಟ ಜನಪದೀಯ ಗತ್ತಿನಲ್ಲಿದೆ. ಇಲ್ಲಿ ಬರುವ ಗೇಣು, ಕುಂಟೆ। ರೆಂಟೆ। ಹೆಂಟೆ। ಮಣ್ಣು। ಬೊಗಳಿ। ಕೊಟ್ಟಣ। ಜಂಗಮ। ಜೋಗಿ। ದೊಣ್ಣೆ ಎಂಬ ಗ್ರಾಮ್ಯ ಪದಗಳು; ಅಪ್ಪಟ ಮಣ್ಣಿನ ವಾಸನೆಯನ್ನು ಬಿಂಬಿಸುವುದರ ಜೊತೆಗೆ ಭೂಮಿಯ ಸಹಜ ಗುಣ ಹಾಗೂ ಅಂದಿನ ಕೃಷಿಕ ಜಗತ್ತನ್ನೇ ಇಲ್ಲಿ ಅನಾವರಣಗೊಳಿಸುತ್ತವೆ. ಇದರಿಂದ ಕನಕದಾಸರಿಗೆ ಭೂಮಿ ಮತ್ತು ಕೃಷಿಯ ಒಡನಾಟ ನಿರಂತರವಾಗಿ ಇತ್ತೆಂಬುದನ್ನು ತಿಳಿಯಬಹುದು.

'ಕೇಶವನೊಲುಮೆ ಆಗುವ ತನಕ। ತನು ನಿನ್ನದು ಮನನಿನ್ನದು ರಂಗ। ತಲ್ಲಣಿಸದಿರು

ಕಂಡ್ಯಾ ತಾಳು ಮನವೆ। ಏನೆಂದಳೇನೆಂದಳೋ। ನಿನ್ನೊಳು ಸೀತೆ ಹನುಮಯ್ಯಾ' ಎನ್ನುವ ಡೊಳ್ಳು ದಾಟಿಯ ಪದಗಳನ್ನು ದಾಸರು ಕೇರಿಕೇರಿಗಳಲ್ಲಿ, ಮನೆಮನೆಗಳ ಮುಂದೆ ದಾರಿಯಲ್ಲಿ ತಿರುಗಾಡುತ್ತಲೇ ಹಾಡುತ್ತಿದ್ದರು. ಹಾಡುವಾಗ ಕಾಲಿನ ಗೆಜ್ಜೆ, ಕೈಯಲ್ಲಿನ ತಂಬೂರಿ ಚಿಟಿಗೆಯನ್ನು ನುಡಿಸುತ್ತಿದ್ದರು, ಹಾಗೂ ಕುಣಿಯುತ್ತಿದ್ದರು. ಹೀಗೆ ಹಾಡುತ್ತಾ ಕುಣಿಯುವಾಗ ಜನಸಾಮಾನ್ಯರ ಬದುಕೇ ಕನಕದಾಸರ ಕೀರ್ತನೆಗಳಿಗೆ ವಸ್ತುವಾಗಿ ಬರುತ್ತಿತ್ತು. ಜೊತೆಗೆ ಕನಕದಾಸರ ಈ ನೆಡೆಯೂ ಕೂಡ ಅಂದಿನ ಸಾಮಾನ್ಯ ಜನರನ್ನು ಬಹಳವಾಗಿ ಪ್ರಭಾವಿಸಿತ್ತು, ಎಂಬುದನ್ನು ನಾವು ಮನಗಾಣಬಹುದು.

**ಮುಂಡಿಗೆಗಳು:**

'ಮುಂಡಿಗೆ'ಗಳು ಎಂದರೆ ಮಾನವನ ಶಕ್ತಿ ಪ್ರದರ್ಶನದ ಮೂಲ ಪ್ರವೃತ್ತಿಯಲ್ಲಿ ಒಂದು. ಈತ ಜಾಣನಾಗತೊಡಗಿದಂತೆಲ್ಲಾ ತನ್ನ ಅಭಿವ್ಯಕ್ತಿಯನ್ನು ಬೇರೆ ಬೇರೆ ರೂಪದಲ್ಲಿ ಅಭಿವ್ಯಕ್ತಿಸತೊಡಗಿದ. ಈ ಹಿನ್ನಲೆಯಲ್ಲಿ ಮೊದಲು ಹುಟ್ಟಿಕೊಂಡಂತಹವುಗಳೆಂದರೆ ಜನಪದ ಒಗಟುಗಳು. ಮುಂದೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಇಂತಹ ಸಮಸ್ಯಾತ್ಮಕ ಪ್ರಶ್ನೆ ವಿಶ್ಲೇಷಣೆಗಳು 'ವಚನಯುಗ'ದಲ್ಲಿ ಕಂಡುಬಂದು ಅವು 'ಬೆಡಗಿನ ವಚನ'ಗಳೆಂದು ಕರೆಸಿಕೊಂಡಿವೆ. ಹರಿದಾಸರಲ್ಲಿಯೂ ಅಧ್ಯಾತ್ಮ ನಿರೂಪಣೆಗೆ ಈ ತೆರನಾದ ಗಾಢರೂಪದ ರಚನೆಗಳು ಬರತೊಡಗಿದವು. ಹೀಗೆ ರಹಸ್ಯವಾಗಿ ಹೇಳುವಂಥ ಕ್ರಮಕ್ಕೆ ಒಗಟು, ಒಡಪು, ಬೆಡಗು, ಹೇಳಿಕೆ, ಮುಂಡಿಗೆ, ಭಾರೂಡ ಎಂದು ಕರೆಯಲಾಗುತ್ತದೆ.

'ಮುಂಡಕದ' ತದ್ಭವ ರೂಪ ಮುಂಡಿಗೆ. ಈ ಪದದ ಅರ್ಥ 'ಮರದ ದಿಮ್ಮಿ' ಅಥವಾ 'ತೊಲೆ' ಎಂದು. 'ಕಿಟೆಲ್' ಅವರು ಕೂಡ ಮಾನವನ ಮೆದುಳಿಗೆ ಸಂಬಂಧಿಸಿದ ಬುದ್ಧಿ ಪ್ರಧಾನವಾದ ರಚನೆಗಳನ್ನು 'ಮುಂಡಿಗೆ' ಎಂದು ಕರೆದಿದ್ದಾರೆ. ಕನಕದಾಸರೇ ಸ್ವತಃ 'ಕನಕನು ಹೇಳಿದ ಬೆಡಗು ಕಂಡವರು ನೀವ್ ಕೇಳಿ ತಿಳಿದು ನಿಮ್ಮ ಮನದಲ್ಲಿ ನೋಡಿ. ಕಾಗಿನೆಲೆಯ ಕನಕದಾಸ ಹೇಳಿದಂಥ ಮುಂಡಿಗೆಯ ಬಲ್ಲವನು ಆದಿಕೇಶವನೊಬ್ಬನೆ. ಬಲ್ಲವರು ನೀವ್ ಪೇಳಿರಿಯ್ಯಾ ಭಾವದುಭಯಾರ್ಥವಿದು ಎಲ್ಲರಿಗೂ ಸಮತಾವಾದೀನಾಮವಿದು.' ಹೀಗೆ ಬೆಡಗು, ಮುಂಡಿಗೆ, ಉಭಯಾರ್ಥ, ಎಂಬ ಮೂರು ಶಬ್ದಗಳನ್ನೂ ಸಮಾನಾರ್ಥಕವಾಗಿ ಕನಕದಾಸರು ಬಳಸಿದ್ದಾರೆ. ಎಂ.ಚಿದಾನಂದಮೂರ್ತಿಯವರು ಮುಂಡಿಗೆಯನ್ನು 'ಮುಡಿಗೆ' ಎಂಬ ಅರ್ಥದಲ್ಲಿ ಬಳಸಿ ತಲೆಯ ಮೇಲಿನ ಉಡುಪು ಅಥವಾ ಟೋಪ್ಪಿಗೆ ಎಂದು ಹೇಳಿದ್ದಾರೆ. ಸವಾಲಿನಲ್ಲಿ ಸೋತವರು, ಈ ಶಿರೋವಸ್ತ್ರವನ್ನು ಕಳಚಿ ಇಡುವ ಸೂಚಕವಾಗಿ 'ಮುಂಡಿಗೆ' ಬಳಕೆಗೆ ಬಂದಿತು ಎನ್ನಲಾಗಿದೆ. ಒಟ್ಟು

ಮುಂಡಿಗೆಗಳು ಬುದ್ಧಿಯ ಕಸರತ್ತಿನ ಆಟಗಳಾಗಿ ರಂಜನೆಯನ್ನು ನೀಡಲು ಜನಪದರ ಮಧ್ಯದಿಂದಲೇ ಹುಟ್ಟಿಕೊಂಡವು.

**ಲಕ್ಷಣಗಳು:**

ಮುಂಡಿಗೆಗಳು ಪಲ್ಲವಿ ಅನುಪಲ್ಲವಿಯನ್ನು ಹೊಂದಿರುತ್ತವೆ. ಆದಿಪ್ರಾಸವು ನಿಯತವಾಗಿ ಬರುತ್ತದೆ. ಇವು ನಾಲ್ಕುಸಾಲಿನ ಪದ್ಯಗಳಾಗಿದ್ದು ವಿರಳವಾಗಿ 'ದ್ವಿಪದಿ'ಗಳ ರೂಪದಲ್ಲಿ ಬರುವುದುಂಟು. ಇವು ಕೀರ್ತನೆಯ ಮಾದರಿಯನ್ನೇ ಅನುಸರಿಸುತ್ತವೆ. ಪಾಂಡಿತ್ಯ ಪ್ರದರ್ಶನ ಮತ್ತು ಮನರಂಜನೆಗಾಗಿಯೇ ರಚನೆಯಾದಂತಹವು. ಮುಂಡಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಆತ್ಮಾನುಭವ ಮತ್ತು ತಾತ್ವಿಕತೆಯನ್ನು ಬಿಂಬಿಸುತ್ತವೆ. ಕನಕದಾಸರ ಮುಂಡಿಗೆಗಳು ಚಮತ್ಕಾರದಿಂದಲೇ ಕೂಡಿವೆ. ಅಲ್ಲಮನ ಬೆಡಗಿನ ವಚನ ಮತ್ತು ಕನಕದಾಸರ ಮುಂಡಿಗೆಗಳಿಗೆ ಸಾಮ್ಯತೆ ಇರುವುದನ್ನು ಗಮನಿಸಬಹುದು.

ಈ ಎಲ್ಲಾ ಲಕ್ಷಣಗಳನ್ನು, ಅರ್ಥೈಸಿ, ಕೃತಿಗಳನ್ನು ಪ್ರಕಟಿಸಿದವರು ವಿರಳ. ೧೯೯೯ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಪ್ರಕಟಿಸಿದ ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು ಪ್ರಮುಖ ಕೃತಿಯಾಗಿದ್ದು ಇದನ್ನು 'ಪ್ರೊ. ಸುಧಾಕರ ಅವರು' ಸಂಗ್ರಹಿಸಿದ್ದಾರೆ. ಇವರ ಪ್ರಕಾರ ಇದುವರೆವಿಗೂ ನಮಗೆ ಲಭ್ಯವಿರುವ ಕನಕದಾಸರ ಮುಂಡಿಗೆಗಳು 'ಐವತ್ತು' ಎನ್ನುತ್ತಾರೆ. ಈ ಮುಂಡಿಗೆಗಳನ್ನು 'ಪೌರಾಣಿಕ ವರಸೆ ಮುಂಡಿಗೆಗಳು' ಹಾಗೂ 'ಅನುಭಾವದ ನಿಗೂಢ ಮುಂಡಿಗೆ'ಗಳೆಂದು ಎರಡು ಗುಂಪು ಮಾಡಲಾಗಿದೆ.

**ಮುಂಡಿಗೆಗಳಲ್ಲಿ ಪಶುಪಾಲನಾ ಪರಂಪರೆಯ ವಿವರಗಳು:**

ಪಶುಪಾಲನಾ ಪರಂಪರೆಯ ಹಿನ್ನೆಲೆಯಿಂದಲೇ ಉದಯಿಸಿದ ವಿಷ್ಣುವನ್ನು ಕನಕದಾಸರು ಮರೆಯುವುದೇ ಇಲ್ಲ. ತ್ರಿಮೂರ್ತಿಗಳಲ್ಲಿ ಒಬ್ಬನಾದ ಈ ದೈವದ ಪ್ರಸ್ತಾಪವನ್ನು ತಮ್ಮ ಮುಂಡಿಗೆಗಳಲ್ಲಿಯೂ ತರುತ್ತಾರೆ.

ಮರೆಯದೆ ನೆನೆ ಚಿನ್ಮಯನ
ಹರಿ ನಾರಾಯಣ ಅಚ್ಯುತನ॥
ಮಗಳ ತಾನೆ ಮದುವೆಯಾದವನ
ಮಗಳ ಮಗನ ಮೊಮ್ಮಗನ
ಮಗಳ ಗಂಡನ ಮೇಲೆ ಮಲಗಿದ ಜಾಣನ
ಮಗಳ ಮಾವನಿಗೆ ಮೈದುನನ॥[೧೫೧]

ಈ ಮುಂಡಿಗೆಯಲ್ಲಿ ಸಂಬಂಧಗಳ ಮೂಲಕ 'ವಿಷ್ಣು' ಎಂಬ ಉತ್ತರವನ್ನು ಪಡೆಯಲು ಕೇಳುಗರನ್ನು ಇಕ್ಕಟ್ಟಿಗೆ ಸಿಲುಕಿಸುವುದು ಕಂಡು ಬರುತ್ತದೆ. ರಾಮ, ಸೀತೆ, ಭೂದೇವಿ, ಗಂಗೆ, ಇವರ ಸಂಬಂಧಗಳನ್ನು ವಿಷ್ಣುವಿನೊಟ್ಟಿಗೆ ಈ ಮುಂಡಿಗೆಯಲ್ಲಿ ನೋಡಲಾಗಿದೆ.

ಶಿವನ ಮಗಳೊಡಗೂಡಿ ಮತ್ತೆ
ಶಿವನ ಮಗಳನು ಮಾವನಿಗಿತ್ತೆ
ಶಿವನ ಉಪಟಳ ಕಳುಕಿ ಗೋಕುಲ
ಶಿವನ ಕರದಲಿ ಪೊತ್ತೆ
ಶಿವನ ಧನುವನು ಖಂಡಿಸಿ ಮತ್ತೆ
ಶಿವನ ತಲೆ ಏರಿ ನಿಂದೆ
ಶಿವನ ಭೋಜನವಾಹನ ಸುತನಿಗೆ
ಶಿವನ ಪ್ರತಿಫಲನೆಂಬ॥[೧೫೨]

ಎನ್ನುವ ಈ ಮುಂಡಿಗೆಯಲ್ಲಿ, ಒಂದೇ ಶಬ್ದದ ನಾನಾರ್ಥಗಳ ಮೂಲಕ ಹರಿ ಮಹಿಮೆಯನ್ನು ಸಾರುತ್ತಲೇ ಹರಿಹರ ಸಾಮ್ಯತೆಯನ್ನು, ಕನಕದಾಸರು ಸಮಾಜದಲ್ಲಿನ ಭಕ್ತಿ, ದೈವ ಕುರಿತ ಪರಂಪರೆಯ ಪ್ರಭಾವದಿಂದಲೇ ತರುತ್ತಾರೆ.

ಮುಳ್ಳು ಮನಿಯ ಮ್ಯಾಲ ಮೂರು ಕೆರಿಯ ಕಟ್ಟಿ
ಎರಡು ಹೂಳು, ಒಂದು ತುಂಬಲೆ ಇಲ್ಲ
ತುಂಬದ ಕೆರೆಗೆ ಮೇಯಾಕ ಬಂದಾವು ಮೂರು ಎಮ್ಮೆ
ಎರಡು ಗೊಡ್ಡು ಒಂದು ಕಂದು ಹಾಕಿ-ಕರುವೇ ಇಲ್ಲ
ಕರುವಿಲ್ಲದ ಎಮ್ಮೆಯ ಕೂಡಿದರ ಮೂವರು ಹೆಣ್ಮಕ್ಕಳಾ
ಇಬ್ಬರು ಬಂಜೆಯರು ಒಬ್ಬಾಕಿ ಹಡದೇ ಇಲ್ಲ
ಹಡೆಯದ ಹೆಣ್ಣ ಕೂಡಿಕೊಂಡರು ಮೂವರು ಕುಂಬಾರರು
ಇಬ್ಬರು ಚೊಂಚರು, ಒಬ್ಬಗೆ ಕೈಯೇ ಇಲ್ಲ॥[೧೫೩]

ಈ ಮುಂಡಿಗೆಯಲ್ಲಿನ ಎಮ್ಮೆ, ಗೊಡ್ಡು, ಮೇಯಾಕ, ಕಂದುಹಾಕು, ಕರು, ಎಂಬಿತ್ಯಾದಿಯ ಪದಗಳು ದನಗಾಹಿ ಕುಟುಂಬದವರು ನಿತ್ಯ ಬಳಸುವ ಪದಗಳೇ ಆಗಿವೆ. ಈಗಲೂ ನಮ್ಮ ಗ್ರಾಮೀಣ ಜನರು ಹಸು ಕರು ಹಾಕುವುದನ್ನು 'ಕಂದು ಹಾಕಿತು'(ಬಯಲು ಸೀಮೆ ಭಾಗದಲ್ಲಿ) ಎಂದೇ ಹೇಳುತ್ತಾರೆ. ಒಮ್ಮೆಯೂ ಕರು ಹಾಕದೆ ಇರುವ ಎಮ್ಮೆ ಅಥವಾ ಹಸುಗಳನ್ನು ಗೊಡ್ಡುಎಮ್ಮೆ, ಗೊಡ್ಡುಹಸು ಎಂದೇ ಸಂಬೋಧಿಸುತ್ತಾರೆ. ಇಂತಹ ಪಶುಪಾಲನಾ ಸಮುದಾಯ ಒಂದರ ಸಂಭಾಷಣೆ,

ಸನ್ನಿವೇಶ ಘಟನೆಗಳು, ಕನಕದಾಸರನ್ನು ಪ್ರಭಾವಿಸಿರುವುದನ್ನು ಈ ಪದಗಳ ಬಳಕೆ ಸಾಬೀತು ಪಡಿಸುತ್ತದೆ. ಜೀವ ಮತ್ತು ದೇಹ ರಚನೆಯ ಹಾಸು ಹೊಕ್ಕಿನ ನೇಯ್ಗೆ ಈ ಮುಂಡಿಗೆಯ ಭಾವ ಇದ್ದಂತಿದೆ. 'ಕೃಷಿ'ಯ ಸ್ವರೂಪವನ್ನು ಬಿತ್ತರಿಸುವ ಮುಂಡಿಗೆಗಳಲ್ಲಿ,

ಬಿತ್ತಾಕ ಹೋದಲ್ಲಿ ಬಿಡದೆ ಮಳೆ ಹೊಡಿದು
ಜತ್ತಿಗೆ ತೊಯ್ದು ಮಿಣಿ ತೊಯ್ದು
ಜತ್ತಿಗೆ ತೊಯ್ದು ಮಿಣಿ ತೊಯ್ದು– ಉಡಿಯಾಗಿನ
ಬಿತ್ತ ಬೀಜ ತೊಯ್ದು ಮೊಳಕೆ ಹೊಡೆದೊ
ಬಿತ್ತಲಿಲ್ಲ, ಬೆಳೆಯಲಿಲ್ಲ, ಮೊಳದುದ್ದ ತೆನೆ ಹಾಯ್ದೊ
ಮೆತ್ತಗೆ ಮೇಯಾಕ ಬಂದ ಗಿಣಿರಾಮ ನಿಬ್ಬೆರಗಾಗಿ ನಿಂತ
ಕಾಗಿನೆಲೆ ಕನಕದಾಸ ಹಾಕಿದ ಮುಂಡಿಗೆಯ
ತೂಗಿ ಒಡಚದಿದ್ದರೆ ಗೆಣೆಯ ಆದಿಕೇಶವನಾಣೆ॥[೧೫೪]

ಕೃಷಿ ಲೋಕದ ಬಿತ್ತನೆ ಕ್ರಿಯೆಯೇ ಅನಾವರಣ ಗೊಳ್ಳುವಂತಿರುವ ಈ ಮುಂಡಿಗೆಯು, ಸತತವಾಗಿ ಉಳುಮೆ ಮಾಡಿ ಬಿತ್ತನೆಗೆ ತೊಡಗಿದಾಗ ಸಿದ್ಧಿಯ ಮಳೆ ಸುರಿದು ಮಡಿಲಲ್ಲಿದ್ದ ಭತ್ತದ ಬೀಜ, ಮಣ್ಣು ಸೇರದಿದ್ದರೂ ಮೊಳಕೆಯಾಗಿ ಬೆಳೆದು ಫಲ ನೀಡುತ್ತದೆ. ಇದನ್ನು ಆಸ್ವಾದಿಸಲು ಬಂದ ಗಿಣಿರಾಮ(ಪರಮಾತ್ಮ) ನಿಬ್ಬೆರಗಾಗುವುದನ್ನು ಈ ಮುಂಡಿಗೆ ಸೂಚಿಸುತ್ತದೆ. ಇದರಿಂದಾಗಿ ಕನಕದಾಸರಿಗೆ ಬಿತ್ತನೆಯ ವಿವಿಧ ಹಂತಗಳ ಪರಿಚಯವಿತ್ತೆಂಬುದು ಹಾಗೂ ವ್ಯವಸಾಯವೂ ಅಂದಿನ ಪ್ರಮುಖ ವೃತ್ತಿಯಾಗಿತ್ತೆಂದು ನಮಗೆ ವೇದ್ಯವಾಗುತ್ತದೆ.

ಜೊತೆಗೆ ವ್ಯವಸಾಯದ ಮೂಲಕ; ಜನರು ಬೆಳೆಯುತ್ತಿದ್ದ ಹಾಗೂ ಬಳಸುತ್ತಿದ್ದ ತರಕಾರಿಗಳ ದೊಡ್ಡ ಪಟ್ಟಿಯನ್ನೇ ಮತ್ತೊಂದು ಮುಂಡಿಗೆಯಲ್ಲಿ ದಾಸರು ಕೊಡುತ್ತಾರೆ.

ಪರಪುರುಷ ನೀ ನೆಲ್ಲಿ ಕಾಯಿ
ಸರಸಿಯೊಳಗೆ ಕರಿ ಕೂಗಲು ಕಾಯಿ
ಹಿರಿದು ಮಾಡಿದ ಪಾಪ ನುಗ್ಗೆಕಾಯಿ
ಹರಿ ನಿನ್ನ ಧ್ಯಾನ ಬಾಳೆಕಾಯಿ
ಸರುವ ಜೀವರಿಗುಣಿಸಿಯು ಬದನೆಕಾಯಿ
ಅರಿಷಡ್ವರ್ಗಗಳೊದಗಲಿ  ಕಾಯಿ
ಕ್ರೂರ ವ್ಯಾಧಿಗಳೆಲ್ಲ ಹೀರೆಕಾಯಿ
ಘೋರ ದುಷ್ಕೃತ್ಯಗಳು ಸೋರೆಕಾಯಿ
ಭಾರತ ಕಥೆ ಕರ್ಣ ತುಪ್ಪಿರೆಕಾಯಿ
ವಾರಿಜಾಕ್ಷನೆ ಗತಿಯೆಂದಿಪ್ಪ ಕಾಯಿ॥

ಮುರಹರ ನಿನ್ನವರು ಅವರೆ ಕಾಯಿ
ಗುರು ಕರುಣಾಮೃತ ಉಣಸಿಕಾಯಿ
ವರಭಕ್ತ ವತ್ಸಲನೆಂಬ ಹೆಸರಕಾಯಿ
ಸಿರಿಯಾದಿ ಕೇಶವ ನಿನ್ನ ನಾಮ ಮೆಣಸಿನಕಾಯಿ॥ [೧೫]

ವಿವಿಧ ಬಗೆಯ ತರಕಾರಿ ಕಾಯಿಗಳ ಮೂಲಕ ಕೆಳಸ್ತರದ ಜನರಲ್ಲಿ, ದೀನ ದಲಿತರಲ್ಲಿ, ಅರಿವಿನ ಸ್ಪಂದನ ಮೂಡಿಸುವ ಕನಕದಾಸರ ನಿಲುವು; ಅವರ ಜನಮುಖಿ ದೃಷ್ಟಿಯನ್ನು ಸೂಚಿಸುತ್ತದೆ. ಇಲ್ಲಿ ಪ್ರತಿಯೊಂದು ತರಕಾರಿಗೂ ಬೇರೊಂದು ಬಗೆಯ ಅರ್ಥ ಅವಾಹನೆಗೊಂಡಿದೆ. ಈ ಮೂಲಕ ಸಾಮಾನ್ಯ ಜನರು ತಾವು ನಿತ್ಯ ಬೆಳೆಯುತ್ತಿದ್ದ ದಿನ ಬಳಕೆ ತರಕಾರಿಗಳ ಬಗ್ಗೆ ಕುತೂಹಲ ಮೂಡುವಂತೆ ಮಾಡಿದೆ. ಅಲ್ಲದೆ ಅವುಗಳಲ್ಲಿರುವ ಸಾರವನ್ನು ವಿಶ್ಲೇಷಿಸುತ್ತಾ, ಇವುಗಳನ್ನು ಮೇಲುಸ್ತರಕ್ಕೆ ತರುವುದೇ ಕನಕದಾಸರ ಆಶಯವಾಗಿತ್ತು. ಪ್ರತಿಯೊಂದು ತರಕಾರಿಯೂ ವಿಶೇಷ ಅರ್ಥವನ್ನು ಕೊಡುತ್ತಿದ್ದು, ಉದಾಹರಣೆಗೆ ನುಗ್ಗೆಕಾಯಿ, ನುಗ್ಗು ಅಂದರೆ ಪುಡಿಮಾಡು, ನಾನು ಮಾಡಿದ ಪಾಪಗಳನ್ನೆಲ್ಲಾ ಪುಡಿಪುಡಿ ಮಾಡು ಎನ್ನುವಂತಿದೆ. ಸೋರೆಕಾಯಿ, ಕೆಟ್ಟ ಕೃತ್ಯಗಳು ಸೋರಿ ಹೋಗುವಂತೆ ಮಾಡಿ ಕಾಪಾಡು ಎನ್ನನು, ಎಂದರ್ಥ ಸ್ಫುರಿಸುತ್ತದೆ. ಈ ಚಿತ್ರಣವು ಪ್ರಯೋಗಗಳ ಮೂಲಕ ಜ್ಞಾನ ಕಟ್ಟಿಕೊಳ್ಳುವ ಇಂದಿನ ಮಕ್ಕಳ ಸ್ವಕಲಿಕೆಯಂತೆ ಈ ಮುಂಡಿಗೆ ಗೋಚರಿಸುತ್ತದೆ. ಗುರು ಕನಕದಾಸರು ಜ್ಞಾನ ರೂಪಿಸುವ 'ಫೆಸಿಲಿಟೇಟರ್'(ಅನುಕೂಲಿಸುವವ) ನಂತೆ ಕಂಡುಬರುತ್ತಾರೆ.

ಹಾಗೆಯೇ ದಾಸರು ಬಣ್ಣಬಣ್ಣದ ಪಕ್ಷಿಸಂಕುಲ, ಬಗೆಬಗೆಯ ಪ್ರಾಣಿಗಳ ಸಮೂಹ ಹಾಗೂ ವಿಭಿನ್ನ ಪುಷ್ಪ, ಹಣ್ಣುಗಳ ರಾಶಿಯನ್ನೇ ಮುಂಡಿಗೆಯಲ್ಲಿ ತಂದು ಸುರಿಯುತ್ತಾರೆ. ಈ ಎಲ್ಲಾ ಅನುಭವ ಕನಕದಾಸರ ಅನನ್ಯ ತಿರುಗಾಟ, ಆಡಳಿತ ಕಾರ್ಯ, ಕ್ಷೇತ್ರದರ್ಶನ, ಜನಸಾಮಾನ್ಯರ ಒಡನಾಟ, ಹಾಗೂ ತಮ್ಮ ಕಾಡಿನ ಬೇಟೆಯ ಒಡನಾಟದಿಂದಲೇ ಪ್ರತಿಫಲನಗೊಳ್ಳುತ್ತಿದ್ದು; ಈ ಬಿಂಬಗಳು ದಾಸರ ಉದಯರಾಗಗಳಲ್ಲೂ, ಉಗಾಭೋಗಗಳಲ್ಲೂ ಮತ್ತೆ ಮತ್ತೆ ಗೋಚರಿಸಲು ಕಾರಣವಾಗಿದೆ.

## ಕೊನೆ ಟಿಪ್ಪಣಿಗಳು:

೧. (ಸಂ)ಡಾ. ಬಿ. ಶಿವರಾಮಶೆಟ್ಟಿ, ನೀಮಾಯೆಯೊಳಗೋ ನಿನ್ನೊಳುಮಾಯೆಯೋ, ಕನಕದಾಸರ ಸಮಗ್ರ ಅಧ್ಯಯನ, ಭಾಗ–೧ ಪುಟ.– ೧೫

೨. ಅದೇ ಪುಟ–೧೭

೩. (ಸಂ)ಡಾ. ಬಿ. ಶಿವರಾಮಶೆಟ್ಟಿ, ನೀಮಾಯೆಯೊಳಗೋ ನಿನ್ನೊಳುಮಾಯೆಯೋ, ಕನಕದಾಸರ ಸಮಗ್ರ ಅಧ್ಯಯನ, ಭಾಗ–೧, ಲೇಖನ, ಡಾ. ನದಾಫ್ ಹಜರತ್ ಕನಕದಾಸರ ಜೀವನ,

ಕಾಲ ಮತ್ತು ಮತವಿಚಾರ, ಪುಟ.-೫೬೧
೪. ಕಾಶಿನಾಥಶಾಸ್ತ್ರಿ, ಕಾಶೀ ವೀರಶೈವ ರತ್ನ, ೧೯೫೨, ಪುಟ.-೩೨
೫. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು, ಪುಟ.-೧೨೩
೬. ಕಟ್ಟೀಶೇಷಾಚಾರ್ಯರು, ಕವಿ ಕನಕದಾಸ, ೧೯೩೮, ಪುಟ.-೨೧೨
೭. ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೯೩ ಪುಟ. -೩೦೭
೮. (ಸಂ)ದ.ರಾ. ಬೇಂದ್ರೆ, ಶ್ರೀ ಕನಕದಾಸ ಚತುಶ್ಯ ಶತಮಾನೋತ್ಸವ ಸಂಸ್ಕರಣ, ಸಂಪುಟ. ೧೯೬೫, ಪುಟ-೨೫
೯. ಅದೇ ಪುಟ-೫೭
೧೦. ಅದೇ ಪುಟ-೮೩
೧೧. ಅದೇ ಪುಟ-೮೫
೧೨. (ಸಂ) ಸಿದ್ದಯ್ಯ ಪುರಾಣಿಕ, ಮಹಾತ್ಮ ಕನಕದಾಸ ಪ್ರಶಸ್ತಿ, ೧೯೬೫, ಪುಟ-೦೭
೧೩. ಅದೇ ಪುಟ-೮೯, ೯೦
೧೪. ಅದೇ ಪುಟ-೧೬೫
೧೫. ವೆಂಕಟರಾಯ್ ಆನಂದಶೆಣ್ಯೆ, ಕನಕದರ್ಶನ, ೧೯೭೪, ಪುಟ-೩
೧೬. ಪ್ರೊ. ಸುಧಾಕರ, ಕಾಗಿನೆಲೆಯ ಕನಕದಾಸೋತ್ತಮ, ೧೯೯೭, ಪುಟ-೪
೧೭. (ಸಂ) ದೇ.ಜ.ಗೌ. ಕನಕಸಾಹಿತ್ಯ ದರ್ಶನ, ಸಂಪುಟ-೧, ಲೇಖನ, ನಿಂಗಣ್ಣ ಸಣ್ಣಕ್ಕಿ, ಜನಪದರ ಕಣ್ಣಲ್ಲಿ ಶ್ರೀ ಕನಕದಾಸರು, ಪುಟ-೧೦೨
೧೮. ಅದೇ ಪುಟ ೧೦೨ ರಿಂದ ೧೦೬
೧೯. ಅದೇ ಪುಟ ೧೦೨ ರಿಂದ ೧೦೬
೨೦. ಅದೇ ಪುಟ ೧೦೨ ರಿಂದ ೧೦೬
೨೧. ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿಹುಚ್ಚುರಾಯ, ಶ್ರೀಕನಕದಾಸರ ಭಕ್ತಿಗೀತೆಗಳು, ೧೯೬೫ ಪುಟ-೧೯೬೫, ಪುಟ-೩೬೭
೨೬. (ಸಂ) ದೇ.ಜ.ಗೌ,ಕನಕಾವಲೋಕನ, ಪುಟ-೩೮೦
೨೭. (ಸಂ) ಪ್ರೊ. ಸುಧಾಕರ, ಕನಕದಾಸರ ಕಾವ್ಯಭಾಗ-೨, ಮೋಹನ ತರಂಗಿಣಿ, ಪುಟ-೧೩
೨೮. ಡಾ. ಎಸ್.ಎಸ್.ಭಗವತಿ, ಡಾ. ಎಚ್.ಎಸ್.ಮೇಲಿನಮನಿ, ಕನಕದಾಸರ ಒಂದು ಅಧ್ಯಯನ, ಪುಟ-೧೨೪
೨೯. (ಸಂ) ದೇ.ಜ.ಗೌ, ಕನಕಾವಲೋಕನ, ಪುಟ-೩೭೭
೩೦. ಅದೇ ಪುಟ-೩೭೮
೩೧. ಅದೇ ಪುಟ-೩೭೮
೩೨. ಅದೇ ಪುಟ-೨೩
೩೩. ಅದೇ ಪುಟ-೨೭
೩೪. (ಸಂ) ಪ್ರೊ. ಸುಧಾಕರ, ಕನಕದಾಸರ ಕಾವ್ಯ ಭಾಗ-೨, ಪುಟ-೨೯೬
೩೫ ಅದೇ ಪುಟ-೫೭೦
೩೬. ಅದೇ ಪುಟ-೬೧೨, ೬೧೩
೩೭. ಅದೇ ಪುಟ-೬೩೪

೩೮. ಅದೇ ಪುಟ-೬೫೩

೩೯. ಎಲ್ಲೆಸ್ಕೆ, ದಾಸಶ್ರೇಷ್ಠ ಕನಕದಾಸರ ಮೋಹನತರಂಗಿಣಿ, ಪುಟ-೧೭೦

೪೦. (ಸಂ) ಡಾ. ಶಿವರಾಮಶೆಟ್ಟಿ, ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ, ಲೇಖನ ಚಂದ್ರಕಾಂತ ಬಿಜ್ಜರಗಿ, ದಾಸರ ಜಾತಿ ಮತ, ಪುಟ-೬೯೪, ೬೯೫, ೬೯೬

೪೧. (ಸಂ)ಪ್ರೊ, ಸುಧಾಕರ, ಕನಕದಾಸರ ಕಾವ್ಯ ಭಾಗ-೨, ಪು-೬೮೮

೪೨. (ಸಂ)ಡಾ.ಎಸ್.ಎಸ್. ಭಗವತಿ. ಕನಕದಾಸರ ಒಂದು ಅಧ್ಯಯನ, ಲೇಖನ, ಎಸ್. ವಿದ್ಯಾಶಂಕರ, ನಳಚರಿತ್ರೆಯ ಜನಪ್ರಿಯತೆ-ಒಂದು ವಿವೇಚನೆ, ಪುಟ-೧೬೫

೪೩. (ಸಂ) ದೇ.ಜ.ಗೌ. ಕನಕಾವಲೋಕನ. ಲೇಖನ, ಎಂ.ವಿ. ಶ್ರೀನಿವಾಸಮೂರ್ತಿ, ಕನಕದಾಸರ ಸಾಹಿತ್ಯದ ಮೇಲೆ ಅದರ ಹಿಂದಿನ ಮತ್ತು ಸಮಕಾಲೀನ ಕವಿಗಳ ಪ್ರಭಾವ, ಪುಟ-೬೪೨

೪೪. (ಸಂ) ದೇ.ಜ.ಗೌ. ನಳಚರಿತ್ರೆ, ವಿಶ್ವ ಕನ್ನಡ ಸಮ್ಮೇಳನದ ಪ್ರಕಟಣೆ. ೧೯೮೫

೪೫. (ಸಂ) ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೨, ಪುಟ-೧೪೭

೪೬. ಅದೇ ಪುಟ-೧೫೧

೪೭. ಅದೇ ಪುಟ-೧೮೦

೪೮. ಡಾ. ಸುರೇಶ್ ನಾಗಲಮಡಿಕೆ, ಜನಪದ ಲೋಕದೃಷ್ಟಿಯ ಮೂಲಕ ಕನಕಸಾಹಿತ್ಯ ಅಧ್ಯಯನ,(ಸಂಶೋಧನಾಕೃತಿ) ಪುಟ-೮೧

೫೦. (ಸಂ) ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೧೩೫

೫೧ ಅದೇ ಪುಟ-೧೩೫

೫೨. ಅದೇ ಪುಟ-೧೩೫

೫೩. ಡಾ. ಸುರೇಶ್ ನಾಗಲಮಡಿಕೆ, ಜನಪದ ಲೋಕದೃಷ್ಟಿಯ ಮೂಲಕ ಕನಕಸಾಹಿತ್ಯ ಅಧ್ಯಯನ,(ಸಂಶೋಧನಾಕೃತಿ) ಪುಟ-೮೦

೫೪. (ಸಂ) ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೧೫೧

೫೫. ಅದೇ ಪುಟ-೧೩೮

೫೬. ಅದೇ ಪುಟ-೧೩೮

೫೭. ಅದೇ ಪುಟ-೧೪೧

೫೮. ಅದೇ ಪುಟ-೧೪೧

೫೯. ಅದೇ ಪುಟ-೯೨

೬೦. ಅದೇ ಪುಟ-೯೩

೬೧. ಡಾ. ಸುರೇಶ್ ನಾಗಲಮಡಿಕೆ, ಜನಪದ ಲೋಕದೃಷ್ಟಿಯ ಮೂಲಕ ಕನಕಸಾಹಿತ್ಯ ಅಧ್ಯಯನ,(ಸಂಶೋಧನಾಕೃತಿ) ಪುಟ-೯೫

೬೨. ಡಾ. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯದಲ್ಲಿ ಆಧುನಕತೆ ಮತ್ತು ಪರಂಪರೆ, ಪುಟ-೧೩೪

೬೩. ಡಾ. ಸುರೇಶ್ ನಾಗಲಮಡಿಕೆ, ಜನಪದ ಲೋಕದೃಷ್ಟಿಯ ಮೂಲಕ ಕನಕಸಾಹಿತ್ಯ ಅಧ್ಯಯನ, (ಸಂಶೋಧನಾಕೃತಿ) ಪುಟ-೬೦

೬೪. (ಸಂ)ಹಾರೂರು ಶಂಕರನಾರಾಯಣಭಟ್ಟ, ನಳಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ-೧೪೯

೬೫. (ಸಂ) ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೧೫೩

೬೬. ಡಾ. ದೇ.ಜ.ಗೌ,ನಳಚರಿತ್ರೆ, ಶ್ರೀ.ಕನಕದಾಸರ ನಾಲ್ಕನೆಯ ಶತಮಾನೋತ್ಸವ, ಬೆಂಗಳೂರು,ಪುಟ-೨೮

೬೭ ಡಾ. ದೇಜ.ಗೌ, ಕನಕಾವಲೋಕನ ಸಂಪುಟ-೧, ಲೇಖನ, ಜ್ಯೋತಿಹೊಸೂರ- ನಳಚರಿತ್ರೆಯಲ್ಲಿ ಜೀವನ ಚಿತ್ರಣ, ಪುಟ-೪೯೫

೬೮. ಡಾ. ಸುರೇಶ್ ನಾಗಲಮಡಿಕೆ, ಜನಪದ ಲೋಕದೃಷ್ಟಿಯ ಮೂಲಕ ಕನಕಸಾಹಿತ್ಯ ಅಧ್ಯಯನ,(ಸಂಶೋಧನಾಕೃತಿ) ಪುಟ-೬೩

೬೯. ಡಾ. ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೨೦೩

೭೦. ಡಾ. ಸುರೇಶ್ ನಾಗಲಮಡಿಕೆ, ಮುತ್ತು ಬಂದಿದೆ ಕೇರಿಗೆ, ಪು-೧೫೧

೭೧. ಚಂದ್ರಕಾಂತ ಬಿಜ್ಜರಗಿ, ದಾರ್ಶನಿಕ ಕವಿ ಕನಕದಾಸರು, ಪು-೧೨೩

೭೨. ಎಸ್.ಎಸ್. ಭಗವತಿ, ಕನಕದಾಸರ ಅಧ್ಯಯನ, ಪುಟ-೧೫೦

೭೩. (ಸಂ) ಸಾ.ಶಿ ಮರುಳಯ್ಯ ಕನಕದಾಸರ ಕಾವ್ಯ ಭಾಗ-೧, ಪುಟ-೧೫

೭೪. ಅದೇ ಪುಟ-೨೦

೭೫. ಡಾ. ಸುರೇಶ್ ನಾಗಲಮಡಿಕೆ, ಮುತ್ತು ಬಂದಿದೆ ಕೇರಿಗೆ, ಪು-೧೫೩

೭೬. ಬಸವರಾಜ್ ನಾಯ್ಕರ್, ಶ್ರೀ ಕನಕದಾಸರು, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ಪು-೬೪

೭೭. ಎ.ಪಿ.ಇಂ.ಸಂ.೬. ಐಹೊಳೆಯಲ್ಲಿರುವ ರವಿಕೀರ್ತಿ ಶಾಸನ, ಈ ಶಾಸನದ ಕಾಲ ಕ್ರಿ.ಶ. ೬೩೪ (ಶಾ.ಶ. ೫೫೬ ಮತ್ತು ಕಲಿವರ್ಷ ೩೭೩೫)

೭೮. ಡಾ. ಎಂ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೧೬೨

೭೯ India as known to Panini Dr. V.S. Agrawala , page-೩೬೧-೩೬೨

೮೦. ಅದೇ ಪುಟ ೩೬೨

೮೧. ಹರಿವಂಶ-III, ಪುಟ-೩೨೩

೮೨. ಎಂ.ಆರ್.ಸತ್ಯನಾರಾಯಣ, ಕನಕದಾಸರ ಶ್ರೀ ಹರಿಭಕ್ತಿ ಸಾರ, ಸಂಪುಟ-೧, ಪುಟ-೪೫-೪೬

೮೩. ಚಕ್ರವರ್ತಿ ಶ್ರೀನಿವಾಸಗೋಪಾಲಚಾರ್ಯ, ಸಂಸ್ಕೃತ-ಕನ್ನಡಶಬ್ಧಕೋಶ, ೫ನೆಯಭಾಗ,ಪುಟ-೨೪೯೪

೮೪. ಶಂಬಾ ಜೋಶಿ, ಶಂಬಾ ಕೃತಿ ಸಂಪುಟ-೧, ಪುಟ-೧೩೭

೮೫ ಶಂಬಾ ಜೋಶಿ, ಶಂಬಾ ಕೃತಿ ಸಂಪುಟ-೧, ಪುಟ-೧೨೪

೮೬. ಡಾ.ಎಸ್.ಎಸ್. ಭಗವತಿ. ಕನಕದಾಸರ ಒಂದು ಅಧ್ಯಯನ, ಪುಟ-೧೬೨

೮೭. (ಸಂ)ಡಾ. ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೪

೮೮. ಅದೇ ಪುಟ. ೯

೮೯. ಅದೇ ಪುಟ-೧೫

೯೦. ಡಾ. ಶ್ರೀರಾಮ ಅಚನೂರ, ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ, ಪುಟ-೯೭-೯೮

೯೧. ಅದೇ ಪುಟ-೪೦

೯೨. (ಸಂ) ಕಾ.ತ. ಚಿಕ್ಕಣ್ಣ, ಕನಕಕಿರಣ, ಪುಟ-೯೭ ೯೮

೯೩. ಪ್ರೊ. ಸುಧಾಕರ, ಕಾಗಿನೆಲೆಯ ಕನಕದಾಸೋತ್ತಮ, ಪುಟ-೬೮

೯೪. (ಸಂ) ದೇ.ಜ.ಗೌ. ಕನಕ ಸಾಹಿತ್ಯ ದರ್ಶನ, ಸಂಪುಟ-೧, ಪುಟ-೫೬೯

೯೫. ಡಾ. ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೪೦

೯೬. ಅದೇ ಪುಟ-೪೨

೯೭. ಅದೇ ಪುಟ-೪೩

೯೮. ಅದೇ ಪುಟ-೪೩

೯೯. ಅದೇ ಪುಟ-೪೫, ೪೬

೧೦೦. ಅದೇ ಪುಟ-೪೮

೧೦೧. ಅದೇ ಪುಟ-೬೮

೧೦೨. ಡಾ. ಸುರೇಶ್ ನಾಗಲಮಡಿಕೆ, ಮುತ್ತು ಬಂದಿದೆ ಕೇರಿಗೆ, ಪುಟ-೧೬೩

೧೦೩. ವಿ.ಚಂದ್ರಶೇಖರನಂಗಲಿ, ರಾಮಧಾನ್ಯಚರಿತೆ ಮತ್ತು ಶ್ರಮಸಂಸ್ಕೃತಿ, ಹೊಸತು ವಿಶೇಷ ಸಂಚಿಕೆ ೨೦೦೮ ಪುಟ-೨೧೦

೧೦೪. (ಸಂ) ದೇ.ಜ.ಗೌ. ಕನಕ ಸಾಹಿತ್ಯ ದರ್ಶನ, ಸಂಪುಟ-೧, ಕನಕಾವಲೋಕನ, ಲೇಖನ, ಕೊ.ವ್ಯಾರಮೇಶ, ಕನಕದಾಸರ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಿನ್ನೆಲೆ. ಪುಟ-೯೪

೧೦೫. (ಸಂ) ಡಾ. ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೪೪

೧೦೬. ಅದೇ ಪುಟ- ೪೬

೧೦೭. (ಸಂ) ಡಾ. ಬಿ. ಶಿವರಾಮಶೆಟ್ಟಿ, ಕನಕ ಚಿಂತನ, ಲೇಖನ, ಡಾ. ಪೂವಪ್ಪ ಕಣ್ಣೂರ, ರಾಮಧಾನ್ಯ ಚರಿತ್ರೆ ಕನ್ನಡ ಮನಸ್ಸಿನ ಒಂದು ಪ್ರಾತಿನಿಧಿಕ ಮಾದರಿ, ಪುಟ-೩೫

೧೦೮. ಅದೇ ಪುಟ-೩೫

೧೦೯. (ಸಂ) ಅಮರೇಶ ನುಗಡೋಣಿ, ಪುರಂದರ ಸಾಹಿತ್ಯ ಅಧ್ಯಯನ, ಪುಟ-೧೭

೧೧೦. (ಸಂ)ಡಾ. ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೪೮

೧೧೧. ಅದೇ ಪುಟ-೪೮

೧೧೨. ಅದೇ ಪುಟ-೪೮

೧೧೩. ಅದೇ ಪುಟ-೬೮
೧೧೪. ಅದೇ ಪುಟ-೬೯
೧೧೫ ಅದೇ ಪುಟ-೬೯
೧೧೬. ಅದೇ ಪುಟ-೭೧
೧೧೭. ಡಾ. ಶ್ರೀರಾಮ ಅಚನೂರ, ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ, ಪುಟ-೪೪
೧೧೮. ಡಾ. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು, ಪು-೨೧
೧೧೯. (ಸಂ) ಡಾ. ಸಾ.ಶಿ. ಮರುಳಯ್ಯ, ಕನಕದಾಸರ ಕಾವ್ಯಭಾಗ-೧, ಪುಟ-೪೦
೧೨೦. ಅದೇ ಪುಟ-೬೨
೧೨೧. (ಸಂ) ಡಾ. ಬಿ.ಶಿವರಾಮಶೆಟ್ಟಿ, ಕನಕ ಚಿಂತನ, ಲೇಖನ, ಡಾ. ಕುಮಾರಚಲ್ಯ, ರಾಮಧಾನ್ಯ ಚರಿತೆ ಸಮಕಾಲೀನ ಸಂವಾದ, ಪುಟ-೫೦
೧೨೨. (ಸಂ) ಡಾ. ಬಿ.ಶಿವರಾಮಶೆಟ್ಟಿ, ಕನಕ ಚಿಂತನ, ಲೇಖನ, ಡಾ. ಆರ್. ನಾಗಪ್ಪ ಗೌಡ. ಕನಕದಾಸರ ರಾಮಧಾನ್ಯ ಚರಿತೆ ಸಮಕಾಲೀನ ಸಂವಾದ, ಪುಟ-೨೯
೧೨೩. ಅದೇ ಪುಟ- ೩೧
೧೨೪. (ಸಂ) ಡಾ. ಬಿ. ಶಿವರಾಮಶೆಟ್ಟಿ, ಕನಕ ಚಿಂತನ, ಲೇಖನ, ಡಾ. ಆರ್. ನಾಗಪ್ಪ ಗೌಡ. ಕನಕದಾಸರ ರಾಮಧಾನ್ಯ ಚರಿತೆ ಸಮಕಾಲೀನ ಸಂವಾದ, ಪುಟ-೨೭
೧೨೫. ಮಹಾತ್ಮ ಕನಕದಾಸ ಪ್ರಶಸ್ತಿ ರಾಜ್ಯ ಸಮಿತಿ, ಶ್ರೀ ಕನಕದಾಸರ ನಾಲ್ಕನೆಯ ಶತಮಾನೋತ್ಸವ ಬೆಂಗಳೂರು, ಪ್ರಕಟಣೆ, ೧೯೬೫, ಪುಟ-೧೪೦
೧೨೬. (ಸಂ) ದೇ.ಜ.ಗೌ. ಕನಕಾವಲೋಕ, ಸಂಪುಟ-೧, ಲೇಖನ, ಕನ್ನಡದಲ್ಲಿ ಕೀರ್ತನ ಸಾಹಿತ್ಯ ಮತ್ತು ಕನಕ ಕೀರ್ತನೆಗಳು, ಪುಟ- ೫೨೯
೧೨೭. ಡಾ. ಶ್ರೀರಾಮ ಅಚನೂರ, ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ, ಪುಟ-೧೩
೧೨೮. (ಸಂ) ದೇ.ಜ.ಗೌ. ಕನಕಾವಲೋಕನ, ಸಂಪುಟ-೧, ಲೇಖನ, ಎಂ.ಜೈಕುಮಾರ್, ಕನ್ನಡದಲ್ಲಿ ಕೀರ್ತನ ಸಾಹಿತ್ಯ ಮತ್ತು ಕನಕ ಕೀರ್ತನೆಗಳು, ಪುಟ- ೫೩೪
೧೨೯. ಪ್ರೊ. ಸುಧಾಕರ, ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಪುಟ-೫೫
೧೩೦. ಡಾ. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು, ಪುಟ-೩೮
೧೩೧. ಪ್ರೊ. ಸುಧಾಕರ, ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಪುಟ-೫೫೯
೧೩೨. ಅದೇ ಪುಟ-೫೨೯
೧೩೩. ಅದೇ ಪುಟ-೩೬೩
೧೩೪. ಅದೇ ಪುಟ-೨೪೭
೧೩೫. ಅದೇ ಪುಟ-೩೦೬
೧೩೬. ಡಾ. ಸುರೇಶ್ ನಾಗಲಮಡಿಕೆ, ಮುತ್ತು ಬಂದಿದೆ ಕೇರಿಗೆ, ಪುಟ-೧೨೬
೧೩೭. (ಸಂ)ಪ್ರೊ. ಸುಧಾಕರ, ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಪುಟ-೪೩೩

೧೩೮. (ಸಂ) ದೇ.ಜ.ಗೌ. ಕನಕಾವಲೋಕ, ಸಂಪುಟ, ಪುಟ-೧೬೩

೧೩೯. ಶ್ರೀ ನಿಧಿ ಪಬ್ಲಿಕೇಷನ್ಸ್, ಕನಕದಾಸರ ಪದಗಳು, ಪುಟ-೧೨

೧೪೦. (ಸಂ)ಪ್ರೊ. ಸುಧಾಕರ, ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಪುಟ-೧೯೧

೧೪೧. ಅದೇ ಪುಟ-೧೮೮

೧೪೨. ಅದೇ ಪುಟ-೧೪೯

೧೪೨ಎ. ಅದೇ ಪುಟ-೧೦೨

೧೪೩. (ಸಂ)ಡಾ.ಶಿವರಾಮಶೆಟ್ಟಿ, ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ, ಲೇಖನ, ಜ್ಯೋತಿಹೊಸೂರ. ಕನಕದಾಸರ ಜೀವನ ವಿಚಾರ, ಪುಟ-೫೯೨

೧೪೪. (ಸಂ)ಡಾ.ಶಿವರಾಮಶೆಟ್ಟಿ, ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ, ಲೇಖನ, ಡಾ. ಚಂದ್ರಕಾಂತ ಬಿಜ್ಜರಗಿ. ಸಂತ ಕನಕದಾಸ, ಪುಟ-೩೪೮

೧೪೫. (ಸಂ) ದೇ.ಜ.ಗೌ, ಕನಕಾವಲೋಕನ, ಸಂಪುಟ-೧, ಲೇಖನ, ಟಿ. ಮಹಾಬಲ ಅಡಿಗ. ಕನಕನ ಸಾಮಾಜಿಕ ವಿಡಂಬನೆ, ಪುಟ-೮೦೬

೧೪೬. ಅದೇ ಪುಟ-೯೬೩

೧೪೭. ಅದೇ ಪುಟ-೧೦೭

೧೪೮. ಡಾ. ಶ್ರೀರಾಮ ಅಚನೂರ, ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ, ಪುಟ-೧೭೮

೧೪೯. (ಸಂ)ಆರ್.ಸಿ. ಹಿರೇಮಠ, ಜನಪದ ಸಾಹಿತ್ಯ ದರ್ಶನ, ಭಾಗ-೪, ಪುಟ-೧೭೮

೧೫೦. (ಸಂ) ದೇ.ಜ.ಗೌ. ಕನಕಾವಲೋಕನ, ಸಂಪುಟ-೧, ಲೇಖನ, ಡಾ. ಹಂಪಾನಾ. ಕನಕದಾಸರ ಕೃತಿಗಳಲ್ಲಿ ಭಾಷಾ ಸ್ವರೂಪ. ಪುಟ-೩೧೪

೧೫೧. (ಸಂ)ಪ್ರೊ. ಸುಧಾಕರ, ಕನಕದಾಸರ ಕೀರ್ತನೆಗಳು, ಭಾಗ-೨, ಪುಟ-೧೬

೧೫೨ ಅದೇ ಪುಟ-೪೬

೧೫೩. ಅದೇ ಪುಟ-೫೮

೧೫೪. ಪ್ರೊ. ಸುಧಾಕರ ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು, ಸಂಪುಟ-೪, ಪುಟ-೭೦೧.

೧೫೫ ಅದೇ ಪುಟ-೭೫೩

# ಉಪಸಂಹಾರ

ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ನೆಲೆಯನ್ನು ತಂದುಕೊಟ್ಟ ಕನಕದಾಸರ ಬದುಕು, ಬರವಣಿಗೆಗಳನ್ನು ಇಲ್ಲಿನ ಅಧ್ಯಯನವು ಜೀವ ವಿಕಾಸದ ಪಾರಂಪರಿಕ ದೃಷ್ಟಿಕೋನಗಳಿಂದ ನೋಡಲು ಪ್ರಯತ್ನಿಸಿದೆ. ಸಮಾಜದ ಕೆಳಸ್ತರದಿಂದ ಬಂದವನೊಬ್ಬ ಅಲ್ಲಿನ ಎಲ್ಲಾ ಅನುಭವವನ್ನು ಗ್ರಹಿಸುತ್ತಲೇ ತುಂಡರಸನಾಗಿ (ರಾಜನ ಪ್ರತಿನಿಧಿ) ತಾತ್ವಿಕ ಚೌಕಟ್ಟಿನಲ್ಲಿ ಆಳ್ವಿಕೆ ನಡೆಸಲು ಪ್ರಯತ್ನಿಸಿ, ಕೊನೆಗೆ ಹರಿದಾಸನಾಗಿ ಬದುಕು ಕಟ್ಟಿಕೊಂಡದ್ದು ಕನಕದಾಸರ ಮಟ್ಟಿಗೆ ವಿಸ್ಮಯವೇ ಸರಿ. ಅರಸೊತ್ತಿಗೆಯನ್ನು ಧಿಕ್ಕರಿಸಿ ಹೊರಟ ಬುದ್ಧ; ರಾಣಿಯಾಗಿ ಮುಂದುವರೆಯಲು ಒಪ್ಪದ ಅಕ್ಕ; ಆಗರ್ಭ ಶ್ರೀಮಂತನಾಗಿದ್ದು ಕಡೆಯಲ್ಲಿ ದಾಸತ್ವ ಪಡೆದ ಪುರಂದರ ದಾಸರಂತೆಯೇ, ಕನಕದಾಸರು ಕೂಡ ತಮ್ಮ ಪರಿಸರದ ಸಮಾಜವನ್ನು ಕುರಿತು ಸಮಷ್ಠೀ ಚಿಂತನೆಯನ್ನೇ ಮಾಡಿದ್ದಾರೆ. ಆದ್ದರಿಂದ ಈ ಅಧ್ಯಯನವು ಕನಕದಾಸರ ಜೀವನ ಚಿತ್ರಣವನ್ನು ಅಂದಿನ 'ಕನಕ ಪರಿಸರ'ದ ಹಿನ್ನೆಲೆಯಲ್ಲಿಯೇ ಚರ್ಚಿಸಿದೆ. ಹಾಗಾಗಿ ಒಬ್ಬ ಪ್ರಜಾಪಾಲಕ, ಸಂತ, ಭಕ್ತ ಹಾಗೂ ಕೀರ್ತನಕಾರನಾಗಿ, ಕಂಡು ಬರುವ ಕನಕದಾಸರಿಗೆ ಅಂದಿನ ಪರಿಸರದ ಪ್ರಭಾವೀ ವೃತ್ತಿಯಾದ ಪಶುಪಾಲನಾ ಪರಂಪರೆಯ ಹಿನ್ನೆಲೆ, ಲಕ್ಷಣ, ಜೀವನ ಕ್ರಮಗಳ ಪ್ರಭಾವ ಮತ್ತು ಸಂಬಂಧಗಳು, ಉಂಟುಮಾಡಿದ ಪ್ರೇರಣೆ, ಪರಿಣಾಮಗಳಿಂದಾಗಿ ಸಮಾಜಮುಖಿ ವ್ಯಕ್ತಿತ್ವ ಕನಕದಾಸರಲ್ಲಿ ಮೂಡಿಬರಲು ಕಾರಣವಾಯಿತೆಂಬುದನ್ನು ಈ ಅಧ್ಯಯನದಲ್ಲಿ ಮುಖ್ಯವಾಗಿ ಕಂಡುಕೊಳ್ಳಲಾಗಿದೆ.

ಪಶುಪಾಲನಾ ಪರಂಪರೆಯನ್ನು 'ಮಾನವನ ವಿಕಾಸಕ್ರಮ'ದ ಪ್ರಕಾರ ಮೊದಲಿನಿಂದಲೂ ರೂಢಿಸಿಕೊಂಡು ಬಂದವರೆಂದರೆ ಸಮಾಜದ ಕೆಳಸ್ಥರದವರೆನಿಸಿಕೊಂಡ ಶ್ರಮಿಕ ವರ್ಗದವರೇ. ಆದ್ದರಿಂದ ಈ ಅಧ್ಯಯನವು; ಪಶುಪಾಲಕರು, ಬೇಟೆಗಾರರು, ಕುರುಬರು, ಗೊಲ್ಲರು, ಕೃಷಿಕರು ಹಾಗೂ ಜನಪದರನ್ನು ಒಟ್ಟಾರೆ ಶ್ರೀಸಾಮಾನ್ಯರೆಂದೇ ಪರಿಭಾವಿಸಿದೆ. ಇವರೇ ಭರತಖಂಡ ಮತ್ತು ಕರ್ನಾಟಕದ ಮೂಲ ಪುರುಷರು ಎಂಬುದಾಗಿ ಉಪಲಬ್ಧ ಆಧಾರಗಳ ಮೂಲಕ ಅಧ್ಯಯನದಲ್ಲಿ ಹೇಳಲು ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿಯೇ ಕನಕದಾಸರು ಜೀವಿಸಿದ್ದ ಮಧ್ಯಕಾಲೀನ ಸಂದರ್ಭದ ಅಂದಿನ ಸಮಾಜವನ್ನು; ಬೇಟೆಗಾರರು, ಪಶುಪಾಲಕರು, ಶ್ರಮಿಕರು, ಜನಪದರು, ಕೃಷಿಕರು ಎಂಬ ಕೆಳವರ್ಗದವರೇ ಹೆಚ್ಚಾಗಿ ಇದ್ದಂತಹ ಪರಂಪರೆಯ ಸಮುದಾಯವೆಂದು ಇಲ್ಲಿನ ಸಂಶೋಧನೆ ಭಾವಿಸಿದೆ. ಜೊತೆಗೆ ಮಧ್ಯಕಾಲೀನ ಕಾಲಘಟ್ಟದಲ್ಲಿ ಇಂತಹ ತಳ ಸಮುದಾಯವೊಂದರಲ್ಲಿ ಜನಿಸಿ, ವಂಶ ಪಾರಂಪರ್ಯವಾಗಿ ಬಂದ ಅಧಿಕಾರ,

ಐಶ್ವರ್ಯಗಳನ್ನೆಲ್ಲಾ ಜನಸಾಮಾನ್ಯರಿಗೆ ದಾನಮಾಡಿದ ಕನಕದಾಸರು; ಸಮುದಾಯವೊಂದರ ನಾಯಕನಂತೆ ಕಂಡುಬರುತ್ತಾರೆ. ಈ ಪರಿವರ್ತನೆ ಕನಕದಾಸರಿಗೆ ಸಾಧ್ಯವಾದದ್ದು, ಅವರು ಬದುಕಿದ್ದ ಸಮಾಜದೊಳಗಿನ ಪಾರಂಪರಿಕ ಸಂಪ್ರದಾಯವೊಂದು ಕಟ್ಟಿಕೊಟ್ಟ ದಯೆ, ಕರುಣೆ, ಮಾನವತೆ ಹಾಗೂ ನಾಯಕತ್ವ ಗುಣಗಳ ಪ್ರಭಾವದಿಂದಲೇ ಎಂಬುದನ್ನು ಈ ಅಧ್ಯಯನವು ನಿರೂಪಿಸಲು ಪ್ರಯತ್ನಿಸಿದೆ.

ಯಾವುದೇ ಒಂದು ಧರ್ಮ, ಅಥವಾ ಸಂಸ್ಕೃತಿ; ತತ್ಕಾಲೀನ ಸಮಾಜದ ವ್ಯವಸ್ಥೆಯಲ್ಲಿರುವ ಅನಿಷ್ಠ ಸಂಪ್ರದಾಯಗಳನ್ನು ದೂರವಿಟ್ಟು ಮಾನವೀಯತೆಯಿಂದ ಬಾಳಬೇಕೆಂದು ಬೋಧಿಸುತ್ತದೆ. ಅದೇರೀತಿ ಮಧ್ಯಕಾಲೀನ ಕನ್ನಡ ಸಮಾಜದಲ್ಲಿ ಕನಕದಾಸರೂ ಸಹ ಮಾನವ ಧರ್ಮ ಮತ್ತು ಸಾಮರಸ್ಯದ ಸಂಸ್ಕೃತಿಯ ಸಂಕೇತವಾಗಿ, ತನ್ನ ಬದುಕು, ಕಾವ್ಯ, ಕೀರ್ತನೆಗಳ ಮೂಲಕ ಪ್ರಜಾಪ್ರಭುತ್ವದ ಆಶಯವನ್ನು ಹೊತ್ತು ಬಂದವರಂತೆ ಕಾಣುತ್ತಾರೆ. ಇದಕ್ಕೆಲ್ಲಾ ಪ್ರಮುಖ ಕಾರಣ ಕನಕದಾಸರ ಮೇಲೆ ಸಾಮರಸ್ಯದ ಸಂಕೇತದಂತೆ ನಿರಂತರ ಪ್ರಭಾವವನ್ನು ಬೀರುತ್ತಲೇ ಇದ್ದ 'ಪಶುಪಾಲನಾ ಪರಂಪರೆಯೇ' ಎಂಬುದನ್ನು ಈ ಸಂಶೋಧನೆ ಚರ್ಚಿಸಿದೆ. ಇದಕ್ಕಾಗಿ ಅವರ ಒಟ್ಟು ಜೀವನಕ್ರಮ ಹಾಗೂ ಕಾವ್ಯ, ಕೀರ್ತನೆ, ಮುಂಡಿಗೆಗಳನ್ನು ಬಳಸಿಕೊಳ್ಳಲಾಗಿದೆ. ಇಲ್ಲಿನ ವಸ್ತುಗಳಾದ ಪ್ರಭುತ್ವ, ನಿಸರ್ಗ, ದೈವತ್ವ, ವೃತ್ತಿ, ಸಂಸ್ಕೃತಿ, ಮಾನವೀಯತೆ ಹಾಗೂ ಸಾಮಾಜಿಕ ನೆಲೆಗಳನ್ನು; 'ಮೂಲ ಪರಂಪರೆಯ' ವಿಕಾಸದ ಲಕ್ಷಣಗಳೊಂದಿಗೆ ಗಾಢವಾಗಿ ಗಮನಿಸಲಾಗಿದೆ. ಈ ಮೂಲಕ ಒಂದು ಕಾಲಘಟ್ಟದ ಜನಜೀವನದ ಕನ್ನಡಿಯಂತೆ ಕನಕದಾಸರು ಕಂಡುಬರುವುದನ್ನೂ ಸಂಶೋಧನೆ ಗುರುತಿಸಿದೆ.

ಇಲ್ಲಿನ ಪ್ರತಿಯೊಂದು ಅಧ್ಯಾಯವು; ಅಧ್ಯಯನದ ಉದ್ದೇಶ ಹಾಗೂ ಈ ಸಂಶೋಧನೆಯು ಕಂಡುಕೊಳ್ಳಬೇಕಿರುವ 'ಸತ್ಯ'ವನ್ನು ಹೇಳಲೆತ್ನಿಸಿದೆ. ಹಾಗಾಗಿ ಪಶುಪಾಲನಾ ಪರಂಪರೆಯ ವಿಕಾಸ ಎಂಬ ಅಧ್ಯಾಯವು, ಪಶುಪಾಲನೆಯ ಮೂಲ, ಲಕ್ಷಣ ಮತ್ತು ಸ್ವರೂಪದೊಂದಿಗೆ ಅದರ ಇತಿಹಾಸವನ್ನೇ ತೆರೆದಿಡುತ್ತದೆ. ಇದರಿಂದಾಗಿಯೇ ಈ ನೆಲದ ಮೇಲಾಗಿರುವ ಪಶುಪಾಲನಾ ಸಂಸ್ಕೃತಿಯ ಪರಿಣಾಮವನ್ನು ಶಂ.ಬಾ.ಜೋಶಿಯವರ ಸಂಸ್ಕೃತಿಯ ಚೌಕಟ್ಟಿನಲ್ಲಿ ಅರ್ಥೈಸಲಾಗಿದೆ. ಹಾಗೂ ಇಲ್ಲಿನ ಕನ್ನಡ ಸಂಸ್ಕೃತಿಯನ್ನು ಪಶುಪಾಲನಾ ಸಂಸ್ಕೃತಿಯೆಂದೇ ಭಾವಿಸಿ; ಈ ಅಧ್ಯಯನಕ್ಕೆ ಪೂರಕವಾಗುವಂತೆ, ಜನಪದರ ಮೌಖಿಕ ಮಹಾಕಾವ್ಯಗಳನ್ನು ಪಶುಪಾಲನೆಯ ಹಿನ್ನಲೆಯಲ್ಲಿ ಅಧ್ಯಯನಮಾಡಲಾಗಿದೆ. ಹಾಗಾಗಿ ಹಾಲುಮತಕಾವ್ಯ, ಮಾಳಿಂಗರಾಯನ ಕಾವ್ಯ, ರಟ್ಟಮತಶಾಸ್ತ್ರ, ಮಲೆಯಮಹದೇಶ್ವರ ಕಾವ್ಯ, ಜುಂಜಪ್ಪನ

ಕಾವ್ಯ ಹಾಗೂ ಮೈಲಾರಲಿಂಗನ ಕಾವ್ಯ ಭಾಗಗಳ ವಿಶ್ಲೇಷಣೆಯ ಮೂಲಕ ಪಶುಪಾಲನಾ ಪರಂಪರೆಯ ವಿಕಾಸವನ್ನು; ಮಧ್ಯಕಾಲೀನ ಯುಗದ ಸಂದರ್ಭದೊಂದಿಗೆ ಗ್ರಹಿಸಲಾಗಿದೆ. ಇದರಿಂದಾಗಿ ಸಮುದಾಯದ ರಕ್ಷಣೆಯನ್ನು ಕಾಯ್ದುಕೊಂಡು ಬಂದಿರುವ ಇಲ್ಲಿನ ಜನಪದ ನಾಯಕರ(ಪಶುಪಾಲಕರ) ಕಾಳಜಿಯನ್ನು ಈ ಸಂಶೋಧನೆ ಎತ್ತಿ ಹಿಡಿದಿದೆ. ಮೌಖಿಕ ಪರಂಪರೆಯ ಈ ನಾಯಕರು ಹೆಚ್ಚಾಗಿ ಪಶುಪಾಲಕರು ಅಥವಾ ಶ್ರಮಿಕ ವರ್ಗದ ಮೂಲದಿಂದಲೇ ಬಂದವರಾಗಿದ್ದು ಪರಂಪರೆಯ ಪ್ರಭಾವ ಇವರ ಮೇಲಾಗಿರುವುದಂತೂ ಸತ್ಯ. ಹಾಗೆಯೇ ಕನಕದಾಸರು ಕೂಡ ತಳ ಸಮುದಾಯದಿಂದಲೇ ಬಂದವರಾಗಿದ್ದು ಮತ್ತು ಆ ಸಮುದಾಯದ ನಿರಂತರ ಒಡನಾಟ ಹೊಂದಿದ್ದರಿಂದ ತಮ್ಮ ಕಾಲದ ಇತರ ದಾಸರಿಗಿಂತ ವಿಭಿನ್ನವಾಗಿ ನಿಂತು, ಈ ಜನಪದ ನಾಯಕರಂತೆಯೇ ಕಾಣುತ್ತಾರೆ ಎಂಬುದನ್ನು ಈ ಸಂಶೋಧನೆ ಕಂಡುಕೊಂಡಿದೆ.

ಕನಕದಾಸರು ಅಂದು ರಾಗಿಯ ಮೂಲಕ ಎತ್ತಿದ ತಾರತಮ್ಯದ ಪ್ರಶ್ನೆ, 'ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?' ಎಂದು ಕೇಳಿದ ಕುಲದ ಪ್ರಶ್ನೆ, ಮೋಹನ ತರಂಗಿಣಿಯಲ್ಲಿನ ಕೃಷ್ಣನು ಪ್ರತಿಪಾದಿಸಿದ ಸರ್ವೋದಯತ್ವ, ನಳನ ಪಾತ್ರದ ಮೂಲಕ ಬಿತ್ತಿದ ಜೀವನ ಮೌಲ್ಯಗಳು ಇಂದು ಅನೇಕ ಕಾರಣಗಳಿಂದಾಗಿ ಕ್ಷೋಭೆಗೊಳಗಾಗಿರುವುದು ಒಂದು ಮಹಾ ವಿಪರ್ಯಾಸ. ಆದ್ದರಿಂದಲೇ ಇಲ್ಲಿನ ಸಂಶೋಧನೆಯು ಈ ನೆಲದ ಮಾನವನ ವಿಕಾಸದ ಮೂಲವನ್ನು ವಿಶ್ಲೇಷಿಸಿದೆ. ಇಲ್ಲಿನ ಪರಂಪರೆಯಲ್ಲಿ ಹಾಸುಹೊಕ್ಕಾಗಿರುವಂತೆ ಕಾಣುವ 'ಸರ್ವೋದಯ, ವಿಶ್ವಸಾಮರಸ್ಯ, ಹಾಗೂ ಪೂರ್ಣದೃಷ್ಟಿಯ ಜೀವನಮೌಲ್ಯ'ಗಳು ಮುಂದೆ ಆರ್ಯೀಕರಣದ ಪ್ರಭಾವಕ್ಕೊಳಗಾಗಿ ಉಂಟಾದ ಪರಿಣಾಮವನ್ನು ಅಧ್ಯಯನವು ಚಿಂತಿಸಿದೆ. ಈ ಎಲ್ಲದರ ಪ್ರೇರಣೆಯಿಂದಲೇ ಮೂಡಿ ಬಂದವರಂತೆ ಕಾಣುವ ಕನಕದಾಸರು; ಸಾರ್ವಕಾಲಿಕವಾದ 'ವಿಶ್ವಮಾನವತ್ವ'ವನ್ನು ತಮ್ಮಲ್ಲಿ ರೂಪಿಸಿಕೊಳ್ಳಲು ಅವರ ಮೇಲಾಗಿದ್ದ ಈ ಮಣ್ಣಿನ ಮೂಲಪರಂಪರೆಯ ನಿರಂತರ ಒಡನಾಟ ಮತ್ತು ಅನುಭವವೇ ಕಾರಣ ಎಂಬುದನ್ನು ಈ ಅಧ್ಯಯನ ನಿರೂಪಿಸಿದೆ.

ಕನಕದಾಸರನ್ನು ವಿಶೇಷವಾಗಿ ಅಧ್ಯಯನ ಮಾಡಲು ಹೊರಡುವವರಿಗೆ ಅಲ್ಲಿ ವಿಜಯನಗರ ಸಾಮ್ರಾಜ್ಯದ ಪರಿಚಯವೂ ಆಗುತ್ತಿರುತ್ತದೆ. ಅದರಲ್ಲೂ ಶ್ರೀ ಕೃಷ್ಣದೇವರಾಯ ಹಾಗೂ ಈ ಸಾಮ್ರಾಜ್ಯದ ಕಡೆಯ ದಿನಗಳ ಚಿತ್ರಣ ಕನಕನ ಮೂಲಕ ನಮ್ಮ ಕಣ್ಣಿಗೆ ಕಟ್ಟುತ್ತದೆ. ಒಂದು ಕಾಲಘಟ್ಟದವರೆಗೆ ಉತ್ಕೃಷ್ಟವಾಗಿ ಬೆಳೆದು ಶಾಂತಿ, ನೆಮ್ಮದಿಯೊಂದಿಗೆ ಮಾನವತೆಯಿಂದ ಮೆರೆದ ಈ ಸಾಮ್ರಾಜ್ಯ

ಅಷ್ಟೇ ವೇಗವಾಗಿ ತನ್ನ ಕಡೆಯ ದಿನಗಳನ್ನು ಎದುರಿಸಬೇಕಾಯಿತು. ಅಧರ್ಮ, ಅಶಾಂತಿ, ಸುಳ್ಳು, ಮೋಸ, ವಂಚನೆ, ಅತ್ಯಾಚಾರ, ಸೂಳೆಗಾರಿಕೆ, ಲೂಟಿ, ಅಸಹಿಷ್ಣತೆಗಳು ರಾಜ್ಯದಲ್ಲಿ ಮೇಳವಿಸ ತೊಡಗಿದವು. ಶ್ರಮಿಕವರ್ಗ, ತಳ ಸಮುದಾಯದವರೆನಿಸಿಕೊಂಡ ಜನಸಾಮಾನ್ಯರ ರಕ್ಷಣೆಯನ್ನು ರಾಜ ಕೇಳದಂತಾದನು. ವಿದೇಶಿ ಆಕ್ರಮಣದ ಜೊತೆಗೆ ರಾಜ್ಯದೊಳಗಿನ ಬಂಡುಕೋರರು ಆಡಳಿತವನ್ನು ನಾಶಗೊಳಿಸಿದರು. ಈ ಕಾರಣದಿಂದಾಗಿಯೇ ವಿಜಯನಗರದ ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪಲ್ಲಟಗಳ ಪರಿಣಾಮವೇ ಕನಕದಾಸರು ಎಂಬುದನ್ನು ಈ ಅಧ್ಯಯನದ ಮೂಲಕ ಪರಿಭಾವಿಸಲಾಗಿದೆ.

ಕನಕದಾಸರ ಮೇಲೆ ಪ್ರಭಾವ ಬೀರಿದಂತೆ ಕಾಣುವ, ವಚನ ಚಳುವಳಿ, ಭಕ್ತಿ ಚಳುವಳಿ, ಸೂಫಿಸಂತರು, ತತ್ವಪದಕಾರರು, ಹಾಗೂ ಹರಿದಾಸರ ಪರಂಪರೆಯನ್ನು ಕುರಿತು ಇಲ್ಲಿನ ಅಧ್ಯಯನದಲ್ಲಿ ಸೂಚ್ಯವಾಗಿ ಗಮನಿಸಲಾಗಿದೆ. ಈ ಎಲ್ಲಾ ಕಾಲಘಟ್ಟಗಳ ಅವಧಿಯಲ್ಲಿನ ಪಶುಪಾಲನಾ ಪರಂಪರೆಯ ಚಹರೆಗಳನ್ನೂ ಹಾಗೂ ಇದು ಬೀರಿರುವ ಪ್ರಭಾವವನ್ನು ಈ ಅಧ್ಯಯನ ಗಮನಿಸಿದೆ. ಜೊತೆಗೆ ಮುಂದಿನ 'ಕನಕಯುಗ'ದ ಮೇಲಾದ ಈ ಪರಂಪರೆಯ ಪರಿಣಾಮವೇನೆಂಬುದನ್ನು ಕಾಣಲೆತ್ನಿಸಿ; ಈ ಸಂಬಂಧ ಹೆಚ್ಚಿನ ಅಧ್ಯಯನಕ್ಕಿರುವ ಅವಕಾಶಗಳನ್ನು ಇಲ್ಲಿನ ಸಂಶೋಧನೆಯಿಂದ ಕಂಡುಕೊಳ್ಳಬಹುದಾಗಿದೆ.

ಇದೆಲ್ಲದರ ಜೊತೆಗೆ ಸಮಾಜದಲ್ಲಿ ಜಾತಿಗಳ ಹುಟ್ಟಿಗೆ; ಜನರು ಪರಂಪರಾಗತವಾಗಿ ನಿರ್ವಹಿಸಿಕೊಂಡು ಬಂದ ಕಸುಬುಗಳೇ ಮೂಲ ಕಾರಣ ಎನ್ನುವ ಹಿನ್ನೆಲೆಯಲ್ಲಿ ವಿವಿಧ ಕಸುಬು ಪ್ರೇರಿತ ಜಾತಿಗಳ ಸಮುದಾಯಗಳನ್ನು ಅವುಗಳ ಸ್ವರೂಪದೊಂದಿಗೆ ಚರ್ಚಿಸಿ, ಕಾಯಕ ಮೂಲದ ಜಾತಿಗಳು ಹುಟ್ಟಿಕೊಂಡಿರುವುದೇ ಪಶುಪಾಲನಾ ಪರಂಪರೆಯ ಒಡಲಿನಿಂದಲೇ ಎಂದು ಈ ಅಧ್ಯಯನ ನಿರೂಪಿಸಿದೆ. ಇಂತಹ 'ಮೂಲ ಪರಂಪರೆ'; ಇಲ್ಲಿನ ಧರ್ಮ, ಜಾತಿ, ಸಂಸ್ಕೃತಿ, ಸಂಪ್ರದಾಯ ಹಾಗೂ ಆಚರಣೆಗಳೊಂದಿಗೆ ಆಯಾ ಕಾಲಘಟ್ಟದ ಮಾನವನ ಬದುಕನ್ನು ಪ್ರತಿನಿಧಿಸುತ್ತಲೇ ಬಂದಿದೆ ಎಂಬುದನ್ನೂ ಕೂಡ ಈ ಸಂಶೋಧನೆ ಚರ್ಚಿಸಿದೆ.

ಹಾಗಾಗಿಯೇ ಕನಕಯುಗದ ಮಧ್ಯಕಾಲೀನ ಕಾಲಘಟ್ಟದ ಜನಸಾಮಾನ್ಯರ ಬದುಕಿನ ಜೊತೆಗೆ ಅವರ ಆರಾಧ್ಯ ದೈವಗಳಾದ ಬ್ರಹ್ಮ, ವಿಷ್ಣು, ಶಿವನ ನಡುವಿನ ಸಾಮರಸ್ಯವನ್ನು ಕೂಡ ಪಶುಪಾಲನೆಯ ನೆಲೆಯಲ್ಲಿಯೇ ನೋಡಲಾಗಿದೆ. ಇದಕ್ಕೆ ಪೂರಕವಾಗಿ 'ಶಂ.ಬಾ.' ಅವರ ಪಶುಪಾಲಕರ ಮೂಲ ಮತ್ತು ವಿಕಾಸವನ್ನು ಕುರಿತಿರುವ ಸಂಶೋಧನೆಗಳನ್ನೂ ಗಮನಿಸಲಾಗಿದೆ. ಕನಕದಾಸರ ಬದುಕು ಮತ್ತು

ಬರಹಗಳು ಕೂಡ ಈ ವಿಕಾಸ ಕ್ರಮದಿಂದಾಗಿಯೇ ರೂಪುಗೊಂಡಿರುವುದನ್ನು ಕಾಣಲೆತ್ನಿಸಲಾಗಿದೆ. ಹಾಗಾಗಿ ಅವರ ಜೀವನ, ಕಾವ್ಯ, ಕೀರ್ತನೆ, ಮುಂಡಿಗೆಗಳಲ್ಲಿ ಕಟ್ಟಿಕೊಡಲಾಗಿರುವ ಹಿನ್ನೆಲೆಗಳು(ವಸ್ತು) ಪಶುಪಾಲನಾ ಸಂಸ್ಕೃತಿ ಯಿಂದಲೇ ಪ್ರಭಾವಿತವಾಗಿರುವುದನ್ನು ಈ ಸಂಶೋಧನೆಯು ದಾಖಲಿಸಿದೆ. ಒಟ್ಟು ಕನಕದಾಸರು ಸೇರಿದಂತೆ ಇದುವರೆಗಿನ ಮಾನವನ ಪ್ರತಿ ಹೆಜ್ಜೆಯಲ್ಲೂ ಪಶುಪಾಲನಾ ಸಂಸ್ಕೃತಿಯ ಸಂಬಂಧ, ಪ್ರಭಾವ ಮತ್ತು ಪರಿಣಾಮದ ಫಲಿತವೇ ಎದ್ದುಕಾಣುತ್ತದೆ ಎಂಬುದನ್ನು ಈ ಸಂಶೋಧನೆ ನಿರೂಪಿಸಲೆತ್ನಿಸಿದೆ.

## ಅನುಬಂಧ-೧

## ಸಂದರ್ಶನ

ರಾಷ್ಟ್ರೀಯ ಸಂತ ಕವಿ ಕನಕದಾಸರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು, 'ಕನಕದಾಸರು ಮತ್ತು ಪಶುಪಲನಾ ಪರಂಪರೆ' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ೨೦೧೫-೧೬ನೇ ಸಾಲಿಗೆ ನನಗೆ ಫೆಲೋಶಿಪ್ ನೀಡಿದ್ದು, ಈ ಸಂಬಂಧ ಕನಕದಾಸರ ಜೀವನ ಮತ್ತು ಕೃತಿಗಳಲ್ಲಿ ಕಂಡು ಬರುವ ಪಶುಪಾಲನಾ ಪರಂಪರೆಯ ವಿವರಗಳನ್ನು ಶೋಧಿಸುವ ಅವಕಾಶ ನನಗೆ ದೊರೆಯಿತು. ಹಾಗಾಗಿ ಕನಕದಾಸರು ಹುಟ್ಟಿ ಬೆಳೆದು ತಿರುಗಾಡಿದ ಬಾಡ, ಕಾಗಿನೆಲೆ, ಮತ್ತು ಕುಮ್ಮೂರುಗಳಿಗೆ ಹೋಗಿ ಅಲ್ಲಿ ಇಂದಿನ ಸಂದರ್ಭದ ಜನಜೀವನ, ವೃತ್ತಿ, ಕುರಿತಂತೆ ಮತ್ತು ಅಲ್ಲಿನ ಜನ, ಕನಕದಾಸರ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲವುಂಟಾಗಿ, ಆ ಭಾಗಕ್ಕೆ ಹೋಗಿ, ವೀಕ್ಷಿಸಿ ಅಲ್ಲಿನ ಜನರನ್ನು ಸಂದರ್ಶಿಸಿ ಬಂದದ್ದರ ಪರಿಣಾಮವೂ ನನ್ನ ಅಧ್ಯಯನದ ಮೇಲಾಗಿದೆ. ಹಾಗಾಗಿ ಅಲ್ಲಿನ ಆಯ್ದ ಒಂದು ಸಂದರ್ಶನದ ತುಣುಕನ್ನು ಇಲ್ಲಿ ನೀಡಲಾಗಿದೆ. ಬಾಡ ಗ್ರಾಮದ ಈಗಿನ ನಿವಾಸಿ 'ಶ್ರೀ ವೆಂಕಪ್ಪ ಶಂಕರಪ್ಪ ಇಳಿಗೆ'ಯವರನ್ನು ಕಂಡು ಕನಕದಾಸರನ್ನು ಕುರಿತಂತೆ ಮಾತಿಗೆಳೆದಾಗ,

೧. ***ಕನಕದಾಸರು ತಿರುಗಾಡಿದ ಭೂಮಿ ಇದು. ಇದರಲ್ಲಿ ಒಂದು ಪಾವಿತ್ರ್ಯತೆ ಇದೆ ಅಂತ ನನಗೆ ಅನ್ನಿಸ್ತಾ ಇದೆ. ನೀವು ಇಲ್ಲಿನವರೇ, ನಿಮಗೂ ಈ ಅನುಭವವಾಗಿದೆಯಾ? ಕನಕದಾಸರ ಬಗ್ಗೆ ನೀವು ಏನು ಹೇಳಲು ಇಷ್ಟಪಡುತ್ತೀರಿ?***

ಕನಕದಾಸರು ಇದ್ರು ಅನ್ನೋದು, ಇಲ್ಲೆಲ್ಲಾ ತಿರುಗಾಡಿದ್ರು ಅನ್ನೋದು, ಇಲ್ಲಿ ಹೊಸದಾಗಿ ಕಟ್ಟಿರೋ ಅರಮನೆ, ಹಳೆ ಅರಮನೆ ಇರೋ ಜಾಗ, ನಿಮ್ಮಂತೋರು ಆಗಾಗ್ಗೆ ಇಲ್ಲಿಗೆ ಬಂದು ನೋಡ್ಕೊಂಡು ಹೋಗೊದ್ನ ನೋಡ್ತಾ ಇದ್ರೆ, ಕನಕದಾಸ್ರು ಇಲ್ಲಿ ಇದ್ರು ಅಂತ ಅನ್ಸುತ್ತೈತ್ರಿ. ಸರ್ಕಾರ್ದೋರು ಬಾಡ ಗ್ರಾಮನ ಲೋಕಕ್ಕೆ ಗೊತ್ತಾಗಂಗೆ ಮಾಡವ್ರಿ. ಕನಕದಾಸರ ಅರಮನೆ ಇದ್ದದ್ದು ಹಳೇ ಬಾಡಾದಾಗ್ರಿ. ಈಗ ನಾವಿರೋದು ಇಲ್ಲಿ. ಇಲ್ಲಿಂದ ಹಳೆ ಅರಮನೆ ಅರ್ಧಮೈಲಿ ಹಾಗ್ತೈತ್ರಿ. ಈಗ ಕನಕದಾಸರ ವಂಶಸ್ಥರು ಇಲ್ಲಿ ಯಾರೂ ಇಲ್ರಿ. ಕನಕದಾಸ್ರನ್ನು ಕುರುಬ್ರು, ನಾಯಕ್ರು, ಅಂತ ಎಲ್ರೂ ಹೇಳ್ತಾರ್ರಿ. ಆದರ ಅವರ ಜಾತಿ ಬಗ್ಗೆ ನನ್ಗೆ ಏನೂ ತಿಳಿದಿಲ್ರಿ.

೨. ***ಕನಕದಾಸರನ್ನು ಕುರಿತು ನಿಮ್ಮ ಅಜ್ಜ ಅಜ್ಜಿ, ತಂದೆ ತಾಯಿ ಏನಾದ್ರೂ ಹೇಳ್ತಾ ಇದ್ರ?***

ಹೇಳ್ತಾ ಇದ್ರುರೀ. ನಮ್ಮ ಅಜ್ಜ ಈಗಿರುವ ಹಳೆ ಅರಮನೆ ಜಾಗದಲ್ಲಿ ಬ್ಯಾಸಾಯ ಮಾಡುವಾಗ, ಮಣ್ಣು ತೆಗೆಯುವಾಗ, ಮಡಿಕೆ ಚೂರು, ಒಡವಿ ಚೂರು, ಕಲ್ಲು, ರುಬ್ಬುವ ಗುಂಡು, ದೇವರ ಸಣ್ಣ ಸಣ್ಣ ಮೂರ್ತಿಗಳು ಸಿಕ್ಕಿದ್ವು, ಅಂತ ಹೇಳ್ತಾ ಇದ್ರು. ಆಗೆಲ್ಲಾ ಬಾಡ ಇಷ್ಟೊಂದು ಮುಂದುವರೆದಿರಲಿಲ್ರಿ. ನಾವು ಚಿಕ್ಕೋರಿದ್ವಿ, ಈಗ ಹದ್ನೈದು ವರ್ಷದ ಈಚೆಗೆ ನಮ್ಮ ಶಾಸಕ್ರು, ಸರ್ಕಾರ ಇಲ್ಲಿ ತುಂಬ ಬೆಳವಣಿಗೆ ಮಾಡವ್ರಿ.

**೩. ಈಗ ನೀವು ಯಾವ ವೃತ್ತಿ ಮಾಡ್ತೀರಿ? ನಿಮಗೆ ಜಮೀನು ಏನಾದ್ರು ಇದೆಯಾ? ಇಲ್ಲಿ ದನ, ಕುರಿ, ಹಸು, ಎಮ್ಮೆ, ಸಾಕೋರು ಇದ್ದಾರ?**

ಇತ್ತೀಚೆಗೆ ಕುರಿ. ದನ, ಸಾಕೋರು ತುಂಬಾ ಕಡಿಮೆ ಹಾಗವ್ರಿ. ಎಲ್ಲಾ ಜನ ಪ್ಯಾಟೆ ಕಡೆ ಹೋಗವ್ರಿ. ನನ್ಗೆ ಮೂರು ಎಕ್ರೆ ಜಮೀನ್ನೈತಿ. ಜ್ವಾಳಾ ಹಾಕಿವ್ನಿ, ಮಳೆ ಬರಾಂಗಿಲ್ರಿ, ಮಕ್ಳು ಕಲಿಯಾಕೆ ಹೋಗ್ತಾರ್ರೀ,

ಊರ್ನಾಗೆ ಹೆಚ್ಚಾಗಿ ಬ್ಯಾಸಾಯ ಮಾಡಾಕಿಲ್ರಿ. ನನ್ನ ಈ ಮಾತು ಇದೆಲ್ಲಾ ಟೀವ್ಯಾಗೆ ಬರುತ್ತೇನ್ರೀ?

**೪. ಇದು ಟಿವೀಲೆಲ್ಲಾ ಬರಲ್ಲಾ. ಪುಸ್ತಕದಲ್ಲಿ ಬರೀತೀವಿ, ನಿಮ್ಮ ಹೆಸರನ್ನೂ ಹಾಕ್ತೀವಿ. ನಿಮ್ಮ ಊರಲ್ಲಿ ಕನಕಪ್ಪನ ಜಾತ್ರೆ ಮಾಡ್ತೀವಿ ಅಂತಾರಲ್ಲಾ, ಯಾವಾಗ ಅದು? ಹೇಗೆ ಇರುತ್ತೆ?**

ವರ್ಷಕ್ಕೊಂದು ಪಟ ಕನಕಪ್ಪನ ಜಾತ್ರೆ ಮಾಡ್ತೀವಿ. ಅದು ಕನಕ ಜಯಂತಿ ಬರೋವರೆಗೆ. ಆಗ ಬಾಳ ಜೋರ್ ಇರುತ್ರೀ. ಕನಕಪ್ಪನ ತೇರು ನಡೆಯುತ್ತೆ, ಎರಡು ದಿನ ಜಾತ್ರೆ ಇರುತ್ರಿ.

**೫. ಮಲ್ಲನಾಯ್ಕನ ಬಗ್ಗೆ, ಕುಮ್ಮೂರು, ಕಾಗಿನೆಲೆ ಬಗ್ಗೆ ಏನಾದರೂ ಗೊತ್ತಿದೆಯಾ ನಿಮಗೆ?**

ಇಲ್ಲೇ ಆರು ಮೈಲಿ ಆಚೆಗೆ ಮಲ್ಲನಾಯ್ಕನ ಹಳ್ಳಿ ಇದೆ. ಕಾಗಿನೆಲೆಯಲ್ಲಿ ಕನಕಪ್ಪನ ಸಮಾಧಿ ಐತ್ರಿ. ಮಠ ಚೆನ್ನಾಗದೆ, ಗುರುಗಳು ಇಲ್ಲಿಗೂ ಬಂದು ಹೋಗ್ತಾರೆ. ಕುಮ್ಮೂರು ನನಗೆ ಹೆಚ್ಗೆ ಗೊತ್ತಿಲ್ರಿ.

**೬. ಜಾತ್ರೆ ಅಂದ್ರಲ್ಲ, ಅಲ್ಲಿ ಡೊಳ್ಳು ಬಡಿಯೋದು ಇರುತ್ತಾ?**

ಹೌದ್ರಿ ಬಂಕಾಪುರದಿಂದ ಡೊಳ್ಳು ಬಡಿಯೋರು ಬರ್ತಾರ್ರಿ, ವೀರಗಾಸೆ ಇರುತ್ರಿ, ಕನಕಪ್ಪನ ರಥ ಎಳಿತೀವ್ರಿ.

**೭. ಕನಕದಾಸರು ಉಡುಪಿಗೂ ಹೋಗಿದ್ರಂತೆ?**

ಹೌದ್ರಿ.

**೮. ಕನಕದಾಸರನ್ನ ಕುರಿತಂತೆ ಇವತ್ತಿನ ಸಮಾಜಕ್ಕೆ ನೀವು ಏನು ಹೇಳ್ಳಿಕ್ಕೆ ಬಯಸುತ್ತೀರಿ?**

ಕನಕದಾಸರನ್ನು ನಾವಂತು ನೋಡಿಲ್ಲ. ಆದ್ರೆ ಜನಕ್ಕೆ ಅವರ ಬಗ್ಗೆ ತುಂಬಾ ಅಭಿಮಾನ ಐತ್ರಿ. ಅವರಂತೆ

ನಾವು ಬಾಳ್ಬೇಕ್ರಿ .

ಧನ್ಯವಾದಗಳು ವೆಂಕಪ್ನೋರೆ,

ನಮಸ್ಕಾರ್ರಿ.

# ಅನುಬಂಧ-೨

## ಛಾಯಾ ಚಿತ್ರಗಳು

೧.




೨.



೩.



೪.



೫.




೬.



೭.




೮.




೯.



೧೦.



೧. ಬಾಡ ಗ್ರಾಮದ ನಿವಾಸಿಗಳಾದ ಶ್ರೀ ನರಸಿಂಹಪ್ಪ ಮತ್ತು ಶಾಂತಯ್ಯ ಅವರೊಂದಿಗೆ ಸಂಶೋಧಕರು

೨. ಈಗಿನ ಕನಕನ ಕಲ್ಪಿತ ಅರಮನೆಯಲ್ಲಿರುವ ಕನಕನ ಪ್ರತಿಮೆ.

೩. ಆದಿಕೇಶವನ ಗುಡಿಯಲ್ಲಿರುವ ಕನಕದಾಸರು ಬಳಸುತ್ತಿದ್ದ ಶಂಖ ಮತ್ತು ಅರವಿ.

೪. ಕನಕದಾಸರ ಅರಮನೆಯ ಅವಶೇಷ.

೫. ಬಾಡಾದ ಈಗಿನ ಅರಮನೆಗೆ ಇರುವ ದಾರಿ.

೬. ಹಳೆಯ ಅರಮನೆಯ ಜಾಗದಲ್ಲಿ ನಿರ್ಮಿಸಲಾಗಿರುವ ಕನಕ ಮಂಟಪ.

೭. ಬಾಡಾದಲ್ಲಿ ಈಗ ಸರ್ಕಾರ ನಿರ್ಮಿಸಿರುವ ಅರಮನೆ.

೮. ಕನಕದಾಸರು ಪೂಜಿಸಿದ ಕಾಗಿನೆಲೆಯ ಆದಿಕೇಶವಮೂರ್ತಿ.

೯. ಆದಿಕೇಶವ ಮೂರ್ತಿ ಇರುವ ದೇವಾಲಯ.

೧೦. ಬಾಡ ಗ್ರಾಮದ ನಿವಾಸಿ'ಶ್ರೀ ವೆಂಕಪ್ಪ ಶಂಕರಪ್ಪ ಇಳಿಗೆ'ಹಾಗೂ ಸಾರ್ವಜನಿಕರೊಂದಿಗೆ ಸಂಶೋಧಕರು.

# ಗ್ರಂಥಸೂಚಿ


೧. ಎನ್.ಎಂ. ಅಂಬಲಿಯವರ್ : ನಳಚರಿತ್ರೆ ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ-೧೯೫೫

೨. ಅರವಿಂದ ಮಾಲಗತ್ತಿ : ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್‌ಹೌಸ್, ಮೈಸೂರು, ಪ್ರ-೧೯೯೯

೩. ಡಾ. ಜಿ.ವಿ.ಆನಂದ ಮೂರ್ತಿ : ಹಲವು ತೋಟದ ಹೂವುಗಳು ಡಾ. ಕಾಳೇಗೌಡ ನಾಗವಾರ ತತ್ವ ಪದ ಸಂಕಲನ, ಬೆಂಗಳೂರು.

೪. ಡಾ. ಎಸ್. ಎಸ್. ಅಂಗಡಿ : ಕುರುಬರ ಸಮುದಾಯ ಭಾಷೆ ಆನಂದ ಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ಪ್ರ-೦೯

೫. ಡಾ. ಅರಳುಮಲ್ಲಿಗೆ ಪಾರ್ಥಸಾರಥಿ : ಕನಕದಾಸರು. ಸ್ನೇಹ ಬುಕ್ ಹೌಸ್, ಜೆ.ಪಿ.ನಗರ ಬೆಂಗಳೂರು, ಪ್ರ-೨೦೧೫

೬. ಎಲ್ಲೆಸ್ಕೆ : ಮೋಹನ ತರಂಗಿಣಿ. ವಿದ್ಯಾನಿಧಿ ಪ್ರಕಾಶನ ಗದಗ, ಪ್ರ-೧೯೬೪

೭. ಕಟ್ಟಿಶೇಷಾಚಾರ್ಯ : ಕವಿ ಕನಕದಾಸರು ಬೆಳಗಾವಿ, ಪ್ರ-೧೯೩೮

೮. ಕೀರ್ತಿನಾಥ ಕುರ್ತಕೋಟಿ : ಕನ್ನಡ ಸಾಹಿತ್ಯ ಸಂಗಾತಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಪ್ರಸಾರಾಂಗ, ಹಂಪಿ,ಪ್ರ–೧೯೯೭

೯. ಕನಕ ಸ್ಫೂರ್ತಿ(ಪತ್ರಿಕೆ) : ಕಾಗಿನೆಲೆ ಮಹಾಪೀಠ, ಕಾಗಿನೆಲೆ

೧೦. ರೆ. ಎಫ್. ಕಿಟೆಲ್ : ಕನ್ನಡ–ಇಂಗ್ಲೀಷ್ ನಿಘಂಟು ಪ್ರ–೧೮೯೪

೧೧. ಕಣಜನಹಳ್ಳಿ ನಾಗರಾಜ : ಅಜ್ಞಾತ ಅವಧೂತರು ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ಪ್ರ–೨೦೦೪

೧೨. ಗೋಪಾಲ ಕೃಷ್ಣಯ್ಯ ಕೆ.ಎಲ್. : ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ ಕನ್ನಡಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು, ಪ್ರ–೧೯೯೪

೧೩. ನಾ. ಗೀತಾಚಾರ್ಯ : ಹರಿದಾಸ ಸಾಹಿತ್ಯದ ಮೂರು ದಾರಿಗಳು ಬಸವನಗುಡಿ, ಬೆಂಗಳೂರು, ಪ್ರ–೨೦೦೪

೧೪. ಕಾ.ತ. ಚಿಕ್ಕಣ್ಣ(ಸಂ) : ಕನಕ ಕಿರಣ ಕಾಳಿದಾಸ ಸಾಂಸ್ಕೃತಿಕ ಸಂಘ, ವಿಜಯನಗರ, ಬೆಂಗಳೂರು, ಪ್ರ–೧೯೮೨

೧೫. ಚಂದ್ರಕಾಂತ ಬಿಜ್ಜರಗಿ : ಕುರುಬರ ಹೆಜ್ಜೆಗಳು ಶೈಲಚಂದ್ರ ಪ್ರಕಾಶನ ವಿಜಾಪುರ, ಪ್ರ– ೨೦೦೬

೧೬. ಚೆಲುವರಾಜು, : ಜುಂಜಪ್ಪ ಬುಡಕಟ್ಟು ಮಹಾ ಕಾವ್ಯ ಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಎಂ.ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಜಕಬಾಳ ಎಸ್.ಎಫ್. : ಕನಕದಾಸರು, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, ಪ್ರ–೨೦೦೦

೧೯. ಡಾ.ಎಸ್.ಎಸ್. ಜಕಬಾಳ : ಕುರುಬರ ರಟ್ಟಮತಶಾಸ್ತ್ರ ವಿದ್ಯಾನಿಧಿ ಪ್ರಕಾಶನ, ಗದಗ, ಪ್ರ–೨೦೦೪

೨೦. ಜಿ.ವಿ.ಶಾಸ್ತ್ರಿ. : ಬಸವಣ್ಣನವರ ವಚನಗಳು ಪಾರು ಪ್ರಕಾಶನ, ಗದಗ, ಪ್ರ–೨೦೧೩

೨೧. ದೇ.ಜವರೇಗೌಡರು(ಸಂ) : ಕನಕ ಸಾಹಿತ್ಯ ದರ್ಶನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,

೨೨. ಡಾ. ದೇ.ಜವರೇಗೌಡರು : ಕನಕಾವಲೋಕನ ಕನ್ನಡ ಸಂಸ್ಕೃತಿ ಇಲಾಖೆ. ಕನ್ನಡ ಭವನ. ಬೆಂಗಳೂರು. ಪ್ರ– ೧೯೯೯

೨೩. ಡಾ.ದೇ. ಜವರೇಗೌಡ : ಕುಲಪತಿಯ ಭಾಷಣಗಳು, ಸಂಪುಟ–೧ ಸುರುಚಿ ಪ್ರಕಾಶನ ಮೈಸೂರು. ಬೆಂಗಳೂರು, ಪ್ರ–೧೯೯೦

೨೪. ಡಿ. ಜವರೇಗೌಡ : ರಾಮಧಾನ್ಯ ಚರಿತೆ.
ಡಿ.ವಿ.ಕೆ. ಮೂರ್ತಿ ಪ್ರಕಾಶನ,
ಮೈಸೂರು, ಪ್ರ–೧೯೭೯

೨೫. ನಾಗರತ್ನ. ಟಿ.ಎನ್. : ಕನಕದಾಸರು, ಭಾರತೀಯ
ಸಾಹಿತ್ಯ ನಿರ್ಮಾಪಕರು
ಕೇಂದ್ರಸಾಹಿತ್ಯಅಕ್ಯಾಡಮಿ,
ನವದೆಹಲಿ, ಪ್ರ–೨೦೦೦

೨೬. ನಾಗರಾಜ ಕಿ.ರಂ : ಕಾಲಜ್ಞಾನಿ ಕನಕ, (ನಾಟಕ),
ರಂಗ ನಿರಂತರ ಪ್ರಕಾಶನ,
ಬೆಂಗಳೂರು, ಪ್ರ–೧೯೮೮

೨೭. ನಾರಾಯಣ ಕೆ.ವಿ. : ಬೇರು ಕಾಂಡ ಚಿಗುರು,
ವಿವೇಕ ಪ್ರಕಾಶನ,
ಬೆಂಗಳೂರು, ಪ್ರ–೧೯೯೨

೨೮. ನಾಗರಾಜಪ್ಪ ಕೆ.ಜಿ. : ಮರುಚಿಂತನೆ, ಪ್ರಣತಿ ಪ್ರಕಾಶನ,
ಬೆಂಗಳೂರು, ಪ್ರ–೧೯೮೫

೨೯. ನಾಗಭೂಷಣಸ್ವಾಮಿ ಓ.ಎಲ್. : ಇಂದಿನ ಹೆಜ್ಜೆ, ಅಕ್ಷರ ಪ್ರಕಾಶನ,
ಹೆಗ್ಗೋಡು, ಸಾಗರ,
ಪ್ರ–೧೯೯೯

೩೦. ನಾಗರಾಜ ಡಿ.ಆರ್ : ಅಲ್ಲಮ ಪ್ರಭು ಮತ್ತು ಶೈವ
ಪ್ರತಿಭೆ ಅಕ್ಷರ ಪ್ರಕಾಶನ,
ಹೆಗ್ಗೋಡು, ಸಾಗರ,
ಪ್ರ–೧೯೯೯

೩೧. ಡಾ. ಡಿ.ಆರ್. ನಾಗರಾಜ್ : ಸಾಹಿತ್ಯ ಕಥನ. ಅಕ್ಷರ ಪ್ರಕಾಶನ
ಹೆಗ್ಗೋಡು, ಪ್ರ–೧೯೯೯

೩೨. ಬ.ವ. ನಾಯ್ಕರ : ಹಾಲುಮತಸ್ಥರು. ವಿದ್ಯಾನಿಧಿ ಪ್ರಕಾಶನ ಗದಗ, ಪ್ರ-೨೦೦೮

೩೩. ನಿಂಗಣ್ಣ ಸಣ್ಣಕ್ಕಿ : ವಿಶ್ವ ಮಾನವ ಕನಕದಾಸರು ವಿದ್ಯಾನಧಿ ಪ್ರಕಾಶನ, ಗದಗ.

೩೪. ದೇವಿಪ್ರಕಾಶ್ ಚಟ್ಟೋಪಾಧ್ಯಾಯ : ಲೋಕಾಯತ(ಅನು). ನವಕರ್ನಾಟಕ ಪ್ರಕಾಶನ ಬೆಂಗಳೂರು, ಪ್ರ೨೦೧೦

೩೫. ದೈವಜ್ಞ ಗಂಗಾಧರ : ಮಾಳಿಂಗರಾಯನ ಕಾವ್ಯ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ದಂಡೆ ವೀರಣ್ಣ : ಜನಪದ ಹಾಲುಮತ ಮಹಾಕಾವ್ಯ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ,

೩೭. ಪಂಚಮುಖಿ ಆರ್.ಎಸ್. : ಕರ್ನಾಟಕ ಹರಿದಾಸ ಸಾಹಿತ್ಯ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ. ಬೆಂ-ಪ್ರ-೧೯೫೨

೩೮. ಪ್ರಕಾಶ ಹೆಚ್.ಎಸ್ : ಮೊದಲ ಕಟ್ಟಿನ ಗದ್ಯ, ಅಭಿನವ ಪ್ರಕಾಶನ ಬೆಂಗಳೂರು, ಪ್ರ-೧೯೯೫

೩೯. ಪಾಲಾಕ್ಷ : ಕರ್ನಾಟಕ ಇತಿಹಾಸ, ಪ್ರ-೨೦೦೦

೪೦. ಫಕೀರ್ ಮುಹಮ್ಮದ್ ಕಟ್ಪಾಡಿ : ಸೂಫಿ ಸಂತರು. ಅಂಕಿತ ಪ್ರಕಾಶನ, ಬಸವನ ಗುಡಿ. ಬೆಂ-ಪ್ರ-೨೦೧೦

೪೧. ಭಗವತಿ.ಎಸ್. ಮೇಲಿನ ಮನಿ : ಕನಕದಾಸ, ಒಂದು ಸಾಂಸ್ಕೃತಿಕ ಅಧ್ಯಯನ ವಿಧ್ಯಾನಿಧಿ ಪ್ರಕಾಶನ, ಗದಗ, ಪ್ರ–೨೦೦೨

೪೨. ಬೆಟಗೇರಿ ಕೃಷ್ಣಶರ್ಮ : ಕನಕದಾಸರ ಭಕ್ತಿಗೀತೆಗಳು ಬೆಂಗೇರಿ ಹುಚ್ಚರಾವ್ ಧಾರವಾಡ, ಪ್ರ–೧೯೬೫

೪೩. ಡಾ ಬಸವರಾಜ ಕಲ್ಗುಡಿ : ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡಭವನ,ಬೆಂ–ಪ್ರ–೨೦೦೧

೪೪. ಡಾ. ಬಂಜಗೆರೆ ಜಯಪ್ರಕಾಶ್(ಸಂ) : ಕನಕ–ಮರುದರ್ಶನ– ಬೆಂಗಳೂರು, ಪ್ರ–೨೦೧೫ ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಕೇಂದ್ರ

೪೫. ಬಸವರಾಜ ನಾಯ್ಕರ್ : ಶ್ರೀ ಕನಕದಾಸರು, ನವದೆಹಲಿ, ೨೦೦೬ ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ, ಗ್ರೀನ್ ಪಾರ್ಕ್,

೪೬. ದ.ರಾ. ಬೇಂದ್ರೆ : ಕನಕದಾಸ ಚತುಶ್ಯತಮಾನೋತ್ಸವ ಸಂಸ್ಮರಣ ಸಂಪುಟ, ಹುಬ್ಬಳ್ಳಿ, ಪ್ರ–೧೯೬೫

೪೭. ಹಿ.ಚಿ. ಬೋರಲಿಂಗಯ್ಯ : ಮಂಟೆಸ್ವಾಮಿ ಕಾವ್ಯ ಬುಡಕಟ್ಟು ಮಹಾಕಾವ್ಯ ಮಾಲೆ, ಪ್ರಸಾರಾಂಗ, ಹಂಪಿ

೪೮. ಭಗವತ್ ಶರಣ ಉಪಾಧ್ಯಾಯ : ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ ನವಕರ್ನಾಟಕ ಪ್ರಕಾಶನ ಬೆಂಗಳೂರು,

೪೯. ವೇ. ಬಸವಯ್ಯಶಾಸ್ತ್ರಿಗಳು : ಕುರುಬರ ರಟ್ಟಮತ ಶಾಸ್ತ್ರ, ಶಾಬಾದಿಮಠ ಗದಗ

೫೦. ಮಲ್ಲೇಪುರಂ.ಜಿ. ವೆಂಕಟೇಶ್ : ಸಾಹಿತ್ಯ ಮತ್ತು ಪುರಾಣ, ಬೆಂ-೧೯೯೩ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ,

೫೧. ಮಣಿಪಾಲ ಆರ್ಕೆ : ಲೋಕ ಗ್ರಹಿಕೆ ಮತ್ತು ಅಭಿವ್ಯಕ್ತಿ ಸಂಕ್ರಮಣ ಪ್ರಕಾಶನ, ಧಾರವಾಡ, ಪ್ರ-೧೯೯೫

೫೨. ಮುರುಳೀಧರ ಹೆಚ್.ಎನ್. : ತಂಬೂರಿ ಮೀಟಿದವ ಅಂಕಿತ ಪ್ರಕಾಶನ, ಬೆಂಗಳೂರು-೨೦೦೫

೫೩.ರಂ. ಶಿ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಏಜೆನ್ಸೀಸ್, ಮೈಸೂರು.

೫೪. ಡಾ. ರಂ.ಶ್ರೀ. ಮುಗಳಿ : ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು ಹೇಮಂತ ಸಾಹಿತ್ಯ, ರಾಜಾಜಿನಗರ, ಬೆಂ.ಪ್ರ-೧೯೭೩

೫೫. ಡಾ. ಸಾ.ಶಿ. ಮರುಳಯ್ಯ(ಸಂ) : ಕನಕದಾಸರ ಕಾವ್ಯ ಭಾಗ-೧ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ಪ್ರ..೧೯೯೧

೫೬. ಮಂಜುನಾಥ ಬೇವಿನಕಟ್ಟೆ : ಮೈಲಾರಲಿಂಗನ ಮಹಾಕಾವ್ಯ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೭. ಡಾ. ಪಿ. ಮಹದೇವಯ್ಯ : ಶಂ.ಬಾ. ಜೋಶಿ ಚಿಂತನೆಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ–೨೦೧೫

೫೮. ಡಾ. ಮುರಿಗೆಪ್ಪ : ಕೃಷ್ಣದೇವರಾಯನ ಆಯ್ದ ಲೇಖನ ಸಂಪುಟ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರ–೨೦೦೮

೫೯. ಮೊಗಳ್ಳಿ ಗಣೇಶ : ದಲಿತ ಚಿಂತನೆ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ–೨೦೦೨

೬೦. ರಾಮಚಂದ್ರರಾವ್ .ಎಸ್.ಕೆ. : ದಾಸ ಸಾಹಿತ್ಯ ಮತ್ತು ಸಂಸ್ಕೃತಿ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂ.ಪ್ರ–೨೦೦೩

೬೧. ಡಾ.ರಹಮತ್ ತರೀಕೆರೆ : ಕರ್ನಾಟಕ ಸೂಫಿಗಳು ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.ಪ್ರ–೯೮

೬೨. ಡಾ.ರಹಮತ್ ತರೀಕೆರೆ : ಕರ್ನಾಟಕ ನಾಥ ಪಂಥ. ಪ್ರ–೨೦೦೬ ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೬೩. ಡಾ. ರಹಮತ್ ತರೀಕೆರೆ : ಸಾಂಸ್ಕೃತಿಕ ಅಧ್ಯಯನ ಕರ್ನಾಟಕ ಸಾಹಿತ್ಯ ಅಕಾಡಮಿ, ಬೆ.ಪ್ರ–೨೦೦೪.

೬೪. ಡಾ. ರಹಮತ್ ತರೀಕೆರೆ : ಪ್ರತಿ ಸಂಸ್ಕೃತಿ, ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಬೆಂ.ಪ್ರ–೧೯೯೨

೬೫. ರಾಜಶೇಖರ. ಜಿ. : ಬಿಜಾಪುರದ ಸೂಫಿಗಳು. ಬೆಂ. ಪ್ರ–೧೯೮೮ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ.

೬೬. ರಂಗನಾಥಶರ್ಮ. ಎನ್. : ಕನಕದಾಸರ ಹರಿಭಕ್ತಿ ಸಾರ, ಬೆಂ.ಪ್ರ–೧೯೬೨ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ

೬೭. ಡಾ. ರಹಮತ್ ತರೀಕೆರೆ : ಕನ್ನಡ ಸಂಶೋಧನೆ ತಾತ್ವಿಕ ವಿಚಾರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರ–೨೦೦೭

೬೮. ಎಸ್.ಕೆ. ರಾಮಚಂದ್ರರಾವ್. : ತಿರುಪತಿ ತಿಮ್ಮಪ್ಪ ಪ್ರಕಟಣೆ–೧೯೮೦

೬೯. ರಾನಡೆ ಆರ್.ಡಿ. : ಕನ್ನಡ ಸಂತರ ಪರಮಾರ್ಥ ಪಥ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ಪ್ರ–೧೯೭೩

೭೦. ರಾಮಚಂದ್ರ ಚಿಂತಾಮಣಿ ಡೇರೆ : ಶ್ರೀವಿಠಲ ಒಂದು ಮಹಾ ಸಮನ್ವಯ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಪ್ರ-೨೦೧೧

೭೧. ಡಾ. ಬಿ.ಕೆ.ರವಿ(ಅನು) : ಭಾರತದ ಕುರುಬರು ಪ್ರ-೨೦೦೫

೭೨. ಡಾ. ಎಂ.ಎನ್. ವೆಂಕಟೇಶ, : ಮೈಲಾರ ಜಾತ್ರೆಗಳು, ಪ್ರಕಟಣೆ-೧೯೯೮.

೭೩. ವೆಂಕಟಸುಬ್ಬಯ್ಯ ಸೀತಾರಾಮಯ್ಯ : ದಾಸ ಸಾಹಿತ್ಯ. ಐ.ಬಿ.ಹೆಚ್. ಪ್ರಕಾಶನ, ಗಾಂಧಿನಗರ. ಬೆಂ.ಪ್ರ-೨೦೦೦

೭೪. ವೆಂಕಟೇಶ್ ಮೂರ್ತಿ ಹೆಚ್.ಎಸ್. : ಕೀರ್ತನಕಾರರು, ಪ್ರಸಾರಾಂಗ, ಬೆಂಗಳೂರು ವಿಶ್ವ ವಿದ್ಯಾಲಯ, ಪ್ರ-೧೯೭೫

೭೫. ವೆಂಕಟೇಶ ಇಂದ್ವಾಡಿ : ಮಂಟೇಸ್ವಾಮಿ ಪರಂಪರೆ ಮತ್ತು ಮಂಟೆಸ್ವಾಮಿ ಕಾವ್ಯ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರ-೧೯೯೯

೭೬. ಶಿವರುದ್ರಪ್ಪ : ಬೆಡಗು(ವಿಚಾರ-ವಿಮರ್ಶೆ) ಸುವಿದ್ಯಾ ಪ್ರಕಾಶನ, ಬಸವನಗುಡಿ, ಬೆಂಗಳೂರು, ಪ್ರ-೧೯೮೯

೭೭. ಶಂಕರನಾರಾಯಣ ಭಟ್ಟಹಾತೂರು : ಕನಕದಾಸರ ನಳಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, (ಸಂ) ಚಾಮರಾಜಪೇಟೆ. ಬೆಂ, ಪ್ರ-೨೦೦೪

೭೮. ಶ್ರೀಧರ ಹೆಚ್.ಜಿ. : ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ (ಕ್ರಿ.ಶ.೪೫೦ ರಿಂದ ೧೩೬೦) ಶಿವರಾಮಕಾರಂತ ಅಧ್ಯಯನ ಕೇಂದ್ರ, ಪುತ್ತೂರು. ಪ್ರ-೨೦೦೨

೭೯. ಡಾ. ಬಿ. ಶಿವರಾಮಶೆಟ್ಟಿ : ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ ಕನಕದಾಸರ ಅಧ್ಯಯನ ಪೀಠ, ಮಂಗಳೂರು ವಿ.ವಿ. ಪ್ರ-೨೦೧೩

೮೦. ಡಾ. ಬಿ.ಶಿವರಾಮಶೆಟ್ಟಿ : ಕನಕ ಚಿಂತನ. ಮಂಗಳೂರು ವಿ.ವಿ. ಮಂಗಳೂರು, ಪ್ರ-೨೦೦೯

೮೧. ಶಿವಪ್ರಕಾಶ್ ಹೆಚ್.ಎಸ್. : ಮೊದಲ ಕಟ್ಟಿನ ಗದ್ಯ, ಅಭಿನವ ಪ್ರಕಾಶನ, ಬೆಂಗಳೂರು, ಪ್ರ-೧೯೯೫

೮೨. ಶಂ.ಬಾ. ಜೋಶಿ : ಕೃತಿ ಸಂಪುಟ, ೧,೨,೩,೪,೫,೬,

೮೩. ಡಾ. ಶ್ರೀರಾಮ ಅಚನೂರ : ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ ಗಗನ ಪ್ರಕಾಶನ,ಶಿರೂರ, ಪ್ರ-೨೦೧೨

೮೪. ಸಿದ್ಧರಾಮಯ್ಯ ಎಸ್.ಜಿ. : ನಿಶ್ಯಬ್ಧದ ಜಾಡು, ಸುಮುಖ ಪ್ರಕಾಶನ ಬೆಂಗಳೂರು, ಪ್ರ-೨೦೦೫

೮೫. ಪ್ರೊ. ಸುಧಾಕರ (ಸಂ) : ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು ಕನ್ನಡ ಸಂಸ್ಕೃತಿ ಇಲಾಖೆ. ಕನ್ನಡ ಭವನ ಬೆಂ.೧೯೯೯

೮೬. ಪ್ರೊ.ಸುಧಾಕರ : ಕನಕದಾಸರ ಕಾವ್ಯ ಭಾಗ-೨ ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು, ಪ್ರ-೨೦೧೩

೮೭. ಎಂ.ಎನ್. ಸತ್ಯನಾರಾಯಣ : ಶ್ರೀ ಹರಿ ಭಕ್ತಿಸಾರ ಸಂಪುಟ-೧,೨ ಗೀತಾಂಜಲಿ ಪುಸ್ತಕ ಪ್ರಕಾಶನ, ರಾಜೇಂದ್ರ ನಗರ. ಶಿವಮೊಗ್ಗ

೮೮. ಡಾ. ಎನ್.ಸುರೇಶ್ ನಾಗಲಮಡಿಕೆ : ಮುತ್ತು ಬಂದಿದೆ ಕೇರಿಗೆ ಸಿರಿವರ ಪ್ರಕಾಶನ, ಲಕ್ಷ್ಮಿನಾರಾಯಣ ಪುರ. ಬೆಂ. ಪ್ರ-೨೦೧೧

೮೯. ಡಾ. ಸುರೇಶ್ ನಾಗಲಮಡಿಕೆ : ಜನಪದ ಲೋಕದೃಷ್ಟಿಯ ಮೂಲಕ ಕನಕ ಸಾಹಿತ್ಯ ಅಧ್ಯಯನ, ರಾಷ್ಟ್ರೀಯ ಸಂತಕವಿ ಅಧ್ಯಯನ ಕೇಂದ್ರ, ಬೆಂಗಳೂರು ಪ್ರ-೨೦೧೬

೯೦. ಡಾ. ಕೆ.ಸದಾಶಿವ : ಸಮಗ್ರ ಭಾರತದ ಇತಿಹಾಸ ಪ್ರಿಯದರ್ಶಿನಿಪ್ರಕಾಶನ, ಮೈಸೂರು, ಪ್ರ-೨೦೧೫

೯೧. ಎಂ.ಎನ್. ಸತ್ಯನಾರಾಯಣ : ಶ್ರೀ ಹರಿ ಭಕ್ತಿಸಾರ, ಸಂಪುಟ-೧ ಗೀತಾಂಜಲಿ ಪುಸ್ತಕ ಪ್ರಕಾಶನ, ರಾಜೇಂದ್ರ ನಗರ. ಶಿವಮೊಗ್ಗ. ೨೦೧೫

೯೨. ಹೊರೆಯಾಲ ದೊರೆಸ್ವಾಮಿ : ಹಳ್ಳಿ ಅಧ್ಯಯನ 'ಕಾಗಿನೆಲೆ' ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡಭವನ, ಬೆಂ. ಪ್ರ-೧೯೯೩

೯೩. ಹಿರೇಮಠ ಆರ್.ಸಿ(ಸಂ) : ಮೋಹನ ತರಂಗಿಣಿ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಪ್ರ-೧೯೭೩

೯೪. ಡಾ. ಎಫ್.ಟಿ. ಹಳ್ಳಿಕೇರಿ(ಸಂ) : ರೇವಣಸಿದ್ಧ ಪರಂಪರೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ, ಪ್ರ-೨೦೧೪

೯೫. ಡಾ. ಟಿ.ಎಫ್. ಹಳ್ಳಿಕೇರಿ(ಸಂ) : ಬೀರಪ್ಪ ಪರಂಪರೆ, ಮತ್ತು ಹಾಲುಮತ ಪರಂಪರೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.೨೦೧೫

೯೬. ಹೆಚ್.ಆರ್. ಗೌಡ : ಇತಿಹಾಸದ ಪುಟಗಳಲ್ಲಿ ಕುರುಂಬರು, ಪ್ರ-೧೯೯೪

೯೭ (ಸಂ) ಎ.ಬಿ. ಶ್ಯಾಮಾಚಾರ್ಯ. : ಹರಿದಾಸವಾಹಿನಿ. ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು.ಪ್ರ-೧೯೯೮

# ಬಿಡಿ ಲೇಖನಗಳು

| | | |
|---|---|---|
| ೧. ಅರವಿಂದ ಮಾಲಗತ್ತಿ | : | ಕನಕದಾಸರ ಕೆಲವು ಐತಿಹ್ಯಗಳು, ಅರ್ಥ ಮತ್ತು ವ್ಯಾಪ್ತಿ |
| ೨. ಜ್ಯೋತಿ ಹೊಸೂರು | : | ಕನಕದಾಸರ ಜೀವನ ವಿಚಾರ |
| ೩. ಹೆಚ್ ಜಯಪ್ರಕಾಶ್ ಶೆಟ್ಟಿ | : | ಕನಕದಾಸರ ವರ್ತಮಾನದ ನಿರೂಪಣೆಗಳು |
| ೪. ನೀಲಗಂಗಯ್ಯ ಪೂಜಾರ | : | ಕನಕನ ಕಿಂಡಿ ಮತ್ತು ವಿಠಲ ಪರಂಪರೆ |
| ೫. ಕೆ.ವಿ. ನಾರಾಯಣ | : | ಕನಕದಾಸರ ಕೀರ್ತನೆಗಳು ಮತ್ತು ಮೌಲ್ಯಗಳು |
| ೬. ನಟರಾಜ ಬೂದಾಳು | : | ೧. ಕನಕದಾಸರ ತಾತ್ವಿಕತೆಯ ಅನುಸಂಧಾನ ಹೊಸ ಓದು<br>೨. ಕನ್ನಡ ಕಾಲು ದಾರಿ ಪಂಥಗಳು- ಬಯಲು ಸೀಮೆ |
| ೭. ಕೆ.ವೈ. ನಾರಾಯಣಸ್ವಾಮಿ | : | ಕನಕ ಪರಿಸರ ಸ್ಪಂದನ |
| ೮. ಡಾ. ಬಂಜಗೆರೆ ಜಯಪ್ರಕಾಶ್ | : | ಪರಂಪರೆಯಲ್ಲಿ ಭಕ್ತಿ ಪಾತ್ರಗಳ ಮಹತ್ವವೇನು? |
| ೯. ಡಾ. ಬಂಜಗೆರೆ ಜಯಪ್ರಕಾಶ್ | : | ಸಂತರ ದಾರ್ಶನಿಕ ಬಹುತ್ವ ಮತ್ತು ಉತ್ಪಾದನೆಯ ನೆಲೆಗಳು |

೧೦. ಬಸವರಾಜ ಕಲ್ಗುಡಿ : ಕನಕನೆಂಬ ವರ್ತಮಾನದ ತುರ್ತು

೧೧. ಬೆಟಗೇರಿ ಕೃಷ್ಣಶರ್ಮ : ಕನಕದಾಸರು ಕಂಡ ವಿಜಯನಗರ

೧೨. ರಹಮತ್ ತರೀಕೆರೆ : ೧. ಪರಂಪರೆಯನ್ನು ಅರ್ಥ ಮಾಡಿಕೊಳ್ಳುವ ದಾರಿ ಯಾವುದು?
೨. ಸಂತರ ಪರಂರೆಯ ಸಾಮಾಜಿಕ ಒತ್ತಾಸೆಗಳು

೧೩. ವಸು ಮಳಲಿ : ೧) ಕನಕ ಕೃಷ್ಣ ಸಮಕಾಲೀನ ರಾಜಕೀಯ
೨) ಆತ್ಮಸಾಕ್ಷಿಯನ್ನು ನುಂಗಿದ ಜಾತೀಯತೆ

೧೪. ಜಿ.ವರದರಾಜ್ : ಕನಕದಾಸರ ಕಾಲ, ದೇಶ, ಮತ ಮತ್ತು ಜೀವನ

೧೫. ಜಿ.ಎಸ್. ಶಿವರುದ್ರಪ್ಪ : ಕನಕದಾಸರು-ಕೆಲವು ಚಿಂತನೆಗಳು

೧೬. ಕೆ.ವಿ. ಸುಬ್ಬಣ್ಣ : 'ರಾಮಧಾನ್ಯ ಚರಿತ್ರೆ'ಯ ರೂಪಕ ವಿವೇಕ ಮರುಚಿಂತನೆ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಜೀವನ ದರ್ಶನ ಮತ್ತು ಅವರ ಕಾವ್ಯ-ಕೀರ್ತನೆಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಈ ಬಗೆಯ ಕಾರ್ಯಾರ್ಧ್ಯಯನಗಳಿಗೆ ಯುವ ಸಮುದಾಯವನ್ನು ತೊಡಗಿಸಿಕೊಳ್ಳುವುದು ಇದರ ಆಶಯವಾಗಿದೆ. ಈ ನೆಲೆಯಲ್ಲಿ ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟ್ರಮಟ್ಟದಲ್ಲಿ ವಿಚಾರ ಸಂಕಿರಣ-ಸಂವಾದಗೋಷ್ಠಿಗಳ ಏರ್ಪಾಟು, ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ತ್ವಾದರ್ಶಗಳ ಪ್ರದರ್ಶನ-ಪ್ರಸಾರ ಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು, ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವಜನ-ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ-ರಸಗ್ರಹಣ ಶಿಬಿರಗಳ ಸಂಘಟನೆ, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ.

**ಕನಕದಾಸರು ಮತ್ತು ಪಶುಪಾಲನಾ ಪರಂಪರೆ** ಎಂಬ ಈ ಸಂಶೋಧನಾ ಅಧ್ಯಯನದಲ್ಲಿ ಕನಕದಾಸರ ಬದುಕು ಬರೆಹಗಳ ಮೇಲಾಗಿರುವ ಪಶುಪಾಲನಾ ಪರಂಪರೆಯ ಪ್ರಭಾವ, ಪ್ರೇರಣೆ, ಸ್ವರೂಪ, ಲಕ್ಷಣವನ್ನು ಪಶುಪಾಲನಾ ಪರಂಪರೆಯು ಬೆಳೆದು ಬಂದ ಇತಿಹಾಸವನ್ನು ಅರಿಯಲು ಆಸಕ್ತ ಚಿಂತಕರಿಗೆ ಈ ಕೃತಿಯು ಉಪಯೋಗವಾಗಬಲ್ಲದೆಂದು ನಿರೀಕ್ಷಿಸಲಾಗಿದೆ.

**ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ**
2ನೆಯ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಬೆಂಗಳೂರು-560 002.
E-mail : Kanakaresearchcentre@gmail.com
www.saintpoetkanaka.in
080-22113147